ಸೊರಟೂರ ಗ್ರಾಮದ ಜಾನಪದ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ನಿಂಗಪ್ಪ ಎಸ್. ಮಾದಣ್ಣವರ

ಮಾರ್ಗದರ್ಶಕರು
ಡಾ. ಸ.ಚಿ. ರಮೇಶ್
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩ ೨೭೬.
೨೦೧೪

ಸೊರಟೂರ ಗ್ರಾಮದ ಜಾನಪದ ಅಧ್ಯಯನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ನಿಂಗಪ್ಪ ಎಸ್. ಮಾದಣ್ಣವರ

ಮಾರ್ಗದರ್ಶಕರು
ಡಾ. ಸ.ಚಿ. ರಮೇಶ್
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೪

ಸಂಶೋಧಕರ ಪ್ರಮಾಣ ಪತ್ರ

ಸೊರಟೂರ ಗ್ರಾಮದ ಜಾನಪದ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ **ಡಾ. ಸ.ಚಿ. ರಮೇಶ್,** ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :

ಸ್ಥಳ : ವಿದ್ಯಾರಣ್ಯ

(ನಿಂಗಪ್ಪ ಎಸ್. ಮಾದಣ್ಣವರ)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ನಿಂಗಪ್ಪ ಎಸ್. ಮಾದಣ್ಣವರ ಇವರು **ಸೊರಟೂರ ಗ್ರಾಮದ ಜಾನಪದ ಅಧ್ಯಯನ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : **(ಡಾ. ಸ.ಚಿ. ರಮೇಶ್)**

ಸ್ಥಳ : ವಿದ್ಯಾರಣ್ಯ

ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಕೃತಜ್ಞತೆಗಳು

‘ಆದವರನ್ನು ಆರುತಾಸ ರಾತ್ರ್ಯಾಗ ನೆನಿಬೇಕು’ ಎಂಬ ಜನಪದರ ಮಾತಿನಂತೆ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಹಿ.ಚಿ. ಬೋರಲಿಂಗಯ್ಯ, ನಿಕಟಪೂರ್ವ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಮತ್ತು ಕುಲಸಚಿವರಾದ ಡಾ. ವಿಜಯ್ ಪೂಣಚ್ಚ ತಂಬಂಡ, ನಿಕಟಪೂರ್ವ ಕುಲಸಚಿವರಾದ ಶ್ರೀ ಎಸ್.ಎಸ್. ಪೂಜಾರ್, ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಅಧ್ಯಯನ ಕ್ರಮವನ್ನು ಬೋಧಿಸಿ, ಪೂರಕ ವಿಚಾರಗಳನ್ನು ಚರ್ಚಿಸುತ್ತಾ ಪ್ರೀತಿ, ಸಹನೆಯಿಂದ ಮಾರ್ಗದರ್ಶನ ಮಾಡಿದ ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಸ.ಚಿ. ರಮೇಶ್ ಅವರಿಗೆ ನಾನು ಚಿರಋಣಿ.

ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಶೋಕಕುಮಾರ ರಂಜೇರೆ, ನಿಕಟಪೂರ್ವ ನಿರ್ದೇಶಕರುಗಳಾದ ಡಾ. ವೀರೇಶ ಬಡಿಗೇರ, ಡಾ. ಎಫ್.ಟಿ. ಹಳ್ಳಿಕೇರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳು. ನಿಕಾಯದ ಡೀನ್ ಡಾ. ಕೆ.ಎಂ. ಮೇತ್ರಿ ಮತ್ತು ಪ್ರಾಧ್ಯಾಪಕರಾದ ಡಾ. ರಹಮತ್ ತರೀಕೆರೆ ಅವರಿಗೆ ನಾನು ಆಭಾರಿ.

ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಸಿ.ಟಿ. ಗುರುಪ್ರಸಾದ್ ಹಾಗೂ ಪ್ರಾಧ್ಯಾಪಕರಾದ ಡಾ. ಮಂಜುನಾಥ ಬೇವಿನಕಟ್ಟಿ, ಡಾ. ಹೆಬ್ಬಾಲೆ ಕೆ. ನಾಗೇಶ್, ಡಾ. ಮೊಗಳ್ಳಿ ಗಣೇಶ್ ಅವರು ನನ್ನ ಪಿಎಚ್.ಡಿ. ಅಧ್ಯಯನಕ್ಕೆ ಸಲಹೆ, ಸೂಚನೆ, ಸಹಕಾರ ನೀಡಿದ್ದಾರೆ ಅವರಿಗೆ ಕೃತಜ್ಞತೆಗಳು. ವಿಭಾಗದ ಶ್ರೀ ಅಜಿತ್ ಹಡಪದ ಹಾಗೂ ಸಿಬ್ಬಂದಿ ವರ್ಗಕ್ಕೆ ನನ್ನ ಧನ್ಯವಾದಗಳು.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಮ್ಮ ಅಮೂಲ್ಯವಾದ ಮಾಹಿತಿಗಳನ್ನು ನೀಡಿ ಸಹಕರಿಸಿದ ಸೊರಟೂರ ಗ್ರಾಮದ ವಕ್ತೃಬಾಂಧವರೆಲ್ಲರಿಗೂ ನನ್ನ ವಿಶೇಷ ಕೃತಜ್ಞತೆಗಳು. ನಾನು ಉಪನ್ಯಾಸಕನಾಗಿ ಸೇವೆ ಸಲ್ಲಿಸುತ್ತಿರುವ ನಿಪ್ಪಾಣಿ ಪದವಿಪೂರ್ವ ಕಾಲೇಜಿನ (ವಿದ್ಯಾಸಂವರ್ಧಕ ಮಂಡಳ) ಚೇರ್‌ಮನ್‌ರಾದ ಶ್ರೀ ಚಂದ್ರಕಾಂತ ಎಸ್. ಕೋಠಿವಾಲೆ, ಸಂಘದ ನಿರ್ದೇಶಕರುಗಳಿಗೆ, ಕಾಲೇಜಿನ ಪ್ರಾಚಾರ್ಯರಿಗೆ ಮತ್ತು ಉಪನ್ಯಾಸಕರಿಗೆ ಕೃತಜ್ಞನಾಗಿದ್ದೇನೆ. ಕಾಲೇಜಿನ ಸಿಬ್ಬಂದಿ ವರ್ಗ, ನನ್ನ ಪ್ರೀತಿಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಗೆಳೆಯರ ಬಳಗ, ಡಿಟಿಪಿ ಮಾಡಿ ಸಹಕರಿಸಿದ ಡಿ.ಬಿ. ಚೌಗುಲಾ, ದೇವ ಕಂಪ್ಯೂಟರ್ಸ್ ಗದಗ ಇವರಿಗೆ ಧನ್ಯವಾದಗಳು. ಕರಡು ತಿದ್ದಿದ ಡಾ. ಎಸ್. ಮೋಹನ್, ಅಂತಿಮವಾಗಿ ಕರಡು ಅಳವಡಿಸಿ ಪುಟವಿನ್ಯಾಸಗೊಳಿಸಿ ಮಹಾಪ್ರಬಂಧದ ಅಂದವನ್ನು ಹೆಚ್ಚಿಸಿದ ಕಮಲಾಪುರದ ಸವಿತ ಗ್ರಾಫಿಕ್ಸ್‌ನ ಶ್ರೀ ಜೆ. ಬಸವರಾಜ ಅವರಿಗೆ ಕೃತಜ್ಞತೆಗಳು.

ನನ್ನ ಶ್ರೇಯೋಭಿವೃದ್ಧಿಯನ್ನು ಬಯಸುವ ಮತ್ತು ಅಧ್ಯಯನಕ್ಕೆ ಪೂರಕ ವಾತಾವರಣವನ್ನು ಕಲ್ಪಿಸಿದ ಪೂಜ್ಯ ತಂದೆ ಶ್ರೀ ಸಣ್ಣದೇವಪ್ಪ, ತಾಯಿ ಶ್ರೀಮತಿ ಲಕ್ಷ್ಮವ್ವ ಅಕ್ಕ ಶ್ರೀಮತಿ ನಿಂಗವ್ವಮತ್ತು ಅಣ್ಣ ಶ್ರೀ ಮಹಾದೇವಪ್ಪ, ಅತ್ತಿಗೆ ಶ್ರೀಮತಿ ನೀಲವ್ವ, ತಮ್ಮ ಶ್ರೀ ಶಿವಾನಂದ, ತಂಗಿ ಶ್ರೀಮತಿ ರೇಣುಕ, ಮಾವ ಶ್ರೀ ಹೇಮಣ್ಣ ಇವರೆಲ್ಲರ ಸಹಕಾರಕ್ಕೆ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಭಿವೃದ್ಧಿಯನ್ನು ಬಯಸಿ ಸಹಕರಿಸುತ್ತಿರುವ ಮಾವ ಶ್ರೀ ದೇವೇಂದ್ರಪ್ಪ ವೈ. ಬಸಾಪುರ (ಜಿಲ್ಲಾ ನ್ಯಾಯಾಧೀಶರು, ಚಿಕ್ಕೋಡಿ) ಮತ್ತು ಅತ್ತೆ ಶ್ರೀಮತಿ ಲಕ್ಷ್ಮೀ ಇವರಿಗೆಲ್ಲರಿಗೂ ನನ್ನ ಅನಂತ ಅನಂತ ವಂದನೆಗಳು. ನನ್ನೆಲ್ಲಾ ಓಡಾಟ, ಬರವಣಿಗೆ, ಅಧ್ಯಯನಗಳಿಗೆಲ್ಲಾ ಎರಡು ಮಾತಿಲ್ಲದೇ ಸಹಕರಿಸುತ್ತಿರುವ ಪ್ರೀತಿಯ ಸಂಗಾತಿ ಶ್ರೀಮತಿ ಸತ್ಯಮ್ಮ, ಮಗಳು ಕುಮಾರಿ ಶಿವಲೀಲಾ ಹಾಗೂ ಮನೆಯ ಪುಟಾಣಿಗಳಾದ ಗೋಪಾಲಕೃಷ್ಣ, ಕಿಶೋರ, ನೇತ್ರಾವತಿ, ಕವಿತಾ, ಲೋಕೇಶ್ ಮತ್ತು ಲಕ್ಷ್ಮೀ ಅವರಿಗೆ ಪ್ರೀತಿಯ ನೆನೆಕೆಗಳು. ಅಧ್ಯಯನಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಾನು ಚಿರಋಣಿ.

✍ ನಿಂಗಪ್ಪ ಎಸ್. ಮಾದಣ್ಣವರ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನ ಉದ್ದೇಶ, ಸ್ವರೂಪ ಮತ್ತು ವಿಧಾನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವಿಧಾನ

೧.೧. ಪ್ರಸ್ತಾವನೆ

ಮಾನವ ಸಂಘಜೀವಿ, ಸಮಾಜಜೀವಿ ಎಂಬ ಅರಿಸ್ಟಾಟಲ್‌ನ ಮಾತು ತುಂಬಾ ಮಾರ್ಮಿಕವಾದುದು. ವ್ಯಕ್ತಿ ಏಕಾಂಗಿಯಾಗಿ ಬದುಕಲಾರ, 'ಮನಕ್ಕ ಮನ ಕೂಡಿದರ ಮನಿಮಾರ ಜನಕ್ಕ ಜನ ಕೂಡಿದರ ಸಹಕಾರ' ಎಂಬ ಜನಪದರ ಮಾತಿನಂತೆ ಕಾಡಿನಿಂದ ನಾಡಿಗೆ ಬಂದ ಮಾನವರು ಗುಂಪು ಗುಂಪಾಗಿಯೇ ಇರುತ್ತಿದ್ದರು. ಮಾನವ ಅಲೆಮಾರಿ ಜೀವನ ಸಾಗಿಸುತ್ತಿರುವಾಗಲೂ ಗುಂಪುಗಳು ಚದುರಿರಲಿಲ್ಲ. ಅಲೆಮಾರಿ ಮಾನವನ ಗುಂಪು ತನ್ನ ಮೂಲಭೂತ ಅವಶ್ಯಕತೆಗಳು ಈಡೇರುವ ಆಯಕಟ್ಟಿನ ಸ್ಥಳಗಳಲ್ಲಿ ಯಾವಾಗ ನೆಲೆ ನಿಂತನೋ ಆಗ ಕುಟುಂಬ, ಸಮಾಜ, ಧರ್ಮ ಮುಂತಾದ ಸಂಸ್ಥೆಗಳು ಜನ್ಮತಾಳಿದವು.[೧] ಇದೇ ಗ್ರಾಮಗಳ ಉದಯಕ್ಕೆ ಕಾರಣವಾಯಿತು. ಹೀಗೆ ಉಗಮವಾದ ಗ್ರಾಮಗಳಿಗೆ ಪೂರ್ವದಿಂದಲೂ ನಡೆದುಬಂದ ತನ್ನದೇ ಆದ ಸಾಮಾಜಿಕ ನಡೆ ಇರುತ್ತದೆ. ಆದಿವಾಸಿಗಳ ಪ್ರಾಥಮಿಕ ಹೆಜ್ಜೆಯಿಂದ ಹಿಡಿದು ಈವರೆಗೆ ಅದರ ನಿರಂತರತೆಯಿದೆ. ಇಂತಹ ಪ್ರಾಚೀನ ಭವ್ಯ ಪರಂಪರೆಯ ಗ್ರಾಮೀಣ ಸಂಸ್ಕೃತಿಯ ಭವಿಷ್ಯತ್ತಿನ ಬಗ್ಗೆ ಇಂದು ಕಳವಳ ಹಾಗೂ ಗೊಂದಲದ ಭಾವನೆಯನ್ನು ವ್ಯಕ್ತಪಡಿಸಲಾಗುತ್ತಿದೆ. ಒಂದು ರೀತಿಯಲ್ಲಿ ಈ ಕಳವಳ, ಗೊಂದಲಗಳು ಸಹಜವಾಗಿವೆ. ಆದರೆ ಆಧುನಿಕ ಯಂತ್ರ, ತಂತ್ರ ಪಾಶ್ಚಿಮಾತ್ಯ ಸಂಸ್ಕೃತಿ ಹಾಗೂ ನಗರೀಕರಣ ಇತ್ಯಾದಿ ಪ್ರಭಾವಗಳಿಂದಾಗಿ ಭಾರತದಲ್ಲಿ ನಗರ-ಗ್ರಾಮ ಸಮುದಾಯಗಳನ್ನೆಲ್ಲ ಅಳಿಸಿ ಹಾಕಿ ಗ್ರಾಮ ಸಂಸ್ಕೃತಿಯನ್ನು ನೆಲಸಮ ಮಾಡುತ್ತಿವೆ ಎಂಬ ಹೆದರಿಕೆ ಉಂಟಾಗಿದೆ. ಅಷ್ಟೇ ಅಲ್ಲ ನಮ್ಮ ಮಕ್ಕಳು, ಮೊಮ್ಮಕ್ಕಳು ಭಾರತೀಯ ಸಂಸ್ಕೃತಿ ಪರಂಪರೆಗಳನ್ನು ನೋಡಲು ಮ್ಯೂಜಿಯಂಗಳಿಗೆ ಹೋಗಬೇಕಾಗುವಂತಹ ಕಾಲ ಬರಬಹುದು ಎಂದು ಆಶೀಶ್ ನಂದಿ ಅಭಿಪ್ರಾಯಪಡುತ್ತಾರೆ.[೨] ಆದರೂ ಭವಿಷ್ಯತ್ತನ್ನು ಶಂಕೆಯಿಂದ ನೋಡದೆ ನಮ್ಮ ಜನಪದ ಸಂಸ್ಕೃತಿಯನ್ನು ಗಟ್ಟಿಯಾಗಿ ಉಳಿಸಿಕೊಳ್ಳುವುದು ಶ್ರೇಯಸ್ಕರ. ಆ ಹಿನ್ನೆಲೆಯಲ್ಲಿ ಗ್ರಾಮ ಅಧ್ಯಯನದ ಅವಶ್ಯಕತೆಯನ್ನು ತಿಳಿಯಬಹುದಾಗಿದೆ.

ಇತಿಹಾಸವೆಂಬುದು ಗತಕಾಲದ ಪ್ರತಿಬಿಂಬ ಎಂಬುದು ಸರ್ವೇಸಾಮಾನ್ಯವಾದ ಮಾತು. ಆದರೆ ಇತಿಹಾಸ ಅಧ್ಯಯನವು ಕೇವಲ ರಾಜ-ಮಹಾರಾಜರ ಇತಿಹಾಸವನ್ನು ರಾಜನಿಷ್ಠ

ಅಂಶಗಳನ್ನು ಮಾತ್ರ ದಾಖಲಿಸಿರುವುದರಿಂದ ನಮಗೆ ಈಗ ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ಸಾಮಂತರ, ಮಂಡಲಾಧೀಶ್ವರರ ಚರಿತ್ರೆ ಮಾತ್ರವಾಗಿದೆ. ಅವರ ಜನನ ಮರಣಗಳ ಅವಧಿ, ದತ್ತಿ ಶಾಸನಗಳು, ಕಾಳಗಗಳು, ಪಟ್ಟಾಭಿಷೇಕಗಳೇ ನಮ್ಮ ಇತಿಹಾಸದ ತುಂಬಾ ವಿಜೃಂಭಿಸುತ್ತವೆ. ಈ ಅತಿರೇಕಕ್ಕೆ ಕಾರಣವೇನೆಂದರೆ ಜನಸಾಮಾನ್ಯರ ಸಾಂಸ್ಕೃತಿಕ ಬದುಕು ಸಹ ಇತಿಹಾಸದ ಒಂದು ಪ್ರಮುಖ ಭಾಗವೇ ಎಂಬ ತಿಳುವಳಿಕೆಯ ಕೊರತೆ. ಶಾಸನ ಬರೆಯುವವರನ್ನು, ಬರೆಸುವವರನ್ನು ಆವರಿಸಿದ್ದರಿಂದ ಜನಸಾಮಾನ್ಯರು ಇತಿಹಾಸದಿಂದ ದೂರ ಉಳಿದರು. ರಾಜ ಮಹಾರಾಜರುಗಳು ಶಾಸನಗಳ ಮೂಲಕ ತಮ್ಮನ್ನು ತಾವು ಉಲ್ಲೇಖಿಸಿಕೊಂಡರೇ ಹೊರತು ಜನಸಾಮಾನ್ಯರ ಸಾಂಸ್ಕೃತಿಕ ಜೀವನವನ್ನು ಉಲ್ಲೇಖಿಸಲಿಲ್ಲ. ಒಟ್ಟಾರೆ ಗ್ರಾಮೀಣ ಸಮುದಾಯವನ್ನು ಇಡಿಯಾಗಿ ಇತಿಹಾಸದ ದೃಷ್ಟಿಯಿಂದ ಉಳಿಸುವ ಪ್ರಯತ್ನ ಸಮರ್ಪಕವಾಗಿ ನಡೆಯಲಿಲ್ಲ. ಹೀಗಾಗಿ ಆಯಾ ಕಾಲದ ಸಾಂಸ್ಕೃತಿಕ ಬದುಕು ಹೇಗಿತ್ತು ಎಂಬುದನ್ನು ತಿಳಿಯಲಾರದೇ ಹೋಗಿದ್ದು ಬಹುದೊಡ್ಡ ಕೊರತೆಯೆನಿಸಿದೆ.[೩]

ಆ ಹಿನ್ನೆಲೆಯಲ್ಲಿ ನೋಡಿದಾಗ ಗ್ರಾಮ ಅಧ್ಯಯನದ ಅವಶ್ಯಕತೆಯ ಅರಿವಾಗುತ್ತದೆ. ಗ್ರಾಮ ಅಧ್ಯಯನವೆಂಬುದು ಜನಪದರ ಅಧ್ಯಯನವಾಗಿದೆ. ಕರ್ನಾಟಕದಲ್ಲಿ ಒಂದು ಕಾಲಕ್ಕೆ ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕಷ್ಟೇ ಸೀಮಿತವಾಗಿದ್ದ ಕರ್ನಾಟಕ ಜಾನಪದ ಕ್ಷೇತ್ರ ಕಾಲ ಕಳೆದಂತೆ ಅದರ ಅಧ್ಯಯನ ಇತರ ಅಂಶಗಳ ಕಡೆಗೂ ಗಮನಹರಿಸಿತು. ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನಗಳು ಇಂದು ಕಂಡುಬರುತ್ತಿವೆ. ಶ್ರೀರಾಮ ಇಟ್ಟಣ್ಣನವರ ಅವರ 'ಹಲಗಲಿ ಗ್ರಾಮ ಅಧ್ಯಯನ', ಚೆನ್ನಣ್ಣ ವಾಲಿಕಾರ ಅವರ 'ಒಂದು ಗ್ರಾಮದ ಜನಪದೀಯ ಅಧ್ಯಯನ', ಟಿ. ಗೋವಿಂದರಾಜು ಅವರ 'ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ', ಅರ್ಜುನ ಗೊಳಸಂಗಿ ಅವರ 'ಗೊಳಸಂಗಿ ಗ್ರಾಮ ಸಾಂಸ್ಕೃತಿಕ ಅಧ್ಯಯನ' - ಹೀಗೆ ಹಲವಾರು ಗ್ರಾಮ ಅಧ್ಯಯನಗಳನ್ನು ಗುರುತಿಸಬಹುದಾಗಿದೆ. ಇಂತಹ ಗ್ರಾಮ ಅಧ್ಯಯನಗಳನ್ನು ಗಮನಿಸಿದಾಗ ನಗರೀಕರಣದ ಆಕರ್ಷಣೆಯ ಮಧ್ಯೆ ಇಂದಿನ ದಿನಗಳಲ್ಲೂ ಗ್ರಾಮೀಣ ಜಾನಪದ ತನ್ನ ಆಕರ್ಷಣೆಯನ್ನು ಕಳೆದುಕೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸಂಸ್ಕೃತಿಯ ಅಧ್ಯಯನದಲ್ಲಿ ಗ್ರಾಮಗಳ ಅಧ್ಯಯನದ ಮಹತ್ವದ ಕೊಡುಗೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಗ್ರಾಮಗಳು ಮಾನವಿಕ ವಿದ್ವಾಂಸರನ್ನು ವಿಶೇಷವಾಗಿ ಆಕರ್ಷಿಸುವ ಅಧ್ಯಯನ ವಸ್ತುವಾಗಿವೆ. ವಿಶೇಷವಾಗಿ ಭಾರತೀಯ ಹಳ್ಳಿಗಳಿಗಂತೂ ಸಂಸ್ಕೃತಿಯ ಅಧ್ಯಯನದಲ್ಲಿ ಒಂದು ವಿಶಿಷ್ಟ ಮೌಲ್ಯವಿದೆ. ಇವು ಪ್ರಾಂತೀಯ ಪರಂಪರೆ ಆಧುನಿಕ ವಿಜ್ಞಾನದ ತಾಕಲಾಟ ಈ ಎರಡರ ಪ್ರಭಾವವನ್ನು ಮೈಗೂಡಿಸಿಕೊಂಡಿವೆ. ಅಷ್ಟೇ ಅಲ್ಲ ಇಂದು ನಮ್ಮ ಗ್ರಾಮೀಣ ಜನತೆ ಮೇಲುಸ್ತರಕ್ಕೆ ಏರಲು ಕಾತರರಾಗಿದ್ದಾರೆ. ವಿಜ್ಞಾನಯುಗ ಭೂಮಿಯ ಅಣು ಅಣುವಿಗೂ ಇಣುಕಿ ನೋಡುತ್ತಲಿದೆ. ಎಲ್ಲಿ ನೋಡಿದರೂ ಯಂತ್ರಗಳ ಪ್ರತಿಧ್ವನಿಯಾಗುತ್ತಲಿದೆ. ಮಾರುಕಟ್ಟೆಯಲ್ಲಿ ಎಲ್ಲೆಲ್ಲಿಯೂ ಈ ಆಧುನಿಕ ಯಂತ್ರಗಳ ಶಬ್ದದ ಲಯ ಕಿವಿಗೆ ಅಪ್ಪಳಿಸುತ್ತಲಿದೆ. ಆದುದರಿಂದ ಈ ಲಯಕ್ಕೆ ಹೊಂದಿಕೊಂಡಂತೆ ಹೊಸ ರೀತಿಯಲ್ಲಿ ಜಾನಪದ ಹುಟ್ಟಿಕೊಳ್ಳುತ್ತಲಿದೆ.[೪] ಇದನ್ನು ವಿರೋಧಿಸಿದರೂ

ನಿಲ್ಲುವುದಿಲ್ಲ ಹಾಗೂ ವಿರೋಧಿಸದಿದ್ದರೂ ಹೊಸ ಆಯಾಮವೊಂದನ್ನು ರಚಿಸಿಕೊಳ್ಳುತ್ತದೆ. ನಮ್ಮ ಹಳ್ಳಿಗರ ಹಳೆ ಸಂಪ್ರದಾಯ, ರೀತಿ-ನೀತಿಗಳು, ನಡೆ-ನುಡಿ, ಉಡುಗೆ-ತೊಡುಗೆಗಳು ದಿನದಿನಕ್ಕೆ ಬದಲಾವಣೆ ಕಂಡುಕೊಳ್ಳುತ್ತಲಿವೆ. ನಯ ನಾಜೂಕಿನಿಂದ ಕೂಡಿದ ನಗರದ ಕೃತಕ ಜೀವನದ ಮೂಲ ಬಂಡವಾಳ ಗೊತ್ತಿದ್ದರೂ ಸಹ ಯಾಕೋ ಏನೋ ಹಳ್ಳಿಗರ ಒಲವು ನಗರದತ್ತ ಎಳೆಯುತ್ತಲಿದೆ. ಹೀಗೆ ನಗರ ಜೀವನ ಪದ್ಧತಿಯ ಪ್ರಭಾವ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಜನರ ಮೇಲಾಗುತ್ತದೆ. ಆದಾಗ್ಯೂ ಭಾರತೀಯ ಗ್ರಾಮಗಳು ಈ ನಾಡಿನ ಪ್ರಾಚೀನ ಸಂಸ್ಕೃತಿಯನ್ನು, ಆ ಸಂಸ್ಕೃತಿಯಲ್ಲಿ ಅಡಕವಾಗಿರುವ ಅಪೂರ್ವ ಮೌಲ್ಯಗಳನ್ನು ಕಾಲಪುರುಷನ ಕ್ರೂರ ದಬ್ಬಾಳಿಕೆಯಿಂದ ರಕ್ಷಿಸಿಕೊಂಡು ಬಂದಿವೆ.[೩] ಆದ್ದರಿಂದ ಇಂದು ಜಾನಪದ ಅಧ್ಯಯನಕಾರರು ಒಂದೊಂದು ಗ್ರಾಮವನ್ನು ಆಯ್ದುಕೊಂಡು ಜಾನಪದೀಯವಾಗಿ ಅಧ್ಯಯನ ಮಾಡುವ ಮೂಲಕ ಗ್ರಾಮದ ಸಾಂಸ್ಕೃತಿಕ ಪರಂಪರೆಯ ಸತ್ವವನ್ನು ಉಳಿಸಿ ಬೆಳೆಸುವ ಅಗತ್ಯವಿದೆ. ಆ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಸೊರಟೂರ ಗ್ರಾಮವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೧.೨. ಅಧ್ಯಯನದ ಉದ್ದೇಶ

ಗ್ರಾಮಗಳು ಸಾಂಸ್ಕೃತಿಕ ಪರಂಪರೆಯ ತಾಣಗಳು ಎಂಬ ಕಲ್ಪನೆಯಿದೆ. ಜನಪದರ ಜೀವನವನ್ನು, ಅದರಲ್ಲಿ ಅಂತರ್ಗತವಾದ ವಿಷಯಗಳನ್ನು ಒಳಹೊಕ್ಕು ನೋಡಿದಾಗ ಹಲವಾರು ವ್ಯತಿರಿಕ್ತ ಅಂಶಗಳು ಕಾಣುತ್ತವೆ. ಅಂದರೆ ಗ್ರಾಮಗಳು ಸಾಂಸ್ಕೃತಿಕ ಪರಂಪರೆಯ ತಾಣಗಳು ಅಷ್ಟೇ ಅಲ್ಲ. ಅದರ ಜೊತೆಗೆ ಸಂಸ್ಕೃತಿ ಪರಂಪರೆಯ ಹೆಸರಿನಲ್ಲಿ ಸಿಲುಕಿಕೊಂಡು ನಲುಗುತ್ತಿರುವ ಹಲವಾರು ಸಮಸ್ಯೆಗಳ ಆಗರವಾಗಿದೆ ಎಂಬುದು ಅಧ್ಯಯನದ ಒಳನೋಟದಲ್ಲಿ ಕಂಡುಬರುತ್ತದೆ.

ಸಾಂಸ್ಕೃತಿಕ ಪರಂಪರೆ ಎಂದರೆ ಏನು? ಅದನ್ನು ಅರ್ಥೈಸುವುದು ಹೇಗೆ? ಹಲವಾರು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಆದಿ ಅನಾದಿಕಾಲದಿಂದ ರೂಢಿಸಿಕೊಂಡು ಬಂದಿರುವ ಅಂಥ ಆಚರಣೆಗಳನ್ನು ಏನೆಂದು ಹೇಳುವುದು? ಪ್ರಸ್ತುತ ಕಾಲದಲ್ಲಿ ಅವುಗಳ ಪರಿಣಾಮವೇನು? ಎಂಬ ಹಲವಾರು ಪ್ರಶ್ನೆಗಳು ಮೂಡುತ್ತವೆ. ಇವುಗಳನ್ನು ಗ್ರಾಮದ ಕೆಲ ಮುಗ್ಧ ಜನಪದರು ನಂಬಿಕೊಂಡೇ ಬಂದಿದ್ದಾರೆ. ಇನ್ನು ಕೆಲವರು ಇವುಗಳನ್ನು ವಿರೋಧಿಸುತ್ತಾರೆ. ಇದು ಗ್ರಾಮದಲ್ಲಿ ಹಲವಾರು ಸ್ಥಿತ್ಯಂತರಗಳಿಗೆ ಕಾರಣವಾಗಿದೆ. ಹೀಗೆ ಗ್ರಾಮದಲ್ಲಿರುವ ಸಾಂಸ್ಕೃತಿಕ ಪರಂಪರೆಯ ಮೌಲ್ಯಗಳನ್ನು ಗುರುತಿಸುವ ಮತ್ತು ಗ್ರಾಮಗಳಲ್ಲಿರುವ ಸಮಸ್ಯೆಗಳನ್ನು ಗುರುತಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

೧.೩. ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಸೊರಟೂರ ಗ್ರಾಮವನ್ನು ವ್ಯಾಪ್ತಿಯನ್ನಾಗಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹಕ್ಕಾಗಿ ಅವಲೋಕನ ಪ್ರಶ್ನಾವಳಿ ಹಾಗೂ ಸಂದರ್ಶನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹಣೆಯಲ್ಲಿ ಮಾಹಿತಿದಾರರೊಂದಿಗೆ ಪ್ರಶ್ನೆಗಳನ್ನು ಕೇಳುವ ಮುಖಾಂತರ ಹಾಗೂ

ಅವರೊಂದಿಗೆ ಚರ್ಚಿಸುವ ಮುಖಾಂತರ ಕ್ರೋಢೀಕರಿಸಲಾಗಿದೆ. ಗ್ರಾಮದ ಕೆಲ ಆಚರಣೆ ಹಾಗೂ ಜಾತ್ರೆ ಉತ್ಸವ ಮುಂತಾದವುಗಳಲ್ಲಿ ಸ್ವತಃ ಭಾಗವಹಿಸಿ ವಿವಿಧ ಸಂದರ್ಭದ ಆಚರಣೆಗಳನ್ನು ಛಾಯಾಚಿತ್ರ ಹಾಗೂ ರೆಕಾರ್ಡ ಮಾಡುವ ಮೂಲಕ ಮಾಹಿತಿಗಳನ್ನು ಪಡೆಯಲಾಗಿದೆ. ಒಟ್ಟಾರೆ ಕ್ಷೇತ್ರ ಕಾರ್ಯವು ಈ ಅಧ್ಯಯನಕ್ಕೆ ಪ್ರಧಾನವಾದ ಮಾಹಿತಿಗಳನ್ನು ಒದಗಿಸಿದೆ. ಹಾಗಾಗಿ ಇದೊಂದು ಕ್ಷೇತ್ರಕಾರ್ಯಾಧಾರಿತ ಅಧ್ಯಯನವೆನ್ನಬಹುದು.

ಅಧ್ಯಯನಕ್ಕೆ ಅವಶ್ಯಕ ಮಾಹಿತಿ ಮತ್ತು ವಿಷಯಗಳನ್ನು ಗ್ರಾಮದ ವಿವಿಧ ವಕ್ತೃಗಳಿಂದ ಪಡೆಯಲಾಗಿದೆ. ಗ್ರಾಮದ ಚಾರಿತ್ರಿಕ ಹಿನ್ನೆಲೆಯನ್ನು ಅರಿತಿರುವ ಹಿರಿಯರು, ಶತಾಯುಷಿಗಳು, ಮಾಹಿತಿದಾರರು, ಕಲಾವಿದರು, ಅರ್ಚಕರು, ರಾಜಕಾರಣಿಗಳು, ಸಾಹಿತಿಗಳು, ಜನಪದ ಸಾಹಿತಿಗಳು, ಪೂಜಾರಿಗಳು, ಆಧ್ಯಾತ್ಮಿಕ ಚಿಂತಕರು, ಗ್ರಾಮದ ವ್ಯಾಪ್ತಿಯ ಸರಕಾರಿ ಅಧಿಕಾರಿಗಳು, ಶಿಕ್ಷಕರು, ಯುವಕರು, ಸಂಘಟಕರು ಮುಂತಾದವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸೊರಟೂರ ಗ್ರಾಮದ ಕುರಿತು ಚಾರಿತ್ರಿಕ ಹಿನ್ನೆಲೆಯನ್ನು ಒದಗಿಸುವ ಪ್ರಕಟಿತ ಗ್ರಂಥಗಳಾದ ಸರಜೂ ಕಾಟ್ಕರ್ ಅವರ 'ಶಿವಾಜಿ ಮೂಲ ಕನ್ನಡ ನೆಲ' ಪುಸ್ತಕದ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಆದರೆ ಈ ಗ್ರಂಥ ಕೇವಲ ಶಿವಾಜಿ ಮಹಾರಾಜರ ಕುರಿತು ಸೊರಟೂರು ಗ್ರಾಮದ ಸಂಬಂಧವನ್ನು ಅಧ್ಯಯನ ಮಾಡುತ್ತದೆ. ಆದ್ದರಿಂದ ಇದನ್ನು ಕೇವಲ ಚಾರಿತ್ರಿಕ ಹಿನ್ನೆಲೆಯ ಮಾಹಿತಿಗಾಗಿ ಹಾಗೂ ಅದರ ಮುಖ್ಯಾಂಶಗಳನ್ನು ಇನ್ನಷ್ಟು ಸರಳೀಕರಿಸಿ ಸಂಕ್ಷಿಪ್ತವಾಗಿ ಬಳಸಿಕೊಳ್ಳಲಾಗಿದೆ. ಈ ಕೃತಿ ಗ್ರಾಮದ ಚರಿತ್ರೆಯನ್ನು ೧೨ನೇ ಶತಮಾನದವರೆಗೆ ಅಂದರೆ ೯೦೦ ವರ್ಷಗಳಷ್ಟು ಹಿಂದೆ ಕೊಂಡೊಯ್ಯುತ್ತದೆ. ಹಾಗೆಯೇ ಡಾ. ಎಂ.ಎಂ. ಕಲಬುರ್ಗಿಯವರ 'ಧಾರವಾಡ ಜಿಲ್ಲಾ ಶಾಸನ ಸೂಚಿ'ಯನ್ನು ಅವಲೋಕಿಸಿದಾಗ ಸೊರಟೂರ ಗ್ರಾಮದಲ್ಲಿ ೧೪ ಶಾಸನಗಳಿರುವುದು ಕಂಡುಬರುತ್ತದೆ. ಆಗ ಗ್ರಾಮದ ಚಾರಿತ್ರಿಕ ಹಿನ್ನೆಲೆ ಕ್ರಿ.ಶ. ೮೮೩ರಷ್ಟು ಹಿಂದಕ್ಕೆ ಹೋಗುತ್ತದೆ. ಈ ಎಲ್ಲ ಶಾಸನಗಳ ವಿಷಯಾಂಶ ಸಂಗ್ರಹಿಸಿ ಅಧ್ಯಯನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲಾಗಿದ್ದು, ಶಾಸನಗಳಲ್ಲಿ ಸೊರಟೂರ ಎಂಬ ಶೀರ್ಷಿಕೆಯಡಿ ಅವುಗಳ ಪರಿಚಯ ಮಾಡಲಾಗಿದೆ. ಸೊರಟೂರ ಗ್ರಾಮ ಹೊಯ್ಸಳ ಮತ್ತು ಯಾದವರ ನಡುವಿನ ಯುದ್ಧಭೂಮಿಯಾಗಿರುವುದನ್ನು ಗುರುತಿಸಲಾಗಿದೆ. ಸೊರಟೂರ ಗ್ರಾಮವು ೧೬ನೇ ಶತಮಾನದಿಂದ ಈಚೆಗೆ ಸುಮಾರು ೫೦೦ ವರ್ಷಗಳಿಂದ ಬ್ರಾಹ್ಮಣ ಸಮುದಾಯದ ದೇಸಾಯಿ ಮನೆತನದ ಆಡಳಿತದಲ್ಲಿತ್ತು ಎಂದು ಗ್ರಾಮಸ್ಥರಿಂದ ತಿಳಿದುಬರುತ್ತದೆ. ಇದನ್ನು ಗ್ರಾಮಸ್ಥರ ಮಾಹಿತಿ ಆಧರಿಸಿಯೇ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಗ್ರಾಮದ ಸೊಲಬಯ್ಯನವರ ಪುತ್ರ ಮೃಡಗಿರಿ ಶ್ರೀಮಠದ ೮ನೇ ಪೀಠಾಧಿಪತಿಗಳಾಗಿ ಗ್ರಾಮದ ಚರಿತ್ರೆಗೆ ಇಂಬು ಒದಗಿದೆ. ಆ ಕುರಿತು ಪ್ರಕಟವಾದ ಗ್ರಂಥದ ವಿಷಯಾಂಶವನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಸೊರಟೂರ ಗ್ರಾಮದ ದೇವಾಲಯ ಕುರಿತು ಕನ್ನಡ ವಿಶ್ವವಿದ್ಯಾಲಯವು ೨೦೦೭ರಲ್ಲಿ ಪ್ರಕಟಿಸಿದ ಕರ್ನಾಟಕ ದೇವಾಲಯ ಕೋಶ(ಗದಗ ಜಿಲ್ಲೆ)ದಲ್ಲಿ ವೀರಭದ್ರ ಈಶ್ವರ ನಾರಾಯಣ ಕಲ್ಲೇಶ್ವರ, ಮಲ್ಲೇಶ್ವರ ಹಾಗೂ ಹನುಮಂತದೇವರ ದೇವಸ್ಥಾನಗಳ ಕುರಿತು ಚಾರಿತ್ರಿಕ ಅಂಶಗಳು

ಕಂಡು ಬಂದಿವೆ. ಆದರೆ ಗ್ರಾಮದಲ್ಲಿ ಪರಂಪರಾಗತವಾಗಿ ಗ್ರಾಮದೇವತೆಗಳಾಗಿ ಆರಾಧಿಸಲ್ಪಡುವ ಕಾಲಭೈರವ, ದುರ್ಗಾದೇವಿ, ದ್ಯಾಮವ್ವ ದೇವಿ, ಬಸವೇಶ್ವರ, ಹಳಿಕೆಮ್ಮ ಮುಂತಾದ ದೇವಸ್ಥಾನಗಳ ಕುರಿತು ಯಾವುದೇ ಲಿಖಿತ ಆಧಾರಗಳು ಸಿಗುವುದಿಲ್ಲ. ಅದಕ್ಕಾಗಿ ಗ್ರಾಮದ ಜನರಲ್ಲಿರುವ ದಂತಕಥೆಗಳನ್ನು, ನಂಬಿಕೆಗಳನ್ನು, ದೇವತೆಗಳ ಪವಾಡಗಳ ಪರಂಪರೆಯನ್ನು ಸಂಗ್ರಹಿಸಿ ಆ ದೇವಾಲಯಗಳ ಉಗಮ ಹಾಗೂ ಹಿನ್ನೆಲೆಯನ್ನು ಜಾನಪದೀಯವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಭೌಗೋಳಿಕವಾಗಿ ಸೊರಟೂರ ಗ್ರಾಮವು ಕಪ್ಪತ್ತಗುಡ್ಡದ ಸರಹದ್ದಿನಲ್ಲಿದ್ದು ಈ ಭಾಗದ ಮಣ್ಣು, ಮಳೆ, ಬೆಳೆಗಳ ಕುರಿತು ಗ್ರಾಮಸ್ಥರಿಂದ ಸಾಮಾನ್ಯ ಮಾಹಿತಿ ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಗ್ರಾಮದ ಜನರ ಸಾಮಾಜಿಕ ವ್ಯವಸ್ಥೆ ಉತ್ತರ ಕರ್ನಾಟಕದ ಇತರೆ ಗ್ರಾಮಗಳಂತಿದೆ. ಆರ್ಥಿಕವಾಗಿ ಗ್ರಾಮವು ಬಹುತೇಕ ಕೃಷಿ ಮತ್ತು ಕಾರ್ಮಿಕರೇ ಹೆಚ್ಚಾಗಿದ್ದಾರೆ. ಗ್ರಾಮದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸ್ವಸಹಾಯ ಸಂಘಗಳು ರಚನೆಯಾಗಿದ್ದು, ಅವುಗಳ ಉಗಮ ಉಳಿತಾಯ ವಹಿವಾಟುಗಳ ಕುರಿತು ಸ್ವತಃ ಹಾಗೂ ಸಂಘಟಕರಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಅವುಗಳ ಆರ್ಥಿಕ ಸಾಧನೆಯ ಅಂಕಿ-ಅಂಶಗಳನ್ನು ಅಧ್ಯಯನಕ್ಕೆ ಸೇರಿಸಿ ಕೊಳ್ಳಲಾಗಿದೆ. ಗ್ರಾಮದಲ್ಲಿ ಸರಕಾರಿ ಸರಕಾರೇತರ ಶಿಕ್ಷಣ ಸಂಸ್ಥೆಗಳಿದ್ದು ಅವುಗಳ ಹಿನ್ನೆಲೆ ಹಾಗೂ ಶೈಕ್ಷಣಿಕ ಸಾಧನೆಯ ಅಂಶಗಳನ್ನು ಸ್ಥಾಪನೆಯಿಂದ ಈವರೆಗೆ ತುಲನಾತ್ಮಕವಾಗಿ ನೋಡಲಾಗಿದೆ. ಗ್ರಾಮಕ್ಕೆ ಚಾರಿತ್ರಿಕ ಹಿನ್ನೆಲೆಯಿಂದಲೇ ರಾಜಕೀಯ ನಂಟು ಇದೆ. ಅದು ವಿವಿಧ ಹಂತಗಳನ್ನು ದಾಟಿ ಬಂದು ಸ್ವಾತಂತ್ರ್ಯ ನಂತರದಲ್ಲಿ ಗ್ರಾಮದ ಗ್ರಾಮ ಪಂಚಾಯತಿ ತಾಲೂಕು ಹಾಗೂ ಜಿಲ್ಲಾಪಂಚಾಯಿತಿಗಳಲ್ಲಿ ಗ್ರಾಮದ ಪ್ರತಿನಿಧಿಕರಣವನ್ನು ಅಧ್ಯಯನದಲ್ಲಿ ಗಮನಿಸಲಾಗಿದೆ. ಸೊರಟೂರ ಗ್ರಾಮವು ಆಚರಣಾತ್ಮಕ ನೆಲೆಗಟ್ಟಿನಲ್ಲಿ ಉತ್ತರ ಕರ್ನಾಟಕದ ವಿವಿಧ ಗ್ರಾಮಗಳಂತೆ ಸಾಮಾನ್ಯವಾದ ಪರಂಪರೆ ಹೊಂದಿದೆ. ವಾರ್ಷಿಕಾವರ್ತನದ ಆಚರಣೆಗಳನ್ನು ಗ್ರಾಮದ ವಿವಿಧ ದೈವಗಳ ಹಿನ್ನೆಲೆಯಲ್ಲಿರುವ ಅಂದರೆ ಕಾಲಭೈರವ ಅಭಿಷೇಕ, ದುರ್ಗಾದೇವಿ ಜಾತ್ರೆ, ಶರಣಬಸವೇಶ್ವರ ಪುರಾಣ ಹಾಗೂ ಸಾಮೂಹಿಕ ವಿವಾಹ ಮುಂತಾದವುಗಳ ಕುರಿತು ಕ್ಷೇತ್ರಕಾರ್ಯ ಮಾಡಿ ಅವುಗಳನ್ನು ಅಧ್ಯಯನದಲ್ಲಿ ಪರಿಚಯಿಸಲಾಗಿದೆ.

ಸಾಹಿತ್ಯವು ಆಯಾ ಪ್ರದೇಶದ ಸಂಸ್ಕೃತಿಯ ಪ್ರತೀಕವಾಗಿರುತ್ತದೆ. ಆದರೆ ಪ್ರಾಚೀನ ಗ್ರಾಮವಾದ ಸೊರಟೂರಿನಲ್ಲಿ ಗುರುತಿಸುವಂತಹ ಶಿಷ್ಟ ಸಾಹಿತ್ಯ ಕಂಡುಬರುವುದಿಲ್ಲ. ಅಂತಹ ಕೊರತೆಯ ನಡುವೆಯೂ ಗ್ರಾಮದಲ್ಲಿ ಮೂಡಿಬಂದ ಶಿಷ್ಟಕವಿಗಳನ್ನು, ಅವರ ಕವನ ಸಂಕಲನಗಳನ್ನು ಹಾಗೂ ಈಗತಾನೇ ಉದಯೋನ್ಮುಖರಾಗಿ ಬೆಳೆಯುತ್ತಿರುವ ಹಿರಿ-ಕಿರಿಯ ಕವಿ, ಲೇಖಕರ ಪರಿಚಯ ಅಧ್ಯಯನದಲ್ಲಿ ಕಾಣಿಸಿಕೊಂಡಿದೆ.

ಜನಪದ ಸಾಹಿತ್ಯದಲ್ಲಿ ಗ್ರಾಮದ ವಿಶೇಷ ಸಾಹಿತ್ಯ ಮತ್ತು ಜನಪದರಾಣ ಎಂಬ ವಿಶಿಷ್ಟ ಕಲಾ ಸಾಹಿತ್ಯವನ್ನು ಹಾಗೂ ಅದರ ಲಕ್ಷಣಗಳನ್ನು ಅಧ್ಯಯನದಲ್ಲಿ ನೋಡಲಾಗಿದೆ. ಸ್ವರಚಿತ ಭಜನಾಪದ, ಮೊಹರಂ ಪದ ಹಾಗೂ ಪಾರಂಪರಿಕವಾಗಿ ನಡೆದುಬಂದ ಡೊಳ್ಳಿನ ಹಾಡು,

ಮೊಹರಂ ಹಾಡು, ದೊಡ್ಡಾಟ, ಸಣ್ಣಾಟ, ವೀರಗಾಸೆ ಮುಂತಾದ ಕಲೆಗಳು ಗ್ರಾಮದಲ್ಲಿ ನೆಲೆಗೊಂಡಿರುವುದನ್ನು ಆಯಾ ಕಲಾವಿದರನ್ನು ಸಂದರ್ಶಿಸಿ ಅಗತ್ಯಕ್ಕನುಗುಣವಾಗಿ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಸಮಕಾಲೀನ ಸಂದರ್ಭದಲ್ಲಿ ಗ್ರಾಮದ ಇರುವಿಕೆಯು ಪ್ರಾಚೀನತೆಯಿಂದ ಆಧುನಿಕತೆಯತ್ತ ವಾಲುತ್ತಿರುವುದನ್ನು ಹಾಗೂ ಅದರ ಫಲಿತಗಳನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಗ್ರಾಮದ ಪ್ರಾಚೀನ ಹಾಗೂ ವಾಸ್ತವಿಕ ಅಂಶಗಳನ್ನು ಆಯಾ ವಿಷಯ ವಸ್ತುವಿಗನುಗುಣವಾಗಿ ವಿಶ್ಲೇಷಣೆ ಮಾಡುವ ಪ್ರಯತ್ನ ಪ್ರಸ್ತುತ ಅಧ್ಯಯನದಲ್ಲಿದೆ.

೧.೪. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಸೊರಟೂರ ಗ್ರಾಮದ ಕುರಿತು ದೊರೆಯುವ ಸಾಹಿತ್ಯಗಳು ಹಾಗೂ ಅಧ್ಯಯನಗಳನ್ನು ಗಮನಿಸಿದಾಗ ಸೊರಟೂರ ಗ್ರಾಮವನ್ನೇ ಕೇಂದ್ರೀಕರಿಸಿಕೊಂಡು ಸಂಪೂರ್ಣ ಗ್ರಾಮದ ಅಧ್ಯಯನ ಇದುವರೆಗೆ ನಡೆದಿಲ್ಲ. ಆದರೆ ವಿವಿಧ ಕ್ಷೇತ್ರಗಳಲ್ಲಿ ಆಯಾ ವಿಷಯಗಳಿಗೆ ಅನುಗುಣವಾಗಿ ಗ್ರಾಮದ ವಿವಿಧ ನೆಲೆಗಳಲ್ಲಿ ಅಧ್ಯಯನಗಳಾಗಿವೆ. ಮಹಾರಾಷ್ಟ್ರದ ಖ್ಯಾತ ಸಂಶೋಧಕ ಡಾ. ರಾಮಚಂದ್ರ ಚಿಂತಾಮಣಿ ಢೇರೆಯವರ 'ಶಿಖರಸಿಂಗಣಾಪುರಚ ಶಂಭುಮಹಾದೇವ' ಕೃತಿಯ ಅನುವಾದ ಸರಜೂ ಕಾಟ್ಕರ್ ಅವರ 'ಶಿವಾಜಿ ಮೂಲ ಕನ್ನಡ ನೆಲ' ಗ್ರಂಥದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೂಲವನ್ನು ಶೋಧನೆ ಮಾಡಲಾಗಿದೆ. ಚರಿತ್ರೆಯಲ್ಲಿ ಈವರೆಗೆ ಹುದುಗಿ ಹೋಗಿದ್ದ ಸತ್ಯವನ್ನು ಬೆಳಕಿಗೆ ತರುವಲ್ಲಿ ಈ ಕೃತಿ ಯಶಸ್ವಿಯಾಗಿದೆ. ಈ ಕೃತಿ ಸೊರಟೂರ ಗ್ರಾಮದ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲಿದೆ. ಡಾ. ಎಂ.ಎಂ. ಕಲಬುರ್ಗಿಯವರ ಧಾರವಾಡ ಜಿಲ್ಲಾ ಶಾಸನ ಸೂಚಿಯು ಗ್ರಾಮದಲ್ಲಿರುವ ೧೪ ಶಾಸನಗಳ ಕುರಿತು ಶಾಸನಗಳ ಕಾಲ ಸ್ಥಳ ಹಾಗೂ ಅದನ್ನು ನಿರ್ಮಿಸಿದ ದೊರೆಗಳು ಸೇರಿದಂತೆ ಶಾಸನದ ಒಟ್ಟು ಸಾರ ಈ ಕೃತಿಯಿಂದ ತಿಳಿದುಬರುತ್ತದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರಕಟಿಸಿದ ೨೦೦೭ರಲ್ಲಿ ಡಾ. ಬಾಲಸುಬ್ರಮಣ್ಯ ಡಾ. ಸಿ.ಎಸ್. ವಾಸುದೇವನ್, ರಮೇಶ ನಾಯಕ ಅವರು ಸಂಪಾದಿಸಿದ ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ ಗ್ರಂಥದಲ್ಲಿ ೧೧ನೇ ಶತಮಾನದಿಂದ ೧೩ನೇ ಶತಮಾನದ ಕಾಲಾವಧಿಯಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣವಾದ ವೀರಭದ್ರ, ಈಶ್ವರ, ನಾರಾಯಣ ದೇವಾಲಯಗಳ ಕುರಿತು ಮಾಹಿತಿ ಸಿಗುತ್ತದೆ. ಇವು ಸೊರಟೂರ ಪ್ರಾಚೀನತೆಯನ್ನು ಕುರಿತು ಮಾಹಿತಿ ಒದಗಿಸುತ್ತವೆ. ಆದರೆ ಈ ಎಲ್ಲಾ ಅಧ್ಯಯನಗಳು ತಮ್ಮ ಅಧ್ಯಯನದ ನೆಲೆಯಲ್ಲಿ ಗ್ರಾಮದ ಚರಿತ್ರೆ ಗುರುತಿಸಿವೆ. ಹಾಗೆಯೇ ಮುಂಡರಗಿ ಶ್ರೀ ಜಗದ್ಗುರು ಅನ್ನದಾನೀಶ್ವರ ಧರ್ಮ ಸಂಸ್ಕೃತಿ ಪ್ರಸಾರ ಮಂಡಳವು ೨೦೦೨ರಲ್ಲಿ ಶ್ರೀಮಠದ ಎಂಟನೇ ಪೀಠಾಧಿಪತಿಗಳಾದ ಶ್ರೀಮನ್ನಿರಂಜನ ಪ್ರಣವಸ್ವರೂಪ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳ ೭೬ನೇ ಪುಣ್ಯಾರಾಧನೆ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ಮೃಡಗಿರಿಯ ಮಹಾದಾನಿ ಎಂಬ ಕೃತಿ ಬಂದಿದೆ. ಅದರಲ್ಲಿ ಗ್ರಾಮದ ಸೊಲಬಯ್ಯನವರು ಹಿರೇಮಠ ಅವರ ಮನೆತನ ಹಾಗೂ ಗ್ರಾಮದ ಬಾಲಕನೊಬ್ಬ ಶ್ರೀಮಠದ ಲನೇ ಪೀಠಾಧಿಪತಿಗಳಾದ ಬಗೆಯನ್ನು ವಿವರಿಸಲಾಗಿದೆ.

ಕರ್ಮವೀರ ವಾರಪತ್ರಿಕೆಯ ೨೦೦೪ ಜೂನ್ ೨೭ರ ಸಂಚಿಕೆಯಲ್ಲಿ ಹಾಗೂ ವಿಜಯ ಕರ್ನಾಟಕ ದಿನಪತ್ರಿಕೆಯ ೨೦೦೬ ಸೆಪ್ಟೆಂಬರ್ ೨೪ರ ಸಾಪ್ತಾಹಿಕ ಪುಟ-೦೬ರಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೂಲ ಸೊರಟೂರ ಗ್ರಾಮ ಎಂಬ ಶೀರ್ಷಿಕೆಯ ಅಡಿಯಲ್ಲಿ ಲೇಖನಗಳು ಪ್ರಕಟವಾಗಿವೆ. ಹೀಗೆ ಸೊರಟೂರ ಗ್ರಾಮದ ಕುರಿತು ಪ್ರಾಚೀನ ರಾಜನಿಷ್ಠ ಅಂಶಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ಸೊರಟೂರ ಗ್ರಾಮದ ವಿವಿಧ ಘಟನೆ ಹಾಗೂ ಕಾರ್ಯಚಟುವಟಿಕೆ ಹಾಗೂ ಕಾರ್ಯಕ್ರಮಗಳ ಕುರಿತು ಪತ್ರಿಕೆಗಳಲ್ಲಿ, ದೃಶ್ಯ ಮಾಧ್ಯಮಗಳಲ್ಲಿ ಹಿತಕರವಾದ ಹಾಗೂ ಅಹಿತಕರವಾದ ಸುದ್ದಿ-ಸಮಾಚಾರಗಳು, ಲೇಖನಗಳು ವಾಸ್ತವಿಕ ನೆಲೆಗಟ್ಟಿನಲ್ಲಿ ಪ್ರಕಟವಾಗಿವೆ. ಪ್ರಸ್ತುತ 'ಸೊರಟೂರ ಗ್ರಾಮದ ಜಾನಪದ ಅಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಸೊರಟೂರ ಗ್ರಾಮವನ್ನೇ ಮೂಲವನ್ನಾಗಿಸಿಕೊಂಡು ಸಾಂಸ್ಕೃತಿಕ, ಸಾಮಾಜಿಕ, ಚಾರಿತ್ರಿಕ ಹಿನ್ನೆಲೆಗಳೊಂದಿಗೆ ಬೆಳವಣಿಗೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

ಟಿಪ್ಪಣಿಗಳು

೧. ಡಾ. ಅರ್ಜುನ ಗೊಳಸಂಗಿ, ೧೯೯೫, **ಗೊಳಸಂಗಿ ಗ್ರಾಮ ಸಾಂಸ್ಕೃತಿಕ ಅಧ್ಯಯನ,** ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ, ಪು. ೧೫.

೨. ಉದ್ಧೃತ: ಡಾ. ಸ.ಚಿ. ರಮೇಶ್ (ಸಂ), ೨೦೦೫, **ಜಾನಪದ ಕರ್ನಾಟಕ, ಸಂಪುಟ ೪, ಸಂಚಿಕೆ ೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೪೮.

೩. ಶ್ರೀರಾಮ ಇಟ್ಟಣ್ಣನವರ, ೧೯೯೫, **ಹಲಗಲಿ ಗ್ರಾಮಜಾನಪದ,** ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ. ಪು. ೧.

೪. ಕೆ.ಎ. ಮಹೇಶ್ವರಯ್ಯ, **ಕಂದಿಕೆರೆ ಗ್ರಾಮ ಜಾನಪದ ಅಧ್ಯಯನ,** ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು. ೧.

೫. ಅದೇ. ಪು. ೩.

□□

ಅಧ್ಯಾಯ : ಎರಡು

ಸೊರಟೂರ ಪರಿಚಯ

೨.೧. ಸೊರಟೂರ ಗ್ರಾಮ ಪದನಿಷ್ಪತ್ತಿ

೨.೨. ಭೌಗೋಳಿಕ ಪರಿಸರ

೨.೩. ಪಾರ್ಶ್ವವಾಯು ಚಿಕಿತ್ಸೆಯ ತಾಣ ಸೊರಟೂರ ಗ್ರಾಮ

೨.೪. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಎರಡು

ಸೊರಟೂರ ಪರಿಚಯ

೨.೧. ಸೊರಟೂರ ಗ್ರಾಮ ಪದನಿಷ್ಪತ್ತಿ

ಪ್ರತಿಯೊಂದು ಗ್ರಾಮನಾಮಗಳಲ್ಲಿ ಆ ಗ್ರಾಮದ ವಿಶಿಷ್ಟತೆ ಅಡಗಿರುತ್ತದೆ. ಅದಕ್ಕೊಂದು ಚಾರಿತ್ರಿಕ ಹಿನ್ನೆಲೆ ಇರುತ್ತದೆ. ಆ ಹಿನ್ನೆಲೆಯಲ್ಲಿ ಗ್ರಾಮನಾಮಗಳ ನಿಷ್ಪತ್ತಿಯನ್ನು ಗುರುತಿಸಬಹುದಾಗಿದೆ. **ಸೊರಟೂರ ಎಂಬುದು ಸೊಡರು** ಎಂಬ ಪದದಿಂದ ಬಂದಿದೆ. ಸೊಡರು ಎಂದರೆ ದೀಪ. ಸೊರಟೂರ ಗ್ರಾಮದಲ್ಲಿ ಒಂದು ದೀಪದ ಕಂಬವಿತ್ತೆಂದು ಪ್ರತಿದಿನ ರಾತ್ರಿ ಅದರ ಮೇಲೊಂದು ದೀಪ ಹಚ್ಚಿ ಇಡುತ್ತಿದ್ದರೆಂದು ಆ ದೀಪದಿಂದ ಊರಿಗೆಲ್ಲ ಬೆಳಕಾಗುತ್ತಿತ್ತೆಂದು ಐತಿಹ್ಯ ಇದೆ. ಆದ್ದರಿಂದ ಈ ಗ್ರಾಮಕ್ಕೆ ದೀಪ ಅಂದರೆ ಸೊಡರು ಇದ್ದ ಊರು ಸೊಡರೂರು ಎಂದು ಹೇಳುತ್ತಾ ಹೋಗಿ ಅದೇ ಮುಂದೆ ಸೊರಟೂರ ಆಯಿತು.[೧]

ಸೊರಟ ಮತ್ತು ಊರು ಎಂಬ ಎರಡು ಪದಗಳಿವೆ. ಊರು ಸ್ಥಳ ನಾಮಪದವಾಗಿದ್ದು, ಸಂಸ್ಕೃತದ ಪುರಂ ಈ ಅರ್ಥವನ್ನು ನೀಡುತ್ತದೆ. ಸೊರಟ ಹೆಸರಿನ ಊರು ಅಥವಾ ಪುರ ಗದುಗಿನಿಂದ ೨೧ ಕಿ.ಮೀ. ದೂರವಿದೆ. ಈ ಊರಿನ ಪ್ರಾಚೀನತೆ ೯ನೇ ಶತಮಾನದಷ್ಟು ಹಳೆಯದಾಗಿದೆ. ಗ್ರಾಮದ ವೀರಭದ್ರ ದೇವಸ್ಥಾನದ ಎದುರಿರುವ ಶಿಲಾಲೇಖದಲ್ಲಿ(SII XI-i-೩೯) ಸೊರಟೂರ ಗ್ರಾಮವನ್ನು ಸಂಸ್ಕೃತೀಕರಣ ಮಾಡಲಾಗಿದೆ.[೨] ಅದನ್ನು **ಸರಟ ಅಂದರೆ ಓತಿಕಾಟ** ಇದ್ದ ಊರು. **ಸರಟವುರು, ಸರಟಪುರ,** ಅದೇ ಮುಂದೆ ಸೊರಟೂರ ಎಂದಾಗಿದೆ. ೧೨ನೇ ಶತಮಾನದಲ್ಲಿ ದೊರೆತ ಒಂದು ಮರಾಠಿ ದಾಖಲೆಯಲ್ಲಿ ಈ ಸ್ಥಾನವನ್ನು 'ಸೋರಟ'ವೆಂದು ಗುರುತಿಸಿರುವುದಾಗಿ ತಿಳಿದುಬರುತ್ತದೆ. ಧಾರವಾಡ-ಹುಬ್ಬಳ್ಳಿಯಿಂದ ಹಿಡಿದು, ಅಣ್ಣಿಗೇರಿ, ಗದಗ, ಲಕ್ಕುಂಡಿ, ಶಿರಹಟ್ಟಿ, ಸೊರಟೂರ, ಪುಲಿಗೆರೆ (ಲಕ್ಷ್ಮೇಶ್ವರ) ಈ ಎಲ್ಲಾ ಭಾಗವನ್ನು ಸೋರಟ ಪ್ರದೇಶವೆಂದು ಗುರುತಿಸಿರುವುದು ಹಾಗೂ ಈ ಎಲ್ಲ ಪ್ರದೇಶದಲ್ಲಿ ಪಶುಪಾಲಕರು ಪ್ರಭುತ್ವ ಹೊಂದಿದ್ದರು. ಈ ಪಶುಪಾಲಕರಿಗೆ ಸೊರಟಿನ (ಲಕ್ಷ್ಮೇಶ್ವರದ ಸೋಮೇಶ್ವರ) ಸೋಮನಾಥನ ಬಗ್ಗೆ ವಿಶೇಷವಾದ ಆದರ ಗೌರವಗಳಿದ್ದವು. ತಾವುಗಳೆಲ್ಲ ಆತನ ಒಕ್ಕಲೆಂದೇ ಈ ಜನ ಭಾವಿಸಿದ್ದರು. ಮತ್ತು ಆತನನ್ನು ಆರಾಧಿಸುತ್ತಿದ್ದರೆಂದು ತಿಳಿದುಬರುತ್ತದೆ.[೩]

ಸೊರಟೂರ ಗ್ರಾಮಕ್ಕೆ ಹೊನ್ನಸೊರಟೂರ[೪] ಎಂಬ ಹೆಸರು ಇದೆ. ಹಾಗಾದರೆ ಇನ್ನೊಂದು ಸೊರಟೂರ ಇದೆಯೇ ಎಂಬ ಪ್ರಶ್ನೆ ಬರುತ್ತದೆ. ಇನ್ನೊಂದು ಕಾಗೆಸೊರಟೂರ ಇದೆ ಎಂದು

ಗ್ರಾಮಸ್ಥರು ಹೇಳುತ್ತಾರೆಯಾದರೂ ಕಾಗಸೊರಟೂರ ಎಲ್ಲಿದೆ ಎಂಬ ಬಗ್ಗೆ ಯಾವುದೇ ಸುಳಿವು ಸಿಗುವುದಿಲ್ಲ. ಆದರೆ ಹೊನ್ನಸೊರಟೂರ ಎಂಬುದು ಸಂಪದ್ಭರಿತ ನಾಡಿನ ಸಂಕೇತ ಎಂಬುದು ಹಲವರ ಅಭಿಪ್ರಾಯ. ಆದ್ದರಿಂದಲೇ ಇಲ್ಲಿಯ ಜನಪದರು

> ಬಸವಣ್ಣ ಹುಟ್ಟಲಿ, ಹೊಸಪ್ಯಾಟಿ ಕಟ್ಟಲಿ,
> ರಸಬಾಳಿ ಕಬ್ಬು ಚಿಗಿಯಲಿ, । **ಸೊರಟೂರ**
> ಮುತ್ತಿನ ಕ್ವಾಟಿ ಮುಗಿಯಲಿ

ಎಂದು ಹಾಡಿರುವುದು ಸೊರಟೂರ ಗ್ರಾಮಕ್ಕೆ **ಹೊನ್ನಸೊರಟೂರ** ಎಂಬ ಹೆಸರು ಬಂದಿರಬಹುದು.

ಹೀಗೆ ಸೊರಟೂರ ಗ್ರಾಮವು ಹೊನ್ನಸೊರಟೂರ ಆಗಿದೆ. ಸೊರಟೂರ ಗ್ರಾಮವು ೬೦ ಕಿ.ಮೀ. ಉದ್ದದ ಕಪ್ಪತ್ತಗುಡ್ಡದ ಸರಹದ್ದಿನಲ್ಲಿದೆ. ಈ ಗುಡ್ಡದಲ್ಲಿ ಬಂಗಾರದ ಗಣಿಗಳಿವೆ. ಸರ್ವಕಾಯಿಲೆಗಳಿಗೆ ರಾಮಬಾಣವಾದ ವನಸ್ಪತಿ ಇದೆ. ಇಲ್ಲಿಯ ಗಾಳಿಯಲ್ಲಿ ಶಕ್ತಿ ಇದೆ. ಅದಕ್ಕಾಗಿಯೇ ಇಲ್ಲಿ ಹಟ್ಟಿ ಚಿನ್ನದ ಗಣಿ ವನಸ್ಪತಿಗಳ ಶೋಧ, ಪವನ ವಿದ್ಯುತ್ ಸ್ಥಾವರಗಳು ನಿರ್ಮಾಣಗೊಂಡಿವೆ. ಈ ಎಲ್ಲ ಅಂಶಗಳು ಸೊರಟೂರ ಗ್ರಾಮ ಹೊನ್ನಸೊರಟೂರ ಎಂಬುದಕ್ಕೆ ಜೀವಂತ ಸಾಕ್ಷಿಯಾಗಿವೆ.

೨.೨. ಭೌಗೋಳಿಕ ಪರಿಸರ

ಗ್ರಾಮ ಅಧ್ಯಯನವೆಂಬುದು ಒಂದು ಗ್ರಾಮದ ಸಾಂಸ್ಕೃತಿಕ ಅಧ್ಯಯನವಾಗಿರುತ್ತದೆ. ಗ್ರಾಮೀಣ ಸಮುದಾಯದ ಉದ್ಯೋಗ ವ್ಯವಹಾರ ಊಟ, ಉಡುಗೆ ಮನರಂಜನೆ ಒಟ್ಟಾರೆ ಗ್ರಾಮೀಣರ ಬದುಕೆಲ್ಲ ಇದರ ತೆಕ್ಕೆಗೆ ಒಳಗಾಗಿರುತ್ತದೆ.[೫]

ಆ ಹಿನ್ನೆಲೆಯಲ್ಲಿ ಗ್ರಾಮದ ಭೌಗೋಳಿಕ ಪರಿಸರ ಬಹುಮುಖ್ಯವಾದುದು. ಬಹಳಷ್ಟು ಸಲ ಭೌಗೋಳಿಕ ಪರಿಸರವೇ ಗ್ರಾಮೀಣ ಜೀವನ ಸ್ವರೂಪವನ್ನು ನಿರ್ಧರಿಸುತ್ತದೆ. ಹಾಗೂ ನಿಯಂತ್ರಿಸುತ್ತದೆ. ಒಂದು ಹಳ್ಳಿಯ ಉಡುಗೆ-ತೊಡುಗೆ, ಆಹಾರ ಪದ್ಧತಿ, ಜೀವನ ಪದ್ಧತಿ, ಉದ್ಯೋಗ ಕ್ರಮಗಳು ಭಾಗದ ಭೂಮಿಯ ಗುಣ ಮಳೆಯ ಪ್ರಮಾಣ, ಬೆಳೆ ರೀತಿಯನ್ನು ಅವಲಂಬಿಸಿರುತ್ತವೆ. ಊರಿನ ಮೇರೆಗಳು, ದಾರಿಗಳು ಉದ್ಯೋಗ ವ್ಯವಹಾರವನ್ನು ರೂಪಿಸುತ್ತವೆ. ಊರ ಸುತ್ತಲಿನ ಭೂಮಿ, ಬೆಟ್ಟ, ಗುಡ್ಡ, ಹಳ್ಳ, ಕೆರೆಗಳನ್ನು ಬದಿಗಿರಿಸಿ ಗ್ರಾಮ ಜೀವನವನ್ನು ನೋಡಲು ಸಾಧ್ಯವಿಲ್ಲ. ಹೀಗೆ ಭೌಗೋಳಿಕ ವಿವರಣೆ ಗ್ರಾಮ ಅಧ್ಯಯನದಲ್ಲಿ ಬಹುಮುಖ್ಯವಾದುದೆನಿಸುತ್ತದೆ. ಯಾವುದೇ ಒಂದು ಗ್ರಾಮವು ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ ಎಂದು ನಿರ್ಧರಿಸಿದಾಗ ಅದಕ್ಕೆ ನೆರವಾಗಿರುವ ಕಾರಣಗಳನ್ನು ಪಟ್ಟಿ ಮಾಡಿದರೆ ಆ ಗ್ರಾಮವು ನಗರ/ಪಟ್ಟಣಕ್ಕೆ ಭೌಗೋಳಿಕವಾಗಿ ಎಷ್ಟು ಸಮೀಪದಲ್ಲಿದೆ ಅಥವಾ ವ್ಯವಹಾರಿಕವಾಗಿ ಬಾಹ್ಯ ಜಗತ್ತಿನೊಂದಿಗೆ ಎಷ್ಟು ನಿಕಟ ಸಂಬಂಧ ಹೊಂದಿದೆ ಎಂಬ ಅಂಶಗಳೇ ನಿರ್ಣಾಯಕವಾಗುತ್ತವೆ.[೬] ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದ ಭೌಗೋಳಿಕ ಪರಿಸರದ ಅಂಶಗಳನ್ನು ತಿಳಿಯಬಹುದಾಗಿದೆ.

ಸೊರಟೂರ ಗ್ರಾಮವು ಜಿಲ್ಲಾ ಕೇಂದ್ರವಾದ ಗದಗದಿಂದ ದಕ್ಷಿಣಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವಕ್ಕೆ ಮಹಾಲಿಂಗಪೂರ ೬ ಕಿ.ಮೀ. ಪಶ್ಚಿಮಕ್ಕೆ ಶಿರಹಟ್ಟಿ ೪ ಕಿ.ಮೀ. ಉತ್ತರಕ್ಕೆ ವೆಂಕಟಾಪೂರ ೨ ಕಿ.ಮೀ. ದಕ್ಷಿಣಕ್ಕೆ ಹಂಗನಕಟ್ಟಿ ೨ ಕಿ.ಮೀ. ದೂರದಲ್ಲಿದೆ. ಹಾಗೂ ಯಲಿಶಿರೂರ, ಶಿರೋಳ, ಅತ್ತಿಕಟ್ಟಿ, ಜಲ್ಲಿಗೇರಿಗಳು ಗ್ರಾಮದ ಸುತ್ತಮುತ್ತಲ ಗ್ರಾಮಗಳಾಗಿವೆ.

ಗುಡ್ಡಗಳು

ಗುಡ್ಡಗಳು ಎಂದಾಕ್ಷಣ ಕಲ್ಲುಗಡ್ಡ, ಮಣ್ಣಿನ ಗುಡ್ಡ, ಅರಣ್ಯ ಪ್ರದೇಶ ಬೆಟ್ಟಗಳು ಹೀಗೆ ಹಲವಾರು ಬಗೆಗಳಲ್ಲಿ ಕಾಣಬಹುದು. ಕೆಲವು ಗ್ರಾಮಗಳಿಗೆ ಗುಡ್ಡ-ಬೆಟ್ಟಗಳ ಸಂಪರ್ಕವೇ ಇರುವುದಿಲ್ಲ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮವು ವಿಶಿಷ್ಟವಾಗಿದೆ. ಏಕೆಂದರೆ, "ಎಪ್ಪತ್ತಗಿರಿಗಿಂತ ಕಪ್ಪತ್ತಗಿರಿ ಮೇಲು" ಎಂಬ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ೬೦ ಕಿ.ಮೀ. ಉದ್ದದ ಕಪ್ಪತ್ತಗುಡ್ಡದ ಸರಹದ್ದಿನಲ್ಲಿ ಸೊರಟೂರ ಗ್ರಾಮವಿದ್ದು, ಅದು ಗ್ರಾಮದ ಸುತ್ತಲು ಹಲವು ಗುಡ್ಡಗಳನ್ನು (ಅಡವಿಗಳನ್ನು) ಹೊಂದಿದೆ.

ಹನುಮಪ್ಪನ ಬೆಂಚಿ

ಇದು ಗ್ರಾಮದ ಉತ್ತರ ದಿಕ್ಕಿನಲ್ಲಿ ಇರುವ ಅಡವಿಯಾಗಿದೆ. ಇಲ್ಲಿ ಹನುಮಪ್ಪನ ಮೂರ್ತಿ ಮತ್ತು ಗುಡಿ ಇರುವುದರಿಂದ ಈ ಅಡವಿಗೆ ಹನುಮನ ಬೆಂಚಿ ಎಂದು ಹೆಸರು ಬಂದಿದೆ. ಇದು ಪ್ರಾಚೀನ ಕಾಲದ ಒಂದು ಊರು ಎಂದು ಹೇಳಲಾಗುತ್ತಿದೆ. ಅದಕ್ಕೆ ಮೊರಟೂರು ಎಂಬ ಹೆಸರು ಇರುವದು ಹಿರಿಯರಿಂದ ತಿಳಿಯುತ್ತದೆ. ಅದು ಜನಪದ ಕಾವ್ಯಗಳಲ್ಲಿ ಅಭಿವ್ಯಕ್ತಗೊಂಡಿದೆ.

ಸೊರಟೂರ ಮುಂದ ಮೊರಟೂರು ಉಂಟು
ಮೊರಟೂರ ಊರಲ್ಲಿ ಮಾರುತಿ ಗುಡಿಯುಂಟು
ಅವನ ಸುತ್ತ ಬಂಗಾರ ಉಂಟು

ಸೊರಟೂರ ಮುಂದ ಮೊರಟೂರು ಉಂಟು ಮೊರಟೂರ ಊರಲ್ಲಿ ಮಾರುತಿ ಗುಡಿಯುಂಟು ಅವನ ಸುತ್ತ ಬಂಗಾರ ಉಂಟು ಅಂದರೆ ಗ್ರಾಮದ ಉತ್ತರ ದಿಕ್ಕಿನ ಹನುಮನ ಬೆಂಚಿ ಒಂದು ಪ್ರಾಚೀನ ಊರು. ಅದು ಹೇಗೆ ನಾಶವಾಗಿದೆ ಎಂಬ ಬಗ್ಗೆ ಜನಪದರಿಂದ ಏನು ತಿಳಿಯುವುದಿಲ್ಲ. ಅಲ್ಲಿ ಕೆಲ ಜನರು ಈಗಿರುವ ಸೊರಟೂರ ಗ್ರಾಮಕ್ಕೆ ಬಂದಿದ್ದಾರೆ ಎಂದು ಹೇಳುತ್ತಾರೆ. ಹನುಮನ ಬೆಂಚಿಯ ಅಡವಿಯಲ್ಲಿ ಮಳೆಯಾದಾಗ ಈಗಲೂ ಬಂಗಾರ ಸಿಗುತ್ತದೆ ಎಂಬುದು ನಂಬಿಕೆಯಾಗಿದೆ. ಅಡವಿಯಲ್ಲಿ ಗ್ರಾಮದ ಜನರು ದನ ಮೇಯಿಸುತ್ತಾರೆ. ಸೊರಟೂರ ಅಡವಿಯಲ್ಲಿ ಹೊನ್ನಂಬರಕಿ, ಬಂದರಕಿ, ತೆರೆದ ಗಿಡ, ಬ್ಯಾಲದ ಗಿಡ, ಬಿಕ್ಕಿಗಿಡ, ಹೆಬ್ಬೆವುಗಿಡ, ಕವಳಿಹಣ್ಣಿನ ಗಿಡ, ಒಳಮುಚುಗ ಹೊರಮುಚುಗ, ಲವಳಸರ, ಕಾರಿ ಬಾರಿ, ತೊಂಡರ್ಸಿ, ಜಗಳಗಂಟಿ ಮುಂತಾದ ಗಿಡ ಮರಗಳಿವೆ. ಇಲ್ಲಿ ಸೌದೆಯ ಕಟ್ಟಿಗೆಗಳನ್ನು ಒದಗಿಸುವ ಗಿಡಗಂಟಿಗಳು, ದನಗಳಿಗೆ ಹುಲ್ಲು, ಕುರಿ ಮೇಕೆಗಳಿಗೆ ತಪ್ಪಲು ಇದೆ. ಇತ್ತೀಚಿನ ಕಾಲಘಟ್ಟದಲ್ಲಿ ಸರಕಾರ ನೀಲಗಿರಿ ಸಸಿಗಳನ್ನು ನಾಟಿ ಮಾಡಿಸಿದ್ದು,

ಗ್ರಾಮಸ್ಥರು ಸೌದೆಗಾಗಿ ಅವುಗಳನ್ನು ಕಡಿಯುತ್ತಾರೆ. ಆದರೆ ಕಡಿದ ತಕ್ಷಣ ಅವು ಬಹುವೇಗವಾಗಿ ಚಿಗಿತು ಬೆಳೆಯುವುದರಿಂದ ಅಡವಿ ಸದಾ ಹಸಿರಾಗಿರುತ್ತವೆ.

ನಂದಿಮಡ್ಡಿ

ನಂದಿ ಅಂದರೆ ಎತ್ತುಗಳನ್ನು ಮೇಯಿಸುವುದರಿಂದ ಇದಕ್ಕೆ ನಂದಿ ಮಡ್ಡಿ ಎಂದು ಹೆಸರು ಬಂದಿರಬಹುದು. ನಂದಿಮಾಲ್ಡಿ ಎಂದು ಕರೆಯಲ್ಪಡುವ ಈ ಅಡವಿಯು ಹನುಮನ ಬೆಂಚಿಗೆ ಹತ್ತಿಕೊಂಡಿದ್ದು, ಗ್ರಾಮದ ಅತ್ತಿಕಟ್ಟಿ ದಾರಿಯವರೆಗೆ ಚಾಚಿಕೊಂಡಿದೆ. ಈ ಅಡವಿಯಲ್ಲಿಯು ಬಂದರಕಿ, ಹೊನ್ನಂಬರಿಕಿ, ಕಾರಿ ತೊಂಡರ್ಸಿ, ಜಗಳಗಂಟಿ ಮುಂತಾದ ಗಿಡಗಳಿದ್ದು, ಸರಕಾರ ಇಲ್ಲಿ ಗೊಬ್ಬರ ಗಿಡ ಮತ್ತು ನೀಲಗಿರಿ ಗಿಡಗಳನ್ನು ಬೆಳೆಸಿದೆ. ಈ ಅಡವಿಯು ಸಹ ದನ-ಕರು, ಕುರಿ-ಮೇಕೆಗಳಿಗೆ ಆಹಾರ ಒದಗಿಸುತ್ತದೆ. ಈ ಅಡವಿ ದಾರಿಯ ಹತ್ತಿರ ಇರುವುದರಿಂದ ಹೆಣ್ಣುಮಕ್ಕಳು ಇಲ್ಲಿ ಒಣಸೌದೆ ತರಲು ಬರುತ್ತಾರೆ.

ಕ್ವಾರಮಡ್ಡಿ

ಕ್ವಾರಮ್ಮ ಎಂಬ ದೇವಿಯು ಈ ಗುಡ್ಡದಲ್ಲಿ ಇರುವುದರಿಂದ ಇದಕ್ಕೆ ಕ್ವಾರಮ್ಮನ ಗುಡ್ಡ ಎಂದು ಕರೆಯಲ್ಪಟ್ಟು ಮುಂದೆ 'ಕ್ವಾರಮಡ್ಡಿ' ಎಂದು ಆಗಿರಬಹುದು. ಇದು ಗ್ರಾಮದ ಪೂರ್ವಕ್ಕೆ ಅತ್ತಿಕಟ್ಟಿಯ ದಾರಿಯಲ್ಲಿ ೨ ಕಿ.ಮೀ. ನಂತರ ಬಲಭಾಗಕ್ಕೆ ಬರುತ್ತದೆ. ಈ ಗುಡ್ಡದ ತುದಿಯಲ್ಲಿ ಒಂದು ದೊಡ್ಡ ಆಲದ ಮರವಿದೆ. ಅದು ಹೆಚ್ಚು ವಿಸ್ತಾರವಾಗಿ ಹಾಗೂ ದಟ್ಟವಾಗಿ ಬೆಳೆದಿರುವುದರಿಂದ ಹಾಗೂ ಅಲ್ಲಿ ಕ್ವಾರಮ್ಮನ ಘಟಸರ್ಪವಿದೆ ಎಂಬ ನಂಬಿಕೆ ಇರುವುದರಿಂದ ಅದು ಜನರ ಭಯಭಕ್ತಿಯ ತಾಣವಾಗಿದೆ. ಈ ಗುಡ್ಡ ಎತ್ತರ ಮಟ್ಟದಲ್ಲಿದ್ದು, ಆಲದ ಮರವು ಎತ್ತರದಲ್ಲಿರುವುದರಿಂದ ಇದು ಸೊರಟೂರ ವ್ಯಾಪ್ತಿಯ ಯಾವ ಭಾಗದಲ್ಲಿ ನಿಂತು ನೋಡಿದರೂ ಕಾಣಿಸುತ್ತದೆ. ಈ ಗುಡ್ಡವು ಬಹುಪಾಲು ಕಲ್ಲಿನ ಪಡಿಗಳಿಂದ ಕೂಡಿದ್ದು ಅದರಲ್ಲಿ ದನಗಳಿಗೆ ಹುಲ್ಲು ಹಾಗೂ ಬಂದರಕಿ ಹಾಗೂ ಹೊನ್ನಂಬರಿಕೆ ಎಂಬ ಸಣ್ಣಪುಟ್ಟ ಗಿಡಗಂಟಿಗಳು ಬೆಳೆದಿವೆ.

ಪುಂಡಿರಾಮನ ಸರವು

ಇದು ಅತ್ತಿಕಟ್ಟಿ ದಾರಿಯ ಕ್ವಾರಮಡ್ಡಿಗೆ ಹತ್ತಿಕೊಂಡಿರುವ ಅಡವಿಯಾಗಿದ್ದು ಇಲ್ಲಿ ಗುಡ್ಡದ ನೀರು ಹರಿದು ಬರುವುದರಿಂದ ಇದಕ್ಕೆ ಸರವು (ಹಳ್ಳ) ಎಂದು ಹೇಳುತ್ತಾರೆ. ಇದು ಗ್ರಾಮದ 'ಪುಂಡಿ' ಮನೆತನದವರ ಹೊಲದ ಹತ್ತಿರ ಇರುವುದರಿಂದ ಅದಕ್ಕೆ ಆ ಹೆಸರು ಬಂದಿರಬಹುದು. ಇದು ಬಹುವಿಶಾಲವಾದ ಗುಡ್ಡವಾಗಿದ್ದು ದನಗಳನ್ನು ಮೇಯಿಸಲು ಸೂಕ್ತ ಅಡವಿಯಾಗಿದೆ. ಇಲ್ಲಿ ಒಂದು ದೊಡ್ಡ ಕೆರೆ ಇದ್ದು ಅದಕ್ಕೆ 'ರುದ್ರಪ್ಪನ ಕೆರೆ' ಎಂದು ಹೆಸರು ಇದೆ. ಈ ಕೆರೆ ಬಹುವಿಸ್ತಾರ ಹಾಗೂ ಜನದಟ್ಟಣೆಯಿಂದ ದೂರವಿರುವುದರಿಂದ ಗ್ರಾಮದ ಅಡವಿಗಳಲ್ಲಿರುವ ಚಿಗರಿ, ಮೊಲ, ನರಿ, ತೋಳ, ಕಾಡುಹಂದಿ (ಮಿಕ) ಮುಂತಾದ ವನ್ಯಜೀವಿಗಳು ಇಲ್ಲಿ ವಾಸಿಸುತ್ತಿದ್ದವು ಎಂದು ತಿಳಿಯುತ್ತದೆ.

ತೇಕಲಗಣಿ ಗುಡ್ಡ

ಇದು ಮಹಾಲಿಂಗಪುರ ದಾರಿಯಲ್ಲಿ ಗ್ರಾಮದಿಂದ ೨ ಕಿ.ಮೀ ದೂರದಿಂದ ಪ್ರಾರಂಭವಾಗುತ್ತದೆ. ಈ ಗುಡ್ಡದ ದಾರಿಯು ತೆವರು (ದಿಬ್ಬ, ದಿಣ್ಣೆ) ಅಂದರೆ ಏರಿ ಇರುವುದರಿಂದ ಇದನ್ನು ಹತ್ತಲು ಹೆಚ್ಚು ಶ್ರಮ ಬೇಕಾಗಿರುವುದರಿಂದ ಇದಕ್ಕೆ ತೇಕಲಗಣಿಗುಡ್ಡ ಎಂದು ಹೆಸರಿದೆ. ಇಲ್ಲಿಯು ಸಹ ಸೊರಟೂರಿನ ಎಲ್ಲ ಅಡವಿಯಂತೆ ಗಿಡಗಂಟಿ, ಮರಗಳು, ಹುಲ್ಲು ತಪ್ಪಲುಗಳು ದೊರೆಯುತ್ತವೆ.

ಸಸಾಪುರ ಹನುಮಪ್ಪನ ಗುಡ್ಡ

ಇದು ಗ್ರಾಮದ ದಕ್ಷಿಣ ಭಾಗಕ್ಕೆ ಜಲ್ಲಿಗೇರಿ ದಾರಿಯಲ್ಲಿದೆ. ಇಲ್ಲಿ ಹನುಮಪ್ಪ ಇರುವುದರಿಂದ ಇದಕ್ಕೆ ಸಸಾಪುರ ಹನುಮಪ್ಪ ಎಂದು ಹೇಳುತ್ತಾರೆ. ಇದು ಸಹ ಎಲ್ಲ ಗುಡ್ಡಗಳಂತೆ ನೈಸರ್ಗಿಕ ಸಂಪನ್ಮೂಲ ಹಾಗೂ ವನ್ಯಜೀವಿಗಳ ತಾಣವಾಗಿದೆ.

ಭೈರಪ್ಪನ ಗುಡ್ಡ (ವೆಂಕಟಾಪುರ ಗುಡ್ಡ)

ಇದು ಗ್ರಾಮದ ಉತ್ತರ ದಿಕ್ಕಿನ ಗದಗ–ವೆಂಕಟಾಪುರ ರಸ್ತೆಯ ಮಧ್ಯದಲ್ಲಿದೆ. ಈ ಗುಡ್ಡದ ಮೇಲೆ ಕಾಲಭೈರವನ ಪಾದಗಟ್ಟಿ ಇರುವುದರಿಂದ ಇದಕ್ಕೆ ಭೈರಪ್ಪಜ್ಜನ ಗುಡ್ಡ ಹಾಗೂ ವೆಂಕಟಾಪುರ ಈ ಗುಡ್ಡದ ಹತ್ತಿರವೇ ಇರುವುದರಿಂದ ವೆಂಕಟಾಪುರ ಗುಡ್ಡವೆಂದು ಕರೆಯುತ್ತಾರೆ. ಈ ಗುಡ್ಡದಲ್ಲಿ ಒಂದು ಕಂದಕವಿದ್ದು ಅದಕ್ಕೆ ಮದ್ದಿನ ಕ್ವಾಣಿ ಎಂದು ಕರೆಯುತ್ತಾರೆ. ಏಕೆಂದರೆ ಪ್ರಾಚೀನ ಸೊರಟೂರಿನಲ್ಲಿ ಯುದ್ಧಕ್ಕಾಗಿ ಇಲ್ಲಿ ಮದ್ದು ಗುಂಡುಗಳನ್ನು ಸಂಗ್ರಹಿಸಿಡುತ್ತಿದ್ದರು ಎಂಬ ವಾಡಿಕೆ ಇದೆ. ಈ ಗುಡ್ಡದಲ್ಲಿ ಈಗ ಪವನ ವಿದ್ಯುತ್ ಸ್ಥಾವರ ಕಂಬಗಳಿದ್ದು ವಿದ್ಯುತ್ ಉತ್ಪಾದನೆ ಮಾಡುತ್ತಿವೆ.

ಹೀಗೆ ಸೊರಟೂರ ಗ್ರಾಮವು ಕಪ್ಪತ್ತಗುಡ್ಡದ ಸರಹದ್ದಿನಲ್ಲಿ ಹಲವು ಚಿಕ್ಕ ಗುಡ್ಡ ಅಡವಿಗಳನ್ನು ಹೊಂದಿದೆ. ಇಲ್ಲಿಯ ಗುಡ್ಡಗಳಲ್ಲಿ ವನ್ಯಜೀವಿಗಳಿವೆ. ಅಡವಿಯಲ್ಲಿ ವನಸ್ಪತಿ ಸಸ್ಯಗಳಿವೆ. ಅಷ್ಟೇ ಅಲ್ಲ ದನ-ಕರು, ಮಾನವರ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುವ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿವೆ. ಆದ್ದರಿಂದಲೇ ಇಲ್ಲಿಯ ಜನ ವ್ಯವಸಾಯ ಹಾಗೂ ಹೈನುಗಾರಿಕೆಯ ಮೂಲಕ ಜೀವನ ನಿರ್ವಹಿಸಲು ಸಾಧ್ಯವಾಗಿದೆ. ಆದರೆ ಇಂದು ಮಾನವ ತತ್ಕಾಲ ಸುಖಕ್ಕಾಗಿ ಅರಣ್ಯ ನಾಶ ಮಾಡುತ್ತಿದ್ದಾನೆ. ಅದರ ಪರಿಣಾಮವಾಗಿ ಮರಗಳೇಕೆ, ಗಿಡ–ಗಂಟಿಗಳು ಇಲ್ಲವಾಗುತ್ತಿವೆ. ಹುಲಿ ಚಿರತೆಗಳಿದ್ದ ನಾಡು ಎಂಬ ಪ್ರತೀತಿ ಇತ್ತು. ಆದರೆ ಇಂದು ಚಿಗರೆ, ಮೊಲಗಳೂ ಸಹ ಕಾಣಸಿಗುತ್ತಿಲ್ಲ. ಹೀಗಿದ್ದರೂ ಗ್ರಾಮದ ಅರಣ್ಯ ರಕ್ಷಣೆಗಾಗಿ ಯಾವ ಕಾರ್ಯಕ್ರಮಗಳೂ ನಡೆಯುತ್ತಿಲ್ಲ. ಸರಕಾರವೂ ಸಹ ಕೈಕಟ್ಟಿ ಕುಳಿತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಗ್ರಾಮವು ನೈಸರ್ಗಿಕ ಸಂಪನ್ಮೂಲಗಳಿಲ್ಲದ ಬರಡು ಗ್ರಾಮವಾಗಬಹುದು. ಆ ಹಿನ್ನೆಲೆಯಲ್ಲಿ ಗ್ರಾಮಸ್ಥರು ಅರಣ್ಯ ಇಲಾಖೆಯೊಂದಿಗೆ ಕೈಜೋಡಿಸಿ ಗ್ರಾಮ ಅರಣ್ಯ ಸಮಿತಿ ರಚಿಸುವ ಮೂಲಕ "ಅರಣ್ಯ ರಕ್ಷಣೆ ನಮ್ಮೆಲ್ಲರ ಹೊಣೆ" ಎಂಬುದನ್ನು ಸಾದಿಸಬೇಕಾಗಿದೆ.

ಗ್ರಾಮದ ಗುಡ್ಡಗಳು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಸೇರಿದ ಉದ್ದೇಶ ಹಾಗೂ ಅದರ ಪರಿಣಾಮ

ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ನಂದಿಮಡ್ಡಿ ಗುಡ್ಡ ಈಶಾನ್ಯ ದಿಕ್ಕಿಗಿರುವ ಹನುಮನ ಬೆಂಚಿ, ಆಗ್ನೇಯ ದಿಕ್ಕಿಗಿರುವ ತೇಕಲಗಣಿ ಗುಡ್ಡ ಸೇರಿದಂತೆ ಗ್ರಾಮದ ಸುತ್ತಮುತ್ತಲು ಈಗಿರುವ ಗುಡ್ಡಗಳು ಅರಣ್ಯ ಇಲಾಖೆಗೆ ಸಂಬಂಧಿಸಿವೆ.

ಆದರೆ ಈ ಎಲ್ಲಾ ಗುಡ್ಡಗಳು ಮೊದಲು ರೆವಿನ್ಯೂ ಇಲಾಖೆಯ ವ್ಯಾಪ್ತಿಯಲ್ಲಿದ್ದವು ಹಾಗೂ ಅವು ಗ್ರಾಮದ ದನ-ಕರು, ಆಡು ಕುರಿಗಳನ್ನು ಮೇಯಿಸಲು ಹುಲ್ಲುಗಾವಲು ಪ್ರದೇಶಗಳಾಗಿದ್ದವು ಎಂಬುದನ್ನು ಗ್ರಾಮದ ಹಿರಿಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಆದರೆ ಸೊರಟೂರ ಮಂಡಳ ಪಂಚಾಯ್ತಿಯಲ್ಲಿ ಶ್ರೀ ದೇವೇಂದ್ರಪ್ಪ ಎನ್. ಮಲ್ಲಾಡದ (೧೯೬೩-೧೯೭೮) ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅರಣ್ಯ ಇಲಾಖೆಯವರು ಸೊರಟೂರ ಗ್ರಾಮ ವ್ಯಾಪ್ತಿಯ ಗುಡ್ಡಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರೆ ಅರಣ್ಯ ಅಭಿವೃದ್ಧಿ ಮಾಡುತ್ತೇವೆ ಎಂದು ಬೇಡಿಕೆ ಇಟ್ಟಾಗ ಅಂದಿನ ಅಧ್ಯಕ್ಷರು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರು ಎಂದು ಗ್ರಾಮದ ಹಿರಿಯರು ಹೇಳುತ್ತಾರೆ. ಆದರೆ ದಾಖಲೆಗಳನ್ನು ಗಮನಿಸಿದಾಗ ೧೯೯೯ಕ್ಕಿಂತ ಪೂರ್ವದಲ್ಲಿ ಈ ಪ್ರದೇಶ ರೆವಿನ್ಯೂ ಫಾರೆಸ್ಟ್ ಎಂದು ಇತ್ತು. ಈಗ ಅದು ಕಾಯ್ದಿಟ್ಟ ಅರಣ್ಯ ಎಂದಾಗಿದೆ. ಆಗಿನ ಕಾಲದಲ್ಲಿ ಅವರ ಉದ್ದೇಶ ಸರಿಯಾಗಿರಬಹುದು. ಆದರೆ ಪ್ರಸಕ್ತ ಕಾಲಘಟ್ಟದಲ್ಲಿ ಸೊರಟೂರ ಜನರಿಗೆ ಅದೊಂದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ಮರೀಚಿಕೆಯಾದ ಅರಣ್ಯ ಅಭಿವೃದ್ಧಿ

ಸೊರಟೂರ ಗ್ರಾಮ ೬೧೨೪ ಎಕರೆ ಭೂಪ್ರದೇಶವನ್ನು ಹೊಂದಿದ್ದು, ಅದರಲ್ಲಿ ೨೮೯೦ ಎಕರೆ ಅರಣ್ಯ ಪ್ರದೇಶವಿದೆ. ಅಂದರೆ ಗ್ರಾಮದ ಒಟ್ಟು ಭೂ ಪ್ರದೇಶದ ಅರ್ಧದಷ್ಟು ಭಾಗ ಅರಣ್ಯವಿದೆ. ಅನಾದಿ ಕಾಲದಿಂದಲೂ ಈ ಗುಡ್ಡಗಳನ್ನು ಆಶ್ರಯಿಸಿ ಗ್ರಾಮದಲ್ಲಿ ಆಕಳು, ಎತ್ತು, ಆಡು-ಕುರಿ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ. ಆದರೆ ಸೊರಟೂರ ಮಂಡಳ ಪಂಚಾಯತಿಯವರು ಕಂದಾಯ ಇಲಾಖೆ ವ್ಯಾಪ್ತಿಯಲ್ಲಿದ್ದ ಈ ಹುಲ್ಲುಗಾವಲು ಗುಡ್ಡ ಪ್ರದೇಶವನ್ನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬಿಟ್ಟುಕೊಟ್ಟ ಮೇಲೆ ಆ ಗುಡ್ಡಗಳಲ್ಲಿ ಅರಣ್ಯ ಇಲಾಖೆಯವರು ನೀಲಗಿರಿ ಗಿಡಗಳನ್ನು ನೆಟ್ಟಿದ್ದಾರೆ.

ಅರಣ್ಯ ರಕ್ಷಣೆಗಾಗಿ ಸಿಬ್ಬಂದಿಗಳನ್ನು ನೇಮಿಸಿದ್ದಾರೆ. ಸಿಬ್ಬಂದಿಗೆ ಹಗಲಿನ ಸಂದರ್ಭದಲ್ಲಿ ಮಾತ್ರ ಕೆಲಸ ಇರುತ್ತದೆ, ಇದು ಆಟಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ರಾತ್ರಿ ಸಮಯದಲ್ಲಿ ಸೌದೆಗಾಗಿ ಸಣ್ಣ ಸಣ್ಣ ನೀಲಗಿರಿ ಗಿಡಗಳನ್ನು ಕಡಿದು ಸಾಗಿಸುವುದು ನಡದೇ ಇದೆ. ಇದರಿಂದ ಗ್ರಾಮದಲ್ಲಿ ಅರಣ್ಯ ಅಭಿವೃದ್ಧಿಯಂತೂ ಆಗಿಲ್ಲ. ಇದನ್ನು ತಡೆಯಲು ಸರ್ಕಾರ ಯಾವುದೇ ಕಠಿಣ ಕ್ರಮ ತೆಗೆದುಕೊಂಡಂತೆ ಕಾಣುವುದಿಲ್ಲ. ನೀಲಗಿರಿ ಗಿಡ ನಾಟಿ ಮಾಡಿ ೩೦-೪೦ ವರ್ಷಗಳಾದರೂ ಗ್ರಾಮದ ಗುಡ್ಡದಲ್ಲಿ ಒಂದೂ ನೀಲಗಿರಿ ಗಿಡ ದೊಡ್ಡದಾಗಿ

ಬೆಳೆದಿಲ್ಲ. ಯಾವಾಗಲೂ ೭-೮ ಫೂಟ್ ಎತ್ತರದ ಗಿಡಗಳು ಮಾತ್ರ ಇರುತ್ತವೆ. ಅಂದರೆ ಕಡಿಯುವರು ಕಡಿಯುತ್ತಾರೆ. ಅವು ಮತ್ತೆ ಚಿಗಿಯುತ್ತವೆ ಇದು ತಿಳಿದಿರುವ ರಹಸ್ಯ ಎಂಬಂತಾಗಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ.

ಏಕೆಂದರೆ ೩೦-೪೦ ವರ್ಷಗಳಲ್ಲಿ ಒಂದು ಸಾರಿಯು ನೀಲಗಿರಿ ಬೃಹತ್ ಮರವಾಗಿ ಬೆಳೆದಿಲ್ಲ. ಅದೇ ಮಾಲ್ಕಿ ಜಮೀನಿನಲ್ಲಿ ನೆಟ್ಟ ನೀಲಗಿರಿ ಗಿಡಗಳು ೮-೧೦ ವರ್ಷದಲ್ಲಿ ಬೃಹತ್ ಮರವಾಗಿ ಬೆಳೆದು ನಿಂತಿವೆ. ಅರಣ್ಯ ಅಭಿವೃದ್ಧಿಯಂತು ಆಗಿಲ್ಲ ಎಂಬುದು ವಾಸ್ತವ ಸತ್ಯವಾಗಿದೆ.

ಪಶುಸಂಗೋಪನೆಗೆ ಕೊಡಲಿ ಪೆಟ್ಟು

ಪಶುಸಂಗೋಪನೆ ಗ್ರಾಮದ ಜನರ ಪ್ರಮುಖ ಉದ್ಯೋಗ. ಆಕಳು, ಎತ್ತು, ಎಮ್ಮೆ, ಕುರಿ-ಆಡು ಸಾಕಾಣಿಕೆ ಪರಂಪರಾಗತವಾಗಿ ಬಂದಿದೆ. ಗ್ರಾಮದಲ್ಲಿ ಸಾಗುವಳಿ ಭೂಮಿ ಒಟ್ಟು ಭೂ ಪ್ರದೇಶದ ಅರ್ಧದಷ್ಟು ಇರುವುದರಿಂದ ಗ್ರಾಮದ ಜನರ ಜೀವನ ನಿರ್ವಹಣೆಗೆ ಪಶು ಸಂಗೋಪನೆ ಅನಿವಾರ್ಯವಾಗಿದೆ. ಪ್ರತಿಯೊಬ್ಬರ ಮನೆಯವಲ್ಲೂ ೨-೩ ಆಕಳು, ೨-೩ ಆಡು, ಕುರಿ ಸಾಕುವುದು ಸರ್ವೇಸಾಮಾನ್ಯ. ಇವುಗಳನ್ನು ಮೇಯಿಸಲು ಸಾಮೂಹಿಕವಾಗಿ ಒಬ್ಬ ವ್ಯಕ್ತಿಯನ್ನು ನೇಮಿಸುತ್ತಾರೆ. ಅವನಿಗೆ ಪ್ರತಿ ತಿಂಗಳಿಗೆ ಒಂದು ಆಕಳಿಗೆ ೫೦-೬೦ ರೂ. ಕೊಡುತ್ತಾರೆ. ಅವರು ಎಲ್ಲಾ ದನಗಳನ್ನು ಒಟ್ಟಾಗಿಸಿಕೊಂಡು ಹೋಗಿ ಗ್ರಾಮದ ಗುಡ್ಡಗಳಲ್ಲಿ ಮೇಯಿಸಿಕೊಂಡು ಬರುತ್ತಾರೆ. ಈಗಲೂ ಗ್ರಾಮದಲ್ಲಿ ೪೦೦-೫೦೦ ದನಗಳಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಅವುಗಳಿಗೆ ಜಂಗಳ ದನ ಎಂದು ಕರೆಯುತ್ತಾರೆ.

ಈ ಜಂಗಳ ದನಗಳಿಂದ ಪ್ರತಿಯೊಬ್ಬರ ಮನೆಯಲ್ಲಿ ಹಾಲು, ಮೊಸರು, ಬೆಣ್ಣೆ ಯಥೇಚ್ಚವಾಗಿ ಸಿಗುತ್ತಿತ್ತು. ಆದರೆ ಈ ಜಂಗಳ ದನಗಳ ಅಭಿವೃದ್ಧಿಗೆ ಈಗ ಸಂಚಕಾರ ಬಂದಿದೆ. ಗ್ರಾಮದ ಹುಲ್ಲುಗಾವಲಿನಂತಿದ್ದ ಕಂದಾಯ ಇಲಾಖೆಯ ಗುಡ್ಡಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿರುವುದೇ ಇದಕ್ಕೆ ಕಾರಣವಾಗಿದೆ.

ಏಕೆಂದರೆ 'ಅರಣ್ಯ ಅಭಿವೃದ್ಧಿ' ಎಂಬ ನೆಪದಿಂದ ಅರಣ್ಯ ಇಲಾಖೆಯ ಸಿಬ್ಬಂದಿಗಳು ಈ ದನಗಳನ್ನು ಮೇಯಿಸಲು ಬಿಡುವುದಿಲ್ಲ. ಗ್ರಾಮದ ವ್ಯಾಪ್ತಿಯಲ್ಲಿ ಮತ್ತೆಲ್ಲೂ ಗುಡ್ಡಗಳಿಲ್ಲ. ಇದರಿಂದ ಗ್ರಾಮದ ದೇಶಿ ರಾಸುಗಳ ಸಂತತಿ ಅವನತಿಯ ಹಾದಿಯಲ್ಲಿವೆ. ಇತ್ತ ಅರಣ್ಯವೂ ಅಭಿವೃದ್ಧಿಯಾಗಿಲ್ಲ.

"ಗಂಡ ಹೆಂಡಿರ ಜಗಳದ ಮಧ್ಯೆ ಕೂಸು ಬಡವಾಯಿತು" ಎನ್ನುವಂತೆ ಅರಣ್ಯ ಇಲಾಖೆ ಹಾಗೂ ಗ್ರಾಮ ಪಂಚಾಯ್ತಿಯವರ ನಿರ್ಧಾರದಿಂದ ಗ್ರಾಮದ ಜನರ ಬದುಕು ಸಂಕಷ್ಟಕ್ಕೀಡಾಗಿರುವುದು ಗ್ರಾಮದ ಅಭಿವೃದ್ಧಿಗೆ ಮಾರಕವಾಗಿದೆ.

ಹೊಲಗಳು ಮತ್ತು ಬೆಳೆಗಳು

ಗ್ರಾಮದಲ್ಲಿ ಕೆಂಪು ಮತ್ತು ಕಪ್ಪು ಮಣ್ಣಿನ ಭೂಮಿಯಿದೆ. ಗ್ರಾಮದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಬಹುಪಾಲು ಕೆಂಪು ಅಂದರೆ ಮಸಾರಿ ಭೂಮಿಯಿದೆ. ಗ್ರಾಮದ

ಪಶ್ಚಿಮ ದಿಕ್ಕಿಗೆ ಕಪ್ಪು ಭೂಮಿಯಿದೆ. ಕಪ್ಪು ಮಣ್ಣಿನಲ್ಲಿ ಹೆಸರು, ಉಳ್ಳಾಗಡ್ಡಿ, ಮೆಣಸಿನಕಾಯಿ, ಬಿಳಿಜೋಳ, ಹತ್ತಿ, ಗೆಜ್ಜೆ, ಶೇಂಗಾ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆಂಪು ಅಂದರೆ ಮಸಾರಿ ಭೂಮಿಯಲ್ಲಿ ಹೈಬ್ರೀಡ್ ಜೋಳ, ದೊಡ್ಡ ಜೋಳ, ತೊಗರಿ, ಮಡಿಕಿ, ಹುರುಳಿ, ರಾಗಿ, ಸಜ್ಜೆ, ಬಳ್ಳಿ ಶೇಂಗಾ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದರು. ಆದರೆ ಪ್ರಸಕ್ತ ಕಾಲಘಟ್ಟದಲ್ಲಿ ಎಲ್ಲಾ ಮಣ್ಣಿನಲ್ಲಿ ಎಲ್ಲಾ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಈ ಹಿಂದೆ ಮಾನವನ ಆಸೆ, ಆಕಾಂಕ್ಷೆಗಳು ಪರಿಮಿತವಾಗಿದ್ದವು. ಹಾಗಾಗಿ ಜೋಳ, ತೊಗರಿ, ಮಡಿಕಿ, ಶೇಂಗಾ ಮುಂತಾದ ಮಿಶ್ರಬೆಳೆ ಬೆಳೆಯುತ್ತಿದ್ದರು. ಆದರೆ ಇಂದು ಜನಸಂಖ್ಯೆಯ ಹೆಚ್ಚಳದಿಂದ ಆಹಾರ ಪದಾರ್ಥಗಳಲ್ಲಿ ಆದ ನಾವಿನ್ಯತೆಯಿಂದ ಹಾಗೂ ಸರಕಾರ ಪಡಿತರ ಅಕ್ಕಿ ಸರಬರಾಜು ಮಾಡುತ್ತಿರುವುದರಿಂದ ಸಂಪೂರ್ಣ ವಾಣಿಜ್ಯ ಬೆಳೆಗಳಾದ ಹೆಸರು, ಶೇಂಗಾ, ಸೂರ್ಯಕಾಂತಿ ಮುಂತಾದ ಲಾಭದಾಯಕ ಬೆಳೆ ಬೆಳೆಯುತ್ತಿದ್ದಾರೆ. ಗ್ರಾಮದಲ್ಲಿ ಈವರೆಗೆ ಮಳೆಯಾಶ್ರಿತ ಸಾವಯವ ಕೃಷಿ ರೂಢಿಯಲ್ಲಿತ್ತು. ಆದರೆ ಇಂದು ಕೊಳವೆ ಬಾವಿಗಳ ಮೂಲಕ ಅಗತ್ಯ ನೀರಾವರಿ ಹಾಗೂ ಲಾಭದಾಯಕ ಕೃಷಿಗಾಗಿ ರಾಸಾಯನಿಕ ಕೃಷಿಗೆ ಗ್ರಾಮದ ರೈತರು ಮಾರುಹೋಗಿದ್ದಾರೆ. ಇದರಿಂದ ಗ್ರಾಮದ ಭೂಮಿ ಶಾಶ್ವತವಾಗಿ ಸತ್ವಹೀನವಾಗುವ ಸಾಧ್ಯತೆ ಇದೆ. "ಮೂರು ನಿಮಿಷದ ಸುಖಕ್ಕಾಗಿ ನೂರು ವರ್ಷದ ಹಾನಿ" ಎಂಬಂತಾಗಿದೆ. ಸಹಜವಾಗಿ ಸಾವಯವ ಕೃಷಿಯಲ್ಲಿದ್ದ ರೈತನಿಗೆ ಸರಕಾರ ಒಂದು ಕಾಲದಲ್ಲಿ ರಾಸಾಯನಿಕ ಗೊಬ್ಬರಗಳ ರುಚಿ ತೋರಿಸಿತು. ನಂತರದ ಕಾಲಘಟ್ಟದಲ್ಲಿ ಅದರ ದುಷ್ಪರಿಣಾಮ ಅರಿತು ಸಾವಯವ ಕೃಷಿಯ ಬೋಧನೆ ಮಾಡುತ್ತಿರುವುದು ರೈತರೊಂದಿಗೆ ಆಡುವ ಚೆಲ್ಲಾಟವೆಂದು ಹೇಳಬಹುದು. ಆದರೂ ಗ್ರಾಮದಲ್ಲಿ ಹನುಮಂತಪ್ಪ. ಮಲ್ಲಾರಿ ಸಿದ್ದಪ್ಪ ಹೂಗಾರ ಅವರಂತಹ ಕೆಲವು ರೈತರು ಇಂದಿಗೂ ಸಾವಯವ ಕೃಷಿಯಲ್ಲಿ ತೊಡಗಿದ್ದಾರೆ. ಹಾಗೆಯೇ ಗ್ರಾಮದ ರೈತರೆಲ್ಲ ಸಾವಯವ ಕೃಷಿಯ ಮೂಲಕ ಶಾಶ್ವತ ಕೃಷಿಗೆ ಮನಸ್ಸು ಮಾಡಬೇಕಾಗಿದೆ.

ಹಳ್ಳಗಳು ಮತ್ತು ಉಗಮ

ಗ್ರಾಮದ ಯಾವುದೇ ಭಾಗದಿಂದ ಊರಿನ ಒಳಗೆ ಪ್ರವೇಶಿಸಬೇಕೆಂದರೆ ಒಂದಿಲ್ಲೊಂದು ಹಳ್ಳವನ್ನು ದಾಟಿಯೇ ಬರಬೇಕು. ಹಳ್ಳಿಹಳ್ಳ, ಬೈರಪ್ಪನಹಳ್ಳ, ಯಲಿಶಿರೂರ ಹಳ್ಳ, ಭರಮದೇವರ ಹಳ್ಳ, ಬಡಿಗೇರ ಹಳ್ಳ, ಹೊಲಗೇರಿ ಹಳ್ಳ, ಸಸಾಪೂರ ಹಳ್ಳ, ಕಪ್ಪತ್ತಹಳ್ಳ ಹೀಗೆ ಊರನ್ನು ಹಳ್ಳಗಳು ಸುತ್ತುವರಿದಿವೆ. ಆದರೆ ಗ್ರಾಮದ ಪೂರ್ವಕ್ಕೆ ಇರುವ ಅತ್ತಿಕಟ್ಟಿ ದಾರಿಯಲ್ಲಿ ಹಳ್ಳದ ಅಡೆತಡೆಗಳಿಲ್ಲ. ಆದರೆ ಅದು ಕಪ್ಪತ್ತಹಳ್ಳದ ಉಗಮಸ್ಥಾನವಾಗಿದೆ.

ಗ್ರಾಮದ ಅತ್ತಿಕಟ್ಟಿ ದಾರಿಯಲ್ಲಿರುವ ಗಾಣಗೇರ ಕೆರೆಯಲ್ಲಿ ಹುಟ್ಟುವ ಒಂದು ಹಳ್ಳವು ಮುಂದೆ ಕಪ್ಪತ್ತ ದಾರಿಯಲ್ಲಿ ಕಪ್ಪತ್ತಹಳ್ಳವಾಗಿ ನಂತರ ಹೊಲಗೇರಿ ಹಳ್ಳವಾಗಿ, ಬಡಿಗೇರ ಹಳ್ಳವಾಗಿ ಹೆಸರು ಪಡೆದು ವರವಿ ಸೇರುತ್ತದೆ. ಹಾಗೆಯೇ ವೆಂಕಟಾಪುರದ ದೊಡ್ಡಹೊಲದಲ್ಲಿ ಹುಟ್ಟುವ ಹಳ್ಳ ಹಳ್ಳಿಹಳ್ಳವಾಗಿ ಭೈರಪ್ಪನಹಳ್ಳವಾಗಿ ಗ್ರಾಮದ ಪಶ್ಚಿಮದ ಬರಮದೇವರ ಹಳ್ಳಕ್ಕೆ ಸೇರಿ ವರವಿ ಹಳ್ಳಕ್ಕೆ ಕೂಡುತ್ತದೆ. ಹಾಗೆಯೇ ಗ್ರಾಮದ ಉತ್ತರ ದಿಕ್ಕಿನ ಗದಗ ರಸ್ತೆಯ ಲಿಂಬಿಕಟ್ಟಿಯ ತೆವರಿನಲ್ಲಿ ಹುಟ್ಟುವ ಹಳ್ಳವು ಯಲಿಶಿರೂರ ಹಳ್ಳವಾಗಿ ಭರಮದೇವರ ಹಳ್ಳದೊಂದಿಗೆ

ವರವಿ ಸೇರುತ್ತದೆ. ಗ್ರಾಮದ ಎಲ್ಲ ಹಳ್ಳಗಳು ಸೊರಟೂರ ಗ್ರಾಮದ ನೆಲ, ಜಲ ಸಂಪತ್ತನ್ನು ಕೊಚ್ಚಿಕೊಂಡು ಹೋಗುತ್ತಿವೆ. ಸರಕಾರ ಇತ್ತೀಚೆಗೆ ನೀರುತಡೆ (ಬಾಂದಾರ) ನಿರ್ಮಿಸಿದೆ. ಆ ದಿಸೆಯಲ್ಲಿ ಗ್ರಾಮದ ನೀರು ಮತ್ತು ಮಣ್ಣನ್ನು ಸಂಪೂರ್ಣವಾಗಿ ಸಂರಕ್ಷಿಸಲು ಗ್ರಾಮದ ಎಲ್ಲ ಹಳ್ಳಗಳನ್ನು ಸೇರಿಸಿ ನೀರಾವರಿ ಕೆರೆ ನಿರ್ಮಿಸಿದರೆ ಸೊರಟೂರು ಇನ್ನೂ ಸಮೃದ್ಧವಾಗಿ ಬೆಳೆಯಲು ಸಾಧ್ಯವಿದೆ. ಆ ದಿಸೆಯಲ್ಲಿ ಗ್ರಾಮಸ್ಥರು ಮತ್ತು ಸರ್ಕಾರ ಗಮನಹರಿಸಬೇಕಾಗಿದೆ.

ಕೆರೆಗಳು ಮತ್ತು ಬಾವಿಗಳು

ಇಡೀ ಊರು ಒಂದೇ ಕುಟುಂಬದ ರೀತಿಯಲ್ಲಿ ವ್ಯವಹರಿಸುವಂತೆ ಮಾಡುವ ಒಂದು ವಿಶಿಷ್ಟ ಶಕ್ತಿ ನೀರಿಗಿದೆ. ಸಂಬಂಧಗಳನ್ನು ಕೆಡಿಸಿ ಮನಸ್ತಾಪಗಳನ್ನು ಅಷ್ಟೇ ಬೇಗ ಹುಟ್ಟುಹಾಕುವ ಗುಣವೂ ನೀರಿಗಿದೆ.[2] ಆದ್ದರಿಂದ ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ನೀರು ಒಂದು. ಆದರೆ ಗ್ರಾಮದಲ್ಲಿ ನೀರಿಗಾಗಿ ಕೆರೆಯನ್ನು ಆಶ್ರಯಿಸಿಲ್ಲ. ಅದರ ಬದಲಾಗಿ ಕೊಳವೆಬಾವಿ, ಹಾಗೂ ನಲ್ಲಿನೀರು ಗ್ರಾಮದ ಜನತೆಗೆ ಲಭ್ಯವಿದೆ. ಗ್ರಾಮದ ಹೊರವಲಯದಲ್ಲಿ ದನ-ಕರು ಹಾಗೂ ರೈತರಿಗೆ ನೀರಿನ ದಾಹ ಇಂಗಿಸುವ ಕೆರೆಗಳಿವೆ.

ಗಣಪನ ಕೆರೆ

ಇದು ಗ್ರಾಮದ ಉತ್ತರ ಭಾಗದಲ್ಲಿ ವೆಂಕಟಾಪುರದ ಹತ್ತಿರವಿದೆ. ಇಲ್ಲಿ ಒಬ್ಬ ವ್ಯಕ್ತಿಗೆ ಗಣಪನ ರೂಪದ ಒಂದು ದೊಡ್ಡ ಬಂಗಾರದ ಗಣಿಯೇ ಸಿಕ್ಕಿತಂತೆ. ಅದರ ನೆನಪಿಗಾಗಿ ಈ ಕೆರೆ ಕಟ್ಟಿಸಿರುವುದರಿಂದ ಇದಕ್ಕೆ 'ಗಣಪನ ಕೆರೆ' ಎಂದು ಹೆಸರು ಬಂದಿದೆ ಎಂಬ ಪ್ರತೀತಿ ಇದೆ.

ರುದ್ರಪ್ಪನ ಕೆರೆ

ಇದು ಗ್ರಾಮದ ಪೂರ್ವಕ್ಕೆ ೩ ಕಿ.ಮೀ. ದೂರದ ಕ್ವಾರಮಡ್ಡಿಯ ಕೆಳಭಾಗದಲ್ಲಿದೆ. ಬಳ್ಳಾರಿ ರುದ್ರಪ್ಪ ಎಂಬುವವರು ಈ ಕೆರೆಯನ್ನು ಕಟ್ಟಿಸಿರುವುದರಿಂದ ಅದಕ್ಕೆ 'ರುದ್ರಪ್ಪನ ಕೆರೆ' ಎಂದು ಹೆಸರು ಬಂದಿದೆ ಎಂಬುದು ಗ್ರಾಮಸ್ಥರ ಅಭಿಪ್ರಾಯ.

೨.೨.೧೬. ಹೊಸ ಕೆರೆ (ಕೆರಿ ಉಸುಗು)

ಇದು ಗ್ರಾಮದ ಪೂರ್ವಕ್ಕೆ ೨ ಕಿ.ಮೀ. ದೂರದಲ್ಲಿ ಅತ್ತಿಕಟ್ಟಿ ದಾರಿಯ ಎಡಭಾಗದಲ್ಲಿದೆ. ಇದನ್ನು ಇತ್ತೀಚಿನ ವರ್ಷಗಳಲ್ಲಿ ಸರಕಾರ ನಿರ್ಮಿಸಿದ್ದರಿಂದ ಹೊಸಕೆರೆ ಎಂಬ ಹೆಸರು ಬಂದಿದೆ. ಕೆಸರಿನ ಮಣ್ಣು ಇರದೇ ಉಸುಕಿನ ರೂಪದ ಮಣ್ಣು ಇರುವುದರಿಂದ ಕೆರಿಉಸುಗು ಎಂಬ ಹೆಸರು ಬಂದಿದೆ.

ಕುಸಲಾಪುರ ಕೆರೆ

ಇದು ಗ್ರಾಮದ ಪೂರ್ವಕ್ಕೆ ೨ ಕಿ.ಮೀ. ದೂರದಲ್ಲಿ ಮಹಾಲಿಂಗಪುರ ರಸ್ತೆಯಲ್ಲಿದೆ. ಅಲ್ಲಿ ಗ್ರಾಮದ ಕುಸಲಾಪುರ ಮನೆತನದವರ ಹೊಲಗಳು ಇರುವುದರಿಂದ ಇದಕ್ಕೆ 'ಕುಸಲಾಪುರ ಕೆರೆ' ಎಂದು ಕರೆಯುತ್ತಾರೆ.

ಹೊನ್ನವ್ವನ ಕೆರೆ

ಇದು ಗ್ರಾಮದ ಪೂರ್ವಕ್ಕೆ ೫ ಕಿ.ಮೀ. ದೂರದಲ್ಲಿ ಅತ್ತಿಕಟ್ಟಿ ದಾರಿಯ ಎಡಭಾಗದಲ್ಲಿ ಅತ್ತಿಕಟ್ಟಿ ಹತ್ತಿರವೇ ಇದೆ. ಇದನ್ನು ಗ್ರಾಮದ 'ಹೊನ್ನಮ್ಮ' ಎಂಬ ಮಹಿಳೆ ಕಟ್ಟಿಸಿರುವುದರಿಂದ ಇದಕ್ಕೆ 'ಹೊನ್ನಮ್ಮನ ಕೆರೆ' ಎಂದು ಹೇಳುತ್ತಾರೆ. ಹೊನ್ನಮ್ಮ ಎಂಬುವವಳು ಗ್ರಾಮದ ದೇವಪ್ಪ ಗುಡಿ (ಕಳ್ಳೆಪ್ಪ) ಅವರ ತಾಯಿ ಎಂದು ತಿಳಿದು ಬರುತ್ತದೆ.

ಗಾಣಿಗೇರ ಕೆರೆ

ಇದು ಗ್ರಾಮದ ಪೂರ್ವಕ್ಕೆ ೪ ಕಿ.ಮೀ. ದೂರದಲ್ಲಿ ಅತ್ತಿಕಟ್ಟಿ ದಾರಿಯಲ್ಲಿ ಬಲಭಾಗದಲ್ಲಿ ಇದೆ. ಗ್ರಾಮದ ಗಾಣಿಗೇರ ಮನೆತನದವರ ಬಹುಪಾಲು ಜಮೀನು ಅಲ್ಲಿಯೇ ಇರುವುದರಿಂದ ಅವರೆಲ್ಲರೂ ಸೇರಿ ಈ ಕೆರೆ ಕಟ್ಟಿಸಿದ್ದು ಇದು ಅವರ ಸ್ವಂತದ ಕೆರೆಯಾಗಿದೆ. ಕೆರೆಯ ದಂಡೆಯ ಮೇಲೆ ಮಾವಿನ ಮರಗಳಿದ್ದು, ದನ-ಕರು, ಮನುಷ್ಯರು ನೀರು ಕುಡಿದು ದಣಿವಾರಿಸಿ ಕೊಳ್ಳಲು ಈ ಕೆರೆ ಆಸರೆಯಾಗಿದೆ.

ಈ ಎಲ್ಲಾ ಕೆರೆಗಳು ಗ್ರಾಮದ ಹೊರವಲಯದಲ್ಲಿದ್ದು, ಹೊಲಕ್ಕೆ, ಅಡವಿಗೆ ಹೋದ ಮನುಷ್ಯರ, ದನ-ಕರು, ಕುರಿ-ಮೇಕೆಗಳ, ವನ್ಯಜೀವಿಗಳ ನೀರಿನ ದಾಹ ಇಂಗಿಸುತ್ತದೆ. ಸರಕಾರ ಈಗ ಅಲ್ಲಲ್ಲಿ ಕೊಳವೆಬಾವಿ ಕೊರೆಸಿದೆ. ಹಾಗೂ ಗ್ರಾಮದ ಒಳಗೆ ಹೊರಗೆ ಸ್ವಂತ ಕೊಳವೆಬಾವಿ ಹಾಗೂ ತೆರೆದ ಬಾವಿಗಳಿವೆ. ಗ್ರಾಮದ ಒಳಗೆ ಸಸಿಬಸಪ್ಪನ ಬಾವಿ, ಗಡದನ ಬಾವಿ, ಮಠದ ಬಾವಿ, ಬಸವಣ್ಣದೇವರ ಬಾವಿ, ಹನುಮಪ್ಪನ ಬಾವಿ, ಹಳಿಕೆಮ್ಮನ ಬಾವಿ, ಈರಣ್ಣನ ಬಾವಿ, ಬಡಿಗೇರ ಬಾವಿ, ಪಂತರ ಬಾವಿ, ರಾಯರ ಬಾವಿ ಹೀಗೆ ಗ್ರಾಮದ ತುಂಬ ಹಲವಾರು ಬಾವಿಗಳಿವೆ. ಸರಕಾರ ಅಂತರ್ಜಲ ಗುರುತಿಸಿ ಕೊಳವೆ ಬಾವಿ ಕೊರೆಸಿದೆ. ಜೊತೆಗೆ ನೀರಿಗಾಗಿ ನೀರಿನ ತೊಟ್ಟಿ (ಟ್ಯಾಂಕ್) ನಿರ್ಮಿಸಿ ಗ್ರಾಮದ ಜನತೆಗೆ ನೀರು ಒದಗಿಸಲಾಗುತ್ತಿದೆ. ಸರಕಾರ ಗ್ರಾಮದಲ್ಲಿ ೨ ಟ್ಯಾಂಕ್ ನಿರ್ಮಿಸಿದೆ.

ಗ್ರಾಮದಲ್ಲಿ ನೀರಿನ ನೈಸರ್ಗಿಕ ತಾಣಗಳಿದ್ದರೂ ನೀರಿನ ಅಭಾವ ಕಾಣುತ್ತಿದೆ. ಆದ್ದರಿಂದ

"ಓಡುವ ನೀರನ್ನು ನಡೆಯುವ ಹಾಗೆ,
ನಡೆಯುವ ನೀರನ್ನು ನಿಲ್ಲುವ ಹಾಗೆ,
ನಿಂತನೀರನ್ನು ಇಂಗುವ ಹಾಗೆ"

ಮಾಡುವ ಮೂಲಕ ಅಂತರ್ಜಲ ಹೆಚ್ಚಿಸುವುದೊಂದೇ ಇದಕ್ಕೆ ಪರಿಹಾರವಾಗಿದೆ.

ಗ್ರಾಮದ ಜಲಸಂಪನ್ಮೂಲ ವ್ಯರ್ಥವಾಗುತ್ತಿರುವ ಬಗೆ

ಈ ಮೊದಲು ಹೇಳಿದಂತೆ ಸೊರಟೂರ ಗ್ರಾಮದ ಸರಹದ್ದು ಬಹುಪಾಲು ಗುಡ್ಡಗಳಿಂದ ಆವೃತವಾಗಿದೆ. ಅದರಲ್ಲೂ ಗ್ರಾಮದ ಪೂರ್ವ, ಉತ್ತರ ಮತ್ತು ದಕ್ಷಿಣ ಭಾಗದ ಭೂಪ್ರದೇಶ ಗುಡ್ಡಗಳಿಂದ ಕೂಡಿದೆ. ಇವು ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿವೆ. ಆದರೆ ಮಳೆಗಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾದಾಗ ಗುಡ್ಡಗಳಿಂದ ಬರುವ ಬಹುಪಾಲು ನೀರು ವಿವಿಧ

ಹಳ್ಳಗಳ ಮೂಲಕ ಹರಿದು ಗ್ರಾಮದ ಜಲಸಂಪನ್ಮೂಲ ವ್ಯರ್ಥವಾಗುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ.

ಕಪ್ಪತ್ತಹಳ್ಳ ಹಾಗೂ ನೀರಿನ ಸಬ್ಬಳಕೆ

ಗ್ರಾಮದಲ್ಲಿ ಕಪ್ಪತ್ತಹಳ್ಳ ಎಂದು ಕರೆಯುವ ಈ ಹಳ್ಳ ಗ್ರಾಮದ ಪೂರ್ವ ದಿಕ್ಕಿನಲ್ಲಿ ಅತ್ತಿಕಟ್ಟಿ ರಸ್ತೆಯಲ್ಲಿರುವ ಗಾಣಿಗೇರ ಕೆರೆಯಿಂದ ಹುಟ್ಟುತ್ತದೆ. ಇದು ಗಾಣಿಗೇರ ಹೊಲ, ಆಲೂರವರ ಹೊಲ, ದ್ಯಾಮವ್ವನ ಮಾನೆ, ಕ್ವಾರಮಡ್ಡಿ ಸೇರಿದಂತೆ ಬಹುಭಾಗದ ನೀರು ಅತ್ತಿಕಟ್ಟಿಯಿಂದ ಸೊರಟೂರಿಗೆ ಬರುವ ರಸ್ತೆಯ ಎಡಬದಿಯಿಂದ ಹರಿಯುತ್ತಾ ಜಂಗಳಿಯವರ ತೋಟ, ಅದ್ರಕಟ್ಟಿಯವರ ಹೊಲದ ಮೂಲಕ ಕಪ್ಪತ್ತಹಳ್ಳವಾಗಿ ತದನಂತರ ಗ್ರಾಮದ ಜನವಸತಿ ಪ್ರದೇಶದ ದಕ್ಷಿಣದಲ್ಲಿ ಹೊಲಗೇರಿ ಹಳ್ಳವಾಗಿ ಹರಿದು, ಬಡಿಗೇರ ಹಳ್ಳವಾಗಿ ಹೆಸರು ಪಡೆದು ವರವಿ ಸೇರುವ ಮೂಲಕ ಗ್ರಾಮದ ನೀರು ವ್ಯರ್ಥವಾಗಿ ಹರಿದು ಹೋಗುತ್ತದೆ. ಈ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ಹಲವಾರು ಮಾರ್ಗಗಳಿವೆ. ಆದರೆ ಈವರೆಗೆ ಅಂಥ ಯಾವ ಪ್ರಯತ್ನ ನಡೆದಿರಲಿಲ್ಲ. ಆದರೆ ಇತ್ತೀಚೆಗೆ ೨೦೧೪ರಲ್ಲಿ ಗ್ರಾಮದ ಪೂರ್ವಕ್ಕೆ ಅತ್ತಿಕಟ್ಟಿ ರಸ್ತೆಯಲ್ಲಿರುವ ಹೊಸಕೇರಿ (ಕೆರಿಉಸುಗು) ಎಂದು ಕರೆಯಲ್ಪಡುವ ಕೆರೆಯನ್ನು ಅಭಿವೃದ್ಧಿ ಗೊಳಿಸಿದ್ದಾರೆ. ಆ ಕೆರೆ ನಂದಿಮಡ್ಡಿ ಗುಡ್ಡದಲ್ಲಿದೆ. ಸೊರಟೂರಿನಿಂದ ಹೋಗುವಾಗ ರಸ್ತೆಯ ಎಡಬದಿಯಲ್ಲಿದೆ. ಅದೇ ರಸ್ತೆಯ ಬಲಬದಿಯಲ್ಲಿ ಬಾರೀ ಪ್ರಮಾಣದ ನೀರು ವ್ಯರ್ಥವಾಗಿ ಹರಿದು ಕಪ್ಪತ್ತ ಹಳ್ಳ ಸೇರುತ್ತಿತ್ತು. ಈಗ ಸರ್ಕಾರ ಅದನ್ನು ಸದ್ಬಳಕೆ ಮಾಡಿಕೊಳ್ಳುವ ಪ್ರಯತ್ನ ಮಾಡಿದೆ. ಅದರ ಫಲವಾಗಿ ಇತ್ತೀಚೆಗೆ ೨೦೧೪ರಲ್ಲಿ ರಸ್ತೆಯಲ್ಲಿ ಸೇತುವೆ ನಿರ್ಮಿಸಿ ಆ ನೀರು ಹೊಸಕೆರೆಗೆ ಹೋಗಲು ಮಾರ್ಗ ಮಾಡಿ ಕೆರೆ ಅಭಿವೃದ್ಧಿ ಪಡಿಸಿದ್ದಾರೆ.

ಪುಂಡಿರಾಮನ ಸರವು ಹಾಗೂ ನೀರಿನ ಸದ್ಬಳಕೆ

ಗ್ರಾಮದ ಪೂರ್ವಕ್ಕೆ ಅತ್ತಿಕಟ್ಟಿ ದಾರಿಯಲ್ಲಿ ಕ್ವಾರಮಡ್ಡಿಯ ಹತ್ತಿರ ಇರುವ ಒಂದು ಗುಡ್ಡಕ್ಕೆ ಪುಂಡಿರಾಮನ ಸರವು ಎಂತಲೇ ಕರೆಯುತ್ತಾರೆ. ಇಲ್ಲಿ ಭಾರಿ ಪ್ರಮಾಣದ ನೀರು ಹರಿದು ಹೋಗುವುದರಿಂದಲೇ ಇದಕ್ಕೆ ಸರವು ಎಂದು ಹೆಸರು ಬಂದಿದೆ. ಇಲ್ಲಿ ಅಪಾರ ಪ್ರಮಾಣದ ನೀರು ಹರಿದು ವ್ಯರ್ಥವಾಗಿ ಹೋಗುತ್ತಿದೆ. ಈ ನೀರನ್ನು ತಡೆಯುವ ಉದ್ದೇಶದಿಂದ ಬಾಂದಾರಗಳನ್ನಾಗಲಿ, ಕೆರೆಗಳನ್ನಾಗಲಿ ನಿರ್ಮಿಸುವ ಕೆಲಸ ಈವರೆಗೂ ನಡೆದಿರುವುದಿಲ್ಲ ಎಂಬುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಈ ಸ್ಥಳದಲ್ಲಿ ಒಂದು ಬೃಹತ್ ಪ್ರಮಾಣದ ಕೆರೆ ನಿರ್ಮಿಸಿದರೆ ವ್ಯರ್ಥವಾಗಿ ಹೋಗುವ ಜಲಸಂಪನ್ಮೂಲವನ್ನು ಸದ್ಬಳಕೆ ಮಾಡಿಕೊಂಡಂತಾಗುತ್ತದೆ ಸೊರಟೂರ ಗ್ರಾಮದ ದನಕರುಗಳಿಗೆ ನೀರಿನ ಬವಣೆ ನೀಗಿದಂತಾಗುತ್ತದೆ. ಇದರಿಂದ ಗ್ರಾಮದ ಅಂತರ್ಜಲ ವೃದ್ಧಿಯಾಗುತ್ತದೆ.

ಗ್ರಾಮದ ಗುಡ್ಡಗಳನ್ನು ಸಂಪನ್ಮೂಲಗಳಾಗಿಸುವ ಬಗೆ

ಗ್ರಾಮದಲ್ಲಿರುವ ಎಲ್ಲಾ ಗುಡ್ಡಗಳಿಂದ ಅಪಾರ ಪ್ರಮಾಣದ ನೀರು ಹರಿದು ಹೋಗುತ್ತದೆ. ಅದನ್ನು ಆಯಕಟ್ಟಿನ ಸ್ಥಳದಲ್ಲಿ ಸಂಗ್ರಹಿಸಿದರೆ ಗುಡ್ಡಗಳು ಸದಾ ಹಸಿರಾಗಿ ಹುಲ್ಲು

ಗಾವಲುಗಳಾಗುತ್ತವೆ. ಇದು ಗ್ರಾಮದ ಪಶುಗಳಿಗೆ ಪೂರಕವಾಗಿ ಪಶುಸಂಗೋಪನೆ ಅಭಿವೃದ್ಧಿಯಾಗುತ್ತದೆ. ಇದರಿಂದ ಗ್ರಾಮದ ಜನರ ಜೀವನಮಟ್ಟ ಸುಧಾರಿಸಲು ಸಾಧ್ಯವಿದೆ.

ಗ್ರಾಮದ ರಚನೆ

ಸೊರಟೂರ ಗ್ರಾಮವು ತಗ್ಗು ಪ್ರದೇಶದಲ್ಲಿ ಇರುವುದರಿಂದ ಹೊರ ಊರುಗಳಿಂದ ಬರುವವರಿಗೆ ಗ್ರಾಮಕ್ಕೆ ಬಂದ ನಂತರವೇ ಗ್ರಾಮದ ದರ್ಶನವಾಗುತ್ತದೆ. ಗ್ರಾಮದ ಉತ್ತರ ದಕ್ಷಿಣ ಮತ್ತು ಪೂರ್ವ ದಿಕ್ಕಿನಿಂದ ಬರುವವರಿಗೆ ಮೊದಲು ಗುಡ್ಡ ಅಥವಾ ಅಡವಿಗಳು ಕಾಣುತ್ತವೆ. ಪಶ್ಚಿಮದಿಂದ ಬರುವವರಿಗೆ ಮಾತ್ರ ಬಯಲುಸೀಮೆ ಸಿಗುತ್ತದೆ. ಗದಗ ಜಿಲ್ಲೆ ಗದಗ ತಾಲೂಕಿನ ಕೊನೆಯ ಹಳ್ಳಿ (ಹಂಗನಕಟ್ಟಿ ಹೊರತುಪಡಿಸಿ)ಯಾದ ಈ ಗ್ರಾಮ ಶಿರಹಟ್ಟಿ ಹಾಗೂ ಮುಂಡರಗಿ ತಾಲೂಕಿನ ಗಡಿಗಳಿಗೆ ಅಂಟಿಕೊಂಡಿದೆ.

ಗ್ರಾಮದ ಹೊರವಲಯದಲ್ಲಿ ಪೂರ್ವಕ್ಕೆ ಕ್ವಾರಮ್ಮ, ಪಶ್ಚಿಮಕ್ಕೆ ಮೂಕಬಸವಣ್ಣ, ಉತ್ತರಕ್ಕೆ ಬೆಂಚಿ ಹನುಮಪ್ಪ ಹಾಗೂ ದಕ್ಷಿಣಕ್ಕೆ ಸಸಾಪೂರ ಹನುಮಪ್ಪನಿದ್ದಾನೆ. ಗ್ರಾಮದ ಹೊರಭಾಗದಲ್ಲಿ ಕಾಲಭೈರವ, ಕೊತ್ತಲಮ್ಮ, ಬಯಲು ದುರುಗಮ್ಮ ಹೀಗೆ ಗ್ರಾಮದ ಭೌಗೋಳಿಕ ರಕ್ಷಣೆಗೆ ದೇವತೆಗಳಿದ್ದಾರೆ ಎಂಬುದು ಗ್ರಾಮಸ್ಥರ ನಂಬಿಕೆಯಾಗಿದೆ. ಗ್ರಾಮವನ್ನು ಕ್ವಾಟಿ ಮತ್ತು ಪ್ಯಾಟಿ ಎಂಬ ಭಾಗ ಮಾಡುತ್ತಾರೆ. ಕ್ವಾಟಿ ಎಂದರೆ ಕೋಟೆಯ ಒಳಭಾಗದಲ್ಲಿರುವ ಊರು. ಇದು ಹಳೆಯ ಊರು. ಈಗ ಕೋಟೆ ಕಾಣಲು ಸಿಗುವುದಿಲ್ಲ. ಆದರೆ ರಕ್ಷಣಾ ಕಾಲುವೆ ಇದೆ. ಈ ಕೋಟೆಯ ಹೊರಭಾಗದಲ್ಲಿರುವ ಊರನ್ನು ಪ್ಯಾಟಿ ಎಂದು ಗುರುತಿಸಲಾಗುತ್ತದೆ. ಗ್ರಾಮದ ಪ್ಯಾಟಿ ಭಾಗಕ್ಕೆ ಕ್ವಾಟಿ ಭಾಗದಷ್ಟು ಪ್ರಾಚೀನತೆ ಇಲ್ಲ. ಈಗ ಶಾಲೆ ಕಾಲೇಜು, ಆಸ್ಪತ್ರೆ, ಬ್ಯಾಂಕು ಮುಂತಾದವುಗಳು ಕೋಟೆ ಭಾಗದ ಹೊರಗಡೆ ಇದ್ದು, ಈಗ ಊರು ಆ ಕಡೆಗೆ ಅಂದರೆ ಉತ್ತರ ದಿಕ್ಕಿಗೆ ಬೆಳೆಯುತ್ತಿದೆ. ಆದರೆ ಗ್ರಾಮದ ಗ್ರಾಮ ಪಂಚಾಯ್ತಿ ಆಡಳಿತ ಕೋಟೆಯ ಒಳಗಿನ ದೇಸಾಯಿಯವರ ಮನೆಯಲ್ಲಿಯೇ ನಡೆಯುತ್ತಿದೆ.

ಅನ್ನದಾನೇಶ್ವರ ನಗರ, ವಿನಾಯಕ ನಗರ, ದುರ್ಗಾದೇವಿ ಬಡಾವಣೆ ಹೀಗೆ ಗ್ರಾಮ ಉತ್ತರ ದಿಕ್ಕಿಗೆ ಬೆಳೆಯುತ್ತಿದೆ. ಗ್ರಾಮದ ಗದಗ ಮತ್ತು ವೆಂಕಟಾಪುರ ರಸ್ತೆಗೆ ಕನ್ನಡ ಗಂಡುಮಕ್ಕಳ ಶಾಲೆ, ಹೆಣ್ಣುಮಕ್ಕಳ ಶಾಲೆ, ಅನ್ನದಾನೇಶ್ವರ ಕಾಲೇಜು ಡಿ.ಪಿ.ಇ.ಪಿ ಉರ್ದು ಶಾಲೆಗಳು ಗ್ರಾಮದ ಹೊರ ಅಂಚಿನಲ್ಲಿವೆ. ಊರ ಹೊರಗಡೆ ದಾರಿಯುದ್ದಕ್ಕೂ ತಿಪ್ಪೆಗುಂಡಿಗಳು, ಕೆಲವು ಕಡೆ ಮೇವು ಹೊಟ್ಟುಗಳ ಬಣಿವೆಗಳು ಕಾಣುತ್ತವೆ. ಗ್ರಾಮದ ಒಳಗೆ ಗಾಂಧಿ ಬಯಲಿನವರೆಗೂ ಸ್ವಲ್ಪ ಅಗಲವಾದ ರಸ್ತೆ ಇದ್ದು, ಆ ನಂತರ ಇಕ್ಕಟ್ಟಾದ ಸಂಧಿಗಳಿವೆ. ಇದು ಹಳೆ ಊರು, ಊರ ಮಧ್ಯದ ಸಂದಿಗಳು ಇಕ್ಕಟ್ಟಾಗಿದ್ದರೂ ಗ್ರಾಮ ಪಂಚಾಯ್ತಿ ಅವುಗಳಿಗೆ ಕಲ್ಲಿನ ಪರಸಿ ಹೊಂದಿಸಿರುವುದರಿಂದ ಚೊಕ್ಕಟವಾಗಿವೆ. ಗ್ರಾಮದಲ್ಲಿ ಗುಡಿಗಳ ಮುಂದಿರುವ ಗಿಡಗಳು ನೆರಳಿನಾಶ್ರಯ ಕೊಡುತ್ತಿದ್ದವು. ಆದರೆ ಅವುಗಳಲ್ಲಿ ದ್ಯಾಮವ್ವನ ಚೌತಕಟ್ಟಿ ಮುಂದಿನ ಬಸರಿಗಿಡ ಹನುಮಪ್ಪ ದುರಗಮ್ಮನ ಹಾಗೂ ದ್ಯಾಮವ್ವನ ಗುಡಿಯ ಮುಂದಿರುವ ಬೃಹತ್ ಬೇವಿನಮರಗಳು ನಶಿಸಿ ಹೋಗಿವೆ. ಜುಮ್ಮಾ ಮಸೀದಿಯ ಜಂದೆಕಟ್ಟಿಯ ಬೇವಿನಮರ,

ಶಿಬಾರಗಟ್ಟಿಯ ಅಳ್ಳಿಮರಗಳಿವೆ. ಜೊತೆಗೆ ಗ್ರಾಮದ ಆಯಕಟ್ಟಿನ ಸ್ಥಳಗಳಲ್ಲಿ ಇತ್ತಿತ್ತಲಾಗಿ ಗಿಡ ಬೆಳೆಸಲಾಗುತ್ತಿದೆ. ಗ್ರಾಮದಲ್ಲಿರುವ ಮನೆಗಳು ಉತ್ತರ ಕರ್ನಾಟಕದ ಬಹುತೇಕ ಕಡೆಗಳಲ್ಲಿ ತೋರುವ ಮನೆಗಳಂತೆ ತಲಬಾಗಿಲ ದಾಟಿದರೆ ದನದಹಟ್ಟಿ, ಪಡಸಾಲೆ, ನಡುಮನೆ, ಅಡುಗೆ ಮನೆ, ದೇವರ ಕೋಣೆ ಸಾಮಾನ್ಯವಾಗಿವೆ. ಇವು ಗ್ರಾಮದ ಹಳೆ ಮನೆಯ ರಚನೆಯಾಗಿವೆ. ಹೊಸದಾಗಿ ನಿರ್ಮಿಸುತ್ತಿರುವ ಮನೆಗಳು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ನಾವೀನ್ಯತೆಯನ್ನು ಪಡೆದಿವೆ. ಈಗ ನಿರ್ಮಾಣವಾಗುತ್ತಿರುವ ಮನೆಯಲ್ಲಿ ದನದ ಕೊಟ್ಟಿಗೆ, ಸಾಮೂಹಿಕ ಪಡಸಾಲೆ ಕಾಣಸಿಗುವುದಿಲ್ಲ. ಇಡೀ ಮನೆ ಪ್ರತ್ಯೇಕ ಕೋಣೆಗಳಾಗಿ ರೂಪುಗೊಳ್ಳುತ್ತಿವೆ. ಇತ್ತೀಚೆಗೆ ಸರಕಾರ ನಿರ್ಮಿಸಿಕೊಡುವ ಆಶ್ರಯ ಮನೆಗಳೇ ಗ್ರಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿವೆ. ಸೊರಟೂರ ದೊಡ್ಡ ಊರಾಗಿರುವುದರಿಂದ ಇಲ್ಲಿ ಹಲವಾರು ಓಣಿಗಳಾಗಿವೆ. ಕೆಲವು ಓಣಿಗಳು ಆ ಓಣಿಯ ಗುಡಿ ಅಥವಾ ದೈವದೊಂದಿಗೆ ಗುರುತಿಸಿಕೊಂಡರೆ, ಕೆಲವು ಓಣಿಗಳು ಆಯಾ ಸಮುದಾಯದ ಹೆಸರಿನಿಂದ ಗುರುತಿಸಿಕೊಳ್ಳುತ್ತವೆ. ಅನ್ನದಾನೇಶ್ವರ ನಗರ, ವಿನಾಯಕ ನಗರ, ದುರ್ಗಾದೇವಿ ಓಣಿ, ಕರ್ನಾಚಿಯವರ ಓಣಿ, ಕುರುಬಗೇರಿ, ಪ್ಯಾಟಿ ಗೌರಿಮನಿ ಓಣಿ, ಬಸವಣ್ಣದೇವರ ಗುಡಿ ಓಣಿ, ಕೆಂಚಪ್ಪನ ಹೊಲ, ಮಲ್ಲಾರಿಯವರ ಓಣಿ, ಹನುಮಂತದೇವರ ಓಣಿ, ಅಂಬೇಡ್ಕರ್ ನಗರ, ಬಯಲಿ (ಗಾಂಧಿ ಬಯಲು), ಛಬ್ಬಿಯವರ ಓಣಿ, ಕೊತ್ತಲಮ್ಮನ ಗುಡಿ ಓಣಿ, ಈರಣ್ಣನ ಗುಡಿ ಓಣಿ, ಬಡಿಗೇರ ಓಣಿ, (ದ್ಯಾಮವ್ವನ ಗುಡಿ), ಬನಶಂಕರೆಮ್ಮನ ಪಾಟ್, ಗಿಡ್ಡಕೆಂಚಣ್ಣವರ ಓಣಿ, ಕಲ್ಮೇಶ್ವರ ಓಣಿ, ಕಲಗುಡಿಯವರ ಓಣಿ, ಒಂಟಿಯವರ ಓಣಿ, ಹಳಿಕೆಮ್ಮನ ಗುಡಿ ಓಣಿ, (ಬ್ಯಾಡಿಗ್ಗೇರಿ) ಬನ್ನಿಮಹಾಂಕಾಳಿ ಓಣಿ, ದೇಸಾಯಿಯವರ ಪ್ಲಾಟ್ ಹೀಗೆ ಗ್ರಾಮಗಳಲ್ಲಿ ವಿವಿಧ ಹೆಸರಿನಲ್ಲಿ ಓಣಿಗಳಿವೆ. ಇನ್ನು ಚಿಕ್ಕ ಪುಟ್ಟ ಸಮುದಾಯ ಹಾಗೂ ವಿವಿಧ ಮನೆತನಗಳ ಹೆಸರಿನಲ್ಲೂ ಓಣಿಗಳನ್ನು ಗುರುತಿಸಲಾಗುತ್ತದೆ. ಗ್ರಾಮಸ್ಥರು ತಮ್ಮ ಕುಟುಂಬದ ಚಿಕ್ಕಪುಟ್ಟ ಕಾರ್ಯಕ್ರಮ ಆಚರಣೆಗಳಲ್ಲಿ ನ್ಯಾಯ ತಂಟೆಗಳನ್ನು ಬಗೆಹರಿಸುವಲ್ಲಿ ಆಯಾ ಓಣಿಯ ಗುಡಿ ಗೌರಿ ಮನೆಗಳಲ್ಲಿ ದೈವ ಕೂಡುವುದು ರೂಢಿಯಲ್ಲಿದೆ. ಹೀಗೆ ಗ್ರಾಮದ ರಚನೆ ವೈವಿಧ್ಯತೆಯಿಂದ ಕೂಡಿದೆ.

ಗ್ರಾಮದ ರಚನೆ ಮತ್ತು ಜಾತೀಯತೆ

ಸೊರಟೂರ ಗ್ರಾಮದ ಜನವಸತಿ ಪ್ರದೇಶವನ್ನು ಕ್ವಾಟಿ ಮತ್ತು ಪ್ಯಾಟಿ ಎಂದು ಎರಡು ಭಾಗವಾಗಿ ನೋಡುತ್ತಾರೆ. ಕ್ವಾಟಿ ಎಂಬುದು ಗ್ರಾಮದ ಹಳೆಯ ಜನವಸತಿ ಪ್ರದೇಶ; ಇದರ ಸುತ್ತಲೂ ಕೋಟೆಗಳಿದ್ದ ಕುರುಹುಗಳಿವೆ. ಕ್ವಾಟಿ ಭಾಗದ ವಿಶೇಷತೆ ಏನೆಂದರೆ ಪ್ರತಿಯೊಂದು ಓಣಿಗಳು ಒಂದೊಂದು ಜಾತಿಯ ಜನರ ಮನೆಗಳಿಂದ ಕೂಡಿವೆ. ಉದಾ:- ಕಲ್ಮೇಶ್ವರ ಓಣಿ, ಕನ್ನೂರ ಅವರ ಓಣಿ, ಈರಣ್ಣನ ಗುಡಿ, ಗೌಡ್ರ ಓಣಿ ಮುಂತಾದ ಓಣಿಗಳು ಲಿಂಗಾಯತ ಸಮುದಾಯದ ಓಣಿಗಳಾಗಿವೆ. ಹಾಗೆಯೇ ಕ್ವಾಟಿಯು ಅಲ್ಲದ ಪೂರ್ಣ ಪ್ಯಾಟಿಯು ಅಲ್ಲದ ಕೆಲ ಓಣಿಗಳು ಗ್ರಾಮದಲ್ಲಿವೆ. ಮಲ್ಲಾರಿಯವರ ಓಣಿ (ಮರಾಠಿ ಸಮುದಾಯ) ಗಾಣಿಗೇರ ಓಣಿ (ಗಾಣಿಗ ಸಮುದಾಯ), ಬ್ಯಾಡಿಗ್ಗೇರಿ (ವಾಲ್ಮೀಕಿ ಸಮುದಾಯ), ಶೆಟ್ಟರ ಓಣಿ (ಶೆಟ್ಟರ

ಸಮುದಾಯ), ಅದ್ರಕಟ್ಟಿಯವರ ಸಂಧಿ (ಕುಡ ಒಕ್ಕಲಿಗರ ಸಮುದಾಯ), ಹಳ್ಳಿಯವರ ಓಣಿ (ಲಿಂಗಾಯತ ಸಮುದಾಯ), ಒಂಟಿಯವರ ಓಣಿ (ಜೈನ ಸಮುದಾಯ), ಕುರುಬಗೇರಿ (ಕುರುಬ ಸಮುದಾಯ), ಕರ್ನಾಚಿಯವರ ಓಣಿ (ಮುಸ್ಲಿಂ ಸಮುದಾಯ) - ಹೀಗೆ ಗ್ರಾಮದಲ್ಲಿ ಆಯಾ ಸಮುದಾಯದ ಜನ ಒಂದೇ ಓಣಿಯಲ್ಲಿ ಇರುವುದು ಜಾತೀಯತೆಯ ಸಂಕೇತವೇ ಆಗಿದೆ. ಗ್ರಾಮದ ಹಳೆಯ ಊರಿನಲ್ಲಿ ಒಂದು ಸಮುದಾಯದ ಓಣಿಯಲ್ಲಿ ಇನ್ನೊಂದು ಸಮುದಾಯದ ಜನರ ಮನೆಗಳು ಕಾಣುವುದಿಲ್ಲ. ಇಲ್ಲಿ ಜಾತೀಯತೆ ಅಂತರ್ಗತವಾಗಿದೆ.

ಆಶ್ರಯ ಬಡಾವಣೆಯಲ್ಲಿ ಅನಿವಾರ್ಯವಾದ ಜಾತ್ಯಾತೀತತೆ

ಗ್ರಾಮದಲ್ಲಿ ಇತ್ತೀಚಿನ ಕಾಲದಲ್ಲಿ ಹಲವಾರು ಆಶ್ರಯ ಬಡಾವಣೆಗಳು ನಿರ್ಮಾಣವಾಗಿವೆ. ಗ್ರಾಮದ ಅನ್ನದಾನೇಶ್ವರ ಮಠದ ಪೂರ್ವಭಾಗದಲ್ಲಿ ಅನ್ನದಾನೇಶ್ವರ ನಗರ, ವಿನಾಯಕ ನಗರ, ದುರ್ಗಾದೇವಿ ಗುಡಿಯ ಮುಂದೆ ದುರ್ಗಾದೇವಿ ನಗರ, ಕಪ್ಪತ್ತ ದಾರಿಯಲ್ಲಿಯ ಬಲಬದಿಯಲ್ಲಿ ಕೆಂಚಪ್ಪನಹೊಲ ಸೇರಿದಂತೆ ಹಲವಾರು ಹೊಸ ನಿವೇಶನಗಳು ಹಂಚಿಕೆಯಾಗಿವೆ. ಇವು ಸರ್ಕಾರದಿಂದ ನಿರ್ಮಿತವಾಗಿರುವುದರಿಂದ ಇಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಸಮುದಾಯದವರಿಗೆ ಮೊದಲ ಆದ್ಯತೆ ಇರುತ್ತದೆ. ಇತರೆ ಎಲ್ಲಾ ಸಮುದಾಯದವರಿಗೂ ನಿವೇಶನ ಕೊಡುತ್ತಾರೆ. ಹೀಗಾಗಿ ಎಲ್ಲಾ ಸಮುದಾಯದವರು ಒಂದೇ ಬಡಾವಣೆಯಲ್ಲಿರುವುದು ಕಂಡುಬರುತ್ತದೆ. ಇದನ್ನು ಜಾತೀಯತೆಯನ್ನು ಪೋಷಿಸುವ ಜನರು ಅನಿವಾರ್ಯವಾಗಿ ಸ್ವೀಕರಿಸಿದ್ದಾರೆ.

ಗ್ರಾಮದಲ್ಲಿ ಜಾತೀಯತೆ ಬಹಿರಂಗವಾಗಿ ಕಾಣುವುದಿಲ್ಲವಾದರೂ ಅದು ಅಂತರ್ಗತವಾಗಿದೆ. ಸಮಯ ಸಂದರ್ಭ ಹಾಗೂ ಸನ್ನಿವೇಶಗಳನ್ನು ಆಧರಿಸಿ ಕಾಣಿಸಿಕೊಳ್ಳುತ್ತದೆ.

ಆಶ್ರಯ ಬಡಾವಣೆಗಳಲ್ಲಿ ಮನೆಗಳು, ನಿವೇಶನಗಳು ಮಾರಾಟವಾದರೆ. ತಾವು ಮೇಲ್ವರ್ಗದರೆಂದು ತಿಳಿದುಕೊಂಡವರು ಕೆಳಜಾತಿಯವರ ಮನೆಗಳ ಹತ್ತಿರ ನಿವೇಶನಗಳನ್ನು ಖರೀದಿಸಲು ಹಿಂದೇಟು ಹಾಕುತ್ತಾರೆ. ಇದು ಮೇಲ್ನೋಟಕ್ಕೆ ಜಾತೀಯತೆಯಂತೆ ಕಂಡರೂ ಇದಕ್ಕೆ ಇನ್ನೊಂದು ಕಾರಣವಿದೆ. ಒಂದು ಓಣಿಯಲ್ಲಿದ್ದಾಗ ಹಲವಾರು ಕಾರಣಗಳಿಗಾಗಿ ಜಗಳವಾಗುವುದು ಸಾಮಾನ್ಯ, ಅದು ಜಾತಿನಿಂದನೆ ಬೆಳವಣಿಗೆ ಪಡೆದುಕೊಂಡರೆ? ಎಂಬ ಹೆದರಿಕೆಯಿಂದ ಕೆಲವರು ಕೆಲವು ಸಮುದಾಯದ ಜನರೊಂದಿಗೆ ದೂರವಿರುವ ಪ್ರಯತ್ನ ಮಾಡುತ್ತಾರೆ. ಗ್ರಾಮದಲ್ಲಿ ಈಗ ಇದು ಬಹುಸೂಕ್ಷ್ಮ ವಿಷಯವಾಗಿದೆ.

ಹಿಂದಿನ ಕಾಲದಲ್ಲಿ ಮೇಲ್ವರ್ಗದವರನ್ನು ಕಂಡರೆ ಕೆಳಜಾತಿಯವರು ಭಯ ಅಂಜಿಕೆಯಿಂದಲೇ ಬದುಕುತ್ತಿದ್ದರು ಎಂದು ಕೇಳಿದ್ದೇವೆ. ಆದರೆ ಈಗ ಕೆಲವು ವಿಷಯಗಳಲ್ಲಿ ತಾವು ಮೇಲ್ವರ್ಗದವರು ಎಂದು ತಿಳಿದುಕೊಂಡವರು ಕೆಳಜಾತಿಯವರನ್ನು ಕಂಡರೆ ಭಯಪಡುವ ವಿಷಯವು ಕೆಲವು ಸಮಯ, ಸನ್ನಿವೇಶಗಳಲ್ಲಿ ಕಂಡುಬರುತ್ತದೆ. ಇದು "ಅತ್ತೆಗೊಂದು ಕಾಲ ಸೊಸೆಗೊಂದು ಕಾಲ" ಎಂಬಂತೆ ಕಂಡುಬರುತ್ತದೆಯಾದರೂ ಈ ಎರಡು ಕಾಲಗಳು ಅಪಾಯಕಾರಿಗಳೇ.

ಹಾಗೆ ನೋಡಿದರೆ ಜಾತೀಯತೆಯ ವಿಷಯ ಗ್ರಾಮದಲ್ಲಿ ಸಾರ್ವತ್ರಿಕವಾಗಿಲ್ಲ. ಏಕೆಂದರೆ ಮೇಲ್ವರ್ಗದವರೆಲ್ಲರೂ ಜಾತೀಯತೆಯನ್ನು ಪೋಷಿಸಿಲ್ಲ. ಕೆಲವು ತಳಸಮುದಾಯದ ಬಡ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಮೇಲುಸ್ತರಕ್ಕೆ ತರಲು ಶ್ರಮಿಸಿದ ಸವರ್ಣೀಯರು ಗ್ರಾಮದಲ್ಲಿದ್ದಾರೆ.

ಒಟ್ಟಾರೆ ಗ್ರಾಮದಲ್ಲಿ ಜಾತೀಯತೆಯು ಆರ್ಥಿಕತೆ, ಅಧಿಕಾರ, ಜ್ಞಾನ ಮುಂತಾದ ಸ್ವರೂಪ ಪಡೆದುಕೊಳ್ಳುತ್ತಾ ಕ್ರಮೇಣ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ ಎಂಬಂತೆ ಕಂಡು ಬರುತ್ತಿದೆ.

೨.೩. ಪಾರ್ಶ್ವವಾಯು ಚಿಕಿತ್ಸೆಯ ತಾಣ ಸೊರಟೂರ ಗ್ರಾಮ

ಪ್ರತಿಯೊಂದು ಗ್ರಾಮ ತನ್ನಷ್ಟಕ್ಕೆ ತಾನು ಹಲವು ವಿಶೇಷತೆ ವಿಶಿಷ್ಟತೆಗಳಿಂದ ಕೂಡಿರುತ್ತದೆ. ಹೆತ್ತವರಿಗೆ ಹೆಗ್ಗಣ ಮುದ್ದು ಎನ್ನುವಂತೆ ಪ್ರತಿಯೊಬ್ಬರಿಗೂ ಅವರ ಸ್ವಗ್ರಾಮ ಮುದ್ದಾಗಿ ಕಾಣಬಹುದು. ಆದರೆ ಕೆಲವೊಂದು ಗ್ರಾಮಗಳು ಇಡೀ ರಾಜ್ಯದಲ್ಲಿಯೇ, ರಾಷ್ಟ್ರದಲ್ಲಿಯೇ ವಿಶೇಷವಾಗಿ ವಿಶಿಷ್ಟವಾಗಿ ಕಾಣುತ್ತವೆ. ಅಂತಹ ಗ್ರಾಮಗಳಲ್ಲಿ ಸೊರಟೂರ ಗ್ರಾಮವು ಒಂದು. ಏಕೆಂದರೆ ಕಳೆದ ೫೦-೬೦ ವರ್ಷಗಳಿಂದ ಸೊರಟೂರ ಗ್ರಾಮ ಪಾರ್ಶ್ವವಾಯು ಕಾಯಿಲೆಗೆ ಪರಿಣಾಮಕಾರಿ, ಯಶಸ್ವಿ ಚಿಕಿತ್ಸೆ ನೀಡುತ್ತಾ ರಾಜ್ಯದಲ್ಲಿಯೇ ಹೆಸರುವಾಸಿಯಾದ ಗ್ರಾಮವಾಗಿದೆ. ಆದ್ದರಿಂದಲೇ ಸೊರಟೂರ ಪರಿಚಯ ಎಂಬ ಅಧ್ಯಾಯದಲ್ಲಿ ಸೊರಟೂರ ಗ್ರಾಮವನ್ನು ವಿವಿಧ ಮುಖಗಳಿಂದ ಪರಿಚಯಿಸಲಾಗಿದೆ. ಅದರಲ್ಲೂ ಅರ್ಧಾಂಗವಾಯು ಪೀಡಿತರಿಗೆ ಸಂಜೀವಿನಿಯಾಗುವ ಮೂಲಕ ಸೊರಟೂರ ಗ್ರಾಮ ತನ್ನನ್ನು ತಾನು ಪರಿಚಯಿಸಿಕೊಂಡಿದೆ ಅದರ ಕರ್ತೃಗಳೇ ಡಾ. ಬಿಂದುರಾವ್ ರಾಮರಾವ್ ಇನಾಮದಾರ. ಶ್ರೀಯುತರು ಕೈಕಾಲು, ಬಾಯಿ ಸೇರಿದಂತೆ ದೇಹದ ಇತರ ಅಂಗಾಂಗಗಳು ನ್ಯೂನತೆಗೆ ಒಳಗಾಗಿ ಬಳಲುತ್ತಿರುವ ಸಹಸ್ರ ಸಹಸ್ರ ಜೀವಗಳಿಗೆ ಮರುಜೀವ, ಮರುಚೈತನ್ಯ ನೀಡಿದ್ದಾರೆ ಮತ್ತು ನೀಡುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಅವರ ಜೀವನ, ಸಾಧನೆ ಹಾಗೂ ಪಾರ್ಶ್ವವಾಯುಗೆ ನೀಡುವ ವಿಶೇಷ ಚಿಕಿತ್ಸಕ ಸೇವೆಯ ಕುರಿತು ತಿಳಿದುಕೊಳ್ಳುವುದರಲ್ಲಿಯೇ ಸೊರಟೂರ ಗ್ರಾಮದ ಪರಿಚಯವಿದೆ.

ಡಾ. ಇನಾಮದಾರರು ಪಾರ್ಶ್ವವಾಯು ತಜ್ಞರಾದ ಹಿನ್ನೆಲೆ

ಗ್ರಾಮದ ಇನಾಮದಾರ ದಂಪತಿ ರಾಮರಾಯ ಹಾಗೂ ಜಾನಕಿಬಾಯಿಯವರ ಮಗನಾಗಿ ೦೨.೧೨.೧೯೨೮ರಂದು ಜನಿಸಿದ ಬಿಂದುರಾಯರು ಸೊರಟೂರಿನಲ್ಲಿಯೇ ತಮ್ಮ ಪ್ರಾಥಮಿಕ ಶಿಕ್ಷಣ ಮುಗಿಸಿ, ಧಾರವಾಡದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಕರ್ನಾಟಕ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ೧೯೫೨ ರಿಂದ ಮೈಸೂರಿನ ಸರಕಾರಿ ಆಯುರ್ವೇದ ಕಾಲೇಜಿನಲ್ಲಿ (ಇಂದಿನ Govt. College of Indian Medicine) ಆಯುರ್ವೇದ ಯುನಾನಿ ವಿಜ್ಞಾನ LAMS ಪದವಿ ಅಭ್ಯಾಸ ಮಾಡಿದ ಮೇಲೆ ಬೆಳಗಾವಿ ಸಿವಿಲ್ ಆಸ್ಪತ್ರೆಲ್ಲಿ ಆರು ತಿಂಗಳ ಕಾಲ ಸೇವೆ ಸಲ್ಲಿಸಿ ವೈದ್ಯಕೀಯ ವೃತ್ತಿಗಾಗಿ ಸನ್ನದ್ಧರಾದರು.

ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ ನೋಡು ಎನ್ನುವಂತೆ ಡಾ. ಇನಾಮದಾರರು ವಿದ್ಯಾರ್ಥಿ ಜೀವನದಲ್ಲಿಯೇ ಹೊಸ ಹೊಸ ಪ್ರಯೋಗ ಮಾಡುವ ಪರಿಪಾಠ ಬೆಳೆಸಿಕೊಂಡಿದ್ದರು

ಎಂಬುದನ್ನು ಅವರ ಸಹಪಾಠಿಗಳಾದ ಡಾ. ಕೆಂ.ಎಂ. ಕುಲಕರ್ಣಿಯವರು ನೆನಪಿಸಿಕೊಳ್ಳುತ್ತಾರೆ. ಅವರೇ ಹೇಳುವಂತೆ LAMS ಪದವಿ ಓದುವಾಗ ಕಾಲೇಜಿನಲ್ಲಿ ಅನುವಂಶಿಕ ವೈದ್ಯರೂ ಅನುಭವಿಗಳು ಆದ ಡಾ. ಹೆಗಡೆಯವರ ಜೊತೆಗೆ "ರಸಶಾಸ್ತ್ರ ದ್ರವ್ಯಗುಣ" ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದು, ಅದನ್ನು ಮನದಟ್ಟು ಮಾಡಿಕೊಳ್ಳುವಲ್ಲಿ ಬಹು ನಿಪುಣರಾಗಿದ್ದರು. ಅವರು ವಿದ್ಯಾರ್ಥಿ ಜೀವನದಲ್ಲಿಯೇ ಸ್ವಂತ ಔಷಧಗಳನ್ನು ತಯಾರು ಮಾಡಿ ಪರೀಕ್ಷಿಸುವ ಗುಣ ಹೊಂದಿದ್ದರು ಎಂದು ಹೇಳುತ್ತಾರೆ. ಡಾ. ಇನಾಮದಾರರ ಆತ್ಮೀಯ ಮಿತ್ರರಲ್ಲಿ ಒಬ್ಬರಾದ ಶ್ರೀ. ಯು.ಆರ್. ಕುಲಕರ್ಣಿಯವರು ಹೇಳುವಂತೆ ಯೋಗಾಯೋಗ, ಕುಲದೇವರ ಅನುಗ್ರಹ, ದೊಡ್ಡ ಮನೆಯ ಪುರೋಹಿತರು ಆದ ಶ್ರೀ ಹನುಮಂತಾಚಾರ್ಯರ ಕೃಪಾಶೀರ್ವಾದ, ಡಾ. ಇನಾಮದಾರರ ಮೇಲೆ ಬಿದ್ದ ನಂತರ ಡಾಕ್ಟರ್ ಸಾಹೇಬರ ಅಭ್ಯುದಯ ಪ್ರಾರಂಭವಾಯಿತು ಎಂದು ಹೇಳುತ್ತಾರೆ.

ಇನಾಮದಾರ ಡಾಕ್ಟರ್ ಮೇಲೆ ದೇವತಾಶಕ್ತಿಯ ಆಶಿರ್ವಾದ ಇರುವುದನ್ನು ಸೊರಟೂರ ಗ್ರಾಮದ ಶ್ರೀಗುರು ಮಲ್ಲಜ್ಜನ ಭಕ್ತರಾದ ಪಕ್ಕಿರಪ್ಪ ಬಂಕಾಪುರ, ನರಸಪ್ಪ ಮಲ್ಲಾರಿಯವರಂತಹ ಹಿರಿಯರು ಹೇಳುತ್ತಾರೆ. ಸೊರಟೂರ ಗ್ರಾಮದಲ್ಲಿ ದೇವಮಾನವರಾಗಿ ಆಗಿಹೋದ ಶ್ರೀಗುರು ಮಲ್ಲಜ್ಜನವರಿಗೆ ಮೂಲವ್ಯಾಧಿ ಕಾಯಿಲೆ ಆಗಿತ್ತಂತೆ. ಅದರ ಚಿಕಿತ್ಸೆಗಾಗಿ ಶ್ರೀಗುರು ಮಲ್ಲಜ್ಜನವರನ್ನು ಡಾಕ್ಟರ್ ಇನಾಮದಾರರ ಹತ್ತಿರ ಕರೆದುಕೊಂಡು ಹೋದರಂತೆ. ಇದನ್ನು ಕಂಡ ಡಾ. ಇನಾಮದಾರರು ಶ್ರೀಗುರು ಮಲ್ಲಜ್ಜನವರು ದೇವತಾಪುರುಷರು; ಅವರಿಗೆ ಔಷಧಿ ಕೊಡುವಷ್ಟು ದೊಡ್ಡ ಡಾಕ್ಟರ್ ನಾನಲ್ಲ. ಶ್ರೀಗುರು ಮಲ್ಲಜ್ಜನವರಿಗೆ ಔಷಧಿ ಕೊಡುವಷ್ಟು ನಾನು ಬೆಳೆದಿಲ್ಲ. ಎಂದರಂತೆ. ಇದನ್ನು ಕೇಳಿದ ಶ್ರೀಗುರು ಮಲ್ಲಜ್ಜನವರು "ಹಾ, ಹಿಂಗನೂ, ನೀನು ಭಾಳ ದೊಡ್ಡವ ಆಗತಿ, ನೀನು ನಾಡಿಗೆ ದೊಡ್ಡ ಡಾಕ್ಟರ್ ಆಗತಿ, ನೋಡ ನೋಡ್ರಿ ಇನಾಮದಾರು ನಾಡಿಗೆ ದೊಡ್ಡ ಡಾಕ್ಟರ್ ಆಗತಾರ" ಎಂದು ಶ್ರೀಗುರು ಮಲ್ಲಜ್ಜನವರು ಹೇಳಿದರಂತೆ. ಇದನ್ನು ಗಮನಿಸಿದ ಸೊರಟೂರ ಗ್ರಾಮಸ್ಥರು ಇಂದು ರಾಜ್ಯದಲ್ಲಿಯೇ ಪಾರ್ಶ್ವವಾಯುಗೆ ಪ್ರಸಿದ್ಧರಾಗಿ ಬೆಳೆದಿರುವುದು ಅವರಿಗೆ ದೇವತಾಶಕ್ತಿಯ ಆಶೀರ್ವಾದ ಇದೆ. ಆದ್ದರಿಂದ ಅವರಿಗೆ ಪಾರ್ಶ್ವವಾಯು ಚಿಕಿತ್ಸೆಯ ಸಿದ್ಧಿ ಸಿದ್ಧಿಸಿದೆ ಎಂದು ಗುರುತಿಸುತ್ತಾರೆ.

ಇನ್ನು ಹಲವು ಜನ ಹಿರಿಯರು ಹೇಳುವಂತೆ ಸೊರಟೂರ ಗ್ರಾಮ ಕಪೋತಗಿರಿಯ ಮಡಿಲಿನಲ್ಲಿದೆ. ಕಪ್ಪತ್ತಗುಡ್ಡ ಹಲವು ಗಿಡಮೂಲಿಕೆಗಳ ಔಷಧಿ ಸಸ್ಯಗಳನ್ನು ಹೊಂದಿರುವ ಪವಿತ್ರಸ್ಥಳ. ಇದು ಇನಾಮದಾರ ಡಾಕ್ಟರ್ ಅವರಿಗೆ ಅವರ ಚಿಕಿತ್ಸೆಗೆ ಪೂರಕವಾಗಿದೆ. ಒಟ್ಟಾರೆ ಶ್ರೀಧನ್ವಂತರಿ ಇವರಿಗೆ ಒಲಿದು ಬಂದು ಆಶೀರ್ವದಿಸಿದ್ದಾರೆ. ಮುಟ್ಟಿದ್ದೆ ಚಿನ್ನ ಎನ್ನುವ ಹಾಗೆ ಇವರ ಕೈಗುಣದಿಂದ, ಅಂದರೆ ವಿಶೇಷವಾದ ಪರಿಣಾಮಕಾರಿ ಚಿಕಿತ್ಸೆಯಿಂದ ಅರ್ಧಾಂಗವಾಯು ಪೀಡಿತರು ಗುಣಮುಖರಾಗುತ್ತಿದ್ದಾರೆ.

ಸೊರಟೂರ ಗ್ರಾಮದಲ್ಲಿಯೇ ವೈದ್ಯ ವೃತ್ತಿ ಪ್ರಾರಂಭ ಹಾಗೂ ಅದರ ಪರಿಣಾಮ

೧೯೫೦-೬೦ರ ದಶಕದ ಕಾಲಘಟ್ಟದಲ್ಲಿ ಹಳ್ಳಿಗಳ ಸ್ಥಿತಿ ಹೇಳತೀರದು. ಇಂತಹ ಸಂದರ್ಭದಲ್ಲಿ ವೈದ್ಯಕೀಯ ಪದವಿ ಪಡೆದ ಡಾ. ಇನಾಮದಾರರು ತಮ್ಮ ವೈದ್ಯವೃತ್ತಿಯನ್ನು

ಸೊರಟೂರಿನಲ್ಲಿಯೇ ಪ್ರಾರಂಭಿಸಿದರು. ಅದು ಅವರ ತಂದೆಯವರ ಪ್ರಬಲ ಇಚ್ಛೆಯೂ ಆಗಿತ್ತು. ಆ ಕಾಲದಲ್ಲಿ ಸೊರಟೂರ ಅಲ್ಲದೆ ಯಲಿಶಿರೂರ, ಶಿರುಂಜ ಸೇರಿದಂತೆ ಹತ್ತಿರದ ಗ್ರಾಮಗಳಿಗೆ ಸೈಕಲ್ ಮೇಲೆ ಹೋಗಿ ಬರುತ್ತಿದ್ದರಂತೆ. ಸೊರಟೂರ ಸ್ವಗ್ರಾಮವಾದ್ದರಿಂದ ಇಲ್ಲಿ ಅಷ್ಟೊಂದು ರೋಖಡಿ ಸೇವೆ ಆಗುತ್ತಿದ್ದಿಲ್ಲ. ಯಲಿಶಿರೂರ ಶಿರುಂಜ ಗ್ರಾಮಗಳಲ್ಲಿ ಪ್ರತಿ ದಿನ ೩೦ ರಿಂದ ೫೦ ರೂಪಾಯಿ ಸಿಗುತ್ತಿತ್ತು ಎಂಬುದನ್ನು ತಮ್ಮ ಆಪ್ತರಲ್ಲಿ ಅವರೇ ಹೇಳಿಕೊಂಡಿದ್ದಾರೆ. ಅವರ ಸೇವೆ ಶ್ರದ್ಧೆ ಹಾಗೂ ಸೇವಾ ಮನೋಭಾವನೆಯಿಂದ ಕೂಡಿತ್ತು. ಆದ್ದರಿಂದಲೇ ಅವರು ಯಾವುದೇ ಸುಖಭೋಗಗಳಿಗೆ ದಾಸರಾಗದೇ ಸ್ವಗ್ರಾಮದಲ್ಲಿ ತಮ್ಮ ಸೇವೆಯನ್ನು ಮುನ್ನಡೆಸಿದರು.

> "ಕೆಲವರಿಗೆ ವೃತ್ತಿ, ಜೀವನ ನಿರ್ವಹಣೆಗೆ ಆಧಾರ
> ಹಲವರಿಗೆ ವೃತ್ತಿ, ಏನಕೇನ ಮಾರ್ಗದಿಂದ ಹಣ ಗಳಿಸುವ ಸಾಧನೆ
> ಬೆರಳೆಣಿಕೆಯ ವಿರಳರಿಗೆ ವೃತ್ತಿ, ಧರ್ಮ ಸಾಧನೆಯ ಒಂದು ಮಾರ್ಗ"

ಬೆರಳೆಣಿಕೆಯ ವಿರಳರಲ್ಲಿ ಎದ್ದುಕಾಣುವ ವ್ಯಕ್ತಿತ್ವ ಡಾ. ಬಿ.ಆರ್. ಇನಾಮದಾರರದ್ದು. ಆಧುನಿಕ ಕಾಲದಲ್ಲಿ ವೈದ್ಯಕೀಯ ವೃತ್ತಿ ಅನೇಕ ಅಸಂಬದ್ಧ ಸುಳ್ಳು ಅವಶ್ಯಕತೆಗಳನ್ನು ಸೃಷ್ಟಿಸಿ ಕೊಂಡು ಕಡುಬಡವರಿಗೆ ನಿಲುಕದ ಸ್ಥಿತಿಯನ್ನು ತಲುಪಿವೆ. ಭವ್ಯ ಭವನ, ಹವಾನಿಯಂತ್ರಿತ ಕೋಣೆ, ಆಪರೇಷನ್ ಥಿಯೇಟರ್, ಪ್ರಯೋಗಾಲಯ, ಪರೀಕ್ಷಾ ಮಂದಿರ, ರಿಸಪ್ಸನಿಷ್ಟ್, ಮೊದಲಾದವುಗಳು ದೊಡ್ಡ ದವಾಖಾನೆಗಳ ಅವಿಭಾಜ್ಯ ಅಂಗಗಳಾಗಿವೆ. ಇವು ಅವಶ್ಯವಿರಬಹುದು ಆದರೆ ಎಲ್ಲರಿಗೂ ಎಲ್ಲಾ ಸಮಯಕ್ಕೂ ಅನಿವಾರ್ಯವಲ್ಲ. ಆದರೆ ಡಾಕ್ಟರ್ ಇನಾಮದಾರರ ದೃಷ್ಟಿಯಲ್ಲಿ ಇವು ಯಾವುವೂ ಅನಿವಾರ್ಯವಲ್ಲ. ನಿವೃತ್ತ ಪ್ರಿನ್ಸಿಪಾಲರಾದ ಹುಲಗಿಯ ಪಂಡಿತ ನಾರಾಣಾಚಾರ್ಯ ಅವರು ಹೇಳುವಂತೆ ಡಾ. ಇನಾಮದಾರರ ಪರಿಣಿತ ಪ್ರಜ್ಞೆ ಕರ್ನಾಟಕ ಹಾಗೂ ದೂರದ ಮೂಲೆಗಳಿಂದ ಬರುವ ರೋಗಿಗಳಿಗೆ ಹೊಸ ಬೆಳಕನ್ನು ನೀಡುತ್ತಲಿದೆ. ಗ್ರಾಮೀಣ ಪ್ರದೇಶದಲ್ಲಿಯೂ ಅತ್ಯಾಧುನಿಕ ದೊಡ್ಡ ದವಾಖಾನೆಗಳು ಮಾಡುವ ಕೆಲಸಗಳನ್ನು ಮಾಡಲು ಸಾಧ್ಯ ಎಂಬುದನ್ನು ಈ ಡಾಕ್ಟರರು ತೋರಿಸಿಕೊಟ್ಟಿದ್ದಾರೆ.

ಡಾಕ್ಟರ್ ಸಾಹೇಬರು ದಿನಾಲೂ ನೂರಾರು ರೋಗಿಗಳ ಸೇವೆ ಮಾಡಿ ಆರ್ಥಿಕವಾಗಿ ಸಬಲರಾಗಿದ್ದಾರೆ. ಅವರು ಪಟ್ಟಣದಲ್ಲಿ ಕಣ್ಣು ಕುಕ್ಕುವ ಆಸ್ಪತ್ರೆ ಕಟ್ಟಿಸಿ ಮೆರೆಯಬಹುದಿತ್ತು. ಅಂತಹ ಹಮ್ಮು ಬಿಮ್ಮು ಅವರಲಿಲ್ಲ. 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿಯೆ' ವಾಕ್ಯದಂತೆ ಸೊರಟೂರ ಅವರ ಕರ್ಮಭೂಮಿ. ಅಲ್ಲಿ ಉಪಚಾರಗೊಳ್ಳುತ್ತಿರುವ ರೋಗಿಗಳೇ ದೇವರು; ಅವರೇ ಅದಕ್ಕೆ ಸಾಕ್ಷಿ.

ಹೀಗೆ ಸೊರಟೂರ ಗ್ರಾಮದಲ್ಲಿ ಅವರು ತಮ್ಮ ಸೇವೆಯನ್ನು ನಿರಂತರ ೫೦-೬೦ ವರ್ಷಗಳಿಂದ ಪ್ರಾರಂಭಿಸಿರುವುದು ಅವರು ಬಹು ಎತ್ತರಕ್ಕೆ ಬೆಳೆಯಲು ಕಾರಣವಾಗಿದೆ. ಅವರಿಂದ ಸೊರಟೂರ ಗ್ರಾಮದ ಹೆಸರು ನಾಡಿನೆಲ್ಲೆಡೆ ಪಸರಿಸಲು ಕಾರಣವಾಗಿದೆ.

ಇನಾಮದಾರರ ಪಾರ್ಶ್ವವಾಯು ಸಾಧನೆ ಮತ್ತು ಗ್ರಾಮದ ಸಂಬಂಧ ವೃದ್ಧಿ

ಪ್ರಸಿದ್ಧಿ, ಖ್ಯಾತಿ, ಗುರುತಿಸುವಿಕೆ ಎನ್ನುವುದು ಹಲವಾರು ಅಂಶಗಳಲ್ಲಿ ಅಡಗಿರುತ್ತದೆ. ಒಂದು ಸ್ಥಳದಿಂದ ಒಬ್ಬ ವ್ಯಕ್ತಿಗೆ ಮಹತ್ವ ಬರುತ್ತದೆ. ಒಬ್ಬ ವ್ಯಕ್ತಿಯಿಂದ ಒಂದು ಸ್ಥಳಕ್ಕೆ ಮಹತ್ವ ಬರುತ್ತದೆ. ಆ ಹಿನ್ನೆಲೆಯಲ್ಲಿ ನೋಡಿದಾಗ ಸೊರಟೂರ ಗ್ರಾಮಕ್ಕೆ ಮಹತ್ವ ಬಂದಿರುವುದು ಡಾ. ಇನಾಮದಾರರಿಂದಲೇ ಅಷ್ಟೇ ಅಲ್ಲ ಅವರಿಂದ ಈ ಗ್ರಾಮಕ್ಕೆ, ಈ ಗ್ರಾಮದ ಜನರಿಗೆ ಮಹತ್ವ ಬಂದಿದೆ. ಸೊರಟೂರ ಗ್ರಾಮದವರು ಯಾರೇ ಯಾವ ಪ್ರದೇಶಕ್ಕೆ ಹೋಗಲಿ, ಅಪರಿಚಿತರು ಪರಸ್ಪರ ಪರಿಚಯವಾದಾಗ ಸೊರಟೂರ ಗ್ರಾಮದವರು ಎಂದರೆ ಸಾಕು, ಹೌದು ಅರ್ಧಾಂಗವಾಯುಗೆ ಔಷಧಿ ಕೊಡುವ ಊರು ಎನ್ನುವಷ್ಟು ಜನಪ್ರಿಯವಾಗಿದೆ. ಏಕೆಂದರೆ ಅವರ ಚಿಕಿತ್ಸಾ ಕ್ರಮ ಅಷ್ಟೊಂದು ಪರಿಣಾಮಕಾರಿಯಾಗಿದೆ. ಡಾಕ್ಟರ್ ಇನಾಮದಾರರ ಆತ್ಮೀಯರಾದ ಶ್ರೀ. ಆರ್.ಆರ್. ಕುಲಕರ್ಣಿಯವರು ತಾವು ನೋಡಿದ ಒಂದು ಘಟನೆಯನ್ನು ಹೀಗೆ ಹೇಳುತ್ತಾರೆ. ಗುಲ್ಬರ್ಗ ವಿಶ್ವವಿದ್ಯಾಲಯದ ಗ್ರಂಥಾಲಯ ವಿಭಾಗದ ಪ್ರೊ. ಗುಂಜಾಳ ಅವರು ಪಾರ್ಶ್ವವಾಯು ಪೀಡಿತರಾಗಿದ್ದ ತಮ್ಮ ತಾಯಿಯನ್ನು ಇಲ್ಲಿಗೆ ಕರೆದುಕೊಂಡು ಬಂದರು. ತೀರಾ ವಯೋವೃದ್ಧರಾಗಿದ್ದ ಗುಂಜಾಳರ ತಾಯಿಯನ್ನು ನೋಡಿದ ವೈದ್ಯರು ತೀರಾ ನೋವಿನಲ್ಲಿದ್ದ ಅವರ ಕುಟುಂಬಕ್ಕೆಲ್ಲ ಧೈರ್ಯ ಹೇಳುತ್ತಾ, ತಮ್ಮ ಚಿಕಿತ್ಸೆಯನ್ನು ಪ್ರಾರಂಭಿಸಿದರು. ಭರವಸೆಗಳನ್ನು ಹೊತ್ತು ಬಂದ ಗುಂಜಾಳರ ತಾಯಿ ೨-೩ ದಿನಗಳಲ್ಲಿ ಚೇತರಿಸಿಕೊಂಡು ಓಡಾಡುವಂತಾದರಲ್ಲದೆ ಸ್ವಲ್ಪ ದಿನಗಳಲ್ಲಿ ಸಂಪೂರ್ಣ ಗುಣಮುಖರಾದರು. ಹೀಗೆ ರಾಜ್ಯದ ಮೂಲೆಮೂಲೆಗಳಿಂದ ಬಂದ ರೋಗಿಗಳೆಲ್ಲಾ ತಮ್ಮದೇ ರೀತಿಯಲ್ಲಿ ಹಲವಾರು ಉದಾಹರಣೆಗಳನ್ನು ಹೇಳುತ್ತಾರೆ. ಶಿರಹಟ್ಟಿಯ ಪತ್ರಕರ್ತ ಬಾಮು ಶಿರಹಟ್ಟಿ ತಮ್ಮ ಅಭಿಪ್ರಾಯ ಹಂಚಿಕೊಳ್ಳುವುದು ಹೀಗೆ. ಪರಸ್ಪರರು ಕುಶಲೋಪರಿ ಹಂಚಿಕೊಳ್ಳುತ್ತಿರುವಾಗ ಒಬ್ಬ ವ್ಯಕ್ತಿ "ಸೊರಟೂರ ಹತ್ತಿರ ಕಪ್ಪತ್ತ ಗುಡ್ಡದಾಗ ಬಂಗಾರದ ಖಣಿ ಇವೆ ಅಲ್ಲ?" ಎಂದು ಕೇಳಿದನಂತೆ ಆಗ ಅಲ್ಲಿದ್ದ ಒಬ್ಬ ವ್ಯಕ್ತಿ ಹೀಗೆ ಹೇಳಿದನಂತೆ. "ಸೊರಟೂರ ಹತ್ತಿರ ಯಾಕ ಸೊರಟೂರ ಊರಾಗ ಬಂಗಾರದಂತಹ ಬಿಂದಣ್ಣ ಡಾಕ್ಟರ್ ಇದ್ದಾರ" ಎಂದು ಉತ್ತರ ಕೊಟ್ಟನಂತೆ. ಇದು ವೈದ್ಯರ ಬಗ್ಗೆ ಈ ಪ್ರದೇಶದ ಜನರಿಗಿರುವ ಅಭಿಮಾನ, ಹೆಮ್ಮೆಯ ಸಂಕೇತವಾಗಿದೆ.

ಹೀಗೆ ಸೊರಟೂರ ಗ್ರಾಮಕ್ಕೆ ಬರುವ ರೋಗಿಗಳೆಲ್ಲಾ ಒಬ್ಬರಿಂದೊಬ್ಬರು ತಮಗಾದ ಅನುಭವವನ್ನು ಹಂಚಿಕೊಳ್ಳುತ್ತಲೇ ಇರುತ್ತಾರೆ. ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಯಾವುದೇ ಊರಿನಲ್ಲಿ ಸೊರಟೂರ ಎಂದರೆ ಥಟ್ಟನೆ ಎಲ್ಲರೂ ನೆನಪಿಸಿಕೊಳ್ಳುತ್ತಾರೆ. ವೈದ್ಯ ಇನಾಮದಾರರಿಂದ ಈ ಗ್ರಾಮ ಅಷ್ಟೊಂದು ಜನಜನಿತವಾಗಿದೆ.

ಸೊರಟೂರ ಗ್ರಾಮದ ಸಂಬಂಧ ಈ ರೀತಿ ವೃದ್ಧಿಯಾಗುತ್ತಿರುವುದು ಗ್ರಾಮದ ಹಲವಾರು ಸಂಬಂಧಗಳಿಗೆ ಸೇತುವೆಯಾಗಿದೆ. ಎಷ್ಟೋ ಜನರ ಮದುವೆಗೆ ಗಂಡು-ಹೆಣ್ಣಿನ ಸಂಬಂಧ ನಿಶ್ಚಯವಾಗಲು ಮೊದಲ ಪರಿಚಯ ಇಲ್ಲಿಂದಲೇ ಪ್ರಾರಂಭವಾಗಿದೆ.

ಕಾಯಿಲೆ ಪೀಡಿತರು ಕಾಯಿಲೆಯ ಪ್ರಮಾಣಕ್ಕೆ ಅನುಸಾರ ಹಲವು ದಿನ ಗ್ರಾಮದಲ್ಲಿ ಇರಬೇಕಾಗುತ್ತದೆ. ಅವರು ತಮ್ಮ ಬೇಕು-ಬೇಡಿಕೆಗಾಗಿ ಕಿರಾಣಿ ಅಂಗಡಿ, ಚಹಾದ ಅಂಗಡಿ ಸೇರಿದಂತೆ ಹಲವಾರು ಕೊಡುಕೊಳ್ಳುವಿಕೆ ನಡೆಯುತ್ತಿದೆ. ಅದರಿಂದ ಪರಸ್ಪರ ಪರಿಚಯವಾಗಿರುತ್ತಾರೆ. ಹೀಗೆ ಹಲವಾರು ಬಗೆಯಲ್ಲಿ ಬೀಗತನದ ಸಂಬಂಧಗಳು ವೃದ್ಧಿಯಾಗಿವೆ. ಸೊರಟೂರ ಗ್ರಾಮ ಆರ್ಥಿಕವಾಗಿ ಅಷ್ಟೇನು ಪ್ರಬಲವಲ್ಲದ ಊರು, ಮೊದಮೊದಲು ಗ್ರಾಮದಿಂದ ೪೦-೫೦ ಕಿ.ಮಿ. ವ್ಯಾಪ್ತಿಯಲ್ಲಿ ಸಂಬಂಧಗಳು ಹೆಚ್ಚಾಗಿದ್ದವು. ಹೈದ್ರಾಬಾದ್ ಕರ್ನಾಟಕ ಪ್ರದೇಶದಿಂದ ಬೀಗರ ಸಂಬಂಧ ಕಡಿಮೆ. ಆದರೆ ಈಗ ಅದೇ ಭಾಗದಿಂದ ಹಾಗೂ ಕರ್ನಾಟಕದ ಬೇರೆ ಬೇರೆ ಪ್ರದೇಶದಿಂದಲೂ ಸಂಬಂಧ ವೃದ್ಧಿಯಾಗಿವೆ.

ಸೊರಟೂರ ಗ್ರಾಮಕ್ಕೆ ಬರುವ ಕಾಯಿಲೆ ಪೀಡಿತರು ಯಾವುದೇ ಪ್ರದೇಶದಿಂದ ಬಂದರೂ ಸೊರಟೂರಿಗೆ ಬರುವಾಗ ಗದಗ, ಮುಂಡರಗಿ, ಶಿರಹಟ್ಟಿಯಿಂದಲೇ ಬರಬೇಕು. ಒಬ್ಬ ರೋಗಿಯ ಜೊತೆ ೩-೪ ಜನ ಬರುತ್ತಾರೆ. ರೋಗಿಯನ್ನು ಆಡ್ಮಿಟ್ ಮಾಡಿದರೆ ಅವರ ಸಂಬಂಧಿಕರು ಮಾತನಾಡಿಸಲು ಬರುತ್ತಾರೆ. ಬಹುಪಾಲು ಬಡವರು ಬಸ್ಸಿನಲ್ಲಿಯೇ ಬರುತ್ತಾರೆ. ಸೊರಟೂರ ಗ್ರಾಮಕ್ಕೆ ಬರುವಾಗ ಬಸ್ಸಿನಲ್ಲಿ, ಟೆಂಪೊದಲ್ಲಿ ಪರಸ್ಪರರು ಪರಿಚಯಗೊಳ್ಳುತ್ತಾರೆ. ಸೊರಟೂರ ಗ್ರಾಮದವರಂತು ಬಂದವರಿಗೆ, "ಏನೂ ಹೆದರಬ್ಯಾಡ್ರಿ ಡಾಕ್ಟರ್ ಬಹಳ ಚಲೋ ಅದಾರ: ಪೂರಾ ಆರಾಮ ಅಕ್ಕೈತಿ" ಎಂದು ಧೈರ್ಯ ಹೇಳುತ್ತಾರೆ. ಹೀಗೆ ಪ್ರಾರಂಭವಾದ ಮಾತುಗಳಿಂದ ಆ ಪ್ರದೇಶದ ವಿಶೇಷತೆಗಳನ್ನು ಅವರು ಹೇಳುತ್ತಾರೆ. ಈ ಭಾಗದ ವಿಶೇಷತೆಗಳನ್ನು ಇವರು ಹೇಳುತ್ತಾರೆ. ಇದು ಸೊರಟೂರ ಗ್ರಾಮಕ್ಕೆ ಹಲವಾರು ಸಂಬಂಧಗಳನ್ನು ತಿಳಿಯಲು ವೃದ್ಧಿಸಿಕೊಳ್ಳಲು ಸಹಕಾರಿಯಾಗಿದೆ.

ಸೊರಟೂರ ಗ್ರಾಮಕ್ಕೆ ಪ್ರತಿನಿತ್ಯ ನೂರಾರು ರೋಗಿಗಳು ಬೇರೆ ಬೇರೆ ಪ್ರದೇಶದಿಂದ ಬರುವುದರಿಂದ ಸೊರಟೂರ ಗ್ರಾಮಸ್ಥರಿಗೆ ವಿವಿಧ ಉಪಭಾಷೆಗಳು ವಿವಿಧ ಭಾಷಾಶೈಲಿ ಬಹು ಸಹಜವಾಗಿ ಸಾಮಾನ್ಯರಿಗೂ ಪರಿಚಯಗೊಳ್ಳುತ್ತಿದೆ. ವೈದ್ಯ ಇನಾಮದಾರರು ಸೊರಟೂರ ಗ್ರಾಮದಲ್ಲಿಯೇ ಚಿಕಿತ್ಸೆ ನೀಡುತ್ತಿರುವುದು ಗ್ರಾಮ ಹಲವಾರು ರೀತಿಯಲ್ಲಿ ಸಂಬಂಧ ವೃದ್ಧಿಸಿಕೊಳ್ಳಲು ಸಹಕಾರಿಯಾಗಿದೆ.

ಡಾ. ಇನಾಮದಾರರ ಸೇವಾನಿಷ್ಠೆ ಮತ್ತು ರೋಗಿಗಳಿಗಿರುವ ನಂಬಿಕೆ

ಪ್ರಸಕ್ತ ಕಾಲದಲ್ಲಿ ಬಹುಪಾಲು ವೈದ್ಯರು ಸಮಯವನ್ನು ನೋಡಿ ರೋಗಿಯನ್ನು ತಪಾಸಿಸುತ್ತಾರೆ. ಅದಕ್ಕಾಗಿಯೇ ಆಸ್ಪತ್ರೆ ಎದರು ಸಮಯ ನಿಗದಿಗೊಳಿಸಿರುತ್ತಾರೆ. ಇದಕ್ಕೆ ಅಪವಾದವೆಂಬಂತೆ ಹಲವಾರು ವೈದ್ಯರುಗಳಿದ್ದಾರೆ. ಅಂಥವರ ಸಾಲಿನಲ್ಲಿ ವೈದ್ಯ ಇನಾಮದಾರರು ಸೇರುತ್ತಾರೆ. ಏಕೆಂದರೆ ಭಾರಿ ದೂರದ ಪ್ರದೇಶದಿಂದ ಬರುವ ಹಲವಾರು ರೋಗಿಗಳು ಯಾವುದೇ ಸಮಯದಲ್ಲಿ ಬಂದರೂ ಅವರಿಗೆ ಲಭ್ಯರಿರುತ್ತಾರೆ. ಅದಕ್ಕಾಗಿ ಅವರು ತಮ್ಮ ಮನೆಯಲ್ಲಿಯೇ ಚಿಕಿತ್ಸೆ ನೀಡುತ್ತಾರೆ. ತಮ್ಮಲ್ಲಿ ಬರುವ ಎಲ್ಲಾ ರೋಗಿಗಳನ್ನು ಶ್ರದ್ಧೆ ನಿಷ್ಠೆಯಿಂದ ಗುಣಮುಖರಾಗಿ ಮಾಡುವ ಅಚಲತೆಯೊಂದಿಗೆ ಚಿಕಿತ್ಸೆ ನೀಡುತ್ತಾರೆ. ಅದಕ್ಕೆ ತಕ್ಕುದಾಗಿ ಆ

ದೇವರು ಇನಾಮದಾರ ವೈದ್ಯರನ್ನು ಬಹುಗಟ್ಟಿಯಾಗಿ ಇರಿಸಿದ್ದಾನೆ. "ಶರೀರ ಮಾದ್ಯಮಂ ಖಲು ಧರ್ಮ ಸಾಧನಂ" ಎಂಬ ವಾಣಿಯಂತೆ ದೇವರು ಇವರಿಗೆ ಸದೃಢ ದೇಹ ಕೊಟ್ಟಿದ್ದಾನೆ. ಅವರು ಇಂತಹ ಸದೃಢ ದೇಹವನ್ನು ತಮ್ಮ ಮನದ ಇಚ್ಚಿತ ಬಯಕೆಗಳ ಈಡೇರಿಕೆಯ ಸಾಧನ ಮಾಡಿಕೊಳ್ಳದೆ, ದೇಹವನ್ನು ಚಟಗಳ ಆಗರ ಮಾಡದೇ ಈ ಸದೃಢ ದೇಹವನ್ನು ರೋಗಿಗಳ ಸೇವೆಗಾಗಿ ಮುಡುಪಾಗಿಟ್ಟವರು. ರೋಗಿಗಳ ಸೇವೆ, ನೊಂದವರ ನೋವು ನಿವಾರಿಸುವುದು, ಬೆಂದವರ ಬೇಗುದಿ ಅಡಗಿಸುವುದು ಇವರ ಪಾಲಿನ ಧರ್ಮವಾಗಿದೆ. ಕಾರಣ ದೇಹವನ್ನು ಧರ್ಮಸಾಧನೆಯ ಮಾಧ್ಯಮವಾಗಿ ಮಾಡಿಕೊಂಡವರು. ಗ್ರಾಮದ ಶ್ರೀ ಕೆ.ಎನ್. ಮಲ್ಲಾಡದ ಅವರು ಹೇಳುವಂತೆ ಡಾಕ್ಟರ್ ಇನಾಮದಾರರು "ಕಣ್ಣುಮುಚ್ಚಿ ಮಂತ್ರ ಪಠಿಸಿದವರಲ್ಲ, ಕಣ್ಣುತುಂಬ ರೋಗಿಗಳ ಚಿತ್ರ ತುಂಬಿಕೊಂಡು ಅವರನ್ನು ಗುಣಪಡಿಸುತ್ತಲೇ ಸದಾ ಚಿಂತನಶೀಲರಾದವರು" ಸರಳ ಮಾರ್ಗ ಅನುಸರಿಸಿ ತಮ್ಮ ಮಾತಿನ ಮೋಡಿಯಿಂದ ರೋಗಿಗಳನ್ನು ಗುಣಪಡಿಸಬಲ್ಲ ಸಮರ್ಥರು. ರೋಗಿಗಳ ಸೇವೆಯೇ ಇವರ ಪಾಲಿನ ಧರ್ಮ; ಆ ಧರ್ಮವನ್ನು ಸಾರ್ಥಕವಾಗಿ ಸಾಧಿಸಿಕೊಂಡು ಬಂದವರು. ಅವರ ಆಪ್ತರಲ್ಲಿ ಒಬ್ಬರಾದ ಶ್ರೀ ದತ್ತಾತ್ರೇಯ ಕಳಸಾಪೂರ ಅವರು ಹೇಳುವಂತೆ "ಮುಗ್ಧತೆ ಅವರಲ್ಲಿ ಹುಟ್ಟಿನಿಂದ ಬಂದ ವಿಶೇಷ ಗುಣ" ಅದನ್ನು ಅವರ ವೈದ್ಯಕೀಯ ಸೇವೆಯಲ್ಲಿ ಕಾಣಬಹುದು. ಯಾವುದೇ ಜಾತಿ, ಮತ, ಅಂತಸ್ತಿನ ಪರಿವೆ ಇಲ್ಲದೆ ರೋಗಿ ಗುಣಮುಖನಾಗಬೇಕು ಎಂಬ ಏಕಮೇವ ಶ್ರದ್ಧೆ ಅವರ ಸೇವಾನಿಷ್ಠೆಯ ಸಂಕೇತವಾಗಿದೆ.

ಮೊದಮೊದಲು ಸೊರಟೂರ ಹಾಗೂ ಸುತ್ತಮುತ್ತಲ ಗ್ರಾಮಗಳ ಜನ ಸಾಮಾನ್ಯ ಕಾಯಿಲೆಗಳಾದ ಜ್ವರ, ನೆಗಡಿ, ಕೆಮ್ಮು ಎಲ್ಲದಕ್ಕೂ ಡಾ. ಇನಾಮದಾರರ ಹತ್ತಿರ ಬರುತ್ತಿದ್ದರು. ಪಾರ್ಶ್ವವಾಯು ರೋಗಿಗಳು ಪ್ರತಿದಿನ ನೂರಾರು ಸಂಖ್ಯೆಯಲ್ಲಿ ಬರುವುದರಿಂದ ದವಾಖಾನೆ ಸದಾ ರೋಗಿಗಳಿಂದ ತುಂಬಿರುತ್ತದೆ. ಇದರಿಂದ ಡಾಕ್ಟರರಿಗೆ ಸಮಯದ ಅಭಾವ. ಆದರೆ ಸ್ಥಳಿಯ ಗ್ರಾಮಗಳ ಕೆಲವರಿಗೆ ತಮ್ಮ ಎಲ್ಲಾ ಕಾಯಿಲೆಗೂ ಇನಾಮದಾರ ಡಾಕ್ಟರ್ ಹತ್ತಿರ ತೋರಿಸಿಕೊಂಡಾಗಲೇ ಸಮಾಧಾನ. ಅದಕ್ಕಾಗಿ ಎಷ್ಟೇ ಗದ್ದಲವಿದ್ದರೂ ಅವರಿಂದಲೇ ತೋರಿಸಿಕೊಂಡು ಬರುತ್ತಾರೆ. ಇನ್ನು ಕೆಲವರು 'ಸಂಜಿಮುಂದ ಹೊರಗ ಕಟ್ಟಿಮ್ಯಾಗ ಕುಂತಿರತಾರ ಅವಾಗ ಹೋಗಿ ತೋರಿಸಿಕೊಂಡು ಬರಬೇಕು' ಎಂದು ಮಾತಾಡುತ್ತಾರೆ. ಗ್ರಾಮದ ಇನ್ನು ಕೆಲವರು ಜ್ವರ, ನೆಗಡಿ, ಕೆಮ್ಮು ಬೇಗ ವಾಸಿಯಾಗದಿದ್ದರೆ "ಬಿಂದಣ್ಣರ ಹತ್ತರ ತೋರಿಸಿಕೊಂಡು ಬಾ ಒಂದಿದಾಗ ಕಡಿಮೆ ಅಕೈತಿ" ಎಂದು ಹೇಳುತ್ತಾರೆ. ಇನ್ನು ಕೆಲವರು "ಬಿಂದಣ್ಣರು ನನ್ನ ಕೈ ಹಿಡಿದು ನೋಡಿ ಒಂದು ಗುಳಿಗೆ ಕೊಟ್ಟರ ನನ್ನ ಜಡ್ಡ ಹೊಕ್ಕತಿ." "ಒಟ್ಟ ಬಿಂದಣ್ಣರ ಕೈಯ ಬಹಳ ಹಗುರರಿ" ಎನ್ನುತ್ತಾರೆ. ಗ್ರಾಮದ ಕೆಲ ಹಿರಿಯರಂತು "ನಾನು ಬಿಂದಣ್ಣರನ್ನ ಬಿಟ್ಟು ಬ್ಯಾರೆ ಕಡೆ ತೊರ್ಸದಿಲ್ಲರಿ ಅವರಕ್ಕಿಂತ ದೊಡ್ಡವರು ಮತ್ಯಾರ ಅದಾರಿ?" ಎಂದು ಹೇಳುವ ಅವರ ಮಾತು ಡಾಕ್ಟರ್ ಇನಾಮದಾರರ ಸೇವಾ ನಿಷ್ಠೆ, ಪರಿಣಾಮಕಾರಿ ಔಷದೋಪಚಾರದ ಸಂಕೇತವಾಗಿದೆ. ಇದು ರೋಗಿಗಳು ವೈದ್ಯರ ಮೇಲೆ ಇಟ್ಟಿರುವ ನಂಬಿಕೆ, ವಿಶ್ವಾಸಗಳನ್ನು ತಿಳಿಸುತ್ತದೆ.

ಸೊರಟೂರ ಗ್ರಾಮಕ್ಕೆ ಡಾ. ಇನಾಮದಾರರ ಕೊಡುಗೆ

ಪಾರ್ಶ್ವವಾಯು ಚಿಕಿತ್ಸೆಯಿಂದ ಸೊರಟೂರ ಗ್ರಾಮಕ್ಕೆ ಕೀರ್ತಿ ತಂದ ಡಾ. ಇನಾಮದಾರರು ಗ್ರಾಮದ ಅಭಿವೃದ್ಧಿಯಲ್ಲಿಯೂ ಗುರುತರ ಕಾರ್ಯಸಾಧನೆ ಮಾಡಿದ್ದಾರೆ.

ಶಿಕ್ಷಣ

ಸೊರಟೂರಿನಲ್ಲಿ ಶಾಲಾ ಶಿಕ್ಷಣ ಮೊದಲು ಪ್ರಾರಂಭವಾಗಿದ್ದು ಗ್ರಾಮದ ಹನುಮಂತದೇವರ ಗುಡಿಯಲ್ಲಿ. ನಂತರ ಆ ಶಾಲೆಗೆ ಕಾಯಕಲ್ಪ ನೀಡುವಲ್ಲಿ ಡಾ. ಇನಾಮದಾರರ ಸೇವೆ ದೊಡ್ಡದು. ಈಗ ಗ್ರಾಮದ ಬಸ್‌ನಿಲ್ದಾಣದ ಹತ್ತಿರ ಇರುವ ಶತಮಾನ ಕಂಡಿರುವ ಎಂ.ಕೆ. ಬಿ.ಎಸ್. ಶಾಲೆಗೆ ಮುಂಡರಗಿಯ ಸೊರಟೂರ ಅಜ್ಜನವರು ಭೂದಾನ ಮಾಡಿದ್ದಾರೆ. ಡಾ. ಬಿ.ಆರ್. ಇನಾಮದಾರರು ಹಾಗೂ ಪಾಂಡುರಂಗರಾವ್ ಇನಾಮದಾರರು ಮಹಾಲಿಂಗಪುರ ಹತ್ತಿರ ಇರುವ ತಮ್ಮ ಜಮೀನನ್ನು ಮಾರಿ ಅದರಿಂದ ಬಂದ ಹಣದಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಿದ್ದಾರೆ. ಹಣ ಯಥೇಚ್ಛವಾಗಿ ಇರುವಾಗ ಅದರಲ್ಲೊಂದು ದಾನ ಮಾಡುವವರು ಇದ್ದಾರೆ. ಆದರೆ ಡಾ. ಇನಾಮದಾರರು ತಮ್ಮಲ್ಲಿ ಆ ಸಮಯದಲ್ಲಿ ಅಷ್ಟೊಂದು ಹಣ ಇರದಿದ್ದರೂ ತಮ್ಮ ಸ್ವಂತ ಹೊಲವನ್ನು ಮಾರಿ ಶಾಲಾ ಕೊಠಡಿ ನಿರ್ಮಿಸಿದ್ದು ಬಹುದೊಡ್ಡ ದಾನ ಹಾಗೂ ತ್ಯಾಗದ ಸಂಕೇತವಾಗಿದೆ. ಅಂದು ಅವರು ಶಾಲಾ ಶಿಕ್ಷಣಕ್ಕೆ ಭದ್ರಬುನಾದಿ ಹಾಕಿದ್ದರಿಂದ ಈಗ ಗ್ರಾಮದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳು ಬೆಳೆಯಲು ಕಾರಣವಾಗಿದೆ. ಅವರ ಶಿಕ್ಷಣ ಸೇವೆಯ ಪರಂಪರೆ ಸಾಂದರ್ಭಿಕವಾಗಿ ಈಗಲೂ ಮುಂದುವರೆದಿದೆ.

ರಸ್ತೆ

"ಕೊಂಕಣ ಸುತ್ತಿ ಮೈಲಾರಕ ಬಂದಂಗ" ಎಂಬುದು ಗಾದೆ ಮಾತು. ನಿರ್ದಿಷ್ಟ ಸ್ಥಳ ತಲುಪಲು ನೇರವಾಗಿ ಹೋಗದೆ ಬೇರೆ ಎಲ್ಲೆಲ್ಲೋ ಸುತ್ತುವರಿದು ಬರುವುದು ಎಂದರ್ಥ. ಗದಗದಿಂದ ಸೊರಟೂರಿಗೆ ಬರುವುದು ಹಾಗೆ ಇತ್ತು. ಗದಗದಿಂದ ಸೊರಟೂರಿಗೆ ಬರುವಾಗ ಬೆಳದಡಿವರೆಗೆ ಬಂದು ಬೆಳದಡಿ ಶಿರುಂಜ ಮಧ್ಯದಲ್ಲಿ ಇರುವ ಲಿಂಬಿಕಟ್ಟಿ ತೆವರಿನಿಂದ ಶಿರುಂಜ ಯಲಿಶಿರೂರ ಮಾರ್ಗವಾಗಿ ಶಿರಹಟ್ಟಿಗೆ ಹೋಗಿ ಸೊರಟೂರಿಗೆ ಬರುವುದು. ಸೊರಟೂರ ಗದಗ ರಸ್ತೆಯಾಗಿತ್ತು. ಹೀಗೆ ಸೊರಟೂರಿಗೆ ಬರುತ್ತಿದ್ದರು ಎಂಬುದನ್ನು ಈಗಿನ ಯುವ ಜನಾಂಗ ನಂಬಲು ಸಾಧ್ಯವಿಲ್ಲ. ಸೊರಟೂರ ಗ್ರಾಮದ ರಸ್ತೆ ಸಂಪರ್ಕ ಅಷ್ಟೊಂದು ಕಷ್ಟಕರವಾಗಿತ್ತು. ಗದಗದಿಂದ ಬೆಳದಡಿ ಲಿಂಬಿಕಟ್ಟಿ ತೆವರು ಶಿರಹಟ್ಟಿ ಮಾರ್ಗವಾಗಿ ಸೊರಟೂರ ತಲುಪಲು ಸುಮಾರು ೩೦ ಕಿ.ಮೀ. ಕ್ರಮಿಸಬೇಕಾಗಿತ್ತು. ಅದು ಕಠಿಣವಾದ ರಸ್ತೆಯಾಗಿತ್ತು. ಆದರೆ ಈಗ ಬೆಳದಡಿ ಲಿಂಬಿಕಟ್ಟಿ ತೆವರಿನಿಂದ ನೇರವಾಗಿ ಸೊರಟೂರಿಗೆ ರಸ್ತೆ ನಿರ್ಮಿಸಲಾಗಿದೆ. ಇದರಿಂದ ಗದಗದಿಂದ ಸೊರಟೂರ ಕೇವಲ ೨೦ ಕಿ.ಮೀ. ದೂರವಾಗುತ್ತದೆ. ಗದಗದಿಂದ ಸೊರಟೂರಿಗೆ ರಸ್ತೆಯೇ ಇಲ್ಲದ ಸಂದರ್ಭದಲ್ಲಿ ಆಗ ತಮ್ಮ ಜಮೀನುಗಳಲ್ಲಿಯೇ ರಸ್ತೆ ನಿರ್ಮಿಸಲು ಭೂಮಿಕೊಟ್ಟ ತ್ಯಾಗಿಗಳೇ ಡಾ. ಇನಾಮದಾರರು.

ಸೊರಟೂರ-ಗದಗ ರಸ್ತೆ ನಿರ್ಮಾಣಕ್ಕೆ ಗ್ರಾಮದ ಗುರುಪಾದಪ್ಪ ಬೋಳನವರ, ಯಲ್ಲಪ್ಪ ಶೆಲಿಯಪ್ಪನವರ, ತಿರಕಪ್ಪ ಮಿರಗಾಣಿ ಸೇರಿದಂತೆ ಗ್ರಾಮದ ಅನೇಕ ಮಹನಿಯರು ನನ್ನೊಂದಿಗೆ ಶ್ರಮಿಸಿದ್ದಾರೆ ಎಂಬುದನ್ನು ಡಾ. ಇನಾಮದಾರರೇ ನೆನಪಿಸಿಕೊಳ್ಳುತ್ತಾರೆ. ಈಗ ಈ ರಸ್ತೆ ಜಿಲ್ಲಾ ಮುಖ್ಯ ರಸ್ತೆಯಾಗಿ ಅಭಿವೃದ್ಧಿ ಹೊಂದಿದ್ದು, ಸೊರಟೂರ ಗ್ರಾಮಕ್ಕೆ ಉತ್ತಮ ಸಾರಿಗೆ ಸಂಪರ್ಕದ ಸಾಧನವಾಗಿದೆ.

ವಿವಿಧ ಸಂಘ-ಸಂಸ್ಥೆಗಳಲ್ಲಿ ಸೇವೆ

ಡಾ. ಇನಾಮದಾರರು ವೈದ್ಯಕೀಯ ಸೇವೆಯ ಜೊತೆಗೆ ಹಲವಾರು ಸಹಕಾರಿ ಸಂಘ–ಸಂಸ್ಥೆಗಳಲ್ಲಿ ತಮ್ಮದೇಯಾದ ಅಳಿಲು ಸೇವೆ ಸಲ್ಲಿಸಿದ್ದಾರೆ. ಹುಲಕೋಟಿಯ ಕ್ಯಾಟಲ್ ಫೀಡ್ ಸೊಸೈಟಿ ಅಧ್ಯಕ್ಷರಾಗಿ, ಗದಗ ಪಿ.ಎಲ್.ಡಿ. ಬ್ಯಾಂಕ್ ಉಪಾಧ್ಯಕ್ಷರಾಗಿ, ಸೊರಟೂರ ಗ್ರಾಮದ ಗ್ರಾಮ ಸೇವಾ ಸಹಕಾರಿ ಸಂಘ ಹಾಗೂ ಎಣ್ಣೆಕಾಳು ಸೊಸೈಟಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ವೆಂಕಟಾಪುರ ದೇವಸ್ಥಾನ ಟ್ರಸ್ಟ್ ಕಮಿಟಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಗ್ರಾಮಕ್ಕೆ ಹಾಲು ಉತ್ಪಾದಕರ ಸೊಸೈಟಿ ಪ್ರಾರಂಭವಾದಾಗ ಕೆಲ ಜನರ ಷೇರನ್ನು ಹೊರತುಪಡಿಸಿದರೆ ಉಳಿದವರ ಷೇರನ್ನು ತಾವೇ ಭರಿಸಿ ಸಂಘವನ್ನು ಪ್ರಾರಂಭಿಸಿದ್ದಾರೆ ಹೀಗೆ ಸೊರಟೂರ ಗ್ರಾಮದಲ್ಲಿರುವ ಸಂಘ-ಸಂಸ್ಥೆಗಳಿಗೆ ಉದಾರ ಹಸ್ತದಿಂದ ಅವುಗಳ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ.

ಬ್ಯಾಂಕ್ ಪ್ರಾರಂಭ (ಕೆ.ವ್ಹಿ.ಜಿ. ಬ್ಯಾಂಕ್ ಸೊರಟೂರ)

ಸೊರಟೂರನಲ್ಲಿ ಬ್ಯಾಂಕ್ ವ್ಯವಸ್ಥೆ ಇಲ್ಲದಾಗ ಸೊರಟೂರ ಗ್ರಾಮದ ಜನರು ಆರ್ಥಿಕವಾಗಿ ಸದೃಢರಾಗಬೇಕೆಂಬ ಉದ್ದೇಶದಿಂದ ಡಾ. ಇನಾಮದಾರರು ಪ್ರಾರಂಭದಲ್ಲಿ ತಾವೇ ಸ್ವತ: ೪ ಲಕ್ಷ ರೂಪಾಯಿ ಠೇವಣಿ ಇಟ್ಟು ಗ್ರಾಮದಲ್ಲಿ ಮಲಪ್ರಭಾ ಗ್ರಾಮೀಣ ಬ್ಯಾಂಕ್ ಶಾಖೆ ಪ್ರಾರಂಭಿಸಿದರು. ಈಗ ಅದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಎಂದಾಗಿದೆ. ಈಗ ಅದು ಉಳಿತಾಯ ಖಾತೆ, ಠೇವಣಿ, ವಿವಿಧ ಬಗೆಯ ಸಾಲ ಸೌಲಭ್ಯ ಸೇರಿದಂತೆ ಕೋಟಿ ಕೋಟಿ ವ್ಯವಹಾರ ನಿರ್ವಹಿಸುತ್ತಿದೆ.

ಗ್ರಾಮದ ಜನರ ಬದುಕನ್ನು ಹಸನುಗೊಳಿಸಿದ ಡಾ. ಇನಾಮದಾರರು

ಸೊರಟೂರ ಗ್ರಾಮದ ಜನರ ಬದುಕಿಗೆ ಡಾ. ಇನಾಮದಾರರು ಒಂದು ದೊಡ್ಡ ಮರವಿದ್ದಂತೆ ದೊಡ್ಡ ವ್ಯಕ್ತಿಯಾಗಿ, ಶಕ್ತಿಯಾಗಿ, ಸಂಪತ್ತಾಗಿ ಬೆಳೆದಿದ್ದಾರೆ. ಒಂದು ಮರ ಹಲವಾರು ಜನರಿಗೆ ಜೀವನಾಧಾರ. ಎಷ್ಟೋ ಜನ ಮರದ ಹಣ್ಣಿನಿಂದ ತಮ್ಮ ಹಸಿವನ್ನು ಇಂಗಿಸಿಕೊಳ್ಳುತ್ತಾರೆ. ಎಷ್ಟು ಜೀವಿಗಳು ಹೂವು ಕಾಯಿಗಳನ್ನೇ ಅವಲಂಬಿಸಿರುತ್ತವೆ. ಮರದ ತಪ್ಪಲು, ಟೊಂಗೆ ಮರದ ನೆರಳು ಹಲವಾರು ಜೀವಿಗಳಿಗೆ ಆಸರೆಯಾಗಿರುತ್ತದೆ. ಹಾಗೆಯೇ ಡಾ. ಇನಾಮದಾರರು ಹಲವಾರು ಜನರ ಬದುಕಿಗೆ ಆಸರೆಯಾಗಿದ್ದಾರೆ.

ರಾಜ್ಯದ ವಿವಿಧ ಮೂಲೆಗಳಿಂದ ಗ್ರಾಮಕ್ಕೆ ಬರುವ ಕಾಯಿಲೆ ಪೀಡಿತರು ಹಾಗೂ ಅವರ ಸಂಬಂಧಿಕರು ಗ್ರಾಮಕ್ಕೆ ಬರುತ್ತಿರುವುದಕ್ಕೆ ಗ್ರಾಮದ ಸಾರಿಗೆ ವ್ಯವಸ್ಥೆ ಸುಧಾರಿಸುತ್ತಿದೆ. ಹಲವಾರು

ಟೆಂಪೋ ಟ್ರ್ಯಾಕ್ಸ್, ಟಂ ಟಂ, ಅಟೋ ವಾಹನಗಳ ಮೂಲಕ ಗ್ರಾಮದ ಜನ ಉದ್ಯೋಗ ಕಂಡುಕೊಂಡಿದ್ದಾರೆ. ಗ್ರಾಮದಲ್ಲಿರುವ ಹೋಟೆಲ್‌ಗಳು, ಕಿರಾಣಿ ಅಂಗಡಿಗಳ ಸಂಖ್ಯೆ ಹೆಚ್ಚಾಗಿದೆ. ವೈದ್ಯರ ಮನೆಯಲ್ಲಿ ಔಷಧಿ ತಯಾರಿಸುವುದು, ಜೇನುತುಪ್ಪ ಸಂಗ್ರಹಿಸುವವರು, ಕಾಯಿಲೆ ಪೀಡಿತರ ಕೈಕಾಲು ತಿಕ್ಕುವವರು ಸೇರಿದಂತೆ ಹಲವಾರು ಜನ ತಮ್ಮ ಬದುಕಿಗೆ ಉದ್ಯೋಗ ಕಂಡುಕೊಂಡಿದ್ದಾರೆ.

ಡಾಕ್ಟರ್ ಇನಾಮದಾರರು ಒಬ್ಬ ಜಮೀನುದಾರರು. ಮನೆಯಲ್ಲಿ ಉತ್ತಮ ತಳಿಯ ರಾಸುಗಳನ್ನು ಸ್ವತಃ ಕಾಳಜಿಯಿಂದ ಬೆಳೆಸುತ್ತಾರೆ. ಅದಕ್ಕಾಗಿ ಎತ್ತುಗಳು, ಆಕಳು ಹಾಗೂ ಎಮ್ಮೆಗಳ ಸಾಕಣೆಗಾಗಿ ಅವರ ಮನೆಯಲ್ಲಿ ಅನೇಕ ಕೆಲಸಗಾರರು ಉದ್ಯೋಗ ಕಂಡುಕೊಂಡಿದ್ದಾರೆ. ಆಸರೆ ಸಹಾಯ ಅರಸಿ ಬಂದವರಿಗೆ ಎಂದೂ ಕೈಬಿಟ್ಟಿಲ್ಲ. ವಿದ್ಯಾಭ್ಯಾಸ, ನೌಕರಿ ಸೇರಿದಂತೆ ಹಲವಾರು ಬಡವರಿಗೆ ಆರ್ಥಿಕ ಸಹಾಯ ಮಾಡಿದ್ದಾರೆ. ಡಾ. ಇನಾಮದಾರರ ಗರಡಿಯಲ್ಲಿ ಬೆಳೆದು ಅವರ ಪ್ರೀತಿಗೆ ಪಾತ್ರರಾದ ಕಡುಬಡವರು ಅವರ ಆಶೀರ್ವಾದ ಹಾಗೂ ಸಹಾಯಗಳಿಂದ ಉತ್ತರೋತ್ತರವಾಗಿ ಪ್ರಗತಿ ಪಥದತ್ತ ಮುನ್ನಡೆಯುತ್ತಿದ್ದಾರೆ. "ಹೂವಿನ ಜೊತೆ ದಾರವು ಸ್ವರ್ಗ ಸೇರಿತು" ಎಂಬಂತೆ ವೈದ್ಯರ ಸೇವೆಯಲ್ಲಿ ಅವರ ಪ್ರಸಿದ್ಧಿಯಲ್ಲಿ ಹಲವಾರು ಜನ ತಮ್ಮ ಬದುಕನ್ನು ಅರಳುವ ಹೂವಿನಂತೆ ಸಾರ್ಥಕಪಡಿಸಿಕೊಂಡಿದ್ದಾರೆ.

ಗ್ರಾಮದ ಜನರಿಗೆ ಹೊಸ ಕೃಷಿ ತಾಂತ್ರಿಕತೆ ಪರಿಚಯ

ಡಾ. ಇನಾಮದಾರರು ವೈದ್ಯಕೀಯ ಸೇವೆಯ ಜೊತೆಗೆ ಕೃಷಿಯಲ್ಲಿ ಹೆಚ್ಚಿನ ಆಸಕ್ತಿ ಉಳ್ಳವರಾಗಿದ್ದಾರೆ. ಸೊರಟೂರ ಗ್ರಾಮದಲ್ಲಿ ಹೆಚ್ಚು ಭೂಮಿ ಹೊಂದಿದ್ದಾರೆ. ಅದರಲ್ಲೂ ನೀರಾವರಿ ಭೂಮಿಯೇ ಹೆಚ್ಚು. ಪ್ರತಿಯೊಂದು ಬೆಳೆಯಲ್ಲೂ ಹೊಸ ಹೊಸ ತಳಿಯ ಬೀಜಗಳನ್ನು ತರಿಸಿ ಕೃಷಿಯಲ್ಲಿ ಪ್ರಗತಿಪರ ರೈತರಾಗಿದ್ದಾರೆ. ಗ್ರಾಮದ ಎಲ್ಲ ರೈತರು ವೈದ್ಯರು ತರಿಸಿದ ಹೊಸ ತಳಿಯ ಇಳುವರಿ ನೋಡಿ ಅದು ಲಾಭದಾಯಕವಾಗಿ ಕಂಡರೆ ಅವರು ಅದನ್ನೇ ತರುತ್ತಾರೆ. ಹೊಸ ಹೊಸ ಕೃಷಿಯಂತ್ರೋಪಕರಣಗಳು ಗ್ರಾಮದ ಜನರಿಗೆ ಪರಿಚಯವಾಗುವುದೇ ಇನಾಮದಾರರಿಂದ. ಇದರಿಂದ ಪ್ರಭಾವಿತರಾದ ಗ್ರಾಮದ ಹಲವಾರು ದೊಡ್ಡ ರೈತರು ಇವರನ್ನೇ ಅನುಸರಿಸುತ್ತಾರೆ. ಸೊರಟೂರ ಗ್ರಾಮ ಕೃಷಿಯಲ್ಲಿ ಅಷ್ಟೇನು ಪ್ರಗತಿ ಸಾಧಿಸಿದ ಗ್ರಾಮವಲ್ಲ. ಅಂತಹ ಸಂದರ್ಭದಲ್ಲಿ ಬಾಳೆ ಬೆಳೆಯಂತಹ ದೀರ್ಘಕಾಲಿಕ ತೋಟಗಾರಿಕೆ ಬೆಳೆಯನ್ನು ಮೊದಲು ಪ್ರಾರಂಭಿಸಿದವರೇ ಡಾ. ಇನಾಮದಾರರು. ಇವರ ಮಾದರಿಯಿಂದ ಗ್ರಾಮದಲ್ಲಿ ಬಹುತೇಕ ರೈತರು ಬಾಳೆ ಬೆಳೆಯುತ್ತಿದ್ದಾರೆ. ಹಲವಾರು ವರ್ಷಗಳಿಂದ ಸೊರಟೂರ ಗ್ರಾಮದಲ್ಲಿ ಎಲೆಬಳ್ಳಿ (ವೀಳ್ಯದ ಎಲೆ) ತೋಟಗಳಿರಲಿಲ್ಲ, ಡಾ. ಇನಾಮದಾರರು ಸ್ವತಃ ವಿಶೇಷ ಆಸಕ್ತಿ ವಹಿಸಿ ಎಲೆಬಳ್ಳಿ ಕೃಷಿ ಪ್ರಾರಂಭಿಸಿದ್ದಾರೆ. ಕೃಷಿಯಲ್ಲಿ ಉತ್ತಮ ಇಳುವರಿ ಪಡೆಯಬೇಕು; ಹೆಚ್ಚು ಲಾಭ ಆಗಬೇಕು. ಅದಕ್ಕಾಗಿ ಎಲ್ಲಾ ರೀತಿಯ ತಾಂತ್ರಿಕತೆ, ಬೀಜ ಗೊಬ್ಬರ, ಔಷದೋಪಚಾರ ಮಾಡಲು ವೈದ್ಯರು ಸದಾ ಸಿದ್ಧರಿರುತ್ತಾರೆ. ಅವರು ತಮ್ಮ ತೋಟ ಮತ್ತು ಹೊಲಗಳನ್ನು ಗ್ರಾಮದ ರೈತರಿಗೆ ಸಮಪಾಲಿನಂತೆ ಕೃಷಿ ಮಾಡಲು ಕೊಡುತ್ತಾರೆ.

ಇದರಿಂದ ಗ್ರಾಮದ ಹಲವಾರು ಕೃಷಿ ಕಾರ್ಮಿಕರಿಗೆ ಕೃಷಿಕರಾಗಲು ಸಾಧ್ಯವಾಗಿದೆ. ಅದರಲ್ಲೂ ಎಲ್ಲಾ ಹೊಲಗಳನ್ನು ಒಬ್ಬರಿಗೆ ಕೊಡದೆ ೨-೩ ಎಕರೆ ತೋಟ, ೪-೫ ಎಕರೆ ಹೊಲವನ್ನು ಪ್ರತ್ಯೇಕವಾಗಿ ಒಬ್ಬೊಬ್ಬರಿಗೆ ಕೊಡುತ್ತಾರೆ. ಇದರಿಂದ ರೈತರು ಬೆಳೆಗಳನ್ನು ಕಾಳಜಿಪೂರ್ವಕ ಬೆಳೆಸುತ್ತಾರೆ ಎಂಬ ಅವರ ಲೆಕ್ಕಚಾರ ಯಶಸ್ವಿಯಾಗಿದೆ. ವೈದ್ಯರ ಹೊಲ, ತೋಟಗಳಲ್ಲಿ ರೈತರಾದ ಕೆಲವು ಶ್ರಮಿಕರು ಅವರ ಹೊಲಗಳಿಂದ ಬಂದ ಲಾಭದಲ್ಲಿ ಸ್ವಂತ ಹೊಲಗಳನ್ನು ಖರೀದಿಸಿದ್ದಾರೆ. ಇದು ಗ್ರಾಮದ ರೈತರಿಗೆ ಅವರ ದೊಡ್ಡ ಕೊಡುಗೆ ಎಂದೇ ಹೇಳಬಹುದು. ಪ್ರತಿದಿನ ಸಾಯಂಕಾಲ ಹೊಲ, ತೋಟಗಳಿಗೆ ಹೋಗಿ ಬರುವ ಅವರ ಪರಿಪಾಠ ಅವರೊಬ್ಬ ಆದರ್ಶ ಕೃಷಿಕರು ಎನ್ನುವುದನ್ನು ತೋರಿಸುತ್ತದೆ. ಇವರ ಮಾದರಿಯಿಂದ ಪ್ರಭಾವಿತರಾಗಿ ಗ್ರಾಮದ ಹಲವರು ಪ್ರಗತಿಪರ ರೈತರಾಗಿ ಹೊರಹೊಮ್ಮಿದ್ದಾರೆ.

ಡಾ. ಇನಾಮದಾರರ ದೈವಭಕ್ತಿ

ವೈದ್ಯ ಇನಾಮದಾರರು ದೈವಭಕ್ತಿಯಲ್ಲಿ ಆಸ್ತಿಕ ಸ್ವಭಾವದವರು. ಮಂತ್ರಾಲಯದ ರಾಘವೇಂದ್ರ ಗುರುಗಳ ಭಕ್ತರು. ಬೇಕೆನಿಸಿದಾಗ ಮಂತ್ರಾಲಯಕ್ಕೆ, ತಿರುಪತಿಗೆ, ಉಡುಪಿ ಶ್ರೀಕೃಷ್ಣ ಸೇರಿದಂತೆ ಹಲವಾರು ಪುಣ್ಯಕ್ಷೇತ್ರಗಳಿಗೆ ಆಗಾಗ ಹೋಗಿ ಬರುವ ಪರಂಪರೆ ಇಟ್ಟುಕೊಂಡಿದ್ದಾರೆ. ಸೊರಟೂರ ಸರಹದ್ದಿನಲ್ಲಿರುವ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ಅವರ ದೈನಂದಿನ ದರ್ಶನದ ಕ್ಷೇತ್ರ. ಅದರ ಜೊತೆಯಲ್ಲಿ ಈಗ ಸೊರಟೂರಿನ ಗಾಂಧಿ ಬಯಲಿನಲ್ಲಿರುವ ಶ್ರೀ. ವೆಂಕಟೇಶ್ವರ ದೇವಸ್ಥಾನ ಜೀರ್ಣೋದ್ಧಾರಗೊಳಿಸಿ ಗೋಪುರ ನಿರ್ಮಿಸಿದ್ದಾರೆ. ಮನೆಯಲ್ಲಿ ಆರಾಧನಾ ಮಹೋತ್ಸವವನ್ನು ಪ್ರತಿವರ್ಷ ಆಸ್ಥೆಯಿಂದ ನೆರವೇರಿಸುತ್ತಾರೆ. ಗ್ರಾಮದಲ್ಲಿರುವ ಎಲ್ಲಾ ದೇವಾಲಯಗಳ ಧಾರ್ಮಿಕ ಆಚರಣೆ, ಜಾತ್ರೆ, ಉತ್ಸವ, ಜೀರ್ಣೋದ್ಧರದಂತಹ ಕಾರ್ಯಗಳಲ್ಲಿ ಇವರ ಸೇವೆ ಗಣನೀಯ ವಾಗಿರುತ್ತದೆ. ಡಾಕ್ಟರ್ ಇನಾಮದಾರರ ಭಕ್ತಿ ಢಾಂಬಿಕ ಭಕ್ತಿಯಲ್ಲ; ಶ್ರದ್ಧಾ ಭಕ್ತಿ ಎಂಬುದು ಹಲವಾರು ಸಂದರ್ಭದಲ್ಲಿ ತಿಳಿದಿದೆ. ಗ್ರಾಮದ ಯಲ್ಲಪ್ಪ ಮಲ್ಲಾರಿಯವರು ತಮಗಾದ ಅನುಭವವನ್ನು ಹೀಗೆ ಹೇಳುತ್ತಾರೆ. ಯಲ್ಲಪ್ಪ ಮಲ್ಲಾರಿಯವರು ಶ್ರೀಗುರು ಮಲ್ಲಜ್ಜನವರ ದರ್ಶನಕ್ಕಾಗಿ ಶ್ರೀಕ್ಷೇತ್ರ ಸಂಬಾಪೂರಕ್ಕೆ ಹೊರಟಿದ್ದರಂತೆ. ಮಾರ್ಗ ಮಧ್ಯದಲ್ಲಿ ವೈದ್ಯ ಇನಾಮದಾರರು ಯಲ್ಲಪ್ಪನವರನ್ನು ಕಂಡು ಎಲ್ಲಿಗೆ ಹೊರಟಿದ್ದೀರಿ ಎಂದರಂತೆ. ಅವರು ಸಂಬಾಪೂರಕ್ಕೆ ಹೊರಟಿರುವುದಾಗಿ ಹೇಳಿದರು. ಆಗ ಡಾ. ಬಿ. ಆರ್. ಇನಾಮದಾರರು ಶ್ರೀಗುರು ಮಲ್ಲಜ್ಜನವರಿಗೆ ನನ್ನ ಪ್ರಣಾಮಗಳು ಎಂದು ಹೇಳಿದರಂತೆ, ಯಲ್ಲಪ್ಪ ನಂತರ ಕಾಲ್ನಡಿಗೆಯನ್ನು ಮುಂದುವರೆಸಿ ಮಠಕ್ಕೆ ಹೋದಾಗ ಶ್ರೀಗುರು ಮಲ್ಲಜ್ಜನವರು ಯಲ್ಲಪ್ಪನನ್ನು ಕರೆದು ಡಾ. ಇನಾಮದಾರ ಅವರ ನಮಸ್ಕಾರ ನನಗೆ ಬಂದು ಮುಟ್ಟಿತು ಎಂದು ಹೇಳಿದರಂತೆ. ಇದು ಡಾ. ಇನಾಮದಾರ ಅವರ ಭಕ್ತಿ ಹಾಗೂ ಶ್ರೀ ಗುರು ಮಲ್ಲಜ್ಜನವರ ಪವಾಡವನ್ನು ತಿಳಿಸುತ್ತದೆ. ಹೀಗೆ ವೈದ್ಯ ಇನಾಮದಾರರು ಭಕ್ತಿಯಲ್ಲಿ ಶ್ರದ್ಧೆ ಇಟ್ಟುಕೊಂಡವರಾಗಿದ್ದಾರೆ.

ಡಾ. ಇನಾಮದಾರರ ವ್ಯಕ್ತಿತ್ವ ಮತ್ತು ಗ್ರಾಮದ ಅಭ್ಯುದಯ

'ವ್ಯಕ್ತಿಗೆ ಒಂದು ಮುಖ ವ್ಯಕ್ತಿತ್ವಕ್ಕೆ ಹಲವು ಮುಖ' ಎನ್ನುವಂತೆ ಡಾ. ಇನಾಮದಾರರು ದೂರದೃಷ್ಟಿಯುಳ್ಳ ಕ್ರಿಯಾಶೀಲ ಗುಣಸಂಪನ್ನರು ಅವರನ್ನು ಬಹುಹತ್ತಿರದಿಂದ ಕಂಡ ಗದಗ

ಕ್ಷೇತ್ರದ ಮಾಜಿ ಶಾಸಕರಾದ ಶ್ರೀ. ಡಿ.ಆರ್. ಪಾಟೀಲರು ಡಾ. ಅವರನ್ನು ಅಜಾತ ಶತ್ರುಗಳೆಂದೇ ಕರೆಯುತ್ತಾರೆ. ಸಹಕಾರಿ ಕೃಷಿ ಗ್ರಾಮೀಣ ಅಭಿವೃದ್ಧಿಯ ಕ್ಷೇತ್ರದಲ್ಲಿ ತಮ್ಮದೇಯಾದ ವಿಶಿಷ್ಟ ಛಾಪು ಮೂಡಿಸಿದ ಡಿ.ಆರ್. ಪಾಟೀಲ್ ಅವರ ಚುನಾವಣಾ ರಾಜಕೀಯ ಪ್ರಾರಂಭವಾಗಿದ್ದು, ಸೊರಟೂರ ಗ್ರಾಮದಿಂದಲೇ ಅಂದರೆ ೧೯೮೫ರಲ್ಲಿ ಸೊರಟೂರ ಜಿಲ್ಲಾ ಪರಿಷತ್ ಮತಕ್ಷೇತ್ರದಿಂದ ಧಾರವಾಡ ಜಿಲ್ಲಾ ಪಂಚಾಯತಿಗೆ ಆಯ್ಕೆಯಾದರು. ಅಂದರೆ ಸೊರಟೂರ ಗ್ರಾಮದ ಜನಪ್ರತಿನಿಧಿಯಾಗಿ ಗ್ರಾಮವನ್ನು ಹಾಗೂ ಡಾ. ಇನಾಮದಾರರನ್ನು ಬಹು ಹತ್ತಿರದಿಂದ ಕಂಡವರು. ಡಾ. ಇನಾಮದಾರರ ವ್ಯಕ್ತಿತ್ವವೇ ಸೊರಟೂರ ಗ್ರಾಮದ ಅಭಿವೃದ್ಧಿಯ ಮಾರ್ಗ ಎಂಬುದನ್ನು ಅವರು ಈ ರೀತಿಯಾಗಿ ವಿವರಿಸಿದ್ದಾರೆ.

> ಹುಲ್ಲಾಗು ಬೆಟ್ಟದಡಿ; ಮನೆಗೆ ಮಲ್ಲಿಗೆಯಾಗು
> ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
> ಬೆಲ್ಲ-ಸಕ್ಕರೆಯಾಗು ದೀನ ದುರ್ಬಲರಿಂಗೆ
> ಎಲ್ಲರೊಳಗೊಂದಾಗು - ಮಂಕುತಿಮ್ಮ.

ಕನ್ನಡದ ದಾರ್ಶನಿಕ ಕವಿ, ಚಿಂತಕ, ದಿವಂಗತ ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗದ ಈ ನಾಲ್ಕು ಸಾಲುಗಳು ನಮ್ಮ ಡಾ. ಬಿ.ಆರ್. ಇನಾಮದಾರ ಅವರನ್ನು ನೋಡಿ ಬರೆದಿದ್ದಾರೇನೋ ಎಂಬ ಭಾವನೆ ಉಂಟಾಗುತ್ತದೆ. ಈ ನಾಲ್ಕು ಸಾಲುಗಳನ್ನು ಅರ್ಥ ಮಾಡಿಕೊಂಡರೆ, ತಿಳಿದುಕೊಂಡರೆ ಸಾಕು; ನಾವು ಡಾ. ಇನಾಮದಾರರನ್ನು ಅರ್ಥ ಮಾಡಿಕೊಂಡಂತೆ, ತಿಳಿದುಕೊಂಡಂತೆಯೇ ಸರಿ.

ಹುಲ್ಲಾಗು ಬೆಟ್ಟದಡಿ ಅಂದರೇನು? ಬೆಟ್ಟಗಳ ಬಗ್ಗೆ ನಮಗೆ ಪೂರ್ವಕಾಲದಿಂದಲೂ ಪೂಜ್ಯ ಭಾವವಿದೆ. ಬೆಟ್ಟಗಳಲ್ಲಿ ದೇವರು ವಾಸವಾಗಿದ್ದಾರೆಂದೇ ನಮ್ಮ ಭಾವನೆ. ಹಿಮಾಲಯದ ಕೈಲಾಸ ಪರ್ವತದಲ್ಲಿ ಪರಮೇಶ್ವರ ನೆಲೆಸಿದ್ದಾನೆಂದೇ ನಮ್ಮ ನಂಬಿಕೆ. ಅದೇ ರೀತಿ ಯಾವುದೇ ಗುಡ್ಡ ಬೆಟ್ಟ ತೆಗೆದುಕೊಳ್ಳಿ ಅದು ದೇವರ ವಾಸಸ್ಥಾನವಾಗಿದೆ. ಇಂತಹ ಬೆಟ್ಟದಡಿಯ ಹುಲ್ಲಾಗುವುದೆಂದರೆ ಶಂಕರನ ಬಳಿ ಕೈಂಕರ್ಯದಿಂದ ಕಿಂಕರನಾಗಿರುವುದಲ್ಲವೇ? ಹಿರಿಯರ ಬಳಿ ಸಣ್ಣವನಾಗಿರುವುದಲ್ಲವೆ? ನಮ್ಮ ಡಾ. ಇನಾಮದಾರ ಅವರು ಸಹ ಯಾವಾಗಲೂ ಪೂಜ್ಯರ ಬಗ್ಗೆ ಅಪಾರ ಗೌರವ ಹೊಂದಿರುವವರು. ಅವರ ಬಳಿ ಕಿಂಕರರಾಗಿದ್ದವರು. ಅದಕ್ಕಾಗಿಯೇ ಇಷ್ಟು ಬೆಳೆದಿದ್ದಾರೆ, ಜನರ ಹೃದಯದಲ್ಲಿ ಸ್ಥಾನ ಪಡೆದಿದ್ದಾರೆ.

ಅಪಾರ ಪ್ರೀತಿ

ಬೆಟ್ಟ ಅಚಲವಾದುದು, ನಿತ್ಯ ಸತ್ಯವಾದುದು. ಈ ಬೆಟ್ಟದ ಮೇಲೆ ಗಾಳಿಯೂ ಬಹಳ. ಅಲ್ಲಿ ಬೀಸುವ ಗಾಳಿಗೆ ದೊಡ್ಡ ದೊಡ್ಡ ಮರಗಳು ಉರುಳಿ ಬೀಳಬಹುದು. ಆದರೆ ಹುಲ್ಲಿಗೇನಾಗಲು ಸಾಧ್ಯ? ದೊಡ್ಡವರ ಬಳಿ ಸಣ್ಣವನಾಗಿದ್ದರೆ ಸಾಕು, ಸುರಕ್ಷಿತವಾಗಿರಲು. ನಮ್ಮ ಡಾ. ಇನಾಮದಾರ ಅವರು ತಾವು ನಂಬಿದ ಬೆಟ್ಟದಂತಹ ವ್ಯಕ್ತಿತ್ವದ ನನ್ನ ಚಿಕ್ಕಪ್ಪ ದಿ. ಕೆ.ಎಚ್. ಪಾಟೀಲರ ಬಳಿ ನಡೆದುಕೊಂಡದ್ದು ಈ ರೀತಿ. ಅದಕ್ಕಾಗಿಯೇ ಇರಬೇಕು ನನ್ನ ಚಿಕ್ಕಪ್ಪನವರಿಗೆ ಡಾಕ್ಟರರ ಮೇಲೆ ಅಪಾರ ಪ್ರೀತಿ.

ಬೆಟ್ಟ ಎಲ್ಲರಿಗೂ ಆಶ್ರಯ ನೀಡುತ್ತದೆ. ಪಶು-ಪಕ್ಷಿಗಳು ಅಲ್ಲಿ ನಿಶ್ಚಿಂತೆಯಿಂದ ಬದುಕುತ್ತವೆ. ದನಕರುಗಳು ಅಲ್ಲಿಗೆ ಹೋಗಿ ಮೇಯ್ದು ಆನಂದಪಡುತ್ತವೆ. ಬೆಟ್ಟದ ಬಳಿಯ ಹುಲ್ಲಾಗಿ ಅಲ್ಲಿಗೆ ಬರುವ ಸಸ್ಯಾಹಾರಿ ಪ್ರಾಣಿಗಳಿಗೆ ಆಹಾರವಾಗುವುದೆಂದರೆ ಎಂತಹ ಸೌಭಾಗ್ಯವಲ್ಲವೇ? ನಮ್ಮ ಡಾಕ್ಟರ ಇನಾಮದಾರ ಅವರು ತಮ್ಮಲ್ಲಿಗೆ ಬರುವ ಎಲ್ಲರಿಗೂ ಆನಂದ ನೀಡುತ್ತಾರೆ. ಬಡವ ಬಲ್ಲಿದ ಎಂಬ ಭೇದ-ಭಾವ ಇಲ್ಲ. ಬೆಟ್ಟದ ಬಳಿಯ ಹುಲ್ಲು ತನಗೆ ಆಕಳು ಮಾತ್ರ ತಿನ್ನಲಿ ಎಮ್ಮೆ ಮುಟ್ಟದಿರಲಿ ಎಂದು ಹೇಳುವುದೇ, ಜಿಂಕೆ ಕೃಷ್ಣಮೃಗ ಮಾತ್ರ ತನ್ನ ಬಳಿ ಮಲಗಲಿ, ಕತ್ತೆ ಆನೆ ಸುಳಿಯದಿರಲಿ ಎನ್ನುವುದೇ ಇಲ್ಲ. ಯಾರೇ ಬರಲಿ, ತನ್ನನ್ನು ತಿಂದು ಆನಂದದಿಂದಿರಲಿ ಎಂದು ಹೇಳುವುದು ಹುಲ್ಲಿನ ಧರ್ಮ. ಅದೇ ರೀತಿ ಡಾಕ್ಟರರ ಬಳಿ ಕಲಿತವರು, ಕಲಿಯದವರು, ಶ್ರೀಮಂತರು, ಬಡವರು, ಹಳ್ಳಿಗರು, ಪಟ್ಟಣದವರು, ಮುಂದುವರೆದವರು, ಹಿಂದುಳಿದವರು ಭಿನ್ನ ಭಿನ್ನ ವರ್ಗಗಳ ಜನ ಬರುತ್ತಾರೆ. ಡಾಕ್ಟರರು ಮಾತ್ರ ಎಲ್ಲರಲ್ಲಿ ಒಂದೇ ದೃಷ್ಟಿ, ಒಂದೇ ಪ್ರೇಮ, ಒಂದೇ ಅನುಕಂಪ, ಒಂದೇ ಪ್ರೀತಿ. ಡಾಕ್ಟರರ ಈ ಸಮನ್ವಯ ದೃಷ್ಟಿಯೇ ಡಾಕ್ಟರರನ್ನು ಅಜಾತಶತ್ರುವನ್ನಾಗಿ ಮಾಡಿದೆ.

ಡಿ.ವ್ಹಿ. ಜಿಯವರು 'ಮನೆಗೆ ಮಲ್ಲಿಗೆಯಾಗು' ಅಂದಿದ್ದಾರೆ. ಮಲ್ಲಿಗೆ ಅಂದರೆ ಪರಿಮಳ. ಪರಿಮಳ ಅಂದರೆ ಸಂತೋಷ; ಆಹ್ಲಾದಕತೆ. ನಮ್ಮ ಡಾಕ್ಟರರು ಪರಿಮಳದಂತೆ. ಪರಿಮಳ ಹಚ್ಚಿಕೊಂಡರೆ ಸಾಕು ಅದು ತನ್ನ ಸುವಾಸನೆ ಹರಡುತ್ತದೆ. ಭೇದ-ಭಾವ ಮಾಡುವುದಿಲ್ಲವದು. ಯುವಕ-ಯುವತಿಯರಿಗೆ, ಮುದುಕ-ಮುದುಕಿಯರಿಗೆ ಯಾವುದೇ ತಾರತಮ್ಯ ಮಾಡದೆ ಪರಿಮಳ ತನ್ನ ಸ್ವಭಾವದಿಂದ ಸುವಾಸನೆ ಹರಡುತ್ತದೆ. ನಮ್ಮ ಡಾ. ಇನಾಮದಾರ ಪರಿಮಳ ಇದ್ದಂತೆ. ಇವರು ತಮ್ಮ ಪರಿಸರದಲ್ಲಿ ತಾರತಮ್ಯ ಕಂಡವರೇ ಅಲ್ಲ. ಎಲ್ಲರಲ್ಲಿ ಅಷ್ಟೇ ಪ್ರೇಮ, ಪ್ರೀತಿ. ಮಲ್ಲಿಗೆ ಇದ್ದಲ್ಲಿ ಸುವಾಸನೆ ಎಷ್ಟು ಸಹಜವೋ ನಮ್ಮ ಡಾ. ಇನಾಮದಾರ ಅವರು ಇದ್ದಲ್ಲಿ ಸಂತೋಷ, ಆನಂದ ಅಷ್ಟೇ ಸಹಜ. ಎಲ್ಲರನ್ನೂ ಅವರು ಮಾತನಾಡಿಸುವ ರೀತಿ ಹೃದಯದಿಂದ ನೋಡಿ ಹೃದಯ ಸ್ಪರ್ಶಿಯಾಗುವಂತೆ ನಡೆದುಕೊಳ್ಳುವ ಅವರ ವಿಧಾನ ಅವಿಸ್ಮರಣೀಯ!

ಅನುಕರಣೀಯ

ಮಲ್ಲಿಗೆ ಸೌಭಾಗ್ಯದ ಸಂಕೇತ. ಮುತ್ತೈದೆ ಮಲ್ಲಿಗೆ ಮುಡಿದರೆ ಅದರ ಅಂದವೇ ಅಂದ, ಚಂದವೇ ಚಂದ. ಮನೆಗೆ ಮಲ್ಲಿಗೆಯಾಗುವುದೆಂದರೆ ಮನೆಯ ಸಂತೋಷಕ್ಕೆ ಕಾರಣವಾಗುವುದು. ಮನೆಯ ಸೌಭಾಗ್ಯಕ್ಕೆ ಕಾರಣವಾಗುವುದು. ಮಲ್ಲಿಗೆ ಅಂದರೆ ಶುಭ್ರತೆಯ ಪ್ರತೀಕ. ಶುಭ್ರತೆ ಅಂದರೆ ಸತ್ಯದ ಪ್ರತೀಕ. ಸತ್ಯವೇ ದೇವರು. ಮನೆಗೆ ಮಲ್ಲಿಗೆಯಾಗುವುದೆಂದರೆ ಮನೆಯಲ್ಲಿ ಸತ್ಯವನ್ನು ನೆಲೆಸುವಂತೆ ಮಾಡುವುದು. ಮನೆಯಲ್ಲಿ ಎಲ್ಲವೂ ಶುಭ್ರವಾಗಿ, ಚೊಕ್ಕವಾಗಿರುವಂತೆ ಮಾಡುವುದು. ಎಲ್ಲಿ ನ್ಯಾಯವಿದೆಯೇ, ಎಲ್ಲಿ ಸ್ತ್ರೀಯರಿಗೆ ಪೂಜ್ಯತೆ ಇದೆಯೇ, ಎಲ್ಲಿ ಧರ್ಮ ಆಚರಿಸಲ್ಪಡುವುದೋ ಅಲ್ಲಿ ಭಗವಂತ ನೆಲೆಸುತ್ತಾನೆಂದು ಧರ್ಮ ಹೇಳುತ್ತದೆ. ನಮ್ಮ ಡಾ. ಇನಾಮದಾರ ಅವರು ತಮ್ಮ ಆಚರಣೆಯಿಂದ ನೈಜವಾದ ಅರ್ಥದಲ್ಲಿ ಮನೆಗೆ ಮಲ್ಲಿಗೆಯಾಗಿದ್ದಾರೆ. ಪತಿಯಾಗಿ ಪತ್ನಿಯ ಹೃದಯಮಂದಿರದಲ್ಲಿ ಪ್ರತಿಷ್ಠಾಪಿತರಾಗಿದ್ದಾರೆ.

ತಂದೆಯಾಗಿ ಮಕ್ಕಳ ಮನದಲ್ಲಿ ನಿಂತಿದ್ದಾರೆ. ಒಬ್ಬ ಯಜಮಾನನಾಗಿ ಎಲ್ಲರ ಪ್ರೀತಿಗೆ, ಗೌರವಕ್ಕೆ ಪಾತ್ರರಾಗಿದ್ದಾರೆ. ಗೃಹಸ್ಥ ಇದಕ್ಕಿಂತ ಹೆಚ್ಚಿನ ಸಾಧನೆ ಏನು ಮಾಡಲು ಸಾಧ್ಯ? ಡಾ. ಇನಾಮದಾರ ಒಬ್ಬ ಶ್ರೇಷ್ಠ ಗೃಹಸ್ಥರಾಗಿದ್ದಾರೆ. ಆದರ್ಶ ಪತಿ, ಆದರ್ಶ ತಂದೆ, ಆದರ್ಶ ಯಜಮಾನರಾಗಿ ಅವರು ಮಾಡಿರುವ ಸಾಧನೆ ಪ್ರತಿಯೊಬ್ಬ ಗೃಹಸ್ಥನಿಗೆ ಅನುಕರಣೀಯವಾಗಿದೆ.

ಜೀವನದಲ್ಲಿ ಸುಖ-ದು:ಖ ಬರುತ್ತವೆ. ಜೀವಸದಲ್ಲಿ ಸುಖ-ದು:ಖಗಳು ಹಗಲು-ರಾತ್ರಿ ಇದ್ದಂತೆ, ಬೆಳಕು-ಕತ್ತಲೆ ಇದ್ದಂತೆ. ಅವು ಬರುತ್ತವೆ, ಆದರೆ ಅದಕ್ಕೆ ಅಂಜಿ ಬದುಕಬಾರದು. ಅವುಗಳನ್ನು ಧೈರ್ಯದಿಂದ ಸ್ವೀಕರಿಸಬೇಕು. "ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ" ಎಂದು ಡಿ.ವ್ಹಿ.ಜಿ. ಹೇಳಿದ್ದು ಆ ದೃಷ್ಟಿಯಿಂದ. ನಮ್ಮ ಡಾ. ಇನಾಮದಾರರವರ ಜೀವನದಲ್ಲಿ ಕಷ್ಟದ ಛಾಯೆ ಕಡಿಮೆ. ಆದರೂ ವ್ಯಕ್ತಿಗೆ ಕಷ್ಟಗಳ ಅರಿವೇ ಇಲ್ಲ ಎಂದು ಹೇಳುವುದು ತಪ್ಪಾಗುತ್ತದೆ. ಡಾಕ್ಟರರು ಮಾತ್ರ ಸ್ಥಿತಪ್ರಜ್ಞರಂತೆ ಸುಖ-ದು:ಖಗಳ, ಜಯಾಪಜಯಗಳ ಪ್ರಭಾವಕ್ಕೊಳಗಾಗಿಲ್ಲ. ಕೌಟುಂಬಿಕ ದು:ಖಗಳನ್ನು ಸಹಿಸಿದ್ದಾರೆ. ಅದೇ ರೀತಿ ಅವರ ಸಾರ್ವಜನಿಕ ಜೀವನದಲ್ಲಿ ಒಮ್ಮೆ ಸೋಲಾದಾಗ ಅದನ್ನು ಸಹ ಅವರು ನಕ್ಕು ಮರೆತು ಬಿಟ್ಟಿದ್ದಾರೆ. ಡಾ. ಇನಾಮದಾರ ಅವರು ಪಾಷಾಣ ಹೃದಯಿ ಅಲ್ಲ ನಿಜ, ಆದರೆ ತಮ್ಮ ದು:ಖವನ್ನು ತೋರಿಸಿಕೊಟ್ಟವರೂ ಅಲ್ಲ. ಏನೇ ಬರಲಿ, ಭಗವಂತನ ದಯೆ ಒಂದಿರಲಿ ಎಂದು ಹೇಳುತ್ತಾರೆ.

ಆಶಾಕಿರಣ

ನಿನಗೆ ಬರುವ ಸುಖ-ದು:ಖಗಳಿಗೆ ಕಲ್ಲಾಗಿ ನಿನ್ನ ಬಳಿ ಬರುವವರಿಗೆ, ದೀನ ದುರ್ಬಲರಿಂಗೆ ಬೆಲ್ಲ ಸಕ್ಕರೆಯಾಗು ಎಂದು ಡಿ.ವ್ಹಿ.ಜಿ. ಹೇಳುತ್ತಾರೆ. ನಮ್ಮ ಡಾಕ್ಟರ ಇನಾಮದಾರ ಅದನ್ನು ಅಕ್ಷರಶ: ಪಾಲಿಸಿದ್ದಾರೆಂದರೆ ತಪ್ಪಾಗದು. ಡಾಕ್ಟರ್‌ರ ಬಳಿ ಬರುವವರಾರು? ರೋಗಿಗಳು, ಕಷ್ಟದಲ್ಲಿರುವವರು, ಅದರಲ್ಲಿಯೂ ಡಾಕ್ಟರ್ ಇನಾಮದಾರರು ಪಾರ್ಶ್ವವಾಯು ಪೀಡಿತರ ಆಶಾಕಿರಣ. ದೇಹದ ಮೇಲೆ ಬುದ್ಧಿಯ ಮನಸ್ಸಿನ ಹಿಡಿತ ಕಳೆದುಕೊಂಡ ರೋಗಿಗಳೇ ಅಧಿಕ. ಗ್ರಾಮಾಂತರ ಪ್ರದೇಶದಲ್ಲಿ ಡಾಕ್ಟರ ಇನಾಮದಾರ ಇರುವುದರಿಂದ ಬಡವರೇ ಬರುವುದು ಅಧಿಕ. ದೀನರು, ದಲಿತರು, ಬಡವರು ಡಾಕ್ಟರರ ಬಳಿ ಬರುತ್ತಾರೆ. ಅವರಿಗೆಲ್ಲ ಡಾಕ್ಟರರು ಬೆಲ್ಲ ಸಕ್ಕರೆಯಾಗಿದ್ದಾರೆ. ಬೆಲ್ಲ ಸಕ್ಕರೆ ಬಾಯಿಯಲ್ಲಿ ಹಾಕಿಕೊಂಡರೆ ಸಾಕು ಆನಂದವಾಗುತ್ತದೆ. ಮುಖ ಅರಳುತ್ತದೆ. ಬಾಯಿ ಚಪ್ಪರಿಸುತ್ತದೆ. ಅದೇ ರೀತಿ ಡಾ. ಇನಾಮದಾರ ಮುಟ್ಟಿದರೆ ಸಾಕು ರೋಗಿಯ ಮುಖ ಅರಳುತ್ತದೆ. ರೋಗಿಯ ಜೊತೆ ಬಂದವರಿಗೆಲ್ಲ ಆನಂದವಾಗುತ್ತದೆ. ತಮ್ಮ ರೋಗ ಮುಕ್ತಿಯಾಗುವುದೆಂಬ ವಿಶ್ವಾಸ ರೋಗಿಯಲ್ಲಿ ಮೂಡುತ್ತದೆ.

ಬೆಲ್ಲ ಸಕ್ಕರೆಯಾಗುವುದೆಂದರೆ ಇನ್ನೊಂದು ಅರ್ಥದಲ್ಲಿ ಎಲ್ಲರಿಗೆ ಬೇಕಾಗುವುದು. ಬೆಲ್ಲ ಸಕ್ಕರೆ ಯಾರಿಗೆ ಬೇಡ, ಇದು ಎಲ್ಲರಿಗೂ ಬೇಕು. ಆಬಾಲ ವೃದ್ಧರಿಗೆ ಇದು ಹಿಡಿಸುತ್ತದೆ. ಎಲ್ಲರ ಮನೆಯಲ್ಲಿಯೂ ಬೆಲ್ಲ ಸಕ್ಕರೆ ಬೇಕು. ಜೋಪಡಿಯಿಂದ ಮಹಡಿಯವರೆಗೆ ಬಾಯಿಯಲ್ಲಿ ಹಲ್ಲಿಲ್ಲದ ಹಸುಳೆಯಿಂದ ಬೊಚ್ಚಬಾಯಿಯ ಮುದುಕನವರೆಗೆ ಎಲ್ಲರಿಗೂ ಎಲ್ಲೆಡೆಬೇಕು ಬೆಲ್ಲ-ಸಕ್ಕರೆ ಅಲ್ಲವೇ? ಅದೇ ರೀತಿ ನಮ್ಮ ಡಾಕ್ಟರ ಇನಾಮದಾರ ಎಲ್ಲರಿಗೂ ಬೇಕು. ಎಲ್ಲೆಡೆ

ಬೇಕು. ಅದರಲ್ಲಿಯೂ ವಿಶೇಷವಾಗಿ ಬಡವರಿಗೆ, ದು:ಖಿತರಿಗೆ, ಕಷ್ಟದಲ್ಲಿರುವವರಿಗೆ, ರೋಗಿಗಳಿಗೆ ನಮ್ಮ ಡಾಕ್ಟರ ಇನಾಮದಾರ ಬೆಲ್ಲ ಸಕ್ಕರೆಯಾಗಿದ್ದಾರೆ.

ಖ್ಯಾತರಾಗಿದ್ದಾರೆ

ಡಿ.ವ್ಹಿ.ಜಿ. ಯವರು ಇನ್ನೊಂದು ಮಾತು ಹೇಳಿದ್ದಾರೆ. "ಎಲ್ಲರೊಳಗೊಂದಾಗು" ಎಲ್ಲರೊಳಗೊಂದಾಗುವುದು ಹೇಗೆ? ಸಾಮಾನ್ಯವಾಗಿ ನಾವೆಲ್ಲ ನಾನೊಬ್ಬನೆ-ಅಂದರೆ ನಾನು ಅಂಥವನು-ಇಂಥವನು, ಹಾಗೆ-ಹೀಗೆ ಎಂದು ಆತ್ಮರತಿಯಲ್ಲಿ ಮುಳುಗಿರುತ್ತೇವೆ. ನಾನು ಯಾರೂ ಅಲ್ಲ ಎಂಬ ಸ್ಥಿತಿಗೆ ತಲುಪಬೇಕಾದರೆ ಆತ್ಮ-ದೇಹಸಂಬಂಧಗಳು ಮುಂತಾದವನ್ನು ಅರಿತುಕೊಂಡು ಆಧ್ಯಾತ್ಮದ ಮಾರ್ಗದಲ್ಲಿ ಮುಂದುವರೆದರೆ ಅವನು ಎಲ್ಲರೊಳಗೊಂದಾಗುತ್ತಾನೆ. ಎಲ್ಲರಲ್ಲೂ ದೇವರನ್ನು ಕಾಣುತ್ತಾನೆ. ಎಲ್ಲರನ್ನೂ ಪ್ರೀತಿಸುತ್ತಾನೆ. ಆ ಆಧ್ಯಾತ್ಮ ಸ್ಥಿತಿಯನ್ನು ನಮ್ಮ ಡಾ. ಇನಾಮದಾರ ತಲುಪಿದ್ದಾರೆಂದೇ ಇಂದು ಇಷ್ಟು ಖ್ಯಾತರಾಗಿದ್ದಾರೆ.

ಎಲ್ಲರೊಳಗೊಂದಾಗು ಎಂದರೆ ಇನ್ನೊಂದು ಅರ್ಥದಲ್ಲಿ ಎಲ್ಲ ಭೇದ-ಭಾವಗಳನ್ನು ಅಳಿಸಿ ಹಾಕಿ ಎಲ್ಲರಲ್ಲಿ ಸಮರಸಗೊಳ್ಳುವುದು. ನೈಜವಾದ ಅರ್ಥದಲ್ಲಿ ಸೇವಾ ಕೈಂಕರ್ಯದಲ್ಲಿ ಅರ್ಪಿತರಾದವರು ಮಾತ್ರ ಎಲ್ಲರೊಳಗೊಂದಾಗಲು ಸಾಧ್ಯ. ಡಾ. ಇನಾಮದಾರರ ಸೇವಾ ಭಾವವೇ ಅಂತಹದು. ಅವರು ತಮ್ಮಲ್ಲಿಗೆ ಬರುವವರ ಬೇಧ-ಭಾವ ಅಳಿಸಿ ಎಲ್ಲರಲ್ಲಿ ಒಂದಾಗಿದ್ದಾರೆ. ಎಲ್ಲರಲ್ಲಿ ಸಮರಸಗೊಂಡಿದ್ದಾರೆ.

ಸದ್ಭಾವನೆ

ನನಗೆ ಹಾಗೂ ಡಾ. ಇನಾಮದಾರ ಅವರಿಗೆ ಸ್ನೇಹ ಗಾಢವಾದದ್ದು ನಾನು ಸೊರಟೂರ ಭಾಗದಿಂದ ಧಾರವಾಡ ಜಿಲ್ಲಾ ಪರಿಷತ್ತಿಗೆ ಸ್ಪರ್ಧಿಸಿದಾಗ, ನನಗೆ ನಿಜವಾಗಿಯೂ ಜಿಲ್ಲಾ ಪರಿಷತ್ತಿಗೆ ಸ್ಪರ್ಧಿಸಲು ಮನಸ್ಸಿರಲಿಲ್ಲ. ಹುಲಕೋಟಿ ಮತಕ್ಷೇತ್ರವನ್ನು ಅಂದು ಅಧಿಕಾರದಲ್ಲಿದ್ದವರು ದುರುದ್ದೇಶದಿಂದ ಮೀಸಲು ಕ್ಷೇತ್ರ ಮಾಡಿದ್ದರು. ಅದೇ ನನಗೆ ವರವಾಯಿತು. ನಾನು ಸಹಕಾರ ಕ್ಷೇತ್ರದಲ್ಲಿ ಅಖಿಲ ಭಾರತ ಮಟ್ಟದ ಸಂಸ್ಥೆಗಳಲ್ಲಿ ಚುನಾಯಿತನಾಗಿದ್ದೆ. ಆದರೆ ನೇರ ಚುನಾವಣೆಗೆ ಹೊಸಬನಾಗಿದ್ದೆ. ಅದೇ ರೀತಿ ಸೊರಟೂರ ಮತ ಕ್ಷೇತ್ರಕ್ಕೂ ಹೊಸಬನಾಗಿದ್ದೆ. ಡಾಕ್ಟರ್ ಇನಾಮದಾರರು ಅಂದು ನನಗೆ ಧೈರ್ಯ ನೀಡಿದರು, ಬೆಂಬಲ ಹರಿಸಿದರು. ನನ್ನ ಹಾಗೂ ನನ್ನ ಚಿಕ್ಕಪ್ಪನವರ ಅಭಿಮಾನಗಳ ಬೆಂಬಲದ ಬಲದಿಂದ ನಾನು ಸೊರಟೂರ ಮತ ಕ್ಷೇತ್ರದಿಂದ ಧಾರವಾಡ ಜಿಲ್ಲಾ ಪಂಚಾಯತಿಗೆ ಆಯ್ಕೆಯಾದೆ. ಮುಂದೆ ಅಲ್ಲಿ ವಿರೋಧ ಪಕ್ಷದ ಧುರೀಣನಾಗಿ ಸೇವೆ ಸಲ್ಲಿಸುವ ಅವಕಾಶ ಪ್ರಾಪ್ತವಾಯಿತು. ಅಲ್ಲಿಂದ ಆರಂಭವಾದ ನಮ್ಮ ಮಧುರ ಸಂಬಂಧ ಘನಿಷ್ಠಗೊಳ್ಳುತ್ತ ಸಾಗಿದೆ. ಡಾಕ್ಟರರ ಜೊತೆಗಿನ ಪ್ರತಿ ಭೇಟಿ ನನ್ನನ್ನು ಮತ್ತೂ ಹೆಚ್ಚು ಸಮೀಪ ತಂದಿದೆ. ಅವರ ಬಗ್ಗೆ ನನ್ನಲ್ಲಿ ಗೌರವ ಭಾವನೆ ಹೆಚ್ಚಿಸಿದೆ. ಡಾಕ್ಟರರು ನಮ್ಮಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ರಾಜಕೀಯ ಸ್ಥಾನಮಾನಗಳಿಂದಲೂ ಅವರು ದೂರು. ಅವರಿಗೆ ಬೇಕಾಗಿರುವುದು ಪ್ರೀತಿ, ಪ್ರೇಮ, ಸದ್ಭಾವನೆಯೇ ಹೊರತು ಇನ್ನೇನು ಅಲ್ಲ.

ಡಾಕ್ಟರ್ ಇನಾಮದಾರ ಅವರು ಸೊರಟೂರಿಗೆ ಮಾತ್ರ ಸೇರಿದವರಲ್ಲ, ಇವರು ಗದುಗಿನ ಕೀರ್ತಿ ಕಿರೀಟಕ್ಕೆ ಗರಿ ಮೂಡಿಸಿದವರಲ್ಲಿ ಸೇರಿದ್ದಾರೆ. ಇಂದು ದೂರ ದೂರದಿಂದ ಜನ ಸೊರಟೂರಿಗೆ ಬರುತ್ತಾರೆ. ಡಾಕ್ಟರ್ ಇನಾಮದಾರ ಅವರ ಖ್ಯಾತಿ ಗದಗ ಜಿಲ್ಲೆಯ ಗಡಿ ದಾಟಿದೆ. ಉತ್ತರ ಕರ್ನಾಟಕ, ಹೈದ್ರಾಬಾದ ಕರ್ನಾಟಕ ಪ್ರದೇಶದಿಂದ ಜನ ಸೊರಟೂರಿಗೆ ಬರುತ್ತಾರೆ. ಸೊರಟೂರಿನ ಖ್ಯಾತಿ ಬಿತ್ತರಿಸಿರುವ ಡಾ. ಇನಾಮದಾರ ಜೊತೆಗೆ ಗದಗ ಜಿಲ್ಲೆಯ ಗೌರವ ಹೆಚ್ಚಿಸಿದ್ದಾರೆ.

ಡಾ. ಇನಾಮದಾರ ನಮ್ಮ ತಾಲೂಕಿನ ದೊಡ್ಡ ಆಸ್ತಿಯಾಗಿದ್ದಾರೆ ಅಜಾತಶತ್ರುವಾಗಿದ್ದಾರೆ. ನೊಂದವರ ಜೀವನಕ್ಕೆ ನೆಮ್ಮದಿ ಹರಿಸುವ ಚಿಲುಮೆಯಾಗಿದ್ದಾರೆ. ಡಾ. ಇನಾಮದಾರ ಶತಸಂವತ್ಸರ ಬಾಳಲಿ, ಅವರ ಬದುಕು ಇತರರಿಗೆ ಸದಾ ಸ್ಫೂರ್ತಿನೀಡಲಿ.

ಡಾ. ಇನಾಮದಾರರಿಗೆ ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ

ಡಾ. ಬಿ.ಆರ್. ಇನಾಮದಾರರ ಪಾರ್ಶ್ವವಾಯು ಚಿಕಿತ್ಸೆಯ ೪೦ ವರ್ಷಗಳ ಸುದೀರ್ಘ ಸೇವೆಯನ್ನು ಗುರುತಿಸಿ ೨೦೦೧ ನವೆಂಬರ್ ೧ ರಂದು ಕರ್ನಾಟಕ ಸರ್ಕಾರ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಅಂದಿನ ಸರ್ಕಾರದ ಮುಖ್ಯಮಂತ್ರಿಗಳಾದ ಎಸ್.ಎಮ್. ಕೃಷ್ಣ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಡಾ. ಇನಾಮದಾರರು ಕೇವಲ ಸೊರಟೂರಿನ ಕೀರ್ತಿ ಕಳಶವಲ್ಲ ಅವರು ಕರ್ನಾಟಕದ ಕೀರ್ತಿ ಕಳಸ ಎಂದು ತೋರಿಸಿಕೊಟ್ಟವರೇ ಎಚ್.ಕೆ. ಪಾಟೀಲ ರಚನಾತ್ಮಕ ಕೆಲಸಗಳಿಗೆ ಹೆಸರಾದ, ಪ್ರಾಮಾಣಿಕರನ್ನು, ಸೇವಾನಿಷ್ಠರನ್ನು ಗುರುತಿಸುವಲ್ಲಿ ನಿಪುಣರಾದ ಎಚ್.ಕೆ. ಪಾಟೀಲರು ಡಾ. ಇನಾಮದಾರರನ್ನು ಗುರುತಿಸುವ ಮೂಲಕ ಸೊರಟೂರಿಗೆ, ಗದಗ ಜಿಲ್ಲೆಗೆ ರಾಜ್ಯೋತ್ಸವ ಪ್ರಶಸ್ತಿ ತಂದುಕೊಟ್ಟ ಧೀಮಂತ ನಾಯಕರಾಗಿದ್ದಾರೆ. ಡಾ. ಇನಾಮದಾರರು ಒಬ್ಬ ವ್ಯಕ್ತಿಯಲ್ಲಾ ಅವರು ಒಂದು ಶಕ್ತಿ ಎಂಬುದನ್ನು ಶ್ರೀಮಾನ ಎಚ್.ಕೆ. ಪಾಟೀಲ ಸಾಹೇಬರು ಹೀಗೆ ಹೇಳಿದ್ದಾರೆ.

ಹಾಯಾಗಿರೆ, ಇಹದಿ ಹೇಮಕಾರಕ ವಿದ್ಯೆ;
ಪರದಲ್ಲಿ ಸುಖಿಸಲು ಬ್ರಹ್ಮ ವಿದ್ಯೆ
ಅನ್ಯ ವಿದ್ಯೆಯಲ್ಲ ಅಂತೆ ನಿಷ್ಫಲವದು
ವಿಶ್ವದಾಭಿರಾಮ – ಕೇಳು ವೇಮ.

ಮಹಾನ್‌ಯೋಗಿ, ಸಂತ, ಸರ್ವಜ್ಞ, ಸಮಾಜ–ಸುಧಾರಕ ಶ್ರೀ ವೇಮನರು ಇಹ ಲೋಕದಲ್ಲಿ ಹಾಯಾಗಿ ಸುಖದಿಂದಿರಲು ದ್ರವ್ಯ ಗಳಿಸಬೇಕು. ಸಂಪತ್ತು ಸಂಗ್ರಹಿಸಬೇಕು. ಆದರೆ ಈ ಸಂಪತ್ತಿನಿಂದ ದೊರೆಯುವ ಸುಖಕ್ಕೆ ಒಂದು ಮಿತಿಯುಂಟು. ಈ ಸಂಪತ್ತಿನ ದುರುಪಯೋಗ, ದುರ್ವಿನಿಯೋಗವಾದರೆ ಹಾನಿ ನಿಶ್ಚಿತ. ಪರಲೋಕದಲ್ಲಿ ಸುಖದಿಂದಿರಲು ಬ್ರಹ್ಮ ವಿದ್ಯೆ ಬೇಕು. ಅದಕ್ಕಾಗಿ ಅದನ್ನೇ ಗಳಿಸಬೇಕು. ಅದುವೇ ನಿಜವಾದ ಗಳಿಕೆ. ಅದನ್ನು ಬಿಟ್ಟು ಉಳಿದಗಳಿಕೆಯೆಲ್ಲ ನಿರುಪಯುಕ್ತ. ಬ್ರಹ್ಮವೇ ರಸವಾಗಿದ್ದಾನೆ. ರಸವನ್ನು ಪಡೆದು ಆನಂದವಾಗಿರಬಹುದು. ಸಗುಣ ಬ್ರಹ್ಮನ ಸಿದ್ಧಿಯೇ ಈಶ್ವರೀಯ ಸಿದ್ಧಿ. ಆದರೆ ಈ ಸಿದ್ಧಿಯ ಬಳಕೆ ಸ್ವಾರ್ಥ ಸಂಕಲ್ಪದಿಂದಾದರೆ

ಮನಸ್ಸು ಕೆಳಸ್ತರಕ್ಕೆ ಇಳಿಯುತ್ತದೆ. ಭಗವಂತನಗೆ ಸರ್ವಾರ್ಪಿತವಾದರೆ ಭಗವಂತನ ಸಾಧನವಾಗಿ ಲೋಕಕ್ಕೆ ನೆರವಾಗುತ್ತದೆ. ವೇಮನರ ಈ ಮಾತುಗಳು ನಮ್ಮ ಡಾಕ್ಟರ ಇನಾಮದಾರರಿಗೆ ಪೂರ್ಣವಾಗಿ ಅನ್ವಯಿಸುತ್ತವೆ.

ಡಾಕ್ಟರ ಹಾಗೂ ನನ್ನ ಮನೆತನದ ಸಂಬಂಧದ ಹಿಂದೆ ದೈವೀ ಪುರುಷರ ಕರುಣೆ ಇದೆ ಎಂದು ನನ್ನ ನಂಬುಗೆ. ಶ್ರೀ ಬ್ರಹ್ಮ ಚೈತನ್ಯ ಮಹಾರಾಜರು ಶ್ರೀ ಬ್ರಹ್ಮಾನಂದ ಮಹಾರಾಜರು ನನ್ನ ಮನೆತನದ ಹಿರಿಯರಿಗೆ ಹರಸಿ ಆಶೀರ್ವದಿಸಿದಂತೆ ಡಾಕ್ಟರರ ಮನೆತನಕ್ಕೂ ಅವರ ಆಶೀರ್ವಾದವಿದೆ. ಸೊರಟೂರಿಗೆ ಹೊಂದಿ ಇರುವ ವೆಂಕಟಾಪುರದ ಶ್ರೀ ವೆಂಕಟೇಶ್ವರ ಎರಡೂ ಮನೆಗಳಿಗೆ ಕುಲದೇವರು. ಡಾಕ್ಟರರು ಶ್ರೀ ರಾಮಚಂದ್ರನ ಅನನ್ಯ ಭಕ್ತರು. ಶ್ರೀರಾಮ ಡಾಕ್ಟರ ಮನೆಯ ಆದಿದೈವ. ನನ್ನ ಮನೆಯ ಹಿರಿಯರು ಗ್ರಾಮದಲ್ಲಿ ಶ್ರೀ ರಾಮ ಮಂದಿರ ಕಟ್ಟಿಸಿದವರು. ಶ್ರೀರಾಮ ನನ್ನ ಮನೆತನದ ಹಿರಿಯರ ಭಕ್ತಿಯ ಪ್ರತೀಕ. ಡಾಕ್ಟರ ಹಾಗೂ ನನ್ನ ಮನೆತನದ ಮಧ್ಯದ ಸಾಮ್ಯತೆಗಳನ್ನು ಹೀಗೆ ನೋಡುತ್ತ ಹೋದರೆ ಹುಲಕೋಟಿಯ ದ್ಯಾವನಗೌಡರ ಮನೆತನಕ್ಕೆ ವೈದ್ಯಕೀಯದ ನಂಟು. ನನ್ನ ಮುತ್ತಜ್ಜ ಹಳ್ಳಿಗರಿಗೆಲ್ಲ ಔಷಧಿ ಕೊಡುತ್ತಿದ್ದರು, ದಾಸೋಹ ನಿರಂತರವಾಗಿರುತ್ತಿತ್ತು. ಇಂದು ಡಾಕ್ಟರ ಇನಾಮದಾರರ ಮನೆಯಲ್ಲಿ ನಿತ್ಯ ದಾಸೋಹ ಹಾಗೂ ವೈದ್ಯಕೀಯ ಶುಶ್ರೂಷೆ ನಡೆದಿದೆ. ಈ ರೀತಿ ಹಳೆಯ ಸಾಮ್ಯತೆ ಹೊಸ ಹೋಲಿಕೆಗಳನ್ನು ಹೊಂದಿರುವ ಹುಲಕೋಟಿಯ ಗೌಡರು ಹಾಗೂ ಸೊರಟೂರ ಇನಾಮದಾರ ಮನೆತನಗಳು ಈಗಲೂ ಆ ಹಿಂದಿನ ಪ್ರೀತಿ ಕಳೆದುಕೊಂಡಿಲ್ಲ, ಉಳಿಸಿಕೊಂಡು ಹೆಚ್ಚಿಸಿಕೊಂಡಿವೆ.

ಡಾಕ್ಟರ ಇನಾಮದಾರರ ಒಡನಾಟ ಹಳೆಯದಾದರೂ ಅವರ ವೃತ್ತಿಯಿಂದಾಗಿ ಅವರಿಗೆ ಬಿಡುವು ಕಡಿಮೆ. ಸೊರಟೂರ ಬಿಟ್ಟು ಹೊರಬರುವುದು ಅಪರೂಪ. ನಮ್ಮನ್ನು ಆಗಾಗ ಕರೆಯಿಸಿಕೊಂಡು ಮೃಷ್ಟಾನ್ನ ಭೋಜನ ಮಾಡಿಸುವುದು, ಉಣಿಸಿ ಮೆರೆಸಿ ಆನಂದ ಪಡೆಯುವುದು ಅವರ ಸ್ವಭಾವ. ಇನ್ನೊಬ್ಬರಿಗೆ ತೊಂದರೆಕೊಟ್ಟು ಗೊತ್ತಿಲ್ಲ. ಇನ್ನೊಬ್ಬರಿಗೆ ಆನಂದ ಕೊಡುವುದರಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಡಾಕ್ಟರರ ಆದರಾತಿಥ್ಯ ಶಬ್ದಗಳಲ್ಲಿ ವರ್ಣಿಸಲು ಬಾರದು. ಅದು ಅನುಭವಿಸಿಯೇ ಅರಿಯುವಂತಹದು.

ಉದ್ಯೋಗಶೀಲತೆ

ಡಾಕ್ಟರ ಇನಾಮದಾರ ಅವರಿಗೆ ೮೭ ವರ್ಷ ವಯಸ್ಸಾಗಿದೆ ಎಂದರೆ ಯಾರಿಗಾದರೂ ಆಶ್ಚರ್ಯವಾಗುವುದು. ನೋಡಲು ೨೦ರ ಹರೆಯದ ಯುವಕರಂತೆ ಇರುವ ಡಾಕ್ಟರ ಲವಲವಿಕೆಯಲ್ಲಿಯೂ ಯುವಕರಾಗಿದ್ದಾರೆ. ಅವರ ಜೀವನೋತ್ಸಾಹ ಮೆಚ್ಚುವಂತಹದ್ದು. ಇಂದಿನ ನಮ್ಮಂತಹ ಯುವಕರು ನೋಡಿ ಕಲಿಯುವಂತಹದು. ಯಾವುದೇ ಕೆಲಸವಿರಲಿ ಮಗುವಿನಂತೆ ಓಡಾಡುವ ಡಾಕ್ಟರರ ಯಶಸ್ಸಿನ ಜೀವನಕ್ಕೆ ಅವರು ಜೀವನದಲ್ಲಿ ಪಾಲಿಸಿಕೊಂಡು ಬಂದಿರುವ ಶ್ರದ್ಧೆ, ಉದ್ಯೋಗಶೀಲತೆ, ನಿರ್ಭಯತೆ ಹಾಗೂ ಸಾತ್ವಿಕತೆಯೇ ಕಾರಣವೆಂದು ನಾನು ದೃಢವಾಗಿ ನಂಬಿರುವೆ.

ಶ್ರದ್ಧೆಯೇ ಆಧಾರ

ಶ್ರದ್ಧೆ–ಮನುಷ್ಯ ಯಶಸ್ಸಿನ ಆಧಾರವಾಗಿದೆ. ಶ್ರದ್ಧೆ ಇದ್ದಲ್ಲಿ ಭದ್ರತೆ ಇದೆ. ಭದ್ರತೆ ಇದ್ದಲ್ಲಿ ಭಯ ಇಲ್ಲ. ಶ್ರದ್ಧೆ ಮಹಾನ್ ಪ್ರೇರಕ ಶಕ್ತಿಯೂ ಹೌದು. ಪವಿತ್ರ ಆಚರಣೆಗಳಿಂದ ಶ್ರದ್ಧೆಯು ನಿರ್ಮಾಣವಾಗುತ್ತದೆ. ಒಂದು ವೇಳೆ ವ್ಯಕ್ತಿಯಲ್ಲಿ ಸತ್ಯನಿಷ್ಠೆ, ಪಾವಿತ್ರ್ಯ, ನಿಸ್ವಾರ್ಥ ಬುದ್ಧಿಗಳಿದ್ದರೆ ಜನರು ಆತನೆಡೆಗೆ ಆಕರ್ಷಿತರಾಗುತ್ತಾರೆ. ಆತನು ಜನರ ಹೃದಯಕ್ಕೆ ಲಗ್ಗೆ ಹಾಕುತ್ತಾನೆ. ನಮ್ಮ ಡಾಕ್ಟರರೆಡೆಗೆ ಜನರು ಆಕರ್ಷಿತರಾಗಲು ಜನರ ಮೇಲೆ ಡಾಕ್ಟರರ ಹಿಡಿತವಿರಲು ಮುಖ್ಯ ಕಾರಣ, ಅವರು ತಮ್ಮ ವೃತ್ತಿಯಲ್ಲಿ ಪಾಲಿಸಿಕೊಂಡು ಬಂದಿರುವ ಶ್ರದ್ಧೆಯೇ ಮುಖ್ಯ ಕಾರಣ.

ಶ್ರೀಕೃಷ್ಣಪರಮಾತ್ಮ ಗೀತೆಯಲ್ಲಿ ಶ್ರದ್ಧೆ ಇಲ್ಲದವರಿಗೆ, ಸಂಶಯ ವೃತ್ತಿಯವರಿಗೆ ಇಹಪರದಲ್ಲಿ ದುಃಖವನ್ನೇ ಸಹಿಸಬೇಕಾಗುತ್ತದೆಂದು ಎಚ್ಚರಿಸಿದ್ದಾನೆ. ಡಾಕ್ಟರ ಇನಾಮದಾರರವರು ಗೀತೆಯ ಉಪದೇಶವನ್ನು ಅರಿತು ಬಾಳುತ್ತಿದ್ದಾರೆ. ವೃತ್ತಿಯಲ್ಲಿ ಶ್ರದ್ಧೆ ತಮ್ಮವರಲ್ಲಿ ಅಪಾರವಾದ ವಿಶ್ವಾಸ. ಇದರಿಂದಾಗಿ ಡಾಕ್ಟರರು ವೃತ್ತಿಯಲ್ಲಿ ಮೆರೆಯುತ್ತಿದ್ದಾರೆಂದರೆ ತಪ್ಪಾಗದು.

ಕಾಯಕದಲ್ಲಿ ಕೈಲಾಸ

ಉದ್ಯೋಗಶೀಲತೆ ಡಾಕ್ಟರ ಇನಾಮದಾರರ ಮುಖ್ಯ ಲಕ್ಷಣ. ಉದ್ಯಮ, ಸಾಹಸ, ಧೈರ್ಯ, ಬುದ್ಧಿ ಹಾಗೂ ಪರಾಕ್ರಮಗಳೇ ಭಗವಂತನನ್ನು ಪ್ರಸನ್ನಗೊಳಿಸುತ್ತವೆಂದು ಹೇಳುತ್ತಾರೆ. ಕಾಯಕವೇ ಕೈಲಾಸ ಎಂದು ಹೇಳುತ್ತೇವೆ. ಆದರೆ ಕಾಯಕವನ್ನು ದೇವರ ಸೇವೆ ಎಂದು ನಾವು ಮಾಡುವುದಿಲ್ಲ. ನಮ್ಮ ಕಾಯಕ ಭಗವದ್ ಭಕ್ತಿಯಾಗಿ ಸಮರ್ಪಿತವಾದರೆ ಸಮಾಜದ ಕಲ್ಯಾಣವಾಗುವುದೆಂಬುದನ್ನು ನೋಡಬೇಕಾದರೆ ಡಾಕ್ಟರರ ಕಾಯಕ ನೋಡಬೇಕು. ಬರುವ ರೋಗಿಯೇ ದೇವರು. ಆತನ ಸೇವೆಯೇ ಭಕ್ತಿ ಅವನನ್ನು ಗುಣಮುಖನನ್ನಾಗಿ ಮಾಡುವುದರಲ್ಲಿಯೇ ತೃಪ್ತಿ ಪಡೆಯುವ ನಮ್ಮ ಡಾಕ್ಟರ ಇನಾಮದಾರರು ಜಗಜ್ಯೋತಿ ಬಸವಣ್ಣನವರು ಹೇಳುವಂತೆ 'ಕಾಯಕದಲ್ಲಿಯೇ ಕೈಲಾಸ' ಕಾಣುವ ಸದ್ಭಕ್ತರಾಗಿದ್ದಾರೆ.

ನಿರ್ಭಯತೆ ಡಾಕ್ಟರ ಇನಾಮದಾರರ ಹುಟ್ಟುಗುಣ. ವ್ಯಕ್ತಿಯೊಬ್ಬ ಐಹಿಕ ಉನ್ನತಿ ಸಾಧಿಸುವುದಿರಲಿ, ಪಾರಮಾರ್ಥಿಕ ಉನ್ನತಿ ಸಾಧಿಸುವುದಿರಲಿ, ಅದಕ್ಕಾಗಿ ಅವನಲ್ಲಿ ನಿರ್ಭಯತೆ ಅವಶ್ಯಕ. ವೈದ್ಯನಾದವನಿಗೆ ನಿರ್ಭಯತೆ ಮೊದಲು ಬೇಕು. ರೋಗಿಯ ಸ್ಥಿತಿ ನೋಡಿ ವೈದ್ಯರೇ ಹತಾಶರಾದರೆ, ಭಯಗೊಂಡರೆ ರೋಗಿಯನ್ನು ಯಾರು ಕಾಪಾಡಬೇಕು? ಡಾಕ್ಟರ ಆ ದೃಷ್ಟಿಯಲ್ಲಿ ನಿರ್ಭಯತೆ ಹೊಂದಿದವರು. ನಿರ್ಭಯತೆ ಹೊಂದಿದವರಲ್ಲಿ ಭಯ ಹಾಗೂ ಕ್ರೋಧ ಸುಳಿಯಲಾರವು. ಭಯ ಹಾಗೂ ಕ್ರೋಧಪೀಡಿತರು ಮಾನಸಿಕವಾಗಿ ದುರ್ಬಲರಾಗಿರುತ್ತಾರೆ. ಸಿಟ್ಟು ಮನುಷ್ಯನನ್ನು ಆಕ್ರಮಣಕಾರಿಯಾಗಿ ಮಾಡಿದರೆ ಭಯ ಅವನನ್ನು ಪಲಾಯನವಾದಿಯನ್ನಾಗಿ ಮಾಡುತ್ತದೆ. ನಮ್ಮ ಡಾಕ್ಟರ ಇನಾಮದಾರರ ಬಳಿ ಸಿಟ್ಟು ಸುಳಿಯದು. ಭಯ ಆವರಿಸದು. ಅದಕ್ಕಾಗಿಯೇ ಅವರು ನಿರ್ಭರು. ವೃತ್ತಿಯಲ್ಲಿ ಪ್ರಾವೀಣ್ಯತೆ ಹಾಗೂ ಪಾವಿತ್ರ್ಯತೆ ಕಾಪಾಡಿಕೊಳ್ಳಲು ಡಾಕ್ಟರರ ನಿರ್ಭಯತೆ ಅವರಿಗೆ ಬಹಳಷ್ಟು ನೆರವಾಗಿದೆ.

ಸಾತ್ವಿಕರು

ಡಾಕ್ಟರ ಇನಾಮದಾರರು ಮೂಲಭೂತವಾಗಿ ಸಾತ್ವಿಕರು, ಸತ್ವ, ರಜ, ತಮ ಈ ಮೂರು ಗುಣಗಳು ವಿಶ್ವವ್ಯಾಪಿಸಿವೆ. ಮಾನವನ ಮನಸ್ಸು ಈ ಮೂರು ಗುಣಗಳಿಂದ ಕೂಡಿದ್ದಾಗಿದೆ. ಮನಸ್ಸಿನ ಈ ತ್ರಿಗುಣಾತ್ಮಕ ಆವರಣ ಆತ್ಮವನ್ನು ಮುಚ್ಚಿಬಿಟ್ಟಿದೆ. ಕ್ರಮವಾಗಿ ತಮದಿಂದ ರಜೋಗುಣಕ್ಕೆ ಏರಿ ರಜೋ ಗುಣದಿಂದ ಸಾತ್ವಿಕತೆಯ ವಲಯದಲ್ಲಿ ಲೀನವಾಗಿ ಕೊನೆಗೆ ಅದರಿಂಥ ಬೇರ್ಪಟ್ಟು ಆತ್ಮಸ್ವರೂಪದ ದರ್ಶನ ಪಡೆಯುವುದು ಹಿಂದೂ ಧರ್ಮದ ಪರಮಗುರಿಯಾಗಿದೆ. ಡಾಕ್ಟರ ಇನಾಮದಾರ ಅವರು ಹುಟ್ಟಿದಾರಭ್ಯದಿಂದಲೇ ಸತ್ವಗುಣದ ಆವರಣಕ್ಕೆ ಹೊಂದಿದವರು. ಸಾತ್ವಿಕ ಮನುಷ್ಯ ಮೋಹಕ್ಕೆ ಬಲಿಯಾಗುವುದಿಲ್ಲ. ಅವನ ವಿವೇಕ ಬುದ್ಧಿಯು ಸದಾ ಜಾಗೃತವಾಗಿರುತ್ತದೆ. ಸಾತ್ವಕ ವ್ಯಕ್ತಿ ತನ್ನಲ್ಲಿಯ ಆತ್ಮವನ್ನು ಗುರುತಿಸುವಂತೆ ಜಗತ್ತಿನ ಎಲ್ಲದರಲ್ಲಿರುವ ಆತ್ಮವನ್ನು ಗುರುತಿಸುತ್ತಾನೆ. ವಿಶ್ವವೇ ನನ್ನ ಮನೆ, ಲೋಕವೇ ನನ್ನ ಕುಟುಂಬ ಎಂದು ಭಾವಿಸುತ್ತಾನೆ. ನಮ್ಮ ಡಾ. ಇನಾಮದಾರರು ಈ ಅರ್ಥದಲ್ಲಿ ನಿಜವಾದ ಸಾತ್ವಿಕರು.

ಎಂಬತ್ತೇಳು ಸಂವತ್ಸರ ಕಂಡಿರುವ, ಡಾ. ಇನಾಮದಾರ ಅನುಭವದ ಖಣಿ. ಡಾಕ್ಟರರು ಬಯಸಿದ್ದರೆ ಈ ಹಳ್ಳಿ ಬಿಟ್ಟು ಪಟ್ಟಣದಲಿ ನೆಲೆಸಬಹದಾಗಿತ್ತು. ಇಂದು ಸರಕಾರಿ ವೇತನ ಪಡೆಯುವ ಡಾಕ್ಟರರು ಹಳ್ಳಿಗಳಿಗೆ ವರ್ಗ ಮಾಡಿದರೆ ಬೆಂಗಳೂರಿಗೆ ಧಾವಿಸುತ್ತಾರೆ. ಮಾಡಬಾರದ್ದನ್ನೆಲ್ಲ ಮಾಡಿ ಹಳ್ಳಿಗಾದ ವರ್ಗಾವಣೆ ರದ್ದು ಮಾಡಿಸಿಕೊಂಡು ಪಟ್ಟಣದಲ್ಲಿಯೇ ಉಳಿಯುತ್ತಾರೆ. ಈ ಮಾತಿಗೆ ಎಲ್ಲಿಯಾದರೂ ಅಪವಾದಗಳಿರಬಹುದು. ಆದರೆ ಸಾಮಾನ್ಯವಾಗಿ ಇಂದು ವೈದ್ಯರು ಹಳ್ಳಿಗಳಿಗೆ ಸೇವೆಗಾಗಿ ಹೋಗಲು ಸಿದ್ಧರಿಲ್ಲ. ಡಾಕ್ಟರ ಇನಾಮದಾರರವರು ತಮ್ಮ ವೃತ್ತಿ ಆರಂಭಿಸಿದ್ದು ೫೦ ವರ್ಷಗಳ ಹಿಂದೆ. ಆಗಂತೂ ಹಳ್ಳಿಗಳ ಪರಿಸ್ಥಿತಿ ತುಂಬಾ ದಯನೀಯವಾಗಿತ್ತು. ರಸ್ತೆಗಳಿರಲಿಲ್ಲ. ನೀರಿನ ಪೂರೈಕೆ ಇರಲಿಲ್ಲ. ವಿದ್ಯುತ್ ಸಂಪರ್ಕವಿರಲಿಲ್ಲ. ದೂರವಾಣಿಯ ಸದ್ದೇ ಇರಲಿಲ್ಲ. ಅಂತಹ ಕಾಲದಲ್ಲಿ ಡಾಕ್ಟರ ಇನಾಮದಾರರು ಪಟ್ಟಣದ ಮೋಹದ ಸಮಾಧಿ ಮಾಡಿ ಸೊರಟೂರಿನಲ್ಲಿ ನಿಂತರು. ಅದಕ್ಕಾಗಿ ಇಂದು ಸೊರಟೂರ ಖ್ಯಾತವಾಗಿದೆ.

ಒಂದು ಕಾಲದಲ್ಲಿ ಅರ್ಧಾಂಗವಾಯು ಪೀಡಿತರಿಗೆ ಅಂಕೋಲಾ ಪ್ರಸಿದ್ಧವಾಗಿತ್ತು. ಅಲ್ಲಿ ಯಾವ ವೈದ್ಯರು ಔಷಧ ನೀಡುತ್ತಾರೆಂಬುದು ಗೊತ್ತಿರಲಿಲ್ಲ. ಆದರೆ ಅಂಕೋಲಾ ಪ್ರಸಿದ್ಧಿ ಪಡೆದಿತ್ತು. ಇಂದು ನಾಯಿ ಕಡಿದರೆ ಹೊಂಬಳ ದಾರ, ಕಾಮಣಿಯಾದರೆ ಲಕ್ಕುಂಡಿ ಬಳ್ಳಿ ಎಂದು ಹೇಳುತ್ತೇವೆ. ಅದೇ ರೀತಿ ಅರ್ಧಾಂಗವಾಯು ಆದರೆ ಸೊರಟೂರ ಎಂದು ಹೇಳುತ್ತೇವೆ. ನಾಡಿನ ಮೂಲೆ ಮೂಲೆಗಳಿಂದ ರೋಗಿಗಳು ಇಂದು ಸೊರಟೂರಿಗೆ ಬರುತ್ತಿದ್ದಾರೆ. ಅರ್ಧಾಂಗವಾಯು ಬಗ್ಗೆ ಎಲ್ಲಿಯೇ ಚರ್ಚೆ ನಡೆದರೆ ಅಲ್ಲಿ ಸೊರಟೂರಿನ ಹೆಸರು ಪ್ರಸ್ತಾಪವಾಗುತ್ತದೆ. ಈ ದೃಷ್ಟಿಯಿಂದ ಡಾಕ್ಟರ ಇನಾಮದಾರ ಅವರು ಸೊರಟೂರಿಗೆ ಕೀರ್ತಿ ಖ್ಯಾತಿ ಹಾಗೂ ಜನಪ್ರಿಯತೆ ತಂದುಕೊಟ್ಟಿದ್ದಾರೆ. ತಾವು ಈ ನೆಲದಲ್ಲಿ ಹುಟ್ಟಿದ್ದನ್ನು ಸಾರ್ಥಕಗೊಳಿಸಿದ್ದಾರೆ.

ಬಗ್ಗದ ರೋಗಕೆ ಅಗ್ಗದ ವೈದ್ಯ – ಡಾ. ಇನಾಮದಾರ

ಬಸವಕಂದ ಕಾವ್ಯನಾಮದ ಶ್ರೀ. ವ್ಹಿ.ಜಿ. ಮಠಪತಿ ಗುರುಗಳು ತಮ್ಮ ಸಮಾಜಗನ್ನಡಿ ಕವನಸಂಕಲನದಲ್ಲಿ ಡಾಕ್ಟರರವರನ್ನು ಕಂಡಿದ್ದು ಹೀಗೆ–

ಸಂಸ್ಕೃತಿಯಿಂದ ಬೆಳಕಿಗೆ ಬಂದ ಮನೆತನದವರಿವರು ।
ಸಮಾಧಾನತೆ ಸಾಗರದಷ್ಟು ವಿಶಾಲ ಗುಣದವರು ॥ ಪ ॥

ರಾಮಭಕ್ತರು, ನಿತ್ಯವೂ ತಪ್ಪದೇ ಜಪವನು ಮಾಡುವರು ।
ಪವಿತ್ರ ನಾಮವ ಹೊಂದಿದ "ರಾಮರಾಯರ" ಮಗನಿವರು ।
ಮಹಾಕಾಯದ ಪದವಿಗೆ ಆಗರ ಇನಾಮದಾರರು ।
ತುಂಬಿದುದು ತುಳುಕದು ನೋಡಾ ದೊಡ್ಡ ಗುಣದವರು ।
ಇವರು ದೊಡ್ಡ ಗುಣದವರು ॥ ೧ ॥

ಬಗ್ಗದ ರೋಗಕೆ ಅಗ್ಗದ ವೈದ್ಯರು ಖ್ಯಾತಿಯ ಪಡೆದವರು ।
ಕಂಗಾಲಾದ ರೋಗಿಯ ಕಂಡು ಕನಿಕರ ಪಡುವವರು ।
ಬಡವ ಬಲ್ಲಿದ ಬೇಧವನರಿಯದೆ ರೋಗಿಯ ನೋಡುವವರು ।
ಕಾಯಕವೇ ಕೈಲಾಸವೆಂದು ರೋಗಿಯ ಸೇವೆಯ ಮಾಡುವದು ।
ಇವರು ಸೇವೆಯ ಮಾಡುವರು ॥ ೨ ॥

ಹುಚ್ಚಾ, ಪೆಚ್ಚಾ, ದಡ್ಡಾ, ಮಡ್ಡಾ ಸಕಲರಿಗೂ ಇವರು ।
ಒಂದೇ ರೀತಿ ಎಲ್ಲರಿಗಿವರು ಆದರ ತೋರುವರು ।
ರೋಗಿಯು ತನ್ನ ದುಗುಡ ದುಮ್ಮಾನ ಸಾವಿರ ಕೇಳಿದರೂ ।
ಶಾಂತಿಯಿಂದಲೇ ಉತ್ತರ ಕೊಡುವರು ದೊಡ್ಡ ಗುಣದವರು ।
ಇವರು ಶಾಂತ ಗುಣದವರು ॥ ೩ ॥

ಸಂಸ್ಕೃತಿಯಿಂದ ಬೆಳಕಿಗೆ ಬಂದ ಮನೆತನದವರಿವರು ।
ಸಮಾಧಾನತೆ ಸಾಗರದಷ್ಟು ವಿಶಾಲ ಗುಣದವರು ॥

– "ಬಸವಕಂದ"

ನಾ ಕಂಡಂತೆ: ಧನ್ವಂತರಿ, ಸಹಕಾರಮೂರ್ತಿ ಡಾ. ಬಿಂದುಮಾಧವರಾವ

ರಾಯರು ಬಂದರು ಸೊರಟೂರ ಗ್ರಾಮಕೆ ರೋಗಿಯ ನೋಡುವುದಕ,
ಪ್ರತಿವರುಷ ನೂರೆಂಟು ರೋಗಿಯನ್ನು ಗುಣವ ಪಡಿಸೋದಕ,
ಅವರನು ಆರಾಮ ಮಾಡೋದಕ.

ಬೇರೆ ಊರಲ್ಲಿ ದವಾಖಾನೆ ಮಾಡಬಾರದಂತ ಹಠವ ತೊಟ್ಟವರು,
ಹುಟ್ಟಿದ ಊರಲ್ಲಿ ದವಾಖಾನೆ ತೆಗೆದು ಸೇವೆ ಮಾಡುವರು,
ಜನರ ಸೇವೆಯ ಮಾಡುವರು.

ಬಿಂದುರಾಯರು ಮನೆತನದಿಂದ ಬಹಳ ದೊಡ್ಡವರು,
ರೋಗಿಯ ಸೇವೆಯ ಮಾಡಲೆಂದು ಮುಂದೆ ಬಂದವರು,
ಅವರು ನಮ್ಮ ಡಾಕ್ಟರು.

ಅರ್ಧಾಂಗವಾಯುವಿಗೆ ಆಯುರ್ವೇದಿಕ್ ಔಷಧಿ ಕಂಡುಹಿಡಿದವರು,
ಹಗಲಿರುಳು ಎನ್ನದೆ ರೋಗಿಯ ಆರೈಕೆ ಮಾಡಿ ಗುಣವಪಡಿಸುವರು,
ಅವರು ನಮ್ಮ ಡಾಕ್ಟರು.

ದೇಶಾದ್ಯಂತ ಸೊರಟೂರನ್ನು ಹೆಸರಿಗೆ ತಂದವರು,
ಸಂತಸದಿಂದ ಬಡರೋಗಿಯನ್ನು ಪ್ರೇಮದಿ ನೋಡುವರು,
ಅವರು ನಮ್ಮ ಡಾಕ್ಟರು.

ಸರಾಯಿ ಸೇಂದಿ ಕುಡಿಬ್ಯಾಡ್ರಿ ಅಂತ ಸಿಟ್ಟೇಲಿ ಹೇಳುವರು,
ಪಾನ್‌ಪರಾಗ್ ಹಾಕಬ್ಯಾಡ್ರಿ ಅಂತ ಸಾರಿ ಹೇಳುವರು,
ಅವರು ನಮ್ಮ ಡಾಕ್ಟರು.

ಜನರಿಗೆ ಆರೋಗ್ಯ ಭಾಗ್ಯ ಕೊಡು ಅಂತಾ ದೇವರಲ್ಲಿ ಬೇಡುವರು,
ಎಪ್ಪತ್ತು ವರ್ಷದ ಭೀಮಶತಾಬ್ದಿ ಮನೆಯಲ್ಲಿ ಮಾಡುವರು,
ಅವರು ನಮ್ಮ ಡಾಕ್ಟರು.

ಕಲಿಯುಗದ ಕಲ್ಪವೃಕ್ಷ ಅಂತ ನಾನು ಕರೆಯುವೆನು,
ಕಲಿಯುಗದ ಕೃಷ್ಣರೆಂದು ಗುಣಗಾನ ಮಾಡುವೆನು,
'ವೈದ್ಯ ನಾರಾಯಣ'ಅಂತಾ ಹಾಡಿ ಹರಸುವೆನು–ನಾನು ಹಾಡಿ ಹರಸುವೆನು
ನಾನು ಹಾಡಿ ಶುಭ ಹಾರೈಸುವೆನು.

– ಬಾಪುಗೌಡ ಪಾಟೀಲ್ ಸೊರಟೂರ

ವರುಷ ನೂರು ತುಂಬಲಿ
ಹರುಷ ಬಾಳಲಿ ಲಭಿಸಲಿ
ನಿಮ್ಮ ಕೈಗುಣದಿಂದ ಮರುಜನ್ಮ
ಪಡೆದಿಹರು ಹಲವು ರೋಗಿಗಳು
ಅವರಿಗಾಗಿ – ನೀವು ಇನ್ನೂ
ಬದುಕಬೇಕು ನೂರು ಕಾಲ
ನಿಮ್ಮ ಸೇವೆಯ ಫಲವನುಂಡು
ಕೀರ್ತಿ ಪಡೆಯಲಿ ನಮ್ಮ ನೆಲ
ಭೀಮರಥಿ ಶಾಂತಿ ಸನ್ಮಾನದ
ಈ ಶುಭ ಗಳಿಗೆ
ತರಲಿ ಸುಖ–ಸಂತೋಷದ
ಪುಷ್ಪಮಾಲೆ ಕೊರಳಿಗೆ
ಧನ್ಯ ಧನ್ಯ ವೈದ್ಯ ಇನಾಮದಾರರೆ
ನಿಮ್ಮ ಬಾಳಿನ ಆದರ್ಶಧಾರೆ !

– ಎಸ್.ಎಂ. ಕಲಗುಡಿ

ಮಾಜಿ ತಾ.ಪ. ಸದಸ್ಯರು, ಸೊರಟೂರ

ಸೊರಟೂರ ಗ್ರಾಮ ರಾಜ್ಯದಲ್ಲಿಯೇ ಪ್ರಸಿದ್ಧಿಯಾಗಲು ಡಾ. ಇನಾಮದಾರರ ಸೇವೆ ಹಾಗೂ ಸಾಧನೆಗಳೇ ಜೀವಂತ ಸಾಕ್ಷಿಯಾಗಿವೆ. ಅವರೊಬ್ಬ ವ್ಯಕ್ತಿಯಲ್ಲ ಒಂದು ಶಕ್ತಿ ಎಂಬುದನ್ನು ಹಲವಾರು ನಿದರ್ಶನಗಳ ಮೂಲಕ ಕಂಡುಕೊಳ್ಳಲಾಗಿದೆ. ಕೆಲವರು ಡಾಕ್ಟರ ಇನಾಮದಾರರು ರಾಜಕೀಯದಲ್ಲಿ ಗುರುತಿಸಿಕೊಳ್ಳಬಾರದು ಎಂದು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ಯಾವ ಹುರುಳಿಲ್ಲ ಏಕೆಂದರೆ ಡಾ. ಇನಾಮದಾರರು ರಾಜಕೀಯದಲ್ಲಿ ಯಾವುದೇ ಸ್ಥಾನಮಾನ ಹಾಗೂ ಅಧಿಕಾರ ಪಡೆಯುವದಕ್ಕಾಗಿ ಆಸೆ ಪಟ್ಟವರಲ್ಲ ಅವರಿಗೆ ಅದರ ಅಗತ್ಯವೂ ಇಲ್ಲ. ಡಾ. ಇನಾಮದಾರರಂತ ಮೇರು ವ್ಯಕ್ತಿಗಳು ರಾಜಕೀಯದಲ್ಲಿ ಗುರುತಿಸಿಕೊಳ್ಳಬಾರದು ಎಂಬ ನಿಯಮವೇನಿಲ್ಲ. ಡಾ. ಇನಾಮದಾರರು 'ಕಟ್ಟಾ ಕಾಂಗ್ರೇಸಿಗರು, ರಾಜಕೀಯದಲ್ಲು ಅವರು ಬದ್ದತೆಯನ್ನು ಹೊಂದಿದ್ದಾರೆ. ಅವರು ರಾಜಕೀಯದಲ್ಲಿ ಗುರುತಿಸಿಕೊಂಡಿದ್ದರಿಂದ ಗ್ರಾಮಕ್ಕೆ ರಚನಾತ್ಮಕ ಕೆಲಸಗಳು ಆಗಿವೆ. ಎಮ್.ಕೆ.ಬಿ.ಎಸ್. ಶಾಲೆಯ ಕೊಠಡಿ ನಿರ್ಮಣ, ಗದಗ ರಸ್ತೆ ನಿರ್ಮಾಣ, ಬ್ಯಾಂಕ ಸ್ಥಾಪನೆ ಸೇರಿದಂತೆ ಹಲವಾರು ಗುರುತರವಾದ ಐತಿಹಾಸಿಕ ಕಾರ್ಯಗಳೆಂಬುದನ್ನು ಇಂದಿನ ಯುವಪೀಳಿಗೆ ಅರಿತುಕೊಳ್ಳಬೇಕಾಗಿದೆ. ತುಂಬಿದಕೊಡ ತುಳುಕುವದಿಲ್ಲ ಎಂಬಂತೆ ಅವರೊಬ್ಬ ಪರಿಪೂರ್ಣ ವ್ಯಕ್ತಿತ್ವದ ಶಕ್ತಿ ಹಾಗೂ ಸೊರಟೂರಿನ ಕೀರ್ತಿ ಕಳಸವಾಗಿದ್ದಾರೆ.

೨.೪. ಗ್ರಾಮದ ಭೌತಿಕ ಮಾಹಿತಿ

ಗ್ರಾಮದ ಜನಸಂಖ್ಯೆ	ಪುರುಷರು - ೨೯೭೩
	ಮಹಿಳೆಯರು - ೨೮೩೦
	ಒಟ್ಟು - ೫೮೦೩
ಮನೆಗಳ ಸಂಖ್ಯೆ	೧೫೩೯
ಗ್ರಾಮದ ಭೂಕ್ಷೇತ್ರ	೬೧೨೪: ೨೮ ಎಕರೆ
ಒಟ್ಟು ಅರಣ್ಯ	೨೮೯೦: ೦೦ ಎಕರೆ
ಸಾಗುವಳಿ ಕ್ಷೇತ್ರ	೪೧೯೫: ೦೦ ಎಕರೆ
ಒಟ್ಟು ಭೂಖಾತೆದಾರರು	೭೭೦
ದೊಡ್ಡ ಹಿಡುವಳಿದಾರರು	೨೫೦
ಚಿಕ್ಕ ಹಿಡುವಳಿದಾರರು	೧೨೦
ಅತಿ ಚಿಕ್ಕ ಹಿಡುವಳಿದಾರರು	೪೦೦
ಎ.ಪಿ.ಎಲ್. ಪಡಿತರ ಸಂಖ್ಯೆ	೩೨೯
ಬಿ.ಪಿ.ಎಲ್. ಪಡಿತರ ಸಂಖ್ಯೆ	೪೭೫

ಅಂತ್ಯೋದಯ ಪಡಿತರ ಸಂಖ್ಯೆ	೧೪೨
ಸೇವಾ ಸಂಸ್ಥೆಗಳು	
ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್	೧
ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್	೧
ಸರಕಾರಿ ಆಯುರ್ವೇದ ಚಿಕಿತ್ಸಾಲಯ	೧
ಸರಕಾರಿ ಪಶು ಚಿಕಿತ್ಸಾಲಯ	೧
ಪ್ರಾಥಮಿಕ ಆರೋಗ್ಯ ಕೇಂದ್ರ ಶಾಖೆ	೧
ಅಂಗನವಾಡಿಗಳು	೮
ಹಾಲು ಉತ್ಪಾದಕರ ಸಹಕಾರಿ ಸಂಘ	೧
ಎಣ್ಣೆ ಬೀಜ ಬೆಳೆಗಾರರ ಸಂಘ	೧
ಮೆಟ್ರಿಕ್‌ಪೂರ್ವ ವಸತಿ ನಿಲಯ	೧
ಯುವಕ ಮಂಡಲಗಳು	೧೮
ಸ್ವ-ಸಹಾಯ ಮತ್ತು ಸ್ತ್ರೀಶಕ್ತಿ ಸಂಘಗಳು	೧೫೦
ದೇವಾಲಯಗಳು	೧೮
ಮಸೀದಿಗಳು	૩
ಬಸದಿಗಳು	೧
ಪ್ರಾಥಮಿಕ ಶಾಲೆಗಳು	೪
ಪ್ರೌಢಶಾಲೆಗಳು	೧
ಪದವಿಪೂರ್ವ ಮಹಾವಿದ್ಯಾಲಯ	೧
ಮುಂದುವರಿಕೆ ಶಿಕ್ಷಣ ಕೇಂದ್ರಗಳು	೨
ರಾತ್ರಿ ಶಾಲೆಗಳು (ಮನೆಪಾಠ)	೨
ಗ್ರಾಮದ ಸಾಕ್ಷರರ ಸಂಖ್ಯೆ (೧೫ ವರ್ಷ	
ಮೇಲ್ಪಟ್ಟವರು)	ಪುರುಷರು – ೧೦೧೮
	ಸ್ತ್ರೀಯರು – ೦೫೬೪
	ಒಟ್ಟು – ೧೫೮೨

ಅನಕ್ಷರಸ್ಥರ ಸಂಖ್ಯೆ (೧೫ ರಿಂದ ೩೫ ವಯೋಮಾನದವರು)	ಪುರುಷರು – ೧೩೩
	ಸ್ತ್ರೀಯರು – ೪೪೭
	ಒಟ್ಟು – ೫೮೦
ಸರಕಾರಿ ಉದ್ಯೋಗದಲ್ಲಿರುವವರ ಸಂಖ್ಯೆ ಸೈನಿಕ ಸೇವೆಯಲ್ಲಿ	೧೦ ಜನ
ನಿವೃತ್ತ ಶಿಕ್ಷಕರು	೦೮ ಜನ
ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು	೨೬ ಜನ
ರಾಜ್ಯ ಪೋಲಿಸ್ ಇಲಾಖೆಯಲ್ಲಿ	೦೭ ಜನ
ಕೆ.ಎಸ್.ಆರ್.ಟಿ.ಸಿ.ಯಲ್ಲಿ	೧೮ ಜನ

ಟಿಪ್ಪಣಿಗಳು

೧. ಸೊಡರು, ಗ್ರಾಮದ ಜನಪದರು ಸೊಡರು ಇದ್ದ ಊರು ಅಂದರೆ ದೀಪ ಇದ್ದ ಊರೇ ಸೊರಟೂರು ಎಂದು ಅಭಿಪ್ರಾಯಪಡುತ್ತಾರೆ. ಇದು ಗ್ರಾಮಸ್ಥರ ಅಭಿಪ್ರಾಯವಾಗಿದೆ. ಈ ನಿಷ್ಪತ್ತಿಯ ಬಗ್ಗೆ ಲಿಖಿತ ಪುರಾವೆಗಳಿಲ್ಲ.

೨. ಸರಜೂ ಕಾಟ್ಕರ್, ೨೦೦೬, **ಶಿವಾಜಿ ಮೂಲ ಕನ್ನಡ ನೆಲ,** ಲೋಹಿಯಾ ಪ್ರಕಾಶನ, ಬಳ್ಳಾರಿ ಪು. ೧೨೬.

೩. ವಿಜಯ ಕರ್ನಾಟಕ ದಿನಪತ್ರಿಕೆ, ದಿನಾಂಕ ೨೪–೦೯–೨೦೦೬, ಸಾಪ್ತಾಹಿಕ ಪು. ೬.

೪. ಹೊನ್ನಸೊರಟೂರ: ಹೊನ್ನ ಎಂಬುದು ಸಂಪತ್ತಿನ ಸಂಕೇತವಾಗಿದ್ದು, ಸೊರಟೂರ ಗ್ರಾಮ ಸಂಪದ್ಭರಿತ ಗ್ರಾಮ ಎಂಬ ಅರ್ಥವಿದೆ.

೫. ಶ್ರೀರಾಮ ಇಟ್ಟಣ್ಣನವರ, **ಹಲಗಲಿ ಗ್ರಾಮ ಜಾನಪದ,** ವೀರೇಶೈವ ಅಧ್ಯಯನ ಅಕಾಡೆಮಿ

೬. ಟಿ. ಗೋವಿಂದರಾಜು, ೧೯೯೩, **ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ,** ಪುಸ್ತಕ ಜೇನು, ಕಾಡನೂರ ಅಂಚೆ, ದೊಡ್ಡಬಳ್ಳಾಪುರ, ಪು. ೧೫.

೭. ಡಾ. ಸ.ಚಿ. ರಮೇಶ್, ೨೦೦೫, **ನೀರು ಒಂದು ಜಾನಪದ ನೋಟ,** ಮಂಟಪಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧.

೮. ಶ್ರೀ ಗುರುಮಲ್ಲಜ್ಜನವರ ಅಣಿಮುತ್ತು ಅವರ ಶಿಷ್ಯ ಬಳಗದವರಿಂದ ಸಂಗ್ರಹಿಸಲಾಗಿದೆ.

□□

ಅಧ್ಯಾಯ : ಮೂರು

ಸೊರಟೂರ ಗ್ರಾಮದ ಚಾರಿತ್ರಿಕ ಹಿನ್ನೆಲೆ

೩.೧. ಶಾಸನಗಳಲ್ಲಿ ಸೊರಟೂರ ಗ್ರಾಮ

೩.೨. ಯುದ್ಧ ಭೂಮಿಯಾಗಿ ಸೊರಟೂರ ಗ್ರಾಮ

೩.೩. ದೇಸಾಯಿಯವರ ಕಾಲದಲ್ಲಿ ಸೊರಟೂರ ಗ್ರಾಮ

೩.೪. ಶಿವಾಜಿಯ ಮೂಲ ಸ್ಥಳವಾಗಿ ಸೊರಟೂರ ಗ್ರಾಮ

೩.೫. ಮುಂಡರಗಿಯ ಸೊರಟೂರ ಅಜ್ಜನವರು

ಅಧ್ಯಾಯ : ಮೂರು

ಸೊರಟೂರ ಗ್ರಾಮದ ಚಾರಿತ್ರಿಕ ಹಿನ್ನೆಲೆ

ಪೀಠಿಕೆ

'ಇತಿಹಾಸ ತಿಳಿಯಲಾರದವನು ಇತಿಹಾಸ ಸೃಷ್ಟಿಸಲಾರ' ಎಂಬ ಮಾತಿನಂತೆ ಪ್ರತಿಯೊಬ್ಬರೂ ಆಯಾ ವಿಷಯಗಳಿಗೆ ಸಂಬಂಧಿಸಿದ ಇತಿಹಾಸವನ್ನು ತಿಳಿಯಬೇಕು. ಇತಿಹಾಸ ಮುಂದಿನ ನಡೆಗೆ ಸಹಾಯಕವಾಗಬಲ್ಲದು. ಅಂತೆಯೇ ಹೊಸದೊಂದು ಇತಿಹಾಸವನ್ನು ಸೃಷ್ಟಿಸಲು ಪೂರಕ ವಾಗಬಲ್ಲದು. ಹಳ್ಳಿಗಳ ದೇಶ ನಮ್ಮದು. ಲಕ್ಷಾಂತರ ಹಳ್ಳಿಗಳಿಗೂ ಅದರದ್ದೇ ಆದಂಥ ಇತಿಹಾಸವಿದೆ. ಅದು ಶಾಸನದಂಥ, ತಾಳೆಗರಿಗಳಂಥ ಲಿಖಿತ ಇತಿಹಾಸಗಳು ಮಾತ್ರವಲ್ಲ. ತಲೆತಲಾಂತರದಿಂದ ಬಾಯ್ದೆರೆಯ ಮೂಲಕ ಸಾಗಿಬಂದ ಮೌಖಿಕ ಇತಿಹಾಸಕ್ಕೂ ಅಷ್ಟೇ ಪ್ರಾಮುಖ್ಯತೆ ಇದೆ. ಮೌಖಿಕ ಇತಿಹಾಸದಲ್ಲಿ ಭಿನ್ನತೆ-ವ್ಯತ್ಯಾಸ-ಸೇರಿಕೆಗಳೆಲ್ಲ ಇದ್ದರೂ ಒಂದಕ್ಕೊಂದು ಕೊಂಡಿಯಾಗಿ ದಂತಕಥೆಗಳು, ಐತಿಹ್ಯಗಳು, ಜನಪದ ಗೀತಸಾಹಿತ್ಯ ಪೂರಕವಾಗಿರುತ್ತವೆ. ಸಾಕ್ಷಿಗಳಾಗಿರುತ್ತವೆ. ಪ್ರಸ್ತುತ ಸೊರಟೂರ ಗ್ರಾಮಕ್ಕೂ ಪ್ರಾಚೀನ ಇತಿಹಾಸವಿದೆ, ಐತಿಹ್ಯಗಳ ಇತಿಹಾಸವಿದೆ, ಮೌಖಿಕ ಇತಿಹಾಸವಿದೆ.

"ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ. ಬನವಾಸಿ ದೇಶಮಂ" ಎಂಬ ಪಂಪ ಕವಿಯ ಮಾತು ಅವನ ಹುಟ್ಟೂರಿನ, ಅವನ ಕರ್ಮಭೂಮಿಯ ಬಗೆಗಿರುವ ಅಭಿಮಾನವನ್ನು ತಿಳಿಸುತ್ತದೆ. ಅದು ಆ ಪ್ರದೇಶದ ಭೌಗೋಳಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಒಟ್ಟು ಪ್ರದೇಶದ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿತೋರಿಸುತ್ತದೆ. ಹೀಗೆ ಪ್ರತಿಯೊಂದು ಗ್ರಾಮವು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ. ಆ ಹಿನ್ನೆಲೆಯಲ್ಲಿ ಗ್ರಾಮದ ಪರಿಚಯ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

೩.೧. ಶಾಸನಗಳಲ್ಲಿ ಸೊರಟೂರ ಗ್ರಾಮ

ಶಾಸನಗಳು ಒಂದು ಗ್ರಾಮದ ಚಾರಿತ್ರಿಕ ಹಿನ್ನೆಲೆಗೆ ಜೀವಂತ ಸಾಕ್ಷಿಗಳಾಗಿವೆ. ಸೊರಟೂರ ಗ್ರಾಮದಲ್ಲಿ ಒಟ್ಟು ೧೪ ಶಾಸನಗಳಿದ್ದು, ಅವುಗಳಲ್ಲಿ ಗ್ರಾಮವನ್ನಾಳಿದ ರಾಜ ಮನೆತನಗಳು ಯುದ್ಧಗಳಲ್ಲಿಯ ಜಯ ಅಪಜಯಗಳು, ಮರಣಗಳು, ದಾನ, ದತ್ತಿಗಳನ್ನು ಒಳಗೊಂಡಿವೆ.

ಸೊರಟೂರ ಗ್ರಾಮದ ಪಂತರ ಬಾವಿ ಎಂದು ಕರೆಯಲ್ಪಡುವ ಕಟ್ಟಡದ ಮೇಲ್ಛಾವಣೆಯಲ್ಲಿರುವ ಶಾಸನ

ಶಾಸನದ ದಾಖಲೆಯ ಕಾಲ ಚಾಲುಕ್ಯ ವಿಕ್ರಮ ಶಕೆ ೨೩ ಬಹುದಾನ್ಯ ಸಂವತ್ಸರ(೧೦೯೮-೯೯ ಕ್ರಿ.ಶ.)ವೆಂದು ಗುರುತಿಸಲಾಗಿದೆ. ಹೆಚ್ಚಿನ ವಿಷಯಗಳು ನಶಿಸಿ ಹೋಗಿವೆ. ಹಾಳಾದಂತಹ ಮತ್ತು ಅರ್ಧ ರಚನೆಯಾದ ಈ ಶಾಸನವು ತ್ರಿಭುವನ ಮಲ್ಲದೇವ (ವಿಕ್ರಮಾದಿತ್ಯ VI)ನ ಆಳ್ವಿಕೆಗೆ ಸಂಬಂಧಪಟ್ಟದ್ದಾಗಿದೆ. ಗ್ರಾಮದ ೨೦೦ ಮಹಾಜನರು ಗ್ರಾಮೇಶ್ವರ ದೇವರಿಗೆ ಸುಂಕದ ಪಾಲನ್ನು ಕಾಣಿಕೆಯ ರೂಪದಲ್ಲಿ ನೀಡಿದುದರ ಉಲ್ಲೇಖವಿದೆ. ೨೦೦ ಮಂದಿ ಮಹಾಜನರಲ್ಲಿ ಉರುದೇಯ, ಉರುಗ-೩೦೦ರ ಜನರು, ೫೦ ಮಂದಿ ಎಣ್ಣೆ ಗಾಣದವರು, ಸುಂಕದ ಅಧಿಕಾರಿಗಳು ಮೊದಲಾದವರಿದ್ದರು. ಲೊಕ್ಕಿಗುಂಡಿಯ (ಲಕ್ಕುಂಡಿ), ಬೋಳ ಪಂಡಿತರ ಶಿಷ್ಯನಾದ ಕೇದಾರ ಶಕ್ತಿ ಪಂಡಿತನು ಈ ದಾನಗಳನ್ನು ಸ್ವೀಕರಿಸಿದನು. ಬಂಟ-೧೦೦೦ದ ಜನರಿಂದ ಬಂಟ ಹಣವನ್ನು ಕೊಟ್ಟಂತಹ ವಿಷಯವನ್ನು ಇದು ತಿಳಿಸುತ್ತದೆ.

ಕಲ್ಮೇಶ್ವರ ದೇವಾಲಯದ ಮುಂದೆ ನಿಲ್ಲಿಸಲಾದ ಜಗುಲಿಯಲ್ಲಿರುವ ಶಾಸನ

ಈ ಶಾಸನವು ತ್ರಿಭುವನ ಮಲ್ಲದೇವ(ವಿಕ್ರಮಾದಿತ್ಯ VI)ನ ಕಾಲಕ್ಕೆ ಸಂಬಂಧಿಸಿದುದಾಗಿದೆ. ಇದು ತಿಳಿಸುವ ವಿಷಯವೇನೆಂದರೆ, ಕೊಲ್ಲಾಪುರದ ಮಹಾಲಕ್ಷ್ಮೀದೇವಿಯು ಸೊರಟವೂರನ್ನು ರಕ್ಷಿಸುತ್ತಿರಲು ತೆಲ್ಲಿಗ ಜಕ್ಕಿಯಬ್ಬೆಯು ಆ ಪ್ರದೇಶದ ಇನ್ನೂರು ಮಹಾಜನರ ಬಳಿಯಿಂದ ಕೆಲವು ಪ್ರದೇಶ ತೆಗೆದುಕೊಂಡು ಬ್ರಾಹ್ಮಣ ಭೋಜನದ ಸತ್ರದ ನಿರ್ವಹಣೆಗಾಗಿ ದಾನ ನೀಡುತ್ತಾಳೆ. (ಬ್ರಾಹ್ಮಣರಿಗೆ) ಇದೇ ಮಹಿಳೆಯು ೨ನೇ ಬಾರಿಯೂ ನೀಡುತ್ತಾಳೆ.

ಈ ದಾಖಲೆಯು ಎರಡು ಕಾಲಮಾನ ತಿಳಿಸುತ್ತದೆ. ಮೊದಲನೆಯದು ಚಾಲುಕ್ಯ ವಿಕ್ರಮ ವರ್ಷ ೧೬, ಪ್ರಜಾಪತಿ ಸಂವತ್ಸರ, ಪುಷ್ಯಮಾಸ, ಶುಕ್ಲಪಕ್ಷ, ದ್ವಾದಸಿ, ಗುರುವಾರ, ಉತ್ತರಾಯಣ ಕಾಲ, ಸಂಕ್ರಾಂತಿ, ವ್ಯತಿಪಾತವಾಗಿದೆ. ಇದು ಕ್ರಿ.ಶ. ೧೦೯೧, ಡಿಸೆಂಬರ್ ೨೫ ಗುರುವಾರಕ್ಕೆ ಸರಿ ಹೊಂದುತ್ತದೆ.

೨ನೇ ದಿನಾಂಕವು ಚಾಲುಕ್ಯ ವಿಕ್ರಮ ಶಕೆ ೧೭ ಆಂಗಿರಸ ಸಂವತ್ಸರ, ಪುಷ್ಯಮಾಸ ಶುಕ್ಲಪಕ್ಷ, ದಶಮಿ, ಆದಿತ್ಯವಾರ, ಉತ್ತರಾಯಣ ಸಂಕ್ರಾಂತಿ, ವ್ಯತಿಪಾತವಾಗಿದ್ದು, ಇದು ಕ್ರಿ.ಶ. ೧೦೯೨ ಡಿಸೆಂಬರ್ ೨೬ ಆದಿತ್ಯವಾರಕ್ಕೆ ಸರಿ ಹೊಂದುತ್ತದೆ. ಆದರೆ ಸಂಕ್ರಾಂತಿಯು ಹಿಂದಿನವಾರದ ಶುಕ್ರವಾರದಂದು ನಡೆದಿತ್ತು. ಈ ಶಾಸನವು ಮಾಧವ ಬಟ್ಟನಿಂದ ರಚಿತವಾಗಿದೆ ಎಂದು ತಿಳಿಯುತ್ತದೆ.

ಜೈನ ಬಸದಿಯ ಹೊರಗಿನ ಜಗುಲಿಯಲ್ಲಿರುವ ಶಾಸನ

ಈ ಶಾಸನವು ಭುವನೈಕ ಮಲ್ಲದೇವ (ಸೋಮೇಶ್ವರ-II)ನ ಆಳ್ವಿಕೆಗೆ ಸಂಬಂಧಿಸಿದುದಾಗಿದೆ. ಮತ್ತು ಈತನ ಸಾಮಂತನು ಮಹಾ ಪ್ರಧಾನನೂ ಹೇರಿ ಸಂದಿ ವಿಗ್ರಹಿಯು, ಸೇನಾಧಿಪತಿಯು, ದಂಡನಾಯಕ, ಬಲದೇವಯ್ಯನು ಸೊರಟವೂರ ಅಗ್ರಹಾರದಲ್ಲಿರುವ ಬಲದೇವ ಜಿನಾಲಯಕ್ಕೆ

ಭೂದಾನ ಮಾಡಿದುದರ ಉಲ್ಲೇಖವನ್ನು ಹೊಂದಿದೆ. ಈ ಮಂತ್ರಿಯು ಗಂಗವಂಶದ ಅಗ್ಗಲದೇವ ಮತ್ತು ಗೊಜ್ಜಿಕಬ್ಬೆಯ ಪುತ್ರನಾಗಿರುವನು. ಮತ್ತು ಬೆದ್ದೇವನ ಹಿರಿಯ ಸಹೋದರನಾಗಿರುವನು. ಈ ದಾನದ ಜವಾಬ್ದಾರಿಯನ್ನು ಹುಲಿಯಬ್ಬಜ್ಜಿಕೆಯು ವಹಿಸಿದ್ದಳು. ಇವಳು ಚಿತ್ರಕೂಟ ಅನ್ವಯ(ವಂಶ)ದ ಸುರಾಷ್ಟಗಣದ ಸಿರಿನಂದಿ ಪಂಡಿತರ ಶಿಷ್ಯೆಯಾಗಿರುವಳು. ಸರಟೂರಿನ ೨೦೦ ಮಹಾಜನರು ಕೂಡಾ ಭೂದಾನವನ್ನು ಎಣ್ಣೆ ಗಾಣವನ್ನು ಮತ್ತು ಮನೆಯ ನಿವೇಶನವನ್ನು ಅದೇ ದೇವಾಲಯಕ್ಕೆ ನೀಡಿದ್ದಾರೆ.

ಈ ಶಾಸನವು ಶಕ ವರ್ಷ ೯೯೩ ಮಾಘಮಾಸ ಶುದ್ಧ ಪ್ರತಿಪದೆ ಆದಿತ್ಯವಾರ ಉತ್ತರಾಯಣ ಸಂಕ್ರಾಂತಿ ವ್ಯತಿಪಾತವೆಂದಿದೆ. ಪುಷ್ಯಮಾಸವೆಂಬುದು ತಪ್ಪಾಗಿ ಮುದ್ರಿತವಾಗಿದೆ. ಉಳಿದ ಮಾಹಿತಿಗಳು ಸರಿಯಾಗಿವೆ. ಇದು ಕ್ರಿ.ಶ. ೧೦೭೧ ಡಿಸೆಂಬರ್ ೨೫ ಆದಿತ್ಯವಾರಕ್ಕೆ ಸರಿ ಹೊಂದುತ್ತದೆ.

ಚಿತ್ರಕೂಟ ವಂಶದ ಇತರರನ್ನು ಈ ರೀತಿಯಾಗಿ ಸೂಚಿಸಲಾಗಿದೆ. ಚಂದನಂದಿ, ಸಿದ್ದಾಂತ, ಮುನಿಶ್ವರರು, ದಾವನಂದಿ ಸಿದ್ಧಾಂತ ಮುನಿಶ್ವರರು, ಸಕಳಚಂದ್ರ ಮುನೀಂದ್ರರು ಕನಕನಂದಿ, ಸೈದ್ಧಾಂತಿಕ ಮತ್ತು ಸಿರಿನಂದಿಪಂಡಿತ ದೇವರು.

ವೆಂಕಟೇಶ ದೇವಾಲಯ ಬಳಿಯ ಅಶ್ವತ್ಥ ಕಟ್ಟೆಯ ಜಗುಲಿಯಲ್ಲಿರುವ ಶಾಸನ

ಈ ಶಾಸನವು ಅಮೋಘವರ್ಷ-Iನ ರಾಜ್ಯಾಡಳಿತಕ್ಕೆ ಸಂಬಂಧಿಸಿದುದಾಗಿದೆ. ಮತ್ತು ಶಕ ವರ್ಷ ೭೮೮ ಸರ್ವಜಿತ್ ಸಂತ್ಸರವನ್ನು ಸೂಚಿಸುತ್ತದೆ. (ಕ್ರಿ.ಶ. ೮೬೭-೮೬೮) ಸರಟಪುರದ ೫೦ ಗಾವುಂಡರ ಪರವಾಗಿ ತುಪ್ಪದ ಮೇಲಿನ ತೆರಿಗೆಯನ್ನು ರದ್ದುಪಡಿಸಿದುದನ್ನು ತಿಳಿಸುತ್ತದೆ. ಈ ರದ್ದತಿಯು ಅಹವಾದಿತ್ಯ ಕುಪ್ಪೆಯರಸನು (ಯಾದವವಂಶ) ಮಾಡಿರುವನು. ಇದರೊಂದಿಗೆ ಈ ಸಮುದಾಯ ೫೦೦ ಜನರು ತುಪ್ಪದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಈ ದಾನವನ್ನು ನೀಡಿದ ಸಂದರ್ಭದಲ್ಲಿ ಕುಪ್ಪೆಯರಸನು ಪುಲಿಗೆರೆ ನಾಡನ್ನು ಆಳುತ್ತಿದ್ದನು.

ಮಲ್ಲೇಶ್ವರ ದೇವಾಲಯದ ಬಳಿಯಲ್ಲಿರುವ ಸ್ತಂಭಶಾಸನ

ಈ ಶಾಸನವು ದುರ್ಮುಖ ಸಂವತ್ಸರ ಅಶ್ವಯುಜ ಶುದ್ಧ ದಶಮಿ ಮಂಗಳವಾರವಾಗಿದೆ. ಲಿಪಿಶಾಸ್ತ್ರಗಳ ಆಧಾರದ ಮೇಲೆ ಈ ಶಾಸನವನ್ನು ೧೪ನೇ ಶತಮಾನವೆಂದು ಊಹಿಸಬಹುದು. ಹಾಗೇ ನೋಡಿದರೆ ಕ್ರಿ.ಶ. ೧೩೫೬ ಅಕ್ಟೋಬರ್ ೪ ಎಂದು ಊಹಿಸಬಹುದು.

ಹಂದಿಗನೂರಿನ ಸೀದೆನಾಯಕನ ಮಂತ್ರಿಯಾದ ಗಬ್ಬಿನಾಯಕನು ಹಾಳಾದಂತಹ ದೇವಾಲಯವನ್ನು ದುರಸ್ಥಿಗೊಳಿಸಿ ಬಸವೇಶ್ವರ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸಿದನು.

ಹನುಮಾನ್ ದೇವಾಲಯದ ಮುಂದಿನ ವೀರಗಲ್ಲಿನಲ್ಲಿರುವ ಶಾಸನ

ರಾಮನಾಥ ದೇವರ ಪರಮಭಕ್ತನು ಮಗರಮುರಾರಿ ಎಂಬ ವಿಶಾದಿಯನ್ನು ಹೊಂದಿರುವ ಮಹಾಮಂಡೇಲೇಶ್ವರ ತಿಲಕರಸನ ಪುತ್ರನಾದ ಹರಿಪೆಯ ನಾಯ್ಕನು ನಿಡುಗಲ್ಲಿನ ನಾಲ್ಕು ಕೋಟೆಗಳ ಮೇಲೆ ದಾಳಿ ನಡೆದಾಗ ಹೋರಾಡಿ ವೀರಮರಣವನ್ನು ಹೊಂದಿದ ಉಲ್ಲೇಖ ಈ ಶಾಸನದಲ್ಲಿದೆ. ಈ ಶಾಸನವು ಈಗ ಹಾಳಾಗಿದೆ.

ಜೈನಬಸದಿ ಹೊರಗಡೆ ಚಪ್ಪಡಿಯಲ್ಲಿರುವ ಶಾಸನ

ನರೇಂದ್ರಸೇನ ಭಟ್ಟಾರಕನ ಶಿಷ್ಯೆಯು ಹೆಬ್ಬಗೆಯ ನಾಗ, ಗಾವುಂಡನ ಹೆಂಡತಿಯಾದ ಪಾಮೆಗಾವುಡಿಯ ಮರಣವನ್ನು ಇದು ತಿಳಿಸುತ್ತದೆ.

ಪಲ್ಲೇದವರ ಬಾವಿಯೆಂದು ಕರೆಯಲ್ಪಡುವ ಬಾವಿಯ ಆವರಣದಲ್ಲಿರುವ ಶಾಸನ

ಪವಿತ್ರರಾಸಿಯ ಶಿಷ್ಯನಾದ ಧರ್ಮಶೆಟ್ಟಿಯು ಈ ಬಾವಿಯನ್ನು ನಿರ್ಮಿಸಿದನೆಂದು ತಿಳಿಸುತ್ತದೆ.

ವೀರಭದ್ರ ದೇವಾಲಯದ ಮುಂದೆ ನಿಲ್ಲಿಸಲಾದ ಕಂಬದ ಹಿಂಬದಿಯಲ್ಲಿರುವ ಶಾಸನ

ಇದು ದೇರಕೆರೆ ಗಾಯನನ್ನು ಉಲ್ಲೇಖಿಸುತ್ತದೆ. ಮತ್ತು ಒಂದು ದಾನದ ಉಲ್ಲೇಖವಿದೆ. ಈ ಶಾಸನವು ನಶಿಸಿಹೋಗಿದೆ.

ಬಾಲಕರ ಶಾಲೆಯ ಬಳಿಯ ಕಲ್ಲಿನಲ್ಲಿರುವ ಶಾಸನ

ರಾಮರಾಜನ ಮಂತ್ರಿಯಿಂದ ಸೊರಟೂರಿನ ತಿಮ್ಮೋಜನಿಗೆ ಒಂದು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಈ ಶಾಸನವು ಈಗ ಅಲ್ಲಿ ಸಿಗುತ್ತಿಲ್ಲ.

ವೀರಭದ್ರ ದೇವಾಲಯದ ಮುಂದಿನ ಸ್ತಂಭದಲ್ಲಿರುವ ಶಾಸನ

ಶಕವರ್ಷ ೮೦೫ ಶೋಭಕೃತ್ ಸಂವತ್ಸರ (ಕ್ರಿ.ಶ. ೮೮೩) ಎಂದು ಸೂಚಿಸುತ್ತಿರುವ ಈ ಶಾಸನವು ಅಕಾಲ ವರ್ಷ ಕನ್ನರ ಭಟ್ಟಾರ(ಕೃಷ್ಣ–II)ನ ಆಳ್ವಿಕೆಗೆ ಸಂಬಂಧಪಟ್ಟದ್ದಾಗಿದೆ. ಇದರಲ್ಲಿ ಪುಲಿಗೆರೆ ನಾಡನ್ನು ಇಂಡಪ್ಪಯ್ಯನು ಆಳ್ವಿಕೆ ನಡೆಸುತ್ತಿದ್ದನು. ಅದರಲ್ಲಿ ಸರಟವೂರ ಕೂಡಾ ಸೇರಿತ್ತು. ಇದು ಮಾಸಿಗಾರ ಚಿದಣ್ಣನು ಗೊಸಾಸವೆಂಬಂತಹ ದಾನವನ್ನು ಸರಟವೂರಿನ ೫೦ ಮಹಾಜನರ ಸಭೆಯ ಮುಂದೆ ನೀಡಿದನೆಂದು ಉಲ್ಲೇಖಿಸುತ್ತದೆ.

ವೀರಭದ್ರ ದೇವಾಲಯದ ಮುಂದಿನ ಸ್ತಂಭದಲ್ಲಿರುವ ಶಾಸನ

ಆನೆವೆಡಂಗ ಮದಗಜಮಲ್ಲ ಮತ್ತು ಚಲಕೆನಲ್ಲಾತ ಮೊದಲಾದ ಬಿರುದಾಂಕಿತನಾದ ಅಕಾಲ ವರ್ಷ ಕನ್ನರ ದೇವನ ಶಾಸನವಾಗಿದೆ. ಈತನ ಅಂಗರಕ್ಷಕನಾದ ರಂದ್ರಪಯ್ಯನು ಸರಟವೂರನ್ನು ಆಡಳಿತ ನಡೆಸುತ್ತಿರಲು ರಂದ್ರಪ್ಪಯ್ಯನ ಪೇರ್ಗಡೆ ಆಚಪಯ್ಯ ಮತ್ತು ಗಾವುಂಡಸಾಮಿ ಕತ್ತಿಯಮ್ಮನು ಊರಿನ ೫೦ ಮಹಾಜನರ ಮತ್ತು ಊರಒಡೆಯನಾದ ಪಿಟ್ಟಯ್ಯನ ಮುಂದೆ ದೇವಾಲಯದ ಬಳಿ ಇರುವ ಮಠದ ಖರ್ಚಿಗಾಗಿ ಮತ್ತು ವಿದ್ಯಾದಾನಕ್ಕಾಗಿ ಭೂಮಿ ಮತ್ತು ಹಣವನ್ನು ದಾನ ನೀಡಿದುದರ ಉಲ್ಲೇಖವಿದೆ. ಈ ದಾನವನ್ನು ಶಕ ವರ್ಷ ೮೭೩ ಮಾರ್ಗಶಿರ ಮಾಸ ಶುಕ್ಲಪಕ್ಷ ಹುಣ್ಣಿಮೆ ಆದಿತ್ಯವಾರ ಚಂದ್ರಗ್ರಹಣದ ಸಂದರ್ಭದಲ್ಲಿ ನೀಡಲಾಯಿತು. ವಿರೋಧಿಕೃತ್ ಸಂವತ್ಸರವಾದ ಈ ವರ್ಷ ಕ್ರಿ.ಶ. ೯೫೧ ನವೆಂಬರ್ ೧೬ನೇ ತಾರೀಕಿಗೆ ಸರಿ ಹೊಂದುತ್ತದೆ. ಮತ್ತು ಭೀಮರಸಿ ಭಟ್ಟಾರರಿಗೆ ಒಳ್ಳೆಯದಾಗಲೆಂದು ನೀಡಲಾಗಿದೆ.

ಅಮೋಘ ವರ್ಷ–Iನ ಕಾಲಕ್ಕೆ ಸಂಬಂಧಪಟ್ಟ ಶಾಸನ(ಕ್ರಿ.ಶ. ೮೬೯ರಲ್ಲಿ ರಚಿತವಾಗಿದೆ.)

ಸೊರಟೂರ ಗ್ರಾಮವು ಗದಗದಿಂದ ೧೨ ಮೈಲಿ ದೂರದಲ್ಲಿದೆ(ಹಿಂದೆ ಬಾಂಬೆ ರಾಜ್ಯದ ಧಾರವಾಡ ಜಿಲ್ಲೆಯ ಗದಗ ತಾಲೂಕಾಗಿತ್ತು). ಭಾರತೀಯ ಅಟ್ಲಾಸ್ ಪುಸ್ತಕದಲ್ಲಿ ಸೊರ್ಟುರು ಎಂದಿದ್ದು ೧೫೦ ಅಕ್ಷಾಂಶ ೭೫೦–೪೦ ರೇಖಾಂಶದಲ್ಲಿದೆ. ಈ ಗ್ರಾಮದಲ್ಲಿ ಹಲವಾರು

ಶಾಸನಗಳು ದೊರಕುತ್ತವೆ. ಅವುಗಳಲ್ಲಿ ಪ್ರಮುಖವೆಂದರೆ ಕ್ರಿ.ಶ. ೯೫೧ರ ಕಾಲದ ರಾಷ್ಟ್ರಕೂಟ ದೊರೆ ತೃತೀಯ ಕೃಷ್ಣನದಾಗಿದೆ. ಇದು ಇಂಡಿಯನ್ ಆಂಟಿಕ್ವೆರಿ Vol-೧೨ರಲ್ಲಿ ಪ್ರಕಟಗೊಂಡಿದೆ. ಸರಟವೂರು ಎಂಬಂಥ ಮೊದಲಿನ ಹೆಸರನ್ನೇ ಈ ಉಲ್ಲೇಖವು ಹೊಂದಿದೆ. ಹಳ್ಳಿಗಳ ಊರು ಅಥವಾ ಪಟ್ಟಣವೆಂದು ಇದರ ಅರ್ಥವಾಗಿದೆ. ಪ್ರಸ್ತುತ ಈ ಶಾಸನವು ಹೆಸರಿನಿಂದ ಈ ಸ್ಥಳವನ್ನು ಸೂಚಿಸಿಲ್ಲ. ಆದರೆ ಪುಲಿಗೆರೆ ನಾಡಿನಲ್ಲಿದೆ ಎಂದು ಸೂಚಿಸುತ್ತದೆ. ಪ್ರಸ್ತುತ ಈ ಗ್ರಾಮವು ಸಾಮಾನ್ಯ ಗ್ರಾಮವಾಗಿದ್ದು, ಪಾಳುಬಿದ್ದ ಕೋಟೆಗಳಿದ್ದು ಪ್ರಾಚೀನ ಕಾಲದಲ್ಲಿ ಅವುಗಳು ಮಹತ್ವ ಪಡೆದಿದ್ದವು.

ಇನ್ನೊಂದು ಶಾಸನವು ಅಣ್ಣಿಗೇರಿಯಲ್ಲಿ ದೊರೆತಿದ್ದು, ಹೊಯ್ಸಳ ದೊರೆ ವಿಜಯನಗರ ವೀರ ಬಲ್ಲಾಳ-೨ನ ಕಾಲಕ್ಕೆ ಸಂಬಂಧಪಟ್ಟದ್ದಾಗಿದೆ. ಇದರ ಕಾಲ ಕ್ರಿ.ಶ. ೧೨೦೨. ಇದರ ಪ್ರಕಾರ ತನ್ನ ಅಪಾರವಾದ ಗಜ ಸೈನ್ಯ, ಕುದುರೆ ಸೈನ್ಯ ಮತ್ತು ಪಾದಾಳುಗಳ ಸಹಾಯದಿಂದಾಗಿ ಅಜೇಯನೆನಿಸಿಕೊಂಡಂತಹ ದೇವಗಿರಿ ಯಾದವ ದೊರೆ ಬಿಲ್ಲಮನೊಂದಿಗೆ ಯುದ್ಧ ಮಾಡಿ ಅವನನ್ನು ಸೊರಟೂರಿನಿಂದ ಲೊಕ್ಕಿಗುಂಡಿಗೆ(ಲಕ್ಕುಂಡಿ) ಓಡಿಸಿದನು. ಈ ಲೊಕ್ಕಿಗುಂಡಿಯೇ ಈಗಿನ ಲಕ್ಕುಂಡಿಯಾಗಿದೆ. ಇದು ಗದಗದಿಂದ ೬ ಮೈಲಿ ದೂರದಲ್ಲಿದೆ.

ಇನ್ನೊಂದು ಶಾಸನ ಹರಿಹರದಲ್ಲಿ ದೊರಕಿದೆ. ಇದು ಬಲ್ಲಾಳನ ಮಗ ನರಸಿಂಹ-II ನದ್ದಾಗಿದೆ ಮತ್ತು ಕಾಲ ಕ್ರಿ.ಶ. ೧೨೨೪ ಆಗಿದೆ. ಇದು ಈ ಹಿಂದೆ ಹೇಳಿದ ರಾಜನ ಆಡಳಿತಕ್ಕೊಳಪಟ್ಟದ್ದಾಗಿದೆ. ಇದರ ಪ್ರಕಾರ ಬಲ್ಲಾಳನು ಸೇವುಣ ರಾಜರ ಸೈನ್ಯವನ್ನು ಭೇಟಿ ಮಾಡಿದನು. ಇದು ಬಿಲ್ಲಮನ ಸೈನ್ಯವಾಗಿದ್ದು, ೨ ಲಕ್ಷ ಸೈನಿಕರನ್ನು ಮತ್ತು ೧೨ ಸಾವಿರ ಸೈನ್ಯವನ್ನು ಹೊಂದಿತ್ತು. ಅನಂತರ ಇವರನ್ನು ಸೊರಟೂರಿನಿಂದ ಕೃಷ್ಣವೇಣಿ(ಕೃಷ್ಣ), ನದಿಯ ದಂಡೆಯವರೆಗೆ ಹಿಂಬಾಲಿಸಿಕೊಂಡು ಹೋದನು. ಅನಂತರ ಬಲ್ಲಾಳನು ಯರಂಬರಗೆ (ಯಲಬುರ್ಗಾ) ವೀರಾತನ(ಹಾನಗಲ್ಲ) ಬುತ್ತಿ, ಬೆಲ್ಲಿತ್ತಗೆ, ರಟ್ಟನಪಲ್ಲಿ, ಸೊರಟೂರ ಮತ್ತು ಕುರಗೋಡು ಮೊದಲಾದ ಸ್ಥಳಗಳಲ್ಲಿ ಕೋಟೆಗಳನ್ನು ನಿರ್ಮಿಸಿದನು.

ಇದು ದ್ವಿತೀಯ ಕೃಷ್ಣನಿಗೆ ಸಂಬಂಧಿಸಿದ ಶಾಸನ

ಈ ಮೇಲಿನ ಎರಡು ಶಾಸನಗಳು ಸೊರಟೂರ, ಮತ್ತು ಶಿರುಂಜ ಗ್ರಾಮಗಳಲ್ಲಿ ದೊರಕಿದೆ. ಸೊರಟೂರ (ಹಿಂದಿನ ಸರಟವೂರು) ಇಲ್ಲಿ ಹೊಯ್ಸಳರಾಜ ದ್ವಿತಿಯ ಬಲ್ಲಾಳ ಮತ್ತು ಯಾದವ ರಾಜ ಬಿಲ್ಲಮನ ನಡುವೆ ಯುದ್ಧ ನಡೆದಿತ್ತು. ಶಿರುಂಜ ಸೊರಟೂರಿನಿಂದ ೩ ಮೈಲಿ ದೂರ ಇರುವ ಈ ಗ್ರಾಮವು ಅಂತಹ ಮಹತ್ವವನ್ನು ಪಡೆದುಕೊಂಡಿಲ್ಲ. ಸೊರಟೂರಿಗೆ ಸಂಬಂಧಪಟ್ಟಂತಹ ಈ ಶಾಸನವು ವೆಂಕಟೇಶ ದೇವಾಲಯದ ಮುಂದಿದೆ ಮತ್ತು ಇದು ಉತ್ತಮ ಸ್ಥಿತಿಯಲ್ಲಿದೆ. ಶಿರುಂಜ ಶಾಸನವು ವೀರಗಲ್ಲು ಶಾಸನವಾಗಿದ್ದು, ಗ್ರಾಮದಲ್ಲಿರುವ ಶಾಲೆಯ ಬಳಿಯಲ್ಲಿದೆ. ಇದು ಈಗ ನಶಿಸಿ ಹೋಗಿದೆ.

ಹೀಗೆ ಶಾಸನಗಳನ್ನು ಅವಲೋಕಿಸಿದಾಗ ಕ್ರಿ.ಶ. ೮೬೮ರಿಂದ ೧೪ನೇ ಶತಮಾನಗಳವರೆಗೆ ಸುಮಾರು ೬೦೦ ವರ್ಷಗಳ ಕಾಲ ಸೊರಟೂರ ಗ್ರಾಮದ ಐತಿಹಾಸಿಕ ಘಟನೆಗಳು ಶಾಸನಗಳಲ್ಲಿ

ಪಡಿಮೂಡಿರುವುದನ್ನು ಕಾಣಬಹುದಾಗಿದೆ. ಒಂದು ಗ್ರಾಮದ ಚಾರಿತ್ರಿಕ ಹಿನ್ನೆಲೆಗೆ ಶಾಸನಗಳಷ್ಟೇ ಆಧಾರಗಳಲ್ಲ, ಜನಪದರ ವಾಕ್ಪರಂಪರೆಯಲ್ಲಿಯೂ ಗ್ರಾಮದ ಪರಿಚಯವನ್ನು ಕಾಣಬಹುದಾಗಿದೆ.[೧]

ಉದಾ: ಹಾಡು ಬರತಾವಂತ ಏರೇರಿ ಬರಬ್ಯಾಡ,
ಏರೀದ ಗರ್ವ ಇಳಿಸೇನು । ಸೊರಟೂರ
ಅಗಸೇಲಿ ನಿನ್ನ ಹುಗಸೇನು.

ಎಂಬ ಜನಪದ ತ್ರಿಪದಿಯಲ್ಲಿ ಕನ್ನಡ ಗರತಿಯು ದುಷ್ಟ ಪುರುಷನ ಸೊಕ್ಕು ಮುರಿದು ತನ್ನನ್ನು ತಾನು ರಕ್ಷಿಸಿಕೊಳ್ಳುವುದನ್ನು ಕಾಣಬಹುದಾಗಿದೆ. ಇಲ್ಲಿ ಬಂದಿರುವ ಸೊರಟೂರ ಅಗಸಿ ಎನ್ನುವುದು ಇಂದಿಗೂ ಗ್ರಾಮದಲ್ಲಿದ್ದು ಈಗ ಅದನ್ನು ಗಾಂಧಿ ಬಯಲು ಎಂದು ಗುರುತಿಸಲಾಗುತ್ತಿದೆ. ಹೀಗೆ ಸೊರಟೂರ ಗ್ರಾಮವು ಶಾಸನಗಳಲ್ಲಿ ಚಾರಿತ್ರಿಕ ಹಿನ್ನೆಲೆ ಪಡೆದಿದೆ. ಜಾನಪದೀಯ ಹಿನ್ನೆಲೆಯನ್ನು ಪಡೆದಿರುವುದನ್ನು ನಂತರದ ಹಂತಗಳಲ್ಲಿ ಕಾಣಬಹುದಾಗಿದೆ.

೩.೨. ಯುದ್ಧ ಭೂಮಿಯಾಗಿ ಸೊರಟೂರ ಗ್ರಾಮ

ಸೊರಟೂರ ಗ್ರಾಮವು ಅನೇಕ ಐತಿಹಾಸಿಕ ವಿಶೇಷತೆಗಳಿಂದ ಕೂಡಿದ ಕೇಂದ್ರವಾಗಿದ್ದಂತೆಯೇ ಹೊಯ್ಸಳ ಯಾದವರು ಮತ್ತು ಸೇವುಣ ಯಾದವರ (ದೇವಗಿರಿಯ ಯಾದವರು) ಮಧ್ಯ ನಡೆದ ಮಹಾಯುದ್ಧದ ಕೇಂದ್ರ ಸ್ಥಳವಾಗಿಯೂ ಇತಿಹಾಸದಲ್ಲಿ ನಮೂದಾಗಿದೆ(The Seunas of Devagiri: A.V. Narasimha Murty, Mysore; ೧೯೭೧, ಪು. ೩೦೮-೩೧೨). ಈ ಯುದ್ಧವು ಪಂಚಮ ಬಿಲ್ಲಮ ಮತ್ತು ದ್ವಿತೀಯ ಬಲ್ಲಾಳನ ಮಧ್ಯ ೧೧೮೯ರಲ್ಲಿ ನಡೆಯಿತು. ಕಲ್ಯಾಣದ ಮಾಂಡಲೀಕತ್ವವನ್ನು ಧಿಕ್ಕರಿಸಿ ಪಂಚಮ ಬಿಲ್ಲಮನು ತಾನು ಸರ್ವತಂತ್ರ ಸ್ವತಂತ್ರನೆಂದು ಘೋಷಿಸಿಕೊಂಡಿದ್ದ. ರಾಯಚೂರು ಭಾಗದ ಹೈಹಯ ಮತ್ತು ಕಲಚೂರಿಗಳನ್ನು ಸೋಲಿಸಿದ ಪಂಚಮ ಬಿಲ್ಲಮನು, ಚಾಲುಕ್ಯರ ಆಡಳಿತದಲ್ಲಿದ್ದ ಸೊಲ್ಲಾಪುರ ಮತ್ತು ವಿಜಾಪುರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಹಲವಾರು ಭಾಗಗಳನ್ನು ಗೆದ್ದು ಕ್ರಿ.ಶ. ೧೧೮೯ರಲ್ಲಿ ಮಲಪ್ರಭಾ ನದಿಯನ್ನು ದಾಟಿದ. ಚಾಲುಕ್ಯ ನೃಪತಿ ಚತುರ್ಥ ಸೋಮೇಶ್ವರ ಮತ್ತು ಕಲಚೂರಿ ಬಿಜ್ಜಳರ ನಡುವಿನ ಸಂಘರ್ಷದ ಲಾಭ ಪಡೆದ ಬಿಲ್ಲಮನು ತನ್ನ ಸೈನ್ಯವನ್ನು ಇನ್ನೂ ದಕ್ಷಿಣದೆಡೆಗೆ ಒಯ್ದು ಪುಲಿಗೆರೆ ಮತ್ತು ಬೆಳವೊಲ ಪ್ರದೇಶಗಳನ್ನು ಜಯಿಸಿದನು. ಬಿಲ್ಲಮನ ಈ ಆಕ್ರಮಣಕಾರಿ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದ ದ್ವಿತೀಯ ಹೊಯ್ಸಳ ಬಲ್ಲಾಳನು ಬಿಲ್ಲಮನನ್ನು ತಡೆಯಲು ನಿರ್ಧರಿಸಿದ. ಈ ಇಬ್ಬರ ನಡುವಿನ ಯುದ್ಧ ಸೊರಟೂರಿನಲ್ಲಾಯಿತು. ಇದರಲ್ಲಿ ಬಿಲ್ಲಮನು ಸೋತನು. ಅದನ್ನು ಬಲ್ಲಾಳನ ಶಿಲಾಲೇಖದಲ್ಲಿ ಬಿಲ್ಲಂನ ವಿರುದ್ಧ ಸಂಪಾದಿಸಿದ ವಿಜಯವನ್ನು ಅಭಿಮಾನದಿಂದ ವರ್ಣಿಸಲಾಗಿದೆ. ಬಿಲ್ಲಮನು ತನ್ನ ಸೈನಿಕ ಅಹಂಕಾರವನ್ನು ಪ್ರದರ್ಶಿಸುತ್ತ ಸೊರಟೂರಿನಲ್ಲಿ ಬಲ್ಲಾಳನ ಎದುರಾದಾಗ ಬಲ್ಲಾಳನು ತನ್ನ ಆನೆಯ ಮೇಲೆ ಕುಳಿತುಕೊಂಡೇ ಬಿಲ್ಲಮನನ್ನು ಲಕ್ಕುಂಡಿಯವರೆಗೆ ಹಿಂದೆ ಸರಿಸಿದನಂತೆ. ಮತ್ತೊಂದು ಕಡೆ ಬಲ್ಲಾಳನ ವಿಜಯವನ್ನು ಅತಿಶಯೋಕ್ತಿಯಾಗಿ ಹೊಗಳಲಾಗಿದೆ. ಸೇವುಣ ನೃಪತಿ ಬಿಲ್ಲಮನು ಎರಡು ಲಕ್ಷ ಸೈನಿಕರು ಮತ್ತು ಹನ್ನೆರಡು ಸಾವಿರ ಅಶ್ವದಳದೊಂದಿಗೆ ಬಲ್ಲಾಳನ ಎದುರು

ಬಂದಾಗ ಬಲ್ಲಾಳನು ತಾನೊಬ್ಬನೇ ಅಶ್ವಾರೋಹಿಯಾಗಿ ಬಿಲ್ಲಮನನ್ನು ಸೊರಟೂರಿನಿಂದ ಕೃಷ್ಣೆಯವರೆಗೆ ಹಿಂದಕ್ಕೆ ಸರಿಸಿದ ಎಂದು ಇತಿಹಾಸದಿಂದ ತಿಳಿದು ಬರುತ್ತದೆ. ಈ ಯುದ್ಧವೇ ಸೊರಟೂರಿನ ಬಟ್ಟಂಗಿಯಲ್ಲಿ ನಡೆದಿದೆ. ಸೊರಟೂರ ಗ್ರಾಮದಲ್ಲಿ ಈ ಯುದ್ಧಭೂಮಿಯ ಸ್ಥಳವನ್ನು ಭಟ್ಟಂಗಿ ಮೂಲಿ ಎಂದು ಕರೆಯುವ ರೂಢಿ ಇದೆ. ಈ ಭಟ್ಟಂಗಿ ಸ್ಥಳವು ಗ್ರಾಮದ ಉತ್ತರಭಾಗದ ಹೊರವಲಯದಲ್ಲಿದ್ದು, ಈಗ ಅಲ್ಲಿ ಜಗದ್ಗುರು ಅನ್ನದಾನೇಶ್ವರ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯವಿದೆ.

೩.೩. ದೇಸಾಯಿಯವರ ಕಾಲದಲ್ಲಿ ಸೊರಟೂರ ಗ್ರಾಮ

ಸೊರಟೂರ ದೇಸಾಯಿಯವರ ಆಡಳಿತದ ಕಾಲಾವಧಿಯನ್ನು ೫೦೦ ವರ್ಷಗಳಿಂದ ಅಂದರೆ ೧೬ನೇ ಶತಮಾನದಿಂದ ಈಚೆಗೆ ಎಂದು ಗ್ರಾಮಸ್ಥರು ಗುರುತಿಸುತ್ತಾರೆ. ಸೊರಟೂರ ದೇಸಾಯಿಯವರ ವಂಶದ ಪ್ರಮುಖರಲ್ಲಿ ಸೀನಪ್ಪಯ್ಯ, ವೆಂಕಪ್ಪಯ್ಯ ಬಹದ್ದೂರ ದೇಸಾಯಿ ಯವರನ್ನು ಗುರುತಿಸಲಾಗುತ್ತದೆ. ರೈತ ಪ್ರೇಮಿಯಾಗಿದ್ದ ದೇಸಾಯಿಯವರ ಆಡಳಿತದ ಕಾಲಾವಧಿಯಲ್ಲಿ ಗ್ರಾಮವು ಸುಭದ್ರವಾಗಿತ್ತು. ಹಲವಾರು ಸಾಂಸ್ಕೃತಿಕ, ಧಾರ್ಮಿಕ ಕೆಲಸಕಾರ್ಯಗಳು ಯಥೇಚ್ಛವಾಗಿ ನಡೆದಿದ್ದವು ಎಂದು ತಿಳಿಯುತ್ತದೆ. ಗ್ರಾಮದ ಗ್ರಾಮದೇವತೆಗಳಾದ ಶ್ರೀ ದುರ್ಗಾದೇವಿ, ದ್ಯಾಮವ್ವ ದೇವಿ, ಹಳಿಕೆಮ್ಮದೇವಿ, ಕಾಳಭೈರವ, ಬಸವೇಶ್ವರ ಮುಂತಾದ ದೇವಸ್ಥಾನಗಳನ್ನು ನಿರ್ಮಿಸಿದರು. ಹಾಗೂ ಆ ದೇವತೆಗಳ ಅರ್ಚಕರಿಗೆ ಭೂಮಿ ದಾನ ಮಾಡುವ ಮೂಲಕ ಸೊರಟೂರ ಧಾರ್ಮಿಕ ಶ್ರದ್ಧಾಕೇಂದ್ರವಾಗಲು ಶ್ರಮಿಸಿದ್ದಾರೆಂದು ಗ್ರಾಮಸ್ಥರು ಅಭಿಮಾನಪಡುತ್ತಾರೆ.

ಆಸ್ತಿಕರಾದ ದೇಸಾಯಿಯವರು ತಿರುಪತಿ ಸ್ವಾಮಿಯಲ್ಲಿ ಅಚಲ ಭಕ್ತಿಯುಳ್ಳವರಾಗಿದ್ದರು. ಅವರ ಇಳಿ ವಯಸ್ಸಿನಲ್ಲಿ ತಿರುಪತಿಗೆ ಹೋಗಲು ಸಾಧ್ಯವಾಗದೇ ಇರುವುದರಿಂದ ದೇವರು ಅವರ ಭಕ್ತಿಗೆ ಮೆಚ್ಚಿ ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ ತಾನೇ ಬಂದು ಅಲ್ಲಿ ನೆಲೆಸುವುದಾಗಿ ಹೇಳಿದನಂತೆ. ಅದರ ಪ್ರತೀಕವಾಗಿ ಇಂದು ಸೊರಟೂರ ಗ್ರಾಮದ ಉತ್ತರ ಭಾಗದ ೨ ಕಿ.ಮೀ. ಅಂತರದಲ್ಲಿ ಶ್ರೀ ಕ್ಷೇತ್ರ ವೆಂಕಟಾಪುರ ವೆಂಕಟೇಶ್ವರನು ನೆಲೆಸಿದ್ದಾನೆ. ಆ ಕ್ಷೇತ್ರ ಇಂದು ನಾಡಿನ ಜನರನ್ನು ಆಕರ್ಷಿಸುವ ಪ್ರವಾಸಿ ತಾಣವಾಗಿ, ಧಾರ್ಮಿಕ ಶ್ರದ್ಧಾಕೇಂದ್ರವಾಗಿ ಬೆಳೆದಿದೆ. ಗ್ರಾಮದ ದುರ್ಗಾದೇವಿ ಹಾಗೂ ಮಾದಮ್ಮ ದೇವಿಯು ಅವರ ಕಾಲಾವಧಿಯಲ್ಲಿ ಪವಾಡ ಮಾಡಿದ ದೇವತೆಗಳಾಗಿದ್ದಾರೆ. ಕಪ್ಪತ್ತಗುಡ್ಡದ ಸರಹದ್ದಿನಲ್ಲಿರುವ ಗ್ರಾಮಕ್ಕೆ ಕಾಡುಮೃಗಗಳ ಅದರಲ್ಲೂ, ಸಿಂಹದ ಕಾಟವಿತ್ತಂತೆ. ದೇಸಾಯಿಯವರು ಸಿಂಹವನ್ನು ಹೊಡೆದವರಿಗೆ ಅವರು ಬೇಡಿದ್ದನ್ನೇ ಕೊಡುವುದಾಗಿ ವಾಗ್ದಾನ ಮಾಡಿದರಂತೆ. ಆಗ ಮಾದಮ್ಮ ಎಂಬ ಮಹಿಳೆ ಆ ಸಿಂಹವನ್ನು ಕೊಂದಳು. ಆಗ ಅವಳು ಹರಿಯದಂಥ ಹಚ್ಚಡ ಕೊಡು, ಮುರಿಯದಂಥ ಉಂಗುರ ಕೊಡು ಎಂದಳಂತೆ. ದೇಸಾಯಿಯವರು ಆ ದೇವತಾ ಮಹಿಳೆಗೆ ಭೂಮಿ ಮತ್ತು ಬೆಳ್ಳಿಯ ಉಂಗುರ ಉಡುಗೊರೆಯಾಗಿ ಕೊಟ್ಟರಂತೆ. ನಂತರ ದೇಸಾಯಿಯವರು ಇಳಿವಯಸ್ಸಿನಲ್ಲಿ ದುರ್ಗಾದೇವಿ ದೇವಸ್ಥಾನಕ್ಕೆ ಬರಲು ಸಾಧ್ಯ ವಾಗದಿದ್ದಾಗ ದೇವಿಯೇ ಪ್ರತಿವರ್ಷ ಮಹಾನವಮಿಯ ಖಂಡೇ ಪೂಜೆಯ ದಿನ

ದೇಸಾಯಿಯವರ ಮನೆಗೆ ಹೋಗುತ್ತಾಳೆ. ಗ್ರಾಮದಲ್ಲಿ ಇಂದಿಗೂ ಆ ಆಚರಣೆ ರೂಢಿಯಲ್ಲಿದೆ. ದೇಸಾಯಿಯವರ ಮನೆಯಲ್ಲಿಯೇ ಇಂದು ಗ್ರಾಮ ಪಂಚಾಯತಿ ಆಡಳಿತ ನಡೆಯುತ್ತದೆ. ಗ್ರಾಮದ ಗಾಂಧಿ ಬಯಲಿನಲ್ಲಿರುವ ರಂಗಮಂದಿರವನ್ನು 'ರಾವಬಹದ್ದೂರ ದೇಸಾಯಿಯವರ ರಂಗಮಂದಿರ' ಎಂದು ಗುರುತಿಸಲಾಗುತ್ತಿದೆ. ರಾವಬಹದ್ದೂರ ದೇಸಾಯಿಯವರು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಸೇನಾನಿಯಾಗಿದ್ದು ಸ್ವಾತಂತ್ರ್ಯ ಹೋರಾಟದಲ್ಲಿ ಗ್ರಾಮಕ್ಕೆ ಪಾಲು ತೆಗೆದುಕೊಂಡಿದ್ದಾರೆ. ಆದರೆ ಇಂತಹ ದಿಟ್ಟ ಆಡಳಿತದ ಹಾಗೂ ಸ್ವಾತಂತ್ರ್ಯ ಸೇನಾನಿಯಾದ ರಾವಬಹದ್ದೂರ ದೇಸಾಯಿಯವರ ಕುರಿತು ಗ್ರಾಮದ ಇಂದಿನ ಪೀಳಿಗೆಗೆ ಪರಿಚಯವಾಗುವ ಹಿನ್ನೆಲೆಯಲ್ಲಿ ಮೂರ್ತಿ ಪ್ರತಿಷ್ಠಾಪನೆ ಸೇರಿದಂತೆ, ಬರಹದ ರೂಪದಲ್ಲಿಯು ಗುರುತರ ಕಾರ್ಯ ನಡೆಯಬೇಕಾಗಿದೆ.

ಬಹದ್ದೂರ ದೇಸಾಯಿ/ರಾವ್ ಬಹದ್ದೂರ ದೇಸಾಯಿ ಬಿರುದಿನ ಕುರಿತು ಇರುವ ವೈರುಧ್ಯಗಳು

ನರಗುಂದದ ಬಾಬಾಸಾಹೇಬ ಹಾಗೂ ಮುಂಡರಗಿ ಭೀಮರಾಯರ ಒಡನಾಡಿಗಳಾದ ಸೊರಟೂರ ದೇಸಾಯಿಯವರು ಸ್ವಾತಂತ್ರ್ಯ ಹೋರಾಟಗಾರರು. ಇವರು ಡಂಬಳದಲ್ಲಿಯೂ ಕೆಲಕಾಲ ಇದ್ದುದರಿಂದ ಡಂಬಳ ದೇಸಾಯಿಯವರು ಎಂದೂ ಕರೆಯುತ್ತಾರೆ ಆದರೆ ಸೊರಟೂರ ಗ್ರಾಮದಲ್ಲಿ ಇವರಿಗಿರುವ ಬಿರುದಿನ ಬಗ್ಗೆ ಹಲವಾರು ವೈರುಧ್ಯ ವಿಚಾರಗಳು ಇರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಸೊರಟೂರ ದೇಸಾಯಿಯವರ ಮೂಲ ಹೆಸರು ವೆಂಕಟಾದ್ರಿ ದೇಸಾಯಿ. ಈಗ ಇವರನ್ನು ಗ್ರಾಮಸ್ಥರು ರಾವ್‌ಬಹದ್ದೂರ ದೇಸಾಯಿ ಎಂದೇ ನೆನಪಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಗ್ರಾಮದ ದೇಸಾಯಿಯವರ ಓಣಿಯಲ್ಲಿ ರಾವ್‌ಬಹದ್ದೂರ ಯುವಕ ಮಂಡಲವಿದೆ. ಇದು ಸೊರಟೂರ ದೇಸಾಯಿಯವರ ಬಿರುದಾಗಿರುವುದರಿಂದ ಅವರ ಸ್ಮರಣೆಗಾಗಿ ಈ ಯುವಕ ಮಂಡಲ ರಚಿಸಿರುವುದಾಗಿ ತಿಳಿಯುತ್ತದೆ. ಆದರೆ ಮೂಲತಃ ಸೊರಟೂರ ಗ್ರಾಮದವರಾದ ಈಗ ಮೈಸೂರಿನಲ್ಲಿರುವ ಡಾ. ಬಿ.ಬಿ. ರಾಜಪುರೋಹಿತರು ಹೇಳುವ ಪ್ರಕಾರ 'ರಾವ್‌ಬಹದ್ದೂರ' ಎಂಬುದು ಬ್ರಿಟಿಷರು ತಮ್ಮ ಪರವಾಗಿ ಇರುವವರಿಗೆ ಕೊಡುತ್ತಿದ್ದ ಬಿರುದು. ಆದರೆ ಸೊರಟೂರಿನ ವೆಂಕಟಾದ್ರಿ ದೇಸಾಯಿಯವರು ಬ್ರಿಟಿಷ್ ವಿರೋಧಿಯಾಗಿದ್ದರು. ಆದ್ದರಿಂದ ಅವರಿಗೆ ರಾವ್ ಬಹದ್ದೂರ ಬಿರುದು ಕೊಟ್ಟಿಲ್ಲ.ಆದರೆ ಸೊರಟೂರಿನ ವೆಂಕಟಾದ್ರಿ ದೇಸಾಯಿಯವರ ಶೌರ್ಯ-ಸಾಹಸಗಳನ್ನು ಮೆಚ್ಚಿ ವಿಜಯನಗರದ ಅರಸರು **ಬಹದ್ದೂರ** ಎಂಬ ಬಿರುದು ಕೊಟ್ಟಿದ್ದರು. ಆದ್ದರಿಂದ ಅವರಿಗೆ ಬಹದ್ದೂರ ದೇಸಾಯಿ ಎಂದು ಕರೆಯುತ್ತಿದ್ದರು. ಬಹದ್ದೂರ ಎಂಬುದನ್ನು ಇತ್ತೀಚಿನ ಜನ ತಪ್ಪಾಗಿ ಅರ್ಥೈಸಿಕೊಂಡಿರಬಹುದು ಎಂಬುದು ಪ್ರೊ. ಬಿ.ಬಿ. ರಾಜಪುರೋಹಿತ ಅವರ ಅಭಿಪ್ರಾಯ. ರಾಜಪುರೋಹಿತರು ೧೯೫೬ರಲ್ಲಿ ಸ್ವಾತಂತ್ರ್ಯ ಹೋರಾಟ ಕುರಿತು ಲೇಖನಗಳನ್ನು ಬರೆದಿದ್ದು ಸೊರಟೂರ ದೇಸಾಯಿಯವರ ಕುರಿತು ಮಾಹಿತಿ ಉಳ್ಳವರಾಗಿದ್ದಾರೆ.

೩.೪. ಶಿವಾಜಿಯ ಮೂಲ ಸ್ಥಳವಾಗಿ ಸೊರಟೂರ ಗ್ರಾಮ

ಇತಿಹಾಸವೆಂಬುದು ಗತಕಾಲದ ಪ್ರತಿಬಿಂಬವೆಂಬುದು ಸರ್ವೇಸಾಮಾನ್ಯ ಮಾತು. ಆದರೆ ಕೆಲವು ಐತಿಹಾಸಿಕ ವಿಷಯಾಂಶಗಳು ಮೂಲ ಸತ್ಯದಿಂದ ಮರೆಮಾಚಿರುತ್ತವೆ. ಅಂದರೆ ಇತಿಹಾಸವು ಒಂದೊಂದು ಸಲ ಭೂತದಲ್ಲಿ ಕಳೆದು ಹೋಗಿರುತ್ತದೆ. ಅದು ಕಳೆದುಹೋಗಿದೆ

ಎಂದು ಆಗ ನಡೆದ ಘಟನೆಗಳೇನು ಸುಳ್ಳಾಗಿರುವುದಿಲ್ಲ. ಕಳೆದು ಹೋದದ್ದು ಮತ್ತೆ ಸಿಕ್ಕಿತೆಂದರೆ ಹಿಂದಿನ ಇತಿಹಾಸವು ಮತ್ತೆ ಸೂರ್ಯ ಪ್ರಕಾಶದಷ್ಟು ಉಜ್ವಲವಾಗಿ ಹೊಳೆಯಲಾರಂಭಿಸುತ್ತದೆ. ಸೂರ್ಯನನ್ನು ಮೋಡಗಳು ಮುಚ್ಚಿವೆ ಎನ್ನುವುದಕ್ಕಿಂತ ಸೂರ್ಯನೇ ಇಲ್ಲವೆಂದು ಹೇಳುವುದು ಮೂರ್ಖತನವಾಗುತ್ತದೆ. ಆ ಮೋಡಗಳು ಸರಿಯುತ್ತಲೇ ಸೂರ್ಯ ಮತ್ತೆ ಬೆಳಗಲಾರಂಭಿಸುತ್ತಾನೆ. ಅಂದರೆ ನಂತರದ ಸಂಶೋಧನೆಯಿಂದ ಮೂಲ ಸತ್ಯ ಬೆಳಕಿಗೆ ಬರುತ್ತದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮವು ಐತಿಹಾಸಿಕ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಛತ್ರಪತಿ ಶಿವಾಜಿ ಮಹಾರಾಜರ ಮೂಲಪುರುಷರು ಕರ್ನಾಟಕದ ಸೊರಟೂರ ಗ್ರಾಮದವರು ಎಂಬುದು ಮಹಾರಾಷ್ಟ್ರದ ಖ್ಯಾತ ಸಂಶೋಧಕರಾದ ರಾಮಚಂದ್ರ ಚಿಂತಾಮಣಿ ಡೇರೆಯವರು 'ಶಿಖರ ಸಿಂಗಣಾಪುರಚ ಶಂಬುಮಹಾದೇವ' ಕೃತಿ ಅನುವಾದಿಸಿದ ಸರಜೂ ಕಾಟ್ಕರ್ ಅವರ 'ಶಿವಾಜಿಯ ಮೂಲ ಕನ್ನಡ ನೆಲ' ಹಾಗೂ ಡಾ. ವಿಠ್ಠಲರಾವ ಟಿ. 'ಗಾಯಕ್ವಾಡ್ ಅವರ ಶಿಖರಸಿಂಗಣಾಪೂರದ ಶಂಭು ಮಹಾದೇವ' ಎಂಬ ಕೃತಿಯಿಂದ ತಿಳಿದು ಬರುತ್ತದೆ.

ಸೌರಾಷ್ಟ್ರವಾದ ಸೊರಟೂರ ಗ್ರಾಮ

ಸೊರಟ ಪ್ರದೇಶದಿಂದ ಹದಿನಾಲ್ಕು ಅಥವಾ ಹದಿನೈದನೆಯ ಶತಮಾನದಲ್ಲಿ ಸಮೀಪದ ಮಹಾರಾಷ್ಟ್ರಕ್ಕೆ ಬಹುದೊಡ್ಡ ವಲಸೆಯು ನಡೆಯಿತೆಂದು ಇತಿಹಾಸ ದಾಖಲಿಸಿದೆ. ಆಗ ಶಿವಾಜಿ ಮಹಾರಾಜರ ಮೂಲಪುರುಷರಾದ ಬಳಿಯಪ್ಪ ಹಾಗೂ ಆತನ ಅಸಂಖ್ಯ ಸಮಾಜ ಬಾಂಧವರು ಮಹಾರಾಷ್ಟ್ರಕ್ಕೆ ಸ್ಥಳಾಂತರಗೊಂಡಿರುವ ಇತಿಹಾಸವನ್ನು ಇಲ್ಲಿಯವರೆಗೆ ಗಮನಿಸಲಾಗಿತ್ತು. ಆದರೆ ಸೊರಟ ಪ್ರದೇಶವೆಂದರೆ ಯಾವುದು ಅದು ಎಲ್ಲಿದೆ? ಯಾವ ರಾಜ್ಯದಲ್ಲಿದೆ ಎಂಬುದನ್ನು ಶೋಧನೆ ಮಾಡಿದಾಗ ಹಲವಾರು ಅಚ್ಚರಿಯ ಅಂಶಗಳು ಬೆಳಕಿಗೆ ಬಂದವು. ಬಳಿಯಪ್ಪನ ಸೊರಟವನ್ನು ಮಹಾರಾಷ್ಟ್ರದ ಇತಿಹಾಸಕಾರರು ರಾಜಸ್ಥಾನದ ಸೌರಾಷ್ಟ್ರವೆಂದೇ ಭಾವಿಸಿದರು. ಇಲ್ಲಿಯ ಸೋಮನಾಥನನ್ನು ಅಂದರೆ ಕರ್ನಾಟಕದ ಪುಲಿಗೆರೆಯ (ಲಕ್ಷ್ಮೇಶ್ವರದ) ಸೋಮನಾಥನನ್ನು ಸೌರಾಷ್ಟ್ರದ ಸೋಮನಾಥನೆಂದೇ ಬಗೆಯಲಾಯಿತು. ಆದರೆ ಮಹಾರಾಷ್ಟ್ರಕ್ಕೆ ರಾಜಸ್ಥಾನದ ಸೌರಾಷ್ಟ್ರದಿಂದ ಯಾರೂ ವಲಸೆ ಬಂದಿರಲಿಲ್ಲವೆಂಬುದನ್ನು ಈ ಇತಿಹಾಸಕಾರರು ಅರಿಯದೇ ಹೋದರು. ಕರ್ನಾಟಕದ ಹಾಗೂ ಮಹಾರಾಷ್ಟ್ರದ ಪಶುಪಾಲಕ ಸಮಾಜ ಆರಂಭದಿಂದಲೂ ಶೈವ ಪ್ರಭಾವದಡಿಯಲ್ಲಿದೆ. ಈ ಸಮಾಜದ ಬೀರೋಬಾ ದೇವರು ಅನೇಕ ಪ್ರಸಂಗಗಳಲ್ಲಿ ವೀರಭದ್ರನಾಗಿದ್ದಾನೆ. ಈ ವೀರಭದ್ರನೇ ಸೋಮನಾಥನಾಗಿದ್ದಾನೆ. ಆದರೆ ಬಳಿಯಪ್ಪ ಮಹಾರಾಷ್ಟ್ರಕ್ಕೆ ವಲಸೆ ಹೋಗಲು ಅಂದಿನ ಭಯಂಕರ ಬರಗಾಲ ಕಾರಣವಾಗಿತ್ತು. ಅದಕ್ಕೆ ಈ ಬರಗಾಲಕ್ಕೆ ಸೋರಟಚಾ ದುಷ್ಕಾಳ ದುರ್ಗಾದೇವಿಚಾ ದುಷ್ಕಾಳ ಎಂದು ಕರೆಯಲಾಗಿದೆ. ದುರ್ಗಾದೇವಿಯ ಬರಗಾಲ ಮತ್ತು ಸೋರಟಿನ ಬರಗಾಲ ಇವೆರಡೂ ಒಂದೇ. ಈ ಬರಗಾಲದಿಂದ ಸೋರಟ ಪ್ರದೇಶದ ಜನ ತಮ್ಮ ದನಕರು, ಕುರಿಗಳೊಂದಿಗೆ ಮಹಾರಾಷ್ಟ್ರದಲ್ಲಿ ನೆಲೆಸಿದ್ದರು ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಇದರಲ್ಲಿರುವ 'ರಾಮಣ', 'ತಿಮಣಾ' ಎಂಬಿತ್ಯಾದಿ ಹೆಸರುಗಳು ಕನ್ನಡವಾಗಿರುವುದರಿಂದ ಸೋರಟ ಪ್ರದೇಶವು ಕರ್ನಾಟಕದಲ್ಲಿದೆ ಎಂಬುದು ಐತಿಹಾಸಿಕವಾಗಿ ಸಿದ್ಧವಾಗುತ್ತದೆ. ಮಹಾರಾಷ್ಟ್ರದ ದಕ್ಷಿಣ ಭಾಗಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಭಾಗದಿಂದಲೇ

ಈ ಜನರು ಮಹಾರಾಷ್ಟ್ರ ಪ್ರವೇಶಿಸಿರಬೇಕೆಂಬುದು ಐತಿಹಾಸಿಕ ಸತ್ಯ. ಮಹಾರಾಷ್ಟ್ರದ ದಕ್ಷಿಣ ಭಾಗಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಪ್ರದೇಶವೆಂದರೆ ಉತ್ತರ ಕರ್ನಾಟಕ. ಹೀಗಾಗಿ ಈ ಸೋರಟ ಉತ್ತರ ಕರ್ನಾಟಕದಲ್ಲಿಯೇ ಇರುವ ಗದಗ ಜಿಲ್ಲೆಯ ಈಗಿನ ಸೊರಟೂರ ಎಂಬುದು ಸ್ಪಷ್ಟವಾಗುತ್ತದೆ.

ಕೃಷ್ಣದಾಸ ದಾಮ ಕವಿಯ ಆದಿಪರ್ವದಲ್ಲಿ ಬಳಿಪ ಕಥೆ ಬಂದಿದೆ. ಇಲ್ಲಿ ಬಳಿಪ ಅಥವಾ ಬಳಿಯಪ್ಪ ಭಕ್ತಿಗರ್ವಿಷ್ಟನಾಗಿದ್ದಾನೆ. ಭಕ್ತಿಯ ಅತಿರೇಕ (ಸೊಕ್ಕು) ಅವನಿಗೆ ಬಂದಿದೆ. ಈ ಬಳಿಯಪ್ಪ ನಾರದನನ್ನು ಅವಮಾನಿಸುತ್ತಾನೆ. ಅದರ ಪರಿಣಾಮವಾಗಿ ನಾರದ ಸಿಟ್ಟಿಗೆದ್ದು ಆತನಿಗೆ ಶಪಿಸುತ್ತಾನೆ.

> ಸೋರಟ ಓಸ್ ಪಡೇಲ್
> ದೇವಾಚಿ ಪೂಜಾ ಥಾಂಬೇಲ್
> ಸೋರಟ ಸೋಡುನ ಜಾವೇ ಲಾಗೇಲ
> ದೇವಹಿ ನಿಘುನ ಜಾಯಿಲ

(ಸೋರಟ ಹಾಳಾಗುತ್ತದೆ. ದೇವರ ಪೂಜೆ ನಿಲ್ಲುತ್ತದೆ. ನೀನು ಸೋರಟ ಬಿಟ್ಟು ಹೊರಡಬೇಕಾಗುತ್ತದೆ. ದೇವರೂ ಅಲ್ಲಿಂದ ಹೊರಟು ಹೋಗುತ್ತಾನೆ).

ಕೃಷ್ಣದಾಸ ದಾಮ ಎಂಬ ಕವಿಯಲ್ಲಿ ಬರುವ ಬಳಿಪ ಪುರಾಣ ಪುರುಷನಾಗಿದ್ದಾನೆ. ಇಲ್ಲಿ ನಾರದನ ಈ ಘಟನೆಗಳ ಹೊರತಾಗಿಯೂ ಕಥೆಯನ್ನು ಅವಲೋಕಿಸಿದರೆ ಕೃಷ್ಣದಾಸ ಏನೋ ನಡೆದ ಒಂದು ಪ್ರಸಂಗವನ್ನು ಇಲ್ಲಿ ಹೇಳುತ್ತಿರುವಂತೆ ಅನಿಸುತ್ತದೆ. ಬಳಿಯಪ್ಪ ಸೋರಟ ಬಿಡುವ ಒಂದು ಘಟನೆಯನ್ನು ಕವಿ ನಾರದನ ಶಾಪದ ಮೂಲಕ ಇಲ್ಲಿ ನಿಜ ಮಾಡಿಸಿದ್ದಾನೆ.[೨]

ಶಿವಾಜಿ ಮಹಾರಾಜರ ಅಡ್ಡಹೆಸರು ಅಥವಾ ಮನೆತನದ ಹೆಸರು ಭೋಸಲೆ ಎಂದಿದೆ. (ಇದನ್ನು ಬೋಂಸಲೆ ಎಂದೂ ಉಚ್ಚರಿಸುತ್ತಾರೆ) ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಮನೆತನದ ಹೆಸರು (ಅಡ್ಡಹೆಸರು) ಆ ಮನೆತನದ ಮೂಲ ಊರಿನಿಂದ ಅಥವಾ ಆತನ ಜಾತಿಯಿಂದ ಅಥವಾ ವೃತ್ತಿಯಿಂದ ಬಂದಿರುತ್ತದೆ. ಅಡ್ಡಹೆಸರುಗಳು ಸಾಮಾನ್ಯವಾಗಿ ಆಯಾ ವ್ಯಕ್ತಿಯ ಮನೆತನದ ಇತಿಹಾಸವನ್ನೇ ಹೇಳುತ್ತವೆ. ಶಿವಾಜಿ ಮಹಾರಾಜರ ಭೋಸಲೆ ಅಡ್ಡಹೆಸರಿನ ಬಗ್ಗೆಯೂ ಶೋಧ ನಡೆಯಿತು. 'ಬೋಸಾ' ಅಥವಾ 'ಭೋಸೆ' ಹಳ್ಳಿಯಿಂದ ಈ ಭೋಸಲೆಗಳು ಬಂದಿರಬಹುದೆಂದು ಊಹಿಸಿ ಭೋಸಾ ಮತ್ತು ಭೋಸೆ ಹಳ್ಳಿಗಳನ್ನು ಮಹಾರಾಷ್ಟ್ರದ ತುಂಬಾ ಹುಡುಕುವ ಯತ್ನವೂ ನಡೆಯಿತು. ಆದರೆ ಈ ಹಳ್ಳಿಗಳು ವರ್ತಮಾನದಲ್ಲಾಗಲಿ ಅಥವಾ ಭೂತಕಾಲದಲ್ಲಾಗಲಿ ಇದ್ದ ಯಾವ ಕುರುಹುಗಳು ಸಿಗಲಿಲ್ಲ. ಭೋಸಲೆ ಶಬ್ದವು ಹೊಯ್ಸಳ ಶಬ್ದದ ತದ್ಭವವೆಂದು ತಿಳಿದ ಹಲಕೆಲ ಸಂಶೋಧಕರು ಆ ದಿಕ್ಕಿನಲ್ಲಿ ತಮ್ಮ ಸಂಶೋಧನೆಯನ್ನು ಮುಂದುವರೆಸಿದಾಗ ಅವರಿಗೆ ಅದ್ಭುತವಾದ ಸತ್ಯವೇ ಗೋಚರಿಸಿತು. ಇಲ್ಲಿಯವರೆಗೆ ಬೂದಿ ಮುಚ್ಚಿಕೊಂಡಿದ್ದ ಸತ್ಯವು ಒಮ್ಮಿಂದೊಮ್ಮೆಲೇ ಹೊರಬಂದು ಹೊಳೆಯಲಾರಂಭಿಸಿತು. ಶಿವಾಜಿ

ಮಹಾರಾಜರು ಹೊಯ್ಸಳ ಮನೆತನಕ್ಕೆ ಸಂಬಂಧಪಟ್ಟವರೆಂಬ ಸತ್ಯವು ಜಗಜ್ಜಾಹೀರಾಯಿತು. ಈ ಹೊಯ್ಸಳವು ಹೊಂಸಲ್‌ವಾಗಿ ನಂತರ ಹೊಂಸಲೆಯಾಗಿ ಕ್ರಮೇಣ ಅದು ಭೋಸಲೆ ಆಗಿದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟರು. ಈ ಅಭಿಪ್ರಾಯವನ್ನು ಈಗ ಮಹಾರಾಷ್ಟ್ರ ಒಪ್ಪಿಕೊಂಡಿದೆ.

ಈ ಎಲ್ಲಾ ಪ್ರಸಂಗಗಳನ್ನು ಸಂದರ್ಭಾನುಸಾರವಾಗಿ ಅಭ್ಯಸಿಸಿದಾಗ ಶಿವಾಜಿ ಮಹಾರಾಜರ ಮೂಲವು ರಾಜಸ್ಥಾನವಾಗಿರದೇ ಬೇರೆ ಎಲ್ಲಿಯೋ ಇದೆ ಎಂಬ ಅಭಿಪ್ರಾಯಕ್ಕೆ ಬಂದರು. ಶಿವಾಜಿ ಮಹಾರಾಜರ ಅಡ್ಡಹೆಸರು ಅವರು ಕರ್ನಾಟಕದ ಹೊಯ್ಸಳರೆಂದು ನಿರ್ದೇಶಿಸುತ್ತಿತ್ತು. ಮನೆತನದ ಮೂಲವನ್ನು ಹುಡುಕಲು ಹೋದಾಗ ಅವರ ಮನೆದೇವರಿಂದ ಸಂಶೋಧನೆ ಆರಂಭವಾಗುವುದು ಸಾಮಾನ್ಯ. ಮನುಷ್ಯ ಎಷ್ಟೇ ಬದಲಾಗಿದ್ದರೂ ಅಥವಾ ಊರಿಂದ ಊರಿಗೆ ವಲಸೆ ಹೋಗಿದ್ದರೂ ಆತನ ಮನೆದೇವರು ಬದಲಾಗಿರುವುದಿಲ್ಲ. ಆ ಹಿನ್ನೆಲೆಯಲ್ಲಿ ನೋಡಿದಾಗ ಶಿಖರ ಸಿಂಗಣಾಪೂರದ ಶಂಭು ಮಹಾದೇವನು ಶಿವಾಜಿ ಮಹಾರಾಜರ ಮನೆದೇವರಾಗಿದ್ದರೂ ಅವನು ಶ್ರೀಶೈಲದಲ್ಲಿರುವ ಮಲ್ಲಿಕಾರ್ಜುನನ ಪ್ರತಿರೂಪವೆಂಬ ದಾಖಲೆಗಳು ಸಿಕ್ಕಿದವು. ಶಿಖರ ಸಿಂಗಣಾಪೂರದ ಶಂಭು ಮಹಾದೇವನನ್ನು ಸ್ಥಾಪಿಸಿದವನ ಹೆಸರು ಬಳಿಯಪ್ಪ ಅಥವಾ ಬಳೀಪನೆಂಬುದು ಗೊತ್ತಾಯಿತು. ಈ ಬಳಿಯಪ್ಪನೇ ಶಿಖರ ಸಿಂಗಣಾಪೂರದ ದೇವಸ್ಥಾನವನ್ನು ಕಟ್ಟಿದವನು ಎಂದು ತಿಳಿದು ಬಳಿಯಪ್ಪನ ಜಾಡು ಹಿಡಿದು ಹೊರಟ ಢೇರೆಯವರಿಗೆ ಈ ಬಳಿಯಪ್ಪನೇ ಶಿವಾಜಿ ಮಹಾರಾಜರ ವಂಶದ ಮೂಲ ಪುರುಷನೆಂದು ಸೂರ್ಯಪ್ರಕಾಶದಷ್ಟೇ ಸ್ಪಷ್ಟವಾಯಿತು. ಬಳಿಯಪ್ಪನ ಮೂಲ ಮನೆದೇವರು ಶ್ರೀಶೈಲದ ಮಲ್ಲಿಕಾರ್ಜುನನಾಗಿದ್ದ. ಆತ ಶಿಖರ ಸಿಂಗಣಾಪೂರದಲ್ಲಿ ವಾಸ್ತು ವ್ಯಕ್ತಿಯಾಗಿದ್ದಾಗ ಶ್ರೀಶೈಲದಲ್ಲಿರುವಂತೆಯೇ ಗುಡಿಯನ್ನು ಕಟ್ಟಿಸಿದ ಬಳಿಯಪ್ಪ ಜಾತಿಯಿಂದ ಗವಳಿಗನಾಗಿದ್ದ ಆತನ ಕಡೆಗೆ ಸಾವಿರಾರು ಸಂಖ್ಯೆಯಲ್ಲಿ ಆಕಳು ಎಮ್ಮೆಗಳಿದ್ದವು. ಪಶುಪಾಲಕರ ಸಮೂಹದ ನಾಯಕನು ಅವನಾಗಿದ್ದ. ತನ್ನ ಪಶು ಸಂಪತ್ತಿನೊಂದಿಗೆ ಬಳಿಯಪ್ಪ ಮಹಾರಾಷ್ಟ್ರಕ್ಕೆ ವಲಸೆ ಹೋಗಿದ್ದನು. ಶ್ರೀಶೈಲದಿಂದ ಹಿಡಿದು ಶಿವಾಜಿ ಹೀಗೆ ಅನೇಕ ದೃಷ್ಟಾಂತಗಳು ಢೇರೆಯವರ ಕೃತಿಯಿಂದ ತಿಳಿದು ಬರುತ್ತವೆ. ಲಕ್ಷ್ಮೇಶ್ವರದಲ್ಲಿರುವ ಸೋಮನಾಥನ ಗರ್ಭಗುಡಿಯ ಮುಂಭಾಗದಲ್ಲಿ ಶಿವಲಿಂಗವಿರುವ ಜಾಗವು ಖಾಲಿಯಾಗಿದ್ದುದನ್ನು ಢೇರೆಯವರು ಗಮನಿಸಿದ್ದಾರೆ. ಅವರ ಸಂಶೋದನೆಯಂತೆ ಅಲ್ಲಿ ಸ್ಫಟಿಕ ರೂಪದ ಒಂದು ಲಿಂಗವಿದ್ದಿತು ಮತ್ತು ಅದನ್ನು ಬಳಿಯಪ್ಪ ಆರಂಭದಿಂದಲೂ ಪೂಜಿಸುತ್ತಿದ್ದ. ಸೊರಟೂರಿನಿಂದ ಮಹಾರಾಷ್ಟ್ರಕ್ಕೆ ವಲಸೆ ಹೋಗುವ ಕಾಲಕ್ಕೆ ಈ ಸ್ಪಟಿಕ ರೂಪದ ಲಿಂಗವನ್ನು ಆತ ತನ್ನ ಜೊತೆಗೆ ತೆಗೆದುಕೊಂಡು ಹೋದ. ಈ ಸ್ಫಟಿಕ ಲಿಂಗವು ಭೋಸಲೆ ಮನೆತನದವರ ದೇವರ ಮನೆಯಲ್ಲಿ ಪೂಜಿಸುವ ಲಿಂಗವಾಯಿತು. ಈ ಸಂಪ್ರದಾಯವು ಛತ್ರಪತಿ ಶಿವಾಜಿ ಮಹಾರಾಜರವರೆಗೂ ನಡೆದು ಬಂದಿತು. ಶಿವಾಜಿ ಮಹಾರಾಜರು ಪ್ರತಾಪಗಡದಲ್ಲಿ ಶ್ರೀ ಭವಾನಿ ಗುಡಿಯನ್ನು ಕಟ್ಟಿಸಿದಾಗ ಭವಾನಿ ಮೂರ್ತಿಯ ಎದುರು ಈ ಲಿಂಗವನ್ನು ಪ್ರತಿಷ್ಠಾಪಿಸಿದರು. ಎಂದು ತಿಳಿಯುತ್ತದೆ.[೩]

ಬಳಿಯಪ್ಪನ ಊರು ಕರ್ನಾಟಕದ ಸೊರಟೂರ

ಕರ್ನಾಟಕದ ಸೊರಟೂರ ಪ್ರದೇಶದಿಂದ ಬಳಿಯಪ್ಪ ಹಾಗೂ ಆತನ ಅಸಂಖ್ಯ ಸಮಾಜ ಬಾಂಧವರು ಮಹಾರಾಷ್ಟ್ರಕ್ಕೆ ಸ್ಥಳಾಂತರಗೊಂಡಿರುವ ಇತಿಹಾಸವನ್ನು ಇಲ್ಲಿಯವರೆಗೆ ಗಮನಿಸಿದ್ದೇವೆ. ಬಳಿಯಪ್ಪನ ಊರುಸೋರಟ-ಇರುವುದೆಲ್ಲಿ ಹಾಗೂ ಆತನಿಗೆ ಮತ್ತು ಆತನ ಸಮಾಜ ಬಾಂಧವರಿಗೆ ಕರ್ನಾಟಕದದಿಂದ ಮಹಾರಾಷ್ಟ್ರಕ್ಕೆ ಸ್ಥಳಾಂತರಗೊಳ್ಳಬೇಕಾದ ನಿರ್ದಿಷ್ಟ ಕಾರಣವೇನಿದ್ದಿತು ಎಂಬುದನ್ನು ಈಗ ಗಮನಿಸಬೇಕಾಗಿದೆ. ಸಾಮಾನ್ಯವಾಗಿ ಸಾಮೂಹಿಕ ವಲಸೆಗಳು ಬರಗಾಲ ಕಾರಣಕ್ಕಾಗಿ. ನಿಸರ್ಗ ವಿಕೋಪಗಳಿಗಾಗಿ ಅಥವಾ ಪ್ರತಿಕೂಲ ರಾಜಕೀಯ-ಸಾಮಾಜಿಕ-ಧಾರ್ಮಿಕ ಕಾರಣಗಳಿಗಾಗಿ ಸಂಭವಿಸುತ್ತಿರುತ್ತವೆ. ಅತಿವೃಷ್ಟಿ ಅಥವಾ ಅನಾವೃಷ್ಟಿಗಳು ಸಂಭವಿಸಿದಾಗ ಜನರು ಅನ್ನಾಹಾರಗಳಿಗಾಗಿ ತಮ್ಮ ದನಕರುಗಳ ಸಹಿತವಾಗಿ ವಲಸೆ ಹೋಗಿರುವುದನ್ನು ಇತಿಹಾಸ ಕಂಡಿದೆ. ಕೆಲವು ಸಲ ಸಾಮ್ರಾಟರು ಅಕ್ಕಪಕ್ಕದ ರಾಜ್ಯಗಳನ್ನು ಗೆದ್ದು ಅವುಗಳನ್ನು ತಮ್ಮ ರಾಜ್ಯಗಳಲ್ಲಿ ವಿಲೀನಗೊಳಿಸಿದಾಗ ಹೊಟ್ಟೆಪಾಡಿಗಾಗಿ ವಲಸೆ ಹೋಗಿರುವ ಉದಾಹರಣೆಗಳೂ ಉಂಟು. ಶಿಲಾಹಾರರು ಕೊಂಕಣ-ಗೋಮಾಂತಕದಲ್ಲಿ ಸ್ಥಿರಗೊಂಡಾಗ ಕರ್‍ಹಾಡ-ಕೊಲ್ಲಾಪುರದ ಜನರು ಕೊಂಕಣ-ಗೋಮಾಂತಕಕ್ಕೆ ವಲಸೆ ಹೋಗಿದ್ದುಂಟು. ಹೋಳ್ಕರ್‌ರು ಇಂದೂರಿನಲ್ಲಿ ರಾಜ್ಯ ಸ್ಥಾಪಿಸಿದ ನಂತರ ಸಾವಿರಾರು ಕುರುಬ ಮನೆತನಗಳು ಮಹಾರಾಷ್ಟ್ರದಿಂದ ಇಂದೂರಿಗೆ ಹೋಗಿದ್ದನ್ನು ಇತಿಹಾಸ ನಮೂದಿಸಿದೆ.

ಕರ್ನಾಟಕದ ಸೋರಟ ಪ್ರದೇಶದಿಂದ ಹದಿನಾಲ್ಕು ಅಥವಾ ಹದಿನೈದನೆಯ ಶತಮಾನದಲ್ಲಿ ಸಮೀಪದ ಮಹಾರಾಷ್ಟ್ರಕ್ಕೆ ಬಹುದೊಡ್ಡ ವಲಸೆಯು ನಡೆಯಿತೆಂದು ಇತಿಹಾಸ ದಾಖಲಿಸಿದೆ; ಮಹಾರಾಷ್ಟ್ರದಲ್ಲೂ ಈ ಕಾಲದಲ್ಲಿ ಬಹುದೊಡ್ಡ ಬರಗಾಲ ಬಂದಿತ್ತು. ಈ ಬರಗಾಲಕ್ಕೆ 'ಸೋರಟಚಾ ದುಷ್ಕಾಳ' ಅಥವಾ 'ದುರ್ಗಾದೇವಿಚಾ ದುಷ್ಕಾಳ' ಎಂದು ಕರೆಯಲಾಗಿದೆ. ದುರ್ಗಾದೇವಿಯ ಅವಕೃಪೆಯಿಂದಾದ ಬರಗಾಲವೆಂದು 'ದುರ್ಗಾದೇವೀಚಾ ದುಷ್ಕಳ'ವೆಂದು ಈ ಬರಗಾಲಕ್ಕೆ ಹೆಸರು ಬಂದಿರಬಹುದು. ಇತಿಹಾಸಕಾರರಾದ ರಾಜವಾಡೆಯವರು ಸುಪೆಯ ದೇಶಪಾಂಡೆಯವರ ಸಂಗ್ರಹದಲ್ಲಿದ್ದ ಒಂದು ದಾಖಲೆಯನ್ನು ಪ್ರಕಟಿಸಿದ್ದಾರೆ.

ರಾಜವಾಡೆಯವರು 'ದುರ್ಗಾದೇವಿಚಾ ದುಷ್ಕಾಳಾ' (ದುರ್ಗಾದೇವಿಯ ಬರಗಾಲ') ವೆಂಬ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಅವರು' ಇಸ್ವಿ ಸನ್ ೧೩೯೬ರಿಂದ ೧೪೭೫ರ ಮಧ್ಯದಲ್ಲಿ ಎರಡು ಸಲ ದುರ್ಗಾದೇವಿ ಬರಗಾಲ ಬಿದ್ದಿತು. ಒಂದು ೧೨ ವರ್ಷದ ಬರಗಾಲವಾಗಿದ್ದರೆ ಇನ್ನೊಂದು ೭ ವರ್ಷದ್ದು. ೧೨ ವರ್ಷದ ಬರಗಾಲ ೧೩೯೬ರಿಂದ ೧೪೦೮ರವರೆಗೆ ಇದ್ದರೆ, ಏಳು ವರ್ಷದ ಬರಗಾಲ ೧೪೬೮ರಿಂದ ೧೪೭೫ರವರೆಗೆ ಇತ್ತು. ೧೪೨೦ರಲ್ಲಿ ಒಂದು ವರ್ಷ ಬರಗಾವಿದ್ದಿತು. ಹೀಗೆ ೧೪೭೫ರವರೆಗಿನ ೮೦ ವರ್ಷಗಳ ಕಾಲದಲ್ಲಿ ಮೂರು ಬರಗಾಲಗಳು, ಒಟ್ಟು ೧೨+೭+೧=೨೦ ವರ್ಷಗಳ ಕಾಲ ಇದ್ದಿತು ಎಂದು ನಮೂದಿಸಿದ್ದಾರೆ.

ರಾಜವಾಡೆಯವರ ಲೇಖನದಲ್ಲಿ ಇನ್ನೊಂದು ಅಂಶ ಗಮನಿಸುವಂತಹದ್ದು. ವಾಯಿ, ಖಟಾವ, ಕರ್‍ಹಾಡ ಮುಂತಾದ ಪ್ರದೇಶಗಳಲ್ಲಿ ಬರಗಾಲವಿದ್ದಾಗ ಇಲ್ಲಿದ್ದ ಮೂಲವತನದಾರರು,

ಜಮೀನುದಾರರು ಬೇರೆಡೆಗೆ ವಲಸೆ ಹೋಗಿದ್ದರು. ಬರಗಾಲದ ನಂತರ ಈ ವತನದಾರರು ತಮ್ಮ ತಮ್ಮ ಊರಿಗೆ ವಾಪಾಸು ಬಂದರು. ಆದರೆ ಇಲ್ಲಿ ಹೊಸದಾಗಿ ವತನದಾರರಾಗಿದ್ದ ಚಾರಣಿಗರಿಗೂ, ಇವರಿಗೂ ಅಧಿಕಾರಕ್ಕಾಗಿ ಸಂಘರ್ಷಗಳು ನಡೆದವು. ಈ ಹೊಸ ವತನದಾರರು 'ಸೋರಟ ಚಾರಣದವರು' ಆಗಿದ್ದರು. ರಾಜವಾಡೆಯವರಿಗೆ ಸಿಕ್ಕ ಒಂದು ದಾಖಲೆಯಲ್ಲಿ ಈ ಹೊಸ ವತನದಾರರ ಹೆಸರು 'ರಾಮ್ಮಣಾ ಬಿನ್ ತಿಮಣಾ ಗೌಲಿ' ಎಂದೇ ಇದೆ. ಈ ಚಾರಣದವರು ತಮ್ಮ ದನಕರು ಹಾಗೂ ಕುರಿಗಳೊಂದಿಗೆ ಮಹಾರಾಷ್ಟ್ರದ ಈ ಭಾಗದಲ್ಲಿ ನೆಲೆಸಿದ್ದರೆಂಬುದಕ್ಕೆ ವಿಪುಲವಾದ ಉದಾಹರಣೆಗಳನ್ನು ರಾಜವಾಡೆ ಕೊಡುತ್ತಾರೆ. ಈ ಚಾರಣಿಗರು 'ಸೋರಟ ಚಾರಣಿಗರು' ಆಗಿರುವುದರಿಂದ ಮತ್ತು 'ರಾಮಣಾ ತಿಮಣಾ' ಎಂಬೀತ್ಯಾದಿ ಹೆಸರುಗಳು ಕನ್ನಡವಾಗಿರುವುದರಿಂದ 'ಸೋರಟ' ಪ್ರದೇಶವು ಕರ್ನಾಟಕದಲ್ಲಿದೆಯೆಂಬುದು ಐತಿಹಾಸಿಕವಾಗಿ ಸಿದ್ಧವಾಗುತ್ತದೆ.

ಮಹಾರಾಷ್ಟ್ರದ ದಕ್ಷಿಣ ಭಾಗಕ್ಕೆ ಹೊಂದಿಕೊಂಡಿರುವ ಕರ್ನಾಟಕದ ಭಾಗದಿಂದಲೇ ಈ ಚಾರಣಿಗರು ಮಹಾರಾಷ್ಟ್ರ ಪ್ರವೇಶಿಸಿರಬೇಕೆಂಬುದು ಐತಿಹಾಸಿಕ ಸತ್ಯ. ಮಹಾರಾಷ್ಟ್ರದ ದಕ್ಷಿಣ ಭಾಗ ಹತ್ತಿಕೊಂಡಿರುವ ಕರ್ನಾಟಕದ ಪ್ರದೇಶವೆಂದರೆ ಉತ್ತರ ಕರ್ನಾಟಕ. ಹೀಗಾಗಿ ಈ 'ಸೋರಟ' ಉತ್ತರ ಕರ್ನಾಟಕದಲ್ಲಿಯೇ ಇರುವುದು ಅಷ್ಟೇ ಸತ್ಯವಾದುದು.

ಬಳಿಯಪ್ಪನ ಸೋರಟವನ್ನು ಮಹಾರಾಷ್ಟ್ರದ ಇತಿಹಾಸಕಾರರು ರಾಜಸ್ಥಾನದ 'ಸೌರಾಷ್ಟ್ರವೆಂದೇ' ಭಾವಿಸಿದರು. ಇಲ್ಲಿಯ ಸೋಮನಾಥನನ್ನು ಸೌರಾಷ್ಟ್ರದ ಸೋಮನಾಥನೆಂದೇ ಬಗೆಯಲಾಯಿತು. ಆದರೆ ಮಹಾರಾಷ್ಟ್ರಕ್ಕೆ ರಾಜಸ್ಥಾನದ ಸೌರಾಷ್ಟ್ರದಿಂದ ಯಾರೂ ವಲಸೆ ಬಂದಿರಲಿಲ್ಲವೆಂಬುದು ಈ ಇತಿಹಾಸಕಾರರು ಅರಿಯದೇ ಹೋದರು. ಕರ್ನಾಟಕದ(ಹಾಗೂ ಮಹಾರಾಷ್ಟ್ರದ) ಪಶುಪಾಲಕ ಸಮಾಜ ಆರಂಭದಿಂದಲೂ ಶೈವ ಪ್ರಭಾವದಡೆಯಲ್ಲಿದೆ. ಈ ಸಮಾಜದ ಬೀರೋಬಾ ದೇವರು ಅನೇಕ ಪ್ರಸಂಗಗಳಲ್ಲಿ ವೀರಭದ್ರನಾಗಿದ್ದಾನೆ. ವೀರಭದ್ರನೇ ಸೋಮನಾಥನಾಗಿದ್ದಾನೆ.

ಬಳಿಯಪ್ಪ ತನ್ನ ಅಸಂಖ್ಯ ಸಮಾಜ ಬಾಂಧವರೊಡಗೂಡಿ ಮಹಾರಾಷ್ಟ್ರಕ್ಕೆ ಸ್ಥಳಾಂತರಗೊಂಡಿದ್ದರೂ ಲೋಕಪರಂಪರೆಯಲ್ಲಿ ಆತ ತನ್ನ ಕನ್ನಡತನವನ್ನು ಉಳಿಸಿಕೊಂಡ. ಆತ ಕರ್ನಾಟಕದ ಪಶುಪಾಲಕ ಸಮಾಜದ ಕಣ್ಮಣಿಯಾಗಿದ್ದ. ಈತ ಬಂದಿರುವ ಅಥವಾ ಆಳಿದ ಪ್ರದೇಶ ಪಶುಪಾಲಕ ಸಮಾಜದ-ಗವಳಿ ಮತ್ತು ಕುರುಬರ-ಪ್ರದೇಶವೇ ಆಗಿತ್ತು. ಈ ಪ್ರದೇಶದಲ್ಲಿ ಯಾದವರ ಆಳ್ವಿಕೆಯ ಇತಿಹಾಸವೂ ಇತ್ತು. ಗೊಲ್ಲ (ಗವಳಿ) ಮತ್ತು ಕುರುಬ ಸಮಾಜಗಳು ಉತ್ತರ ಕನಾಟಕದಲ್ಲಿ ಬಹುಸಂಖ್ಯೆಯಲ್ಲಿರುವ ಸಮಾಜಗಳು, ಈ ಸಮಾಜಗಳಿಗೆ ಪಕ್ಕದ ಮಹಾರಾಷ್ಟ್ರದ ಜೊತೆಗೂ ಹೊಕ್ಕು ಬಳಸುವ ರೂಢಿ ಇದೆ. ಬೆಳಗಾವಿ ಹಾಗೂ ಹುಬ್ಬಳ್ಳಿ-ಧಾರವಾಡ ಈ ಉತ್ತರ ಕರ್ನಾಟಕದ ಪ್ರದೇಶಗಳು ಈಗಲೂ ಗೊಲ್ಲ-ಕುರುಬರ, ವಿಶೇಷವಾಗಿ ಕುರುಬರ ಸಂಚಾರ ಹಾಗೂ ವಸ್ತಿಯ ಪ್ರದೇಶವಾಗಿವೆ. ಈ ಪ್ರದೇಶವನ್ನು ಹೊಯ್ಸಳ ಯಾದವರು ಮತ್ತು ಸೇವುಣ ಯಾದವರು ಹೀಗೆ ಈ ಎರಡೂ ಯಾದವ ರಾಜಮನೆತನಗಳು ಆಳಿದ ಇತಿಹಾಸವಿದೆ.

ಬಳಿಯಪ್ಪನ ಸೋರಟವೆಂದರೆ ಸೋರಟೂರವೆಂಬ ಪುರಾತನ ನಗರ. ಇದು ಉತ್ತರ ಕರ್ನಾಟಕದ ಗದಗ ಜಿಲ್ಲೆಯ ಊರು. ಈ ಹಿಂದೆ ಸೋರಟೂರ ಧಾರವಾಡ ಜಿಲ್ಲೆಯಲ್ಲಿತ್ತು. ಗದಗ ಹೊಸ ಜಿಲ್ಲೆಯಾದ ನಂತರ ಅದು ಗದಗ ಜಿಲ್ಲೆಗೆ ಸೇರಿತು. ಸೋರಟೂರ, ಶಿರಹಟ್ಟಿ ತಾಲೂಕಿನ ಈಶಾನ್ಯಕ್ಕೆ ನಾಲ್ಕಾರು ಕಿಲೋಮೀಟರ್ ದೂರದಲ್ಲಿದೆ. ಸೋರಟೂರಿನ ದಕ್ಷಿಣ ದಿಕ್ಕಿನಲ್ಲಿ ಪುಲಿಗೆರೆ ಅಥವಾ ಹುಲಿಗೆರೆ(ಇಂದಿನ ಲಕ್ಷ್ಮೇಶ್ವರ)ವಿದ್ದು. ಅಲ್ಲಿ ಬಳಿಯಪ್ಪನ ಆರಾಧ್ಯ ದೈವವಾದ 'ದಕ್ಷಿಣ ಸೋಮನಾಥ'ನ ಭವ್ಯ ಗುಡಿ ಇದೆ.

ಧಾರವಾಡ-ಹುಬ್ಬಳ್ಳಿಯಿಂದ ಹಿಡಿದು ಅಣ್ಣಿಗೇರಿ, ಗದಗ, ಲಕ್ಕುಂಡಿ, ಶಿರಹಟ್ಟಿ, ಸೋರಟೂರ, ಹುಲಿಗೆರೆ (ಲಕ್ಷ್ಮೇಶ್ವರ) ಈ ಎಲ್ಲ ಭಾಗವನ್ನು ಸೋರಟ ಪ್ರದೇಶವೆಂದು ಗುರುತಿಸಬಹುದು. ಈ ಎಲ್ಲ ಪ್ರದೇಶಗಳಲ್ಲಿ ಪಶುಪಾಲಕರು ಪ್ರಭುತ್ವವನ್ನು ಹೊಂದಿದ್ದರು. ಈ ಪಶುಪಾಲಕರಿಗೆ ಸೋರಟ್ಟಿನ ಸೋಮನಾಥನ ಬಗ್ಗೆ ವಿಶೇಷವಾದ ಆದರ, ಗೌರವಗಳಿದ್ದವು. ತಾವುಗಳೆಲ್ಲ ಅತನ ಒಕ್ಕಲೆಂದೇ ಈ ಜನ ಭಾವಿಸಿದ್ದರು ಮತ್ತು ಆತನನ್ನು ಆರಾಧಿಸುತ್ತಿದ್ದರು.

೧೭ನೆಯ ಶತಮಾನದಲ್ಲಿ ದೊರೆತ ಒಂದು ಮರಾಠಿ ದಾಖಲೆಯಲ್ಲಿ ಈ ಸ್ಥಾನವನ್ನು 'ಸೋರಟ'ವೆಂದೇ ಗುರುತಿಸಿದ್ದಾರೆ. ಭಾದ್ರಪದ ಶುಕ್ಲ ೧೨, ಶಕೆ ೧೫೫೭ (೧೩ ಸೆಪ್ಟೆಂಬರ್ ೧೬೩೫)ರ ಈ ದಾಖಲೆಪತ್ರದಲ್ಲಿ 'ಕಸಬೆ ಸೋರಟಚೆ ಜೋತಿಸಿ ವ ಉಪಾಧಿಕವಿಸಿ' ಎಂದು ಹೇಳಲಾಗಿದೆ. ಮೌಜೇ ಸಿರಟಿ ಎಂಬ ಊರಿನ ಹೆಸರು 'ಸೋರಟೂರ ಪರಿಸರದ ಊರು' ಎಂದು ಇಲ್ಲಿ ಹೇಳಲಾಗಿದೆ. 'ಸಿರಟಿ'ಯೆಂದರೆ ಶಿರಹಟ್ಟಿ, ಸೋರಟೂರ, ಶಿರಹಟ್ಟಿಗೆ ಸಮೀಪದ ಊರೇ ಆಗಿದೆ.

ಯಾದವ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಬೆಳವಲು-೩೦೦ (ತ್ರಿಶತ್ ಬೆಳವಲ್) ಮತ್ತು (ಹುಲಿಗೆರೆ)-೩೦೦ ಹೀಗೆ ಪರಸ್ಪರಕ್ಕೆ ಹೊಂದಿಕೊಂಡಿರುವ ವಿಭಾಗದಲ್ಲಿ ಹುಲಿಗೆರೆ 'ಸೋರಟೂರು' ಈ ಪ್ರಾಚೀನ ನಗರ ಅಸ್ತಿತ್ವದಲ್ಲಿತ್ತು. ಬೆಳವೊಲ-೩೦೦ದಲ್ಲಿ ಗದಗ, ನವಲಗುಂದ ಮತ್ತು ನರಗುಂದ ಈ ಪೂರ್ಣ ತಾಲೂಕುಗಳು, ಹುಬ್ಬಳ್ಳಿ ಮತ್ತು ಕುಂದಗೋಳ ತಾಲೂಕಿನ ಕೆಲ ಭಾಗಗಳು, ಬೆಳಗಾವಿ ಜಿಲ್ಲೆಯ ಸೌದತ್ತಿ ತಾಲೂಕಿನ ಕೆಲ ಭಾಗಗಳು, ರಾಮದುರ್ಗ ಮತ್ತು ಬಾದಾಮಿ ತಾಲೂಕಿನ ಕೆಲ ಭಾಗಗಳು ಮತ್ತು ರಾಯಚೂರು ಜಿಲ್ಲೆಯ ಯಲಬುರ್ಗ ತಾಲೂಕಿನ ಕೆಲ ಭಾಗಗಳು ಸಮಾವಿಷ್ಟವಾಗುತ್ತವೆ. ಬೆಳವೂಲ-೩೦೦ ೩೦೦ ಊರುಗಳು ಇದ್ದವು. ಇದರ ದಕ್ಷಿಣ ಸೀಮೆಗೆ ಹತ್ತಿಕೊಂಡು ಪುಲಿಗೆರೆ (ಹುಲಿಗ್ವೆರೆ)-೩೦೦ ಎಂಬ ಇನ್ನೊಂದು ೩೦೦ ಊರುಗಳ ಸಮೂಹವಿತ್ತು. ಇದರಲ್ಲಿ ದಕ್ಷಿಣದ ವರದ ನದಿಯ ತೀರದವರೆಗಿನ ಪ್ರದೇಶ ಸಮಾವಿಷ್ಟವಾಗಿತ್ತು. ಈ ಎರಡೂ ವಿಭಾಗಗಳು ಆಡಳಿತಾತ್ಮಕ ಕಾರಣಗಳಿಗಾಗಿ ಬೇರೆ ಬೇರೆಯಾಗಿ ವಿಭಾಗಿಸಲ್ಪಟ್ಟಿದ್ದರೂ ಸಾಮಾಜಿಕ-ಸಾಂಸ್ಕೃತಿಕ ದೃಷ್ಟಿಯಿಂದ ಇವೆರಡೂ ಒಂದೇ ಆಗಿದ್ದವು. ಬೆಳವೂಲ-೩೦೦ ಮತ್ತು ಪುಲಿಗೆರೆ-೩೦೦ ಈ ಎಲ್ಲ ಪ್ರದೇಶಗಳು ಸೋರಟ ಪ್ರದೇಶಗಳೆಂದೇ ಗುರುತಿಸಲ್ಪಡತ್ತಿದ್ದವು. ಇಲ್ಲಿಯ ಬಳಿಯಪ್ಪನು ಮಹಾರಾಷ್ಟ್ರದ ಅತ್ಯಂತ ಬಲಿಷ್ಠ ಸಾಮ್ರಾಜ್ಯ ಕಟ್ಟಿದ ಶಿವಾಜಿ ಮಹಾರಾಜರ ವಂಶದ ಮೂಲಪುರುಷನಾಗಿದ್ದು. ಯಾದವರ ಇತಿಹಾಸವನ್ನು ಮುಂದುವರೆಸಿದವನಾಗಿದ್ದಾನೆ.

ತಮ್ಮನ್ನು ತಾವು ಸೇವುಣ ಯಾದವರೆಂದು ಕರೆದುಕೊಳ್ಳುವ ಮತ್ತು ಸಿನ್ನರ-ದೇವಗಿರಿಯ ಸಕಲ ಬಿರುದಾವಳಿಗಳಿನ್ನು ಹೊಂದಿರುವ ಒಂದು ಯಾದವ ಮನೆತನ. ಉತ್ತರ ಕರ್ನಾಟಕವನ್ನು ೯ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೆ ಚಾಲುಕ್ಯರ ಮಾಂಡಲೀಕರೆಂದು ರಾಜ್ಯ ವಾಳುತ್ತಿದ್ದರೆಂದು ಡಾ. ಶ್ರೀನಿವಾಸರಿತ್ತಿ ಮತ್ತು ಡಾ. ಎ.ವಿ. ನರಸಿಂಹಮೂರ್ತಿ ಶಿಲಾಲೇಖವೊಂದರ ಆಧಾರದಲ್ಲಿ ಹೇಳಿದ್ದಾರೆ. 'ಮಾಸವಾಡಿ-೧೪೦' ಎಂದು ಪ್ರಸಿದ್ಧವಾಗಿದ್ದ ಈಗಿನ ಡಂಬಳ (ಗದಗ ಜಿಲ್ಲೆ) ಪರಿಸರದ ಪ್ರದೇಶ ಇವರ ಆಳ್ವಿಕೆಗೆ ಒಳಪಟ್ಟಿತ್ತು. ೧೪೦ ಗ್ರಾಮಗಳ ಪ್ರಶಾಸನ ಕೇಂದ್ರವಾಗಿದ್ದ 'ಮಾಸವಾಡಿ' ಎಂಬ ಊರು ಮಹಾರಾಷ್ಟ್ರದ 'ಮ್ಹಸವರ' ಅಥವಾ 'ಮಸವಡ' ಎಂಬ ಗ್ರಾಮನಾಮಕ್ಕೆ ತೀರಾ ಸಮೀಪವಿದೆ. 'ಯಾದವನಾರಾಯಣ', ದ್ವಾರಾವತೀ-ಪುರವರಾಧೀಶ್ವರ' ಎಂಬ ಅವರ ಬಿರುದುಗಳು ದೇವಗಿರಿ ಯಾದವರ ಬಿರುದುಗಳಂತೆಯೇ ಇವೆ. ಅವರಂತೆಯೇ ಇವರೂ 'ಸುವರ್ಣ ಗರುಡಧ್ವಜ'ವನ್ನು ತಮ್ಮ ರಾಜ ಚಿನ್ಹೆಯನ್ನಾಗಿ ಮಾಡಿಕೊಂಡಿದ್ದರು. ಈ ಮನೆತನದ ಮೊದಲ ಜ್ಞಾತ ರಾಜಪುರುಷ 'ಕುಪ್ಪೇಯ' ಅಥವಾ 'ಕುಪ್ಪೆರಸ'ನು ರಾಷ್ಟ್ರಕೂಟ ನೃಪತಿ ಅಮೋಘವರ್ಷ(ಪ್ರಥಮ)ನ ಮಾಂಡಲೀಕ ನಾಗಿದ್ದನು. ಇಸ್ವಿ ಸನ್ ೮೬೫ರಲ್ಲಿ ಆತ ಪುಲಿಗೆರೆ-೩೦೦ ಈ ಭಾಗದಲ್ಲಿ ರಾಜ್ಯವಾಳುತ್ತಿದ್ದ. ಇಸ್ವಿ ಸನ್ ೮೯೯ರವರೆಗೆ ಆತನ ಬಗ್ಗೆ ವಿವರಗಳು ಲಭ್ಯವಾಗಿವೆ. ಆತ 'ಯಾದವ ವಂಶೋದ್ಭವ' 'ರಣಮುಖಧವಲ' ಎಂಬ ಬಿರುದುಗಳನ್ನು ಹೊಂದಿದ್ದ. ರಾಷ್ಟ್ರಕೂಟ ನೃಪತಿ ಕೃಷ್ಣ(ದ್ವಿತೀಯ)ನ ಕಾಲದಲಿ ಈತ 'ಕೋಗಳಿ-೫೦೦' ಮತ್ತು 'ಮಾಸವಾಡಿ'-೧೪೦ ಈ ಪ್ರದೇಶಗಳನ್ನು ಆಳುತ್ತಿದ್ದನೆಂಬುದು ಎರಡು ಶಿಲಾಲೇಖಗಳಲ್ಲಿ ದಾಖಲಿಸಲಾಗಿದೆ. ಜಗದೇಕಮಲ್ಲ ಜಯಸಿಂಹ (ದ್ವಿತೀಯ) ಈ ಚಾಲುಕ್ಯ ರಾಜನ ಕಾಲದಲ್ಲಿ ಆಯತ್ತವರ್ಮರಸ(ಇಸ್ವಿ ಸನ್ ೧೦೩೨)ರಿಗೂ ಕುಪ್ಪೆಯರಸಗೂ ಯಾವ ಸಂಬಂಧಗಳಿದ್ದವೆಂಬುದು ಸ್ಪಷ್ಟವಾಗುವುದಿಲ್ಲ. ದ್ವಿತೀಯ ಜಯಸಿಂಹನ ಸಹೋದರಿ ಅಕ್ಕಾದೇವಿ ಕಡೆಗೆ ಮಾಸವಾಡಿಯ ರಾಜ್ಯ ಪ್ರತಿನಿಧಿತ್ವವನ್ನ ನೀಡಿದ್ದಾಗ, ಈ ಭಾಗವನ್ನು ಅಕ್ಕಾದೇವಿಯ ಪ್ರತಿನಿಧಿಯಾಗಿ ಮಹಾಸಾಮಂತ ಅಜ್ಜರಸನು ಆಳುತ್ತಿದ್ದ. ಅಜ್ಜರಸನೂ ಯಾದವ ಕುಲದವನೇ ಹೌದು.

ಅಜ್ಜರಸನು ನಂತರ ಅದೇ ಕುಲದ ಮಾಧವಾರಸ ಪಟ್ಟಕ್ಕೆ ಬಂದ. ಆತ ತನ್ನನ್ನು ತಾನು 'ಅಜ್ಜರಸನ ಅಂಕಿತ' 'ಅಜರಸನ ಅಜ್ಞಾಂಕಿತ'ನೆಂದು ಹೇಳಿಕೊಳ್ಳುತ್ತಿದ್ದರೂ 'ದ್ವಾರಾವತೀಪುರಾವ ರಾಧೀಶ್ವರ' 'ಯಾದವ ವಂಶೋದ್ಭವ' 'ರಣಮುಖಪಾರ್ಥ' 'ಸುವರ್ಣಗರುಡಧ್ವಜ' ಎಂಬ ಬಿರುದುಗಳನ್ನು ಹಚ್ಚಿಕೊಳ್ಳುತ್ತಿದ್ದ. ಈ ಮಾಧರಸನ ನಂತರ ಸುಮಾರು ಅರ್ಧ ಶತಮಾನದಷ್ಟು ಕಾಲದ ಈ ಮನೆತನದ ವಿವರಗಳು ಲಭ್ಯವಾಗುವುದಿಲ್ಲ. ಮುಂದೆ ವಿಕ್ರಮಾದಿತ್ಯ(ಆರನೆಯ)ನ ರಾಜ್ಯಕಾಲದಲ್ಲಿಯ, ಆತನ ಸಾಮಂತನೆಂದು ಸೋಮದೇವರಸನ ಹೆಸರು ಲಭ್ಯವಾಗಿದೆ. ಆರನೆಯ ವಿಕ್ರಮಾಧಿತ್ಯನ ಕಾಲದಲ್ಲಿ ಪೆರ್ಮಾಡಿ ದೇವ ಅಥವಾ ಹೆಮ್ಮಾಡಿಯೆಂಬ ಮಹಾಮಂಡಲೇಶ್ವರನ ಉಲ್ಲೇಖ ಸಿಗುತ್ತದೆ. ಇಸ್ವಿ ಸನ್ ೧೧೨೪ರ ಒಂದು ಶಾಸನದಲ್ಲಿ 'ಮಾಳವ ಮತ್ತು ಪಾಂಚಾಳ ರಾಜರುಗಳನ್ನು ಆತ ಸೋಲಿಸಿದ'ನೆಂದು ಅವನನ್ನು ಸ್ತುತಿಸಲಾಗಿದೆ. ಹೆಮ್ಮಾಡಿ ನಂತರ ಕ್ರಮವಾಗಿ ಗೋಮ, ಹೆಮ್ಮಾಡಿ, ದ್ವಿತೀಯ ಜಗದೇಕಮಲ್ಲನ ರಾಜ್ಯ ಕಾಲದಲ್ಲಿದ್ದ, ಆತನ ಮಗ

ಕುಪ್ಪ, ಎರಡನೆಯ ಸಿಂಘಣನ ಕಾಲದಲ್ಲಿ ಮಾಸವಾಡಿಯಲ್ಲಿಯೇ ಆಡಳಿತ ನಡೆಸುತ್ತಿದ್ದ. ಸಿಂಘಣನ ರಾಜ್ಯಕಾಲದ ನಂತರ ಈ ಸ್ಥಾನೀಯ ಯಾದವ ಮನೆತನದ ಇತಿಹಾಸ ಸಿಗುವುದಿಲ್ಲ.

ಮಾಸವಾಡಿಯ ಯಾದವರು ೯ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ಈ ಭಾಗವನ್ನು ಆಳಿದರು. ಮಾಸವಾಡಿ–೧೪೦ (ಡಂಬಳ ಪ್ರದೇಶ), ಕೋಗಳಿ–೫೦೦ (ತಾ: ಹಡಗಲಿ; ಜಿಲ್ಲೆ; ಬಳ್ಳಾರಿ) ಮತ್ತು ಪುಲಿಗೆರೆ–೩೦೦ ಈ ಪ್ರದೇಶಗಳು ಅವರ ಆಡಳಿತದ ಭಾಗಗಳಾಗಿದ್ದವೆಂಬುದನ್ನು ಗಮನಿಸಿದರೆ, ಅವರ ಪ್ರಾಬಲ್ಯ ಗುರುತಿಸಬಹುದಾಗಿದೆ.[೪]

'ದಕ್ಷಿಣ ಸೋಮನಾಥ'ನೆಂದು ಹೆಸರುವಾಸಿಯಾಗಿರುವ ಸೋಮನಾಥ ಮಂದಿರವು ಲಕ್ಷ್ಮೇಶ್ವರದಲ್ಲಿದೆ. ಈ ಸೋಮನಾಥನನ್ನು ಆದಯ್ಯನು ಸೌರಾಷ್ಟ್ರದಿಂದ ಇಲ್ಲಿ ತಂದನೆಂದು ಐತಿಹ್ಯವಿದೆ. ಆದಯ್ಯನು ಸೌರಾಷ್ಟ್ರದ ದ್ವಾರಕೆಯವನೆಂದೂ, ಅಲ್ಲಿಯ ಘೋರದತ್ತ ಮತ್ತು ಪುಣ್ಯವತಿಯರ ಮಗನೆಂದೂ ಆದಯ್ಯನ ಬಗೆಗಿರುವ ಕಥೆ ಹೇಳುತ್ತದೆ. ಈ ಆದಯ್ಯನು ದ್ವಾರಕೆಯಿಂದ ಪುಲಿಗೆರೆಗೆ ವ್ಯಾಪಾರ ನಿಮಿತ್ತವಾಗಿ ಬಂದು ಇಲ್ಲಿಯ ಪಾರಿಶೆಟ್ಟಿ ಎಂಬ ಜೈನ ವ್ಯಾಪಾರಿಯ ಮಗಳು ಪದ್ಮಾವತಿಯನ್ನು ಮದುವೆಯಾಗಿ ಇಲ್ಲಿಯೇ ಸ್ಥಾಯಿಕನಾದನು. ವೀರಶೈವ ವಚನಕಾರರಲ್ಲಿ ಆದಯ್ಯನಿಗೆ ಗೌರವದ ಸ್ಥಾನವಿದೆ. ಇಲ್ಲಿಯವರೆಗೆ ಆದಯ್ಯನ ೩೯೭ ವಚನಗಳು ಲಭ್ಯವಾಗಿದ್ದು. ಹರಿಹರ ಕವಿಯ 'ಆದಯ್ಯ ರಗಳೆ'ಯಲ್ಲಿ ಮತ್ತು ರಾಘವಾಂಕನ 'ಸೋಮನಾಥ ಚರಿತೆ'ಯಲ್ಲಿ ಆದಯ್ಯನ ಬಗ್ಗೆ ವಿವರಗಳು ಬರುತ್ತವೆ.

'ಆದಯ್ಯ ಈ ಹೆಸರೇ ವಿಶೇಷಣರೂಪವಾಗಿದೆ. 'ಆದಿ ಅಯ್ಯ' ಅಥವಾ 'ಆದ್ಯ ಅಯ್ಯ' (ಆದ್ಯ; ಆದರಣೀಯ ಪುರುಷ) ಎಂಬುದು 'ಆದಯ್ಯ'ನ ಅರ್ಥ 'ಆದಯ್ಯ' ಈ ಹೆಸರೆ ಸ್ಪಷ್ಟವಾಗಿ ಕನ್ನಡತನವನು ನಿರ್ದೇಶಿಸುತ್ತದೆ. ಈ ಆದಯ್ಯ ಸೌರಾಷ್ಟ್ರದ ದ್ವಾರಕೆಯಿಂದ ಬಂದನೆಂದು ಹೇಳಲಾಗುತ್ತದೆ. ಈ ದ್ವಾರಕೆ ಸೌರಾಷ್ಟ್ರದ ದ್ವಾರಕೆಯಾಗಿರದೇ ದಕ್ಷಿಣ ದ್ವಾರಾವತಿ ಅಂದರೆ ಹೊಯ್ಸಳ ರಾಜಧಾನಿಯಾಗಿದ್ದ ದ್ವಾರಸಮುದ್ರವಿರಬೇಕೆಂಬ ಸಾಧ್ಯತೆ ಹೆಚ್ಚಾಗಿದೆ. ಬಳಿಯಪ್ಪನ ಸಮಕಾಲೀನನಾಗಿದ್ದಾನೆ. ಈ ಸೋಮನಾಥ ಭಕ್ತನ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ಲಭ್ಯವಾಗಬೇಕಾಗಿದೆ.

ಬಳಿಯಪ್ಪನ ಕರ್ನಾಟಕದ ಚರಿತ್ರೆ ನಿಗೂಢವಾಗಿದೆ. ಕನ್ನಡ ಲೋಕಕಥೆಗಳಲ್ಲಿಯೂ ಆತನ ಬಗ್ಗೆ ಉಲ್ಲೇಖವಿಲ್ಲ. ಆತ ಮಹಾರಾಷ್ಟ್ರಕ್ಕೆ ಬಂದನಂತರ ಮರಾಠಿ ಲೋಕಪರಂಪರೆಯಲ್ಲಿ ಬಳಿಯಪ್ಪನ ಹೆಸರು ಅನೇಕ ಸಲ ಉಲ್ಲೇಖಿಸಲ್ಪಟ್ಟಿದೆ. ಆತನಿಗಾಗಿ ಶಿಖರ ಕ್ಷೇತ್ರದಲ್ಲಿ ದೇವರು ಹೇಗೆ ಪ್ರಕಟಗೊಂಡನೆಂಬುದು ಅನೇಕ ಜಾನಪದ ಕಥೆಗಳಲ್ಲಿ ರಸವತ್ತಾಗಿ ವರ್ಣಿಸಲ್ಪಟ್ಟಿದೆ. ಶಿಂಗಪುರ ತಾಮ್ರಪಟದಲ್ಲಿ ಆತನ ಸಂಬಂಧಿಕರ, ಸಹಕಾರಿಗಳ ಹಾಗೂ ಆತ ಮತ್ತು ಆತನ ಸಂಬಂಧಿಕರು ಕಟ್ಟಿಸಿದ ಮಂದಿರಗಳ ಉಲ್ಲೇಖವಿದೆ. ಆದಯ್ಯ ಮತ್ತು ಬಳಿಯಪ್ಪ ಈ ಇಬ್ಬರೂ ಸಮಕಾಲೀನರು.

ಸೋಮನಾಥ ಭಕ್ತರ ಇತಿಹಾಸದ ಮೇಲೆ ಹೆಚ್ಚಿನ ಸಂಶೋಧನೆಗಳು ನಡೆದರೆ ಇನ್ನಷ್ಟು ಹೊಸ ವಿಷಯಗಳು ಹೊರಬರುವ ಸಾಧ್ಯತೆಗಳಿವೆ.

ಹನ್ನೆರಡನೆಯ ಶತಮಾನದಲ್ಲಿ ಪುಲಿಗೆರೆಯು ವಿದ್ಯಾಕೇಂದ್ರ(ಘಟಿಕಾಸ್ಥಾನ)ವೆಂದು, ಅಗ್ರಹಾರವೆಂದು, ಮುಮ್ಮುರಿದಂಡವೆಂಬ ವ್ಯಾಪಾರಿ ಸಂಗದ ಕೇಂದ್ರವಾಗಿ ಹಾಗೂ ಅನೇಕ ಜೈನ ಮತ್ತು ಶೈವ ಕವಿಗಳ ಕೇಂದ್ರವೆಂದು ಪ್ರಸಿದ್ಧಿ ಪಡೆದಿತ್ತು. ಕರ್ನಾಟಕ ಸಂಸ್ಕೃತಿಯ ಒಂದು ಮಹಾಪೀಠವೆನ್ನುವಷ್ಟರಮಟ್ಟಿಗೆ ಪುಲಿಗೆರೆಯು ಖ್ಯಾತಿ ಹೊಂದಿತು. ಬಳಿಯಪ್ಪನು ಇಲ್ಲಿಂದ ಮಹಾರಾಷ್ಟ್ರಕ್ಕೆ ಹೋಗುವಾಗ ತನ್ನ ದೇವರ ಜೊತೆಗೆಯೇ ಇಲ್ಲಿಯ ಸಂಸ್ಕೃತಿಯನ್ನೂ ತೆಗೆದುಕೊಂಡು ಹೋಗಿ ಅಲ್ಲಿ ಸ್ಥಾಪಿಸಿದ.

ಉತ್ತರ ಕರ್ನಾಟಕದ ಪ್ರದೇಶ ಮತ್ತು ಅದಕ್ಕೆ ಹೊಂದಿಕೊಂಡಿರುವ ದಕ್ಷಿಣ ಭಾಗಗಳಿಗೆ 'ದಕ್ಷಿಣ ಸೌರಾಷ್ಟ್ರ'ವೆಂದು ಕರೆದಿರುವ ದಾಖಲೆಗಳು ಸಿಗುತ್ತವೆ. ಈ ಭೂ ಪ್ರದೇಶವು ಯಾದವರಿಂದ ಪ್ರಭಾವಿತಗೊಂಡು ಪಶುಪಾಲಕ ಸಮಾಜದಿಂದ ವ್ಯಾಪಿಸಿತ್ತು. ಹೊಯ್ಸಳ ನೃಪತಿ ವೀರಬಲ್ಲಾಳ (ದ್ವಿತೀಯ)ನ ಕಾಲದಲ್ಲಿ (೧೧೭೩-೧೨೨೦) ಅಂದರೆ ಬಳಿಯಪ್ಪನ ಕಾಲದಲ್ಲಿಯೇ ಈ ಪ್ರದೇಶವನ್ನು 'ದಕ್ಷಿಣ ಸೌರಾಷ್ಟ್ರ'ವೆಂದು ಕರೆದಿರುವ ಶಿಲಾಲೇಖವು ಲಭ್ಯವಾಗಿದೆ. ದ್ವಿತೀಯ ವೀರಬಲ್ಲಾಳನ ರಾಣಿ ಅಭಿನವ ಕೇತಲಾದೇವಿಯು ಅನೇಕ ಶೈವಗುಡಿಗಳಿಗೆ ದಾನ ನೀಡಿದ್ದಳು. ೧೨೧೮ರಲ್ಲಿ ಆಕೆ ಗೌಡರಿಗೆ ಮತ್ತು ಸೆಟ್ಟರಿಗೆ ಕುಂದವಾಡಿಯ ಸೋಮನಾಥ ಗುಡಿಯ ನಿತ್ಯಪೂಜೆಗಾಗಿ ವ್ಯವಸ್ಥೆ ಮಾಡಬೇಕೆಂದು ಆಜ್ಞಾಪಿಸುತ್ತಾಳೆ. ಪುಲಿಗೆರೆಯ ದಕ್ಷಿಣಕ್ಕಿರುವ ಕುಂದವಾಡಿ (ತಾ; ದಾವಣಗೆರೆ; ಜಿಲ್ಲೆ ಚಿತ್ರದುರ್ಗ) ಸೋಮನಾಥನ ಕ್ಷೇತ್ರವಾಗಿದ್ದು, (ಈ ಪ್ರದೇಶವನ್ನು ಸೋಮನಾಥನೇ ಸ್ಥಾಪಿಸಿದನೆಂದು ಐತಿಹ್ಯವಿದೆ.) ಇದನ್ನು 'ದಕ್ಷಿಣ ಸೌರಾಷ್ಟ್ರ'ವೆಂದೇ ಕರೆದಿದ್ದಾರೆ. ವೀರಬಲ್ಲಾಳನು ೧೧೭೩ರಲ್ಲಿ ಸ್ಥಾಪಿಸಿದ ಶಿಲಾಲೇಖದಲ್ಲಿ ಸೋಮನಾಥನನ್ನು 'ಸೌರಾಷ್ಟ್ರ ಸೋಮನಾಥನೆಂದು' ಕರೆಯಲಾಗಿದೆ. ಈ ಪ್ರದೇಶವನ್ನು ಸಹಜವಾಗಿ, ಜನರು ಸೌರಾಷ್ಟ್ರ ಪ್ರತಿಕೃತಿಯೆಂಬಂತೆ ಭಾವಿಸಿದ್ದರೆಂದು ಗೊತ್ತಾಗುತ್ತದೆ.

ಪುಲಿಗೆರೆ (ಲಕ್ಷ್ಮೇಶ್ವರ) ದಕ್ಷಿಣ ಸೋಮನಾಥನ ಗರ್ಭಗೃಹದಲ್ಲಿರುವ ವೃಷಭಾರೂಢ ಉಮಾ-ಮಹೇಶ್ವರ ಮೂರ್ತಿ ಆರಂಭಂದಲೂ ಅಲ್ಲಿ ಇತ್ತೇ ಎಂಬುದರ ಬಗ್ಗೆ ನಿಶ್ಚಿತವಾದ ಆಧಾರಗಳು ಸಿಗುವುದಿಲ್ಲ. ಸಾಮಾನ್ಯವಾಗಿ ಶಿವಮಂದಿರದಲ್ಲಿ ಶಿವನನ್ನು ಲಿಂಗರೂಪದಲ್ಲಿ ಪೂಜಿಸಲಾಗುತ್ತದೆ. ಕೆಲವೆಡೆಯಲ್ಲಿ ಶಿವನು ಸ್ವಯಂಭುಂಲಿಂಗ ಸ್ವರೂಪದಲ್ಲಿರುತ್ತಾನೆ. ಇದರಲ್ಲಿಯೂ ಲಿಂಗರೂಪವೇ ಪ್ರಧಾನವಾಗಿರುತ್ತದೆ. ಕೆಲವು ಕಡೆಗಳಲ್ಲಿ ಶಿವನನ್ನು ಪಾರ್ವತಿ (ಉಮೆ) ಸಹಿತವಾಗಿ ಮೂರ್ತಿರೂಪದಲ್ಲಿಯೂ ಪೂಜಿಸುವ ಉದಾಹರಣೆಗಳುಂಟು. ಆದರೆ ಇಲ್ಲಿಯೂ ಗರ್ಭಗೃಹದಲ್ಲಿ ಶಿವಲಿಂಗಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟಿರುವುದನ್ನು ಕಾಣಬಹುದು. ಆದರೆ ಪುಲಿಗೆರೆಯ ದಕ್ಷಿಣ ಸೋಮನಾಥ ಗುಡಿಯಲ್ಲಿ ಲಿಂಗದ ಬದಲಾಗಿ ವೃಷಭಾರೂಢ ಶಿವ ಪಾರ್ವತಿಯರ ಮೂರ್ತಿ ಇದೆ.

ಕೃಷ್ಣದಾಸ ದಾಮನ ಆದಿಪರ್ವದ ಬಳಿಪ ಕಥೆಯಲ್ಲಿ, ಸೋರಟಿಯ ಸೋಮನಾಥನು ಲಿಂಗರೂಪದಲ್ಲಿಯೇ ಇದ್ದನೆಂದು ವಿವರಣೆ ಬರುತ್ತದೆ. ಕೃಷ್ಣದಾಸನು ಬಳಿಪ ಪೂಜಿಸುವ ದೇವನು ಲಿಂಗರೂಪದಲ್ಲಿ ಮತ್ತು ಲಿಂಗಾಕಾರನಾದ್ದನೆಂದು ಹೇಳುತ್ತಾನೆ.

ಬಳಿಪನು ಪ್ರತಿನಿತ್ಯ ಪೂಜಿಸುವ ದೇವರು ಲಿಂಗಾಕಾರನಾಗಿದ್ದ ಮತ್ತು ಆ ಶಿವಲಿಂಗವು ಸ್ಫಟಿಕದ್ದಾಗಿತ್ತು. ಶಿಖರ ಶಿಂಗಣಾಪುರದಲ್ಲಿ ಬಳಿಪನಿಗಾಗಿ ಶಂಭು ವನದೇವನು ಸ್ವಯಂಭು, ಲಿಂಗರೂಪದಲ್ಲಿ ಪ್ರಕಟಗೊಂಡಿದ್ದ. ಹೀಗಾಗಿ 'ಸೋರಟ'ದಿಂದ ಬಳಿಪ ತೆಗೆದುಕೊಂಡು ಬಂದಿದ್ದ ಸ್ಫಟಿಕ ಲಿಂಗವು ಆತನ ಮನೆತನದಲ್ಲಿ ವಂಶಪಾರಂಪರ್ಯವಾಗಿ ಪೂಜೆಗೊಳ್ಳುತ್ತಿರಬೇಕು. ಬಳಿಪನಿಂದ ಆರಂಭವಾಗಿ ಶಿವಾಜಿ ಮಹಾರಾಜರವರೆಗೆ ಈ ಸ್ಫಟಿಕಲಿಂಗವು ಅವರ ಮನೆಯಲ್ಲಿಯೇ ಪೂಜೆಗೊಂಡಿರುವ ಸಾಧ್ಯತೆ ಇದೆ. ಶಿವಾಜಿ ಮಹಾರಾಜರು ಪ್ರತಾಪಗಢದಲ್ಲಿ ದೇವಿ ಭವಾನಿಯ ಮೂರ್ತಿಯನ್ನು ವಿಧಿವತ್ತಾಗಿ ಪ್ರತಿಷ್ಠಾಪಿಸಿದರು. ಈ ಮೂರ್ತಿಯ ಸನ್ನಿಧಿಯಲ್ಲಿ (ಭವಾನಿಯನ್ನು ವಾಮಾಂಗಿಯಲ್ಲಿಟ್ಟು) ಸ್ಫಟಿಕ ಲಿಂಗರೂಪದ ಶಿವನನ್ನೂ ಪ್ರತಿಷ್ಠಾಪಿಸಿದರು. ಭವಾನಿ ಮೂರ್ತಿಯನ್ನು ನೇಪಾಳದಿಂದ ತಂದ ಗಂಡಕಿ ಶಿಲೆಯಿಂದ ನಿರ್ಮಾಣ ಮಾಡಲಾಗಿತ್ತೆಂದು ದಾಖಲೆಗಳು ಹೇಳುತ್ತಿದ್ದರೆ, ಸ್ಫಟಿಕ ಲಿಂಗವನ್ನು ಯಾವುದರಿಂದ ನಿರ್ಮಿಸಲಾಗಿತ್ತು ಅಥವಾ ಎಲ್ಲಿಂದ ತರಲಾಗಿತ್ತೆಂಬುದರ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಈ ಶಿವಲಿಂಗವು ಶಿವಾಜಿ ಮಹಾರಾಜರಿಗೆ, ಮನೆತನದ ಪರಂಪರೆಯಿಂದ ಪ್ರಾಪ್ತಿಯಾಗಿದ್ದಿಬೇಕೆಂದು ಇಲ್ಲಿ ಅದನ್ನು ದಾಖಲಿಸಿರಲಿಕ್ಕಿಲ್ಲ. ಈ ಅನುಮಾನವನ್ನು ಅವಲೋಕಿಸಿದರೆ ಬಳಿಯಪ್ಪನ ಕಥೆಯಲ್ಲಿ ಬಂದಿರುವ ಸ್ಫಟಿಕ ಶಿವಲಿಂಗದ ರಹಸ್ಯ ಬಹಿರಂಗವಾಗುತ್ತದೆ. 'ಸ್ಫಟಿಕದ ಈ ಶಿವಲಿಂಗವು ಪಾರದರ್ಶಕವಾಗಿದ್ದು ಕರ್ಪೂರ ಜ್ಯೋತಿಯ ಬೆಳಕಿನಲ್ಲಿ ಬಿಲ್ವಪತ್ರ', ನಿರಗುಡಿಯ ಎಲೆ ಮತ್ತು ಶಾಳುಂಕೆಯಲ್ಲಿಯ ಗಂಗೆ (ನೀರು) ಕಾಣಿಸುತ್ತದೆಂದು ಪ್ರೊ. ಪ್ರ.ಕೆ. ಘಾಣೇಕರ ಈ ಲಿಂಗವನ್ನು ಸಾಕ್ಷಾತ್ ದರ್ಶಿಸಿದ ನಂತರ ಹೇಳಿದ್ದಾರೆ.

ಈ ಸ್ಫಟಿಕದ ಲಿಂಗವನ್ನು ಬಳಿಯಪ್ಪನು ಸೋರಟ (ಸೋರಟೂರು) ಬಿಟ್ಟಾಗ ತನ್ನ ಜೊತೆಗೆ ಮಹಾರಾಷ್ಟ್ರಕ್ಕೆ ತಂದಿರುವ ಸಾಧ್ಯತೆಗಳಿವೆ. ಶಿವ ಛತ್ರಪತಿಯವರೆಗೆ ಬಳಿಯಪ್ಪನ ವಂಶಸ್ಥರು ಈ ಲಿಂಗವನ್ನು ಮನೆಯ ದೇವರ ಮನೆಯಲ್ಲಿಯೇ ಪೂಜಿಸಿದ್ದಾರೆ. ಶಿವಛತ್ರಪತಿಯು ಅಪರೂಪವಾದ ಈ ಶಿವಲಿಂಗವನ್ನು ಪ್ರತಾಪಗಢದಲ್ಲಿ ಪ್ರತಿಷ್ಠಾಪಿಸಿದರೆಂದು ಇತಿಹಾಸದ ಸತ್ಯದ ಜೊತೆಗೇ ಹೇಳಬಹುದಾಗಿದೆ.[೫]

ಇಲ್ಲಿಯವರೆಗೆ ಈ ಕೆಳಗಿನ ಹಲವಾರು ಅಂಶಗಳ ಬಗ್ಗೆ ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬಂದಂತಾಗಿದೆ.

೧. ಬಳಿ, ಬಳೀಪ ಅಥವಾ ಬಳಿಯಪ್ಪ ಎನ್ನುವ ಆದ್ಯ ಭಕ್ತನಿಂದಾಗಿ ಶಿಖರ ಶಿಂಗಣಾಪುರದಲ್ಲಿ ಶಂಭುಮಹಾದೇವನ ಆಗಮನವಾಯಿತು.

೨. ಶಂಭುಮಾಹಾದೇವ ಶಿಖರ ಶಿಂಗಣಾಪುರದಲ್ಲಿ ಪ್ರಕಟಗೊಂಡ ಕಾಲ ಚಕ್ರಧರ–ನಾಮದೇವರ ಕಾಲಕ್ಕಿಂತ ಮೊದಲು; ಸೇವುಣ ಯಾದವರ ಕಾಲದಲ್ಲಿ: ಪಂಚಮ ಭಿಲ್ಲಮನ ಮುಂದಿನ ತಲೆಮಾರುಗಳಲ್ಲಿ

೩. ಬಳಿಯಪ್ಪನನ್ನು ಜಾನಪದ ಸಾಹಿತ್ಯ ಅಥವಾ ಲೋಕಸಾಹಿತ್ಯವು 'ಗವಳಿ ರಾಜಾ'(ಗೊಲ್ಲರ ಅರಸ) ಎಂದು ಗುರುತಿಸುತ್ತದೆ.

೪. ದೇವಗಿರಿಯ (ಮೂಲತಃ ಸೇವುಣ) ಯಾದವರನ್ನು ಲೋಕಪರಂಪರೆಯು 'ಗವಳಿ ರಾಜರು'ಗಳೆಂದೇ ಗುರುತಿಸುತ್ತದೆ.

೫. ಬಳಿಯಪ್ಪನ ಹೆಸರಿನಲ್ಲಿರುವ 'ಅಪ್ಪ' ಎನ್ನುವ ಉತ್ತರ ಪದವು ಆತನ ದಕ್ಷಿಣತ್ವ ಅಥವಾ ಕರ್ನಾಟಕತ್ವವನ್ನು ಸಿದ್ಧ ಮಾಡುತ್ತದೆ.

೬. ಬಳಿಯಪ್ಪನು ಯಾವುದೋ ಯಾದವ ಕುಲಕ್ಕೆ ಸಂಬಂಧಪಟ್ಟವನೇ ಆಗಿದ್ದಾನೆ.

೭. ಶಿಖರ ಶಿಂಗಣಾಪುರ ಕ್ಷೇತ್ರದ ಸಾಮಾಜಿಕ ಪರ್ಯಾವರಣವನ್ನು, ಪುರಾತನ ಕಾಲದಿಂದಲೂ ಗೊಲ್ಲ ಮತ್ತು ಕುರುಬ ಜನಾಂಗದವರೇ ಸೃಷ್ಟಿಸಿದ್ದಾರೆ; ಅವರ ದಾಕ್ಷಿಣಾತ್ಯ ಸಂಬಂಧ ಸ್ಪಷ್ಟವಿದೆ.

೮. ಈ ಪಶುಪಾಲಕ ಸಮಾಜವು 'ಶಂಭು ಮಹಾದೇವ 'ನಮ್ಮ ದೇವರಾಗಿದ್ದಾನೆ; ಅವನನ್ನು ನಾವು ಈ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಿದ್ದೇವೆ. ಆತ ನಮ್ಮ ಅಳಿಯನಾಗಿದ್ದಾನೆ ಎಂದು ನಂಬಿದ್ದಾರೆ.

೯. ಶಿಖರ ಶಿಂಗಣಾಪುರಕ್ಕೆ ಸಂಬಂಧವಿರುವ ಇನ್ನೊಬ್ಬ ರಾಜಪುರುಷನ ಹೆಸರು ಸಿಂಘಣ, ಈತನೂ ಯಾದವ ಕುಲದವನೇ. ಈತನೂ ಒಬ್ಬ 'ಗವಳಿ ರಾಜ'ನೇ ಆಗಿದ್ದಾನೆ.

೧೦. ಶಿಖರ ಕ್ಷೇತ್ರಕ್ಕೆ ಸಂಬಂಧಪಡುವ ಪ್ರಖ್ಯಾತ ವೀರಶೈವ ಶರಣ ಸಿದ್ಧರಾಮೇಶ್ವರನ ಶಿಷ್ಯಂದಿರಾದ ೧೩ನೆಯ ಶತಮಾನದಲ್ಲಿದ್ದ ಇಬ್ಬರು ಸಿದ್ಧರು-ಜಾವಳಿಯ ಸಾಂಯಾ-ಮಾಂಯಾ ಇವರಿಬ್ಬರೂ ಗವಳಿ ಸಮಾಜದಿಂದಲೇ ಬಂದವರಾಗಿದ್ದಾರೆ.

೧೧. ಗವಳಿ ಸಮಾಜದ ಒಬ್ಬ ರಾಜಪುರುಷನು ಪ್ರತಿಷ್ಠಾಪಿಸಿದ ಮತ್ತು ಗವಳಿ-ಕುರುಬರು ಸರ್ವಭಾವದಿಂದ 'ತಮ್ಮವ'ನೆಂದು ಭಾವಿಸಿದ ಶಂಭುಮಹಾದೇವ ಮೂಲತಃ ಶ್ರೀಶೈಲದ ಮಲ್ಲಿಕಾರ್ಜುನನಾಗಿದ್ದಾನೆ. ಶಿಖರ ಶಿಂಗಣಾಪುರವು ಶ್ರೀಶೈಲದ ಮಲ್ಲಿಕಾರ್ಜುನನ ಸ್ಥಳಾಂತರಗೊಂಡ ಒಂದು ಕ್ಷೇತ್ರವಾಗಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಶಿಖರ ಶಿಂಗಣಾಪುರವು ಆಂಧ್ರದ ಶ್ರೀಶೈಲ. ಕ್ಷೇತ್ರದ ಮಲ್ಲಿಕಾರ್ಜುನ ಮಹಾರಾಷ್ಟ್ರದ ಒಂದು ಕ್ಷೇತ್ರವಾಗಿದೆ. ಶಂಭು ಮಹಾದೇವನ ಮೂಲಪೀಠವು ಆಂಧ್ರದ ಶ್ರೀಶೈಲ ಕ್ಷೇತ್ರದಲ್ಲಿದೆ.

೧೨. ಶಿಖರ ಕ್ಷೇತ್ರದಲ್ಲಿ ಮಲ್ಲಿಕಾರ್ಜುನನನ್ನು ಶಂಭುಮಹಾದೇವನೆಂದು ಪ್ರತಿಷ್ಠಾಪಿಸಿದ ಬಳಿಯಪ್ಪ ಶಹಾಜಿ ಮಹಾರಾಜನ (ಶಿವಾಜಿ ಮಹಾರಾಜರ ತಂದೆ) ಭೋಸಲೆ ಮನೆತನದ ಮೂಲಪುರುಷನಾಗಿದ್ದನೆಂಬ ಸಾಕ್ಷ್ಯವನ್ನು ಆತನ ಆಶ್ರಯದಲ್ಲಿದ್ದ ಇಬ್ಬರು ಸಂಸ್ಕೃತ ಕವಿಗಳು ನಿಸ್ಸಂದಿಗ್ಧವಾಗಿ ಹೇಳಿದ್ದಾರೆ.

೧೩. ಮಹಾರಾಷ್ಟ್ರದಲ್ಲಿರುವ ಭೋಸಲೆ ಮನೆತನದ ಒಂದು ಶಾಖೆಯವರು, ಕಳೆದ ಏಳು-ಎಂಟು ನೂರು ವರ್ಷಗಳಿಂದ ಮಲ್ಲಿಕಾರ್ಜುನನ ಪರಮಭಕ್ತರಾಗಿದ್ದಾರೆ. ಖೋಪಿ-

ಶಿರಗಾಂವದ ಈ ಭೋಸಲೆಗಳು ಸಹ್ಯಾಯ ಅತ್ಯುಚ್ಚ ಶಿಖರದ ಮೇಲೆ 'ಪರ್ವತ' (ಶ್ರೀಪರ್ವತ) ಕ್ಷೇತ್ರವನ್ನು ನಿರ್ಮಿಸಿದ್ದಾರೆ ಮತ್ತು ಅಲ್ಲಿ ತಮ್ಮ ಕುಲಸ್ವಾಮಿ ಮಲ್ಲಿಕಾರ್ಜುನನನ್ನು ಪ್ರತಿಷ್ಠಾಪಿಸಿದ್ದಾರೆ.

೧೪. ಈ ಕುಲಶಾಖೆಯ ಅರವತ್ತು ಪೂರ್ವಪುರುಷರು ಮಲ್ಲಿಕಾರ್ಜುನನ ಸಂತೋಷಕ್ಕಾಗಿ ತಮ್ಮ ಶಿರಗಳನ್ನು ದೇವರಿಗೆ (ಮಲ್ಲಿಕಾರ್ಜುನನಿಗೆ) ಅರ್ಪಿಸಿದ್ದಾರೆ. ಭಕ್ತಿಯ ಈ ಉದ್ರೇಕದಿಂದಾಗಿ ಈ ಕುಲಶಾಖೆಯನ್ನು 'ಶಿರಸಾಟ' ಎಂಬ ಬಿರುದಿನಿಂದ ಗುರುತಿಸಲಾಗುತ್ತದೆ.

೧೫. ಶಿಖರ ಶಿಂಗಣಾಪುರದಲ್ಲಿ ದೊರೆತ ತಾಮ್ರಪಟದಲ್ಲಿ ಬಳಿಯಪ್ಪನನ್ನು 'ಬಳಿಯಪ್ಪಾ ಗೋಪತಿ ಶಿರಸಾಟ' ಎಂದೇ ಕರೆಯಲಾಗಿದೆ. ಶಿವಾಜಿ ಮಹಾರಾಜರು ಹುಟ್ಟಿದ ಭೋಸಲೆ ಮನೆತನವೂ ಬಾಬಾಜಿ ಕಾಲಕ್ಕಿಂತಲೂ ಮುಂಚೆ 'ಶಿರಸಾಟ' ಎನ್ನುವ ಬಿರುದನ್ನು ಅಡ್ಡಹೆಸರಿನಂತೆ ಉಪಯೋಗಿಸುತ್ತಿತ್ತು.

೧೬. ಶಿವಾಜಿ ಮಹಾರಾಜರು ತಮ್ಮ ದಕ್ಷಿಣ ಯಾತ್ರೆಯ ಕಾಲಕ್ಕೆ ಶ್ರೀಶೈಲದ ಮಲ್ಲಿಕಾರ್ಜುನನ ದರ್ಶನ ಪಡೆದರು. ಅಲ್ಲಿ ಒಂಬತ್ತು-ಹತ್ತು ದಿನಗಳ ಕಾಲ ತಂಗಿದರು. 'ಶಿರಸಾಟ'ರ ಪರಂಪರೆಯಂತೆ ತಮ್ಮ ಶಿರಸ್ಸನ್ನೂ ಮಲ್ಲಿಕಾರ್ಜುನನಿಗೆ ಅರ್ಪಿಸಬೇಕೆಂದು ಶಂಭು ಮಹಾದೇವನ ಈ ಮಹಾನ್ ಭಕ್ತನಿಗೆ ಅನ್ನಿಸಿತು.

೧೭. ಶಿವಾಜಿ ಮಹಾರಾಜರ ಮೂಲಪುರುಷನಾಗಿದ್ದ ಬಳಿಯಪ್ಪನು ಉತ್ತರ ಕರ್ನಾಟಕದ ಸೋರಟೂರ ಊರಿನವನಾಗಿದ್ದ. ಸೋರಟೂರ ಪಕ್ಕದ ಪುಲಿಗೆರೆಯು (ಲಕ್ಷ್ಮೇಶ್ವರ) ಸೌರಾಷ್ಟ್ರ ಸೋಮನಾಥನ ಗುಡಿಯನ್ನು ಹೊಂದಿದ್ದು. ಸೋರಟೂರೇ ಶಿವಾಜಿ ಮಹಾರಾಜರ ಮನೆತನದ ಜೊತೆಗೆ ಸಂಲಗ್ನಿತವಾಗಿದ್ದರೂ, ಅದನ್ನು ತಪ್ಪಾಗಿ ರಾಜಸ್ಥಾನದ 'ಸೌರಾಷ್ಟ್ರ' ವೆಂದು ಭಾವಿಸಲಾಯಿತು.

೧೮. ಈ ತಪ್ಪಿನಿಂದಾಗಿ ಶಿವಾಜಿ ಮಹಾರಾಜರ ಮೂಲಪುರುಷರು ರಾಜಸ್ಥಾನದ ಸೌರಾಷ್ಟ್ರದಿಂದ ಮಹಾರಾಷ್ಟ್ರಕ್ಕೆ ಸ್ಥಳಾಂತರಗೊಂಡವರೆಂದು ತಪ್ಪು ಇತಿಹಾಸವನ್ನು ಬರೆಯಲಾಯಿತು.[೬]

ಹೀಗೆ ಬಳಿಯಪ್ಪನಿಂದ ಹಿಡಿದು ಶಿವಾಜಿ ಮಹಾರಾಜರವರೆಗೆ ರಚಿತಗೊಂಡಿರುವ ಅನೇಕ ಗ್ರಂಥಗಳು, ದಾಖಲೆಗಳು, ಸರಕಾರಿ ಕಾಗದ ಪತ್ರಗಳು, ಧಾರ್ಮಿಕ ಪುರಾವೆಗಳು ಎಲ್ಲವನ್ನು ಕೂಲಂಕಷವಾಗಿ ತಪಾಸಿಸಿದ ಢೇರೆಯವರಿಗೆ ಕೊನೆಗೆ ಸಿಕ್ಕಿದ್ದು ಉತ್ತರ ಕರ್ನಾಟಕದ ಗದಗ ಜಿಲ್ಲೆಯ ಲಕ್ಷ್ಮೇಶ್ವರ ಸಮೀಪದ ಸೊರಟೂರ. ಅದುವೇ ಛತ್ರಪತಿ ಶಿವಾಜಿ ಮಹಾರಾಜರ ಮೂಲಪುರುಷ ಬಳಿಯಪ್ಪನ ಸೊರಟ ಅಥವಾ ಸೊರಟೂರ.

ಸೊರಟೂರ ಗ್ರಾಮ ಶಿವಾಜಿ ಮೂಲಪುರುಷರ ತಾಣ ಎಂಬುದು ಕನ್ನಡ ನಾಡಿಗೆ ಅದರಲ್ಲೂ ಸೊರಟೂರ ಗ್ರಾಮದ ಇತಿಹಾಸಕ್ಕೆ ಹೊಸ ಗರಿಯನ್ನು ಮೂಡಿಸಿದೆ. ಇದು

ಸೊರಟೂರ ಜನತೆಗೆ ಅಭಿಮಾನದ ವಿಷಯವಾಗಿದೆ. ಇದರಿಂದ ಪ್ರೇರಣೆಗೊಂಡು ಸೊರಟೂರ ಗ್ರಾಮಸ್ಥರು ಶಿವಾಜಿ ಮಹಾರಾಜರ ಸ್ಮರಣೆಯ ಸಂಕೇತವಾಗಿ ಗ್ರಾಮದಲ್ಲಿ ಶ್ರೀ ಅಂಬಾಭವಾನಿ ದೇವಾಲಯ ನಿರ್ಮಿಸುತ್ತಿದ್ದಾರೆ. ಗ್ರಾಮದ ಪೂರ್ವಕ್ಕೆ ಕಪ್ಪತ್ತ ದಾರಿಯ ಬಲಬದಿಯಲ್ಲಿ ನಿರ್ಮಾಣವಾಗುತ್ತಿರುವ ಈ ದೇವಾಲಯ ಸರ್ಕಾರದ ವಿವಿಧ ಅನುದಾನಗಳಿಂದ ಸುಮಾರು ೨೦ ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದೆ. ಈಗಾಗಲೇ ಮುಕ್ತಾಯದ ಹಂತದಲ್ಲಿರುವ ದೇವಾಲಯ ಗ್ರಾಮದ ಐತಿಹಾಸಿಕ ಸ್ಮರಣೆಯ ಸಂಕೇತವಾಗಲಿದೆ.

ಈಗ ಸಂಶೋಧಕರು ಸೊರಟೂರ ಗ್ರಾಮದ ಮೇಲೆ ಬೆಳಕು ಚೆಲ್ಲುವ ಅಗತ್ಯವಿದೆ. ಸೊರಟೂರ ಗ್ರಾಮವನ್ನು ಐತಿಹಾಸಿಕ ಸ್ಥಳವೆಂದು ಗುರುತಿಸುವ ಮೂಲಕ ಗ್ರಾಮದಲ್ಲಿರುವ ಶಾಸನಗಳನ್ನು ಪ್ರಾಚೀನ ದೇವಾಲಯಗಳನ್ನು ಸಂರಕ್ಷಿಸಲು, ಸರಕಾರ, ಸಂಘ-ಸಂಸ್ಥೆಗಳು ಹಾಗೂ ಗ್ರಾಮಸ್ಥರು ಗಮನಹರಿಸಬೇಕಾಗಿದೆ.

೩.೫. ಮುಂಡರಗಿಯ ಸೊರಟೂರ ಅಜ್ಜನವರು

ಕೊಡುವಾತನೇ ಹರನು । ಪಡೆವಾತನೇ ನರನು
ಒಡಲ ಒಡವೆಗಳು ಕೆಡೆದು ಹೋಗದ ಮುನ್ನ
ಕೊಡು ಪಾತ್ರವರಿದು ಸರ್ವಜ್ಞ

ಎಂಬ ಶರಣರ ವಾಣಿಯಂತೆ ಸೊರಟೂರ ಗ್ರಾಮದ ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯ ಸತ್ಸಂಪ್ರದಾಯಕ್ಕೆ ಬಹುದೊಡ್ಡ ಕೊಡುಗೆ ನೀಡುವ ಮೂಲಕ ಸೊರಟೂರಜ್ಜನವರೆಂದೇ ಖ್ಯಾತನಾಮರಾದ ಶ್ರೀ. ಮ.ನಿ.ಪ್ರ.ಜ. ಅನ್ನದಾನ ಮಹಾಸ್ವಾಮಿಗಳು ಮೃಡಗಿರಿ ಶ್ರೀಮಠದ ಎಂಟನೆಯ ಪೀಠಾಧಿಕಾರಿಗಳಾಗಿ, ಸೊರಟೂರ ಗ್ರಾಮದ ಆರಾಧ್ಯದೈವವಾಗಿ, ನಿರಂಜನ ಜಂಗಮರಾಗಿ, ವೈರಾಗ್ಯ ಮೂರ್ತಿಗಳಾಗಿ, ನೈಜ ಜಂಗಮತ್ವದ ಪರಿಪಾಲಕರಾದ ಪೂಜ್ಯರು, ಪರಮ ತಪಸ್ವಿಗಳು, ಮಹಾದಾನಿಗಳು, ಈ ನಾಡ ಜನತೆಗಾಗಿ ಅಪಾರ ತ್ಯಾಗ ಮಾಡಿದ ಮಹಾನುಭವರು ಈ ನಾಡನ್ನು ಪಾವನಗೊಳಿಸುವ ಮೂಲಕ ಗ್ರಾಮದ ಚರಿತ್ರೆಗೊಂದು ಹೊಸ ಗರಿ ಮೂಡಿಸಿದ್ದಾರೆ. ಸೊರಟೂರಜ್ಜನವರ ಸ್ಮರಣೆಗಾಗಿ ಮೃಡಗಿರಿ ಶ್ರೀಮಠದ ಈಗಿನ ಶ್ರೀಗಳಾದ ನಾಡೋಜ ಶ್ರೀ.ಮ.ನಿ.ಪ್ರ.ಜ. ಶ್ರೀ. ಅನ್ನದಾನೀಶ್ವರ ಮಹಾಶಿವಯೋಗಿಗಳು ಸೊರಟೂರ ಗ್ರಾಮದ ಶಾಲೆ, ಕಾಲೇಜುಗಳಿಗೆ ಭೂಮಿದಾನ ಕೊಡುವ ಮೂಲಕ ಗ್ರಾಮದಲ್ಲಿ ಸುವ್ಯವಸ್ಥಿತ ಶಾಲಾ ಶಿಕ್ಷಣಕ್ಕೆ ಬುನಾದಿ ಹಾಕಿದ್ದಾರೆ. ಸೊರಟೂರಜ್ಜನವರ ಕಾಲಮಾನ ೧೮೬೫ರಿಂದ ೧೯೭೬ ಅವರ ಕಾಲಮಾನದಲ್ಲಿಯ ಪೂಜ್ಯರ ಕಾರ್ಯಸಾಧನೆಗಳು ಸೊರಟೂರ ಗ್ರಾಮದ ಜನರಿಗೆ ಚಾರಿತ್ರಿಕ ಮಹತ್ವ ಪಡೆದುಕೊಳ್ಳುತ್ತವೆ.

ಸೊರಟೂರಿನ ಸಿರಿ

ಸೊರಟೂರಿಗೆಲ್ಲ ಮಾರ್ಗದರ್ಶಕರೆನ್ನುವಂತೆ ಹಿರಿಯ ಮಠ ಇತ್ತು. ಸೊಲಬಯ್ಯನವರು ಆ ಮಠದ ಅಯ್ಯನವರಾಗಿದ್ದರು. ಆಚಾರ-ವಿಚಾರಗಳಿಂದ ಸನ್ನಡತೆಯಿಂದ ಎಲ್ಲರಿಗೂ ಬೆಲ್ಲದಚ್ಚಾಗಿ ಬಾಳುತ್ತಿದ್ದರು. ಅವರು ಕಾಯಕನಿಷ್ಠರಾಗಿ ಊರಿನ ಜನತೆಗೆ ಬೋಧಕರಾಗಿ, ಸತಿಗೆ ತಕ್ಕ ಪತಿಯಾಗಿ, ಹಿರಿಯ ಮಠದ ಅಯ್ಯನವರಾಗಿಯೂ ಸರಳ ಸ್ವಭಾವದ ಸಜ್ಜನರಾಗಿದ್ದರು.

ಗುರುವಿನ ಆಜ್ಞೆಯಂತೆ ಕೋರುಧಾನ್ಯದ ಭಿಕ್ಷೆಯನ್ನು ದಿನಾಲು ಮಾಡುತ್ತಿದ್ದರು. ಮುಂಜಾನೆಯ ಸಮಯ ಬರಿ ಭಿಕ್ಷೆಯನ್ನು ಬೇಡುವುದು ಇವರ ಕಾಯವಾಗಿರಲಿಲ್ಲ. ಪ್ರತಿ ಮನೆಯ ಸಂಸ್ಕೃತಿಯನ್ನು ತಿದ್ದುವುದೇ ಇವರ ಬದುಕಾಗಿತ್ತು. ಭಕ್ತರ ಕುಂದು-ಕೊರತೆಗಳನ್ನು ನೀಗಿಸಿ ನೀತಿ-ನಿಯಮಗಳನ್ನು ತಿಳಿಸಿ ಕೊಡುವುದು ಸೊಲಬಯ್ಯನವರ ಕೈಂಕರ್ಯವಾದರೆ, ಪ್ರತಿಯಾಗಿ ಜನರು ಧಾನ್ಯಗಳನ್ನು ನೀಡಿ ತಮ್ಮ ಉಪಕೃತಿಯನ್ನು ಸ್ಮರಿಸುತ್ತಿದ್ದರು. ಬೇಡಿ ತಂದ ಧಾನ್ಯವನ್ನು ಸ್ವಚ್ಛಗೊಳಿಸಿ ಪ್ರಸಾದವಾಗಿಸಿ ಬಂದ ಭಕ್ತರಿಗೆ ಭಕ್ತಿಯ ದಾಸೋಹ ಮಾಡುವ ಸತ್ಸಂಪ್ರದಾಯ ಇವರದಾಗಿತ್ತು. ಪತಿಗೆ ತಕ್ಕವಳಾದ ಸದ್ಗುಣ ಶಿಲೆಯಾದ ಸೊರಟೂರಿನ ಪಕ್ಕದ ಗ್ರಾಮ ಹಂಗನಕಟ್ಟಿಯ ಮಗಳಾದ ಸತಿ ವೀರಮ್ಮನು ಗಂಡನ ಇಂಗಿತದಂತೆ ವರ್ತಿಸುತ್ತಿದ್ದಳು. ಊರಿನ ಜನತೆಗೆ ಆದರ್ಶ ದಾಂಪತ್ಯ ಸೊಲಬಯ್ಯ- ವೀರಮ್ಮನವರದಾಗಿತ್ತು.

ದೈನಂದಿನ ಕಾರ್ಯಗಳನ್ನು ಪೂರೈಸಿದ ಬಳಿಕ ಪತಿಯು ಊರಿನ ಜನತೆಯೊಂದಿಗೆ ಆಧ್ಯಾತ್ಮಿಕ ಚಿಂತನೆಗೈದರೆ; ತಾಯಿ ವೀರಮ್ಮನು ಓಣಿಯ ಗೃಹಿಣಿಯರಿಗೆ ನೀತಿ-ಧರ್ಮ-ಸದಾಚಾರಗಳನ್ನು ತಿಳಿಸಿ ಕೊಡುತ್ತಿದ್ದಳು. ಮಾನವ ಬದುಕು ನೀರ ಮೇಲಿನ ಗುಳ್ಳೆಯಂತಿದ್ದರೂ ಅದಕ್ಕೊಂದು ನೆಲೆಯಿದೆಯೆಂಬುದನ್ನು ತಿಳಿಯುವಂತೆ ಬೋಧಿಸುತ್ತಿದ್ದರು. ಬರಿ ಬೋಧನೆ ಅವಳದಲ್ಲ. ತಾನೂ ತನ್ನ ಬದುಕಿನಲ್ಲಿ ಆ ಸತ್ಯವನ್ನು ಅಳವಡಿಸಿಕೊಂಡಿದ್ದಳು. ಸ್ಥಾವರ ದೇವರ ಪೂಜೆಗಿಂತ ಇಷ್ಟಲಿಂಗ ಪೂಜೆಯ ಮಹತ್ವವನ್ನು ತೋರಿಸಿಕೊಡುತ್ತಿದ್ದಳು. ನಿಜಗುಣ ಶಿವಯೋಗಿಗಳ, ಸರ್ಪಭೂಷಣ ಶಿವಯೋಗಿಗಳ, ಇತರ ಸತ್ಪುರುಷರ ಹಿತೋಪದೇಶಗಳನ್ನು ಅರಿತುಕೊಳ್ಳುವುದರೊಂದಿಗೆ ಅವರ ಭಾವಗೀತೆಗಳನ್ನು ಹೃದಯ ತುಂಬಿ ಹಾಡುತ್ತಿದ್ದರು. ದೇವರ ಪ್ರಾರ್ಥನೆ ಮಾಡಿ ಭಜನೆಯಲ್ಲಿ ಸಾರ್ಥಕ ಬದುಕನ್ನು ಬಾಳಲು ತಿಳಿಸಿಕೊಡುತ್ತಿದ್ದರು.

ಸೊಲಬಯ್ಯನವರಾದರೂ ಏಕ ದಾರಿಯನ್ನು ಹಿಡಿದು ಕೈವಲ್ಯ ಪದಗಳನ್ನು ಹಾಡಿ ಭಕ್ತರ ಮನಸ್ಸನ್ನು ತಣಿಸುತ್ತಿದ್ದರು. ಶ್ರಾವಣಮಾಸ ಬಂದಿತೆಂದರೆ ಶಿವಪುರಾಣವನ್ನು ಅಥವಾ ಶರಣರ ಚರಿತ್ರೆಗಳನ್ನು ಸ್ವತಃ ಖುದ್ದಾಗಿ ಹೇಳುತ್ತಿದ್ದರು. ಪ್ರತಿಯೊಬ್ಬ ಮನುಷ್ಯ ತನ್ನ ಬಾಳನ್ನು ಸಾಗಿಸುವುದರೊಂದಿಗೆ ಆತ್ಮಚಿಂತನೆಯ ಮಾರ್ಗದಲ್ಲಿ ಮುನ್ನಡೆಯುವಂತೆ ಹಿರಿಮಠದಯ್ಯನವರಾದ ಸೊಲಬಯ್ಯನವರು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು.

ಮುಂಡರಗಿ ಶ್ರೀ ಜಗದ್ಗುರು ಅನ್ನದಾನ ಮಹಾಶಿವಯೋಗಿಗಳಿಗೆ ಸೊರಟೂರಿನ ಸಂಸ್ಥಾನಿಕರು ದಾನವಿತ್ತ ಜಮೀನು ಅಲ್ಲಿತ್ತು. ಹೀಗಾಗಿ ಏಳನೆಯ ಪೀಠಾಧ್ಯಕ್ಷರಾದ ಶ್ರೀ ಜಗದ್ಗುರು ಅನ್ನದಾನ ಮಹಾಸ್ವಾಮಿಗಳು ಸೊರಟೂರಿಗೆ ಆಗಾಗ ದಯಮಾಡಿಸುತ್ತಿದ್ದರು. ಪೂಜ್ಯರು ಬಂದಾಗಲೆಲ್ಲ ಹಿರೇಮಠದಲ್ಲಿಯೇ ಶಿವಪೂಜೆ ಮಾಡುತ್ತಿದ್ದರು. ಭಕ್ತಿಸಂಪನ್ನರಾದ ವೀರಮ್ಮನವರ ಕೊರಗನ್ನು ಕಂಡು ಶ್ರೀಗಳವರು ಆಶೀರ್ವದಿಸುವರು. ಜಂಗಮನ ಅಪ್ಪಣೆಯಂತೆ ಲಿಂಗನಿಷ್ಠಾಪರರಾದ ಈ ದಂಪತಿಗಳು ಬಾಳಿನ ಬೆಳಕನ್ನು ಕಂಡು ಸಂತಸಪಟ್ಟರು. ವೀರಮ್ಮನವರು ಕಂಡ ಕಂಡ ದೇವರಿಗೆ ಮೊರೆಹೋಗದೆ ವೀರಶೈವರ ಆರಾಧ್ಯಮೂರ್ತಿ ಜಂಗಮದೇವನಿಗೆ ತನ್ನ ಅಳಲನ್ನು ತಿಳಿಸಿದ್ದಳು. ಅನಂದದಿಂದ ಶಿವಪೂಜೆಗೈದ ಅನ್ನದಾನೀಶ್ವರರು ಹೃದಯತುಂಬಿ ಹಾರೈಸಿದ್ದರು. ಜಂಗಮನ ಸಂತಸವೇ ದಂಪತಿಗಳಿಗೆ ಕಲ್ಯಾಣವಾಯ್ತು.

ವೀರಮ್ಮನವರು ಗರ್ಭವತಿಯಾಗುವಳು. ಸೊಲಬಯ್ಯನವರು ಎಲ್ಲವೂ ಶಿವನಿಚ್ಛೆಯೆಂದು ಶಿವನಲ್ಲಿ ವಿಶ್ವಾಸವಿರಿಸಿದ್ದರು. ಕರ್ತವ್ಯವನ್ನು ನಿರ್ವಹಿಸುವುದೇ ತಮ್ಮ ಕಾಯಕವೆಂದು ಭಾವಿಸಿದ್ದರು. ವೀರಮ್ಮನಂತೂ ಮತ್ತಷ್ಟು ಭಕ್ತಿಪರವಶಳಾಗುತ್ತಿದ್ದಳು. ಹೆಚ್ಚು ಹೆಚ್ಚಾಗಿ ಲಿಂಗಪೂಜೆಯಲ್ಲಿ ತೊಡಗುವುದು, ಮಠಕ್ಕೆ ಬಂದವರಿಗೆಲ್ಲ ಸಂತೃಪ್ತಿಪಡಿಸುವುದು, ಬಡಬಗ್ಗರಿಗೆ ದಾನ ಮಾಡುವುದು, ಇಲ್ಲದವರಿಗೆ ಇದ್ದುದನ್ನು ವಂಚನೆಯಿಲ್ಲದೆ ನೀಡುವುದು ಆ ತಾಯಿಯ ಬಯಕೆಗಳಾಗಿದ್ದವು. ತನಗಾಗಿ ಏನನ್ನೂ ಬಯಸುತ್ತಿರಲಿಲ್ಲ. ಲಿಂಗಪೂಜೆಯನ್ನು ಮಾಡಿಕೊಂಡ ಬಳಿಕ ಗುರುಪಾದೋದಕ ವನ್ನು ಸ್ವೀಕರಿಸಿದ ನಂತರ ಭಸ್ಮವನ್ನು ಸ್ವಲ್ಪ ಬಾಯಲ್ಲಿ ಹಾಕಿಕೊಳ್ಳಲು ಆಸಕ್ತಿ ಪಡುತ್ತಿದ್ದಳು. ವಿಭೂತಿ ಪುರುಷನು ಉದಯಿಸಲೆಂಬ ಆಸೆಯಿತ್ತೇನೊ? ನಿಜ.

ತಾಯಿಯಾಗಲಿರುವವಳು ತಾನು ಎಂಥ ಮಗುವನ್ನು ಹಡೆಯಬೇಕೆಂಬ ಬಯಕೆಯುಳ್ಳ ವಳಾಗುವಳೋ ಆ ತೆರನಾದ ನಡೆ-ನುಡಿಯನ್ನು, ವಾತಾವರಣವನ್ನು ಹೊಂದಿಕೊಂಡಿರಬೇಕು. ಅದರಿಂದ ನಿಶ್ಚಿತವಾಗಿ ಹುಟ್ಟುವ ಶಿಶುವಿನ ಮೇಲೆ ಪರಿಣಾಮ ಬೀರುವುದು. "ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎನ್ನುವ ರೀತಿಯಲ್ಲಿ ವೀರಮ್ಮ ಹಾಗೂ ಸೊಲಬಯ್ಯವನರ ಜೀವನ ಅನ್ಯೋನ್ಯವಾಗಿತ್ತು. ಉಭಯರ ಭಾವಗಳು ಒಂದಾಗಿದ್ದವು. ಸತಿಯ ಅಪೇಕ್ಷೆಯನ್ನು ಪತಿ ಪೂರೈಸುವನು. ಪತಿಯ ಮನದಿಚ್ಛೆಗೆ ಹೊರತಾಗಿ ಸತಿ ವೀರಮ್ಮನು ನಡೆಯುತ್ತಿರಲಿಲ್ಲ. ಎಂಟನೆಯ ತಿಂಗಳಲ್ಲಿ ಆಕೆಯ ಗರ್ಭಸ್ಥ ಶಿಶುವಿಗೆ ಲಿಂಗಧಾರಣೆ ಮಾಡುವರು ಸೊಲಬಯ್ಯನವರು. ನನ್ನ ಮಗು ಶಿವಯೋಗಿಯೇ ಆಗಲೆಂದು ಬಯಸಿದರು. ಹೆಂಡತಿಯ ಮನಸ್ಸು ಸದಾ ಉಲ್ಲಾಸಭರಿತವಾಗಿರುವಂತೆ ಸೊಲಬಯ್ಯನವರು ನೋಡಿಕೊಳ್ಳುತ್ತಿದ್ದರು.

ಸೀಮಂತ ಕಾರಣವಾಗಿತ್ತು, ಬಂಧುಬಾಂಧವರು, ಭಕ್ತರು ವೀರಮ್ಮನಿಗಾಗಿ ತಿನಿಸುಗಳನ್ನು ತಂದು ಸಲ್ಲಿಸಿದರು. ಆ ತಾಯಿ ವಿರಕ್ತಭಾವದಿಂದಲೇ ಸ್ವೀಕರಿಸಿದಳು. ನವಮಾಸಗಳು ತುಂಬುವಾಗ ಪತಿದೇವರು ತವರಿಗೆ ಕಳುಹಿಸಿದರು. ಕ್ರಿ.ಶ. ೧೮೬೫ರಲ್ಲಿ ಶುಭವಾರ ಶುಭ ನಕ್ಷತ್ರದಲ್ಲಿ ಗಂಡು ಮಗುವಿನ ಜನನವಾಯಿತು. ಮಗನ ಮುಖವನ್ನು ನೋಡಿದ ತಾಯಿತನಕ್ಕೆ ಸಂತೃಪ್ತಿಯಾಯಿತು. ಜಾತಕರ್ಮಗಳು ನಡೆದವು. ಆದರೆ ಪದ್ಧತಿಯಂತೆ ಮಗುವಿಗೆ ಎಂಟನೆ ತಿಂಗಳಲ್ಲಿ ಕಟ್ಟಿಸಿದ ಲಿಂಗವನ್ನು ಧಾರಣ ಮಾಡಿಸಿ ಭಸ್ಮವನ್ನು ಹಚ್ಚಿ ಬಾಯಲ್ಲಿ ಪಾದೋದಕವನ್ನು ಹಾಕಿಸಿದಳು. ಆಮೇಲೆ ತನ್ನ ಮೊಲೆಯ ಅಮೃತವನ್ನು ಕುಡಿಸಿದಳು. ಸತ್ಸಂಪ್ರದಾಯವನ್ನು ಚಾಚೂತಪ್ಪದೆ ನಡೆಸಿದಳು. ನಾಮಕರಣವೂ ನಡೆಯಿತು. ಅನ್ನದಾನೀಶನ ಆಶೀರ್ವಾದದಿಂದಲೇ ಜನಿಸಿದ ಮಗುವಿಗೆ 'ಅನ್ನದಾನೀಶ' ಎಂದೇ ಕರೆಯಲಾಯಿತು.

ಬಿದಿಗೆಯ ಚಂದಿರನಂತೆ ಮಗು ದಿನದಿಂದ ದಿನಕ್ಕೆ ಬೆಳೆಯತೊಡಗಿತು. ಆರೋಗ್ಯಕರವಾದ ಮಗು ತನ್ನ ಬಾಲಲೀಲೆಗಳನ್ನು ಆಡುತ್ತಿರುವಾಗ ತಾಯಿಗೆ ಆಗುವ ಆನಂದ ಅಪಾರವಾದುದು. ನಿತ್ಯದಲ್ಲಿ ಅನ್ನದಾನಿಗೆ ಮೈತೊಳೆದು ಭಸ್ಮ ಹಚ್ಚಿ ಅವನ ಲಿಂಗಯ್ಯನಿಗೂ ಭಸ್ಮ ಹಚ್ಚಿ ಪೂಜಿಸುತ್ತಿದ್ದಳು. ಶಿವಮಂತ್ರವನ್ನು ಪಠಿಸುತ್ತಿದ್ದಳು. ಆ ಬಳಿಕವೇ ಅವನು ಹಾಲುಣ್ಣುವನು.

ಐದನೆಯ ತಿಂಗಳಲ್ಲಿ ಸೊಲಬಯ್ಯನವರು ಚಕ್ಕಡಿಯನ್ನು ಕಳುಸಿ ತಾಯಿ ಮತ್ತು ಮಗನನ್ನು ಸೊರಟೂರಿಗೆ ಕರೆತಂದರು. ಸೊರಟೂರಿನ ಸಿರಿಯನ್ನು ಕಂಡು ಜನ ತಣಿಯಿತು.

ವಿಶಾಲವಾದ ಹಣೆ, ಸುಂದರವಾದ ಚಂದಿರನಂಥ ಮುಖ, ಕೆಂಪು ಬಣ್ಣದ ಮಗುವನ್ನು ಕಂಡವರು ಆನಂದಭರಿತರಾಗುವುದರೊಂದಿಗೆ ಭಕ್ತಿಯುಳ್ಳವರಾಗುತ್ತಿದ್ದರು. ಬಾಲಶಿವಯೋಗಿಗೆ ಶಿರಬಾಗುತ್ತಿದ್ದರು. ಊರಿನ ತಾಯಿ ಬಳಗವು ಮಗುವನ್ನು ಕಂಡು ವೀರಮ್ಮನವರಿಗೆ ಧನ್ಯತೆಯನ್ನು ವ್ಯಕ್ತಪಡಿಸುತ್ತಿತ್ತು. ಊರ ಹಿರಿಯರು ಸಹ ಸೊಲಬಯ್ಯನವರಿಗೆ ತಮ್ಮ ಭಕ್ತಿಯ ಕಾಣಿಕೆಯನ್ನು ಸಲ್ಲಿಸಿದರು. ತಾಯಿ ಮಗುವಿಗೆ ಅನುಕೂಲತೆಯನ್ನು ಒದಗಿಸಿದರು. ಮಗು ಅನ್ನದಾನೀಶ ಧ್ಯಾನಸ್ಥನಂತೆ ಸಮಾಧಾನದಿಂದಲೇ ಇರುತ್ತಿದ್ದ, ಅಳುತ್ತಿರಲಿಲ್ಲ. ತಾಯಿಗೆ ತೊಂದರೆ ಕೊಡುತ್ತಿರಲಿಲ್ಲ. ಯಾಕೆಂದರೆ ಅಳುವವರನ್ನು ಸಮಾಧಾನಪಡಿಸಲೆಂದು ಬಂದವ(ಬಾಲಕ)ನಲ್ಲವೆ!

'ಅನ್ನದಾನೀಶ' ದಿನಗಳು ಉರುಳಿದಂತೆ ದೊಡ್ಡವನಾದನು. ೬–೭ ವರುಷಗಳೇ ಗತಿಸಿದವು. ತಂದೆ ಮಗನಿಗೆ ಶಾಲೆಯನ್ನು ಕಲಿಸಲು ಪ್ರಯತ್ನಿಸಿದರು. ಮಗನು ಮಾತ್ರ ತಂದೆ ಹಾಕಿಕೊಟ್ಟ 'ಓಂ'ಕಾರವನ್ನು ತಿದ್ದಿ ತೀಡಿದ, ಉಳಿದ ಅಕ್ಷರಾಭ್ಯಾಸ, ಓದಿನತ್ತ ಗಮನಹರಿಸಲಿಲ್ಲ. ಲಿಂಗವನ್ನು ಪೂಜಿಸುತ್ತಿದ್ದ, ಧ್ಯಾನಮಗ್ನನಾಗುತ್ತಿದ್ದನು. ಅಪರೂಪಕ್ಕಾಗಿ ಹುಟ್ಟಿದ ಮಗನಿಗೆ ಒತ್ತಾಯ ಮಾಡುತ್ತಿರಲಿಲ್ಲ. ಮಹಾತ್ಮರ, ಶರಣರ ಕಥೆಗಳನ್ನು ತಂದೆಯಿಂದ ಕೇಳುತ್ತಿದ್ದ. ತಾನೂ ಸನ್ಯಾಸಿಯಾಗುವ ಕನಸು ಕಾಣುತ್ತಿದ್ದ. ಓರಗೆಯ ಮಕ್ಕಳೊಡನೆ ಹೆಚ್ಚು ಬೆರೆಯುತ್ತಿರಲಿಲ್ಲ. ತನಗೆ ಬೇಕೆನಿಸಿದಾಗ ಗೋಲಿಗುಂಡವನ್ನು ಆಡಲು ಹೋಗುತ್ತಿದ್ದ. ಅದರಲ್ಲಿ ಈತನದೇ ಮೇಲುಗೈಯಾಗುತ್ತಿತ್ತು. ಗುರಿ ಇಡುವುದರಲ್ಲಿ ಜಾಣನಿದ್ದ. ಲಿಂಗವನ್ನು ತದೇಕದೃಷ್ಟಿಯಿಂದ ನಿರೀಕ್ಷಿಸುವಂತೆ ಗೋಲಿಯನ್ನು ನೋಡಿ ಹೊಡೆಯುತ್ತಿದ್ದನು. ಮಠದಲ್ಲಿ ಹೆಚ್ಚಾಗಿ ಪೂಜೆಯಲ್ಲಿ ಸಮಯ ಕಳೆಯುತ್ತಿದ್ದನು.

ಎಂಟನೆಯ ವರುಷಕ್ಕೆ ಸಮೀಪದ ಪಟ್ಟಾಧ್ಯಕ್ಷರನ್ನು ಬರಮಾಡಿಕೊಂಡು ಶಿವದೀಕ್ಷೆಯನ್ನು ಸೊಲಬಯ್ಯನವರು ಕೊಡಿಸಿದರು. ಗುರುಗಳಿಂದ ಲಿಂಗಪೂಜಾ ವಿಧಾನವನ್ನು ತಿಳಿದುಕೊಂಡು ತಪ್ಪದೆ ಲಿಂಗಪೂಜೆಯನ್ನು ಮಾಡುವನು. ಜಪವನ್ನು ನಿಷ್ಠೆಯಿಂದ ಮಾಡುತ್ತಿದ್ದನು. ಗುರುಗಳಲ್ಲಿ ಭಕ್ತಿಯಿತ್ತು. ತಾಯಿಯ ಕೆಲಸದಲ್ಲಿ ನೆರವಾಗುತ್ತಿದ್ದನು. ತನ್ನ ತಮ್ಮ ತಂಗಿಯರನ್ನು ಎತ್ತಿ ಆಡಿಸುತ್ತಿದ್ದನು. ಹೀಗೆ ಅನ್ನದಾನೀಶ ಬಾಲಲೀಲೆಗಳಲ್ಲಿ ಸಮಯ ಕಳೆದು ದೊಡ್ಡವನಾದನು. ಕೇಳಿದ್ದನ್ನು ತಿಳಿದುಕೊಂಡು ಸ್ಮರಣೆಯಲ್ಲಿಟ್ಟುಕೊಳ್ಳುತ್ತಿದ್ದನು.

ಮೃಡಗಿರಿಯ ವಟುವಾದನು

ಮಗನು ಬೆಳೆದು ದೊಡ್ಡವನಾಗುತ್ತಿದನೆಂದು ತಂದೆ–ತಾಯಿಗಳಿಗೆ ಸಂತಸವಿತ್ತು. ತನ್ನ ತಾಯಿಯನ್ನಲ್ಲದೆ ಬೇರೆ ಹೆಣ್ಣುಮಕ್ಕಳೊಡನೆ ಮಾತಾಡುತ್ತಿರಲಿಲ್ಲ. ಹುಡುಗಿಯರನ್ನಂತೂ ಕಂಡು ಕಾಣದಂತಿದ್ದನು. ಎಲ್ಲ ಹುಡುಗರಂತೆ ತಿಂಡಿ–ತಿನಿಸುಗಳಿಗಾಗಿ ಹಟಮಾರಿತನವಿರಲಿಲ್ಲ. ಯಾವ ವಸ್ತುವಿಗಾಗಿಯೂ ಆಶೆಯಿರಲಿಲ್ಲ. ಕೇವಲ ಧರ್ಮರತಿ ಅವನಲ್ಲಿತ್ತು. ಬಡಮಕ್ಕಳಿಗೆ ಸಹಾಯ ಮಾಡುತ್ತಿದ್ದ. ಆಗಾಗ ಹಸಿದವರಿಗೆ ಉಣಿಸುತ್ತಿದ್ದ. ಮಿತಭಾಷಿಯೂ ಆಗಿದ್ದನು. ವ್ಯರ್ಥವಾದ

ಹರಟೆಯೆಂದರೆ ಅವನಿಗೆ ಹಿಡಿಸುತ್ತಿರಲಿಲ್ಲ. ನೀತಿ-ನಿಯಮಗಳನ್ನು ಧರ್ಮಾಚಾರಗಳನ್ನು ತಂದೆಯಿಂದ, ತಾಯಿಯಿಂದ ಕೇಳಿ ತಿಳಿದುಕೊಂಡು ಅಚರಿಸುವಲ್ಲಿ ಆಸಕ್ತಿಯಿತ್ತು. ಗುರು-ಹಿರಿಯರಲ್ಲಿ ಭಕ್ತಿ, ಶಿವಲಿಂಗದಲ್ಲಿ ನಿಷ್ಠೆ ವಿಶೇಷವಾಗಿ ಬೆಳೆದಿದ್ದವು. ಮಗನ ಅಲೌಕಿಕ ವೃತ್ತಿಗಳನ್ನು ಕಂಡು ಅವನನ್ನು ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನ ಮಹಾಶಿವಯೋಗಿಗಳ ಸಾನಿಧ್ಯಕ್ಕೆ ಸೊಲಬಯ್ಯನವರು ಕರೆತಂದರು.

ಸ್ವಾಮಿಯ ದರ್ಶನ ಪಡೆದು ತಂದೆ-ಮಕ್ಕಳಿಗೆ ಆನಂದವಾಯಿತು. ಪೂಜ್ಯರು ಮುದ್ದುಮುಖದ 'ಅನ್ನದಾನಿ'ಯನ್ನು ಕಂಡು ಅವನನ್ನೇ ತದೇಕಚಿತ್ತಯಿಂದ ಅವಲೋಕಿಸಿದರು. ದೃಷ್ಟಿಪಾತವನ್ನು ಮಾಡಿದರು. ಗುರುಕೃಪೆಯನ್ನು ಪಡೆದ 'ಅನ್ನದಾನಿ'ಯು ಗುರು ಸಾನಿಧ್ಯದಲ್ಲಿ ಇರಲು ಒಪ್ಪಿದನು. ಗುರುಸೇವೆಗೆ ಸನ್ನದ್ಧನಾದನು. ಗುರುಗಳಿಂದ ಆಶೀರ್ವಾದ ಪಡೆದ ಸೊಲಬಯ್ಯನವರು ತಮ್ಮ ಸೊರಟೂರಿಗೆ ಪ್ರಯಾಣ ಬೆಳೆಸಿದರು. ತಂದೆ-ತಾಯಿಗಳು ತಮ್ಮ ಕರುಳಿನ ಕುಡಿಯನ್ನು ಸ್ವಾಮಿಯ ಸೇವೆಗೆ ಸಮಾಜ ಸೇವೆಗೆ ಸಲ್ಲಿಸುವುದು ಒಂದು ದೊಡ್ಡ ತ್ಯಾಗವಲ್ಲವೆ? ತನ್ನಲ್ಲಿಯ ವಸ್ತುವನ್ನು ಕೊಡಬಹುದು. ತನ್ನ ಮಗನನ್ನೇ ಕೊಡುವುದೆಂದರೆ ಸಣ್ಣದಲ್ಲ. ಸೊಲಬಯ್ಯನವರ ತ್ಯಾಗಕ್ಕೆ ಮಹಾಸ್ವಾಮಿಗಳು ಮೆಚ್ಚಿದ್ದರು. ಅದರಲ್ಲೂ ವಿರಕ್ತನಾಗಲು ಯೋಗ್ಯವಾದ ವಟು ದೊರೆತುದಕ್ಕೆ ಶ್ರೀ ಅನ್ನದಾನ ಮಹಾಸ್ವಾಮಿಗಳಿಗೆ ಅನರ್ಘ್ಯ ರತ್ನವೇ ದೊರೆತಂತಾಗಿತ್ತು. ಹಳೆ ಮಠವನ್ನು ಬಿಟ್ಟುಬಂದು ಹೊಸ ನೆಲೆಯನ್ನು ಸ್ಥಾಪಿಸಿದ ಶ್ರೀಗಳಿಗೆ ತಮ್ಮ ಉತ್ತರಾಧಿಕಾರಿಯು ಲಭಿಸಿದ್ದಕ್ಕೆ ತಮ್ಮ ಲಿಂಗಪೂಜಾ ಫಲ ಲಭಿಸಿತೆಂದು ಹರ್ಷವನ್ನು ವ್ಯಕ್ತಪಡಿಸಿದರು. ಭಕ್ತರನ್ನು ಕರೆದು ಶ್ರೀಮಠದ ವಟುವನ್ನು ಪರಿಚಯಿಸಿದರು.

ಮಠದಲ್ಲಿ ಕೆಲವು ಮರಿಗಳು ವಾಸವಾಗಿದ್ದರು. ಕರಿಬಸವ ದೇವರು, ಚಂದ್ರಶೇಖರ ದೇವರು, ಟೊಪ್ಪಿಗೆಯ ಅನ್ನದಾನ ದೇವರು, ಸದಾಶಿವ ದೇವರು ಮತ್ತು ಕುಕನೂರಿನಿಂದ ಬಂದ ಅನ್ನದಾನಿ ದೇವರೂ ಶ್ರೀಗಳವರ ಶಿಷ್ಯರಾಗಿದ್ದರು. ಇವರೆಲ್ಲರಿಗಿಂತ ಸೊರಟೂರಿನ ಈ ಅನ್ನದಾನ ದೇವರು ಪೂಜ್ಯರ ಪ್ರೀತಿಗೆ ಪಾತ್ರರಾದರು. ಇವರಲ್ಲಿ ವಿರತಿ ಮನೆಮಾಡಿತ್ತು. ಲೌಕಿಕ ಶಿಕ್ಷಣ ಪಡೆಯದಿದ್ದರೂ ಆಧ್ಯಾತ್ಮಿಕ ಚಿಂತನೆ, ನ್ಯಾಯನಿಷ್ಠುರತೆ, ಸ್ವಾತಂತ್ರ್ಯಪ್ರಿಯತೆ, ಸ್ವಾಭಿಮಾನ ಮುಂತಾದ ಗುಣಗಳು ಇವರಲ್ಲಿ ಮನೆಮಾಡಿದ್ದವು.

ಗುರು ಸೇವೆಯನ್ನು ಕಾಯಾ-ವಾಚಾ ಮನಸ್ಸಿನಿಂದ ಮಾಡುತ್ತಿದ್ದರು. ಸೇವೆ ಮಾಡುವುದೇ ಸಾಧಕನ ಪರಮ ಕರ್ತವ್ಯವಾಗಿದ್ದು. 'ಸೇವಾಧರ್ಮ'ವು ಸರ್ವಶ್ರೇಷ್ಠವೆನಿಸಿತ್ತು. ಸದ್ಗುರುನಾಥನನ್ನು ಸತ್ಕ್ರಿಯೆಯ ಸಾಗರವನ್ನಾಗಿ, ಸುಜ್ಞಾನದ ಆಗರವನ್ನಾಗಿ, ಕಲ್ಪತರುವನ್ನಾಗಿ, ಭಕ್ತಿ-ಜ್ಞಾನ-ವೈರಾಗ್ಯ ಮಂದಿರವನ್ನಾಗಿ ಭಾವಿಸಿ ಪರಮ ಆಪ್ತನನ್ನಾಗಿ ಭಾವಿಸಿ ಸೇವೆ ಮಾಡುತ್ತಿದ್ದರು. ತನ್ನ ಸರ್ವಸ್ವವೇ ಸದ್ಗುರುವೆಂದು ನಂಬಿರುತ್ತಿದ್ದರು. ಗುರುಗಳ ಅಂಗಸೇವೆಯನ್ನು ಸದ್ಭಾವದಿಂದ ಮಾಡುತ್ತಿದ್ದರು. ಗುರುಸ್ಥಾನವು ತನ್ನದೆಂದು ಅದರ ಸ್ವಚ್ಛತೆ ಹಾಗೂ ಸೌಂದರ್ಯತೆಯಿಂದ ಕೂಡಿರುವಂತೆ ನೋಡಿಕೊಳ್ಳುವುದು ಶಿಷ್ಯರಾದವರ ಕರ್ತವ್ಯವಾಗಿರುತ್ತದೆ. ಗುರುಗಳು ಸಿಟ್ಟು ಮಾಡಿದರೆ ಅದನ್ನು ಹಚ್ಚಿಕೊಳ್ಳದೆ ಸದ್ಭಾವನೆಯಿಂದಲೇ ಸೇವೆಯನ್ನು ಮುಂದುವರೆಸುತ್ತಿದ್ದರು.

ಎಳ್ಳಿನಷ್ಟು ಮನಸ್ಸಿಗೆ ಬೇಜಾರು ಮಾಡಿಕೊಳ್ಳದೇ ಸೇವೆಗೆ ಸಿದ್ಧರಾಗುತ್ತಿದ್ದರು. ಅನ್ನದಾನ ದೇವರ ವೈರಾಗ್ಯಭಾವಕ್ಕೆ, ಅವರ ಭಕ್ತಿಭಾವಕ್ಕೆ ಗುರುಗಳು ಸಂತುಷ್ಟರಾಗಿದ್ದರು. ಹೆಚ್ಚು ಅಕ್ಷರಾಭ್ಯಾಸ ಮಾಡದಿದ್ದರೂ ಸ್ಮರಣಶಕ್ತಿ ಚೆನ್ನಾಗಿತ್ತು. ಗುರುಗಳು ಸೂಚಿಸಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ಎಲ್ಲ ಕೆಲಸಗಳನ್ನು ಚಾಚೂ ತಪ್ಪದೇ ನಿರ್ವಹಿಸುತ್ತಿದ್ದರು. ಎರಡು ದಶಕಗಳನ್ನು ದಾಟಿದ ಯೌವನ. ಆರೋಗ್ಯವಾದ ದೇಹ, ಪರಿಶುದ್ಧ ಮನಸ್ಸಿನ, ಸುಂದರ ಕಾಯ ಅನ್ನದಾನ ದೇವರದಾಗಿತ್ತು. ಕೆಂಪುವರ್ಣದ ಬಣ್ಣ ಒಳಹೊರಗೂ ಆಕರ್ಷಕವಾಗಿತ್ತು.[೭]

ಎಂಟನೆಯ ಪೀಠಾಧಿಕಾರಿಗಳು

ಗುರುಗಳು ಲಿಂಗೈಕ್ಯರಾದ ಕೆಲವೇ ದಿನಗಳಲ್ಲಿ ಅನ್ನದಾನ ದೇವರ ಪಟ್ಟಾಧಿಕಾರವನ್ನು ನಿಶ್ಚಯಿಸಿದರು. ಫಾಲ್ಗುಣ ಬಹುಳ ತ್ರಯೋದಶಿಯ ಶುಭ ಲಗ್ನದಂದು ಅಂದರೆ ದಿನಾಂಕ ೧೭-೦೩-೧೮೮೮ ಸೋಮವಾರದಂದು ನಿರಂಜನ ಪಟ್ಟಾಧಿಕಾರವನ್ನು ನಿಶ್ಚಯಿಸಿದರು. ಮುಂಚಿನ ದಿನವೇ ಹಿರೇಮಲ್ಲನಕೇರಿ ಶ್ರೀಗಳು ದಯಮಾಡಿಸಿದರು. ಅನ್ನದಾನ ದೇವರಿಗೆ ಮೊದಲು 'ಚಿನ್ಮಯಾನುಗ್ರಹ'ವಾಯಿತು. ಅನುಗ್ರಹ ಪಡೆದ ದೇವರು ಅನ್ನದಾನ ದೇಶಿಕರಾದರು. ಶಿವಾನುಭವೋಪ-ದೇಶವನ್ನು ಗುರುಗಳಿಂದ ಪಡೆದು ಧನ್ಯರಾದರು. ಕರಣಹಸಿಗೆ ಮಂತ್ರಗೋಪ್ಯಗಳ ಸಾರವನ್ನು ಸಂಕ್ಷಿಪ್ತವಾಗಿ ಗುರುಗಳು ತಿಳಿಸಿದರು. ಶಿವಪೂಜಾ ವಿಧಾನದೊಂದಿಗೆ ನ್ಯಾಸಗಳ ಕ್ರಮವನ್ನು ದೇಶಿಕರು ಮೊದಲೇ ತಿಳಿದಿದ್ದರು. ಸಂಸ್ಕಾರ ನೀಡುವುದರೊಂದಿಗೆ ಸಾಧನೆ ಮುಖ್ಯವಾದುದು. ಆ ದಿಶೆಯಲ್ಲಿ ಅನ್ನದಾನ ದೇಶಿಕರು ಉತ್ತಮ ಸಾಧಕರಾಗಿದ್ದರು. ಗುರುಗಳ ಅನುಗ್ರಹ ಸಂಪೂರ್ಣವಾಯಿತು. ಅಂದೆ ಶುಭ ಸಂಜೆಯಲ್ಲಿ ಶೂನ್ಯಸಿಂಹಾಸನಾರೋಹಣವಾಯಿತು. ಅನ್ನದಾನ ದೇಶಿಕರು "ಶ್ರೀ ಮನ್ನಿರಂಜನ ಪ್ರಣವ ಸ್ವರೂಪ ಜಗದ್ಗುರು ಅನ್ನದಾನ ಮಹಾಸ್ವಾಮಿ"ಗಳಾದರು. ವಾದ್ಯಘೋಷಗಳು ಮೊಳಗಿದವು. ಸ್ವಾಮಿಯ ಜಯ ಜಯಕಾರ ಊರನ್ನೆಲ್ಲ ಪಾವನಗೊಳಿಸಿತು. ನೆರೆದ ಭಕ್ತರು ಮಹಾಪ್ರಸಾದವನ್ನು ಸ್ವೀಕರಿಸಿದರು. ಧರ್ಮಬೋಧೆಯೂ ನಡೆಯಿತು.

ಮಂಗಲ ಸಮಾರಂಭಕ್ಕೆ ಕಲಕೇರಿಯ ದೇಸಾಯರು, ಬಿಸರಳ್ಳಿ ದೇಸಾಯರು, ಮುಂಡರಗಿ ನಾಡಗೌಡರು ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತರು ಆಗಮಿಸಿದ್ದರು. ಸೊರಟೂರಿನ ಸೊಲಬಯ್ಯನವರೂ ಬಂದಿದ್ದರು. ಪೂರ್ವಾಶ್ರಯದ ಋಣವನ್ನು ತೀರಿಸಲು ಸೊಲಬಯ್ಯನವರಿಗೆ ಬಟ್ಟೆಗಳನ್ನು ಕೊಡಿಸಿದರು. ಪೂಜ್ಯರಿಂದ ಆಶೀರ್ವಾದ ಮಾಡಿಸಿದರು. ಅನೇಕರಿಗೆ ಆಶೀರ್ವಾದ ಲಭಿಸಿತು.

ಮರುದಿನ ಚತುರ್ದಶಿಯಂದು ನೂತನ ಮಹಾಸ್ವಾಮಿಗಳ ಅಡ್ಡಪಲ್ಲಕ್ಕಿ ಮಹೋತ್ಸವವು ವಿಜೃಂಭಣೆಯಿಂದ ಸಾಂಗವಾಯಿತು. ಸಕಲ ಬಿರುದಾವಳಿಗಳು ಹೇಳಲ್ಪಟ್ಟವು. ಜಯಘೋಷ ಮುಗಿಲಿಗೆ ಮುಟ್ಟಿತು. ಅನೇಕ ಗ್ರಾಮಗಳ ಭಜನಾ ಮಂಡಳಿಗಳು ಸೇವೆಗೈದವು. ಮಹೋತ್ಸವದಲ್ಲಿ ಪಾಲ್ಗೊಂಡ ಗಣ್ಯರಿಗೆ-ಸದ್ಭಕ್ತರಿಗೆ ಪೂಜ್ಯರು ಆಶೀರ್ವದಿಸಿ ಆಶೀರ್ವಚನವಿತ್ತರು.

ಗುರುಗಳ ಆಶೀರ್ವಚನ ಕೇಳಿದ ಸದ್ಭಕ್ತರು ಸಂತುಷ್ಟರಾದರು. ಪರಸ್ಥಳದಿಂದ ಬಂದವರು ಆಶೀರ್ವಾದ ಪಡೆದು ತಮ್ಮ ತಮ್ಮ ಊರಿಗೆ ತೆರಳಿದರು. ನೂತನ ಮಹಾಸ್ವಾಮಿಗಳು ಮಠದಲ್ಲಿದ್ದ ಮರಿದೇವರನ್ನು ಕರೆದು ಸಹಕಾರದಿಂದ ಮಠದ ಕೆಲಸಗಳನ್ನು ನಿರ್ವಹಿಸಲು ಸೂಚಿಸಿದರು. ಎಲ್ಲರನ್ನು ಪ್ರೀತಿಯಿಂದ ಕಂಡರು. ದಾಸೋಹ ಕಾರ್ಯ ನಿರ್ವಿಘ್ನವಾಗಿ ನಡೆಯುವಂತೆ ನೋಡಿಕೊಂಡರು. ಕುಕನೂರ ಅನ್ನದಾನ ಮರಿದೇವರು ದಾಸೋಹಕ್ಕೆ ಬೇಕಾದ ಉರುವಲು ಮಠದ ಗೋವುಗಳಿಗೆ ಬೇಕಾದ ಮೇವು ತರುವ ಕೆಲಸವನ್ನು ಕೈಕೊಂಡರು. ಮತ್ತೊಬ್ಬರು ಮಠದ ವ್ಯಾಜದ ಪ್ರಕರಣದತ್ತ ಗಮನಹರಿಸಿದರು. ಪೂಜ್ಯ ಮಹಾಸ್ವಾಮಿಗಳು ತ್ರಿಕಾಲಲಿಂಗ ಪೂಜಾನಿಷ್ಠರಾಗುತ್ತಿದ್ದರು. ಭಕ್ತರ ಬೇಡಿಕೆಯಂತೆ ಕುದುರೆ ಸವಾರಿ ಮಾಡಿ ಅವರ ಮನೆಗಳಿಗೆ ತೆರಳಿ ಶಿವಪೂಜಾ ಮಾಡಿ ಸಂತೋಷಗೊಳಿಸುತ್ತಿದ್ದರು. ಅವರ ಕಷ್ಟ-ನಷ್ಟಗಳಿಗೆ ಸ್ಪಂದಿಸುತ್ತಿದ್ದರು.[೮]

ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗಲು ವಿನಾಯತಿ

ಶ್ರೀ ಜಗದ್ಗುರು ಅನ್ನದಾನಿ ಮಹಾಸ್ವಾಮಿಗಳವರು ರಾಜ್ಯಮಟ್ಟದಲ್ಲಿಯೂ ಅತ್ಯುನ್ನತ ಸ್ಥಾನವನ್ನು ಹೊಂದಿದ್ದರು. ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗುವ ವಿನಾಯಿತಿಯನ್ನು ಸಹ ಪಡೆದಿದ್ದರು. ಬಾಂಬೆ ಸರಕಾರದ ನ್ಯಾಯಾಲಯ ಇಲಾಖೆ ಠರಾವು ನಂ. ೮೯೨೮ ದಿ. ೨೫.೯.೧೯೨೦. ಕಮೀಶನರ್ ಅವರ ಪ್ರಕಟಣೆ SDNo. LAW ೪೧ ದಿ. ೨೦.೮.೧೯೨೦ ಧಾರವಾಡ ಜಿಲ್ಲಾಧಿಕಾರಿಗಳ ಆದೇಶಾನುಸಾರ ಪತ್ರ ನಂ. LAW SR-೩೧ ದಿ. ೩೧ ಜುಲೈ ೧೯೨೦(ದಂತೆ) ಧಾರವಾಡ ಜಿಲ್ಲಾಧಿಕಾರಿ.

ಶ್ರೀ ಜಗದ್ಗುರು ಅನ್ನದಾನಿಸ್ವಾಮಿ ಮುಂಡರಗಿ ಇವರು ಖುದ್ದಾಗಿ ಕೋರ್ಟಿಗೆ ಹಾಜರಾಗಲು ವಿನಾಯಿತಿ ಈ ಕೆಳಗಿನ ಭಾಗದ ೧೩೩ ಸಿವಿಲ್ ಕೋಡ್ ಪ್ರಕಾರ ೧೯೦೮.

೨. ಇಡೀ ದಕ್ಷಿಣ ಭಾರತದ ಲಿಂಗಾಯತ ಸಮಾಜದ ಮುಖ್ಯ ಧರ್ಮಗುರುಗಳಿದ್ದಾರೆ. ಈ ಭಾಗದ ಜನರು ಅವರನ್ನು ತುಂಬಾ ಗೌರವದಿಂದ ಕಾಣುತ್ತಾರೆ. ಗುರುಗಳು ಒಂದು ಸಾವಿರ ಎಕರೆ ಜಮೀನು ಹೊಂದಿದ್ದಾರೆ. ಹಾಗೂ ಅವರು ೬೬ ಶಾಖಾಮಠಗಳನ್ನು ಮದ್ರಾಸ್ ಹಾಗೂ ಬಾಂಬೆ ಪ್ರಾಂತಗಳಲ್ಲಿ ಹೊಂದಿದ್ದಾರೆ. ಶ್ರೀಮಠದಲ್ಲಿ ಅನ್ನ ದಾಸೋಹ ನಿರಂತರ ನಡೆಯುತ್ತದೆ. ಶ್ರೀಗಳ ಗೌರವಾರ್ಥ ಪ್ರತಿವರುಷ ಯಾತ್ರಾ ಮಹೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ಜಾತ್ರೆಗೆ ಆಗಮಿಸಿದ ಭಕ್ತಾದಿಗಳಿಗೆ ಉಚಿತ ಊಟ, ವಸತಿ ವ್ಯವಸ್ಥೆ, ಸಮಾಜದ ಗಣ್ಯರಿಗೆ ಅವರ ಯೋಗ್ಯತೆಗನುಸಾರವಾಗಿ ಪುರಸ್ಕಾರ, ಸನ್ಮಾನ ಮಾಡುತ್ತ ಬಂದಿದೆ. ಪೂಜ್ಯ ಜಗದ್ಗುರುಗಳ ವಿಶಾಲಹೃದಯ ಭಕ್ತರ ಮೇಲಿನ ಪ್ರೀತಿ-ವಾತ್ಸಲ್ಯ ಹಾಗೂ ಭಕ್ತರ ಏಳ್ಗೆಗೆ ಶ್ರಮಿಸುತ್ತಿರುವುದು ಶ್ಲಾಘನೀಯ. ಸ್ವಾಮೀಜಿಯವರ ಘನತೆ ಗೌರವಗಳನ್ನು ಕಂಡ ಇತರ ಜನಾಂಗದವರು ಕೂಡ ಇವರ ಅನುಯಾಯಿಗಳಾಗಿದ್ದಾರೆ.

೩. ಸ್ವಾಮೀಜಿಯವರು ಶ್ರೀಮಠದ ಜಮೀನನ್ನು ಪುಕ್ಕಟೆಯಾಗಿ ಸರಕಾರಕ್ಕೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಕಟ್ಟಲು ಕೊಟ್ಟಿದ್ದಾರಲ್ಲದೆ ಪೋಲಿಸ್ ವಸತಿಗೃಹ, ಶಾಲೆ ಹಾಗೂ ಪಟ್ಟಣ ಪಂಚಾಯತ್ ಕಟ್ಟಡ ಕಟ್ಟಲು ಜಮೀನು ದಾನವಾಗಿ ಕೊಟ್ಟಿದ್ದಾರೆ. ಆಸ್ಪತ್ರೆ ಕಟ್ಟಲು ಶ್ರೀಗಳವರು ರೋಖ ರೂಪಾಯಿ ೪೦೦೦ ಕಾಣಿಕೆ ಕೂಡ ಸಲ್ಲಿಸಿದ್ದಾರೆ.

೪. ಬಹಳಷ್ಟು ಜನರು ಅಭಿಪ್ರಾಯ ಹಾಗೂ ಆಶೆ ಪಡುವುದೇನೆಂದರೆ ಜನರು ಗೌರವಾನ್ವಿತ ವ್ಯಕ್ತಿಗಳು ಹಾಗೂ ಅವರ ಶಿಷ್ಯ ಬಳಗ ಅಷ್ಟೇ ಅಲ್ಲ, ಉಳಿದ ಪ್ರಮುಖ ಸಮಾಜ ಬ್ರಾಹ್ಮಣರು, ಮಹಮ್ಮದೀಯರು ಹಾಗೂ ಅನ್ಯಜಾತಿಯವರು ಸಹ ಆಶೆ ಪಡುವುದೇನೆಂದರೆ– ಮಹಾಸ್ವಾಮಿಗಳ ಗೌರವಾರ್ಥ ಅವರು ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗುವುದರಿಂದ ವಿನಾಯತಿ ನೀಡಬೇಕೆಂದು ಸಮಾಜದ ಎಲ್ಲ ಜನರ ವಿನಂತಿಯಿದೆ.

ಧಾರವಾಡ ಜಿಲ್ಲಾ ನ್ಯಾಯಾಧೀಶರ ಅಂಕಿತ ನಂ. ೨೨೦೭ ದಿನಾಂಕ ೧೨–೮–೧೯೨೦ ಠರಾವು–ಬೇಡಿದ ವಿನಾಯಿತಿ ಮಂಜೂರು ಮಾಡಿದೆ.

ಈ ಕೆಳಗಿನ ವಿಷಯವನ್ನು ಬಾಂಬೆ ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟಿಸುವುದು. "ರಾಜ್ಯಪಾಲರು ಶಾಸನ ಸಭೆ ಸ್ವಸಂತೋಷದಿಂದ ತಿಳಿಸುವುದೇನೆಂದರೆ–೧೩೩ ನೇ ಕಲಮಿನ ಅಡಿ, ಸಿವಿಲ್ ನ್ಯಾಯದ ಅವಕಾಶದಲ್ಲಿ ೧೯೦೮ (V of ೧೯೦೮ನೇ ಪ್ರಕಾರ) ಶ್ರೀ ಜಗದ್ಗುರು ಅನ್ನದಾನ ಸ್ವಾಮಿ ಮುಂಡರಗಿ ಇವರು ಲಿಂಗಾಯತ ಸಮಾಜದ ಧರ್ಮದ ಮುಖ್ಯ ಗುರುಗಳಿರುವುದರಿಂದ ಅವರಿಗೆ ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗುವುದರಿಂದ ವಿನಾಯಿತಿ ನೀಡಿದೆ."

ಸಿವಿಲ್ ನ್ಯಾಯಾಲಯದಡಿ ಕಲಮು ೧೩೩ರ ಅನ್ವಯ ವಿಷಯವನ್ನು ಉಚ್ಚ ನ್ಯಾಯಾಲಯಕ್ಕೂ ತಿಳಿಸುವುದು.

ಸಹಾಯಕ ಕಾರ್ಯದರ್ಶಿಗಳು
ಬಾಂಬೆ ಸರ್ಕಾರ, ನ್ಯಾಯಾಂಗ ಇಲಾಖೆ

ಬಾಂಬೆ ಸರ್ಕಾರದ ಸಹಾಯಕ ಕಾರ್ಯದರ್ಶಿಗಳ ವರದಿಯಂತೆ ಹಾಗೂ ಬಾಂಬೆ ಸರಕಾರದ ಗೃಹಖಾತೆ ನಂ. ೬೦೪೯–B, ದಿ. ೫–೭–೧೯೨೪ರ ರಾಜ್ಯಪಾಲರ ಆಜ್ಞೆಯನ್ನನುಸರಿಸಿ ಮದ್ರಾಸ್ ರಾಜ್ಯಪಾಲರು ಮುಂದೆ ದಿನಾಂಕ ೨೧ ಜುಲೈ ೧೯೨೪ರಲ್ಲಿ 'ಶ್ರೀ ಜಗದ್ಗುರು ಅನ್ನದಾನಿ ಸ್ವಾಮಿಗಳು ಮುಂಡರಗಿ ಇವರು ಕೋರ್ಟು ಕೇಸುಗಳಿಗೆ ಖುದ್ದಾಗಿ ಹಾಜರ ಆಗುವುದಕ್ಕೆ ವಿನಾಯಿತಿ ನೀಡಿದರು.

ನಿಜಾಮರ ಸರಕಾರ ಹೈದ್ರಾಬಾದಕ್ಕೂ ದಿನಾಂಕ ೫–೩–೧೯೨೫ಕ್ಕೆ ಮತ್ತೆ 'ಕೋರ್ಟು ಕೇಸುಗಳಿಗೆ ಖುದ್ದಾಗಿ ಹಾಜರು ಆಗುವುದಕ್ಕೆ ವಿನಾಯಿತಿ ಕೇಳಿದ್ದು ಉಂಟು.'

ಪೂಜ್ಯ ಮಹಾಸ್ವಾಮಿಗಳು ಜಾಗತಿಕ ಆರೋಗ್ಯ ರಕ್ಷಣೆಯ ಸಂಸ್ಥೆಯಾದ 'ರೆಡ್ ಕ್ರಾಸ್'ಗೆ ೫೦೦ ರೂ.ಗಳನ್ನು ಉದಾರವಾಗಿ ದೇಣಿಗೆ ನೀಡಿದ್ದನ್ನು ದಿನಾಂಕ ೭–೨–೧೯೨೩ರಲ್ಲಿ

ಧಾರವಾಡ ಕಲೆಕ್ಟರ್ ಆಫೀಸಿನಿಂದ ಸ್ಮರಿಸಿದ್ದಾರೆ. ಉನ್ನತಾಧಿಕಾರಿಗಳು ಪೂಜ್ಯರ ಆಶೀರ್ವಾದ ಪಡೆದು ಧನ್ಯರಾದುದನ್ನು ನೆನಪಿಸಿದ್ದನ್ನು ಸಹ ಕಾಣಬಹುದು.

ಚರಿತ್ರೆ ನಾಯಕರು ೧೮೬೫ರಲ್ಲಿ ಜನಿಸಿದ್ದು ೧೯೨೫ಕ್ಕೆ ಅರವತ್ತು ವರುಷಗಳನ್ನು ಪೂರ್ಣಗೊಳಿಸಿದರು. ಮುಂಡರಗಿ ತಾಲೂಕಿನ ಹಳ್ಳಿಗುಡಿ ಗ್ರಾಮಕ್ಕೆ ಭಿಕ್ಷೆಗೆ ದಯಮಾಡಿಸಿದರು. ಊರ ಭಕ್ತರು ಮೊದಲಿನಿಂದಲೂ ಶ್ರೀಮಠದ ಪರಮ ಸೇವಕರು. ಹೀಗಾಗಿ ಭಕ್ತಿಯಿಂದ ಊರಲ್ಲಿ ದಾಸೋಹಕ್ಕಾಗಿ ಧನ-ಧಾನ್ಯವನ್ನು ಪೂಜ್ಯರ ಪಾದಕ್ಕೆ ಸಲ್ಲಿಸಿದ್ದರು. ಗೋಲಪ್ಪನೆಂಬ ಭಕ್ತನು ಪ್ರತಿ ವರುಷ ತನ್ನ ಯೋಗ್ಯತೆಗೆ ತಕ್ಕಂತೆ ಭಕ್ತಿ ಭಿಕ್ಷೆಯನ್ನು ಸಲ್ಲಿಸುತ್ತಿದ್ದನು. ಆದರೆ ಗೋಲಪ್ಪನು ಕೆಲವು ತಿಂಗಳ ಹಿಂದೆ ತೀರಿಕೊಂಡಿದ್ದನು. ಅವನಿಗೆ ಒಬ್ಬಳೇ ಮಗಳಿದ್ದಳು. ಮನೆತನಕ್ಕಾಗಿ ಮಗಳನ್ನು ಕೊಟ್ಟು ಒಬ್ಬ ಅಳಿಯನನ್ನು ಮನೆಯಲ್ಲೇ ಇರಿಸಿಕೊಂಡಿದ್ದನು. ಹೊಸಬನಾದ ಅಳಿಯನು ವ್ಯಾವಹಾರಿಕವಾದ ಜ್ಞಾನಶೂನ್ಯನಾಗಿದ್ದನು. ಮಹಾಸ್ವಾಮಿಗಳೊಡನೆ ಬಂದ ಭಕ್ತರು ಅವನಿಗೆ ತಿಳಿಹೇಳಿದರಾದರೂ ಅವನು ಒಪ್ಪಲಿಲ್ಲ. ತಾನು ಕೊಟ್ಟಷ್ಟು ಒಯ್ಯಬೇಕೆಂದೇ ಹಟ ಹಿಡಿದನು. ಆಗ ಮಹಾಸ್ವಾಮಿಗಳು "ನಾವು ಮುಂದೆ ಹೋಗೋಣ ನಡೆಯಿರಿ. ನಂತರ ಅವನೇ ಕರೆದು ಕೊಡುವನು" ಎಂದಪ್ಪಣೆ ಮಾಡಿದರು.

ಪೂಜ್ಯರು ಒಂದೆರಡು ಮನೆಗಳನ್ನು ಮುಗಿಸಿರಲಿಲ್ಲ. ಗೋಲಪ್ಪನ ಅಳಿಯನ ಮನೆಯ ಹತ್ತಿಗೆ ಬೆಂಕಿ ಹತ್ತಿಕೊಂಡಿತು. ಅದೆಷ್ಟೇ ಪ್ರಯತ್ನ ಮಾಡಿದರೂ ಉಳಿಯಲಿಲ್ಲ. ಜನರ ಸಹಾಯದಿಂದ ಮನೆ ಸುಡಲಿಲ್ಲ. ಅವನ ಹೆಂಡತಿಯು ತನ್ನ ಗಂಡನಿಗೆ ಹೇಳಿದಳು- 'ಅಜ್ಜನವರಿಗೆ ಕಾಣಿಕೆ ಕೊಡಲು ಒಪ್ಪಲಿಲ್ಲ. ಈಗೇನಾಯ್ತು ನೋಡ್ರಿ, ಈಗಲಾದರೂ ಬುದ್ಧಿವಂತನಾಗು' ಎಂದು. ಕೂಡಿದ ಜನರು ಬುದ್ಧಿ ಹೇಳಿದರು. ಪಶ್ಚಾತ್ತಾಪದಿಂದ ಮಹಾಸ್ವಾಮಿಗಳಲ್ಲಿ ಸಾಷ್ಟಾಂಗ ಹಾಕಿ ಕ್ಷಮೆ ಕೇಳಿದನು. ಕರುಣಾಮಯರಾದ ಶ್ರೀಗಳು ಕ್ಷಮಿಸಿ ಅವನ ಮನೆಗೆ ಆಗಮಿಸಿ ಆಶೀರ್ವಾದ ಮಾಡಿದರು. ಅವನ ಭಿಕ್ಷೆಯನ್ನು ಸಹ ಸ್ವೀಕರಿಸಿದರು. ಊರಿನ ಭಿಕ್ಷೆ ಪೂರ್ಣಗೊಂಡ ಬಳಿಕ ಹಿರಿಯರಲ್ಲೊಬ್ಬರು ವಿಚಾರಿಸಿ ಮಹಾಸನ್ನಿಧಿಗೆ ಈಗ ಅರವತ್ತು ವರುಷಗಳು ತುಂಬುತ್ತಿದ್ದು ನಮ್ಮ ಗ್ರಾಮದಲ್ಲಿಯೇ ಷಷ್ಠ್ಯಬ್ದ ಸಮಾರಂಭವನ್ನು ಆಚರಿಸೋಣವೆಂದು ಸೂಚಿಸಿದಾಗ ಎಲ್ಲರೂ ಭಕ್ತಿಯಿಂದ ಸಮ್ಮತಿಸಿದರು. ಅದಕ್ಕಾಗಿ ತಕ್ಕ ಏರ್ಪಾಡು ನಡೆಯಿತು. ಊರ ತುಂಬ ಉತ್ಸವದ ವಾತಾವರಣ. ಪೂಜ್ಯರ ಹುಟ್ಟುಹಬ್ಬವನ್ನು ೩-೫-೧೯೨೫ ರಂದು ನೆರವೇರಿಸುವ ಬಗೆಗೆ ರಾಜ್ಯಪಾಲರಿಗೆ ಪತ್ರ ಬರೆದದ್ದು ಸರಕಾರಿ ಸೌಧ ಗಣೇಶಖಂಡ ಬಾಂಬೆಯಿಂದ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು ಮಹಾಸ್ವಾಮಿಗಳ ಹುಟ್ಟುಹಬ್ಬದ ಶುಭಾಶಯವನ್ನು ಕಳುಹಿಸಿದ್ದನ್ನು ಸ್ಮರಿಸಬಹುದು. ಹೀಗೆ ಚರಿತ್ರ ನಾಯಕರ ಕೀರ್ತಿ ಎಲ್ಲೆಡೆ ಹಬ್ಬಿತ್ತು. ಅವರ ಆಶೀರ್ವಾದಕ್ಕಾಗಿ ನಾಡವರು ಬಯಸುತ್ತಿದ್ದರು.[೯]

ಶ್ರೀ ಜಗದ್ಗುರು ಅನ್ನದಾನಿ ಮಹಾಶಿವಯೋಗಿಗಳಿಗೆ ವಯೋಮಾನದಿಂದ ಮುಪ್ಪು ಆವರಿಸಿರಲಿಲ್ಲ. ಒಂದು ಸಂವತ್ಸರ ಚಕ್ರವನ್ನು ಪೂರ್ಣಗೊಳಿಸಿ ಮೇಲೊಂದು ಸಂವತ್ಸರದಲ್ಲಿದ್ದವರು. ಅಂದರೆ ಅರವತ್ತೊಂದು ವರುಷಗಳಲ್ಲಿ ಪಾದಾರ್ಪಣ ಮಾಡಿದ್ದರು. ವಯಸ್ಸು ಅರವತ್ತು

ದಾಟಿದಂತೆ ಮಹಾಜ್ಞಾನಿಗಳಾಗಿದ್ದರು. ಮುಂದಿನ ಭವಿಷ್ಯವನ್ನು ಬಲ್ಲವರಾಗಿದ್ದರು. ಶಿವನ ಕರೆಯನ್ನು ಅರಿತವರಾಗಿದ್ದರು. ಕೆಂಪು ಬಣ್ಣದ ದೇಹ ಶಿವಯೋಗ ಸಾಧನೆಯಲ್ಲಿ ತೊಡಗಿ ಪ್ರಕಾಶಮಾನವಾಗಿತ್ತು. ನೇತ್ರಗಳು ತೇಜೋಮಯವಾಗಿದ್ದವು. ವಿಶಾಲವಾದ ಹಣೆ, ದೀರ್ಘವೂ ಹ್ರಸ್ವವೂ ಅಲ್ಲದ ಶರೀರ. ಪಾದಗಳು ಕೆಂಪು ಗುಲಾಬಿಯಂತೆ ವರ್ಣರಂಜಿತವಾಗಿದ್ದವು. ಹೃದಯವಂತೂ ಶಿವಧ್ಯಾನದಲ್ಲಿ ಪಕ್ವವಾಗಿತ್ತು. ಶಿವಭಾವನೆಯಿಂದ ಪರಿಪೂರ್ಣವಾಗಿತ್ತು. ಸಕಲ ಜೀವಿಗಳ ಲೇಸೇ ಅವರ ಮಣಿಹವಾಗಿತ್ತು. ಪೂಜ್ಯ ಮಹಾಸ್ವಾಮಿಗಳು ಅಧಿಕಾರ ವಹಿಸಿಕೊಂಡಂದಿನಿಂದ ನಿರಂತರ ಹೋರಾಟ ನಡೆದು ಮನಸ್ಸು ದಣಿದಿತ್ತು. ದೇಹಕ್ಕೂ ವಿಶ್ರಾಂತಿ ಇರಲಿಲ್ಲ. ಹೀಗಾಗಿ ಶ್ರೀಗಳವರೇ ತಮ್ಮ ಅಂತ್ಯವನ್ನು ಬಯಸಿದರೇನೋ! ಶಿವನಿಚ್ಛೆ! ಶಿವಯೋಗಿಗಳ ಬಯಕೆ!! ಬಲ್ಲವರಾರು!!

ಮಹಾತ್ಮರಿಗೆ ತಿಳಿಯಲಾರದ್ದು ಯಾವುದೂ ಇರುವುದಿಲ್ಲ. ಅಂತೆಯೇ 'ಅನ್ನದಾನಿ ಶಿವಯೋಗಿ'ಯ ಅಸ್ತಿತ್ವ ಉಳಿಯಬೇಕೆಂದೂ ಶ್ರೀಮಠದ ಪರಂಪರೆ ಅನೂಚಾನವಾಗಿ ಮುಂದುವರೆಯಬೇಕೆಂದೂ ಬಯಸಿ ಲಿಂಗೈಕ್ಯರಾಗುವ ೨-೩ ದಿನಗಳ ಮೊದಲು ಮಠದ ಭವ್ಯಭವಿಷ್ಯತ್ತನ್ನು ಅಪೇಕ್ಷಿಸಿ ಶ್ರೀಮಠದ ಅಭಿಮಾನಿಗಳಾದ ಮುಂಡರಗಿ, ಗದಗ, ಕೊಪ್ಪಳ, ಬಿಸರಳ್ಳಿ ಮುಂತಾದ ಊರುಗಳ ಪ್ರಮುಖ ಭಕ್ತರನ್ನು ಕರೆಯಲು ಅಪ್ಪಣೆ ಮಾಡಿದರು. ಭಕ್ತರೆಲ್ಲರನ್ನು ಬರಮಾಡಿಕೊಂಡು-ತಮಗೆ ಶಿವನ ಅಪ್ಪಣೆಯಾಗಿದೆ. ಆದರೆ ಶ್ರೀಮಠದ ವ್ಯವಸ್ಥೆಯನ್ನು ಮಾಡುವುದು ನಿಮ್ಮೆಲ್ಲರ ಕರ್ತವ್ಯ. ಅದಕ್ಕಾಗಿ ನಮ್ಮ ಉತ್ತರಾಧಿಕಾರಿಗಳನ್ನು ಗೊತ್ತುಮಾಡಿ ಹಿರೇಮಲ್ಲನಕೇರಿ ಶ್ರೀಗಳಿಂದ ಅಧಿಕಾರ ಕೊಡಿಸುವಂತೆ ಸೂಚಿಸಿ ೨೧ ಜನರ ಪಂಚ ಕಮಿಟಿಯನ್ನು ನೇಮಿಸಿದ್ದಾರೆ. ಪೂಜ್ಯ ಮಹಾಸ್ವಾಮಿಗಳ ಬಯಕೆಯಂತೆ ಇಪ್ಪತ್ತೊಂದು ಜನ ಪ್ರಮುಖರ ಹೆಸರು ಹೀಗಿವೆ.

೧. ಅಂದಾನಪ್ಪ ಬಿನ್ನ ಸೂಗಪ್ಪ ಶೀರಿ ಸಾ ॥ ಮುಂಡರಗಿ

೨. ಸಂಗಯ್ಯ ಸಿದ್ಧಯ್ಯಾ ಕಾಗನೂರ ಸಾ ॥ ಸದರ

೩. ರಾಚಪ್ಪ ಅಂದಾನಪ್ಪ ಕೊಪ್ಪಳ ಸಾ ॥ ಸದರ

೪. ತಿರಕಪ್ಪ ಅಂದಾನಪ್ಪ ಕಾತರಕಿ ಸಾ ॥ ಮುಂಡರಗಿ

೫. ಈಶ್ವರಪ್ಪ ಪಂಪಣ್ಣಾ ಕವಲೂರ ಸಾ ॥ ಮುಂಡರಗಿ

೬. ಕೊಟ್ಟಪ್ಪ ಅಂದಾನಪ್ಪ ಶೀರಿ ಸಾ ॥ ಮುಂಡರಗಿ

೭. ಅಂದಾನಯ್ಯಾ ಲಿಂಗಬಸಯ್ಯ ಹೊಸಳ್ಳಿ ಸಾ ॥ ಮುಂಡರಗಿ

೮. ಬಸಲಿಂಗಯ್ಯಾ ಚನವೀರಯ್ಯಾ ಕಾಗನೂರ ಸಾ ॥ ಮುಂಡರಗಿ

೯. ವೀರಭದ್ರಶಾಸ್ತ್ರಿ ರುದ್ರಯ್ಯಾ ಶಿಂಗಟಾಲೂರ ಸಾ ॥ ಮುಂಡರಗಿ

೧೦. ಕೊಟ್ಟಪ್ಪ ಅಂದಾನಪ್ಪ ಅಗ್ಗದ ಸಾ ॥ ಮುಂಡರಗಿ

೧೧. ಸೂಗೀರಪ್ಪ ಬಾಗೀರಪ್ಪ ಶೀರಿ ಸಾ ॥ ಮುಂಡರಗಿ

೧೨. ಸಣ್ಣವೀರಪ್ಪ ಮಹಾದೇವಪ್ಪ ಗುಗ್ಗರಿ ಸಾ ॥ ಮುಂಡರಗಿ

೧೩. ಚನ್ನಪ್ಪ ಸಿದ್ಧಲಿಂಗಪ್ಪ ಬಳ್ಳೊಳ್ಳಿ ಸಾ ॥ ಮುಂಡರಗಿ

೧೪. ಧೂಳಪ್ಪ ಕೆಂಚಪ್ಪ ಧೂಳಪ್ಪನವರ ಸಾ ॥ ಮುಂಡರಗಿ

೧೫. ದುಂಡಪ್ಪ ಗುರುಸಿದ್ಧಪ್ಪ ಸವಣೂರ ಸಾ ॥ ಮುಂಡರಗಿ

೧೬. ಗುಡದೀರಪ್ಪ ಸೊಲಬಪ್ಪ ತ್ಯಾಮಾ ಸಾ ॥ ಮುಂಡರಗಿ

೧೭. ಅಂದಾನಪ್ಪ ಸಿದ್ಧಪ್ಪ ಶೇರಿ ಸಾ ॥ ಮುಂಡರಗಿ

೧೮. ಮುದಿಬಸಪ್ಪ ಇರಬಸಪ್ಪ ಬಳ್ಳೊಳ್ಳಿ ಸಾ ॥ ಗದಗ

೧೯. ಅಂದಾನಪ್ಪ ರಾಚಪ್ಪ ಅಗಡಿ ಉರ್ಫ ಮುಂಡರಗಿ ಸಾ ॥ ಕೊಪ್ಪಳ

೨೦. ಗುರಪ್ಪಯ್ಯ ತಿರಕಪ್ಪಯ್ಯಾ ದೇಸಾಯಿ ಸಾ ॥ ಬಿಸರಳ್ಳಿ

೨೧. ಚಿಕ್ಕವೀರಪ್ಪ ವೀರಭದ್ರಪ್ಪ ಸಂಗರಡ್ಡಿ ಸಾ ॥ ಘಟ್ಟಿರಡ್ಯಾಳ

ಈ ಪ್ರಕಾರ ಇಪ್ಪತ್ತೊಂದು ಜನ ಸದ್ಭಕ್ತರನ್ನು ಆರಿಸಿ ತಮ್ಮ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಮಹಾಸನ್ನಿಧಿಯವರು ಅಧಿಕಾರ ಪತ್ರವನ್ನು ಮಾಡಿದರು. ಮರುದಿನವೇ ಅದರ ನೋಂದಣಿ ಸಹ ಆಯಿತು. ಈ ಪಂಚ ಕಮಿಟಿಗೆ ಶ್ರೀಮಠದ ಜವಾಬ್ದಾರಿಯನ್ನು ಮಹಾಸ್ವಾಮಿಗಳು ಕ್ರಮಬದ್ಧವಾಗಿ ವಹಿಸಿದರು.

ಮುದಿಬಸಪ್ಪನವರು ಬಳ್ಳೊಳ್ಳಿ ಇವರ ಸಹೋದರ ಮಡಿವಾಳಪ್ಪ ಬಳ್ಳೊಳ್ಳಿ ಬೆಟಗೇರಿ ಇವರೀರ್ವರು ಎತ್ತು ಖರೀದಿಗಾಗಿ ಹೊರಟಾಗ ಮಹಾಸ್ವಾಮಿಗಳನ್ನು ದರ್ಶನ ಮಾಡಿಕೊಂಡರು. ಆಗ ಬರಲು ಅಪ್ಪಣೆ ಮಾಡಿದ್ದರು. ಅದರಂತೆ ಇಬ್ಬರು ಸುಬ್ರಹ್ಮಣ್ಯದಿಂದ ಎತ್ತನ್ನು ಖರೀದಿಸಿ ಹಡಗಲಿಗೆ ಬರುತ್ತಿದ್ದಂತೆ ಶ್ರೀಗಳವರ ಆರೋಗ್ಯವೇನೋ ವಿಷಮಿಸಿದೆ. ಭಕ್ತರನ್ನು ಕರೆಯಿಸಿ ಪಂಚ ಕಮಿಟಿ ಮಾಡಿದ್ದನ್ನು ಮತ್ತು ಹೊಳಗುಂದಿ ಶ್ರೀಗಳನ್ನು ಕರೆಕಳುಹಿಸಿದ್ದು ತಿಳಿಯಿತು. ಹೊಳಗುಂದಿ ಶ್ರೀಗಳೂ ಅಲ್ಲಿಗೆ ಆಗಮಿಸಿದ್ದರು. ಅವರನ್ನು ಕರೆದುಕೊಂಡು ಮುಂಡರಗಿಗೆ ಬರುತ್ತಾರೆ. ಮಹಾಸನ್ನಿಧಿಯ ದರ್ಶನ ಮಾಡಿಕೊಳ್ಳಲು ಮಠಕ್ಕೆ ಬರುತ್ತಿದ್ದಂತೆ–ಪೂಜ್ಯರು, ಏನ್ರೆಪ್ಪಾ! ಬಂದುದು ಒಳ್ಳೆಯದಾಯಿತು. ಉತ್ತರಾಧಿಕಾರಿಗಳನ್ನು ಆರಿಸಿ ಅಧಿಕಾರ ಮಾಡುವುದು ನಿಮ್ಮ ಧರ್ಮ. ಮಠದ ಸೊತ್ತೆಲ್ಲ ಇನ್ನು ನಿಮ್ಮ ತಾಬಾಕ್ಕೆ ಕೊಡಲಾಗಿದೆ ನೋಡು ಎಂದಪ್ಪಣೆ ಮಾಡಿದರು.[೧೦]

ಹೊಳಲಿನ ಶಂಕರಸ್ವಾಮಿಗಳು ಸಮಯಕ್ಕೆ ಒದಗಿದ್ದಕ್ಕೆ ಬಹಳ ಸಂತಸಪಟ್ಟು ಅವರನ್ನು ಸ್ನಾನ ಮಾಡಿಸಲು ತಿಳಿಸಿದರು. ಸ್ನಾನ ಮಾಡಿ ಶಿವಪೂಜೆಗೈದರು. ಪಾದಪೂಜೆಯ ನಂತರ ಶ್ರೀ ಅನ್ನದಾನಿ ಮಹಾಶಿವಯೋಗಿಗಳೂ ಸಹ ಜಂಗಮನ ಪಾದೋದಕವನ್ನು ಸ್ವೀಕರಿಸಿದರು. ಮೊದಲೇ ಸ್ನಾನ ಮಾಡಿ ಮಡಿಯಲ್ಲೇ ಇದ್ದರು. ಅಪ್ಪಣೆ ಪಡೆದು ಜಂಗಮಕ್ಕೆ ತಮ್ಮ

ಪ್ರಾಣಧನವನ್ನು ಸಮರ್ಪಿಸಿ ಲಿಂಗದಲ್ಲಿ ಬೆರೆದೇಕಮಯವಾದರು. ಭಕ್ತರಿಗೆ ಕಾರ್ಮೋಡ ಕವಿದಂತಾಯಿತು. ಬೆಳಕು ಮಹಾಬೆಳಕು ಸೇರಿತು. ಭಕ್ತಜನರು ಅಂಧಕಾರದಲ್ಲಿ ಮುಳುಗಿದಂತಾದರು. ಆದರೇನು ಮಾಡುವುದು! ಅಂತ್ಯ ಸಂಸ್ಕಾರವನ್ನು ನಿರ್ವಹಿಸುವುದು ಪರಮಕರ್ತವ್ಯವಲ್ಲವೆ! ದಿನಾಕ ೨೬–೧–೧೯೨೬ರಂದು ಜಂಗಮಪುಂಗವರು ಜಂಗಮದಲ್ಲಿ ಒಂದಾಗಿದ್ದರು. ಶಾಲಿವಾಹನ ಶಕೆ ೧೮೪೭ ಕ್ರೋಧನ ನಾಮ ಸಂವತ್ಸರ ಮಾಘ ಶುದ್ಧ ತ್ರಯೋದಶಿ ಅಂದು ಬುಧವಾರವಾಗಿತ್ತು. ಸಂಜೆಯೊಳಗೆ ಕುರವತ್ತಿ ಹೊಳಲು ಮತ್ತು ಲಿಂಗನಾಯಕನಹಳ್ಳಿ ಶ್ರೀಗಳು ಆಗಮಿಸಿದರು. ಪೂಜ್ಯ ಶ್ರೀಗಳ ಲಿಂಗೈಕ್ಯ ಸಮಾಚಾರವನ್ನು ಕೇಳಿ ದೂರದೂರದ ಭಕ್ತರು ಆಗಮಿಸಿದರು. ಭಜನಾ ಮಂಡಳಿಯವರು ಭಜನೆ ಮಾಡುತ್ತಿದರು. ಭಕ್ತರೊಬ್ಬರು ರಚಿಸಿ ಹಾಡಿದ್ದು ಹೀಗೆ

ಅಗಲಿದೆಯಾ ಶ್ರೀ ಶಿವಯೋಗಿ ಭಾನು ।
ಅಗಲಿದೆಯಾ ನೀ ಭಕ್ತರ ಕಾಮಧೇನು ॥೧॥

ಅಗಲಿದೆಯಾ ನೀ ಪರಮ ಜಗದ್ಗುರುವೆ ।
ಅಗಲಿದೆಯಾ ಭಕ್ತರ ಕಲ್ಪತರುವೆ ॥೨॥

ಅಗಲಿದೆಯಾ ನೀ ಭಕ್ತರ ಚಿಂತಾಮಣಿ ।
ಅಗಲಿದೆಯಾ ನೀ ವಿರತರ ಶಿಖಾಮಣಿ ॥೩॥

ಅಗಲಿದೆಯಾ ನೀ ಮಹಾದಾನಿಯಲ್ಲವೆ ।
ಅಗಲಿದೆಯಾ ನೀ ಭಕ್ತರ ಜೀವದಾನಿಯೆ ॥೪॥

ಅಗಲಿದೆಯಾ ನೀ ಮಹಾಕಾಲಜ್ಞಾನಿ ।
ಅಗಲಿದೆಯಾ ನೀ ಮುಕ್ತಿಯ ಧನಿ ॥೫॥

ಎಲ್ಲರ ಮನದಲ್ಲಿ ನೆಲಸಿದ ಶಿವಯೋಗಿಯನ್ನು ಸ್ತುತಿಸಿದರು. ಪಾಡಿದರು. ಅವರ ಗುರುಗಳಾದ ಬಳ್ಳೊಳ್ಳಿ ಅಜ್ಜನವರ ಎಡಭಾಗದಲ್ಲಿ ಸಮಾಧಿಕ್ರಿಯೆ ವಿಧಿವತ್ತಾಗಿ ನಡೆಯಿತು. ಬಂದ ಜಂಗಮರಿಗೆ ಕಾಣಿಕೆ ಸಲ್ಲಿತ್ತು. ಭಕ್ತರಿಗೆ ಸಚಿತ್ರಪ್ತಿಚಿಯಾಯಿತು. ಮಹಾಜಂಗಮನಿಗೆ ಮಹಾಮಂಗಳವಾಯಿತು. ಪೂಜ್ಯ ಶ್ರೀಗಳ ಹೆಸರಿನಲ್ಲಿ ಗ್ರಾಮದಲ್ಲಿರುವ ಸೊರಟೂರ ಅನ್ನದಾನೇಶ್ವರ ಮಠ ಅವರ ಸ್ಮರಣೆಯಲ್ಲಿ ಗ್ರಾಮದಲ್ಲಿ ಧರ್ಮ ಜಾಗೃತಿಯ ತಾಣವಾಗಿ ಮುನ್ನಡೆದಿದೆ.

ಜಗದ್ಗುರು ಅನ್ನದಾನೀಶ್ವರ ಮಠದ ಶ್ರೀ ಶಿವಯೋಗೀಶ್ವರ ಸ್ವಾಮೀಜಿಗಳ ಕೊಡುಗೆ

ಮುಂಡರಗಿ ಜ. ಅನ್ನದಾನೀಶ್ವರ ಶಾಖೆಯಾದ ಸೊರಟೂರಿನ ಜ. ಅನ್ನದಾನೀಶ್ವರ ಮಠದಲ್ಲಿ ೩೦ ವರ್ಷಗಳಿಂದ ಶ್ರೀ ಶರಣಬಸವೇಶ್ವರ ಪುರಾಣ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮದಿಂದ ಪ್ರಸಿದ್ಧಿಯಾಗಿತ್ತು. ಆದರೆ ಈ ಶಾಖಾಮಠಕ್ಕೆ ಸ್ವಾಮೀಜಿಗಳಿರಲಿಲ್ಲ. ಮುಂಡರಗಿ ಶ್ರೀಗಳಾದ ನಾಡೋಜ ಜ. ಶ್ರೀ ಅನ್ನದಾನೀಶ್ವರ ಶ್ರೀಗಳು ೧೩.೧೨.೨೦೧೧ರಂದು ಶ್ರೀಶಿವಯೋಗೀಶ್ವರ ಶ್ರೀಗಳನ್ನು ಸೊರಟೂರ ಶ್ರೀಮಠದ ಸ್ವಾಮೀಜಿಗಳೆಂದು ನೇಮಕ ಮಾಡಿದ

ನಂತರ ಇಲ್ಲಿ ಹಲವಾರು ಧಾರ್ಮಿಕ ಸಾಮಾಜಿಕ ಕಾರ್ಯಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಶ್ರೀಶಿವಯೋಗೀಶ್ವರ ಶ್ರೀಗಳು ಸೊರಟೂರ ಶ್ರೀಮಠಕ್ಕೆ ಬಂದ ತಕ್ಷಣಾ ಮೊಟ್ಟಮೊದಲು ಪ್ರಾರಂಭಿಸಿದ ಕಾರ್ಯಕ್ರಮವೇ ವಚನ ಚಿಂತನಗೋಷ್ಠಿ ಪ್ರತಿ ಹುಣ್ಣಿಮೆಯ ದಿನ ನಡೆಯುವ, ಈ ಕಾರ್ಯಕ್ರಮದಲ್ಲಿ ಹಲವಾರು ವಿದ್ವಾಂಸರು ಉಪನ್ಯಾಸಕರು ಅನುಭವಿಗಳು ಪಾಲ್ಗೊಂಡು ಗ್ರಾಮದ ಜನಸಾಮಾನ್ಯರೊಂದಿಗೆ ಚಿಂತನ ಮಂಥನ ನಡೆಸುತ್ತಿರುವುದು ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾಗಿದೆ. ಈ ವಚನ ಚಿಂತನಗೋಷ್ಠಿ ಎಷ್ಟೊಂದು ಜನಾಭಿಮುಖವಾಗಿದೆಯೆಂದರೆ ಕೆಲವೊಮ್ಮೆ ಇಲ್ಲಿ ನಾಟಿ ಔಷಧಿ ಕೊಡುವ ಜನಪದ ವೈದ್ಯರು ಬಂದು ತಮ್ಮ ಅನುಭವವನ್ನು ಗ್ರಾಮದ ಜನರಿಗೆ ತಿಳಿಸಿಕೊಟ್ಟಿದ್ದಾರೆ. ಹೀಗೆ ಪ್ರತಿಯೊಂದು ಹುಣ್ಣಿಮೆಯ ದಿನ ಇಲ್ಲಿ ಇಂಥ ವಿಶೇಷ ಅನುಭವಗಳ ಕೊಡುಕೊಳ್ಳುವಿಕೆ ನಡೆಯುತ್ತಿದೆ. ಹಾಗೂ ಶ್ರೀ ಶಿವಯೋಗೀಶ್ವರ ಶ್ರೀಗಳು ಗ್ರಾಮದಲ್ಲಿ ನಡೆಯುವ ಹಲವಾರು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಗ್ರಾಮದ ಜನರಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಜಾಗೃತಿಗೊಳಿಸುತ್ತಿದ್ದಾರೆ. ಅದರಲ್ಲೂ ಅವರು "ದುಶ್ಚಟಗಳ ಭಿಕ್ಷೆ ಸದ್ಗುಣಗಳ ದೀಕ್ಷೆ" ಎಂಬ ಘೋಷವಾಕ್ಯದೊಂದಿಗೆ ಸುಸಂಸ್ಕೃತ ಸಮಾಜ ನಿರ್ಮಾಣದಲ್ಲಿ ಶ್ರೀಗಳು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಶರಣರ ವಾಣಿಯಂತೆ ಗ್ರಾಮದ ಹಿರಿಯರನ್ನೊಳಗೊಂಡ ಜಗದ್ಗುರು ಅನ್ನದಾನೀಶ್ವರ ಸೇವಾ ಸಮಿತಿ ಎಂಬ ಟ್ರಸ್ಟ್ ಕಮಿಟಿ ರಚಿಸಿ ಆ ಮೂಲಕ ಮಠದ ಕಾರ್ಯಚಟುವಟಿಕೆಗಳನ್ನು ಮುನ್ನಡೆಸುತ್ತಿದ್ದಾರೆ. ಈಗ ೧೦೬೬೪೪೦೦ (ಒಂದು ಕೋಟಿ ಆರು ಲಕ್ಷ ಅರವತ್ನಾಲ್ಕು ಸಾವಿರದ ನಾಲ್ಕು ನೂರು) ರೂ. ವೆಚ್ಚದಲ್ಲಿ ಶ್ರೀಅನ್ನದಾನೀಶ್ವರ ಸಮುದಾಯ ಭವನ ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದು, ಅದರ ಕಟ್ಟಡಕಾರ್ಯ ಪ್ರಗತಿಯಲ್ಲಿದೆ ಹಾಗೂ ಇದು ಗ್ರಾಮದ ಪ್ರತಿಭೆಗಳಿಗೆ ಉತ್ತಮ ವೇದಿಕೆಯಾಗಲಿದೆ. ಹೀಗೆ ಸಮಾಜಮುಖಿ ಜೀವನಮುಖಿ ಚಿಂತನಗಳ ಮೂಲಕ ಸೊರಟೂರ ಶ್ರೀಮಠ ಸಾಂಸ್ಕೃತಿಕ ಕೇಂದ್ರವಾಗಿ ಮಿನುಗುತ್ತಿದೆ.

ಸೊರಟೂರ ಗ್ರಾಮದ ಕುರುಹುಗಳಿರುವ ಪ್ರದೇಶಗಳು

ಸೊರಟೂರ ಗ್ರಾಮ ಅಧ್ಯಯನ ಮಾಡುವಾಗ ಗ್ರಾಮದಲ್ಲಿ ಹಲವಾರು ವಿಶಿಷ್ಟ ಅಂಶಗಳು ಬೆಳಕಿಗೆ ಬರುತ್ತವೆ. ಅದರಲ್ಲೂ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಸೊರಟೂರ ಗ್ರಾಮದ ಗುರುತುಗಳು ಪಡಿಮೂಡಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ.

ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ

ಬೆಳಗಾವಿ ಜಿಲ್ಲೆಯಲ್ಲಿರುವ ಸವದತ್ತಿ ಯಲ್ಲಮ್ಮನ ಗುಡ್ಡಕ್ಕೆ ಹೋಗುವಾಗ ದೇವಸ್ಥಾನದ ಪ್ರವೇಶಪೂರ್ವದಲ್ಲಿ ಒಂದು ದೀಪಸ್ತಂಭವಿದೆ ಅದನ್ನು ಸೊರಟೂರ ದೇಸಾಯಿಯವರ ದೀಪಸ್ತಂಭವೆಂದೆ ಕರೆಯುತ್ತಾರೆ. ಏಕೆಂದರೆ ಅದನ್ನು ಸೊರಟೂರಿನ ರಾವಬಹದ್ದೂರ ದೇಸಾಯಿ

ಅವರು ನಿರ್ಮಿಸಿದ್ದಾರೆಂಬ ಪ್ರತೀತಿ ಇದೆ. ರಾವಬಹಾದ್ದೂರ ದೇಸಾಯಿಯವರ ಕುರಿತು ಗ್ರಾಮದ ಐತಿಹಾಸಿಕ ಪುರುಷರ ಅಧ್ಯಾಯದಲ್ಲಿ ಹಲವಾರು ವಿಷಯ ಕಂಡುಕೊಳ್ಳಲಾಗಿದೆ. ಈಗ ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿರುವ ಆ ದೀಪಸ್ತಂಭಕ್ಕೆ ಸವದತ್ತಿಗೆ ಹೋಗುವ ಗ್ರಾಮದ ಭಕ್ತರೆಲ್ಲ ದೀಪಹಚ್ಚಿ ಪೂಜೆ ಸಲ್ಲಿಸಿ ಬರುತ್ತಾರೆ.

ಡಂಬಳದಲ್ಲಿ ದೇಸಾಯಿಯವರ ಸರ್ಕಲ್

ಗದಗ ಜಿಲ್ಲೆ ಮುಂಡರಗಿ ತಾಲೂಕು ಡಂಬಳ ಎಂಬ ಗ್ರಾಮ ಐತಿಹಾಸಿಕ ಪರಂಪರೆಯ ಗ್ರಾಮ ಈ ಗ್ರಾಮದಲ್ಲಿ ದೇಸಾಯಿಯವರ ಹೆಸರಿನಲ್ಲಿ ಒಂದು ವೃತ್ತವಿದೆ ಇವರೆ ಸೊರಟೂರ ದೇಸಾಯಿಯವರು ಎಂದು ಹೇಳಲಾಗುತ್ತದೆ. ಆದರೆ ಡಂಬಳ ಗ್ರಾಮಸ್ಥರು ಹೇಳುವ ಪ್ರಕಾರ ದೇಸಾಯಿಯವರು ಮೊದಲು ಡಂಬಳದಲ್ಲಿದ್ದರು; ನಂತರ ಸೊರಟೂರಿಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಆದರೆ ದೇಸಾಯಿಯವರ ಕುರಿತು ಸೊರಟೂರಿನಲ್ಲಿರುವಷ್ಟು ವಿಪುಲ ಮಾಹಿತಿ ಡಂಬಳದಲ್ಲಿಲ್ಲ. ಈ ಕುರಿತು ಹನುಮಾಕ್ಷಿ ಗೋಗಿ, ಪಿ.ಕೆ. ರಾಠೋಡ್ ಅವರ ಡಂಬಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ವೆಂಕಟಾದ್ರಿ ದೇಸಾಯಿ ಎಂಬ ಪ್ರಸ್ತಾಪ ಬರುತ್ತದೆ. ಆದರೆ ಅದರಲ್ಲಿ ಡಂಬಳದ ವೆಂಕಟಾದ್ರಿ ದೇಸಾಯಿ ಎಂತಲೇ ಪ್ರಸ್ತಾಪಿಸಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲೊಂದು ಸೊರಟೂರ ಗ್ರಾಮ

ಒಂದೇ ಹೆಸರಿನಲ್ಲಿ ಹಲವಾರು ಗ್ರಾಮಗಳಿರುತ್ತವೇ ಆದರೆ ಸೊರಟೂರ ಹೆಸರಿನಲ್ಲಿ ಉತ್ತರಕರ್ನಾಟಕ ಭಾಗದಲ್ಲಿ ಯಾವ ಗ್ರಾಮಗಳು ಇರಲಿಲ್ಲ ಆದರೆ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕಿನಲ್ಲಿ ಸೊರಟೂರ ಎಂಬ ಮತ್ತೊಂದು ಗ್ರಾಮವಿದೆ. ಆದರೆ ಆ ಗ್ರಾಮದ ಕುರಿತು ಈವರೆಗೆ ಯಾವುದೇ ಮಾಹಿತಿ ಇರಲಿಲ್ಲ ೨೦೧೨ ಮಾರ್ಚ ೨೪ರಂದು ದಾವಣಗೆರೆ ಜಿಲ್ಲೆಯಲ್ಲಿರುವ ಸೊರಟೂರಿನ ಗ್ರಾಮದ ಸುಮಾರು ೨೦ ಜನರ ನಿಯೋಗ ನಮ್ಮ ಗದಗ ಜಿಲ್ಲೆಯ ಸೊರಟೂರಿಗೆ ಬಂದಿದ್ದರು. ಅವರೇ ಹೇಳುವಂತೆ ಆ ಗ್ರಾಮದ ಜನರ ಮೂಲ ಗದಗ ಜಿಲ್ಲೆಯ ಸೊರಟೂರ ಯಾವುದೇ ಕಾರಣಕ್ಕಾಗಿ ಅವರು ವಲಸೆ ಹೋಗಿದ್ದರಂತೆ ಅಲ್ಲಿ ಹೋಗಿದ್ದರೂ ಸಹ ಅವರು ಆ ಗ್ರಾಮಕ್ಕೆ ಸೊರಟೂರ ಗ್ರಾಮವೆಂದೇ ಹೇಳುತ್ತಾರೆ. ಸೊರಟೂರ ಗ್ರಾಮಸ್ಥರು ಹೇಳುವಂತೆ ನಮ್ಮದು ಹೊನ್ನು ಸೊರಟೂರ ಇಲ್ಲಿಂದ ವಲಸೆಹೋದ ಅವರು ಅವರ ಪ್ರದೇಶಕ್ಕೆ ಸೊರಟೂರ ಎಂದು ಹೆಸರಿಟ್ಟುಕೊಂಡಿರಬಹುದು ಎಂಬುದು ಗ್ರಾಮಸ್ಥರ ಅಭಿಪ್ರಾಯ.

ಟಿಪ್ಪಣಿಗಳು

೧. ಎಂಎಂ. ಕಲ್ಬುರ್ಗಿ, ಧಾರವಾಡ ಜಿಲ್ಲಾ ಶಾಸನಸೂಚಿ ಗದಗ ತಾಲೂಕಿನ ಕ್ರಮಸಂಖ್ಯೆ ೨೬ ಹಾಗೂ ಶಾಸನ ಸಂಖ್ಯೆ ೧೭೨ರಿಂದ ೧೮೫ರವರೆಗಿನ ಪುಟ ಸಂಖ್ಯೆ ೧೨ ಮತ್ತು ೧೪ ರಿಂದ ಆಯ್ದುಕೊಂಡು ಸೊರಟೂರ ಗ್ರಾಮದ ೧೪ ಶಾಸನಗಳ ಕನ್ನಡ ಸಾರವನ್ನು ಪರಿಚಯಿಸಲಾಗಿದೆ.

೨. ಸರಜೂ ಕಾಟ್ಕರ್, ೨೦೦೬, **ಶಿವಾಜಿ ಮೂಲ ಕನ್ನಡ ನೆಲ,** ಲೋಹಿಯಾ ಪ್ರಕಾಶನ, ಬಳ್ಳಾರಿ, ಪು. ೧೨೨.

೩. ಅದೇ. ಪು. ೧೩೪.

೪. ಅದೇ. ಪು. ೧೧೯-೧೨೬.

೫. ಅದೇ. ಪು. ೧೩೦-೧೩೪.

೬. ಅದೇ. ಪು. ೧೪೮-೧೫೦.

೭. ಮೃಡಗಿರಿಯ ಮಹಾದಾನಿ ಶ್ರೀ.ಮ.ನಿ.ಪ್ರ.ಜ. ೨೦೦೨, ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳು ಶ್ರೀ. ಜಗದ್ಗುರು ಅನ್ನದಾನೀಶ್ವರ ಧರ್ಮಸಂಸ್ಕೃತಿ ಪ್ರಚಾರ ಮಂಡಳ ಮುಂಡರಗಿ, ಪು. ೬, ೧೪.

೮. ಅದೇ. ಪು. ೨೦-೨೨.

೯. ಅದೇ. ಪು. ೯೮-೧೦೧.

೧೦. ಅದೇ. ಪು. ೧೦೮-೧೧೧.

□□

ಅಧ್ಯಾಯ : ನಾಲ್ಕು

ಸೊರಟೂರ ಗ್ರಾಮದ ದೈವಗಳು ಮತ್ತು ದೇವಾಲಯಗಳು

ಅಧ್ಯಾಯ : ನಾಲ್ಕು

ಸೊರಟೂರ ಗ್ರಾಮದ ದೈವಗಳು ಮತ್ತು ದೇವಾಲಯಗಳು

೪.೧. ಗ್ರಾಮದ ದೈವ-ದೇವಾಲಯಗಳು

ದೇವಾಲಯಗಳು ಭಿನ್ನ ನೆಲೆಗಳಿಂದ ಸಾಂಸ್ಕೃತಿಕ ಅಧ್ಯಯನಕ್ಕೆ ಅನುವು ಮಾಡಿಕೊಡುವ ಬಹು ಆಯಾಮವನ್ನುಳ್ಳ ಅನನ್ಯತೆಯ ಪ್ರತೀಕಗಳಾಗಿವೆ.

ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದ ದೇವಾಲಯಗಳ ಹಲವಾರು ಅಂಶಗಳನ್ನು ಗಮನಿಸಬಹುದಾಗಿದೆ. ಸೊರಟೂರ ಗ್ರಾಮದಲ್ಲಿ ಕ್ರಿ.ಶ. ೧೧ ರಿಂದ ೧೩ನೇ ಶತಮಾನದ ಕಾಲಾವಧಿಯಲ್ಲಿ ನಿರ್ಮಾಣವಾದ ಚಾಲುಕ್ಯ ಶೈಲಿಯ ೪ ದೇವಾಲಯಗಳ ಕುರಿತು ಚರಿತ್ರೆಯಲ್ಲಿ ಮಾಹಿತಿಗಳು ಲಭ್ಯವಾಗಿವೆ. ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ಗ್ರಾಮದಲ್ಲಿ ವೀರಭದ್ರ ಈಶ್ವರ, ನಾರಾಯಣ ಮೂರ್ತಿಗಳ ದೇವಾಲಯಗಳಿರುವುದು ತಿಳಿಯುತ್ತದೆ. ಆದರೆ ಈಗ ಗ್ರಾಮದಲ್ಲಿ ಕರ್ನಾಟಕ ದೇವಾಲಯ ಕೋಶದಲ್ಲಿ ನಮೂದಾಗದಿರುವ ಹಲವಾರು ಮೂರ್ತಿಗಳು ಮತ್ತು ದೇವಾಲಯಗಳು ಇವೆ. ಆದರೂ ಗ್ರಾಮದ ಜಾನಪದೀಯ ಹಿನ್ನೆಲೆ ಹೊಂದಿರುವ ಈ ದೈವಗಳು ೧೧-೧೨ನೇ ಶತಮಾನದ ಕಾಲಘಟ್ಟದಲ್ಲಿ ಆಚರಣೆಯಲ್ಲಿರಲಿಲ್ಲವೆ? ಇದ್ದರೂ ಸಹ ಅವುಗಳನ್ನು ಇತಿಹಾಸದಿಂದ ಹೊರಗಿಡಲಾಗಿತ್ತೇ? ಎಂಬ ಸಂದೇಹ ಬರುತ್ತದೆ. ಆ ಹಿನ್ನೆಲೆಯಲ್ಲಿ ಗ್ರಾಮದ ಚಾರಿತ್ರಿಕ ಮತ್ತು ಜಾನಪದೀಯ ಹಿನ್ನೆಲೆ ಹೊಂದಿರುವ ಗ್ರಾಮದ ಎಲ್ಲ ದೈವಗಳ ಮತ್ತು ದೇವಾಲಯಗಳ ಕುರಿತು ತಿಳಿಯುವುದು ಅಗತ್ಯವಾಗಿದೆ.

ವೀರಭದ್ರದೇವಾಲಯ

ಕ್ರಿ.ಶ. ೧೧-೧೨ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣ ಗೊಂಡಿರುವ ಈ ದೇವಾಲಯವು ಚೌಕಾಕಾರದ ಗರ್ಭಗೃಹ ಹೊಂದಿದೆ. ಅಂತರಿಕ ಹಾಗೂ ಎದುರು ಮಂಟಪಗಳು ಈ ದೇವಾಲಯದಲ್ಲಿವೆ. ಗರ್ಭಗೃಹದಲ್ಲಿ ವೀರಭದ್ರನ ಮೂರ್ತಿಶಿಲ್ಪವಿದೆ. ಈ ದೇವಾಲಯದ ಎದುರಿನಲ್ಲಿ ಇರುವ ಮಂಟಪದಲ್ಲಿ ನಂದಿ ವಿಗ್ರಹವಿದೆ.[೧] ಗುಡಿಯ ಎದುರುಗಡೆ ಕ್ರಿ.ಶ. ಎಂಟನೆಯ ಶತಮಾನದ ಶಾಸನವು(ಧಾರವಾಡ ಜಿಲ್ಲಾ ಶಾಸನಸೂಚಿ, ಪುಟ ೧೩, ಶಾಸನ ಸಂಖ್ಯೆ ೧೭೨, SII, XV, NO. ೪೪೯) ದೇಕರೆರಗ ಎಂಬುವವನನ್ನು ಕುರಿತು ಉಲ್ಲೇಖಿಸಿದೆ. ಇದು ಗ್ರಾಮದಲ್ಲಿರುವ ಅತ್ಯಂತ ಪ್ರಾಚೀನ ಶಾಸನವಾಗಿದೆ. ಗುಡಿಯಲ್ಲಿರುವ

ಕ್ರಿ.ಶ. ೮೬೯ರ ಅಮೋಘವರ್ಷನ ಇನ್ನೊಂದು ಶಾಸನವು ವಿಳಕ್ಕರ ನಾಗಿಯಮ್ಮ ಗಾವುಂಡನು ಸಿರಿವಾಗಿಲನ್ನು ನಿಲ್ಲಿಸಿದನೆಂದು ದಾಖಲಿಸಿದೆ. (ದಾ.ಜಿ.ಶಾ.ಸೂ. ಪುಟ-೧೩, ಶಾ.ಸಂ. ೧೭೪, E,I XIII PP. ೧೭೬-೧೭೭) ಗುಡಿಯ ಎದುರು ಇರುವ ಇದೇ ವಂಶದ ಎರಡನೆಯ ಕೃಷ್ಣನ ಕ್ರಿ.ಶ. ೮೮೩ ಶಾಸನವು (ದಾ.ಜಿ.ಶಾ.ಸೂ ಪುಟ ೧೩ ಶಾ.ಸ. ೧೭೫ SII, XI PP ೨೦೬-೨೦೮) ಇದು ಸೊರಟೂರ ಐವತ್ತು ಮಹಾಜನರ ಸನ್ನಿಧಿಯಲ್ಲಿ ಚಿದಣ್ಣನು ಗೋಸಹಸ್ರದಾನ ಮಾಡಿದನೆಂದು ದಾಖಲಿಸಿದೆ. ಅದರ ಸಮೀಪದಲ್ಲಿರುವ ಇನ್ನೊಂದು ಶಾಸನ (ದಾ.ಜಿ.ಶಾ.ಸೂ.ಪು. ೧೪. ಶಾ.ಸಂ. ೧೭೬, SII, XI P ೨೫೭) ೯೫೧ರ ಕಾಲದ ೩ನೇ ಕೃಷ್ಣನದ್ದಾಗಿದೆ. ಈ ಶಾಸನವು ದೇವರಿಗೆ ನೀಡಿದ ಹಲವು ದಾನಗಳನ್ನು ಪ್ರಸ್ತಾಸಿದೆ. ಹೀಗೆ ವೀರಭದ್ರ ದೇವಾಲಯವು ಗ್ರಾಮದ ಪ್ರಾಚೀನ ದೇವಾಲಯವಾಗಿದ್ದು ಅಲ್ಲಿರುವ ಶಾಸನಗಳ ಮೂಲಕ ಗ್ರಾಮದ ಚರಿತ್ರೆಯ ಆಕರ ವಸ್ತುವಾಗಿದೆ. ಪ್ರಸಕ್ತ ಸಂದರ್ಭದಲ್ಲಿ ವೀರಭದ್ರ ದೇವರು ಗ್ರಾಮದ ಆರಾಧ್ಯ ದೈವವಾಗಿದೆ. ಗ್ರಾಮದ ಪೂಜಾರಿಯವರ ಮನೆತನದವರು ಅರ್ಚಕರಾಗಿದ್ದಾರೆ. ವೀರಭದ್ರನು ಉಗ್ರ ಅವತಾರಿಯಾಗಿದ್ದು ಗುಗ್ಗಳ ಆಚರಣೆಯಲ್ಲಿ ಪುರವಂತಿಕೆ(ವೀರಗಾಸೆ)ಯು ವೀರಭದ್ರದೇವರ ಆಚರಣೆ ಸಂಪ್ರದಾಯವಾಗಿ ನಡೆಯುತ್ತದೆ. ಪ್ರತಿದಿನ ಮಂಗಳವಾರ ವಿಶೇಷ ಪೂಜೆ ಮಹಾನವಮಿಯಲ್ಲಿ ಘಟಸ್ಥಾಪನೆ ಬನ್ನಿ ಮುಡಿಯುವುದು, ಹೀಗೆ ವಿವಿಧ ವೀರಶೈವ ಸಂಪ್ರದಾಯದ ಆಚರಣೆಗಳು ದೇವಾಲಯದಲ್ಲಿ ನಡೆಯುತ್ತವೆ. ಈ ದೇವಾಲಯದ ಸಂರಕ್ಷಣೆಯು ರಾಷ್ಟ್ರೀಯ ಪುರಾತತ್ವ ಇಲಾಖೆಗೆ ಸಂಬಂಧಿಸಿದೆ ಎಂಬುದು ಕರ್ನಾಟಕ ದೇವಾಲಯ ಕೋಶ ಗದಗ ಜಿಲ್ಲೆ ಕೃತಿಯಿಂದ ತಿಳಿದು ಬರುತ್ತದೆ. ಹಾಗೆಯೇ ದೇವಾಲಯದ ಎದುರಿನಲ್ಲಿರುವ ಶಾಸನಗಳನ್ನು ಇನ್ನೂ ಹೆಚ್ಚು ವ್ಯವಸ್ಥಿತವಾಗಿ ಭೂಮಿಯಿಂದ ಸ್ವಲ್ಪ ಎತ್ತರದಲ್ಲಿ ನಿಲ್ಲಿಸಿ ಸಂರಕ್ಷಿಸುವ ಅಗತ್ಯವಿದೆ ಎಂಬುದು ಕ್ಷೇತ್ರ ಕಾರ್ಯದಿಂದ ತಿಳಿದುಬರುತ್ತದೆ. ಆ ಹಿನ್ನೆಲೆಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಗ್ರಾಮಸ್ಥರು ಗಮನಹರಿಸಬೇಕಾಗಿದೆ.

ಈಶ್ವರ ದೇವಸ್ಥಾನ (ಸೂರ್ಯನಾರಾಯಣ)

ಗ್ರಾಮದ ಗಾಂಧಿ ಬಯಲಿನ ನೈರುತ್ಯ ದಿಕ್ಕಿನಲ್ಲಿ ಪೂರ್ವಕ್ಕೆ ಮುಖ್ಯ ದ್ವಾರವಿರುವ ಈ ದೇವಸ್ಥಾನಕ್ಕೆ ಗ್ರಾಮಸ್ಥರು ಸೂರ್ಯನಾರಾಯಣ ಎಂದೇ ಗುರುತಿಸುತ್ತಾರೆ. ಈ ದೇವಾಲಯದಲ್ಲಿ ಈಶ್ವರನೇ ಪ್ರಮುಖ ಮೂರ್ತಿಯಾಗಿದ್ದರೂ ಗ್ರಾಮದಲ್ಲಿ ರಾಮೇಶ್ವರ, ಕಲ್ಲೇಶ್ವರ, ಮಲ್ಲೇಶ್ವರ ಹೀಗೆ ಹಲವಾರು ಈಶ್ವರ ದೇವಸ್ಥಾನವಿರುವುದರಿಂದ ಇದನ್ನು ಸೂರ್ಯನಾರಾಯಣ ಗುಡಿ ಎಂದು ಗುರುತಿಸುತ್ತಾರೆ.

೧೨-೧೩ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯದಲ್ಲಿ ಗರ್ಭಗೃಹ ಅಂತರಾಳ ಹಾಗೂ ನವರಂಗಗಳಿವೆ. ಗರ್ಭಗೃಹ ಚೌಕಾಕಾರವಾಗಿದ್ದು ಅದರಲ್ಲಿ ಶಿವಲಿಂಗವಿದೆ. ಅಲ್ಲದೆ ಪಶ್ಚಿಮ ಬಿತ್ತಿಯಲ್ಲಿ ಒಂದು ದೇವಕೋಷ್ಟಕವಿದೆ. ಮುಚ್ಚಿಗೆ ಸರಳವಾಗಿದೆ. ಇದರ ದ್ವಾರದಲ್ಲಿ ಐದು ಶಾಖೆಗಳಿವೆ. ಸ್ತಂಭಶಾಖೆಯೊಂದನ್ನು ಹೊರತುಪಡಿಸಿ ಉಳಿದ ಶಾಖೆಗಳು ಸರಳವಾಗಿವೆ. ಅಂತರಾಳ ಸರಳವಾಗಿದ್ದು ಅದರ ಶಾಖೆ ಮತ್ತು ಲಲಾಟಗಳು

ಸಹ ಸರಳವಾಗಿವೆ. ನವರಂಗದಲ್ಲಿ ನಾಲ್ಕು ಕಂಬಗಳು ಚೌಕ ವೃತ್ತ ಮತ್ತು ಗಂಟೆಯಾಕಾರದಲ್ಲಿವೆ. ಕಂಬಗಳ ಫಲಕಗಳು ವೃತ್ತಾಕಾರವಾಗಿದ್ದು ಅವುಗಳ ಬೋಧಿಗೆಗಳು ಚೌಕಾಕಾರವಾಗಿವೆ. ಮುಚ್ಚಿಗೆಯಲ್ಲಿ ಅರಳಿರುವ ತಾವರೆಯ ಅಲಂಕಾರವಿದೆ. ನವರಂಗದ ಉತ್ತರ ಮತ್ತು ದಕ್ಷಿಣ ಒಳಬಿತ್ತಿಯಲ್ಲಿ ದೇವಕೋಷ್ಠಗಳಿದ್ದು, ಅವುಗಳಲ್ಲಿ ಸೂರ್ಯನಾರಾಯಣ ಮತ್ತು ಗಣೇಶನ ಮೂರ್ತಿಗಳು ಇವೆ. ಸ್ಥಾನಿಕ ಸೂರ್ಯನಾರಾಯಣನು ಕಿರೀಟಧಾರಿಯಾಗಿದ್ದು, ಸಮಭಂಗದಲ್ಲಿ ತನ್ನೆರಡು ಕೈಗಳಲ್ಲಿ ಕಮಲದ ಮೊಗ್ಗುಗಳನ್ನು ಹಿಡಿದಿದ್ದಾನೆ. ಅಲಂಕೃತ ಸರ್ಪತೋರಣವಿದೆ. ಕಾಲಿನ ಭಾಗದಲ್ಲಿ ಉಷೆ ಮತ್ತು ಪ್ರತ್ಯುಷೆ ಶಿಲ್ಪಗಳಿವೆ. ದಕ್ಷಿಣದಲ್ಲಿರುವ ಗಣೇಶ ಮೂರ್ತಿಯು ನಾಟ್ಯಭಂಗಿಯಲ್ಲಿದ್ದು ಆಕರ್ಷಕವಾಗಿದೆ. ನವರಂಗದ ದ್ವಾರವು ಪುಷ್ಪವಜ್ರ, ಲತಾ ಸ್ತಂಭ, ಹೂ, ಬಳ್ಳಿಗಳ ಶಾಖೆಯ ಅಲಂಕರಣೆಯಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ.[೨]

ಈಗ ನಾರಾಯಣರಾವ್ ಕುಲಕರ್ಣಿ ಎಂಬುವರು ಪೂಜಾಕಾರ್ಯ ಮಾಡುತ್ತಿದ್ದಾರೆ. ಈ ದೇವಾಲಯಕ್ಕೆ ಯಾವುದೇ ಜಾನಪದೀಯ ಹಿನ್ನೆಲೆ ಇಲ್ಲ. ಆದರೆ ಪ್ರಾಚೀನ ದೇವಾಲಯಕ್ಕೆ ಇದು ಜೀವಂತ ಸಾಕ್ಷಿಯಾಗಿದೆ.

ನಾರಾಯಣ (ವೆಂಕಟೇಶ್ವರ) ದೇವಾಲಯ

ಗ್ರಾಮದ ಗಾಂಧಿ ಬಯಲಿನ ದಕ್ಷಿಣ ಭಾಗಕ್ಕೆ ಉತ್ತರಕ್ಕೆ ಮುಖಮಾಡಿರುವ ಈ ದೇವಾಲಯವನ್ನು ಗ್ರಾಮಸ್ಥರು ವೆಂಕಟೇಶ್ವರ ದೇವಸ್ಥಾನವೆಂದು ಗುರುತಿಸುತ್ತಾರೆ.

ದೇವಾಲಯವು ಚೌಕಾಕಾರದ ಗರ್ಭಗೃಹ ಮತ್ತು ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ನಾರಾಯಣನ ಮೂರ್ತಿ ಇದ್ದು, ಅದರ ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದೆ. ಇದರ ದ್ವಾರ ಮತ್ತು ಲಲಾಟಗಳು ಸರಳವಾಗಿವೆ. ಮುಖಮಂಟಪದಲ್ಲಿ ಎರಡು ಚೌಕ ಮತ್ತು ಗಂಟೆಯಾಕಾರದ ಕಂಬಗಳಿವೆ. ಅದರ ಮುಚ್ಚಿಗೆ ಸರಳವಾಗಿದೆ. ದೇವಾಲಯದ ಅಧಿಷ್ಠಾನ ಮತ್ತು ಬಿತ್ತಿಗಳೆರಡೂ ಸಹ ಸರಳವಾಗಿದೆ.[೩] ದೇವಾಲಯದ ಮೇಲಿನ ಗೋಪುರವನ್ನು ಇತ್ತೀಚೆಗೆ ನಿರ್ಮಿಸಿದ್ದಾರೆ. ದೇವಾಲಯದಲ್ಲಿ ಬ್ರಾಹ್ಮಣ ಪರಂಪರೆಯಲ್ಲಿ ಪೂಜೆ ಆರಾಧನೆಗಳು ನಡೆಯುತ್ತಿವೆ.

ಈಶ್ವರ (ರಾಮೇಶ್ವರ)ದೇವಾಲಯ

ಗ್ರಾಮದ ಹನುಮಂತ ದೇವರ ಗುಡಿಯ ಹತ್ತಿರ ಪೂರ್ವದಿಕ್ಕಿಗೆ ಪೂರ್ವಕ್ಕೆ ಮುಖಮಾಡಿರುವ ಈ ದೇವಾಲಯ ೧೨-೧೩ನೆಯ ಶತಮಾನದ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣವಾಗಿದೆ. ದೇವಾಲಯದಲ್ಲಿ ಗರ್ಭಗೃಹ ಅಂತರಾಳ ಮತ್ತು ನವರಂಗಗಳಿವೆ. ಗರ್ಭಗೃಹ ಚೌಕಾಕಾರವಾಗಿದ್ದು, ಅದರಲ್ಲಿ ಲಿಂಗವಿದೆ. ಮುಚ್ಚಿಗೆಯಲ್ಲಿ ಅರಳಿದ ಪದ್ಮವಿದ್ದು ದ್ವಾರವು ಐದು ಶಾಖೆಗಳಿಂದ ಕೂಡಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಉಬ್ಬುಶಿಲ್ಪವಿದೆ, ಅಂತರಾಳವು ಸರಳವಾಗಿದೆ. ಅದರ ದ್ವಾರವು ಮೂರು ಶಾಖೆಗಳಿಂದ ಕೂಡಿದ್ದು ಲಲಾಟವು ನಶಿಸಿ ಹೋಗಿದೆ. ದ್ವಾರದ ಎರಡು ಬದಿಗಳಲ್ಲಿ ಜಾಲಾಂಧ್ರವಿದೆ. ಅಂತರಾಳದ ಮುಂದಿನ ನವರಂಗ ಹಾಳಾಗಿದೆ. ಭಿತ್ತಿಯು ಸರಳವಾಗಿದೆ.[೪] ಈ ದೇವಾಲಯವನ್ನು ಗ್ರಾಮಸ್ಥರು ರಾಮೇಶ್ವರ ಎಂದು ಗುರುತಿಸುತ್ತಾರೆ.

ಕಲ್ಲೇಶ್ವರ ಮತ್ತು ಮಲ್ಲೇಶ್ವರ ಗುಡಿಗಳು

ಗ್ರಾಮದಲ್ಲಿ ಕಲ್ಮೇಶ್ವರ ಓಣಿ ಎಂದು ಕರೆಯಲ್ಪಡುವ ಗ್ರಾಮದ ಮಧ್ಯಭಾಗದಲ್ಲಿ ಈ ಜೋಡಿ ಗುಡಿ ಇವೆ. ಪೂರ್ವಕ್ಕೆ ಮುಖ ಮಾಡಿರುವ ಬಲಕ್ಕೆ ಕಲ್ಲೇಶ್ವರ ಮತ್ತು ಎಡಭಾಗಕ್ಕೆ ಮಲ್ಲೇಶ್ವರ ಗುಡಿ ಇದೆ.

ಕಲ್ಲೇಶ್ವರ ಗುಡಿ ಚಿಕ್ಕಗುಡಿಯಾಗಿದ್ದು ಎತ್ತರ ಮಟ್ಟದಲ್ಲಿದೆ. ಗರ್ಭಗುಡಿಯಲ್ಲಿ ಈಶ್ವರಮೂರ್ತಿ ಇದ್ದು ಗರ್ಭಗುಡಿಯ ನೈರುತ್ಯ ಭಾಗದಲ್ಲಿ ಗಣೇಶ ಮೂರ್ತಿ ಇದೆ. ಈಶ್ವರ ಮೂರ್ತಿಗೆ ಎದುರಾಗಿ ನಂದಿ ಇದೆ. ಗರ್ಭಗೃಹದ ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಕಲ್ಲೇಶ್ವರ ದೇವರ ಗುಡಿಯ ಎದುರಿನಲ್ಲಿ ಕಲ್ಯಾಣ ಚಾಲುಕ್ಯ ಅರಸ ಆರನೇ ವಿಕ್ರಮಾದಿತ್ಯನ ಕ್ರಿ.ಶ. ೧೦೯೧–೯೨ರ ಶಾಸನವು (ದಾ.ಜಿ.ಶಾ.ಸೂ, ಶಾಸನ ಸಂಖ್ಯೆ ೧೭೮, SII, XI Pt V No. ೧೩೭ ತೆಲ್ಲಿಗ ಜಕ್ಕಿಯಬ್ಬೆ ತಾನು ಕಟ್ಟಿಸಿದ ಸತ್ರಕ್ಕೆ ಭೂದಾನ ನೀಡಿದುದನ್ನು ಉಲ್ಲೇಖಿಸಿದೆ. ಇದೇ ಅರಸನ ಕಾಲದ ಇನ್ನೊಂದು ಶಾಸನವು (ಧಾ.ಜಿ.ಶಾ.ಸೂ.ಶಾಸನ ಸಂಖ್ಯೆ–೧೭೯, SII, XV, No. ೧೦) ವಿಷ್ಣು ವಿಗ್ರಹದ ಸ್ಥಾಪನೆಯ ಬಗ್ಗೆ ತಿಳಿಸುತ್ತದೆ.[೫] ಮಲ್ಲೇಶ್ವರ ಗುಡಿ ಚಿಕ್ಕ ಗುಡಿಯಾಗಿದ್ದು ಗರ್ಭಗುಡಿಯಲ್ಲಿ ಈಶ್ವರ (ಮಲ್ಲೇಶ್ವರ) ಮೂರ್ತಿ ಇದೆ. ಗರ್ಭಗೃಹದ ನೈರುತ್ಯಕ್ಕೆ ಗಣಪತಿ ಮೂರ್ತಿ ಇದೆ. ಲಲಾಟದಲ್ಲಿ ಲಕ್ಷ್ಮೀ ಇದೆ.

ಮಲ್ಲೇಶ್ವರ ಗುಡಿ ಕಂಬದಲ್ಲಿರುವ ಶಾಸನದ ತೇದಿಯು ಕ್ರಿ.ಶ. ೧೩೫೬ ದಾ.ಜಿ.ಶಾ.ಸೂ, ಶಾಸನ ಸಂಖ್ಯೆ ೧೮೪, SII, XV No. ೬೪೯) ಪ್ರಾಚೀನ ದೇವಾಲಯುವನ್ನು ಜೀರ್ಣೋದ್ದಾರಗೊಳಿಸಿ ಬಸವೇಶ್ವರ ವಿಗ್ರಹ ಸ್ಥಾಪಿಸಿದುದನ್ನು ಉಲ್ಲೇಖಿಸಿದೆ.[೬] ಈಗ ಗ್ರಾಮದಲ್ಲಿ ಕಲ್ಮೇಶ್ವರ ಯುವಕ ಮಂಡಳ ಹಾಗೂ ಕಲ್ಮೇಶ್ವರ ಭಜನಾ ಮಂಡಳಿಗಳಿದ್ದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳ ಮೂಲಕ ಮುನ್ನಡೆದಿವೆ.

ಹನುಮಂತ ದೇವರ ಗುಡಿ

ಗ್ರಾಮದ ರಾಮೇಶ್ವರ ದೇವಸ್ಥಾನದ ಪಶ್ಚಿಮಕ್ಕೆ ಇರುವ ಈ ಗುಡಿಯು ದಕ್ಷಿಣಕ್ಕೆ ಮುಖಮಾಡಿದೆ. ಗದಗ ಜಿಲ್ಲೆ ದೇವಾಲಯ ಕೋಶದಲ್ಲಿ ಈ ಗುಡಿಯು ೧೭ನೇ ಶತಮಾನದಲ್ಲಿ ನಿರ್ಮಾಣಗೊಂಡಿದೆ ಎಂದು ದಾಖಲಿಸಲಾಗಿದೆ.[೭] ಆದರೆ ಹನಮಂತ ದೇವರ ಗುಡಿಯು ಗ್ರಾಮದ ಉದಯದ ಕಾಲಕ್ಕೆ ಇದೆ. ಆದರೆ ಗುಡಿಯು ವಿವಿಧ ಕಾಲಘಟ್ಟದಲ್ಲಿ ವಿವಿಧ ಬಗೆಯಲ್ಲಿ ನಿರ್ಮಾಣಗೊಂಡಿರಬಹುದು ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ದೇವಾಲಯದ ಮುಂಭಾಗದಲ್ಲಿ ವೀರಗಲ್ಲು ಮತ್ತು ನಾಗರ ಮೂರ್ತಿಗಳಿವೆ. ಈಗ ದೇವಾಲಯದ ಕಟ್ಟಡವನ್ನು ಹೊಸದಾಗಿ ನಿರ್ಮಿಸಿ ಗೋಪುರ ಕಟ್ಟಲಾಗಿದೆ. ಹನುಮಪ್ಪನಿಗೆ ಪ್ರತಿದಿನ ಪೂಜೆ ನಡೆಯುತ್ತದೆ ಹಾಗೂ ಶನಿವಾರ ವಿಶೇಷ ಪೂಜೆ; ಭಕ್ತರ ಹರಕೆಗೆ ಅನುಗುಣವಾಗಿ ಕುಂಕುಮ ಪೂಜೆ, ಪಾಲಕಿ ಸೇವೆ ಇತ್ಯಾದಿಗಳು ನಡೆಯುತ್ತವೆ. ವರ್ಷಕ್ಕೊಮ್ಮೆ ಹನುಮಜಯಂತಿ ನಡೆಯುತ್ತದೆ. ಈಗ ಓಣಿಯಲ್ಲಿ ಮಾರುತಿ ಭಜನಾ ಸಂಘ, ಮಾರುತಿ ಯುವಕ ಮಂಡಳ, ಮಾರುತಿ

ಡ್ರಮ್ ಸೆಟ್ ಸಂಘ, ಹನುಮನ ಓಣಿ ಹೆಜ್ಜೆಮೇಳ ಹೀಗೆ ಸಾಂಸ್ಕೃತಿಕ ಸಂಘಟನೆಗಳ ಮೂಲಕ ಗ್ರಾಮದಲ್ಲಿ ಧಾರ್ಮಿಕ ಕಾರ್ಯಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ.

ಶ್ರೀ ಕಾಲಭೈರವ ದೇವಸ್ಥಾನ

ಗ್ರಾಮದ ಹೊರವಲಯದ ಉತ್ತರ ದಿಕ್ಕಿನ ಕಡೆಗೆ ಈಗಿನ ಬಾಲಕರ ಶಾಲೆಯ ಹತ್ತಿರ ಪೂರ್ವಕ್ಕೆ ಮುಖ್ಯ ದ್ವಾರ ಇರುವ ಶ್ರೀ ಕಾಲಭೈರವ ದೇವಸ್ಥಾನದ ನಿರ್ಮಾಣದ ನಿರ್ದಿಷ್ಟ ಕಾಲಮಾನ ಹಾಗೂ ನಿರ್ದಿಷ್ಟ ನಿರ್ಮಾಣಕಾರರ ಕುರಿತು ಯಾವುದೇ ಲಿಖಿತ ದಾಖಲೆಗಳು ಅಧ್ಯಯನದ ಸಮಯದಲ್ಲಿ ಸಿಕ್ಕಿರುವುದಿಲ್ಲ. ಆದರೆ ಗ್ರಾಮದ ಸಮಸ್ತ ಜನರ ಆರಾಧ್ಯ ದೈವವಾದ ಶ್ರೀ ಕಾಲಭೈರವನ ಕುರಿತು ಹಲವಾರು ದಂತಕಥೆಗಳಿವೆ.

ಗ್ರಾಮದ ವೈದ್ಯರ ಮನೆತನದ ಭಕ್ತರೊಬ್ಬರು ಕಾಶಿ ರಾಮೇಶ್ವರನಿಗೆ ಹೋಗಿದ್ದರು ರಾಮೇಶ್ವರನಿಗೆ ಸೊರಟೂರಿಗೆ ಬರುವಂತೆ ಬೇಡಿಕೊಂಡರಂತೆ. ರಾಮೇಶ್ವರನು ಅವರ ಭಕ್ತಿಗೆ ಮೆಚ್ಚಿ ತಾನೂ ಸೊರಟೂರ ಗ್ರಾಮಕ್ಕೆ ಭಕ್ತರ ಜೊತೆಯಲ್ಲಿ ಅವರ ಹಿಂದೆ ಬರುತ್ತಿದ್ದನಂತೆ. ಕಾಶಿಯಿಂದ ಬಂದ ಗ್ರಾಮದ ವೈದ್ಯರ ಮನೆಯ ಬ್ರಾಹ್ಮಣ ಭಕ್ತನು ಗ್ರಾಮದ ಹೊರವಲಯದ ಉತ್ತರ ದಿಕ್ಕಿನಲ್ಲಿ ಈಗ ಕಾಲಭೈರವ ದೇವಸ್ಥಾನವಿರುವ ಸ್ಥಳಕ್ಕೆ ಬಂದಾಗ ತಿರುಗಿ ನೋಡಿದನಂತೆ ಆ ತಕ್ಷಣವೇ ಕಾಶಿಯಿಂದ ಬಂದ ರಾಮೇಶ್ವರ ಕಲ್ಲಾದನಂತೆ ಅವನ ಆ ಉದ್ಭವಮೂರ್ತಿಯೇ ಈಗಿರುವ ಕಾಲಭೈರವ ಎಂಬ ಪ್ರತೀತಿ ಗ್ರಾಮಸ್ಥರಲ್ಲಿದೆ. ಕಾಶಿಯಿಂದ ಅವನು ನಡೆಯುತ್ತಾ ಕಾಲ್ನಡಿಗೆಯಲ್ಲಿ ಬಂದದ್ದರಿಂದ ಕಾಲಿನಿಂದ ನಡೆಯುತ್ತಾ ಬಂದ ಭೈರವ ಕಾಲಭೈರವ ಎಂಬ ನಂಬಿಕೆಯು ಜನಪದರಲ್ಲಿದೆ. ಈ ಕಾಲಭೈರವನಿಗೆ ಪ್ರತಿವರ್ಷ ಆಷಾಡ ಏಕಾದಶಿಯ ದಿನ ಅಭಿಷೇಕ ಮಾಡುವುದು ಪರಂಪರಾಗತವಾಗಿ ಬೆಳೆದು ಬಂದಿದೆ. ಅಭಿಷೇಕ ಮಾಡುವುದಕ್ಕೂ ಪವಾಡಗಳ ಹಿನ್ನೆಲೆ ಇರುವುದು ಕಂಡುಬರುತ್ತದೆ. ಕಾಲಭೈರವನಿಗೆ (ಮೂರ್ತಿಗೆ) ಒಂದು ಸಾರಿ ಕಣ್ಣಲ್ಲಿ ನೀರು ಬರುತ್ತಿತ್ತಂತೆ. ಭಕ್ತರು ಮಡಿಬಟ್ಟೆಯಿಂದ ಹಲವಾರು ಬಾರಿ ತೇವ ಸ್ವಚ್ಛಗೊಳಿಸಿದರೂ ಕಣ್ಣಲ್ಲಿ ನೀರು ಬರುವುದು ನಿಲ್ಲಲಿಲ್ಲ. ಆಗ ಬೆಳದಡಿ ಬ್ರಹ್ಮಾನಂದರು ಅದನ್ನು ಗಮನಿಸಿ ಪ್ರತಿವರ್ಷ ಆಷಾಢ ಏಕಾದಶಿಯ ದಿನ ಅಭಿಷೇಕ ಮಾಡುವುದಾಗಿ ಗ್ರಾಮಸ್ಥರೊಂದಿಗೆ ನಿರ್ಧರಿಸಿದಾಗ ಕಾಲಭೈರವನ ಕಣ್ಣಲ್ಲಿಯ ನೀರು ಬರುವುದು ನಿಂತಿತು ಎಂಬ ಪ್ರತೀತಿ ಇದೆ. ಹಾಗೂ ಆ ಸಮಯದಲ್ಲಿ ಗ್ರಾಮದಲ್ಲಿದ್ದ ಪ್ಲೇಗ್ ರೋಗವು ನಿವಾರಣೆಯಾಯಿತು ಎಂದು ಗ್ರಾಮಸ್ಥರಿಂದ ತಿಳಿಯುತ್ತದೆ. ಹಾಗೆಯೇ ಕಾಲಭೈರವನ ಅಭಿಷೇಕದ ಕುರಿತು ಇನ್ನೊಂದು ದಂತಕತೆ ಜನಪದರಲ್ಲಿದೆ. ಕಾಲಭೈರವ ಗ್ರಾಮದ ರಕ್ಷಣೆಯ ದೇವತೆ ಗ್ರಾಮಕ್ಕೆ ಯಾವ ತೊಂದರೆ ಆಪತ್ತುಗಳು ಬರದ ರೀತಿಯಲ್ಲಿ ರಕ್ಷಣೆ ಮಾಡುವುದಕ್ಕಾಗಿ ಗ್ರಾಮದ ಹೊರವಲಯದಲ್ಲಿದ್ದಾನೆ. ಹೀಗೆ ರಕ್ಷಣೆ ಮಾಡುತ್ತಿರುವಾಗ ದೇವತೆಗಳು ಬಂದು ಗ್ರಾಮದ ಮೇಲೆ ತಮ್ಮ ಉಗ್ರದೃಷ್ಟಿಯನ್ನು ಬಿಟ್ಟರಂತೆ. ಇದರಿಂದ ಗ್ರಾಮದಲ್ಲಿ ಹೆಣಗಳ ರಾಶಿಯೇ ಬೀಳಲು ಪ್ರಾರಂಭವಾಯಿತು. ಇದನ್ನು ಗಮನಿಸಿದ ಕಾಲಭೈರವ ತನ್ನ ಗ್ರಾಮದ

ರಕ್ಷಣೆಗಾಗಿ ದೇವತೆಗಳಿಗೆ ಉಗ್ರದೃಷ್ಟಿ ಬೀರದಂತೆ ಕೇಳಿದನಂತೆ ಅದಕ್ಕೆ ದೇವತೆಗಳು ಗ್ರಾಮದ ಜನರ ಮೇಲೆ ಬೀಳುವ ಉಗ್ರದೃಷ್ಟಿಯನ್ನು ಕಾಲಭೈರವನಿಗೆ ಬಿಡುವುದಾಗಿ ಹೇಳಿದರು ಗ್ರಾಮದ ರಕ್ಷಣೆಗಾಗಿಯೇ ಇರುವ ಕಾಲಭೈರವ ಅದನ್ನು ಒಪ್ಪಿಕೊಂಡಾಗ ಕಾಲಭೈರವನಿಗೆ ಉಗ್ರ ದೃಷ್ಟಿಯ ಪರಿಣಾಮದಿಂದ ಝುಳ (ಉರಿ) ವಿಷಾನಿಲಗಳು ಸುತ್ತುವರಿದವಂತೆ ಅದರ ಪರಿಹಾರಕ್ಕಾಗಿ ಕಾಲಭೈರವನಿಗೆ ಪ್ರತಿವರ್ಷ ಆಷಾಢ ಏಕಾದಶಿಯ ದಿನ ಅಭಿಷೇಕ ಮಾಡಲಾಗುತ್ತದೆ. ದೇವತೆಗಳು ಉಗ್ರದೃಷ್ಟಿ ಬೀರಿದ್ದರಿಂದ ಅಭಿಷೇಕದ ಸಮಯದಲ್ಲಿ ಹಾವು ಚೇಳುಗಳ ರೂಪದಲ್ಲಿ ಆ ಉಗ್ರದೃಷ್ಟಿ ಹರಿದು ಹೋಗುತ್ತದೆ ಎಂಬ ನಂಬಿಕೆ ಇದೆ. ಗ್ರಾಮದ ರಕ್ಷಣೆಗಾಗಿಯೇ ಇರುವ ಕಾಲಭೈರವ ಗ್ರಾಮಕ್ಕೆ ಬರುವ ಆಪತ್ತುಗಳನ್ನು ತಡೆಯಲು ತನ್ನ ಆಯುಧವಾಗಿ ಕವಣಿಯನ್ನು ಹೊಂದಿದ್ದಾನೆ. ಹಿಂದೆ ಪ್ರತಿವರ್ಷ ಅಭಿಷೇಕದ ದಿನ ಹೊಸ ಕವಣಿ[೮] ಮತ್ತು ಒಂದು ಬುಟ್ಟಿ ಕಲ್ಲನ್ನು ಭಕ್ತರು ಗುಡಿಯಲ್ಲಿ ಹಾಕಿದರೆ ಬರುವ ವರ್ಷದೊಳಗಾಗಿ ಕಲ್ಲು ಇರುತ್ತಿರಲಿಲ್ಲ ಹಾಗೂ ಕವಣಿ ಹರಿದಿರುತ್ತಿತ್ತಂತೆ. ಹೀಗೆ ಕಾಲಭೈರವ ದೇವರು ಸೊರಟೂರ ಗ್ರಾಮದ ರಕ್ಷಣೆಯ ದೇವರು ಎಂದು ಗ್ರಾಮಸ್ಥರು ಆರಾಧಿಸುತ್ತಾರೆ. ಸುಮಾರು ೮ ರಿಂದ ೯ ಅಡಿ ಎತ್ತರವಿರುವ ಕಾಲಭೈರವ ಮೂರ್ತಿಯನ್ನು ಗಮನಿಸಿದರೆ ಗ್ರಾಮದ ಪ್ರಾಚೀನ ಕಾಲದ ಮೂರ್ತಿ ಎಂಬ ಊಹೆ ಬರುತ್ತದೆ. ಆದರೆ ಗ್ರಾಮದಲ್ಲಿರುವ ಶಾಸನಗಳಲ್ಲಿ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ದೇವಾಲಯ ಕೋಶದಲ್ಲಿ ಕಾಲಭೈರವ ಮೂರ್ತಿಯ ಅಥವಾ ದೇವಸ್ಥಾನದ ಕುರಿತು ಯಾವ ಪುರಾವೆಗಳು ಸಿಗುತ್ತಿಲ್ಲ. ಹಾಗಾದರೆ ಕಾಲಭೈರವ ದೇವಸ್ಥಾನ ೧೫-೧೬ನೆಯ ಶತಮಾನದಿಂದ ಈಚೆಗೆ ದೇಸಾಯಿಯವರ ಕಾಲಮಾನದಲ್ಲಿ ನಿರ್ಮಾಣವಾಗಿರಬಹುದೇ ಎಂಬ ಊಹೆ ಮೂಡುತ್ತದೆ. ಅದಕ್ಕೆ ಪುರಾತತ್ವದ ಅಡಿಯಲ್ಲಿ ಸಂಶೋಧನೆ ಮಾಡುವ ಅಗತ್ಯವಿದೆ.

ಶ್ರೀ ದುರ್ಗಾದೇವಿ ದೇವಸ್ಥಾನ

ಗ್ರಾಮದ ಉತ್ತರ ದಿಕ್ಕಿನ ವೆಂಕಟಾಪುರ ರಸ್ತೆಯಲ್ಲಿರುವ ಪೂರ್ವಕ್ಕೆ ಮುಖ್ಯದ್ವಾರವಿರುವ ಶ್ರೀ ದುರ್ಗಾದೇವಿ ದೇವಸ್ಥಾನದ ಕುರಿತು ಗ್ರಾಮದ ಶಾಸನಗಳಲ್ಲಿ ಅಥವಾ ಲಿಖಿತ ಇತಿಹಾಸದಲ್ಲಿ ಈವರೆಗೆ ಯಾವುದೇ ದಾಖಲೆಗಳು ಕಂಡುಬರುವುದಿಲ್ಲ. ಆದರೆ ಶ್ರೀ ದುರ್ಗಾದೇವಿಯ ಪರಂಪರೆಯನ್ನು ಗ್ರಾಮದಲ್ಲಿ ಅವಲೋಕಿಸಿದಾಗ ದುರ್ಗಾದೇವಿಯ ದೇವಸ್ಥಾನ ಬಹುಪುರಾತನವಲ್ಲದಿದ್ದರೂ ದುರ್ಗಾದೇವಿಯ ಪರಂಪರೆ ಮಾತ್ರ ಗ್ರಾಮದಲ್ಲಿ ಆದಿಕಾಲದಿಂದಲೂ ಇರಬಹುದು. ಗ್ರಾಮದ ಸಮಸ್ತ ಜನರ ಆರಾಧನೆಯ ಗ್ರಾಮದೇವತೆಯಾಗಿ ದುರ್ಗಾದೇವಿ ಪರಂಪರೆ ಇಂದಿಗೂ ಮುಂದುವರೆದಿದೆ. ಹಾಗೂ ಹದಿನೈದನೆಯ ಶತಮಾನದಲ್ಲಿ ಸೊರಟೂರ ಗ್ರಾಮದಲ್ಲಿ ಭಯಂಕರ ಬರಗಾಲ ಬಿದ್ದಿತ್ತು. ಇದಕ್ಕೆ ಸೊರಟೂರ ಬರಗಾಲ ಅಥವಾ ದುರ್ಗಾದೇವಿಚಾ ದುಷ್ಕಾಳ.[೯] ಬರ ಎಂದು ಕರೆಯಲಾಗುತ್ತದೆ. ಇದೇ ಸಂದರ್ಭದಲ್ಲಿಯೇ ಶಿವಾಜಿಯ ಮೂಲಪುರುಷ ಬಳಿಯಪ್ಪ ಮಹಾರಾಷ್ಟ್ರಕ್ಕೆ ವಲಸೆ ಹೋದನು ಎಂಬುದನ್ನು ಈಗಾಗಲೇ ಗಮನಿಸಲಾಗಿದೆ. ಹಾಗಾದರೆ ಹದಿನೈದನೆಯ ಶತಮಾನದಲ್ಲಿಯ ಸೊರಟೂರಿನ

ದುರ್ಗಾದೇವಿ ಯಾರು? ಎಂಬ ಪ್ರಶ್ನೆ ಬರುತ್ತದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದ ದುರ್ಗಾದೇವಿಯ ಮೌಖಿಕ ಚರಿತ್ರೆ ಕುರಿತು ಗ್ರಾಮಸ್ಥರನ್ನು ಸಂದರ್ಶಿಸಿದಾಗ ಹಲವಾರು ಅಂಶಗಳು ಹೊರಬರುತ್ತವೆ.

ಕಪ್ಪತ್ತಗುಡ್ಡದ ಸರಹದ್ದಿನಲ್ಲಿರುವ ಸೊರಟೂರ ಗ್ರಾಮಕ್ಕೆ ಹುಲಿಯ ಕಾಟವಿತ್ತು ಎಂದು ಅದನ್ನು ಸಂಹರಿಸಲು ಗ್ರಾಮದ ದೇಸಾಯಿಯವರು ಸಾಹಸಿಗಳಿಗೆ ಕರೆಕೊಟ್ಟಾಗ ದುರ್ಗಾದೇವಿಯ ಆರಾಧಕಳಾದ ಮಾದಮ್ಮ ಎಂಬ ದೇವತಾ ಮಹಿಳೆಯು ಹುಲಿಯನ್ನು ಸಂಹರಿಸಿದಳು. ಆಗ ಗ್ರಾಮದ ದೇಸಾಯಿಯವರು ನೀನು ಏನು ಬೇಡುವೆ ಎಂದು ಕೇಳಿದರಂತೆ ಆಗ ಆ ದೇವತಾಶಕ್ತಿಯ ಮಹಿಳೆ ಹರಿಯದಂತಹ ಹಚ್ಚಡ ಕೊಡು ಮುರಿಯದಂತಹ ಉಂಗುರ ಕೊಡು ಎಂದಳಂತೆ. ಅದಕ್ಕಾಗಿ ದೇಸಾಯಿಯವರು ಜಮೀನು ಹಾಗೂ ಬೆಳ್ಳಿಯ ಉಂಗುರ ಕೊಟ್ಟರಂತೆ ಇನ್ನೊಂದು ಘಟನೆಯಲ್ಲಿ ಆ ಮಹಿಳೆಯನ್ನು ಹತ್ತಿರದ ಸಿಂಗಟರಾಯನಕೇರಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು. ಗಂಡನ ಮನೆಯವರು ಅವಳನ್ನು ಮನೆಯಲ್ಲಿ ಕೂಡಿಹಾಕಿ ಬಾಗಿಲ ಕಿಟಕಿ ಹಾಕಿ ಬೀಗ (ಕೀಲಿ) ಹಾಕಿದ್ದರು. ಆದರೆ ದೇವತಾಶಕ್ತಿಯಾದ ಮಹಿಳೆ ಹಾಕಿದ ಬೀಗ ಹಾಕಿದಂತೆ ಇತ್ತು. ಅವಳು ಸೊರಟೂರ ಗ್ರಾಮಕ್ಕೆ ಬಂದಿದ್ದಳಂತೆ, ಹೀಗೆ ಪವಾಡಪುರುಷಳಾದ ಆ ಮಹಿಳೆ ಉಂಡ ಊಟ ಕಂಡ ಕನಸು ಹೇಳುತ್ತಿದ್ದಳಂತೆ. ಹೀಗೆ ದುರ್ಗಾದೇವಿಯ ದೇವತಾಶಕ್ತಿಯಾಗಿ ಬೆಳೆದ ಮಾದಮ್ಮ ಎಂಬ ಪೂಜಾರಿ ಮಹಿಳೆ ದೇವತಾ ಪುರುಷಳಾಗಿ ಬೆಳೆದು ಗ್ರಾಮದಲ್ಲಿ ಭಕ್ತ ಸಮೂಹದ ಆರಾಧಕಳಾಗಿದ್ದಾಳೆ. ಅವಳು ತಾನು ದೇಹ ಬಿಡುವ ಸಂದರ್ಭದಲ್ಲಿ ನಾನು ನೆನೆದವರ ಮನದಲ್ಲಿ ಇರುತ್ತೇನೆ, ನಂಬಿದವರ ಮನೆಯಲ್ಲಿ ತುಂಬಿದ ಬೆಳದಿಂಗಳು ಆಗುತ್ತೇನೆ ಎಂದು ಹೇಳಿದ್ದಳಂತೆ. ಆ ಹಿನ್ನೆಲೆಯಲ್ಲಿ ಗ್ರಾಮದ ಭಕ್ತರು ದುರ್ಗಾದೇವಿಯ ಶಕ್ತಿಯಾದ ಮಾದಮ್ಮ ದೇವಿಯನ್ನು ದುರ್ಗಾದೇವಿಯ ಜೊತೆಗೆ ಪ್ರತಿಷ್ಠಾಪಿಸಿದ್ದಾರೆ. ಗರ್ಭಗುಡಿಯಲ್ಲಿ ಎಡಬಲಕ್ಕೆ ಮಾದಮ್ಮದೇವಿ ಮತ್ತು ದುರ್ಗಾದೇವಿ ಇದ್ದು ಮಧ್ಯದಲ್ಲಿ ಗಾಳೆಮ್ಮ ಮತ್ತು ಮರಿಯಮ್ಮನ ಮೂರ್ತಿಗಳಿವೆ.

ಮೂಲ ದುರ್ಗಾದೇವಿಯ ಮೂರ್ತಿಯನ್ನು ಈಗಿರುವ ದೇವಸ್ಥಾನದ ಹಿಂದುಗಡೆ ಇರುವ ದುರ್ಗಾದೇವಿಯ ಪೂಜಾರಿಗಳ ಮನೆಯಾದ ದೊಡ್ಡಮನಿಯಲ್ಲಿ ಮಾದಮ್ಮ ಎಂಬ ಮಹಿಳೆ ಪೂಜಿಸುತ್ತಿದ್ದಳು. ಕಾಲಕಳೆದಂತೆ ದೇವಿಯ ಅನುಗ್ರಹದಿಂದ ಭಕ್ತರು ದುರ್ಗಾದೇವಿಯ ದೇವಸ್ಥಾನ ನಿರ್ಮಿಸಿದ್ದಾರೆ ಎಂಬ ಪ್ರತೀತಿ ಇದೆ. ಆದರೆ ದೇವಸ್ಥಾನ ನಿರ್ಮಾಣದ ನಿರ್ದಿಷ್ಟ ಕಾಲಮಾನ ತಿಳಿಯುತ್ತಿಲ್ಲ. ದೇವಿಯ ಪರಂಪರೆ ಹಾಗೂ ದೇವಸ್ಥಾನವನ್ನು ಕುರಿತು ಕ್ಷೇತ್ರಕಾರ್ಯದ ಆಧಾರದಲ್ಲಿ ಹೇಳುವುದಾದರೆ ಗ್ರಾಮದ ಉದಯದಿಂದಲೇ ದೇವಿಯ ಆರಾಧನೆ ನಡೆಯುತ್ತಿದ್ದು ಈಗ ಸುಸಜ್ಜಿತವಾಗಿ ನಿರ್ಮಾಣಗೊಂಡಿರುವ ಈ ದೇವಸ್ಥಾನ ಸೊರಟೂರ ಗ್ರಾಮದ ದೇಸಾಯಿಯವರ ಕಾಲಮಾನವಾದ ೧೫-೧೬ನೆಯ ಶತಮಾನದಿಂದ ಈಚೆಗೆ ನಿರ್ಮಾಣವಾಗಿರ ಬಹುದೆಂದು ಊಹಿಸಬಹುದಾಗಿದೆ.

ದ್ಯಾಮವ್ವದೇವಿ ಗುಡಿ

ಗ್ರಾಮದ ವೀರಭದ್ರೇಶ್ವರ ದೇವಸ್ಥಾನದ ನೈರುತ್ಯ ದಿಕ್ಕಿನಲ್ಲಿ ಪೂರ್ವಕ್ಕೆ ಮುಖಮಾಡಿರುವ ಈ ಗುಡಿಯು ಕಟ್ಟಿಗೆ ಮತ್ತು ಕಲ್ಲುಮಣ್ಣುಗಳಿಂದ ನಿರ್ಮಾಣಗೊಂಡಿದೆ. ಸೊರಟೂರ ಗ್ರಾಮದ ಗ್ರಾಮದೇವತೆಗಳಾಗಿ ದ್ಯಾಮವ್ವದೇವಿ ಹಾಗೂ ದುರ್ಗಾದೇವಿ ಇಂದಿಗೂ ಪ್ರಚಲಿತದಲ್ಲಿದ್ದು ಪರಂಪರಾಗತವಾಗಿ ಆರಾಧಿಸಲ್ಪಡುತ್ತಿವೆ. ಆದರೆ ಚರಿತ್ರೆಯಲ್ಲಿ ಈ ದೇವತೆಗಳ ಅಥವಾ ಗುಡಿಗಳ ಪ್ರಸ್ತಾಪ ಬರುವುದಿಲ್ಲ. ಆದ್ದರಿಂದ ಇವು ಇತಿಹಾಸದಲ್ಲಿ ದಾಖಲೆಯಾಗಿಲ್ಲ. ಕ್ಷೇತ್ರ ಕಾರ್ಯದಿಂದ ಈ ದೇವಾಲಯಗಳ ಪರಂಪರೆ ಗಮನಿಸಿದರೆ ಗ್ರಾಮದ ಉದಯದಿಂದಲೇ ಈ ದೇವತೆಯ ಆರಾಧನೆ ಪರಂಪರೆ ಇದೆ. ಆದರೆ ಈ ದೇವತೆಗಳು ಜನಸಾಮಾನ್ಯರ ಆರಾಧನೆಯ ದೈವಗಳಾಗಿರುವುದರಿಂದ ಈ ದೈವಗಳು ಇತಿಹಾಸದಿಂದ ಹೊರಗೆ ಉಳಿದಿರಬಹುದು ಎಂದು ಊಹಿಸಬಹುದಾಗಿದೆ. ದ್ಯಾಮವ್ವದೇವಿಯ ಮೂರ್ತಿಯು ಕಟ್ಟಿಗೆಯದ್ದಾಗಿದ್ದು, ಸಿಂಹದ ಮೇಲೆ ಕುಳಿತು ಖಡ್ಗ ಹಿಡಿದಿರುವ ಭಂಗಿಯಲ್ಲಿದೆ. ದೇವಿಯ ಆರಾಧಕರು ಗ್ರಾಮದ ಬಡಿಗೇರ ಮನೆತನದವರಾಗಿದ್ದಾರೆ. ದೇವಿಯ ಜಾತ್ರೆ ೧೬ ವರ್ಷ ಅಥವಾ ಅದಕ್ಕಿಂತ ಹೆಚ್ಚು ವರ್ಷಗಳಿಗೊಮ್ಮೆ ನಡೆಯುತ್ತದೆ. ಅಂದರೆ ದೇವಿಗೆ ಬಣ್ಣ ಕೊಡಿಸಿದಾಗ ಮಾತ್ರ ಜಾತ್ರೆ ನಡೆಯುತ್ತದೆ. ಅಂದರೆ ದ್ಯಾಮವ್ವ ಬಣ್ಣಕ್ಕೆ ಹೋಗಿ ಬಂದ ನಿಮಿತ್ಯವೇ ಜಾತ್ರೆ ನಡೆಯುತ್ತದೆ. ದ್ಯಾಮವ್ವನಿಗೆ ಬಣ್ಣ ಮಾಡುವ ಕೊನೆಯ ಭಾಗವೇ ನಸಲು[೧೦] ಬರೆಯುವುದು ಅದರಿಂದ ದೇವಿಯ ಮೊದಲ ನೆದರು(ದೃಷ್ಟಿ) ಯಾರ ಮೇಲೆ ಬೀಳುತ್ತದೆಯೋ ಅವರಿಗೆ ಜೀವಕ್ಕೆ ಅಪಾಯವೆಂಬ ನಂಬಿಕೆ ಇದೆ. ಅದಕ್ಕಾಗಿ ನಸಲು ಬರೆಯುವಾಗ ಬಣಗಾರ ಕನ್ನಡಿ ಹಿಡಿದು ಬರೆಯುತ್ತಾನೆ. ಹಾಗೂ ಆಗ ದೇವಿಗೆ ಎದುರಾಗಿ ಒಂದು ಟಗರು ಕಟ್ಟಿರುತ್ತಾರೆ. ದೇವಿಯ ದೃಷ್ಟಿಗೆ ಜೀವಹಾನಿ ಸಂಭವಿಸಿದರೆ ಪ್ರಾಣಿಗಳ ಜೀವಹಾನಿಯಾಗುತ್ತದೆ. ಅದರಿಂದ ಮನುಷ್ಯ ತಪ್ಪಿಸಿಕೊಳ್ಳುವ ಉಪಾಯವನ್ನು ಇಲ್ಲಿ ಕಾಣಬಹುದು. ಹಾಗೆ ನೋಡಿದರೆ ಬಹುತೇಕ ಗ್ರಾಮಗಳಲ್ಲಿ ದ್ಯಾಮವ್ವದೇವಿ ಉಗ್ರರೂಪದ ಆಚರಣೆ ಹಾಗೂ ಪ್ರಾಣಿಬಲಿ ಕೊಡುವುದನ್ನು ಕಾಣುತ್ತೇವೆ. ಆದರೆ ಸೊರಟೂರ ಗ್ರಾಮದ ದ್ಯಾಮವ್ವದೇವಿ ಶಾಂತ ಸ್ವಭಾವ ಎಂದು ಹೇಳಬಹುದು. ದೇವಿ ಬಣ್ಣವಾದಾಗ ಗ್ರಾಮದ ಅತ್ತಿಕಟ್ಟಿ ದಾರಿಯಲ್ಲಿರುವ ದ್ಯಾಮವ್ವನ ಪಾದಗಟ್ಟಿಗೆ ಹೋಗುತ್ತಾಳೆ. ಅಲ್ಲಿ ಬೃಹತ್ ಅರಳಿಮರದ ಕೆಳಗೆ ದ್ಯಾಮವ್ವನ ಕಲ್ಲಿನ ಮೂರ್ತಿಗಳಿವೆ. ಅದೇ ದಾರಿಯಲ್ಲಿ ದ್ಯಾಮವ್ವನಿಗೆ ಕೋಣ ಬಲಿ ಕೊಡುತ್ತಿದ್ದರು ಎಂದು ಹೇಳುತ್ತಾರೆ. ಈಗಲೂ ಆ ಸ್ಥಳವನ್ನು ಕೋಣಕಲ್ಲು (ಕ್ವಾಣಗಲ್ಲು) ಎಂದು ಗುರುತಿಸಲಾಗುತ್ತದೆ. ಆದರೆ ಈಗ ಅದು ಆಚರಣೆಯಲ್ಲಿಲ್ಲ. ಹೀಗೆ ಸೊರಟೂರ ದ್ಯಾಮವ್ವದೇವಿ ಗ್ರಾಮದ ಆರಾಧ್ಯ ದೈವವಾಗಿದೆ. ಗ್ರಾಮದೇವತೆ ಭಜನಾ ಸಂಘವು ತನ್ನ ಸಾಂಸ್ಕೃತಿಕ ಕಾರ್ಯಚಟುವಟಿಕೆಯನ್ನು ನಿರಂತರ ಮುಂದುವರೆಸಿದೆ.

ಬಸವಣ್ಣದೇವರ ಗುಡಿ

ಗ್ರಾಮದ ಹನುಮಪ್ಪನ ಗುಡಿಯ ಉತ್ತರ ದಿಕ್ಕಿಗೆ ಇರುವ ಈ ಗುಡಿಯು ಉತ್ತರ ದಿಕ್ಕಿಗೆ ಮುಖದ್ವಾರ ಹೊಂದಿದೆ. ದೇವಾಲಯದ ಗರ್ಭಗುಡಿಯಲ್ಲಿ ನಂದಿಯ ವಿಗ್ರಹವಿದೆ. ಆದ್ದರಿಂದ

ಈ ಗುಡಿಗೆ ಬಸವ ಎಂದರೆ ನಂದಿ (ಎತ್ತು) ಎಂದು ಪರಿಗಣಿಸಿರುವ ಜನಪದರು ಇದನ್ನು ಬಸವಣ್ಣದೇವರ ಗುಡಿ ಎಂದೇ ಪರಂಪರೆಯಲ್ಲಿ ಉಳಿದುಬಂದಿದೆ. ದೇವಾಲಯದ ಕಟ್ಟಡವು ಕಲ್ಲು, ಮಣ್ಣು, ಕಟ್ಟಿಗೆಗಳಿಂದ ನಿರ್ಮಾಣಗೊಂಡಿದೆ. ಈ ದೇವಸ್ಥಾನದ ಕುರಿತು ಸೊರಟೂರ ಗ್ರಾಮಕ್ಕೆ ಸಂಬಂಧಿಸಿದ ಚರಿತ್ರೆಯಲ್ಲಿ ಶಾಸನಗಳಲ್ಲಿ ಯಾವ ದಾಖಲೆಗಳು ಸಿಗುವುದಿಲ್ಲ. ಆದರೆ ೧೪ನೇ ಶತಮಾನದ (ಕ್ರಿ.ಶ. ೧೩೫೬) ಗ್ರಾಮದ ಮಲ್ಲೇಶ್ವರ (ಕಲ್ಮೇಶ್ವರ ಗುಡಿಯ ಹತ್ತಿರ) ದೇವಾಲಯದ ಬಳಿಯಲ್ಲಿರುವ ಶಾಸನದಲ್ಲಿ ಹಂದಿಗನೂರಿನ ಸೀದೆನಾಯಕನ ಮಂತ್ರಿಯಾದ ಗಬ್ಬೀನಾಯಕನು ಹಾಳಾದಂತಹ ದೇವಾಲಯವನ್ನು ದುರಸ್ಥಿಗೊಳಿಸಿ ಬಸವೇಶ್ವರ ಮೂರ್ತಿಯನ್ನು ಅಲ್ಲಿ ಪ್ರತಿಷ್ಠಾಪಿಸಿದನು ಎಂದು ತಿಳಿಯುತ್ತದೆ. ಆದರೆ ಅಲ್ಲಿರುವುದು ಮಲ್ಲೇಶ್ವರ ಮತ್ತು ಕಲ್ಮೇಶ್ವರ ಎಂಬ ಈಶ್ವರ ಮೂರ್ತಿ ಹಾಗೂ ನಂದಿ ವಿಗ್ರಹಗಳಿವೆ. ಹಾಗೆ ನೋಡಿದರೆ ಬಸವೇಶ್ವರ ಗುಡಿ ಪ್ರತ್ಯೇಕವಾಗಿದೆ. ಇಲ್ಲಿಯೂ ನಂದಿ ವಿಗ್ರಹವಿದೆ. ಇದೇ ಗುಡಿಗೆ ಎದುರಾಗಿ ಕನ್ನೂರ ಬಸವಣ್ಣ ಎಂಬ ನಂದಿ ವಿಗ್ರಹದ ಗುಡಿಯಿದೆ. ಹಾಗೆಯೇ ಕಲ್ಮೇಶ್ವರ ಗುಡಿಯ ಪೂರ್ವಕ್ಕೆ ಒಂದು ನಂದಿ ವಿಗ್ರಹವಿದ್ದು ಅದಕ್ಕೆ ಕುರವತ್ತಿ ಬಸವಣ್ಣ ಎಂದು ಕರೆಯಲಾಗುತ್ತಿದೆ. ಹೀಗೆ ಕನ್ನೂರ ಬಸವಣ್ಣ ಮತ್ತು ಕುರವತ್ತಿ ಬಸವಣ್ಣ ಮೂರ್ತಿಗಳು ಜನಪದರ ಆಚರಣೆಯಲ್ಲಿವೆ. ಆದರೂ ಬಸವಣ್ಣದೇವರ ಪರಂಪರೆ ಇಂದು ಗ್ರಾಮದಲ್ಲಿ ಸಾಂಸ್ಕೃತಿಕ ಕೇಂದ್ರವಾಗಿ ಮುನ್ನಡೆದಿದೆ. ಈ ದೇವಾಲಯದ ಕಾಲಮಾನ ಕುರಿತು ವಿಚಾರಿಸಿದಾಗ ಇದು ಸಹ ಗ್ರಾಮದ ಪ್ರಾಚೀನ ದೇವಾಲಯ ಎಂದು ಹೇಳುತ್ತಾರೆ. ಆದರೆ ಸುಮಾರು ೨೦೦ ವರ್ಷಗಳಿಂದ ಬಸವೇಶ್ವರ ಜಾತ್ರೆ ನಡೆಯುತ್ತದೆ. ಇದು ನಂದಿವೇರಿ ಮಠದ ಶಾಖಾಮಠವಾಗಿರುವುದರಿಂದ ನಂದಿವೇರಿಮಠದ ಪೂಜ್ಯಶ್ರೀಗಳೇ ಈ ಜಾತ್ರೆಯ ರಥೋತ್ಸವ ಕಡುಬಿನ ಕಾಳಗ ಹಾಗೂ ಧರ್ಮ ಸಭೆಗಳು ಅವರ ಸಾನಿಧ್ಯದಲ್ಲಿ ನಡೆಯುತ್ತವೆ. ಜಗದ್ಗುರು ಬಸವಣ್ಣನವರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವ ಈ ಗುಡಿಯ ಭಕ್ತರು ಪ್ರತಿ ಸೋಮವಾರ ಶಿವಾನುಭವ ಗೋಷ್ಠಿ ಎಂಬ ಆಧ್ಯಾತ್ಮಿಕ ವೇದಿಕೆಯಿಂದ ಜನರಲ್ಲಿ ಧಾರ್ಮಿಕ ಜಾಗೃತಿಯನ್ನು ಮೂಡಿಸುತ್ತಿದ್ದಾರೆ. ಅದು ಈಗ ೧೭೦೦ ಶಿವಾನುಭವ ಗೋಷ್ಠಿಯನ್ನು ಪೂರೈಸಿದೆ. ಇಲ್ಲಿ ಬಸವೇಶ್ವರ ಭಜನಾ ಸಂಘ ಬಸವೇಶ್ವರ ಯುವಕ ಮಂಡಳಗಳಿದ್ದು, ವಿವಿಧ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳು ಅಲ್ಲಿ ನಿರಂತರ ನಡೆಯುತ್ತಿವೆ.

ಬೀರೇಶ್ವರ ಗುಡಿ

ಗ್ರಾಮದ ಶ್ರೀ ದುರ್ಗಾದೇವಿ ದೇವಸ್ಥಾನದ ನೈರುತ್ಯ ದಿಕ್ಕಿನಲ್ಲಿರುವ ಈ ಗುಡಿಯು ಪೂರ್ವಕ್ಕೆ ಮುಖದ್ವಾರ ಹೊಂದಿದೆ. ಗುಡಿಯಲ್ಲಿ ಕರಿಸಿದ್ದೇಶ್ವರ ಮತ್ತು ಬೀರೇಶ್ವರ ಮೂರ್ತಿಗಳಿವೆ. ಈ ದೇವಾಲಯದ ಪ್ರಾಚೀನತೆಯ ಕುರಿತು ಲಿಖಿತ ಪುರಾವೆಗಳು ಸಿಗುವುದಿಲ್ಲ. ಆದರೆ ದುರ್ಗಾದೇವಿ ಮತ್ತು ಕರಿಸಿದ್ದೇಶ್ವರ (ಕರಿಯಪ್ಪ) ಅಣ್ಣ-ತಂಗಿಯರು ಎಂಬ ನಂಬಿಕೆ ಕರಿಸಿದ್ದೇಶ್ವರ ಆರಾಧನೆಯ ಭಕ್ತರಲ್ಲಿದೆ. ಗ್ರಾಮದ ಹಾಲುಮತ ಬಾಂಧವರು ಈ ದೇವರ ಅರ್ಚಕರು ಮತ್ತು ಆರಾಧಕರಾಗಿದ್ದಾರೆ. ಆ ಹಿನ್ನೆಲೆಯಲ್ಲಿ ನೋಡಿದಾಗ ಪ್ರತಿಯೊಂದು ಗ್ರಾಮದಲ್ಲಿ ಗ್ರಾಮದ

ಸಾರ್ವತ್ರಿಕ ಗ್ರಾಮದೈವಗಳಲ್ಲದೆ ಆಯಾ ಸಮುದಾಯದ ದೈವಗಳು ಕಂಡುಬರುವುದು. ಸಾಮಾನ್ಯವಾಗಿದೆ. ಹಾಗೆಯೇ ಹಾಲುಮತದವರು ತಮ್ಮ ಆರಾಧನೆಯ ದೈವವಾಗಿ ಕರಿಸಿದ್ದೇಶ್ವರ ಮತ್ತು ಬೀರೇಶ್ವರ ದೇವರುಗಳನ್ನು ಹಾಗೂ ದೇವಾಲಯವನ್ನು ನಿರ್ಮಿಸಿಕೊಂಡಿರಬಹುದೆಂದು ಊಹಿಸಬಹುದಾಗಿದೆ. ಈ ದೇವರು ಯುಗಾದಿಯಲ್ಲಿ ವರವಿ ಕ್ಷೇತ್ರಕ್ಕೆ ಹೋಗಿ ಬರುವುದು. ವಿಜಯದಶಮಿಯ ದಿನ ಬನ್ನಿ ಮುಡಿಯಲು ಹೋಗುವುದು ವಾರ್ಷಿಕ ಆಚರಣೆಗಳಾಗಿವೆ. ಹಾಗೂ ಪ್ರತಿವರ್ಷ ಕಪ್ಪತ್ತಗುಡ್ಡಕ್ಕೆ ಹೋಗುವ ಆಚರಣೆ ಇತ್ತು ಈಗ ಅದನ್ನು ಕೈಬಿಡಲಾಗಿದೆ. ಅದಕ್ಕೆ ಆಧುನಿಕತೆಯ ಪ್ರಭಾವ ಸಮಯದ ಅಭಾವ, ಆಚರಣೆಗಳಲ್ಲಿಯ ಸರಳತೆ ಎಂದು ಹೇಳಬಹುದು. ನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ಪೂಜೆ ರವಿವಾರ ಭಕ್ತರ ಹರಕೆಗನುಗುಣವಾಗಿ ಪಾಲಕಿ ಸೇವೆ, ಸೇರಿದಂತೆ ವಿವಿಧ ಆಚರಣೆಗಳು ನಡೆಯುತ್ತವೆ. ಗುಡಿಯಲ್ಲಿ ಬೀರೇಶ್ವರ ಡೊಳ್ಳಿನ ಮೇಳ ಹಾಗೂ ಬೀರೇಶ್ವರ ಭಜನಾ ಮೇಳಗಳಿದ್ದು, ಡೊಳ್ಳುವಾದನ, ಡೊಳ್ಳಿನ ಹಾಡು ಹಾಗೂ ವಿಶಿಷ್ಟ ಜನಪದ ಕಲೆಯಾದ ಜನಪದ ರ್‍ವಾಣಗಳ ಕಲಾ ಪರಂಪರೆಯನ್ನು ಇಲ್ಲಿ ಉಳಿಸಿಕೊಂಡು ಬರಲಾಗಿದೆ.

ಶ್ರೀ ಜಗದ್ಗುರು ಅನ್ನದಾನೇಶ್ವರ ಮಠ

ಗ್ರಾಮದ ಶ್ರೀ ಕಾಲಭೈರವ ದೇವಸ್ಥಾನದ ಉತ್ತರ ಭಾಗಕ್ಕೆ ಪೂರ್ವಕ್ಕೆ ಮುಖದ್ವಾರ ಹೊಂದಿರುವ ಈ ಮಠವು ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೇಶ್ವರ ಸಂಸ್ಥಾನಮಠದ ಶಾಖಾಮಠವಾಗಿದೆ. ಶ್ರೀಮಠದ ಎಂಟನೆಯ ಪೀಠಾಧಿಪತಿಗಳಾದ (ಕಾಲ ೧೮೬೫-೧೯೭೬) ಶ್ರೀಮನ್ನಿರಂಜನ ಪ್ರಣವ ಸ್ವರೂಪ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳ ಗದ್ದುಗೆಯೇ ಈ ಮಠದ ಆರಾಧ್ಯದೈವವಾಗಿದೆ. ಮುಂಡರಗಿ ಶ್ರೀಗಳ ಆಶೀರ್ವಾದ ಹಾಗೂ ಭಕ್ತರ ಸಹಕಾರದೊಂದಿಗೆ ಮಠವನ್ನು ನಿರ್ಮಾಣಗೊಳಿಸಿದೆ. ಗರ್ಭಗುಡಿ ಪುರಾಣ ಮಂಟಪ ಹಾಗೂ ಎಡಬಲದಲ್ಲಿ ಕೋಣೆಗಳನ್ನು ನಿರ್ಮಿಸಲಾಗಿದ್ದು ನಿತ್ಯ ಧಾರ್ಮಿಕ ಆಧ್ಯಾತ್ಮಿಕ ಕಾರ್ಯ ನಡೆಯಲು ಸುಸಜ್ಜಿತವಾಗಿದೆ. ಆದರೆ ಇಲ್ಲಿ ವಾರ್ಷಿಕಾವರ್ತನದ ಆಚರಣೆಯಾಗಿ ಪ್ರತಿವರ್ಷ ಶಿವರಾತ್ರಿ ಪಾಡ್ಯದಿಂದ ಒಂದು ತಿಂಗಳ ಶರಣಬಸವೇಶ್ವರ ಪುರಾಣ ಪ್ರವಚನ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ನಡೆಯುತ್ತವೆ. ಈಗ ಪೂಜ್ಯಶ್ರೀ ಶಿವಯೋಗಿಶ್ವರ ಶ್ರೀಗಳು ಪೀಠಾಧಿಕಾರಿಗಳಾದ ನಂತರ ಶ್ರೀಮಠದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿವೆ.

ಶ್ರೀ ಹಳಿಕೆಮ್ಮದೇವಿ ಗುಡಿ

ಸೊರಟೂರಿನ ಕ್ವಾಟೆಯ (ಹಳೆಯ ಗ್ರಾಮ) ವಾಯುವ್ಯ ದಿಕ್ಕಿನಲ್ಲಿರುವ ಈ ಗುಡಿಯು ಪೂರ್ವಕ್ಕೆ ಮುಖದ್ವಾರ ಹೊಂದಿದೆ. ಈ ದೇವಾಲಯದ ಕಂಬಗಳು ಪ್ರಾಚೀನ ದೇವಾಲಯದ ಕಂಬಗಳಾಗಿದ್ದು, ಮೇಲ್ಛಾವಣಿ ಇತ್ತೀಚಿನ ಕಾಲದ್ದಾಗಿದೆ. ಈ ಗುಡಿಯನ್ನು ಸೊರಟೂರ ದೇಸಾಯಿಯವರ ಕಾಲಮಾನದಲ್ಲಿ ಅಂದರೆ ೧೬ನೆಯ ಶತಮಾನದಿಂದ ಈಚೆಗೆ ನಿರ್ಮಿಸಿರ ಬಹುದೆಂದು ಗ್ರಾಮಸ್ಥರು ಅಭಿಪ್ರಾಯಪಡುತ್ತಾರೆ. ದೇವಾಲಯದಲ್ಲಿ ಹಳಿಕೆಮ್ಮ ಮತ್ತು ಯಲ್ಲಮ್ಮ

ಮೂರ್ತಿಗಳಿದ್ದು ಗರ್ಭಗುಡಿಯಲ್ಲಿ ಉಗ್ರ ನರಸಿಂಹನಿರುವುದು ಈ ದೇವಾಲಯದ ವಿಶೇಷವಾಗಿದೆ. ಹಳಿಕೆಮ್ಮದೇವಿಯ ಕುರಿತು ಒಂದು ದಂತಕತೆ ಇದೆ. ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಇರುವ ತುಪ್ಪದಳ್ಳದಲ್ಲಿ" ಹಳಿಕೆಮ್ಮ ನೆಲೆಸಿದ್ದಳು. ಅವಳು ಗ್ರಾಮದ ಕುಡುವಕ್ಕಲಿಗೆರ ಹಾಗೂ ಮೇಟಿಯವರ ಮನೆತನದ ಹಿರಿಯರ ಕನಸಿನಲ್ಲಿ ಬಂದು ತಾನು ಸೊರಟೂರಿಗೆ ಬರುವುದಾಗಿ ಹೇಳಿದಳು. ನೀನು ಹೇಗೆ ಬರುವೆ ಎಂದು ಕೇಳಿದಾಗ ತುಂಬಿದ ಕೊಡದಲ್ಲಿ ಬರುವೆ ಎಂದಳಂತೆ. ಆಗ ಅವರು ತುಂಬಿದ ಕೊಡದಲ್ಲಿ ಹಳಿಕೆಮ್ಮನನ್ನು ಸೊರಟೂರಿಗೆ ಕರೆದುಕೊಂಡು ಬಂದರು. ಬರುವಾಗ ತುಂಬಿದ ಕೊಡ ಹೊತ್ತ ಪೂಜಾರಿ ಮಾರ್ಗ ಮಧ್ಯದ ಎಲ್ಲ ಬನ್ನಿಗಿಡಗಳಿಗೆ ನೀರು ಹಾಕುವನು. ಆದರೆ ಊರಿಗೆ ಬಂದಾಗ ತುಂಬಿದ ಕೊಡ ತುಂಬಿದಂತೆ ಇರುತ್ತದೆಯಂತೆ. ಇದು ಇಂದಿಗೂ ಪ್ರತಿವರ್ಷ ಆಷಾಢ ಏಕಾದಶಿಯ ಕಾಲಭೈರವ ಅಭಿಷೇಕದ ನಂತರ ಬರುವ ಮಂಗಳವಾರ ಅಥವಾ ಶುಕ್ರವಾರ ನಡೆಯುತ್ತದೆ. ಈ ಹಿಂದೆ ಈ ಗುಡಿಯಲ್ಲಿ ಬಿಕ್ಷುಕರು ಜೋಗ್ಯಾರು ಬಂದು ವಾಸಿಸುತ್ತಿದ್ದರು. ಹಾಗೂ ಕುಡುಕ ಜನರ ತಾಣ ಇದಾಗಿತ್ತು. ಆದರೆ ಈಗ ಶ್ರೀ ವ್ಹಿ.ಜಿ. ಮಠಪತಿ ಗುರುಗಳ ಮಾರ್ಗದರ್ಶನದಲ್ಲಿ ಯಲ್ಲಪ್ಪ ಅಡ್ನೂರ ಹಾಗೂ ಶಿವಪುತ್ರಪ್ಪ ಹಂಪಿಹೊಳಿ ಹಳಿಕೆಮ್ಮದೇವಿ ರಾತ್ರಿ ಶಾಲೆ ನಡೆಸುತ್ತಿದ್ದಾರೆ. ಇದಕ್ಕೆ ಗದುಗಿನ ತೋಂಟದಾರ್ಯ ಶ್ರೀಗಳ ಆಶೀರ್ವಾದವು ಇದೆ. ಇಲ್ಲಿ ವಾಲ್ಮೀಕಿ ಸಮಾಜ ಹಾಗೂ ವಾಲ್ಮೀಕಿ ಯುವಕ ಮಂಡಳಗಳ ಆಶ್ರಯದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

ಶ್ರೀ ಗುರುಮಲ್ಲಜ್ಜನ ದೇವಸ್ಥಾನ

ಸೊರಟೂರ ಗ್ರಾಮದ ಈಗಿನ ಬಸ್ ನಿಲ್ದಾಣದ ಹತ್ತಿರ ಉತ್ತರಕ್ಕೆ ಮುಖ್ಯದ್ವಾರ ಹೊಂದಿರುವ ಈ ದೇವಸ್ಥಾನ ೧೯೬೦ರಲ್ಲಿ ನಿರ್ಮಾಣವಾಗಿದೆ. "ನೀ ನಿಂತ ನೆಲವೇ ಪುಣ್ಯ ಕ್ಷೇತ್ರ" ಎನ್ನುವ ವಾಣಿಯಂತೆ ಮಹಾಮಹಿಮ ಪವಾಡ ಪುರುಷ ಶ್ರೀ ಗುರುಮಲ್ಲಜ್ಜನವರು ನಿಂತ ನೆಲವೇ ಇಂದಿನ ಶ್ರೀ ಗುರುಮಲ್ಲಜ್ಜನ ದೇವಸ್ಥಾನವಾಗಿದೆ. ಮೂಲತಃ ಗದಗ ಜಿಲ್ಲೆಯ ಸಂಬಾಪೂರದ ಶ್ರೀ ದುರ್ಗಾದೇವಿಯ ಆರಾಧಕ (ಪೂಜಾರಿಗಳು) ಆದ ಮಲ್ಲಜ್ಜನವರು ಒಂಟಿಗಾಲಿನಿಂದ ೪ ಗಂಟೆ ಬತ್ತಲೆಯಾಗಿ ಪೂಜೆ ಮಾಡುತ್ತಿದ್ದರು. ದೇವತಾಶಕ್ತಿಯ ಪ್ರತೀಕವಾದ ಇವರು ಆಡಿದ ಮಾತು ಹುಸಿ ಆಗುತ್ತಿರಲಿಲ್ಲ. ಪವಾಡಪುರುಷರಾದ ಶ್ರೀಗುರು ಮಲ್ಲಜ್ಜನವರಲ್ಲಿ ಅಸಂಖ್ಯಾತ ಭಕ್ತರು ಸಂಬಾಪುರಕ್ಕೆ ಹೋಗುತ್ತಿದ್ದರು. ಆ ಹಿನ್ನೆಲೆಯಲ್ಲಿ ಸೊರಟೂರ ಭಕ್ತರ ಭಕ್ತಿಗೆ ಮೆಚ್ಚಿ ಅವರು ಸೊರಟೂರಿಗೆ ಬರುತ್ತಿದರು. ಆ ಸಂದರ್ಭದಲ್ಲಿ ಶ್ರೀಗುರುಮಲ್ಲಜ್ಜನವರ ಅಪೇಕ್ಷೆಯಂತೆ ಹನುಮಂತಾಚಾರ್ಯ ಸೊರಟೂರ ಅವರು ದೇವಸ್ಥಾನ ನಿರ್ಮಾಣಕ್ಕಾಗಿ ಸ್ಥಳದಾನ ಮಾಡಿದರು ಹಾಗೂ ಡಾ. ಬಿ.ಆರ್. ಇನಾಮದಾರ ಹಾಗೂ ಗ್ರಾಮದ ಭಕ್ತರ ಸಹಕಾರದೊಂದಿಗೆ ಈಗಿರುವ ಶ್ರೀಗುರುಮಲ್ಲಜ್ಜನ ದೇವಸ್ಥಾನ ನಿರ್ಮಾಣವಾಯಿತು. ದೇವಾಲಯದ ಗರ್ಭಗುಡಿಯಲ್ಲಿ ಶ್ರೀಗುರುಮಲ್ಲಜ್ಜನ ಎರಡು ಮೂರ್ತಿಗಳಿವೆ. ಪ್ರತಿವರ್ಷ ಶಿವರಾತ್ರಿಯ ದಿನ ಉತ್ಸವ ಕಡುಬಿನ ಕಾಳಗ ಶ್ರಾವಣಮಾಸದಲ್ಲಿ ಮೌನೇಶ್ವರ ಪುರಾಣ. ಮಹಾನವಮಿಯಲ್ಲಿ

ದೇವಿಪುರಾಣ ಪ್ರತಿ ಅಮವಾಸ್ಯೆಯ ದಿನ ರಾತ್ರಿ ಜಾಗರಣೆ ಆಷಾಢ ಏಕಾದಶಿಯಂದು ಪುಣ್ಯತಿಥಿ ಆಚರಣೆ ಪ್ರತಿ ಮಂಗಳವಾರ ಆಧ್ಯಾತ್ಮಿಕ ಚಿಂತನಾಗೋಷ್ಠಿಯ ಕಾರ್ಯಕ್ರಮ ಹೀಗೆ ವರ್ಷವಿಡೀ ವಿವಿಧ ಬಗೆಯ ಧಾರ್ಮಿಕ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ.

ಶ್ರೀ ಮಲ್ಲಜ್ಜನ ಆಶ್ರಮದಲ್ಲಿ ವರ್ಷವಿಡೀ ನಡೆಯುವ ಈ ಎಲ್ಲಾ ಆಚರಣೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಗಮನಿಸಿದರೆ 'ಶರಣರ ಬಾಳನ್ನು ಮರಣ'ದಲ್ಲಿ ಕಾಣು ಎನ್ನುವಂತೆ ಅವರು ಕಾಲವಾದ ನಂತರವೂ ಅವರ ಪವಾಡ ಶಕ್ತಿಯ ಪ್ರತೀಕವಾಗಿ ಶ್ರೀಗುರುಮಲ್ಲಜ್ಜ ಜನಮನದಲ್ಲಿದ್ದಾರೆ. ನಿಷ್ಕಾಮ ಭಕ್ತಿಯೇ ನಿಜವಾದ ಭಕ್ತಿ ಎಂದು ಹೇಳುತ್ತಿದ್ದರು. "ಯಪ್ಪಾ ತಿಳಕೋಬೇಕು ಬಾಳ ತಿಳಕೋಬೇಕು, ತಿಳಕೊಂಡು ಉಳುಕೋಬೇಕು, ಎಂದಿಗೂ ಹಳಸಲಾರದಂತ ಬುತ್ತಿಕಟ್ಟಬೇಕು" ಇದು ಅವರ ಭಕ್ತರಿಗೆ ಹೇಳುವ ಮಾತಾಗಿತ್ತು. "ಯಪ್ಪಾ ಬೇಕಾದದ್ದು ಬೆರಕೊಂತೈತಿ, ಸಾಕಾದಿದ್ದು ಸರಕೊಂತೈತಿ, ಒಲ್ಲೆ ಅಂದಿದ್ದು ಹೊತಗೊಂಡು ಮಕ್ಕೊಂತೈತಿ ನೀ ಯಾಕ ಚಿಂತಿ ಮಾಡತಿ" ಹೀಗೆ ಭಕ್ತರನ್ನು ಚಿಂತೆಯಿಂದ ಮುಕ್ತರನ್ನಾಗಿ ಮಾಡುತ್ತಿದ್ದರು.

ಒಮ್ಮೆ ಭಕ್ತರು ಮಳೆಯನ್ನು ಕೇಳಲು ಹೋದಾಗ "ಯಪ್ಪಾ ಬಂಗಾರ ಮಳಿ ಸಿಂಗಾರ ಬೆಳಿ ನಿಮ್ಮ ನಿಮ್ಮ ನಸೀಬ ತಿಳಿ"[೧] ಮಳಿ ಇದರ ಕೈಯಾಗ ಬೆಳಿ ನಿಮ್ಮ ಕೈಯಾಗ ಎಂದರಂತೆ ಆ ವರ್ಷ ಅತಿವೃಷ್ಟಿಯಾಯಿತಂತೆ. ಹಾಗೆಯೇ ಗ್ರಾಮದ ಇನಾಮದಾರ ಡಾಕ್ಟರ್ ಅವರ ಶ್ರದ್ಧಾ ಭಕ್ತಿ ಹಾಗೂ ನಿಷ್ಕಾಮ ಸೇವೆಗೆ ಮೆಚ್ಚಿ ಅವರು ವರ ನೀಡಿದ್ದಾರೆ. ಹೀಗೆ ಗ್ರಾಮದಲ್ಲಿ ಭಕ್ತಿಯ ಧರ್ಮದ ಜಾಗೃತಿ ಮೂಡಿಸಿದ ಶ್ರೀಗುರುಮಲ್ಲಜ್ಜನವರ ಮಠದಲ್ಲಿ ಆ ಪರಂಪರೆ ಇಂದಿಗೂ ಮುಂದುವರೆದಿದೆ.

ಶ್ರೀ ಮೈಲಾರಲಿಂಗ ಗುಡಿ

ಗ್ರಾಮದ ಗಾಂಧಿ ಬಯಲಿನಲ್ಲಿ ಪೂರ್ವಕ್ಕೆ ಮುಖಮಾಡಿರುವ ಈ ದೇವಾಲಯ ಕಲ್ಲು, ಮಣ್ಣು, ಕಟ್ಟಿಗೆಗಳಿಂದ ನಿರ್ಮಾಣಗೊಂಡಿದೆ. ಗ್ರಾಮದಲ್ಲಿ ಪ್ರಥಮವಾಗಿ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಗಿದ್ದು ಇದೇ ಗುಡಿಯಲ್ಲಿ ಎಂದು ಗ್ರಾಮಸ್ಥರು ಹೇಳುತ್ತಾರೆ. ಇದರ ಪೂರ್ವಕ್ಕೆ ಮೈಲಾರಲಿಂಗನ ಗದ್ದುಗೆ ಇದ್ದು ಅದಕ್ಕೆ 'ಶಿಬಾರಗಟ್ಟಿ' ಎಂದು ಹೇಳುತ್ತಾರೆ. ಗ್ರಾಮದ ದುರ್ಗಾದೇವಿ ಗುಡಿಯ ದಕ್ಷಿಣಕ್ಕೆ ಒಂದು ಮೈಲಾರಲಿಂಗನ ಗುಡಿ ಇದ್ದು, ಅದು ನಶಿಸಿಹೋಗಿದೆ. ಮೈಲಾರಲಿಂಗನ ಆರಾಧಕರು ಪ್ರತಿ ರವಿವಾರ ತಮ್ಮ ಪೂಜಾವಿಧಿಗಳು ಹಾಗೂ ಮದುವೆ ಸಂದರ್ಭದಲ್ಲಿ ದೇವರು ಹೊರಡಿಸುವುದು ಹೀಗೆ ಹಲವಾರು ಆಚರಣೆಗಳು ನಡೆಯುತ್ತಿರುತ್ತವೆ.

ಸ್ವಾರೆಮ್ಮದೇವಿ ಗುಡಿ

ಗ್ರಾಮದ ಮಹಾಲಿಂಗಪುರ ರಸ್ತೆಯಲ್ಲಿರುವ ಉತ್ತರಕ್ಕೆ ಮುಖಮಾಡಿರುವ ಸ್ವಾರೆಮ್ಮದೇವಿ ದೇವಾಲಯವು ಕಲ್ಲು, ಮಣ್ಣು, ಕಟ್ಟಿಗೆಗಳಿಂದ ನಿರ್ಮಾಣ ಮಾಡಲಾಗಿದೆ. ಗರ್ಭಗುಡಿಯಲ್ಲಿ ಸ್ವಾರೆಮ್ಮದೇವಿ ಹಾಗೂ ದುರುಗಮ್ಮ ಎಂಬ ಮೂರ್ತಿಗಳಿವೆ. ಈ ಮೂರ್ತಿಗಳು ಕಟ್ಟಿಗೆಯ ಮೂರ್ತಿಗಳಾಗಿದ್ದು ಸಮುದಾಯದ ಭಕ್ತರ ಹರಕೆಗನುಗುಣವಾಗಿ ಬಣ್ಣ ಮಾಡಿಸುತ್ತಾರೆ. ಆ

ಸಮಯದಲ್ಲಿ ದೇವಿಯನ್ನು ಗದ್ದುಗೆಗೊಳಿಸುತ್ತಾರೆ ಹಾಗೂ ಹರಿಮರಿ ಕಡಿಯುವುದು ನಡೆಯುತ್ತದೆ. ಹಾಗೂ ಪ್ರತಿದಿನ ಪೂಜೆ ಹಾಗೂ ಮಹಾನವಮಿಯಲ್ಲಿ ವಿಶೇಷ ಪೂಜೆ ಸೇರಿದಂತೆ ವಾರ್ಷಿಕಾವರ್ತನದ ಆಚರಣೆಗಳು ನಡೆಯುತ್ತವೆ. ಈಗ ಇಲ್ಲಿ ಭಾರತರತ್ನ ಡಾ. ಅಂಬೇಡ್ಕರ್ ಯವಕ ಮಂಡಳದ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ.

ವಾಲೀಖಾರನ ವೀರಗಲ್ಲು ಮಂಟಪ

ಗ್ರಾಮದ ಹನುಮಂತ ದೇವರ ಗುಡಿಯ ನೈರುತ್ಯ ದಿಕ್ಕಿನಲ್ಲಿ ಉತ್ತರಕ್ಕೆ ಮುಖವಾಗಿರುವ ವಾಲೀಖಾರನ ವೀರಗಲ್ಲು ೭ ಅಡಿ ಎತ್ತರ ಹಾಗೂ ೩ ಅಡಿ ಅಗಲವಾಗಿದೆ. ಇದರಲ್ಲಿ ಸೈನಿಕರ ಮೂರ್ತಿಗಳಿವೆ. ಈ ವೀರಗಲ್ಲು ಕುರಿತು ಗ್ರಾಮದಲ್ಲಿ ದಂತಕಥೆಯೊಂದು ಇದೆ. ಕೆಲವು ಗ್ರಾಮಗಳಲ್ಲಿ ಊರ ದ್ಯಾಮವ್ವನ ಜಾತ್ರೆಯಲ್ಲಿ ಕೋಣವನ್ನು ಕಡಿದು ಚರಗ ಚೆಲ್ಲುವುದು ಒಂದು ಪರಂಪರೆ ಇದು ಆ ಗ್ರಾಮದ ಒಳಿತಿಗಾಗಿ ಮಾಡುವ ಒಂದು ಪದ್ಧತಿ. ಆದರೆ ಈ ಚರಗವನ್ನು ಪರ ಊರಿನವರು ಯಾರೂ ತೆಗೆದುಕೊಂಡು ಹೋಗಬಾರದು. ಒಂದು ವೇಳೆ ಯಾರಾದರೂ ತೆಗೆದುಕೊಂಡು ಹೋದರೆ ಅವರ ಗ್ರಾಮಕ್ಕೆ ಹುಲುಸು (ಒಳಿತು) ಮತ್ತು ಚರಗ ಚೆಲ್ಲಿದವರಿಗೆ ಕೆಡುಕು ಎಂಬ ನಂಬಿಕೆ ಇತ್ತು. ಆ ಹಿನ್ನೆಲೆಯಲ್ಲಿ ಹತ್ತಿರದ ಮುಳಗುಂದ ಗ್ರಾಮದ ದ್ಯಾಮವ್ವನ ಜಾತ್ರೆಯಲ್ಲಿ ಕೋಣವನ್ನು ಕಡಿದು ಚರಗ ಚೆಲ್ಲಲಾಗುತ್ತಿತ್ತು. ಅದನ್ನು ಯಾರೂ ತೆಗೆದುಕೊಂಡು ಹೋಗಬಾರದೆಂದು ಅಶ್ವದಳದ ಸೈನ್ಯ ರಕ್ಷಣೆಗಾಗಿ ಇತ್ತು. ಇಂತಹ ರಕ್ಷಣಾ ಕೋಟೆ ಇದ್ದರೂ ಗ್ರಾಮದ ವಾಲೀಖಾರ ಮನೆತನದ ವ್ಯಕ್ತಿ ತನ್ನ ಚಾಣಾಕ್ಷತೆ ಹಾಗೂ ವೀರತ್ವದಿಂದ ಚೆಲ್ಲಿದ ಚರಗವನ್ನು ತೆಗೆದುಕೊಂಡು ವೀರಾವೇಶದಿಂದ ಓಡುತ್ತಾ ಅವರ ಕುದುರೆಯ ಓಟಕ್ಕೆ ಸಿಗದಂತೆ ಓಡಿಬಂದ. ಅವರು ಅವನನ್ನು ಹಿಡಿಯಲು ಎಷ್ಟೋ ಪ್ರಯತ್ನಿಸಿದರೂ ಸಿಗಲಿಲ್ಲ. ಮುಳಗುಂದ ಗಡಿ ದಾಟುವವರೆಗೆ ಮಾತ್ರ ಬರಬೇಕಾಗಿದ್ದ ಅವರು, ವಾಲಿಖಾರನು ಅವರಿಗೆ ಸಿಗದಿದ್ದಾಗ ಸೊರಟೂರ ಗ್ರಾಮದವರೆಗೂ ಬಂದರು. ಇದನ್ನು ಗಮನಿಸುತ್ತಲೇ ಓಡಿಬಂದ ವಾಲೀಖಾರ. ಅವರು ಕುದುರೆ ಮೇಲೆ ಬಂದರೂ ತಾನು ಕಾಲ್ನಡಿಗೆಯಲ್ಲಿ ಓಡುತ್ತಾ ಬಂದು ಗ್ರಾಮದ ಕೋಟೆಯ ಒಳಗೆ ತನ್ನ ಕತ್ತನ್ನು ಕತ್ತರಿಸಿಕೊಂಡನು. ತಾನು ತಂದಿದ್ದ ಹುಲುಸನ್ನು ಉಳಿಸಿಕೊಂಡನು. ಈ ವೀರನ ನೆನಪಿಗಾಗಿ ಗ್ರಾಮದ ದೇಸಾಯಿಯರು ವೀರಗಲ್ಲನ್ನು ಸ್ಥಾಪಿಸಿದ್ದಾರೆ. ವಾಲಿಖಾರನು ವಾಲ್ಮೀಕಿ ಜನಾಂಗದವನಾದ್ದರಿಂದ ಪ್ರತಿವರ್ಷ ವಾಲ್ಮೀಕಿ ಜಯಂತಿ ದಿನ ಅಲ್ಲಿ ಪೂಜೆ ಮತ್ತು ಸ್ಮರಣೆ ನಡೆಯುತ್ತದೆ.

ಬನಶಂಕರೆಮ್ಮದೇವಿ ಗುಡಿ

ಈ ಗುಡಿಯು ಗ್ರಾಮದ ಕ್ವಾಟೆಯ (ಹಳೆಯ ಗ್ರಾಮದ) ಹೊರವಲಯದ ಪಶ್ಚಿಮ ದಿಕ್ಕಿನಲ್ಲಿದ್ದು, ಪೂರ್ವಕ್ಕೆ ಮುಖಮಾಡಿದೆ. ಗುಡಿಯ ಕಟ್ಟಡ ಇತ್ತೀಚಿನ ಕಾಲಘಟ್ಟದಾಗಿದ್ದು, ಅದರ ಕಾಲಮಾನ ತಿಳಿದಿಲ್ಲ. ಬಾದಾಮಿಯಲ್ಲಿರುವ ಬನಶಂಕರಿ ದೇವಿಯ ಪ್ರತೀಕವಾಗಿ ಈ

ಮೂರ್ತಿಯನ್ನು ಪ್ರತಿಷ್ಠಾಪಿಸಿರಬಹುದು ಎಂದು ತಿಳಿಯುತ್ತದೆ. ಗ್ರಾಮದ ಭಕ್ತರ ಸಹಕಾರದಿಂದ ಗುಡಿ ನಿರ್ಮಿಸಲಾಗಿದೆ.

ಬಯಲು ಕೊತ್ತಲಮ್ಮ

ಸೊರಟೂರ ಗ್ರಾಮದ ಪಶ್ಚಿಮ ದಿಕ್ಕಿಗೆ ದೇಸಾಯಿಯವರ ಬಾವಿಯ ಹತ್ತಿರ ಇರುವ ಮೂರ್ತಿಯೇ ಕೊತ್ತಲಮ್ಮ. ಈ ಮೂರ್ತಿಯ ಕುರಿತು ಗ್ರಾಮದಲ್ಲಿ ಒಂದು ದಂತಕತೆಯಿದೆ. ಗ್ರಾಮಕ್ಕೆ ಕೋಟೆಯನ್ನು ಕಟ್ಟುವಾಗ ಅದು ಒಂದು ಬಸುರಿ ಹೆಣ್ಣುಮಗಳ ಹಾರವನ್ನು ಬೇಡಿತ್ತಂತೆ. ಆ ಸಮಯಕ್ಕೆ ಅಲ್ಲಿ ಒಬ್ಬ ಕೊರವಂಜಿ ಬಸುರಿ ಹೆಣ್ಣುಮಗಳು ಬಂದಳಂತೆ ಅವಳನ್ನು ಮೋಸದಿಂದ ಕರೆದುಕೊಂಡು ಕೋಟೆಯ ಕಟ್ಟಡದಲ್ಲಿ ಹಾಕಿ ಕಟ್ಟಿದರಂತೆ. ಆಗ ಆ ಮಹಿಳೆ ಅಲ್ಲಿಯೇ ಕಲ್ಲಾಗಿ ಬಿಟ್ಟಳಂತೆ ಹಾಗೂ **ಈ ಊರ ಹೆಣ್ಣುಮಕ್ಕಳಿಗೆ ಸುಖ ಬೇಡ, ಬಂದ ಹೆಣ್ಣು ಮಕ್ಕಳಿಗೆ (ಸೊಸೆಯರಿಗೆ) ದುಃಖ ಬೇಡ** ಎಂದು ಶಾಪ ಕೊಟ್ಟಳಂತೆ. ಅವಳ ಶಾಪದ ಫಲವಾಗಿ ಸೊರಟೂರ ತವರು ಮಕ್ಕಳು ಕೊಟ್ಟ ಮನೆಯಲ್ಲಿ ಹಲವಾರು ತೊಂದರೆ ಹಾಗೂ ಸಂಕಷ್ಟಗಳಿಗೆ ಒಳಗಾಗುತ್ತಾರೆ. ಒಳಗಾಗುತ್ತಿದ್ದಾರೆ. ಗ್ರಾಮಕ್ಕೆ ಸೊಸೆಯಂದಿರಾಗಿ ಬಂದವರು ಸುಖವನ್ನು ಅನುಭವಿಸುತ್ತಿದ್ದಾರೆ. ಇದು ಕೋಟೆಗೆ ಬಲಿಯಾದ ಕೊರವಂಜಿಯ ಶಾಪದಿಂದ ಎಂಬ ನಂಬಿಕೆ ಇದೆ. ಇದಕ್ಕೆ ಪೂರಕವೆಂಬಂತೆ ಇತ್ತೀಚಿನ ಕಾಲಘಟ್ಟದಲ್ಲಿ ಕೆಲ ಮಹಿಳೆಯರ ದುರ್ಮರಣ, ಹೆಣ್ಣುಮಕ್ಕಳ ಮಾರಾಟದ ಪ್ರಯತ್ನಗಳು ಸೇರಿದಂತೆ ಗ್ರಾಮದ ಹೆಣ್ಣುಮಕ್ಕಳು ಎದುರಿಸುತ್ತಿರುವ ಸಂಕಷ್ಟಗಳನ್ನು ಕಂಡ ಗ್ರಾಮಸ್ಥರು ಇದು ಕೊರವಂಜಿಯ ಶಾಪ ಎಂದು ಮಾತನಾಡಿಕೊಳ್ಳುತ್ತಾರೆ. ಈ ಕೊತ್ತಲಮ್ಮನ ಮೂರ್ತಿ ೩ ಅಡಿ ಎತ್ತರ ೨ ಅಡಿ ಅಗಲವಿದ್ದು ಭಯಾನಕ ರೂಪವನ್ನು ಹೊಂದಿದೆ. ಈ ಮೂರ್ತಿ ಬಯಲಿನಲ್ಲಿ ಇರುವುದರಿಂದ ಇದಕ್ಕೆ ಬಯಲು ಕೊತ್ತಲಮ್ಮ ಎಂದು ಹೇಳುತ್ತಾರೆ. ಈ ಮೂರ್ತಿ ಈಗ ಕಿಡಿಗೇಡಿಗಳ ಹಸ್ತ ಕ್ಷೇಪದಿಂದ ಭಗ್ನಗೊಂಡಿದೆ. ಹಾಗೆಯೇ ಈ ಕೊತ್ತಲಮ್ಮನ ಕುರಿತು ಗ್ರಾಮಸ್ಥರಲ್ಲಿ ಈ ದೇವಿ ಊರು ರಕ್ಷಣೆ ಮಾಡುವ ದೇವತೆ ಆದ್ದರಿಂದ ಊರ ಹೊರವಲಯದಲ್ಲಿದ್ದಾಳೆ ಎಂಬ ನಂಬಿಕೆ ಇದೆ.

ಊರಿನ ಕೊತ್ತಲಮ್ಮನ ಗುಡಿ

ಗ್ರಾಮದ ಈಗಿನ ಜೈನ ಬಸದಿಯ ದಕ್ಷಿಣ ದಿಕ್ಕಿಗೆ ಇರುವ ಈ ಗುಡಿ ದಕ್ಷಿಣಕ್ಕೆ ಮುಖಮಾಡಿದೆ. ಇದು ಇತ್ತೀಚೆಗೆ ಕಟ್ಟಿದ ಗುಡಿಯಾಗಿದೆ. ಇಲ್ಲಿ ಮೂರ್ತಿ ಇಲ್ಲ. ಈ ಕೊತ್ತಲಮ್ಮಳ ಹಿನ್ನೆಲೆ ನೋಡಿದಾಗ ಗ್ರಾಮದ ರಕ್ಷಣೆ ಮಾಡಲು ಪ್ರಾಚೀನ ಕಾಲದಲ್ಲಿ ಕೊತ್ವಾಲರು ಎಂಬ ವ್ಯಕ್ತಿಗಳಿದ್ದರು. ಅವರು ಇಲ್ಲದಿದ್ದಾಗ ಅವರ ಹೆಂಡತಿಯರು ಗ್ರಾಮದ ರಕ್ಷಣೆ ಮಾಡುತ್ತಿದ್ದರು. ಅವರ ನೆನಪಿಗಾಗಿ ಈ ಕೊತ್ತಲಮ್ಮನ ಗುಡಿ ನಿರ್ಮಿಸಲಾಗಿದೆ ಎಂಬ ನಂಬಿಕೆ ಜನರಲ್ಲಿದೆ. ಈ ಹಿನ್ನೆಲೆಯಲ್ಲಿ ಬಯಲು ಕೊತ್ತಲಮ್ಮ ಹಾಗೂ ಗ್ರಾಮದಲ್ಲಿರುವ ಕೊತ್ತಲಮ್ಮನ ಗುಡಿಯ ಕುರಿತು ಹಲವು ಭಿನ್ನಾಭಿಪ್ರಾಯಗಳಿರುವುದು ಕಂಡುಬರುತ್ತದೆ. ಆದರೆ

ಕೊತ್ತಲಮ್ಮ ಕೋಟೆಗೆ ಬಲಿದಾನವಾದ ಹಾಗೂ ಗ್ರಾಮದ ರಕ್ಷಣೆ ಮಾಡುವ ಮಹಿಳೆ ಎಂಬ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಇಂತಹ ಪ್ರಾಚೀನ ಪರಂಪರೆ ಹೊಂದಿರುವ ಬಯಲು ಕೊತ್ತಲಮ್ಮನ ಮೂರ್ತಿಯನ್ನು ಯುವಕ ಮಂಡಳ ಗ್ರಾಮಸ್ಥರು ಹಾಗೂ ಸಂಬಂಧಿಸಿದ ಇಲಾಖೆ ಗಮನಹರಿಸಿ ರಕ್ಷಿಸುವ ಅಗತ್ಯವಿದೆ.

ದೇವಾಲಯಗಳು ಮತ್ತು ಸಮುದಾಯ ಪ್ರಜ್ಞೆ (ಜಾತಿಯತೆ)

ಸೊರಟೂರ ಗ್ರಾಮದಲ್ಲಿರುವ ಪ್ರತಿಯೊಂದು ದೈವಗಳ ಹಿನ್ನೆಲೆ ಪರಂಪರಾಗತ ಆಚರಣೆ ಮತ್ತು ಭಕ್ತ ಸಮೂಹಗಳನ್ನು ನೋಡಿದಾಗ ಗ್ರಾಮದಲ್ಲಿರುವ ಸಮುದಾಯ ಪ್ರಜ್ಞೆ ಅರಿವಿಗೆ ಬರುತ್ತದೆ. ಬಹಿರಂಗವಾಗಿ ನೋಡಿದಾಗ ಅದು ಕಾಣಬರುವುದಿಲ್ಲ, ಕೆಲವು ಸಂದರ್ಭ, ಸನ್ನಿವೇಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿವಿಧ ಸಮುದಾಯಗಳಲ್ಲಿ ಜಾತಿಯತೆಯ ಪ್ರಜ್ಞೆ ಜೀವಂತವಾಗಿರುವುದು ಕಂಡುಬರುತ್ತದೆ. ಈ ಸಮುದಾಯಗಳಲ್ಲಿ ಮೇಲ್ವರ್ಗ ಹಾಗೂ ಕೆಳವರ್ಗ ಎಂದು ಎರಡು ವರ್ಗಗಳಿಂದ ಗುರುತಿಸುವುದು ತಪ್ಪು. ಏಕೆಂದರೆ ಜಾತಿಯತೆಯು ಮೆಟ್ಟಿಲುಗಳಂತೆ ವಿವಿಧ ಹಂತಗಳಲ್ಲಿ ಕಂಡುಬರುತ್ತದೆ. ಮೇಲ್ವರ್ಗದವರೆಂದು ಕರೆಸಿಕೊಳ್ಳುವ ಗುಂಪು ಒಂದೆಡೆಯಾದರೆ, ತಳಸಮುದಾಯಗಳಲ್ಲಿಯೇ ಮೇಲು-ಕೀಳು ಭಾವನೆ ಕಂಡುಬರುತ್ತದೆ. ಉದಾ:- ಗ್ರಾಮದ ವೀರಭದ್ರ, ಕಾಲಭೈರವ, ಅನ್ನದಾನೇಶ್ವರ ಮುಂತಾದ ದೇವಾಲಯಗಳಲ್ಲಿ ದಲಿತ ಸಮುದಾಯದವರಿಗೆ ಪ್ರವೇಶವಿಲ್ಲ. ಇತರೆ ಹಿಂದುಳಿದ ಸಮುದಾಯದವರು ದೇವಾಲಯ ಪ್ರವೇಶಿಸುತ್ತಾರೆ. ಆದರೆ ಗರ್ಭಗುಡಿ ಪ್ರವೇಶಿಸುವುದಿಲ್ಲ. ಹಾಗಂತ ಪ್ರವೇಶವೇ ಇಲ್ಲ ಅಂತ ಎಲ್ಲೂ ನಿಯಮಗಳಿಲ್ಲ. ದಲಿತರು ಪ್ರವೇಶಿಸುವ ಗೋಜಿಗೆ ಹೋಗಿಲ್ಲ. ಇಲ್ಲಿನ ದೇವಾಲಯಗಳಲ್ಲಿ ದಲಿತರಿಗೆ ಪ್ರವೇಶ ನಿಷಿದ್ಧ ಎನ್ನುವುದಕ್ಕಿಂತ ಅದು ಸಾಮೂಹಿಕ ಒಪ್ಪಿತವಾದ ವಿಷಯವಾಗಿದೆ. ಇನ್ನು ಹಿಂದುಳಿದ ಸಮುದಾಯಗಳಲ್ಲಿಯೂ ಮೇಲು-ಕೀಳು ಭಾವನೆ ಇದೆ. ಉದಾ:- ಕುರುಬರ ಬೀರೇಶ್ವರ, ಮುಸ್ಲಿಮರ ಮಸೀದಿ, ಬೇಡರ ಹಳಿಕೆಮ್ಮ ಮುಂತಾದ ಗುಡಿಗಳಲ್ಲಿ ಮಾದಿಗ ಜನಾಂಗದವರನ್ನು ಹೊರತುಪಡಿಸಿ ಉಳಿದ ಎಲ್ಲರಿಗೂ ಪ್ರವೇಶವಿದೆ. ಇಲ್ಲಿಯೂ ಸಹ ಯಾವುದೇ ನಿಷೇಧಗಳಿಲ್ಲ. ಸಹಜವಾಗಿ ಇದು ಒಪ್ಪಿತವಾದ ವಿಷಯವಾಗಿಯೇ ನಡೆದಿದೆ.

ಒಟ್ಟಾರೆ ಗ್ರಾಮದ ದೇವಾಲಯ ಮತ್ತು ಗುಡಿಗಳಲ್ಲಿ ಪ್ರವೇಶ ಎನ್ನುವ ವಿಷಯ ಬಹುಸೂಕ್ಷ್ಮ ವಿಷಯವಾಗಿದೆ. ಎಲ್ಲಾ ದೇವಾಲಯಗಳಲ್ಲಿ ದಲಿತರು ಸೇರಿದಂತೆ ಎಲ್ಲಾ ಜನರಿಗೆ ಪ್ರವೇಶವಿದೆಯಾ? ಎಂದು ಕೇಳಿದಾಗ ಕೆಲವರು 'ಎಂಥಾ ವಿಷಯ ಕೇಳುತ್ತೀರಿ? ಇದು ಕೇಳುವ ಹೇಳುವ ವಿಷಯವಲ್ಲ!' ಎಂದು ಜಾರಿಕೊಳ್ಳುತ್ತಾರೆ. ಅಂದರೆ ಇದು ಚರ್ಚಿತವಲ್ಲದ ವಿಷಯ ಎಂಬುದು ಅವರ ಭಾವನೆಯಾಗಿದೆ.

ಅಂದರೆ ದೇವಾಲಯಗಳಲ್ಲಿ ದಲಿತರಿಗೆ ಪ್ರವೇಶವಿರಲಿಲ್ಲ. ಆದರೆ ಈಗ ದಲಿತರಿಗೆ ಪ್ರವೇಶವಿಲ್ಲ ಎಂದು ಹೇಳುವ ಸ್ಥಿತಿಯಲ್ಲಿ ಯಾರೂ ಇಲ್ಲ. ಹಾಗಂತ ದಲಿತರನ್ನು ಮುಕ್ತವಾಗಿ ಆಹ್ವಾನಿಸುವ ಮನಸ್ಸು ಅವರಲ್ಲಿಲ್ಲ. ದೇವಾಲಯ ಪ್ರವೇಶ ಕುರಿತಂತೆ ಜಾತಿಯತೆಯ ಕಟ್ಟುಪಾಡು ಕ್ರಮೇಣ ಸಡಿಲಗೊಳ್ಳುತ್ತಿದೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ.

೪.೨. ಜೈನ ಬಸದಿ

ಗ್ರಾಮದ ಪ್ರಾಚೀನ ಕಾಲದ ಹಾಳು ಜೈನಬಸದಿಯನ್ನು ಈಗ ನವೀಕರಿಸಿ ಪುನರ್ ನಿರ್ಮಿಸಲಾಗಿದೆ. ಪೂರ್ವಕ್ಕೆ ಮುಖದ್ವಾರ ಹೊಂದಿರುವ ಈ ಮಂದಿರಕ್ಕೆ ಸ್ಥಂಭವಿದೆ. ಈ ಬಸದಿಯ ಮುಂದಿರುವ ಶಾಸನವು ಕಲ್ಯಾಣ ಚಾಲುಕ್ಯ ಅರಸ ಎರಡನೇ ಸೋಮೇಶ್ವರನ ಕ್ರಿ.ಶ. ೧೧೭೧ರ ಶಾಸನವಾಗಿದ್ದು, ದಂಡನಾಯಕ ಬಲದೇವಯ್ಯನು ಹುಲಿಯಬ್ಬಜ್ಜಿಕೆಯ ಕಾಲುತೊಳೆದು ಬಲದೇವ ಜಿನಾಲಯುಕ್ಕೆ ದಾನ ನೀಡಿದ್ದನೆಂದು ದಾಖಲಿಸಿದೆ. (ಧಾ.ಜಿ.ಶಾ.ಸೂ.ಸಂ.ಗ. ೧೮೩; ಪು–೧೪ SII, XI Pt I No. ೧೧೧) ಇನ್ನೊಂದು ಶಾಸನವು (ಧಾ.ಜಿ.ಶಾ.ಸೂ.ಸಂ.ಗ. ೧೭೭; ಪು–೧೪ SII, XV No. ೬೨೩) ನರೇಂದ್ರ ಸೇನನ ಶಿಷ್ಯ ಸಮಿಗೌಡತಿಯ ನಿಷಧಿಯೆಂದು ಉಲ್ಲೇಖಿಸಿದೆ.[೨] (ಕರ್ನಾಟಕ ದೇವಾಲಯಕೋಶ ಗದಗ ಜಿಲ್ಲೆ ೨೦೦೭) ಈಗ ಗ್ರಾಮದಲ್ಲಿ ಇದು ಜೈನ ಧರ್ಮದ ಆರಾಧನೆಯ ಕೇಂದ್ರವಾಗಿದ್ದು ಜೈನ ಧರ್ಮದ ವಿಧಿ-ವಿಧಾನಗಳ ಪರಂಪರೆಯು ಮುಂದುವರೆದಿದೆ.

೪.೩. ಖಾಲೆಫಕ್ರು ದರ್ಗಾ ಮತ್ತು ಮಸೀದಿಗಳು

ಗ್ರಾಮದ ಬಸವೇಶ್ವರ ದೇವಸ್ಥಾನದ ಪೂರ್ವಕ್ಕೆ ಈ ಗದ್ದುಗೆ ಇದೆ. ಈ ಗದ್ದುಗೆಯ ಹಿನ್ನೆಲೆಯ ಕುರಿತು ವಿವಿಧ ಬಗೆಯ ದಂತಕಥೆಗಳು ಗ್ರಾಮದಲ್ಲಿವೆ.

ಇಸ್ಲಾಂ ಧರ್ಮದ ಧರ್ಮ ಜಾಗೃತಿಗಾಗಿ ಹಜರತ್ ಫಕ್ರುದ್ದೀನ್ ಶಾವಲಿ ಎಂಬ ವ್ಯಕ್ತಿ ಗ್ರಾಮಕ್ಕೆ ಬಂದಿದ್ದರು. ಅವರ ಕಾಲಮಾನ ತಿಳಿದಿಲ್ಲ. ಧರ್ಮ ಮತ್ತು ಧಾರ್ಮಿಕತೆಯಲ್ಲಿ ಶ್ರದ್ಧೆ ಇರುವ ಅವರು ತಮ್ಮ ಜೀವನದ ಕೊನೆಯವರೆಗೂ ಗ್ರಾಮದಲ್ಲಿಯೇ ಉಳಿದರು. ಅವರ ಮರಣಾನಂತರ ಅವರನ್ನು ದಫನ ಮಾಡಿದ (ಶವಸಂಸ್ಕಾರ) ಜಾಗದಲ್ಲಿ ಕಟ್ಟಿದ ಗದ್ದುಗೆಯೇ ಇಂದಿನ ಖಾಲೆಫಕ್ರು ಗದ್ದುಗೆ ಎಂದು ಹೇಳುತ್ತಾರೆ. ಈ ಗದ್ದುಗೆಯನ್ನು ಖರೆಫಕ್ರು ಗದ್ದುಗೆ ಅಂದರೆ ನಿಜ, ಸತ್ಯ ಎಂಬ ಸಂಕೇತಗಳಿಂದ ಈ ಗದ್ದುಗೆಯನ್ನು ಗುರುತಿಸಲಾಗುತ್ತದೆ. ಈ ಶರಣರ ಗದ್ದುಗೆ ಕುರಿತು ಇನ್ನೊಂದು ದಂತಕಥೆ ರೂಢಿಯಲ್ಲಿದೆ. ಈಗ ಗ್ರಾಮದಲ್ಲಿರುವ ಖರೆಫಕ್ರು ಗದ್ದುಗೆ ಒಬ್ಬ ಮುಸ್ಲಿಂ ಶರಣನಾಗಿದ್ದು, ದೇವಮಾನವರಾದ ಅವರು ತಮ್ಮ ವಾಸ್ತವ್ಯಕ್ಕಾಗಿ ಒಂದು ಸ್ಥಳ ಕೇಳಿದರು. ಗ್ರಾಮಸ್ಥರು ಆಗ ಒಂದು ಸ್ಥಳ ತೋರಿಸಿದರು. ಅಲ್ಲಿ ಒಂದು ಹಾವಿನ ಹುತ್ತವಿತ್ತು. ಅಲ್ಲಿಯೇ ಅವರು ವಾಸ ಮಾಡುತ್ತಿದ್ದರು. ಕಾಲಗತಿಸಿದಂತೆ ತಮ್ಮ ಜೀವನದ ಕೊನೆಯ ದಿನಗಳು ಸಮೀಪಿಸಿದಾಗ ಅವರು ಅಲ್ಲಿರುವ ಹಾವಿನ ಹುತ್ತದಲ್ಲಿಯೇ ಹೋದರು; ಅವರ ನೆನಪಿಗಾಗಿ ಇಂದು ಅಲ್ಲಿ ಗದ್ದುಗೆ ನಿರ್ಮಾಣ ಮಾಡಲಾಗಿದೆ. ಆ ಗದ್ದುಗೆಯೇ ಇಂದು ಹಿಂದೂ ಮುಸ್ಲಿಮರ ಭಾವೈಕ್ಯತೆಯ ಆರಾಧನೆಯ ದೈವವಾಗಿದೆ.

'ಶರಣರ ಜೀವನವನ್ನು ಮರಣದಲ್ಲಿ ಕಾಣು' ಎನ್ನುವಂತೆ ಅವರ ಮರಣದ ನಂತರ ಅಲ್ಲಿ ಅನೇಕ ಪವಾಡಗಳು ನಡೆದಿವೆ. ಪ್ರತಿವರ್ಷ ಯುಗಾದಿಯ ನಂತರ ೯ನೇ ದಿನಕ್ಕೆ ನಡೆಯುವ ಉರುಸಿನಲ್ಲಿ ಭಕ್ತರು ಅವರ ಹೆಸರಿನಲ್ಲಿ ನೀರು ತಂದು ದೀಪಕ್ಕೆ ಹಾಕಿದರೆ ದೀಪ ಉರಿಯುತ್ತಿತ್ತಂತೆ. ಹಾಗೆಯೇ ಇಂದಿಗೂ ಭಕ್ತರು ತಮ್ಮ ಇಷ್ಟಾರ್ಥಗಳ ಹರಕೆ ಹೊತ್ತು

ಖಾಲೆಫಕ್ರು ದೇವರಿಗೆ ನಡೆದುಕೊಳ್ಳುತ್ತಾರೆ. ಮಕ್ಕಳಿಲ್ಲದವರಿಗೆ ಮಕ್ಕಳು ಕಾಯಿಲೆಯಿಂದ ಬಳಲುವವರು ಕಾಯಿಲೆಯಿಂದ ವಾಸಿಯಾಗುತ್ತಾರೆ. ಈಗಲೂ ನಿರಂತರವಾಗಿ ಈ ಭಕ್ತಿ ಪರಂಪರೆ ಮುಂದುವರೆದಿದೆ. ಆದರೆ ಎಲ್ಲಕ್ಕೂ ಮುಖ್ಯವಾಗಿ ಯಾವುದೇ ಜಾತಿಯತೆಯ ಬೇಧಭಾವವಿಲ್ಲದೇ ಗ್ರಾಮದ ಸಮಸ್ತ ಜನತೆ ಈ ದೇವರ ಆರಾಧಕರಾಗಿದ್ದಾರೆ. ಇದು ಗ್ರಾಮದಲ್ಲಿ ಧರ್ಮಸಹಿಷ್ಣುತೆಯನ್ನು ಭದ್ರಗೊಳಿಸಿದೆ. ಭದ್ರಗೊಳಿಸುತ್ತಿದೆ. ಆದರೆ ಈ ಗದ್ದಿಗೆ ಇನ್ನು ಗದ್ದುಗೆಯ ರೂಪದಲ್ಲಿಯೇ ಇದೆ. ಇಂತಹ ಧರ್ಮಸಹಿಷ್ಣತೆಯ ಕೇಂದ್ರವನ್ನು ಇನ್ನು ವ್ಯವಸ್ಥಿತವಾಗಿ ನಿರ್ಮಿಸುವ ಅವಶ್ಯಕತೆ ಇದೆ.

ಮಸೀದಿಗಳು : ಗ್ರಾಮದಲ್ಲಿ ಒಟ್ಟು ೩ ಮಸೀದಿಗಳು ಇವೆ. ಒಂದು ಗ್ರಾಮದ ದುರ್ಗಾದೇವಿ ಗುಡಿಯ ಹತ್ತಿರ ದಕ್ಷಿಣ ದಿಕ್ಕಿಗೆ ಇದೆ. ಇದನ್ನು ಜುಮ್ಮಾ ಮಸೀದಿ ಎಂದು ಹೇಳುತ್ತಾರೆ. ಹಾಗೆಯೇ ಇನ್ನೊಂದು ಮಸೀದಿ ಗ್ರಾಮದ ಬಸವಣ್ಣದೇವರ ಗುಡಿಯ ಹತ್ತಿರದ ಗರಡಿಯ ಮನೆಯ ಬಲಭಾಗದಲ್ಲಿದೆ. ಇದಕ್ಕೆ ನಡುವಿನ ಮಸೀದಿ ಎಂದು ಹೇಳುತ್ತಾರೆ. ಗ್ರಾಮದ ಕಲ್ಮೇಶ್ವರ ದೇವಸ್ಥಾನದ ಹತ್ತಿರ ಪೂರ್ವಕ್ಕೆ ಒಂದು ಮಸೀದಿ ಇದೆ. ಇದನ್ನು ಕಡೆಮಸೂತಿ ಎಂದು ಹೇಳುತ್ತಾರೆ. ಈ ಎಲ್ಲ ಮಸೀದಿಗಳಲ್ಲಿ ಅಲ್ಲಾಸಾಬ, ಮಹ್ಮದಅಲಿ, ಬೀಬಿಪಾತಿಮಾ ಮುಂತಾದ ಶರಣರ ಹೆಸರಿನಲ್ಲಿ ಮೊಹರಂ ಹಬ್ಬದ ಆಚರಣೆ ನಡೆಯುತ್ತದೆ. ಗ್ರಾಮದ ಕಪ್ಪತ್ತ ದಾರಿಯ ಬಲಭಾಗದಲ್ಲಿ ಪೂರ್ವಕ್ಕೆ ಮುಖಮಾಡಿ ಇತ್ತೀಚೆಗೆ ಒಂದು ಜಾಮೀಯಾ ಮಸೀದಿಯನ್ನು ನಿರ್ಮಿಸಲಾಗಿದೆ. ಅಲ್ಲಿ ಮುಸ್ಲಿಂ ಸಮುದಾಯದವರು ನಮಾಜು ಸೇರಿದಂತೆ ತಮ್ಮ ಧಾರ್ಮಿಕ ಆಚರಣೆಗಳನ್ನು ಮಾಡುತ್ತಾರೆ.

ಟಿಪ್ಪಣಿಗಳು

೧. ಡಾ. ಬಾಲಸುಬ್ರಮಣ್ಯ, ಡಾ. ಸಿ.ಎಸ್. ವಾಸುದೇವನ್, ರಮೇಶ ನಾಯಕ (ಸಂ), ೨೦೦೭, **ಕರ್ನಾಟಕ ದೇವಾಲಯ ಕೋಶ-ಗದಗ ಜಿಲ್ಲೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು. ೧೦೧-೧೦೨.

೨. ಅದೇ ಪು. ೧೦೨-೧೦೩.

೩. ಅದೇ ಪು. ೧೦೫.

೪. ಡಾ. ಬಾಲಸುಬ್ರಮಣ್ಯ, ಡಾ. ಸಿ.ಎಸ್. ವಾಸುದೇವನ್, ರಮೇಶ ನಾಯಕ (ಸಂ), ೨೦೦೭, **ಕರ್ನಾಟಕ ದೇವಾಲಯ ಕೋಶ-ಗದಗ ಜಿಲ್ಲೆ,** ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೦೪

೫. ಅದೇ ಪು. ೧೦೩.

೬. ಅದೇ ಪು. ೧೦೪.

೭. ಅದೇ ಪು. ೧೦೪.

೮ ಕವಣೆ: ಗುರಿಯಿಟ್ಟು ಕಲ್ಲನ್ನು ಹೊಡೆಯಲು ಬಳಸುವ ನಾರಿನಿಂದ ಮಾಡಿದ ಸಾಧನ.

೯. ಸರಜೂ ಕಾಟ್ಕರ್, ೨೦೦೬, **ಶಿವಾಜಿ ಮೂಲ ಕನ್ನಡ ನೆಲ**, ಲೋಹಿಯಾ ಪ್ರಕಾಶನ, ಬಳ್ಳಾರಿ ಪು. ೧೨೧.

೧೦. ನಸಲು: ದೇವಿಯ ಬಣ್ಣದ ಕೊನೆಯ ಹಂತ ದೃಷ್ಟಿ ಬರೆಯುವುದು.

೧೧. ತುಪ್ಪದಳ್ಳ: ಗ್ರಾಮದ ಪಶ್ಚಿಮದಿಕ್ಕಿಗೆ ಇರುವ ಈ ಹಳ್ಳದ ನೀರು ಶುದ್ಧ ಮತ್ತು ಸಿಹಿಯಾಗಿರುವುದರಿಂದ ಜನಪದರು ತುಪ್ಪದಳ್ಳ ಎಂದು ಕರೆಯುತ್ತಾರೆ.

೧೨. ಶ್ರೀ ಗುರುಮಲ್ಲಜ್ಜನ ಶಿಷ್ಯಬಳಗದಿಂದ ಅವರ ವಾಣಿಗಳನ್ನು ಸಂಗ್ರಹಿಸಲಾಗಿದೆ.

೧೩. ಹರಿಮರಿ: ಆಡು ಅಥವಾ ಕುರಿಮರಿಗಳನ್ನು ದೇವಿಯ ಮುಂದೆ ಕಡಿಯುವುದಕ್ಕೆ ಹರಿಮರಿ ಎನ್ನುವರು.

೧೪. ಚರಗ: ಭೂಮಿತಾಯಿಗೆ ನೈವೇದ್ಯವನ್ನು ಸೂರಿ ಮಾಡುವುದು.

೧೫. ಡಾ. ಬಾಲಸುಬ್ರಮಣ್ಯ, ಡಾ. ಸಿ.ಎಸ್. ವಾಸುದೇವನ್, ರಮೇಶ ನಾಯಕ (ಸಂ), ೨೦೦೭, **ಕರ್ನಾಟಕ ದೇವಾಲಯ ಕೋಶ-ಗದಗ ಜಿಲ್ಲೆ**, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೦೪

□□

ಅಧ್ಯಾಯ : ಐದು

ಜನಪದರ ಬದುಕು

೫.೧. ಸಾಮಾಜಿಕ ವ್ಯವಸ್ಥೆ

೫.೨. ವರ್ಣವ್ಯವಸ್ಥೆ ಮತ್ತು ಸಾಮಾಜಿಕ ಸಾಮರಸ್ಯ

೩.೩. ಜಾತ್ಯಾತೀತತೆಯಲ್ಲಿ ಬೇರೂರಿರುವ ಜಾತಿಯತೆ

೩.೪. ಕುಟುಂಬ ವ್ಯವಸ್ಥೆ

೩.೫. ಸಾಮಾಜಿಕ ಸಂಘಟನೆ

೩.೬. ಆರ್ಥಿಕ ವ್ಯವಸ್ಥೆ

೩.೭. ಶೈಕ್ಷಣಿಕ ಸ್ಥಿತಿಗತಿ

೩.೮. ರಾಜಕೀಯ ಸ್ಥಿತಿಗತಿ

ಅಧ್ಯಾಯ : ಐದು

ಜನಪದರ ಬದುಕು

೫.೧. ಸಾಮಾಜಿಕ ವ್ಯವಸ್ಥೆ

ಸಾಮಾಜಿಕ ರಚನೆಯಲ್ಲಿ ವರ್ಣವ್ಯವಸ್ಥೆಯ ಪರಂಪರೆ ಅನಾದಿಕಾಲದಿಂದಲೂ ರೂಢಿಯಲ್ಲಿದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದಲ್ಲಿ ಹಿಂದು, ಮುಸ್ಲಿಂ, ಜೈನ ಧರ್ಮಗಳಿವೆ. ಹಿಂದುಗಳಲ್ಲಿ ಬ್ರಾಹ್ಮಣ, ವೀರಶೈವ ಹಾಗೂ ಅದರ ಉಪಪಂಗಡಗಳಾದ ಪಂಚಮಸಾಲಿ, ಗಾಣಿಗ, ಬಣಜಿಗ, ಕುಡವಕ್ಕಲಿಗ, ಕ್ಷೌರಿಕ ಜಾತಿಗಳಿವೆ. ಕುರುಬ, ವಾಲ್ಮೀಕಿ, ಮರಾಠಾ, ಪಂಚಾಳ, ಹರಿಜನ, ಉಪ್ಪಾರ, ಗಂಗಾಮತಸ್ಥ, ಭಜಂತ್ರಿ, ಕಲಾಲ್ ಮುಂತಾದ ಜಾತಿಗಳಿವೆ. ಆದರೆ ಗ್ರಾಮದ ಈ ಎಲ್ಲಾ ಜಾತಿ ಸಮುದಾಯಗಳು ಸಮಾಜದಲ್ಲಿ ಅನ್ಯೋನ್ಯತೆಯಿಂದ, ಸಾಮಾಜಿಕ ಸಾಮರಸ್ಯ ಕಾಯ್ದುಕೊಂಡಿರುವುದು ಸೊರಟೂರಿನ ವೈಶಿಷ್ಟ್ಯವಾಗಿದೆ.

ಬ್ರಾಹ್ಮಣರು

ಗ್ರಾಮದಲ್ಲಿ ಬ್ರಾಹ್ಮಣರ ೫ ಮನೆತನಗಳು ಮಾತ್ರ ಇದ್ದು ೧೦-೧೫ ಕುಟುಂಬಗಳಿವೆ. ಬ್ರಾಹ್ಮಣರಲ್ಲಿಯೇ ಸ್ಮಾರ್ತ ಮತ್ತು ವೈಷ್ಣವ ಎಂಬ ಎರಡು ಪಂಗಡಗಳಿವೆ. ಇವರು ಪುರೋಹಿತ ವೈದ್ಯ, ಸರ್ಕಾರಿ ನೌಕರಿ ಮತ್ತು ವ್ಯವಸಾಯವನ್ನು ಮಾಡುತ್ತಾರೆ. ರಾಘವೇಂದ್ರಸ್ವಾಮಿ, ಲಕ್ಷ್ಮೀವೆಂಕಟೇಶ್ವರ ಮುಂತಾದ ಗ್ರಾಮದಲ್ಲಿರುವ ದೇವರುಗಳ ಆರಾಧಕರಾಗಿದ್ದಾರೆ.

ವೀರಶೈವರು

ಗ್ರಾಮದಲ್ಲಿ ವೀರಶೈವರ ಸಂಖ್ಯೆಯೇ ಅಧಿಕವಾಗಿದೆ. ಆದರೆ ಅವರಲ್ಲಿ ಜಂಗಮ, ಪಂಚಮಸಾಲಿ, ಗಾಣಿಗ, ಬಣಜಿಗ, ಕುಡವಕ್ಕಲಿಗ, ಹಡಪದ ಎಂಬ ಪಂಗಡಗಳಿವೆ.

ಜಂಗಮ

ಸೊರಟೂರ ಗ್ರಾಮದಲ್ಲಿ ವೀರಶೈವ ಸಮುದಾಯದ ಉಪಪಂಗಡವಾದ ಜಂಗಮರ ಐದಾರು ಕುಟುಂಬಗಳಿವೆ. ಇವರು ಗ್ರಾಮದಲ್ಲಿ 'ಹಿರೇಮಠರು' ಎಂದು ಕರೆಯಲ್ಪಡುತ್ತಾರೆ. ಗ್ರಾಮದಲ್ಲಿರುವ ಎಲ್ಲಾ ಸಮುದಾಯದವರ ಮನೆಯ ಪೂಜೆ, ಮದುವೆ, ನಾಮಕರಣ, ಉಪನಯನ ಹೀಗೆ ಧಾರ್ಮಿಕ ಆಚರಣೆಗಳಲ್ಲಿ ಗುರುಗಳಾಗಿ ಮತ್ತು ಶವಸಂಸ್ಕಾರದ ವಿಧಿ-ವಿಧಾನಗಳನ್ನು ನೆರವೇರಿಸುತ್ತಾರೆ.

ಪಂಚಮಸಾಲಿ

ವೀರಶೈವರಲ್ಲಿ ಪಂಚಮಸಾಲಿ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ೪೦೦ಕ್ಕೂ ಹೆಚ್ಚು ಮನೆಗಳು ಇದ್ದು ಬಹುಪಾಲು ಜನರು ವ್ಯವಸಾಯ ಮಾಡುತ್ತಾರೆ. ಇತ್ತೀಚೆಗೆ ಸರಕಾರಿ ಹಾಗೂ ಖಾಸಗಿ ನೌಕರಿಗಳನ್ನು ಮಾಡುತ್ತಿದ್ದಾರೆ. ವೀರಭದ್ರ, ಮೈಲಾರಲಿಂಗ ಹಾಗೂ ಗುರು ಲಿಂಗ ಜಂಗಮ ಪರಂಪರೆ ಜೊತೆಗೆ ಗ್ರಾಮ ಹಾಗೂ ಮನೆದೇವರನ್ನು ಆರಾಧಿಸುತ್ತಾರೆ.

ಗಾಣಿಗ

ಸುಮಾರು ೫೦-೬೦ ಮನೆಗಳನ್ನು ಹೊಂದಿರುವ ಗಾಣಿಗರು ಮೂಲತಃ ಎಣ್ಣೆ ಗಾಣದ ಕೆಲಸ ನಿರ್ವಹಿಸುತ್ತಿದ್ದರಂತೆ. ಆದರೆ ಈಗ ಗ್ರಾಮದಲ್ಲಿ ಯಾರೂ ಎಣ್ಣೆ ಉತ್ಪಾದಿಸುತ್ತಿಲ್ಲ. ಕೆಲವು ಮನೆಗಳಲ್ಲಿ ಇನ್ನೂ ಎಣ್ಣೆ ಗಾಣಗಳಿವೆ. ಆದರೆ ಅವು ಪಳೆಯುಳಿಕೆಗಳಾಗಿವೆ. ಈಗ ಇವರು ಸಹ ವ್ಯವಸಾಯ ವೃತ್ತಿ ಸೇರಿದಂತೆ ಸಣ್ಣಪುಟ್ಟ ವ್ಯಾಪಾರ ಮಾಡುತ್ತಿದ್ದಾರೆ. ಕೆಲವರು ಸರಕಾರಿ ನೌಕರಿಯಲ್ಲಿದ್ದಾರೆ. ಯಲ್ಲಮ್ಮ, ಬಸವಣ್ಣ ಸೇರಿದಂತೆ ಗ್ರಾಮದೈವ ಹಾಗೂ ಮನೆದೇವರನ್ನು ಆರಾಧಿಸುತ್ತಾರೆ.

ಬಣಜಿಗ

೪೦ರಿಂದ ೫೦ ಮನೆಗಳನ್ನು ಹೊಂದಿರುವ ಬಣಜಿಗ ಸಮುದಾಯನ್ನು ಗ್ರಾಮದಲ್ಲಿ ಶೆಟ್ಟರ ಮಂದಿ ಎಂದು ಗುರುತಿಸಲಾಗುತ್ತದೆ. ಬಣಜಿಗರ ಮೂಲವೃತ್ತಿ ವ್ಯಾಪಾರ. ಆ ಹಿನ್ನೆಲೆಯಲ್ಲಿ ಗ್ರಾಮದ ಬಣಜಿಗ ಸಮುದಾಯ ಸಣ್ಣಪುಟ್ಟ ವ್ಯಾಪಾರ ಮುಂದುವರೆಸಿಕೊಂಡು ಬಂದಿದ್ದಾರೆ. ಇವರಲ್ಲಿ ಕೆಲವರು ವ್ಯವಸಾಯ ಹಾಗೂ ಸರಕಾರಿ ನೌಕರಿ ಮಾಡುತ್ತಾರೆ. ಇವರು ಸಹ ವೀರಭದ್ರ ಗುರುಲಿಂಗ ಜಂಗಮ ಪರಂಪರೆ ಹೊಂದಿದ್ದು, ಗ್ರಾಮದ ದೈವಗಳನ್ನು ಹಾಗೂ ಮನೆದೇವರನ್ನು ಪೂಜಿಸುತ್ತಾರೆ.

ಕುಡವಕ್ಕಲಿಗ

೩೦ರಿಂದ ೪೦ ಮನೆಗಳನ್ನು ಹೊಂದಿರುವ ಕುಡವಕ್ಕಲಿಗ ಸಮುದಾಯ ಹೆಸರಿಗೆ ತಕ್ಕಂತೆ ಒಕ್ಕಲುತನವನ್ನೇ ತನ್ನ ಮೂಲವೃತ್ತಿಯನ್ನಾಗಿಸಿಕೊಂಡಿದೆ. ಒಕ್ಕಲಿಗ ಎಂಬ ಸಮುದಾಯ ಮೈಸೂರು ಭಾಗದಲ್ಲಿಯೂ ಇದೆ. ಆದರೆ ಸೊರಟೂರ ಗ್ರಾಮದ ಕುಡವಕ್ಕಲಿಗ ಸಮುದಾಯವು ವೀರಶೈವರಲ್ಲಿಯ ಒಂದು ಉಪಪಂಡಗವಾಗಿದೆ. ಶುಭಕಾರ್ಯಗಳನ್ನು ಮಾಡುವಾಗ ಈ ಸಮುದಾಯಕ್ಕೆ ವಿಶೇಷ ಗೌರವವಿದೆ. ಉದಾಹರಣೆಗೆ ಬಿತ್ತನೆ ಸಂದರ್ಭದಲ್ಲಿ ಗ್ರಾಮದಲ್ಲಿ ಕುಡವಕ್ಕಲಿಗ ಅಥವಾ ಕುರುಬ ಸಮುದಾಯದವರು ಮೊದಲು ಬಿತ್ತನೆ ಮಾಡಿದರೆ ಒಳ್ಳೆಯದು; ಅದರಿಂದ ಮಳೆ-ಬೆಳೆ ಹುಲುಸು ಎಂಬ ನಂಬಿಕೆ ಇದೆ. ಇವರು ಮೈಲಾರಲಿಂಗ, ಗುರುಲಿಂಗ-ಜಂಗಮ ಪರಂಪರೆ ಹೊಂದಿದ್ದು, ಗ್ರಾಮದ ದೈವ ಮತ್ತು ಮನೆದೇವರನ್ನು ಪೂಜಿಸುತ್ತಾರೆ.

ಹಡಪದ (ಕ್ಷೌರಿಕರು)

೧೫ರಿಂದ ೨೦ ಮನೆಗಳನ್ನು ಹೊಂದಿರುವ ಕ್ಷೌರಿಕ ಸಮುದಾಯವು, ಕ್ಷೌರಿಕ ವೃತ್ತಿಯನ್ನೇ ತನ್ನ ಮೂಲವೃತ್ತಿಯನ್ನಾಗಿಸಿದೆ. ಹಿಂದೆ ಕ್ಷೌರಿಕರು ಸಹ ಆಯಾ ಮಾಡುತ್ತಿದ್ದರು. ಅಂದರೆ

ವರ್ಷವಿಡೀ ಮನೆಯವರೆಲ್ಲರ ಕ್ಷೌರವನ್ನು ಕ್ಷೌರಿಕ ಮಾಡಿದರೆ, ರೈತ ಸುಗ್ಗಿಯ ಸಮಯದಲ್ಲಿ ತಾನು ಬೆಳೆದ ಎಲ್ಲಾ ಬೆಳೆಗಳ ಫಸಲನ್ನು ನಿರ್ದಿಷ್ಟ ಪ್ರಮಾಣದಲ್ಲಿ ಕ್ಷೌರಿಕನಿಗೆ ಕೊಡುತ್ತಿದ್ದನು. ಇದು ಪರಸ್ಪರ ಅವಲಂಬನೆ, ಸಹಕಾರ ಹಾಗೂ ಬಾಂಧವ್ಯದ ಕೊಂಡಿಯಾಗಿತ್ತು. ಆದರೆ ಆಧುನಿಕ ಕಾಲಘಟ್ಟದಲ್ಲಿ ಅದು ಇಲ್ಲವಾಗಿದೆ. ಆದರೂ ಗ್ರಾಮದಲ್ಲಿ ಕೆಲವು ಮನೆತನಗಳಲ್ಲಿ ಆಯಾ ಪದ್ಧತಿ ಕಂಡುಬರುತ್ತದೆ. ಇವರು ವೀರಭದ್ರ ಗುರುಲಿಂಗ ಜಂಗಮ ಪರಂಪರೆಯ ಜೊತೆಗೆ ಗ್ರಾಮದೈವ ಮತ್ತು ಮನೆದೇವರನ್ನು ಪೂಜಿಸುತ್ತಾರೆ.

ಮರಾಠ

ಸುಮಾರು ೬೦ರಿಂದ ೭೦ ಮನೆಗಳನ್ನು ಹೊಂದಿರುವ ಮರಾಠ ಸಮುದಾಯವು ಒಕ್ಕಲುತನವನ್ನೇ ತನ್ನ ಮೂಲವೃತ್ತಿಯನ್ನಾಗಿಸಿಕೊಂಡಿದೆ. ಇತ್ತೀಚೆಗೆ ಕೆಲವರು ಸರಕಾರಿ ನೌಕರಿಯಲ್ಲಿದ್ದಾರೆ. ಮರಾಠ ಸಮುದಾಯದ ಛತ್ರಪತಿ ಶಿವಾಜಿ ಮಹಾರಾಜರು ಸೊರಟೂರ ಮೂಲದವರು ಎಂಬುದು ಈ ಸಮುದಾಯದ ವಿಶೇಷ. ಇವರು ಸಹ ಪಂಡರಪುರ ವಿಠೋಬಾ ಹಾಗೂ ಯಲ್ಲಮ್ಮ ಸೇರಿದಂತೆ ಗ್ರಾಮದ ದೈವಗಳ, ಮನೆದೇವರ ಭಕ್ತರಾಗಿದ್ದಾರೆ. ಗ್ರಾಮದ ಶತಾಯುಷಿ ಶಂಕ್ರಪ್ಪ ಮಲ್ಲಾರಿ ಇದೇ ಸಮುದಾಯದವರಾಗಿದ್ದಾರೆ. ಸೊರಟೂರ ಮಂಡಳದ ಪ್ರಥಮ ಸರಪಂಚರಾದ ತಿರಕಪ್ಪ ಮಿರಗಾಣಿಯವರು ಇದೇ ಸಮುದಾಯ ದವರಾಗಿದ್ದಾರೆ.

ವಾಲ್ಮೀಕಿ

ಸುಮಾರು ೭೦-೭೫ ಮನೆಗಳನ್ನು ಹೊಂದಿರುವ ವಾಲ್ಮೀಕಿ ಸಮುದಾಯವು ಮೂಲ ಬೇಡ ವೃತ್ತಿಯದಾಗಿದ್ದು, ಈಗ ಕೃಷಿ ಹಾಗೂ ಕೃಷಿ ಕಾರ್ಮಿಕರಾಗಿದ್ದಾರೆ. ಇತ್ತೀಚೆಗೆ ಕೆಲವರು ಸರ್ಕಾರಿ ನೌಕರಿಗೆ ಸೇರುತ್ತಿದ್ದಾರೆ. ಗ್ರಾಮದ ಪ್ರಥಮ ಪಿಎಚ್.ಡಿ. ಪದವಿ ಪಡೆದ ಡಾ. ಎಸ್.ಡಿ. ಕಟಗಿ ಇದೇ ಸಮುದಾಯದವರಾಗಿದ್ದಾರೆ. ವಾಲ್ಮೀಕಿಯವರು ಯಲ್ಲಮ್ಮ, ಹುಲಿಗೆಮ್ಮ ಸೇರಿದಂತೆ ಗ್ರಾಮದ ದೈವಗಳನ್ನು ಹಾಗೂ ಮನೆದೇವರನ್ನು ಪೂಜಿಸುತ್ತಾರೆ. ಗ್ರಾಮಕ್ಕೆ ಹುಲುಸು ತರುವಲ್ಲಿ ಯಶಸ್ವಿಯಾದ ವೀರ ವಾಲಿಖಾರ ಇದೇ ಸಮುದಾಯದವನಾಗಿದ್ದಾನೆ.

ಕುರುಬ

ಸುಮಾರು ೧೦೦ಕ್ಕೂ ಹೆಚ್ಚು ಕುಟುಂಬಗಳಿರುವ ಕುರುಬ ಸಮುದಾಯದಲ್ಲಿ ಹತ್ತಿ ಕಂಕಣ ಮತ್ತು ಉಣ್ಣೆಕಂಕಣ ಎಂಬ ಎರಡು ಪಂಗಡಗಳಿವೆ. ಈ ಸಮುದಾಯದ ಬಹುಪಾಲು ಜನ ಕೃಷಿಕರಾಗಿದ್ದಾರೆ. ಕುರಿ ಮತ್ತು ಮೇಕೆ ಸಾಕಾಣಿಕೆಯವರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇತ್ತೀಚೆಗೆ ಕೆಲವರು ಸರಕಾರಿ ನೌಕರಿಗೆ ಸೇರಿದ್ದಾರೆ. ಶುಭ ಕಾರ್ಯಗಳನ್ನು ಮಾಡುವಾಗ ಕುರುಬ ಸಮುದಾಯದ ವ್ಯಕ್ತಿಗೆ ವಿಶೇಷ ಗೌರವವಿದೆ. ಉದಾ: ಗುದ್ದಲಿ ಪೂಜೆ ಮಾಡುವಾಗ, ವ್ಯವಹಾರ ಮಾಡುವಾಗ ಕುರುಬರು ಇದ್ದರೆ ಒಳ್ಳೆಯದು ಎಂಬ ಭಾವನೆ ಸಮಾಜದಲ್ಲಿದೆ. ಕುರುಬ ಸಮುದಾಯ ಹಿಂದುಳಿದ ಸಮುದಾಯವಾದರೂ ವಿಶೇಷ ಗೌರವವಿದೆ. ಕುರುಬರು

ಎಂದರೆ ಕುರಿಕಾಯುವವರು, ಕಾಯಕನಿಷ್ಠರು, ಅಡವಿಯಲ್ಲಿರುವ ಇವರು ದುಷ್ಟಸಂಕುಚಿತ ವಿಚಾರ ಅರಿಯದ ಮುಗ್ಧರು ಎಂಬುದು ಇದಕ್ಕೆ ಕಾರಣವಾಗಿರಬಹುದು. ಗ್ರಾಮದ ದೈವಗಳನ್ನು ಹಾಗೂ ಮನೆದೇವರನ್ನು ಪೂಜಿಸುವ ಇವರು ಯಲ್ಲಮ್ಮ, ಹುಲಿಗೆಮ್ಮ, ಕರಿಸಿದ್ದ ಮತ್ತು ಮೈಲಾರಲಿಂಗನ ಆರಾಧಕರಾಗಿದ್ದಾರೆ.

ಜೈನರು

ಸುಮಾರು ೭೦-೮೦ ಮನೆಗಳನ್ನು ಹೊಂದಿರುವ ಜೈನ ಸಮುದಾಯದ ಪ್ರಮುಖ ಉದ್ಯೋಗ ಕೃಷಿಯೇ ಆಗಿದೆ. ಇತ್ತೀಚೆಗೆ ಕೆಲವರು ಸರಕಾರಿ ನೌಕರಿ ಪಡೆಯುತ್ತಿದ್ದಾರೆ. ಪಾರ್ಶ್ವನಾಥ ಮಹಾವೀರರ ಜೈನ ಪರಂಪರೆಯ ಆರಾಧಕರಾದ ಇವರು ಯಲ್ಲಮ್ಮನ ಭಕ್ತರಾಗಿದ್ದು, ಗ್ರಾಮದ ದೈವಗಳ ಆರಾಧಕರೂ ಆಗಿದ್ದಾರೆ. ಸೊರಟೂರ ಮಂಡಳ ಪಂಚಾಯತಿಯಲ್ಲಿ ದೀರ್ಘಕಾಲಿಕ ಚೇರಮನ್ನರಾದ (೧೯೬೮-೧೯೮೩) ಶ್ರೀ ದೇವೇಂದ್ರಪ್ಪ ಮಲ್ಲಾಡದ ಇದೇ ಸಮುದಾಯದವರಾಗಿದ್ದಾರೆ.

ಮುಸ್ಲಿಮರು

ಸುಮಾರು ೩೦೦ಕ್ಕೂ ಹೆಚ್ಚು ಮನೆಗಳನ್ನು ಹೊಂದಿರುವ ಮುಸ್ಲಿಂ ಸಮುದಾಯದ ಪ್ರಮುಖ ಉದ್ಯೋಗ ಕೂಲಿಯಾಗಿದೆ. ಅಂದರೆ ಕೃಷಿ ಅಥವಾ ಇತರೆ ಕಾರ್ಮಿಕ ಕೆಲಸಗಳನ್ನು ಮಾಡುತ್ತಾರೆ. ಮುಸ್ಲಿಂ ಸಮುದಾಯದ ಬಹುಪಾಲು ಕುಟುಂಬಗಳಿಗೆ ಜಮೀನು ಇಲ್ಲ. ಕೆಲವರಿಗೆ ಇದ್ದರೂ ೧ ಎಕರೆ, ೨ ಎಕರೆ ಮಾತ್ರ. ಆದ್ದರಿಂದ ಇವರು ಕೂಲಿಗಾಗಿ ರೈತರನ್ನು ಅವಲಂಬಿಸಿದರೆ, ರೈತರು ಕೃಷಿ ಕೆಲಸಕ್ಕಾಗಿ ಇವರನ್ನೇ ಅವಲಂಬಿಸಿದ್ದಾರೆ. ಇತ್ತೀಚೆಗೆ ಈ ಸಮುದಾಯದಲ್ಲಿ ಕೆಲವರು ನೌಕರಿ, ವ್ಯಾಪಾರ, ಸ್ವಂತ ಕೆಲಸಗಳನ್ನು ಮಾಡುತ್ತಾ ಸ್ವಾವಲಂಬಿಗಳಾಗುತ್ತಿದ್ದಾರೆ. ಪಾರಂಪರಿಕ ಕಸುಬುಗಳಾದ ಬಡಿಗೆತನದ ಕೆಲಸವನ್ನು ಕೆಲವರು ಮಾಡುತ್ತಾರೆ.

ಪಂಚಾಳ

ಸುಮಾರು ೩೦-೩೫ ಮನೆಗಳನ್ನು ಹೊಂದಿರುವ ಪಂಚಾಳ ಸಮುದಾಯವನ್ನು ವಿಶ್ವಕರ್ಮ ಸಮುದಾಯ ಎಂತಲೂ ಕರೆಯುತ್ತಾರೆ. ಇವರಲ್ಲಿ ಅಕ್ಕಸಾಲಿಗ, ಬಂಗಾರ, ಬೆಳ್ಳಿ, ಆಭರಣ ಮಾಡುವವರು ಬಡಿಗ, ಕಟ್ಟಿಗೆ ಕೆಲಸ ಮಾಡುವವರು ಕಮ್ಮಾರ, ಕಬ್ಬಿಣ ಕೆಲಸ ಮಾಡುವವರು ಇದ್ದಾರೆ. ಈ ಸಮುದಾಯದ ಬಹುಪಾಲು ಜನರು ಪಾರಂಪರಿಕ ಕುಲಕಸುಬುಗಳಾದ ಅಕ್ಕಸಾಲಿ, ಬಡಿಗತನ, ಕಮ್ಮಾರಿಕೆಯ ವೃತ್ತಿಗಳನ್ನೇ ಮಾಡುತ್ತಾರೆ. ಮೌನೇಶ್ವರನ ಆರಾಧಕರಾದ ಇವರು ಮನೆದೇವರು ಮತ್ತು ಗ್ರಾಮದೈವಗಳನ್ನು ಆರಾಧಿಸುತ್ತಾರೆ.

ಹರಿಜನರು

ಸುಮಾರು ೪೦-೫೦ ಮನೆಗಳನ್ನು ಹೊಂದಿರುವ ಈ ಸಮುದಾಯದ ಮೂಲವೃತ್ತಿ ಚಮ್ಮಾರಿಕೆ. ಆದರೆ ಇಂದು ಆ ಸಮುದಾಯದಲ್ಲಿ ಚಮ್ಮಾರಿಕೆ ಕೆಲಸ ಮಾಡುವವರು ಇಲ್ಲ. ಕೆಲವರು ಕೃಷಿ, ಸರಕಾರಿ ನೌಕರಿ, ವ್ಯಾಪಾರ ಹಾಗೂ ಸ್ವಉದ್ಯೋಗಗಳನ್ನು ಮಾಡುತ್ತಿದ್ದಾರೆ.

ಸಮುದಾಯದ ಕೆಲವರು ಪಾರಂಪರಿಕ ಕುಲಕಸುಬಾದ ಚಮ್ಮಾರಿಕೆಯ ಕೆಲಸವನ್ನು ಅಗತ್ಯಕ್ಕನುಗುಣವಾಗಿ ಮಾಡುತ್ತಾ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ದುರುಗಮ್ಮ, ಯಲ್ಲಮ್ಮನ ಭಕ್ತರಾಗಿದ್ದಾರೆ.

ಭಜಂತ್ರಿ

ಕೊರವರು ಎಂದು ಕರೆಯಲ್ಪಡುವ ಈ ಸಮುದಾಯದ ೮–೧೦ ಮನೆಗಳಿವೆ. ಇವರು ತಮ್ಮ ಪಾರಂಪರಿಕ ಕುಲಕಸುಬಾದ ಬುಟ್ಟಿ, ಕಸಬರಿಗೆ ತಯಾರಿಕೆಯ ಕೆಲಸಗಳನ್ನು ಮಾಡುತ್ತಾರೆ. ಹಾಗೂ ಕರಡಿಮಜಲು, (ಸನಾದಿ ಮೇಳ) ವಾದ್ಯ ನುಡಿಸುತ್ತಾರೆ. ಈಗ ಕೆಲವರು ವ್ಯಾಪಾರ ಮಾಡುತ್ತಿದ್ದಾರೆ. ಈ ಚಿಕ್ಕ ಸಮುದಾಯ ಗ್ರಾಮದ ಸಕ್ರಿಯ ರಾಜಕಾರಣದಲ್ಲಿ ಇರದಿದ್ದರೂ ಸರಕಾರದ ಮೀಸಲಾತಿ ನಿಯಮದ ಫಲವಾಗಿ ದೇವೇಂದ್ರಪ್ಪ ಭಜಂತ್ರಿಯವರು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿರುವುದು ಆಕಸ್ಮಿಕ ಎಂದು ಹೇಳಬಹುದು.

ಉಪ್ಪಾರ

೫ ಮನೆಗಳನ್ನು ಹೊಂದಿರುವ ಈ ಸಮುದಾಯವು ಬಹು ಚಿಕ್ಕ ಸಮುದಾಯವಾಗಿದ್ದು, ಕೃಷಿ ಉದ್ಯೋಗ ಮಾಡುತ್ತಾರೆ. ಯಲ್ಲಮ್ಮನ ಭಕ್ತರಾದ ಇವರು ಗ್ರಾಮದ ಮಾರುತಿ ದೇವರ ಪೂಜಾರಿಗಳಾಗಿದ್ದಾರೆ.

ಸುಣಗಾರ

ಗ್ರಾಮದಲ್ಲಿ ಸುಣಗಾರ ಎಂದು ಕರೆಯಲ್ಪಡುವ ಈ ಸಮುದಾಯವು ಬಾರಕೇರ ಅಥವಾ ಗಂಗಾಮತಸ್ಥ ಜಾತಿಗೆ ಸೇರುತ್ತದೆ. ಈ ಸಮುದಾಯದ ಒಂದೇ ಮನೆತನ ಇದ್ದು, ೪–೫ ಕುಟುಂಬ ಹೊಂದಿದೆ. ಪಾರಂಪರಿಕ ಕುಲಕಸುಬಾದ ಸುಣ್ಣ ತಯಾರಿಕೆ ಇವರ ಮೂಲ ವೃತ್ತಿಯಾಗಿದೆ. ಇತ್ತೀಚೆಗೆ ಕೆಲವರು ಸರಕಾರಿ ನೌಕರಿ ಸೇರಿದ್ದಾರೆ. ತಮ್ಮ ಮೂಲವೃತ್ತಿ ಉಳಿಸಿಕೊಂಡು ಬಂದಿರುವುದು ಈ ಸಮುದಾಯದ ವಿಶೇಷತೆ.

ಕಲಾಲ

ಗ್ರಾಮದಲ್ಲಿರುವ ಕಲಾಲ ಸಮುದಾಯವು ಮೂಲತಃ ಸೂರ್ಯವಂಶಿ ಕ್ಷತ್ರೀಯ ಸಮುದಾಯಕ್ಕೆ ಸೇರಿದೆ. ಗ್ರಾಮದಲ್ಲಿ ಒಂದೇ ಮನೆತನವಿದ್ದು, ೪–೫ ಕುಟುಂಬಗಳಿವೆ. ಕೆಲವರು ವ್ಯಾಪಾರ ಮಾಡುತ್ತಿದ್ದಾರೆ. ಇತ್ತೀಚೆಗೆ ಕೆಲವರು ನೌಕರಿ ಸೇರಿದ್ದಾರೆ.

೫.೨. ವರ್ಣವ್ಯವಸ್ಥೆ ಮತ್ತು ಸಾಮಾಜಿಕ ಸಾಮರಸ್ಯ

ವರ್ಣವ್ಯವಸ್ಥೆ ಶ್ರೇಣೀಕರಣ ಭಾರತದ ಅನಾದಿಕಾಲದಿಂದಲೂ ಉಳಿದುಕೊಂಡು ಬಂದಿರುವ ಪರಂಪರೆ ಈ ಜಾತಿಯತೆ ಅಂದಾಭಿಮಾನದಿಂದಾಗಿ ಆಗಾಗ ಅಂತಃಕಲಹಗಳು ಕೇಳಿಬರುತ್ತವೆ. ಇದು ಸಾಮಾಜಿಕ ಸ್ವಾಸ್ಥ್ಯಕ್ಕೆ ವಿರುದ್ಧವಾದುದು ಆದರೂ ಆಗಾಗ ಅಲ್ಲಲ್ಲಿ ಅಂತಹ ಘಟನೆಗಳು ನಡೆಯುತ್ತಲೇ ಇರುತ್ತವೆ. ಆ ಹಿನ್ನೆಲೆಯಲ್ಲಿ ನೋಡಿದಾಗ ಸೊರಟೂರ ಗ್ರಾಮ ಜಾತಿಯತೆಯ ನಡುವೆಯೂ ಜಾತ್ಯಾತೀತತೆಯನ್ನು ಕಾಯ್ದುಕೊಂಡಿದೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಏಕೆಂದರೆ ಗ್ರಾಮದಲ್ಲಿರುವ ಎಲ್ಲಾ ಮತದವರು ತಮ್ಮ ತಮ್ಮ ಮತಧರ್ಮದ ಸಂಪ್ರದಾಯ

ಆಚರಣೆ ವಿಧಿ-ವಿಧಾನಗಳನ್ನು ಕಟ್ಟುನಿಟ್ಟಾಗಿ ಆಚರಿಸಿಕೊಳ್ಳುತ್ತಾರೆ. ಮಹಾವೀರ ಜಯಂತಿ, ಕನಕದಾಸ ಜಯಂತಿ, ಪೈಗಂಬರ ಜಯಂತಿ, ಅಂಬೇಡ್ಕರ್ ಜಯಂತಿ, ವಾಲ್ಮೀಕಿ ಜಯಂತಿ, ಬಸವೇಶ್ವರ ಜಯಂತಿ ಹೀಗೆ ಗ್ರಾಮದಲ್ಲಿರುವ ಎಲ್ಲಾ ಜನಾಂಗದವರು ತಮ್ಮ ತಮ್ಮ ಮತ ಧರ್ಮದ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಇದನ್ನು ಸಂಕುಚಿತ ಭಾವನೆಯಿಂದ ನೋಡಿದರೆ ಸಮಾಜ ವಿಘಟನೆಯಾಗುತ್ತಿದೆ ಎಂತಲೂ ಅನ್ನಿಸಬಹುದು. ಆದರೆ ಅದರ ಒಳಹೊಕ್ಕು ನೋಡಿದರೆ ಎಲ್ಲ ಸಮುದಾಯದವರು ಸೇರಿ ಎಲ್ಲ ಜಯಂತಿಗಳನ್ನು ಆಚರಿಸುತ್ತಿರುವುದು, ಅವುಗಳು ಸಾರ್ವತ್ರಿಕ ಧರ್ಮ ಸಭೆಗಳಾಗುತ್ತಿರುವುದು ಕಂಡುಬರುತ್ತದೆ. ಅಷ್ಟೇ ಅಲ್ಲ. ಎಲ್ಲಾ ಧರ್ಮ ಆಚರಣೆಗಳಲ್ಲಿಯು ಭಾವೈಕ್ಯತೆ ಇದೆ. ಮುಸ್ಲಿಮರು ತಮ್ಮ ಧರ್ಮದ ನಮಾಜ್ ಖುರಾನ ಓದುವುದರ ಜೊತೆಗೆ ದುರಗಮ್ಮ, ಭೈರಪ್ಪ, ದ್ಯಾಮಮ್ಮ ಮುಂತಾದ ಹಿಂದೂ ಸಂಪ್ರದಾಯದ ದೇವತೆಗಳಿಗೆ ಎಣ್ಣೆ, ಬತ್ತಿ, ಉದಿನಕಡ್ಡಿ, ಹೂ–ಹಣ್ಣು, ಕಾಯಿ, ಸೀರೆ, ಕುಪ್ಪಸಗಳನ್ನು ಅರ್ಪಿಸಿ ಪೂಜೆ ಸಲ್ಲಿಸಿ ಹರಕೆ ತೀರಿಸುತ್ತಾರೆ. ಮುಸ್ಲಿಮ್ ಸಂಪ್ರದಾಯದ ಮೊಹರಂ ಆಚರಣೆಯ ಬಹುಪಾಲು ಜವಾಬ್ದಾರಿ ಹಿಂದುಗಳ ಹಾಗೂ ಜೈನ ಧರ್ಮದವರದ್ದಾಗಿರುತ್ತದೆ. ರಂಜಾನ್ ತಿಂಗಳಲ್ಲಿ ಹಲವಾರು ಹಿಂದುಗಳೂ ರೋಜಾ ಮಾಡುತ್ತಾರೆ. ರೋಜಾ ಹಿಡಿದ ಮುಸ್ಲಿಂ ಭಕ್ತರಿಗೆ ಗ್ರಾಮದ ಹಿಂದುಗಳು ಊಟದ ವ್ಯವಸ್ಥೆ ಮಾಡುತ್ತಾರೆ.

ರಂಜಾನ್, ಬಕ್ರಿದ್ ಹಾಗೂ ಮೊಹರಂ ಹಬ್ಬಗಳಲ್ಲಿ ಮುಸಲ್ಮಾನ ಬಾಂಧವರು ಹಿಂದುಗಳಿಗೆ ಊಟಕ್ಕೆ ಆಮಂತ್ರಿಸುತ್ತಾರೆ. ಹಿಂದುಗಳು ದೀಪಾವಳಿ, ಮಹಾನವಮಿ, ಸೀಗೆ ಹುಣ್ಣಿಮೆ ಮುಂತಾದ ವಿಶಿಷ್ಟ ಹಬ್ಬಗಳಲ್ಲಿ ಮುಸಲ್ಮಾನ ಬಾಂಧವರಿಗೆ ಊಟಕ್ಕೆ ಆಹ್ವಾನಿಸುತ್ತಾರೆ.

ಗ್ರಾಮದ ಮುಸ್ಲಿಂ ಸಂತ ಖಾಲೆಫಕ್ರು ಉರುಸಿನಲ್ಲಿ ಹಿಂದು ಮಹಿಳೆ ದೀಡ್‌ನಮಸ್ಕಾರ ಹಾಕಿ ಸಕ್ಕರೆ ಓದಿಸಿಕೊಂಡು ಬರುತ್ತಿರುವುದು. ಆ ದಿನ ಮಂಗಳವಾರವಾದ್ದರಿಂದ ಮುಸ್ಲಿಂ ಮಹಿಳೆ ಹಿಂದು ದೇವರಿಗೆ ನೈವೇದ್ಯ ಮತ್ತು ಕಾಯಿ, ಕರ್ಪೂರ ಅರ್ಪಿಸುತ್ತಿರುವುದನ್ನು ಕಂಡರೆ ಗ್ರಾಮದ ಸಾಮಾಜಿಕ ಸಾಮರಸ್ಯದ ಅರಿವಾಗುತ್ತದೆ. ಪ್ರತಿವರ್ಷ ಯುಗಾದಿ ಪಾಡ್ಯದ ದಿನ ಗ್ರಾಮಸ್ಥರೆಲ್ಲಾ ಸೇರಿ ಸಾಮೂಹಿಕ ವಿವಾಹದ ಕಾರ್ಯ ನಿರ್ವಹಿಸುತ್ತಿರುವುದನ್ನು ಪರಿಪೂರ್ಣವಾಗಿ ಗಮನಿಸಿದರೆ ಜಾತಿಯತೆ ಎಂಬುದು ಇಲ್ಲವೇ ಇಲ್ಲ ಎಂದು ಸ್ಪಷ್ಟವಾಗುತ್ತದೆ. ಆದರೂ ಸಹ ದೀಪದ ಕೆಳಗೆ ಕತ್ತಲು ಇರುವಂತೆ ಕೆಲ ಸ್ವಾರ್ಥ ಸಾಧಕರು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ, ಅಧಿಕಾರದ ಲಾಲಸೆಗಾಗಿ ಪರೋಕ್ಷವಾಗಿ ಸಮುದಾಯಗಳಲ್ಲಿ ದುರಾಭಿಮಾನ ಬೆಳೆಸುತ್ತಿರುವುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದು. ಆದರೆ ಇದೆಲ್ಲದರ ನಡುವೆಯು ಸೊರಟೂರ ಗ್ರಾಮ ಭಾವೈಕ್ಯತೆಯ ತಾಣ ಎಂದು ಹೇಳಬಹುದಾಗಿದೆ.

೫.೩. ಜಾತ್ಯಾತೀತತೆಯಲ್ಲಿ ಬೇರೂರಿರುವ ಜಾತಿಯತೆ

ಗ್ರಾಮದಲ್ಲಿರುವ ವಿವಿಧ ಸಮುದಾಯಗಳ ವಿವಿಧ ಕಾರ್ಯಕ್ರಮಗಳನ್ನು ಗಮನಿಸಿದಾಗ ಜಾತ್ಯಾತೀತತೆಯಲ್ಲಿ ಜಾತಿಯತೆ ಬೇರೂರಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ಮಹಾವೀರ ಜಯಂತಿ ಕನಕದಾಸ ಜಯಂತಿ, ಪೈಗಂಬರ್ ಜಯಂತಿ, ಅಂಬೇಡ್ಕರ್ ಜಯಂತಿ ವಾಲ್ಮೀಕಿ ಜಯಂತಿ, ಬಸವೇಶ್ವರ ಜಯಂತಿ ಹೀಗೆ ಗ್ರಾಮದಲ್ಲಿರುವ ಎಲ್ಲಾ ಜನಾಂಗದವರು ತಮ್ಮ ಜನಾಂಗದ ನೇತಾರರ ಜಯಂತಿ ಆಚರಿಸುತ್ತಾರೆ.

ಹಿಂದುಳಿದ ದಲಿತ ಜನಾಂಗದವರು ವಾಲ್ಮೀಕಿ, ಅಂಬೇಡ್ಕರ್, ಕನಕದಾಸ ಜಯಂತಿಗಳನ್ನು ಗ್ರಾಮದ ಎಲ್ಲಾ ಸಮುದಾಯದ ಪ್ರಮುಖರನ್ನು ಆಹ್ವಾನಿಸಿ ಜಾತ್ಯಾತೀತವಾಗಿ ಆಚರಿಸುತ್ತಾರೆ. ಇದಕ್ಕೆ ಎಲ್ಲ ಜನಾಂಗದವರು ಬಂದಿರುತ್ತಾರೆ. ಹಿಂದುಳಿದ ಜನಾಂಗದ ಸಂಘಟಿಕರು ವಿಶೇಷವಾಗಿ ಗ್ರಾಮದ ಹಿರೇಮಠರು, ಗೌಡರು, ಕುಲಕರ್ಣಿಯರು ಸೇರಿದಂತೆ ಮೇಲ್ವರ್ಗದವರನ್ನೇ ಅತಿಥಿಗಳನ್ನಾಗಿ ಆಹ್ವಾನಿಸಿ ವೇದಿಕೆಯಲ್ಲಿ ಕೂಡಿಸುತ್ತಾರೆ. ದಲಿತ, ಹಿಂದುಳಿದ ಜನಾಂಗದವರು ಸಂಘಟಿಸಿದ ಕಾರ್ಯಕ್ರಮಗಳಲ್ಲಿ ಮೇಲ್ವರ್ಗದ ಜನ ಅತಿಥಿಗಳಾಗಿ ಭಾಗವಹಿಸುವುದು ಇವರಿಗೆ ನೀತಿಬೋಧೆ ಮಾಡುವುದನ್ನು ಗಮನಿಸಿದರೆ ಗ್ರಾಮದಲ್ಲಿ ಸಾಮಾಜಿಕ ಸಾಮರಸ್ಯ ನೆಲೆಯೂರಿದೆ ಎಂದೇ ಕಾಣುತ್ತದೆ.

ಆದರೆ ಇದಕ್ಕೆ ವ್ಯತಿರಿಕ್ತವಾದ ಘಟನೆಗಳೂ ನಡೆದಿವೆ. ಗ್ರಾಮದಲ್ಲಿ ಲಿಂಗಾಯತ ಸಮುದಾಯ ದವರು ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ಆಯೋಜಿಸುತ್ತಾರೆ; ಆದರೆ ಅವರು ಗ್ರಾಮದ ಇತರ ಸಮುದಾಯದ ಜನರನ್ನು ಅದರಲ್ಲೂ ಹಿಂದುಳಿದ ದಲಿತ ಜನಾಂಗದವರನ್ನು ಆಹ್ವಾನಿಸದೇ ಇರುವುದು ಕ್ಷೇತ್ರ ಕಾರ್ಯದಿಂದ ತಿಳಿಯುತ್ತದೆ. ಇದರ ಸೂಕ್ಷ್ಮತೆಯನ್ನು ಅರಿತಾಗ ಕೆಲವು ಅಂಶಗಳು ಗಮನಕ್ಕೆ ಬರುತ್ತದೆ.

ಹಿಂದುಳಿದ ಜನಾಂಗದವರು ಮೇಲ್ವರ್ಗದವರನ್ನು ಆಹ್ವಾನಿಸಿ ಸತ್ಕರಿಸಬಹುದು. ಆದರೆ ಮೇಲ್ವರ್ಗದವರು ತಮ್ಮ ಕಾರ್ಯಕ್ರಮದಲ್ಲಿ ಕೆಳಜಾತಿಯವರನ್ನು ಆಹ್ವಾನಿಸುವ 'ನಾವು ಮೇಲ್ವರ್ಗದವರು' ಎಂಬ ಮನೋಭಾವನೆ ಇದ್ದಂತೆ ಕಾಣುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಆರ್ಥಿಕತೆ, ಅಧಿಕಾರ, ಜ್ಞಾನ ಮುಂತಾದವುಗಳಲ್ಲಿ ಪ್ರಬಲರಾದ ಹಿಂದುಳಿದ ದಲಿತರನ್ನು ಆಹ್ವಾನಿಸುತ್ತಿರುವುದು ಕಂಡುಬರುತ್ತಿದೆ. ಆದರೆ ಇದು ಅನಿವಾರ್ಯವೇ ಹೊರತು ಸಾಮಾಜಿಕ ಸಾಮರಸ್ಯದ ಸಂಕೇತವಲ್ಲ.

ಇನ್ನುಳಿದಂತೆ ಗ್ರಾಮದಲ್ಲಿರುವ ಹೋಟಲ್‌ಗಳು, ಗಿರಣಿಗಳು, ಬಾವಿಗಳು, ಸೇರಿದಂತೆ ವಿವಿಧ ಸೇವೆಗಳಲ್ಲಿ ಯಾವುದೇ ಬೇಧಭಾವ ಕಂಡುಬರುವುದಿಲ್ಲ. ಜಾತಿಯತೆಯ ಪ್ರಜ್ಞೆ ಬಹಿರಂಗವಾಗಿ, ಸಾರ್ವತ್ರಿಕವಾಗಿ ಕಂಡುಬರುವುದಿಲ್ಲ. ಅದು ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕುಚೋದ್ಯವಾಗಿ ಉಳಿದುಕೊಂಡಿದೆ.

೫.೪. ಕುಟುಂಬ ವ್ಯವಸ್ಥೆ

ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ತಂದು ಕೊಡುವುದು ಕುಟುಂಬ. ಏಕೆಂದರೆ ಮಾನವನ ವ್ಯಕ್ತಿತ್ವ ರೂಪಿಸುವ ಮೊದಲ ಸಂಸ್ಥೆ ಎಂದರೆ ಕುಟುಂಬವೆನ್ನಬಹುದು. ಕುಟುಂಬ ಒಂದು ಸಾಮುದಾಯಿಕ ವ್ಯವಸ್ಥೆಯಲ್ಲಿ ರೂಪ ತಾಳುತ್ತದೆ.

ಇದು ಚಿಕ್ಕದಾದ ಸಾಮಾಜಿಕ ಘಟಕವಾಗಿದ್ದು, ತಂದೆ ತಾಯಿ ಮತ್ತು ಮಕ್ಕಳಿಂದ ಕೇಂದ್ರೀಕೃತವಾಗಿರುತ್ತದೆ. ಮಗುವಿನ ಜನನಕ್ಕೆ ಕುಟುಂಬವೇ ಪ್ರಥಮ ಸಾಮಾಜಿಕ ಪರಿಸರವಾಗುತ್ತದೆ.

ಸಮ್ನರ ಮತ್ತು ಕೆಲ್ಲರ್ ಎಂಬ ಸಮಾಜಶಾಸ್ತ್ರಜ್ಞರು "ರಕ್ತ ಸಂಬಂಧಿಗಳಿಂದ ಕೂಡಿದ ಮತ್ತು ಕನಿಷ್ಠ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ" ಎಂದು ಹೇಳಿದ್ದಾರೆ. ಈಲಿಯಟ್ ಮತ್ತು ಮೆರಿಲ್ ಕುಟುಂಬವು ಜೈವಿಕ ಘಟಕವಾಗಿದ್ದು, ಗಂಡ ಹೆಂಡತಿ ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ. ಅಂದರೆ ಕುಟುಂಬವು ಒಂದು ಚಿಕ್ಕ ಘಟಕವಾಗಿದ್ದು, ಸಂಸಾರಿಕ ರೂಪದಲ್ಲಿ ಗಂಡ ಹೆಂಡತಿಯರಲ್ಲಿ ವಂಶಾಭಿವೃದ್ಧಿಯ ಜೊತೆಗೆ ಲೈಂಗಿಕ ಬಾಂಧವ್ಯಗಳನ್ನು ರೂಪಿಸುವ ಗುಣಲಕ್ಷಣಗಳನ್ನು ಹೊಂದಿ ಸಮಾಜದ ಎಲ್ಲ ಪ್ರಕಾರಗಳಲ್ಲಿ ಒಂದು ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ.[೧] ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದ ಕುಟುಂಬ ವ್ಯವಸ್ಥೆಯನ್ನು ನೋಡಬಹುದು.

ಪಿತೃಪ್ರಧಾನ ಕುಟುಂಬ ಪದ್ಧತಿ

ನಮ್ಮ ದೇಶದ ಬಹುತೇಕ ಹಳ್ಳಿಗಳಲ್ಲಿ ಇರುವಂತೆ ಸೊರಟೂರ ಗ್ರಾಮದಲ್ಲಿಯೂ ಪಿತೃಪ್ರಧಾನ ಕುಟುಂಬ ಪದ್ಧತಿ ಇದೆ. ತಂದೆ ಮನೆಯ ಹಿರಿಯನಾದರೆ ಅವನ ಹೆಂಡತಿ, ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳು ಎಲ್ಲರೂ ಅವನಿಗೆ ಅನುವರ್ತಿಗಳಾಗಿ ನಡೆದುಕೊಳ್ಳುತ್ತಾರೆ. ಕುಟುಂಬ ಅಸ್ತಿತ್ವ ಇವನ ಹಿರಿತನದಲ್ಲೇ ಗುರುತಿಸಲ್ಪಡುತ್ತದೆ. ಮನೆಯ ಯಜಮಾನ ಮರಣ ಹೊಂದಿದರೆ ಅವನ ಹಿರಿಯ ಮಗ ಮನೆಯ ಜವಾಬ್ದಾರಿ ಹೊತ್ತುಕೊಳ್ಳುತ್ತಾನೆ. ಅದರ ದ್ಯೋತಕವಾಗಿ ಶವಸಂಸ್ಕಾರದ ಸಂದರ್ಭದಲ್ಲಿ ಮರಣ ಹೊಂದಿದ ವ್ಯಕ್ತಿಯ ರುಮಾಲು/ಟೋಪಿಯನ್ನು ಅವನ ಹಿರಿಯ ಮಗನ ತಲೆಯ ಮೇಲೆ ರುದ್ರಭೂಮಿಯಲ್ಲಿಯೇ ಹಾಕುತ್ತಾರೆ. ಅಂತಹ ಸಂದರ್ಭದಲ್ಲಿ ಮಗ ಅತೀ ಚಿಕ್ಕವಯಸ್ಸಿನವನಾಗಿದ್ದು, ಮಗಳು ವಯಸ್ಕಳಾಗಿದ್ದರೂ ಆ ಚಿಕ್ಕಮಗನಿಗೆ ಜವಾಬ್ದಾರಿಯ ಹಿರಿತನದ ರುಮಾಲ/ಟೋಪಿ ಹಾಕಲಾಗುತ್ತದೆ. ಇದು ಪಿತೃಪ್ರಧಾನ/ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯ ಕಟ್ಟುನಿಟ್ಟಾದ ಆಚರಣೆಯಾಗಿದೆ. ಇದು ಸೊರಟೂರ ಗ್ರಾಮದಲ್ಲಿ ಈಗಲೂ ಮುಂದುವರೆದಿದೆ. ಆದರೆ ಸಾಂಪ್ರದಾಯಿಕವಾಗಿ ಪಿತೃ ಪ್ರಧಾನ ವ್ಯವಸ್ಥೆ ಇದ್ದರೂ ಗ್ರಾಮದಲ್ಲಿ ಸುಶಿಕ್ಷಿತ ಹಾಗೂ ತಿಳುವಳಿಕೆಯುಕ್ತ ಕುಟುಂಬದಲ್ಲಿ ಮಹಿಳೆ ಕುಟುಂಬದ ಜವಾಬ್ದಾರಿ ನಿರ್ವಹಿಸಿ ಹಾಗೂ ನಿರ್ಣಯಗಳಲ್ಲಿ ಪಾಲ್ಗೊಳ್ಳುತ್ತಾಳೆ ಅಥವಾ ಪರೋಕ್ಷವಾಗಿ (ಮನೆಯ ಒಳಗೆ) ಎಲ್ಲಾ ಸಲಹೆ ಸೂಚನೆ ನೀಡುವ ಪರಿಪಾಠವು ಇದೆ.

ಮಾತೃಪ್ರಧಾನ ಕುಟುಂಬ ಪದ್ಧತಿ

ಪ್ರಸಕ್ತ ಸಂದರ್ಭದಲ್ಲಿ ಸೊರಟೂರ ಗ್ರಾಮದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇಲ್ಲ. ಆದರೆ ಗ್ರಾಮದ ದಲಿತ ಸಮುದಾಯದಲ್ಲಿ ದೇವದಾಸಿ ಪದ್ಧತಿ ಆಚರಣೆಯಲ್ಲಿದ್ದಾಗ ಇದು ರೂಢಿಯಲ್ಲಿತ್ತು. ಆದರೆ ಕಳೆದ ೨-೩ ದಶಕಗಳಿಂದ ಗ್ರಾಮದಲ್ಲಿ ದೇವದಾಸಿ ಪದ್ಧತಿಯೂ ಇಲ್ಲ. ಹಾಗೂ ಸಾಂಪ್ರದಾಯಿಕವಾದ ಮಾತೃಪ್ರಧಾನ ಕುಟುಂಬ ಪದ್ಧತಿ ಆಚರಣೆಯಲ್ಲಿಲ್ಲ.

ಅವಿಭಕ್ತ ಕುಟುಂಬ ಪದ್ಧತಿ

ಅವಿಭಕ್ತ ಕುಟುಂಬಗಳೇ ಹೆಚ್ಚಾಗಿದ್ದ ಕಾಲವೊಂದಿತ್ತು. ಆದರೆ ಆಧುನಿಕತೆಯ ಪ್ರಭಾವ ಹಾಗೂ ವ್ಯಕ್ತಿಗತ ಆಶೆ-ಆಕಾಂಕ್ಷೆಗಳ ಮೇಲಿನ ಅತಿಯಾದ ಅಭಿಮಾನದಿಂದಾಗಿ ಇಂದು ಅವಿಭಕ್ತ ಕುಟುಂಬಗಳು ಕರಗುತ್ತಿವೆ. ಗ್ರಾಮದಲ್ಲಿ ಈಗ ೨-೩ ದಶಕಗಳ ಹಿಂದೆ ಅವಿಭಕ್ತ ಕುಟುಂಬಗಳು ಸರ್ವೇಸಾಮಾನ್ಯವಾಗಿ ಎಲ್ಲಾ ಸಮುದಾಯಗಳಲ್ಲಿ ಅಧಿಕ ಪ್ರಮಾಣದಲ್ಲಿದ್ದವು. ಆದರೆ ಈಗ ೧೦-೧೫ ವರ್ಷಗಳಿಂದೀಚೆಗೆ ಕುಟುಂಬಗಳು ವಿಭಕ್ತವಾಗುತ್ತಿವೆ. ಸರ್ಕಾರ ಪ್ರತಿ ಕುಟುಂಬಕ್ಕೊಂದು ಪಡಿತರಚೀಟಿ(ರೇಷನ್‌ಕಾರ್ಡ್) ಕೊಡಲು ಪ್ರಾರಂಭಿಸಿದ ಮೇಲೆ ಮೊದಮೊದಲು ರೇಷನ್ ಕಾರ್ಡಿಗಾಗಿ ಅವಿಭಕ್ತ ಕುಟುಂಬಗಳು ವಿಭಕ್ತವಾದವು. ನಂತರ ಆ ಕುಟುಂಬಗಳು ಶಾಶ್ವತವಾಗಿ ವಿಭಕ್ತ ಕುಟುಂಬಗಳಾದವು. ರೇಷನ್ ಕಾರ್ಡ್ ಒಂದು ಕಾರಣವಷ್ಟೇ; ಅದೇ ಸರ್ವವ್ಯಾಪಿಯಲ್ಲ. ಏಕೆಂದರೆ ಕೆಲವು ದೊಡ್ಡ ಮನೆತನಗಳಲ್ಲಿ ಅಂದರೆ ಅವಿಭಕ್ತ ಕುಟುಂಬಗಳಲ್ಲಿ ಎಲ್ಲರೂ ಸೇರಿ ಇದ್ದರೂ ಪಡಿತರಚೀಟಿ ಬೇರೆ ಬೇರೆಯಾಗಿರುತ್ತವೆ. ಇದು ಅವರ ಅಗತ್ಯವೂ ಆಗಿದೆ. ಒಟ್ಟಾರೆ ಗ್ರಾಮದಲ್ಲಿ ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿದ್ದರೂ, ಗ್ರಾಮದ ಶೆಲಿಯಪ್ಪನವರ, ಅದ್ರಕಟ್ಟಿ (ಹೊಸಮನಿ) ಮುಂತಾದ ಕೆಲವು ಕುಟುಂಬಗಳು ಇನ್ನು ಅವಿಭಕ್ತ ಕುಟುಂಬಗಳಾಗಿ ಉಳಿದಿವೆ.

ವಿಭಕ್ತ ಕುಟುಂಬ ಪದ್ಧತಿ

ವಿಭಕ್ತ ಕುಟುಂಬಗಳು ಗ್ರಾಮದಲ್ಲಿ ಇಂದು ಸರ್ವೇಸಾಮಾನ್ಯವಾಗಿವೆ. ಗಂಡ-ಹೆಂಡತಿ ಹಾಗೂ ಮಕ್ಕಳೊಡನೆ ಇರುವ ಈ ಕುಟುಂಬಗಳು ಗಾತ್ರದಲ್ಲಿ ಬಹುಚಿಕ್ಕದಾಗಿದ್ದು, ಕುಟುಂಬದ ಎಲ್ಲಾ ನಿರ್ವಹಣೆಯಲ್ಲೂ ಇವರು ಸ್ವತಂತ್ರರಾಗಿರುತ್ತಾರೆ. ಮಕ್ಕಳ ಮದುವೆ ಆಗುವವರೆಗೆ ಅದು ವಿಭಕ್ತ ಕುಟುಂಬವಾಗಿರುತ್ತದೆ. ೩-೪ ಜನ ಅಣ್ಣ ತಮ್ಮಂದಿರಿರುವ ಕುಟುಂಬ ಅವರ ಮದುವೆ ಆಗುವವರೆಗೂ ಕೂಡಿಯೇ ಇರುತ್ತಾರೆ. ಆದರೆ ಅವರ ಮದುವೆಯಾದ ಮೇಲೆ ಬಂದ ಸೊಸೆಯಂದಿರು ಬಂದು ಮನೆ ಒಡೆಯುತ್ತಾರೆ ಎಂಬ ಮಾತು ಗ್ರಾಮದಲ್ಲಿದೆ. ಇದಕ್ಕೆ ಕೇವಲ ಸೊಸೆಯಂದಿರು ಮಾತ್ರ ಕಾರಣವಲ್ಲ; ಅವರ ಮಾತಿಗೆ ಮರುಳಾದ ಗಂಡಸರ ಪಾತ್ರವೂ ಇದೆ. ಈ ಸಂದರ್ಭದಲ್ಲಿ 'ಮುತ್ತು ಕೊಡುವವಳು ಬಂದಾಗ ತುತ್ತು ಕೊಟ್ಟವಳನ್ನು ಮರೆಯಬೇಡ' ಎಂಬ ಮಾತನ್ನು ಉಲ್ಲೇಖಿಸಬಹುದು. ಹೀಗೆ ಕುಟುಂಬಗಳು ವಿಭಕ್ತವಾದಾಗ ತಂದೆ-ತಾಯಿಗಳು ಚಿಕ್ಕ ಮಗನ ಹತ್ತಿರ ಇರುವುದು ಸೊರಟೂರ ಗ್ರಾಮದಲ್ಲಿ ಸಾಮಾನ್ಯವಾಗಿದೆ. ಅದಕ್ಕಾಗಿ ಚಿಕ್ಕಮಗನ ಮೇಲೆ 'ಕಡೇ ಹುಟ್ಟಿದ ಕಟ್ಟಾಣಿ' ಎಂದು ಹೆಚ್ಚು ಮಮತೆ ಹೊಂದಿರುತ್ತಾರೆ. ಹೀಗೆ ಅವಿಭಕ್ತ ಕುಟುಂಬ ವಿಭಕ್ತವಾಗಿದ್ದರೂ ಹಬ್ಬ-ಹರಿದಿನ, ಮದುವೆ ಮುಂಜಿ, ವ್ಯವಹಾರ ಮುಂತಾದ ವಿಚಾರಗಳಲ್ಲಿ ಒಗ್ಗಟ್ಟಾಗಿರುತ್ತಾರೆ. ಯಾರಾದರೂ ತಮ್ಮ ಮನೆತನದ ಯಾವುದೇ ಕುಟುಂಬದ ವ್ಯಕ್ತಿಯ ಜೊತೆ ಜಗಳವಾದರೆ ಆ ಮನೆತನದ ಎಲ್ಲಾ ವಿಭಕ್ತ ಕುಟುಂಬಗಳು ಒಗ್ಗಟ್ಟಾಗುತ್ತವೆ. ಹೀಗೆ ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳು ವ್ಯಷ್ಟಿ ಹಾಗೂ ಸಮಷ್ಟಿಗುಣವನ್ನು ಹೊಂದಿವೆ.

೫.೫. ಸಾಮಾಜಿಕ ಸಂಘಟನೆ

ಸಾಮಾಜಿಕರು ತಮ್ಮ ಭೌತಿಕ ಹಾಗೂ ಭಾವನಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿಯೇ ಸಮಾಜ ರಚನೆ ಮಾಡಿಕೊಂಡಿರುತ್ತಾರೆ. ಇಂತಹ ಸಮಾಜವು ತನ್ನದೇಯಾದ ಒಂದು ಸಂಘಟನೆಯನ್ನು ಹೊಂದಿರುತ್ತದೆ. ಇದಕ್ಕೆ ಸೊರಟೂರ ಗ್ರಾಮವು ಹೊರತಾಗಿಲ್ಲ. ಆದರೆ ಗ್ರಾಮದ ಸಾಮಾಜಿಕ ಸಂಘಟನೆಯು ವಿವಿಧ ಬಗೆಗಳಲ್ಲಿ ಅಡಕವಾಗಿದ್ದು ಅದನ್ನು ಹಲವಾರು ಮುಖಗಳಲ್ಲಿ ನೋಡಬಹುದಾಗಿದೆ.

ಸಮುದಾಯ ಆಧಾರಿತ ಸಂಘಟನೆ ಮತ್ತು ನ್ಯಾಯ ಪಂಚಾಯ್ತಿ

ಗ್ರಾಮದಲ್ಲಿರುವ ಪ್ರತಿಯೊಂದು ಸಮುದಾಯಗಳು ತಂತಮ್ಮ ಜನಾಂಗವನ್ನೊಳಗೊಂಡ ಸಂಘಟನೆಯನ್ನು ಹೊಂದಿದ್ದು, ಅದಕ್ಕೆ 'ದೈವ' ಎಂದು ಕರೆಯುತ್ತಾರೆ. ಆ ಸಮುದಾಯದ ಮದುವೆ ಕಾರ್ಯ, ಸೀಮಂತ ಕಾರಣ ಮುಂತಾದ ಕಾರ್ಯಗಳಲ್ಲಿ ಸಂಬಂಧಿಸಿದ ಮನೆಯವರು ಮೊದಲು ಆ ಸಮುದಾಯದ ಎಲ್ಲಾ ಮನೆಗಳಿಗೂ ತಿಳಿಸಬೇಕು. ಅದಕ್ಕೊಬ್ಬ ನಿರ್ದಿಷ್ಟ ವ್ಯಕ್ತಿಯನ್ನು ನೇಮಿಸುತ್ತಾರೆ. ಆ ವ್ಯಕ್ತಿಯು ದೈವ ಕೂಡುವ ಸಂದರ್ಭದಲ್ಲಿ ಎಲ್ಲಾ ಮನೆಗಳಿಗೆ ವಿಷಯ ಹೇಳಿ ಬರುತ್ತಾನೆ. ಆ ವ್ಯಕ್ತಿಗೆ 'ದೈವ ಕೂಡಿಸುವವನು' ಎಂದು ಹೇಳುತ್ತಾರೆ. ಕೆಲ ಸಮುದಾಯಗಳಲ್ಲಿ ಅವನಿಗೆ **'ಕೋಲಕಾರ'** ಅಥವಾ **'ಕಟ್ಟಿಮನಿಯವನು'** ಎಂತಲೂ ಕರೆಯುತ್ತಾರೆ. ಮದುವೆಯ ಸಂದರ್ಭದಲ್ಲಿ ವಿವಾಹ ನಿಶ್ಚಯ ಮಾಡುವಾಗ, ಮದುವೆ ಮತ್ತಿತರ ಕಾರ್ಯ ಮಾಡುವಾಗ ಯಾರಾದರೂ ಮರಣ ಹೊಂದಿದಾಗ ದೈವ ಕೂಡಿಸುವವನು ಆ ಸಮುದಾಯದ ಎಲ್ಲಾ ಮನೆಗಳಿಗೂ ಹೇಳಬೇಕು. ಎಲ್ಲರೂ ಅದರಲ್ಲಿ ಪಾಲ್ಗೊಳ್ಳಬೇಕು. ಇದು ಸಮುದಾಯದ ನಿಯಮ; ಇದಕ್ಕೆ ವಿರುದ್ಧವಾಗಿ ನಡೆದವರಿಗೆ ಸಮುದಾಯದಿಂದ ದಂಡ ವಿಧಿಸಲಾಗುತ್ತದೆ, ಅಥವಾ ಅಂಥವರನ್ನು ಸಮುದಾಯದಿಂದ ಬಹಿಷ್ಕಾರ ಹಾಕಲಾಗುತ್ತದೆ. ಇದಕ್ಕೆ 'ಕುಲದಿಂದ ಹೊರಗೆ ಇಡುವುದು' ಎಂದು ಹೇಳುತ್ತಾರೆ. ಇಂದಿಗೂ ಸಮುದಾಯದ ವ್ಯಕ್ತಿಗಳು ಯಾರ ಜೊತೆಯಲ್ಲಾದರೂ ಜಗಳವಾಡಿದರೆ ಅದು ಸಮಾಜ ವಿರೋಧಿಯಾಗಿದ್ದರೆ ಅಂದರೆ ಚಪ್ಪಲಿಗಳಿಂದ ಹೊಡೆದಾಡಿದ್ದರೆ ಅಂಥವರನ್ನು ಸಹ ಕುಲದಿಂದ ಹೊರಗೆ ಇಡುವ ಸಂಪ್ರದಾಯವಿದೆ.[೨] ಅದರ ಪರಿಹಾರಕ್ಕಾಗಿ ಅವರು ಸಮುದಾಯಕ್ಕೆ ಊಟ ಕೊಡುವುದು ಅಥವಾ ಹಣ ಕೊಡುವುದು ಸೇರಿದಂತೆ ದಂಡ ಕೊಡಬೇಕು. ಆಗ ಅವರು ಸಮುದಾಯದಲ್ಲಿ ಮರುಸೇರ್ಪಡೆಯಾಗುತ್ತಾರೆ. ಇಂಥ ಕಟ್ಟುನಿಟ್ಟಿನ ಆಚರಣೆಗಳು ತಳಸಮುದಾಯಗಳಲ್ಲಿಯೇ ರೂಢಿಯಲ್ಲಿವೆ. ಇಂಥ ಸಮುದಾಯದ ಕಟ್ಟಳೆಗಳ ಮೇಲೆ ಇತ್ತೀಚಿನ ಆಧುನಿಕತೆಯ ಪ್ರಭಾವವಾಗಿ ನಿಯಮಗಳು ಕಟ್ಟುನಿಟ್ಟಾಗಿ ಆಚರಣೆಗೆ ಬರುತ್ತಿಲ್ಲ. ಏಕೆಂದರೆ ಪರಂಪರಾಗತವಾಗಿ ಬಂದ ಸಾಂಪ್ರದಾಯಿಕ ನಿಯಮಗಳನ್ನು ವಿರೋಧಿಸುವ ಜನರ ಸಂಖ್ಯೆಯು ಈಗ ಅಧಿಕಗೊಳ್ಳುತ್ತಿದೆ. ಏಕೆಂದರೆ ಆಧುನಿಕತೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುವ ಯುವಜನತೆ ಸಾಮಾಜಿಕ ಕಟ್ಟುಪಾಡುಗಳನ್ನು ಪರಿಗಣಿಸುವುದೇ ಇಲ್ಲ. ಅದರ ಪರಿಣಾಮವಾಗಿ ಗ್ರಾಮದಲ್ಲಿ ಅಲ್ಲಲ್ಲಿ ಕೆಲ ಯುವಕರು ಅಂತರ್ಜಾತಿ ವಿವಾಹವಾಗುತ್ತಿದ್ದಾರೆ. ತಂದೆ-ತಾಯಿಗಳು ಇದನ್ನು ಒಪ್ಪಿಕೊಳ್ಳಲು ಸಾಮಾಜಿಕ

ನಿರ್ಬಂಧವಿದೆ. ಸಂಪೂರ್ಣವಾಗಿ ವಿರೋಧಿಸಲು ತಮ್ಮ ಕರುಳಿನ ಕುಡಿ (ಮಕ್ಕಳು) ದೂರವಾಗುವುದನ್ನು ಸಹಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ. ಇದನ್ನು ಆಧುನಿಕ ಸಮಾಜದಲ್ಲಾದ ಒಂದು ಸಾಮಾಜಿಕ ಸ್ಥಿತ್ಯಂತರವೆಂದೇ ಹೇಳಬಹುದು. ಇಂತಹ ಹಲವಾರು ನೀತಿ ನಿಯಮಗಳ ಪಾಲನೆಗೆ ನ್ಯಾಯಪಂಚಾಯ್ತಿ ಇದ್ದರೂ ಸಾಮಾಜಿಕ ಸಂದಿಗ್ಧತೆಯು ತಲೆದೋರಿ ಸಾಮಾಜಿಕ ಸಂಘಟನೆಗಳ ಅಸ್ತಿತ್ವಕ್ಕೆ ಧಕ್ಕೆ ಬರುತ್ತಿದೆ. ಆದರೂ ಇಂಥ ಸಂದಿಗ್ಧತೆಗಳ ನಡುವೆಯು ಗ್ರಾಮದಲ್ಲಿ ಸಮುದಾಯ ಸಂಘಟನೆ ಈವರೆಗೂ ತನ್ನ ಅಸ್ತಿತ್ವ ಉಳಿಸಿಕೊಂಡಿರುವುದು ಗಮನಾರ್ಹ.

ನ್ಯಾಯ ಪಂಚಾಯ್ತಿಯಲ್ಲಿ ಜಾತಿಯತೆ/ರಾಜಕೀಯ

ನ್ಯಾಯ ನಿರ್ಣಯಕ್ಕಾಗಿ ಇತ್ತೀಚಿನ ಕಾಲದಲ್ಲಿ ಪೊಲೀಸ್ ಸ್ಟೇಷನ್, ಕೋರ್ಟ್, ಕಚೇರಿಗಳು ಇದ್ದಾಗಲೂ ಸಹ ಗ್ರಾಮದಲ್ಲಿ ನ್ಯಾಯ ಪಂಚಾಯ್ತಿ ಇದೆ. ಇದನ್ನು 'ದೈವ ಸಮಾಜ' 'ಹಿರಿಯರನ್ನು ಕೂಡಿಸುವುದು' ಎಂದು ಕರೆಯುತ್ತಾರೆ. ಇವರು ಸರಿ-ತಪ್ಪುಗಳನ್ನು ಗುರುತಿಸಿ ನ್ಯಾಯ ನಿರ್ಣಯಿಸುತ್ತಾರೆ. ಇದರಲ್ಲಿ ಜಾತಿಯತೆ ಅಂತರ್ಗತವಾಗಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬಂದಿದೆ.

ಸಾಮಾನ್ಯವಾಗಿ ಆಯಾ ಸಮುದಾಯದ ಆಂತರಿಕ ಸಮಸ್ಯೆಯ ಪರಿಹಾರಕ್ಕಾಗಿ ಆ ಜಾತಿಯ ಜನರೇ ಸೇರಿರುತ್ತಾರೆ. ಅದಕ್ಕೆ 'ದೈವ ಸಮಾಜ' ಎಂದು ಕರೆಯುತ್ತಾರೆ. ಆದರೆ ಇತ್ತೀಚಿನ ಕಾಲಘಟ್ಟದಲ್ಲಿ 'ಹಿರಿಯರನ್ನು ಕೂಡಿಸುವುದು' ಎಂಬ ರೂಢಿ ಇದೆ. ಅಂದರೆ ನ್ಯಾಯ ನಿರ್ಣಯ ಮಾಡುವಾಗ ಆಯಾ ಓಣಿಯಲ್ಲಿರುವ ಹಿರಿಯರನ್ನು ಕೂಡಿಸುತ್ತಾರೆ. ಸಾಮಾನ್ಯವಾಗಿ ಹಿಂದುಳಿದ ಜನಾಂಗದವರ ನ್ಯಾಯಗಳಿದ್ದರೆ,

ಉದಾ: ಆಸ್ತಿ ಹಂಚಿಕೆ, ಗಂಡ-ಹೆಂಡತಿ, ತಂದೆ-ಮಕ್ಕಳು ಇಂಥ ಹಲವಾರು ನ್ಯಾಯಗಳಲ್ಲಿ ಹಿರಿಯರನ್ನು ಕೂಡಿಸುವಾಗ ಮೇಲ್ವರ್ಗದವರೆಂದು ಕರೆಸಿಕೊಳ್ಳುವ ಜಾತಿಯವರನ್ನೇ ಕರೆಯುತ್ತಾರೆ. ಅವರು ನ್ಯಾಯ ಪಂಚಾಯ್ತಿ ಮಾಡಿ ನ್ಯಾಯ ಬಗೆಹರಿಸಿ ಹೋಗುತ್ತಾರೆ.

ಆದರೆ ಮೇಲ್ವರ್ಗದವರ ಕುಟುಂಬಗಳಲ್ಲಿ ನ್ಯಾಯಗಳಿದ್ದರೆ ಅದನ್ನು ಆ ಸಮುದಾಯದ ಹಿರಿಯರೇ ನ್ಯಾಯ ಪಂಚಾಯ್ತಿ ಮಾಡಿ ಬಗೆಹರಿಸಿಕೊಳ್ಳುತ್ತಾರೆ. ಅಂದರೆ ತಳಸಮುದಾಯದವರ ನ್ಯಾಯಗಳಿಗೆ ಮೇಲ್ವರ್ಗದವರು ನ್ಯಾಯ ನಿರ್ಣಾಯಕರಾಗಿ ಬರುತ್ತಾರೆ: ಆದರೆ ಮೇಲ್ವರ್ಗದವರ ನ್ಯಾಯ ಪಂಚಾಯ್ತಿಯಲ್ಲಿ ಕೆಳವರ್ಗದವರು ಪಾಲ್ಗೊಳ್ಳುವುದಿಲ್ಲ. ಇದು ಪಾರಂಪರಿಕವಾಗಿ ನಡೆದು ಬಂದಿದೆ. ಇದರಿಂದ ತಳಸಮುದಾಯಗಳನ್ನು ಮೇಲ್ವರ್ಗದವರು ಸಮಾನವಾಗಿ ಕಂಡಿಲ್ಲ ಎಂದು ತಿಳಿಯುತ್ತದೆ.

ಹಿಂದುಳಿದ ಜಾತಿಯವರು ತಮ್ಮ ನ್ಯಾಯ ನಿರ್ಣಯಕ್ಕೆ ತಮ್ಮ ಸಮುದಾಯದಲ್ಲಿದ್ದ ಹಿರಿಯರನ್ನು, ಅನುಭವಿಕರನ್ನು ಆಹ್ವಾನಿಸುವುದಿಲ್ಲ. ಬದಲಾಗಿ ಮೇಲ್ವರ್ಗದವರನ್ನೇ ಆಹ್ವಾನಿಸುತ್ತಾರೆ.

ಇವರಿಗೆ ತಮ್ಮ ಸಮುದಾಯದವರ ಮೇಲೆ ನಂಬಿಕೆ ಇಲ್ಲ ಮೇಲ್ವರ್ಗದವರೆಂದು ಕರೆಸಿಕೊಳ್ಳು ವುದವರ ಮೇಲೆಯೇ ನಂಬಿಕೆ ಇದೆ ಎನ್ನುವುದಕ್ಕಿಂತ ಆ ರೀತಿಯ ವಾತಾವರಣ ನಿರ್ಮಾಣ ಮಾಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕೆಲವು ನ್ಯಾಯಗಳು ಆರಕ್ಷಕ ಠಾಣೆ ಮೆಟ್ಟಿಲು ಹತ್ತುತ್ತಿವೆ. ಇದಕ್ಕೆ ಹಲವಾರು ಕಾರಣಗಳಿವೆ. ಕೆಲವು ಸಂದರ್ಭದಲ್ಲಿ ನ್ಯಾಯ ಮಾಡಿದ ಎರಡು ಪಕ್ಷದವರು ಸ್ವತ: ತಾವೇ ಠಾಣೆಗೆ ಹೋಗಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ಗ್ರಾಮದಲ್ಲಿ ರಾಜಕೀಯ ಮಾಡುವ ರಾಜಕಾರಣಿಗಳ ಪ್ರವೇಶವಾಗುತ್ತದೆ. ಕೆಲವರು ನೇರ ನಿಷ್ಠುರ ನಾಯಕರು ಇದ್ದಾರೆ. ಅವರು ಆರಕ್ಷಕ ಠಾಣೆ ಹೋಗಿರುವ ನ್ಯಾಯವನ್ನು, ಆ ನ್ಯಾಯದ ಎರಡು ಕಡೆಯವರನ್ನು ಕರೆಯಿಸಿ ಅವರಿಗೆ ಬುದ್ಧಿ ಹೇಳಿ ಮತ್ತೆ ಗ್ರಾಮದಲ್ಲಿಯೇ ಪ್ರಾಮಾಣಿಕವಾಗಿ ನ್ಯಾಯ ನಿರ್ಣಯ ಮಾಡುತ್ತಾರೆ.

ಇನ್ನು ಕೆಲವು ರಾಜಕೀಯ ಜನರು ಸಾಮಾನ್ಯ ಜನರ ನ್ಯಾಯಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿರುವ ಉದಾಹರಣೆಗಳಿವೆ. ಎರಡು ಕಡೆಯವರಿಗೆ ನಾನು ನಿಮ್ಮ ಪರವಾಗಿದ್ದೇನೆ ಎಂದು ಹೇಳುತ್ತಾ ಎಲ್ಲರೂ ತಾವಿದ್ದಲ್ಲಿಗೆ ಬರಬೇಕು; ಜನರಲ್ಲಿ ಜಗಳವಿದ್ದರೆ ನನಗೆ ರಾಜಕೀಯ ಮಾಡಲು ಬರುತ್ತದೆ ಎಂಬ ಭಾವನೆಯಲ್ಲಿದ್ದಾರೆ. ಅಂಥವರು ಕುಳಿತಲ್ಲೇ ಕೂತು ಆಟ ಆಡಿಸುತ್ತಾರೆ. ಮುಗ್ಧ ಜನರು ಇಂಥವರ ದಾಳಕ್ಕೆ ತುತ್ತಾಗಿರುವ ಹಲವಾರು ನಿದರ್ಶನಗಳು ಕ್ಷೇತ್ರಕಾರ್ಯದಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ತಿಳಿದುಬಂದಿದೆ. ಇದಕ್ಕೆ ಸಾಮಾನ್ಯ ಜನರು ತಾವು ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ ನಂಬಿಕೆಗಳೇ ಕಾರಣ. ಅಂದರೆ ಮೇಲ್ವರ್ಗದವರೆಲ್ಲರನ್ನು ದೊಡ್ಡವರು, ತಿಳಿದವರು, ನ್ಯಾಯ ನಿರ್ಣಯಿಸುವವರು ಎಂದು ನಂಬಿದ್ದಾರೆ. ಅವರಲ್ಲಿ ಎಲ್ಲರೂ ಕೆಟ್ಟವರಿಲ್ಲ, ಎಲ್ಲರೂ ಒಳ್ಳೆಯವರಿಲ್ಲ; ಅದನ್ನು ಗುರುತಿಸುವ ಶಕ್ತಿ ಸಾಮಾನ್ಯರಿಗೆ ಬರಬೇಕಾಗಿದೆ.

ಕೆಲವು ಹಿಂದುಳಿದ ಜಾತಿಯ ಯುವಕರು ನಿಜವಾದ ಸಾಮಾಜಿಕ ಕಳಕಳಿಯಿಂದ ಜನಸಾಮಾನ್ಯರ ಕೆಲಸಕಾರ್ಯ ನಿರ್ವಹಿಸುತ್ತಾ ನಾಯಕರಾಗಿ ಬೆಳೆಯುತ್ತಿದ್ದಾರೆ. ಇದನ್ನು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಸ್ವಾರ್ಥಕ್ಕಾಗಿ ಅವರನ್ನು ಒಪ್ಪಿಕೊಳ್ಳುತ್ತಿಲ್ಲ. ಅದಕ್ಕಾಗಿ ಸಾಮಾನ್ಯ ಜನರಲ್ಲಿ ನ್ಯಾಯ ತಂಟೆ-ತಕರಾರುಗಳನ್ನು ಸೃಷ್ಟಿಸುತ್ತಿದ್ದಾರೆ. ಈಗ ಇದು ಜನಸಾಮಾನ್ಯರಿಗೆ ಅರ್ಥವಾಗುತ್ತಿದೆ. ಯಾರಿಗೂ ಯಾರು ಅನಿವಾರ್ಯವಲ್ಲ ಎಂಬುದು ಅವರ ಅವರ ಗಮನಕ್ಕೆ ಬರಬೇಕಾಗಿದೆ. ಆದರೂ ಕಾಲಮಾನವನ್ನು ಅವಲೋಕಿಸಿದರೆ ಗ್ರಾಮದ ನ್ಯಾಯ ಪಂಚಾಯ್ತಿಯಲ್ಲಿ ಕ್ರಮೇಣ ಜಾತಿಯತೆ ಮತ್ತು ರಾಜಕೀಯ ಪ್ರಭಾವ ಕಡಿಮೆಯಗುತ್ತಾ ಗ್ರಾಮದ ನ್ಯಾಯ ಪಂಚಾಯ್ತಿ ಪ್ರಾಮಾಣಿಕವಾಗಿ ನಡೆಯುವತ್ತ ಸಾಗಿದೆ. ಅಸಾಧ್ಯವಾದರೆ ನ್ಯಾಯಾಲಯದಲ್ಲಿಯೇ ಉತ್ತರ ಕಂಡುಕೊಳ್ಳಲು ಗ್ರಾಮದ ಜನ ಗಮನಹರಿಸುತ್ತಿದ್ದಾರೆ.

ಸಾಮೂಹಿಕ ಸಂಘಟನೆ (ಓಣಿಕಟ್ಟಿನ ಸಂಘಟನೆ)

ಹಲವು ಕುಟುಂಬಗಳು ಸೇರಿ ಸಮೂಹ ರೂಪುಗೊಂಡಿರುವಂತೆ ಸಮಾಜವು ಕೇವಲ ಆಯಾ ಸಮುದಾಯಗಳ ಸಂಘಟನೆಯಾಗಿರದೇ ವಿಭಿನ್ನ ಜಾತಿ ಜನಾಂಗಗಳ ಜನರು ಒಂದು ನಿರ್ದಿಷ್ಟ ಪ್ರದೇಶದಲ್ಲಿದ್ದರೆ, ಅವರೆಲ್ಲರ ಸಾಮೂಹಿಕ ಪಾಲ್ಗೊಳ್ಳುವಿಕೆಯು ಒಂದು ಸಂಘಟನೆಯಾಗಿ ರೂಪಗೊಳ್ಳುತ್ತದೆ. ಈ ಸಾಮಾಜಿಕ ಸಂಘಟನೆಯೂ ಯಾವುದೇ ಜಾತಿ, ಜನಾಂಗಗಳ ಕಟ್ಟಳೆಗಳಿಗೆ ಒಳಗಾಗದೇ ಜಾತ್ಯಾತೀತವಾಗಿ ತನ್ನ ನಿಯಮಗಳನ್ನು ನಿರ್ಧರಿಸುತ್ತದೆ. ಅಂದರೆ ಆ ಓಣಿಯಲ್ಲಿ ನಡೆಯುವ ಭಜನೆ, ಉತ್ಸವ, ವಿವಿಧ ಕಲಾಮೇಳಗಳ ಕಾರ್ಯಕ್ರಮಗಳನ್ನು ಈ ಸಾಮೂಹಿಕ ಸಂಘಟನೆ ನಿರ್ವಹಿಸುತ್ತದೆ. ಆ ಓಣಿಯಲ್ಲಿ ಬರುವ ನ್ಯಾಯ ತಂಟೆ-ತಕರಾರುಗಳನ್ನು ಹಿರಿಯರು ಪರಿಹರಿಸಿದರೆ, ವಿವಿಧ ಸಂಘಟನಾತ್ಮಕ ಕಾರ್ಯಕ್ಕಾಗಿ ಯುವಕ ಮಂಡಳಗಳು ಕಾರ್ಯನಿರ್ವಹಿಸುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ.

ಗ್ರಾಮದಲ್ಲಿರುವ ಯುವಕ ಮಂಡಳಗಳು

ಅ. ನಂ.	ಯುವಕ ಮಂಡಳಗಳ ಹೆಸರು	ಸ್ಥಳ	ಅಧ್ಯಕ್ಷ/ ಕಾರ್ಯದರ್ಶಿಗಳು
೧.	ಶ್ರೀ ಕಲ್ಮೇಶ್ವರ ಯುವಕ ಮಂಡಳ	ಶ್ರೀ ಕಲ್ಮೇಶ್ವರ ಯುವಕ ಮಂಡಳ ಕಾರ್ಯಾಲಯ	ಬಸವರಾಜ ಅಣ್ಣಿಗೇರಿ/ ದೇವಪ್ಪ ಜಾಮದಾರ
೨.	ಶ್ರೀ ವೀರಭದ್ರೇಶ್ವರ ಯುವಕ ಮಂಡಳ	ಶ್ರೀ ವೀರಭದ್ರೇಶ್ವರ ಯುವಕ ಮಂಡಳ ಗೌರಿಮನಿ	ಬಸವರಾಜ ಹಡಪದ, ರವಿ ಹೂಗಾರ
೩.	ಶ್ರೀ ಮಾರುತಿ ಡ್ರಮಸೆಟ್ ಯುವಕ ಮಂಡಳ	ಶ್ರೀ ಮಾರುತಿ ದೇವಸ್ಥಾನ	ರೈಮಾನಸಾಬ ಬಡಿಗೇರ ಯಲ್ಲಪ್ಪ ತಳಕಲ್
೪.	ಶ್ರೀ ವಾಲ್ಮೀಕಿ ಯುವಕ ಮಂಡಳ	ಶ್ರೀ ಹಳಿಕೆಮ್ಮ ದೇವಸ್ಥಾನ	ನಾಗಪ್ಪ. ರಣತೂರ, ಮಾಹಾಂತೇಶ ಗೋಡಕೆ
೫.	ಅಂಜುಮಾನ್ ಯುವಕ ಮಂಡಳ	ಜುಮ್ಮಾ ಮಸೀದಿ	ಹುಸೇನಸಾಬ ಕುಸಣ್ಣವರ, ಮೌಲಾಸಾಬ ಬಾಬುಖಾನವರ
೬.	ಶ್ರೀ ಬಸವೇಶ್ವರ ಯುವಕ ಮಂಡಳ	ಬಸವೇಶ್ವರ ದೇವಸ್ಥಾನ	ಫಕ್ಕೀರೇಶ ಕಮ್ಮಾರ, ಬಸವರಾಜ ಗಾಣಿಗೇರ
೭.	ಶ್ರೀ ಕಾಳಭೈರವ ಯುವಕ ಮಂಡಳ	ಪೇಟೆಗೌರಿ ಮನೆ	ಮಹಾಂತೇಶ ಹೆಬ್ಬಳ್ಳಿ, ದೇವಪ್ಪ ರೊಳ್ಳಿ
೮.	ಶ್ರೀ ಅಂಬೇಡ್ಕರ್ ಯುವಕ ಮಂಡಳ	ಶ್ರೀ ಅಂಬೇಡ್ಕರ್ ಸಮುದಾಯ ಭವನ	ಮಹೇಶ. ಸಣ್ಣತಂಗಿಯವರ, ಜಗದೀಶ. ಸಣ್ಣತಂಗಿಯವರ
೯.	ಶ್ರೀ ಛತ್ರಪತಿ ಶಿವಾಜಿ ಯುವಕ ಮಂಡಳ	ಚೌತಕಟ್ಟಿ	ಶಿವಾನಂದಪ್ಪ. ಮುಳಗುಂದ, ಅಶೋಕ ಥೋರಾತ

೧೦.	ಶ್ರೀ ಶಾಂತಿನಾಥ ಯುವಕ ಮಂಡಳ	ಜೈನ ಬಸದಿ	ರಮೇಶ. ಲ ಒಂಟಿ, ರಾಮಚಂದ್ರ ಬೆಂತೂರ
೧೧.	ಶ್ರೀ ರಾವಬಹದ್ದೂರ್ ಯುವಕ ಮಂಡಳ		ನಾರಾಯಣರಾವ್ ಕುಲಕರ್ಣಿ
೧೨.	ಶ್ರೀ ಬೀರೇಶ್ವರ ಯುವಕ ಮಂಡಳ	ಬೀರೇಶ್ವರ ದೇವಸ್ಥಾನ	ಮಂಜುನಾಥ ಮಾಯಪ್ಪನವರ ರೇವಣೆಪ್ಪ. ಗುಡಿ
೧೩.	ಶ್ರೀ ಅನ್ನದಾನೇಶ್ವರ ಯುವಕ ಮಂಡಳ	ಅನ್ನದಾನೇಶ್ವರ ನಗರ	ಶರಣಪ್ಪ. ಜಾಮದಾರ, ಪರಶುರಾಮ ಕನ್ನೂರ
೧೪.	ಶ್ರೀ ವಿನಾಯಕ ಯುವಕ ಮಂಡಳ	ವಿನಾಯಕ ನಗರ	ಮಲ್ಲೇಶ. ಅಡ್ರಕಟ್ಟಿ, ಬಸವರಾಜ. ಕಣವಿ
೧೫.	ಶ್ರೀ ಕೊತ್ತಲಮ್ಮದೇವಿ ಯುವಕ ಮಂಡಳ	ಕೊತ್ತಲಮ್ಮ ದೇವಸ್ಥಾನ	ಬಸವರಾಜ. ಚ. ಚಬ್ಬಿ
೧೬.	ಶ್ರೀ ಪ್ರಗತಿಶೀಲ ಯುವಕ ಮಂಡಳ	ಯುವಕ ಮಂಡಳ ಕಟ್ಟಡ	ಪರಶುರಾಮ ಹೂಗಾರ ಮಹೇಶ. ಹಳ್ಳಿ
೧೭.	ಶ್ರೀ ರಾಜೀವಗಾಂಧಿ ಯುವಶಕ್ತಿ ಸಂಘ	ಕನ್ನಡ ಹೆಣ್ಣು ಮಕ್ಕಳ ಶಾಲೆ	ಎಸ್. ಎಂ. ಕರಿಗೌಡ್ರ, ಮಹಾದೇವಿ ಅಗಡಿ
೧೮.	ವಿದ್ಯಾರ್ಥಿ ಒಕ್ಕೂಟ	ಯುವಕ ಮಂಡಳ ಕಟ್ಟಡ	ಭರಮಪ್ಪ. ಗುಡಿ ಉಮೇಶ. ಪರವಾನಗಿ
೧೯.	ಕರ್ನಾಟಕ ರಕ್ಷಣಾ ವೇದಿಕೆ	ಶ್ರೀ ಗುರುಮಲ್ಲಜ್ಜನ ದೇವಸ್ಥಾನ	ಆರ್. ಎಸ್. ಕಮ್ಮಾರ. ವಾಯ್. ಪಿ. ಅಡ್ನೂರ

ಈ ಮೇಲಿನ ಎಲ್ಲಾ ಯುವಕ ಮಂಡಳಗಳು ಆಯಾ ಓಣಿಯಲ್ಲಿ ಸಾಮಾಜಿಕ ಸಂಘಟನೆಯ ಮೂಲಕ ತಮ್ಮ ಕಾರ್ಯ ಚಟುವಟಿಕೆಗಳನ್ನು ಮಾಡುತ್ತಿವೆ. ವೀರಭದ್ರೇಶ್ವರ ಹಾಗೂ ಕಲ್ಮೇಶ್ವರ ಯುವಕ ಮಂಡಳಗಳು ರಾಜ್ಯಮಟ್ಟದ ಯುವಜನ ಮೇಳದಲ್ಲಿ ಪ್ರಶಸ್ತಿ ಪಡೆಯುವ ಮೂಲಕ ಗುರುತಿಸಿಕೊಂಡಿದ್ದಾರೆ. ಮಾರುತಿ ಡ್ರಮ್‌ಸೆಟ್ ಸಂಘವು ಉತ್ತಮ ಡ್ರಮ್‌ಸಟ್ ಕಲಾ ತಂಡದೊಂದಿಗೆ ತನ್ನ ಆಕರ್ಷಕ ಕಾರ್ಯಚಟುವಟಿಕೆಗಳನ್ನು ಮುನ್ನಡೆಸಿದೆ. ಗ್ರಾಮದ ಎಲ್ಲಾ ಯುವಕ ಮಂಡಳಗಳು ತಮ್ಮ ವ್ಯಾಪ್ತಿಯಲ್ಲಿ ಓಣಿಯಲ್ಲಿ ಅಗತ್ಯ ಕಾರ್ಯಚಟುವಟಿಕೆಗಳನ್ನು ಮಾಡುತ್ತಿವೆ. ಎಲ್ಲಾ ಯುವಕ ಮಂಡಳಗಳ ಒಕ್ಕೂಟವಾಗಿ ಪ್ರಗತಿಶೀಲ ಯುವಕ ಮಂಡಳವಿದೆ. ಆದರೆ ಗ್ರಾಮದ ಯಾವ ಯುವಕ ಮಂಡಳಗಳು ಗ್ರಾಮದಲ್ಲಿರುವ ಸಾಮಾಜಿಕ ಪಿಡುಗುಗಳಾದ ಸಾರಾಯಿ ನಿಷೇಧ ಸೇರಿದಂತೆ ಯಾವುದರ ವಿರುದ್ಧವು ಧ್ವನಿ ಎತ್ತುತ್ತಿಲ್ಲ. ಆ ಹಿನ್ನೆಲೆಯಲ್ಲಿ ಮೊದಲು ಸ್ವತಃ ಯುವಕರು ತಾವು ಪರಿಶುದ್ಧರಾಗಿ, ಕ್ರಿಯಾಶೀಲರಾಗಿ ಸಮಷ್ಟಿ ಹಿತದ ಸಂಘಟನೆ ಮಾಡುವ ಅಗತ್ಯವಿದೆ.

೫.೬. ಆರ್ಥಿಕ ವ್ಯವಸ್ಥೆ

ಆರ್ಥಿಕ ಚಟುವಟಿಕೆಗಳು ಕುಟುಂಬ ಒಂದರ ಬದುಕನ್ನು ನಿರ್ದೇಶಿಸುತ್ತವೆ. ಅದರಲ್ಲೂ ಆಧುನಿಕ ಕಾಲಘಟ್ಟದಲ್ಲಿ 'ಕಾಂಚಾಣ ಕಾರ್ಯಸಿದ್ಧಿ' ಎನ್ನುವಂತೆ ಮಾನವ ಬದುಕಿನ ಎಲ್ಲ ರಂಗಕ್ಕೂ ಅರ್ಥವ್ಯವಸ್ಥೆಯೇ ಮೂಲ ಆಧಾರವಾಗಿದೆ. ಆದರೆ ಆರ್ಥಿಕ ಚಟುವಟಿಕೆಗಳು ಉದ್ಯೋಗವನ್ನೇ ಆಧರಿಸಿರುವುದರಿಂದ ಗ್ರಾಮದ ಪಾರಂಪರಿಕ ಉದ್ಯೋಗಗಳ ಕುರಿತು ತಿಳಿಯುವದು ಅವಶ್ಯವೆನಿಸುತ್ತದೆ.

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ವೇದವನೋದಿ ಹಾರವನಾದ

- ಎನ್ನುವಂತೆ ಪಾರಂಪರಿಕವಾಗಿ ಬಂದ ಕುಲಕಸುಬುಗಳು ಗ್ರಾಮದಲ್ಲಿ ಇನ್ನೂ ಜೀವಂತವಾಗಿವೆ. ಹಾಗೂ ಒಕ್ಕಲುತನವೇ ಗ್ರಾಮದ ಪ್ರಧಾನ ಉದ್ಯೋಗವಾಗಿದೆ. ಅದರಲ್ಲೂ ಒಣ ಬೇಸಾಯದ ಜಮೀನುಗಳೇ ಅಧಿಕವಾಗಿರುವುದರಿಂದ ಗ್ರಾಮದ ರೈತರ ಬದುಕು, ಮಳೆರಾಯನೊಂದಿಗೆ ಆಡುವ ಚೆಲ್ಲಾಟವಾಗಿದೆ. ಏಕೆಂದರೆ 'ರೋಣಿ ಮಳೆಯಾದರೆ ಓಣೆಲ್ಲಾ ಜೋಳಾ' ಎಂಬ ಮಾತಿನಂತೆ ಮಳೆ ಋತುಮಾನಕ್ಕೆ ತಕ್ಕಂತೆ ರೈತನ ಕೈಹಿಡಿದರೆ ಅವನ ಬದುಕು ಹಸನಾಗುತ್ತದೆ. ಅನಾವೃಷ್ಟಿ ಅಥವಾ ಅತಿವೃಷ್ಟಿಯಿಂದ ಪ್ರಕೃತಿ ಮುನಿಸಿಕೊಳ್ಳುವುದೇ ಹೆಚ್ಚು. ಒಂದುವೇಳೆ ಮಳೆ-ಬೆಳೆ ಚೆನ್ನಾಗಿ ಬಂದರೂ ರೈತ ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಸಿಗುವುದಿಲ್ಲ. ಹೀಗೆ ಗ್ರಾಮದ ರೈತರ ಬದುಕು ಕೃಷಿಯನ್ನೇ ಅವಲಂಬಿಸಿದ್ದು ವ್ಯವಸಾಯದ ಗಾದೆಯಂತೆ 'ಕೃಷಿಯಲ್ಲಿ ನೀನು ಸಾಯ ನಿಮ್ಮಪ್ಪ ಸಾಯ' ಎನ್ನುವಂತಾಗಿದೆ. ಏಕೆಂದರೆ 'ಒಕ್ಕಲಿಗನು ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ' ಎಂಬ ಗಾದೆ ಮಾತಿನಂತೆ ಮಾನವ ಕುಲಕೋಟಿಗೆ ಅನ್ನ ನೀಡುವ ರೈತನೇ ಇಂದು ತನಗೆ ಅನ್ನವಿಲ್ಲದಂತಹ ಸ್ಥಿತಿಗೆ ಬಂದಿರುವುದನ್ನು ಕಾಣುತ್ತೇವೆ. ಆದರೆ ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ರೈತನ ಬೆಳೆಗಳನ್ನು ಮಾರಾಟ ಮಾಡುವ ಮಧ್ಯವರ್ತಿ ವ್ಯಾಪಾರಿ ತಿಂಗಳಿಗೆ ಲಕ್ಷಾನುಲಕ್ಷ ಲಾಭ ಗಳಿಸುತ್ತಾನೆ. ದಿನಕ್ಕೆ ೬ ಗಂಟೆ ಕಾರ್ಯನಿರ್ವಹಿಸುವ ಒಬ್ಬ ಸಾಮಾನ್ಯದರ್ಜೆ ಸರಕಾರಿ ನೌಕರ ತಿಂಗಳಿಗೆ ೧೦ರಿಂದ ೧೫ ಸಾವಿರ ಸಂಬಳ ಪಡೆಯುತ್ತಾನೆ. ಆದರೆ ದಿನವಿಡೀ ಬೆವರು ಸುರಿಸಿ ದುಡಿದು ನಾಡಿಗೆ ಅನ್ನ ಹಾಕುವ ಸಾಮಾನ್ಯ ರೈತನಿಗೆ ಗಳಿಕೆ ಇಲ್ಲ. ಸಾಲದಿಂದ ಮುಕ್ತನಾಗಲೂ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣಗಳು ಹಲವಾರು; ಒಟ್ಟಾರೆ ಹೇಳುವುದಾದರೆ ರೈತನ ಶ್ರಮಕ್ಕೆ ಬೆಲೆಯು ಇಲ್ಲವಾಗುತ್ತಿದೆ. ಆದರೂ ರೈತ ಅನಿವಾರ್ಯವೆಂಬಂತೆ ಆಧುನಿಕತೆಯತ್ತ ತಾನೂ ಆಕರ್ಷಿತನಾಗಿ ಮುನ್ನುಗ್ಗುತ್ತಿರುವುದು ಕಂಡುಬರುತ್ತಿದೆ. ಸೊರಟೂರ ಗ್ರಾಮದ ವೀರಶೈವ ಸಮುದಾಯದ ಪ್ರಮುಖ ಉದ್ಯೋಗವೇ ಕೃಷಿಯಾಗಿದೆ. ಇನ್ನುಳಿದ ಎಲ್ಲಾ ಸಮುದಾಯಗಳಲ್ಲಿ ಕೃಷಿಕರಿದ್ದಾರೆ ಹಾಗೂ ಕುಲಕಸುಬು ಸೇರಿದಂತೆ ಕಾರ್ಮಿಕ ಹಾಗೂ ಇತರ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಕೃಷಿಯಲ್ಲಿ ಇತ್ತೀಚೆಗೆ ವಾಣಿಜ್ಯ ಬೆಳೆಗಳನ್ನೇ ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಿರುವುದರಿಂದ ಅವರ ಆರ್ಥಿಕ ಸ್ಥಿತಿಗತಿ ಕ್ರಮೇಣ ಸುಧಾರಿಸುತ್ತಿರುವುದು ಕಂಡುಬರುತ್ತಿದೆ. ಗ್ರಾಮದ

ಕುಲಕಸುಬುದಾರರು ಹಾಗೂ ಸಮಾಜದ ಸರ್ವರು ರೈತರನ್ನು ಅವಲಂಬಿಸಿರುವುದು 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂಬುದನ್ನು ದೃಢಪಡಿಸುತ್ತದೆ.

ಕೃಷಿ ಮತ್ತು ಕುಲಕಸುಬುಗಳು

ಹಡಗು ಕಡಲಿಗೆ ಬೇಕು ಗುಡುಗು ಮಿಂಚಿಗೆ ಬೇಕು.
ಕಡಗದಾ ಕೈಯ ಸೊಸೆಬೇಕು। ಊರಿಗೆ
ಬಡಿಗಾ ತಾ ಬೇಕು ಸರ್ವಜ್ಞ

- ಎನ್ನುವಂತೆ ಗ್ರಾಮೀಣ ಪ್ರದೇಶದ ಪ್ರತಿಯೊಂದು ಸಮುದಾಯಗಳು ತಮ್ಮದೇ ಆದ ಪರಂಪರಾಗತ ಕುಲಕಸುಬುಗಳನ್ನು ಮಾಡುತ್ತಾ ಬಂದಿದ್ದು ಸಮಾಜದಲ್ಲಿ ಎಲ್ಲರಲ್ಲೂ ಪರಸ್ಪರ ಕೊಡಕೊಳ್ಳುವಿಕೆಯ ಮೂಲಕ ಜೀವನ ನಿರ್ವಹಣೆಯು ನಡೆಯುತ್ತಿತ್ತು.

ಬಡಿಗತನ ಮತ್ತು ಕಮ್ಮಾರಿಕೆ

ಕೃಷಿ ಕಾರ್ಯಕ್ಕೆ ಬೇಕಾಗುವ ರಂಟೆ, ಕುಂಟೆ, ಕೂರಿಗೆ, ಎಡಿಕುಂಟೆ[೩] ನೊಗ, ಚಕ್ಕಡಿ ಮುಂತಾದ ಕಟ್ಟಿಗೆ ಸಾಮಗ್ರಿಗಳನ್ನು ರೈತನಿಗೆ ಬಡಿಗತನದ ಬಡಿಗೇರ ಸಮುದಾಯ ಒದಗಿಸುತ್ತಿತ್ತು. ಕೃಷಿ ಕಾರ್ಯಕ್ಕೆ ಬೇಕಾಗುವ ಕುಡಾ, ತಾಳು, ಕುರ್ಚಿಗಿ, ಕುಡಗೋಲು, ಚಕ್ಕಡಿಹಳಿ, ಕೀಲು ಮುಂತಾದ ಕಬ್ಬಿಣ ಸಾಮಗ್ರಿಗಳನ್ನು ಕಮ್ಮಾರನು ಕೃಷಿಕನಿಗೆ ಅಗತ್ಯಕ್ಕನುಗುಣವಾಗಿ ಕೊಡುತ್ತಿದ್ದನು. ಇದಕ್ಕೆ ರೈತ ಹಣ ಕೊಡುವ ಅವಶ್ಯಕತೆ ಇರಲಿಲ್ಲ. ತಾನು ಬೆಳೆದ ಬೆಳೆಗಳಾದ ಜೋಳ, ಹೆಸರು, ಕಡಲೆ, ಶೇಂಗಾ, ತೊಗರಿ, ಮಡಿಕೆ ಹೀಗೆ ಎಲ್ಲಾ ದವಸ-ಧಾನ್ಯಗಳನ್ನು ಬಡಿಗ ಮತ್ತು ಕಮ್ಮಾರನಿಗೆ ಕೊಡುತ್ತಿದ್ದನು. ಆದ್ದರಿಂದ ಕಮ್ಮಾರರು, ಬಡಿಗರು ತಮ್ಮ ಆಹಾರ ಧಾನ್ಯವನ್ನು ಹಣ ಕೊಟ್ಟು ಖರೀದಿಸುವ ಅವಶ್ಯಕತೆ ಇರಲಿಲ್ಲ. ಇದಕ್ಕೆ ಆಯಾ ಪದ್ಧತಿ ಎಂದು ಹೇಳುವರು. ಇದು ಗ್ರಾಮದ ಜನರೇ ಪರಸ್ಪರಾವಲಂಬನೆಯ ಮೂಲಕ ಕೊಡು-ಕೊಳ್ಳುವಿಕೆಯು ನಡೆಯುತ್ತಿತ್ತು. ಆದರೆ ಇಂದು ಕಟ್ಟಿಗೆ ಮತ್ತು ಕಬ್ಬಿಣ ಕೆಲಸಕ್ಕೆ ಯಂತ್ರಗಳ ಆಗಮನದಿಂದ ರೈತರು ಕಮ್ಮಾರರನ್ನು ಅವಲಂಬಿಸುತ್ತಿಲ್ಲ. ಕಮ್ಮಾರರು ಮತ್ತು ಬಡಿಗತನದವರು ರೈತರನ್ನೇ ಕಾಯ್ದು ಕೂಡುವುದಿಲ್ಲ. ಏಕೆಂದರೆ ಇಂದಿನ ಎಲ್ಲಾ ಕೆಲಸಗಳು ವ್ಯವಹಾರಿಕ ರೂಪ ಪಡೆಯುತ್ತಿವೆ. ನಿರ್ದಿಷ್ಟ ಕೆಲಸಕ್ಕೆ ನಿರ್ದಿಷ್ಟ ಪ್ರಮಾಣದ ಹಣ ನಿಗದಿಯಾಗುತ್ತಿದೆ. ಆದರೂ ಗ್ರಾಮದಲ್ಲಿ ಇದು ಸಂಪೂರ್ಣವಾಗಿ ಆವರಿಸಿಲ್ಲ. ಬಡಿಗತನ ಮತ್ತು ಕಮ್ಮಾರಿಕೆಯ ಕೆಲಸಗಳ ಪಾರಂಪರಿಕ ಕೆಲಸದವರು ಗ್ರಾಮದಲ್ಲಿದ್ದಾರೆ. ಆಧುನಿಕತೆ ಇಲ್ಲಿ ಕ್ರಮೇಣ ಅವರಿಸುವ ಸಾಧ್ಯತೆ ಇದೆ.

ಬುಟ್ಟಿ ಮತ್ತು ಕಸಬರಿಗೆ ತಯಾರಿಕೆ (ಕೊರವರು)

ಗ್ರಾಮದಲ್ಲಿ ಬುಟ್ಟಿ ಮತ್ತು ಕಸಬರಿಗೆ ತಯಾರಿಸುವ ಭಜಂತ್ರಿ (ಕೊರವ) ಸಮುದಾಯದ ೪-೫ ಕುಟುಂಬಗಳು ಗ್ರಾಮದಲ್ಲಿವೆ. ಆದರೆ ಪ್ಲಾಸ್ಟಿಕ್ ಯುಗದ ಆಗಮನದಿಂದಾಗಿ ಅವರ ಬುಟ್ಟಿ ಮತ್ತು ಕಸಬರಿಗೆಗಳಿಗೆ ಬೇಡಿಕೆ ಕಡಿಮೆಯಾಗಿದೆ. ಪಾರಂಪರಿಕವಾಗಿ ಇವರಲ್ಲಿ ಆಯಾ ಪದ್ಧತಿ ಇತ್ತು. ಆದರೆ ಇಂದು ಅದು ಮಾಯವಾಗುತ್ತಿದೆ. ಆದರೂ ಬೆರಳೆಣಿಕೆಯ ಕುಟುಂಬಗಳಲ್ಲಿ ಇನ್ನೂ ಜೀವಂತವಿದೆ.

ಚಮ್ಮಾರಿಕೆ

ರೈತನಿಗೆ ಬೇಕಾದ ಜತ್ತಿಗೆ, ಕಳೆಬಾರ ಹಾಗೂ ಚಪ್ಪಲಿ ತಯಾರಿಕೆಯು ಗ್ರಾಮದ ಹರಿಜನರಲ್ಲಿ ಪಾರಂಪರಿಕವಾಗಿ ರೂಢಿಯಲ್ಲಿತ್ತು. ಇದರಲ್ಲಿಯು ಸಹ ಆಯಾ ಪದ್ಧತಿ ರೂಢಿಯಲ್ಲಿತ್ತು. ಆದರೆ ರೈತನಿಗೆ ಪ್ಲಾಸ್ಟಿಕ್ ಚಪ್ಪಲಿ ಹಾಗೂ ಹಗ್ಗ ಮಿಣಿ[೪] ಕಣ್ಣಿಗಳು ಬಂದುದರಿಂದ ಚಮ್ಮಾರಿಕೆಯ ಕೆಲಸಗಾರರು ತಮ್ಮ ಕುಲಕಸುಬನ್ನು ಕೈಬಿಟ್ಟಿದ್ದಾರೆ. ಕೆಲವು ಕುಟುಂಬಗಳಲ್ಲಿ ಅಗತ್ಯಕ್ಕನುಗುಣವಾಗಿ ಚಮ್ಮಾರಿಕೆ ಕೆಲಸ ಮಾಡುತ್ತಾರೆ. ಆದರೂ ಅದು ಪಳೆಯುಳಿಕೆಯಾಗುತ್ತಿದೆ.

ಕುಂಬಾರಿಕೆ

ಗ್ರಾಮದಲ್ಲಿ ಮೂಲತಃ ಕುಂಬಾರರು ಇಲ್ಲವಾದರೂ ಹತ್ತಿರದ ಶಿರಹಟ್ಟಿಯಿಂದ ಬಂದು ರೈತರಿಗೆ ಹರಿವೆ, ಬಿಂದಿಗೆ, ತತ್ರಾಣಿ, ಗಡಿಗೆಗಳನ್ನು ಒದಗಿಸುತ್ತಿದ್ದರು. ರೈತರು ಇದಕ್ಕೆ ಪ್ರತಿಯಾಗಿ ದವಸ-ಧಾನ್ಯ ಕೊಡುತ್ತಿದ್ದರು. ಆದರೆ ಇಂದು ಮನೆಯಲ್ಲಿ ಬಹುಪಾಲು ಸ್ಟೀಲ್ ಹಾಗೂ ಪ್ಲಾಸ್ಟಿಕ್ ಸಾಮಗ್ರಿಗಳ ಬಳಕೆ ಇರುವುದರಿಂದ ಕುಂಬಾರರ ಮತ್ತು ರೈತರ ನಡುವಿನ ಪರಸ್ಪರಾವಲಂಬನೆಯ ಕೊಂಡಿ ಕಳಚುತ್ತಿದೆ. ಆದರೂ ಪೂಜೆಯ ಬಿಂದಿಗೆ ಹಾಗೂ ಮದುವೆಯಲ್ಲಿ ಐರಾಣಿಗಾಗಿ[೫] ಕುಂಬಾರರು ಅನಿವಾರ್ಯವಾಗಿದ್ದಾರೆ. ಆ ಹಿನ್ನೆಲೆಯಲ್ಲಿ ಕುಲಕಸುಬು ಪರಂಪರೆ ಮುಂದುವರೆದಿದೆ.

ಹಿರೇಮಠರು

ಗ್ರಾಮದ ಹಿಂದೂ ಸಮುದಾಯದಲ್ಲಿ ನೆರವೇರಿಸುವ ಮದುವೆ, ಗೃಹಪ್ರವೇಶ, ವಿವಿಧ ಪೂಜೆಗಳಿಗೆ ಗ್ರಾಮದ ಹಿರೇಮಠರು ಗುರುಗಳಾಗಿರುತ್ತಾರೆ. ಅವರು ಸಾಂಪ್ರದಾಯಕ ವಿಧಿ ವಿಧಾನಗಳ ಮೂಲಕ ಗ್ರಾಮದ ಎಲ್ಲಾ ಮನೆಯಲ್ಲಿ ಧಾರ್ಮಿಕ ಕಾರ್ಯಗಳನ್ನು ಪೂರೈಸುತ್ತಾರೆ. ಇದಕ್ಕೆ ಪ್ರತಿಯಾಗಿ ರೈತರು ಸುಗ್ಗಿಯ ಸಮಯದಲ್ಲಿ ಬೆಳೆಯುವ ಎಲ್ಲಾ ಬೆಳೆಗಳನ್ನು ಅವರಿಗೆ ಭಕ್ತಿಪೂರ್ವಕವಾಗಿ ಕೊಡುತ್ತಾರೆ. ಇದು ಇಂದಿಗೂ ಮುಂದುವರೆದಿದೆ. ಗ್ರಾಮದ ಬೇರೆ ಬೇರೆ ಸಮುದಾಯಗಳಲ್ಲಿ ಆಯಾ ಸಮುದಾಯದ ಗುರುಸ್ವಾಮಿಗಳು ಇರುತ್ತಾರೆ.

ಹೂಗಾರರು

ಹೂಗಾರರು ಮದುವೆಯಲ್ಲಿ ಬಾಸಿಂಗ, ದಂಡಿ ಹಾಗೂ ಶ್ರಾವಣ ಹಾಗೂ ವಿಶೇಷ ಪೂಜಾ ದಿನಗಳಲ್ಲಿ ಪತ್ರಿಯನ್ನು ಕೊಡುತ್ತಾರೆ. ಅದಕ್ಕೆ ಪ್ರತಿಯಾಗಿ ರೈತರು ದವಸ-ಧಾನ್ಯ ಕೊಡುತ್ತಾರೆ. ಈ ಸಂಪ್ರದಾಯ ಈಗಲೂ ಮುಂದುವರೆದಿದೆ.

ಪೂಜಾರಿಗಳು

ಗ್ರಾಮದ ರಕ್ಷಣೆ ಗ್ರಾಮ ದೇವತೆಗಳಿಂದ ನಡೆಯುತ್ತದೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ. ಇಂಥ ಗ್ರಾಮದೇವತೆಗಳನ್ನು ಪೂಜಿಸುವ ಪೂಜಾರಿಗಳಿಗೆ ಅವರ ಶ್ರಮಕ್ಕೆ ಪ್ರತಿಯಾಗಿ ಗ್ರಾಮದ ರೈತರೆಲ್ಲಾ ಸುಗ್ಗಿಯ ಸಮಯದಲ್ಲಿ ದವಸ-ಧಾನ್ಯಗಳನ್ನು ಕೊಡುತ್ತಾರೆ.

ಹೀಗೆ ಕುಲಕಸುಬುದಾರರ ಹಾಗೂ ರೈತನ ನಡುವಿನ ಪರಸ್ಪರಾವಲಂಬನೆಯು ಆರ್ಥಿಕತೆಯ ಕೊಂಡಿಯಾಗಿರುವುದು ಗ್ರಾಮದಲ್ಲಿ ಕಂಡುಬರುತ್ತದೆ.

ವ್ಯಾಪಾರ ವಹಿವಾಟು

ಸೊರಟೂರ ಗ್ರಾಮ ಅತೀ ಚಿಕ್ಕದು ಅಲ್ಲದ, ಬಹುದೊಡ್ಡದು ಅಲ್ಲದ ಮಧ್ಯಮ ಗಾತ್ರದ ಗ್ರಾಮವಾಗಿದ್ದು ಇಲ್ಲಿ ವ್ಯಾಪಾರ ವಹಿವಾಟು ನಡೆಸುವ ಜನರು ಇದ್ದಾರೆ. ಆದರೆ ಗ್ರಾಮ ಮಟ್ಟದ ಕಿರಾಣಿ ಮತ್ತಿತರೆ ಸಣ್ಣಪುಟ್ಟ ವ್ಯವಹಾರ ಮಾತ್ರ ನಡೆಯುತ್ತದೆ. ವಾರದ ಸಂತೆಗೆ ಶಿರಹಟ್ಟಿಗೆ ಹೋಗುವುದು ಸಾಮಾನ್ಯ. ಆದರೆ ಇತ್ತೀಚೆಗೆ ಗ್ರಾಮಸ್ಥರು ಸೊರಟೂರಿನಲ್ಲಿಯೇ ಶನಿವಾರ ಸಂತೆಯನ್ನು ಮಾಡಿದ್ದಾರೆ. ಇದರಿಂದ ಗ್ರಾಮಕ್ಕೆ ಅನುಕೂಲವೂ ಆಗಿದೆ. ಸೊರಟೂರ ಗದಗ ತಾಲೂಕಿನ ಗ್ರಾಮವಾಗಿದ್ದು ಗದಗದಲ್ಲಿ ಎ.ಪಿ.ಎಂ.ಸಿ. ಸೇರಿದಂತೆ ದಲ್ಲಾಳಿ ವರ್ತಕರ ವಹಿವಾಟುಗಳಿವೆ. ಆದರೆ ಸೊರಟೂರ ಗ್ರಾಮದ ದಲ್ಲಾಳಿ ವರ್ತಕರು ಯಾರೂ ಇಲ್ಲ. ಅಂದರೆ ಗ್ರಾಮದಲ್ಲಿ ಆರ್ಥಿಕವಾಗಿ ಸದೃಢವಾದ ವ್ಯಾಪಾರಿಗಳಿಲ್ಲ ಎಂದು ತಿಳಿಯುತ್ತದೆ.

ಕೃಷಿ ಕಾರ್ಮಿಕರು

ಗ್ರಾಮದಲ್ಲಿ ಭೂಮಿಯನ್ನು ಹೊಂದದೇ ಇರುವ ಕೃಷಿ ಕಾರ್ಮಿಕರ ಸಂಖ್ಯೆಯು ಅಧಿಕವಾಗಿದೆ. ೧ ಎಕರೆ - ೨ ಎಕರೆ ತುಂಡುಭೂಮಿ ಹೊಂದಿದವರು ಅಧಿಕವಾಗಿದ್ದಾರೆ. ಇವರೆಲ್ಲ ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಹಾಗೂ ಕೃಷಿಯೇತರ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅದರಲ್ಲೂ ಗ್ರಾಮದ ಮುಸ್ಲಿಂ ಸಮುದಾಯದಲ್ಲಿ ಕಾರ್ಮಿಕರ ಸಂಖ್ಯೆ ಅಧಿಕವಾಗಿದೆ. ಇವರು ರೈತ ಕೃಷಿ ಕಾರ್ಯಕ್ಕೆ ಅಗತ್ಯವಾಗಿದ್ದಾರೆ. ಆದರೆ ಸೊರಟೂರ ಗ್ರಾಮದಲ್ಲಿ ಭೂಮಿಯಲ್ಲಿ ಇಳುವರಿಯು ನೆರೆಯ ಅಣ್ಣಿಗೇರಿ, ಕುರ್ತಕೋಟಿ, ಅಂತೂರ–ಬೆಂತೂರ ಗ್ರಾಮಗಳಷ್ಟು ಇಳುವರಿ ಬರುವುದಿಲ್ಲ. ಆದ್ದರಿಂದ ಗ್ರಾಮದ ರೈತರು ಕಾರ್ಮಿಕರಿಗೆ ೫೦–೬೦ ರೂ. ಕೂಲಿಯನ್ನು ಕೊಡಲು ಸಾಧ್ಯವಾಗುತ್ತದೆ. ಆದರೆ ನೆರೆಯ ಕುರ್ತಕೋಟಿ, ಅಂತೂರ–ಬೆಂತೂರ ಮುಂತಾದ ಗ್ರಾಮಗಳ ರೈತರು ಸುಗ್ಗಿಯ ದಿನಗಳಲ್ಲಿ ಕಾರ್ಮಿಕರಿಗೆ ೧೦೦ ರೂ. ಕೂಲಿ ಕೊಡುವುದರಿಂದ ಗ್ರಾಮದ ಕಾರ್ಮಿಕರು ಪ್ರತಿದಿನ ಹೆಚ್ಚಿನ ಕೂಲಿಗಾಗಿ ನೆರೆಯ ಗ್ರಾಮಕ್ಕೆ ಹೋಗುತ್ತಾರೆ. ಆದರೆ ಇದು ಅವರಿಗೆ ಸುಗ್ಗಿಯ ಕೆಲವೇ ದಿನಗಳಲ್ಲಿ ಮಾತ್ರ ಸಿಗುತ್ತದೆ. ಅದೇ ಸುಗ್ಗಿಯ ದಿನಗಳಲ್ಲಿ ಸೊರಟೂರ ರೈತರಿಗೆ ಕಾರ್ಮಿಕರೇ ಸಿಗುವುದಿಲ್ಲ. ಇದು ಗ್ರಾಮದ ರೈತರ ಹಾಗೂ ಕಾರ್ಮಿಕರ ಅತಂತ್ರ ಸ್ಥಿತಿಯಾಗಿದೆ. ಪರಿಣಾಮವಾಗಿ ಗ್ರಾಮದ ಕಾರ್ಮಿಕರು ಗೋವಾ, ಮಂಗಳೂರು ಕಡೆಗೆ ವಲಸೆ ಹೋಗುತ್ತಾರೆ. ಅಲ್ಲಿಯ ಹವಾಗುಣ ಹಾಗೂ ದುಶ್ಚಟಗಳ ಫಲವಾಗಿ ವಲಸೆಯ ಸ್ಥಳದಲ್ಲಿ ಅಪಾಯಗಳು ಸಂಭವಿಸಿ ಗ್ರಾಮದ ಜನತೆ ಸಾವು-ನೋವುಗಳನ್ನು ಅನುಭವಿಸಿದ್ದಾರೆ. ಆದ್ದರಿಂದ ಗ್ರಾಮದ ಕಾರ್ಮಿಕರಿಗೆ ಶಾಶ್ವತ ಉದ್ಯೋಗ ಒದಗಿಸುವ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗಿದೆ.

ಸರಕಾರಿ ನೌಕರರು ಹಾಗೂ ಸ್ವಉದ್ಯೋಗಿಗಳು

'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಮಾತೊಂದು ಇತ್ತು. ಆದರೆ ಇಂದು 'ಉದ್ಯೋಗಂ ಸ್ತ್ರೀ-ಪುರುಷರ ಲಕ್ಷಣಂ' ಎಂಬುದಾಗಿ ಬದಲಾಗಿದೆ. ಏಕೆಂದರೆ ಯಾವುದೇ ಸರಕಾರಿ ಹಾಗೂ ಅರೆಸರಕಾರಿ ಸೇವೆಗಳಲ್ಲಿ ಪುರುಷರಂತೆ ಅಥವಾ ಪುರುಷರಿಗಿಂತ ಮಿಗಿಲಾಗಿ ಮಹಿಳೆಯರು ತೊಡಗಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಸೈನಿಕ ಸೇವೆ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ಅರಣ್ಯ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ೭೦ಕ್ಕೂ ಹೆಚ್ಚು ಜನರು ಸರಕಾರಿ ನೌಕರಿ ಪಡೆದಿದ್ದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿಗಳಲ್ಲಿ, ಅರಣ್ಯ ಇಲಾಖೆಯಲ್ಲಿ, ಪಂಚಾಯತ್ ರಾಜ್ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಅರೆಸರಕಾರಿ ನೌಕರರಾಗಿಯೂ ಕೆಲಸ ನಿರ್ವಹಿಸುತ್ತಿದ್ದಾರೆ. ವೈದ್ಯಕೀಯ ವೃತ್ತಿ, ಮೆಕ್ಯಾನಿಕ್, ಹೈನುಗಾರಿಕೆ, ವ್ಯಾಪಾರ ಸೇರಿದಂತೆ ವಿವಿಧ ಸ್ವಉದ್ಯೋಗಗಳನ್ನು ಮಾಡುವವರು ಗ್ರಾಮದಲ್ಲಿದ್ದಾರೆ. ಈ ಎಲ್ಲಾ ಉದ್ಯೋಗಗಳು ಗ್ರಾಮದ ಆರ್ಥಿಕ ಸದೃಢತೆಗೆ ಪೂರಕವಾಗಿವೆ.

ಹಣಕಾಸು ಸಂಘಸಂಸ್ಥೆಗಳು

ಗ್ರಾಮದಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಇದ್ದು ಗ್ರಾಮದ ರೈತ ಸಮುದಾಯಕ್ಕೆ ಉಳಿತಾಯ ಸೇರಿದಂತೆ ಜನರ ಹಣಕಾಸು ವ್ಯವಹಾರಗಳಿಗೆ ಉತ್ತಮ ಸೇವೆ ಒದಗಿಸುತ್ತಿದೆ. ಗ್ರಾಮದಲ್ಲಿ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಕೂಡ ರೈತರ ನೆರವಿಗಾಗಿ ಇರುವ ಸಂಸ್ಥೆಯಾಗಿದ್ದು, ಕರ್ನಾಟಕ ಸರಕಾರದ ಸಹಕಾರಿ ಕ್ಷೇತ್ರಕ್ಕೆ ಒಳಪಟ್ಟಿದೆ ಹಾಗೂ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘ, ಎಣ್ಣೆಬೀಜ ಬೆಳೆಗಾರರ ಸಂಘಗಳು ಗ್ರಾಮಸ್ಥರ ಆರ್ಥಿಕ ಬಲವರ್ಧನೆಗಾಗಿ ಸೇವೆ ಒದಗಿಸುವ ಸಂಸ್ಥೆಗಳಾಗಿವೆ. ಈ ಎಲ್ಲಾ ಸಂಸ್ಥೆಗಳು ಗ್ರಾಮದ ಕೆಲವು ಜನರಲ್ಲಿದ್ದ ಅಂಧಕಾರಗಳನ್ನು ದೂರಮಾಡಿವೆ. ಹಣ, ಬಂಗಾರಗಳನ್ನು ನೆಲದಲ್ಲಿ ಹೂಳುವುದು ಅಥವಾ ಭದ್ರತೆಗಾಗಿ ಬೇರೊಬ್ಬರ ಮನೆಯಲ್ಲಿ ಇಡುವಂಥ ಆರ್ಥಿಕ ಅಂಧಕಾರಗಳು ದೂರವಾಗಲು ಈ ಮೇಲಿನ ಸಂಘ ಸಂಸ್ಥೆಗಳು ಸಹಕಾರಿಯಾಗಿವೆ.

ಶತಮಾನೋತ್ಸವ ಸಂಭ್ರಮದಲ್ಲಿರುವ ಸೊರಟೂರ ವ್ಹಿ.ಎಸ್.ಎಸ್. ಬ್ಯಾಂಕ್

'ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ' ಎಂಬ ಸಹಕಾರಿ ತತ್ವದ ಮೂಲ ಆಶಯದೊಂದಿಗೆ ನಮ್ಮ ದೇಶಕ್ಕೆ ಸಹಕಾರಿ ರಂಗದ ಪರಿಕಲ್ಪನೆಯನ್ನು ಕೊಟ್ಟ ಜಿಲ್ಲೆ ಗದಗ ಎಂಬುದು ಜಿಲ್ಲೆಯ ಜನರಿಗೆ ಹೆಮ್ಮೆಯ ಸಂಗತಿ. ಆ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯ ಗದಗ ತಾಲೂಕಿನ ಸೊರಟೂರ ಗ್ರಾಮದಲ್ಲಿ ೦೧-೦೯-೧೯೧೩ರಂದು ಗ್ರಾಮ ಸೇವಾ ಸಹಕಾರಿ ಸಂಘವನ್ನು ಸ್ಥಾಪಿಸಲಾಯಿತು. ಈ ಸಂಘದ ನೋಂದಣಿ ಸಂಖ್ಯೆ ೬೨೯. ಈ ಸಂಘದ ಸ್ಥಾಪಕ ಅಧ್ಯಕ್ಷರು ಶ್ರೀ ತ್ರಯಂಬಕ ಲಕ್ಷ್ಮಣ ವೈದ್ಯ. ಈ ಸಂಘದ ಹೆಸರೇ ಸೂಚಿಸುವಂತೆ ಗ್ರಾಮಸ್ಥರ ಸಹಕಾರದಿಂದ ಸೊರಟೂರ ಗ್ರಾಮದಲ್ಲಿ ಹಲವಾರು ಸೇವಾ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಅರ್ಥವ್ಯವಸ್ಥೆಯ

ಸುಧಾರಣೆ ಮಾಡಿರುವುದನ್ನು ಗ್ರಾಮದ ವಯೋವೃದ್ಧ ಹಿರಿಯರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಶ್ರೀ ತ್ರಯಂಬಕ ವೈದ್ಯರು ಹಾಗೂ ಗ್ರಾಮದ ಗಣ್ಯರು ಪ್ರಾರಂಭಿಸಿದ ಈ ಸಂಘ ಗ್ರಾಮದಲ್ಲಿ ಸಹಕಾರಿ ಕ್ಷೇತ್ರಕ್ಕೆ ಭದ್ರಬುನಾದಿ ಹಾಕಿದೆ. ಪ್ರಾರಂಭದಲ್ಲಿ ಹಲವಾರು ಏಳುಬೀಳುಗಳನ್ನು ಕಂಡರು ಸಹ ೧೯೫೫ರಿಂದ ಗುರುತರ ಕಾರ್ಯನಿರ್ವಹಿಸುತ್ತ ಬಂದಿರುವುದು ದಾಖಲೆಗಳಿಂದ ತಿಳಿದುಬರುತ್ತದೆ.

ಸೊರಟೂರ ಪ್ಹಿ.ಎಸ್.ಎಸ್. ಬ್ಯಾಂಕಿನ ಆಡಳಿತ ಮಂಡಳಿಯ ಅಧ್ಯಕ್ಷರ ವಿವರ

ಕ್ರ.ಸಂ.	ಅಧ್ಯಕ್ಷರ ಹೆಸರು ಕಾಲಾವಧಿ
೧.	ಶ್ರೀ ತ್ರಯಂಬಕ ಲಕ್ಷ್ಮಣ ವೈದ್ಯ ೦೧-೦೯-೨೦೧೩ ಸ್ಥಾಪಕ ಅಧ್ಯಕ್ಷರು
೨.	ಶ್ರೀ ರಾಮಚಂದ್ರಪ್ಪ. ಬಂ. ವೈದ್ಯ
೩.	ಶ್ರೀ ಶಿವರಾಯಪ್ಪ ಯ. ಸಾತಪ್ಪನವರ
೪.	ಶ್ರೀ ಮಲ್ಲಪ್ಪ ರು. ಕುಸ್ಲಾಪುರ
೫.	ಶ್ರೀ ಬಾಪುಗೌಡ ಹು. ಪಾಟೀಲ್
೬.	ಶ್ರೀ ಸೊಲಬಯ್ಯ ಅ. ಹಿರೇಮಠ (ಹಂಗನಕಟ್ಟಿ), ೧೯೯೦-೧೯೯೫
೭.	ಶ್ರೀ ಚನ್ನಬಸಪ್ಪ ಬ. ಸಂಶಿ, ೨-೮-೧೯೯೫ ರಿಂದ ೧೫-೫-೧೯೯೮
೮.	ಶ್ರೀ ಮಲ್ಲಪ್ಪ. ಎಫ್. ಕಲಗುಡಿ, ೧೯೯೮ ರಿಂದ ೨೦೦೧
೯.	ಶ್ರೀ ಮಲ್ಲಪ್ಪ ಎಫ್. ಕಲಗುಡಿ, ೧೫-೧-೨೦೦೧ ರಿಂದ ೧೦-೩-೨೦೦೬
೧೦.	ಶ್ರೀ ದೇವಪ್ಪ ಕಿತ್ಲಿ, ೨೮-೩-೨೦೦೬ ರಿಂದ ೧೦-೩-೨೦೧೧
೧೧.	ಶ್ರೀ ಶಿವಪ್ಪ ಆರ್. ಹೋಳಗಿ, ೧-೪-೨೦೧೧ ರಿಂದ ೨೫-೬-೨೦೧೨
೧೨.	ಶ್ರೀ ಪರಸಪ್ಪ ಯ. ಮಲ್ಲಾರಿ, ೨೬-೬-೨೦೧೨ ರಿಂದ

೧೩-೮-೨೦೧೪ ರಿಂದ ಆಡಳಿತ ನಿರ್ವಹಿಸುತ್ತಿರುವ ಆಡಳಿತ ಮಂಡಳಿಯ ವಿವರ

ಕ್ರ.ಸಂ.	ಹೆಸರು	ಹುದ್ದೆ
೧.	ಶ್ರೀ ಶಿವಮೂರ್ತಿ ಎಂ. ಕರಿಗೌಡ್ರ	ಅಧ್ಯಕ್ಷರು
೨.	ಶ್ರೀಮತಿ ದೇವಕ್ಕ ಆರ್. ಜೈನರ	ಉಪಾಧ್ಯಕ್ಷರು
೩.	ಶ್ರೀ ಮಲ್ಲಪ್ಪ ಎಫ್. ಕಲಗುಡಿ	ಸದಸ್ಯರು
೪.	ಶ್ರೀ ಬಾಪುಗೌಡ ಎಚ್. ಪಾಟೀಲ್	ಸದಸ್ಯರು
೫.	ಶ್ರೀ ಶಿವಪ್ಪ ಆರ್. ಹೋಳಗಿ	ಸದಸ್ಯರು

೬.	ಶ್ರೀ ಪರಸಪ್ಪ ಯ. ಮಲ್ಲಾರಿ	ಸದಸ್ಯರು
೭.	ಶ್ರೀ ರಾಮಪ್ಪ ಕೆ. ತಳವಾರ	ಸದಸ್ಯರು
೮.	ಶ್ರೀ ಫಕ್ಕಿರಪ್ಪ ಎಮ್. ಮಟ್ಟಿ	ಸದಸ್ಯರು
೯.	ಶ್ರೀ ಯು. ಆರ್. ಮುದಕಣ್ಣವರ	ಕೆ.ಸಿ.ಸಿ.ಬ್ಯಾಂಕ್ ಪ್ರತಿನಿಧಿ

೧೯೯೫ರ ಆಡಳಿತ ಮಂಡಳಿ

೧. ಶ್ರೀ ಸಿ.ಬಿ. ಸಂಶಿ

೨. ಶ್ರೀ ಬಿ.ಎಚ್. ಪಾಟೀಲ

೩. ಶ್ರೀ ಸೊಲಬಯ್ಯ ಅ. ಹಿರೇಮಠ

೪. ಶ್ರೀ ಯಲ್ಲಪ್ಪ ಉ. ಮಲ್ಲಾರಿ

೫. ಶ್ರೀ ಶಂಕ್ರಪ್ಪ ಬ. ಚಪಾಟಿ

೬. ಶ್ರೀ ದೇವಕ್ಕ ಕೃಷ್ಣಗೌಡ ಪಾಟೀಲ್

೭. ಶ್ರೀ ಫಕ್ರುಸಾಬ ಕುಸಣ್ಣವರ

ಈ ಏಳು ಜನ ಮಹನೀಯರು ಸಂಘದ ಆಡಳಿತ ನಿರ್ವಹಿಸಲು ಪ್ರಾರಂಭಿಸಿರುವುದು ಸಂಘದ ಪುನರ್ಜನ್ಮವೆಂದೇ ಹೇಳಬೇಕು. ಏಕೆಂದರೆ ಹಲವಾರು ವರ್ಷಗಳಿಂದ ತಟಸ್ಥಗೊಂಡಿದ್ದ ಈ ಸಂಘಕ್ಕೆ ಹೊಸ ಚೈತನ್ಯ ತುಂಬುವಲ್ಲಿ ಇವರ ಪಾತ್ರ ಬಹಳ ಮುಖ್ಯವಾಗಿದೆ. ೧೯೯೫ರ ಸಂದರ್ಭದಲ್ಲಿ ಸಂಘ ೩೭ ಸಾವಿರ ರೂಪಾಯಿ ಸಾಲದ ಬಾಕಿ ಹೊಂದಿದ್ದು. ಯಾವುದೇ ಬಂಡವಾಳ ಹೊಂದಿರಲಿಲ್ಲ. ಇಂಥ ಸಂಕಷ್ಟದ ಪರಿಸ್ಥಿತಿಯಲ್ಲಿ ೩೭ ಸಾವಿರ ರೂಪಾಯಿ ಸಾಲ ವಸೂಲಾತಿ ಮಾಡಿ ೯೦ ಸಾವಿರ ರೂಪಾಯಿ ಹೊಸ ಸಾಲ ಕೊಡುವ ಮೂಲಕ ಗ್ರಾಮದ ರೈತರ ಆರ್ಥಿಕ ಅಭಿವೃದ್ಧಿಗೆ ಮುನ್ನುಡಿ ಬರೆಯಿತು. ಹಾಗೆಯೇ

೧೯೯೬ರಲ್ಲಿ ೧ ಲಕ್ಷ ೮೦ ಸಾವಿರ

೧೯೯೭ರಲ್ಲಿ ೨ ಲಕ್ಷ ೪೦ ಸಾವಿರ

ಬೆಳೆ ಸಾಲ ಕೊಡುತ್ತಾ ತನ್ನ ಆರ್ಥಿಕ ವಹಿವಾಟನ್ನು ಹೆಚ್ಚಿಸಿಕೊಳ್ಳುತ್ತಾ ಮುನ್ನಡೆಯಿತು. ಆದರೆ ಸೊರಟೂರ ವ್ಹಿ.ಎಸ್.ಎಸ್. ಬ್ಯಾಂಕಿಗೆ ಸ್ವಂತ ಕಟ್ಟಡವಿರಲಿಲ್ಲ. ೧೯೯೮ರಲ್ಲಿ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಸಿ.ಬಿ. ಸಂಶಿಯವರು ದಿ. ಶ್ರೀ ಮುದಕಪ್ಪ ವೀರಪ್ಪ ಸಂಶಿಯವರ ಸ್ಮರಣಾರ್ಥವಾಗಿ ಭೂದಾನ ಮಾಡಿದರು. ಅದರ ಫಲವಾಗಿ ಈಗ ಸೊರಟೂರ ಗದಗ ರಸ್ತೆಯ ಬಲಬದಿಯಲ್ಲಿ ಶಾಸ್ತ್ರೀಯವರ ತೋಟದ ಎದುರುಗಡೆ ಬ್ಯಾಂಕಿನ ಸುಂದರ ಕಟ್ಟಡ ಕಂಗೊಳಿಸುತ್ತಿದೆ. ಗದಗದಿಂದ ಸೊರಟೂರಿಗೆ ಬರುವಾಗ ಎಡಬದಿಯಲ್ಲಿ ಕಾಣುವ ಮೊದಲ ಕಟ್ಟಡವೇ ಸೊರಟೂರ ವ್ಹಿ.ಎಸ್.ಎಸ್. ಬ್ಯಾಂಕ್.

೧೯೯೮ರವರೆಗೆ ೪ ಲಕ್ಷವಿದ್ದ ಬೆಳೆ ಸಾಲವನ್ನು ೧೯೯೯ರಲ್ಲಿ ೧೦ ಲಕ್ಷಕ್ಕೆ ೨೦೦೦ರಲ್ಲಿ ಇದನ್ನು ೧೪ ಲಕ್ಷಕ್ಕೆ ಹೆಚ್ಚಿಸಿದ್ದಾರೆ. ೨೦೦೧ರಲ್ಲಿ ಇದು ೨೫ ಲಕ್ಷ ದಾಟಿತು. ಹೀಗೆ ೨೦೧೨ರ ಹೊತ್ತಿಗೆ ಬ್ಯಾಂಕ್ ೧ ಕೋಟಿ ೧೯ ಲಕ್ಷ ಬಡ್ಡಿರಹಿತ ಸಾಲ ವಿತರಿಸಿದ್ದು ದಾಖಲೆ ಎಂದೇ ಹೇಳಬೇಕು.

೨೦೦೭ರಲ್ಲಿ ರಾಜ್ಯ ಸರ್ಕಾರ ರೈತರ ಬೆಳೆ ಸಾಲ ಮತ್ತು ಬಡ್ಡಿ ಮನ್ನಾ ಮಾಡಿತು. ಇದರಿಂದ ಗ್ರಾಮದ ೧೧೨ ಜನ ರೈತರು ಪಡೆದಿದ್ದ ೧೦ ಲಕ್ಷ ೭೫ ಸಾವಿರ ರೂಪಾಯಿ ಮನ್ನಾ ಆಯಿತು.

ಹಾಗೆಯೇ ೨೦೧೧-೧೨ರಲ್ಲಿ ರಾಜ್ಯ ಸರ್ಕಾರ ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರು ಪಡೆದಿರುವ ಸಾಲದಲ್ಲಿ ತಲಾ ೨೫ ಸಾವಿರ ರೂಪಾಯಿ ಮನ್ನಾ ಮಾಡಿತು. ಇದರಿಂದ ಗ್ರಾಮದ ೨೫೮ ಜನ ಪಡೆದಿರುವ ೬೪ ಲಕ್ಷ ೫೦ ಸಾವಿರ ರೂಪಾಯಿ ಮನ್ನಾ ಆಯಿತು. ಇದರಿಂದ ಸಂಕಷ್ಟದಲ್ಲಿರುವ ಗ್ರಾಮದ ರೈತರು ಚೇತರಿಸಿಕೊಳ್ಳಲು ಸಾಧ್ಯವಾಗಿದೆ.

ಸೊರಟೂರ ವ್ಹಿ.ಎಸ್.ಎಸ್. ಬ್ಯಾಂಕ್ ಕೇವಲ ಬೆಳೆ ಸಾಲಕ್ಕಷ್ಟೇ ಸೀಮಿತವಾಗದೆ. ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದೆ.

ಸೊರಟೂರ ಹಂಗನಕಟ್ಟಿ ಮಹಾಲಿಂಗಪೂರ ಇನಾಂವೆಂಕಟಾಪುರ ವ್ಯಾಪ್ತಿಯನ್ನು ಹೊಂದಿರುವ ಈ ಬ್ಯಾಂಕ್ ಈ ಎಲ್ಲಾ ಗ್ರಾಮಸ್ಥರ ಅನುಕೂಲತೆಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಯಶಸ್ವಿನಿ ಯೋಜನೆ, ಅಪಘಾತ ವಿಮಾ ಯೋಜನೆ, ಸ್ವ-ಸಹಾಯ ಸಂಘಗಳ ರಚನೆ, ಪಡಿತರ ವ್ಯವಸ್ಥೆ, ರಾಸಾಯನಿಕ ಗೊಬ್ಬರ ವಿತರಣೆ, ಚೆಕ್ ಕಲೆಕ್ಷನ್ ಕಾರ್ಯ, ವ್ಯಾಪಾರ ಅಭಿವೃದ್ಧಿ ಯೋಜನೆ ಸೇರಿದಂತೆ ಹಲವಾರು ಕಾರ್ಯಚಟುವಟಿಕೆಗಳ ಮೂಲಕ ಗ್ರಾಮದ ಜನರಿಗೆ ಸೇವಾ ಸೌಲಭ್ಯ ಒದಗಿಸುತ್ತದೆ.

ಗ್ರಾಮದ ನಿಂಗಪ್ಪ ವೆಂಕಪ್ಪ ಬಂಕಾಪೂರ ಅವರು ಹೇಳುವಂತೆ ಯಶಸ್ವಿನಿ ಯೋಜನೆಯಡಿ ೧ ಲಕ್ಷಕ್ಕಿಂತ ಅಧಿಕ ಖರ್ಚಿನ ಹಾರ್ಟ್ ಆಪರೇಷನ್ ಮಾಡಿಸಿಕೊಂಡಿರುವುದು. ಬಡವರಿಗೆ ಸಂಜೀವಿನಿಯಾಗಿದೆ. ಬಿ.ಎಸ್‌ಸಿ. ಕೃಷಿ ಪದವಿ ವಿದ್ಯಾರ್ಥಿಗಳು ಈ ಬ್ಯಾಂಕಿನಲ್ಲಿ ತರಬೇತಿ ಪಡೆದುಕೊಂಡು ಹೋಗಿರುವುದು ಅದರ ಕಾರ್ಯದಕ್ಷತೆಯ ಸಂಕೇತವಾಗಿದೆ.

ಸಂಘದ ಒಟ್ಟು ಸದಸ್ಯರ ಸಂಖ್ಯೆ-೯೮೬. ಇದರಲ್ಲಿ ೨೮೯ ಜನರಿಗೆ ಕೃಷಿ ಸಾಲ ಹಾಗೂ ೮೮ ಜನರಿಗೆ ೮೫೯೬೪೮೦ರಷ್ಟು ಕೃಷಿಯೇತರ ಸಾಲ ಕೊಡಲಾಗಿದೆ. ೧೦೨೬೭೦೬ ರೂ. ಠೇವಣಿ ಸಂಗ್ರಹಿಸಲಾಗಿದೆ. ವ್ಹಿ.ಎಸ್.ಎಸ್. ಬ್ಯಾಂಕಿನಲ್ಲಿ ಒಟ್ಟು ನಾಲ್ಕು ಜನ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಬಸಪ್ಪ ಯಲ್ಲಪ್ಪ ಗಾಣಿಗೇರ, ಕಾರ್ಯನಿರ್ವಾಹಕರು

ಶ್ರೀ ನಾಗಪ್ಪ ಯ. ಗದಗಿನ ಸಹಮುಖ್ಯ ಕಾರ್ಯನಿರ್ವಾಹಕರು

ಶ್ರೀ ಶರೀಪಸಾಬ ಇ. ಅತ್ತಿಕಟ್ಟಿ, ಅಟೆಂಡರ್/ಕ್ಲಾರ್ಕ್

ಶ್ರೀ ಶಂಬು ಮ. ಗದಗಿನ, ಪಿಗ್ಮಿ ಕಲೆಕ್ಟರ್

ಬ್ಯಾಂಕ್ ಈಗ ಶತಮಾನೋತ್ಸವದ ಸಂಭ್ರಮದಲ್ಲಿರುವುದರಿಂದ ಸರ್ಕಾರದ ಹಾಗೂ ದಾನಿಗಳ ದೇಣಿಗೆಯಿಂದ ಶತಮಾನೋತ್ಸವ ಭವನ ನಿರ್ಮಿಸುತ್ತಿದ್ದು, ಕಟ್ಟಡದ ಕಾರ್ಯ ಪ್ರಗತಿಯಲ್ಲಿದೆ.

ಹೀಗೆ ಪ್ರಸ್ತುತ ಸೊರಟೂರ ವ್ಹಿ.ಎಸ್.ಎಸ್. ಬ್ಯಾಂಕ್ ಆಡಳಿತ ಮಂಡಳಿಯ ಪಾರದರ್ಶಕ ಆಡಳಿತ ಹಾಗೂ ಸಿಬ್ಬಂದಿಗಳ ಕ್ರಿಯಾಶೀಲ ಕಾರ್ಯಚಟುವಟಿಕೆ ಹಾಗೂ ಗ್ರಾಮಸ್ಥರ ಸಹಕಾರದಿಂದ ಅಭಿವೃದ್ಧಿ ಪಥದತ್ತ ಮುನ್ನಡೆಯುತ್ತಿದೆ.

ಹಾಲು ಉತ್ಪಾದಕರ ಸಹಕಾರಿ ಸಂಘ ನಿಯಮಿತ, ಸೊರಟೂರ

೧೯೮೪ರಲ್ಲಿ ಪ್ರಾರಂಭವಾದ ಹಾಲು ಉತ್ಪಾದಕರ ಸಹಕಾರಿ ಸಂಘವು ಗ್ರಾಮದ ಗಾಂಧಿ ಬಯಲಿನ ಗ್ರಾಮ ಪಂಚಾಯತಿಯ ಹತ್ತಿರವಿದೆ. ಈ ಸಂಘಕ್ಕೆ ಸೊರಟೂರಿನ ದೇಸಾಯಿಯವರೇ ಭೂದಾನ ಮಾಡಿದ್ದಾರೆ. ಈ ಸಂಘದ ಪ್ರಥಮ ಅಧ್ಯಕ್ಷರು ಶ್ರೀ ಹನುಮಂತಾಚಾರ್ಯ ಸೊರಟೂರ. ಈವರೆಗೆ ಸೊರಟೂರ ಹಾಲು ಉತ್ಪಾದಕರ ಸಂಘಕ್ಕೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು.

೧. ಶ್ರೀ ಹನುಮಂತಾಚಾರ್ಯ, ಸೊರಟೂರ

೨. ಶ್ರೀ ಚನ್ನಪ್ಪ, ಛಬ್ಬಿ

೩. ಶ್ರೀ ಶಿವಪ್ಪ, ಹೋಳಗಿ

೪. ಶ್ರೀ ಮಲ್ಲಪ್ಪ, ಕಲಗುಡಿ

೫. ಶ್ರೀ ರಾಮಣ್ಣ ಶೆಲಿಯಪ್ಪನವರ

೬. ಶ್ರೀ ಮಲ್ಲಪ್ಪ, ಕಲಗುಡಿ

೭. ಶ್ರೀ ಶಿವಬಸಪ್ಪ, ಕುಸ್ಲಾಪೂರ

೮. ಶ್ರೀ ಮಂಜುನಾಥ ನಾ. ಡಂಬಳ

ಈ ಸಂಘ ಕಾರಣಾಂತರಗಳಿಂದ ಹಲವಾರು ಏಳುಬೀಳುಗಳನ್ನು ಕಂಡರೂ ಸಹ ೨೦೦೩ರಲ್ಲಿ ಪುನರಾರಂಭಗೊಂಡಾಗ ಕೇವಲ ಒಂದು ಲೀಟರ್ ಹಾಲಿನಿಂದ ಪ್ರಾರಂಭಗೊಂಡು ಈಗ ಅಂದರೆ ೨೦೧೩ರಲ್ಲಿ ೧೪೨ ಜನ ಹಾಲು ಉತ್ಪಾದಕರನ್ನು ಹೊಂದಿದ್ದು, ೫೧೦ ಲೀಟರ್ ಹಾಲಿನ ಸಂಗ್ರಹವಿದೆ.

ಹಾಲು ಉತ್ಪಾದಕರ ಹಸು ಮತ್ತು ಎಮ್ಮೆಗಳಿಗೆ ವೈದ್ಯರ ಸೌಲಭ್ಯ, ತುರ್ತುಚಿಕಿತ್ಸೆ, ಉಚಿತ ಔಷಧಿ, ಮೇವಿನ ಬೀಜ ವಿತರಣೆ, ಚಾಪಕಟ್ಟರ್ (ಮೇವು ಕೊರೆಯುವ ಯಂತ್ರ) ಸೇರಿದಂತೆ

ಹಲವಾರು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಂಘದ ನಿರ್ದೇಶಕರಿಗೆ ಕ್ಷೇತ್ರ ಭೇಟಿ ಕಾರ್ಯಕ್ರಮದಲ್ಲಿ ಸೊರಟೂರ ಕೆ.ಎಂ.ಎಫ್. ಡೈರೆಕ್ಟರ್ ಶ್ರೀ ಯಲ್ಲಪ್ಪ ಹು. ಜಂಗವಾಡ ಗುಜರಾತ್ ಪ್ರವಾಸಕ್ಕೆ ಹೋಗಿ ಅಲ್ಲಿನ ಹೈನುಗಾರಿಕೆಯ ಕುರಿತು ಮಾಹಿತಿ ಪಡೆದ ಸಂಪನ್ಮೂಲ ವ್ಯಕ್ತಿಗಳಾಗಿದ್ದಾರೆ.

ಸೊರಟೂರ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಈವರೆಗೆ ಸೇವೆ ಸಲ್ಲಿಸಿದ ಸಿಬ್ಬಂದಿಗಳು.

ಪರಸುರಾಮ. ಕುಸ್ಲಾಪುರ

ಹಸನಸಾಬ ದಾ. ಕಲೆಗಾರ

ನಿಂಗಪ್ಪ ಬ. ಬಂಕಾಪುರ

ಸಿದ್ಧಪ್ಪ ಚ. ಗಿಡಕೆಂಚಣ್ಣವರ

ಬಸವರಾಜ ಯ. ಗಾಣಿಗೇರ

ಈಗ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳು (೨೦೧೩)

ಶ್ರೀ ಬಸವರಾಜ ಲೆ. ಕನ್ಯಾಳ – ಮುಖ್ಯ ಕಾರ್ಯನಿರ್ವಾಹಕರು

ಶ್ರೀ. ಮಹಾಂತೇಶ ಈ. ಕಲಗುಡಿ – ಹಾಲು ಪರೀಕ್ಷಕ

ಶ್ರೀ. ದಾವಲಸಾಬ ಫೀ. ಡಂಬಳ – ಸಹಾಯಕ

ಹೀಗೆ ಸಂಘವು ಸೊರಟೂರ ಗ್ರಾಮದ ರೈತರಿಗೆ ಕೃಷಿಪೂರಕ ಚಟುವಟಿಕೆಯಾದ ಹೈನುಗಾರಿಕೆಯಲ್ಲಿ ಅಭಿವೃದ್ಧಿ ಸಾಧಿಸಲು ಪೂರಕವಾಗಿದೆ.

ಶುದ್ಧ ಕುಡಿಯುವ ನೀರಿನ ಘಟಕ

ನೀರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಅದರಲ್ಲೂ ಶುದ್ಧ ನೀರು ಎಂಬುದು ಬಡಜನರಿಗೆ ಸಿಗುವುದೇ ಕಷ್ಟ. ಇಂತಹ ಸಂದರ್ಭದಲ್ಲಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಪ್ರಾರಂಭಿಸಲಾಗಿದೆ. ೨೯-೦೪-೨೦೧೧ರಲ್ಲಿ ಪ್ರಾರಂಭಗೊಂಡ ಈ ಘಟಕಕ್ಕೆ ಶ್ರೀ. ಶಿವಪುತ್ರಪ್ಪಾ ಆರ್. ಹಂಪಿಹೊಳಿಯವರು ಪ್ರೇರಕರಾಗಿದ್ದಾರೆ. ಒಂದು ಲೀಟರ್ ನೀರಿಗೆ ಹತ್ತು ಪೈಸೆಯಂತೆ ೨ ರೂ. ೨೦ ಲೀಟರ್ ನೀರು ಕೊಡುತ್ತಾರೆ. ಇದು ಈಗ ಮಾರುಕಟ್ಟೆಯಲ್ಲಿ ದೊರೆಯುವ ೨೦ ರೂ. ಲೀಟರ್ ನೀರಿಗಿಂತ ಉತ್ತಮ ಗುಣಮಟ್ಟ ಹೊಂದಿರುವುದು ವಿಶೇಷ. ಇದು ಗ್ರಾಮದ ಜನರ ಆರೋಗ್ಯಕ್ಕೆ ಪೂರಕವಾಗಿದೆ. ಪ್ರಾರಂಭದಲ್ಲಿ ೧೦೦೦ ಲೀಟರ್ ನೀರು ಪ್ರತಿದಿನ ಖರ್ಚಾಗುತ್ತಿತ್ತು. ಈಗ ಪ್ರತಿದಿನ ೭೦೦೦ ಲೀಟರ್ ನೀರು ಖರ್ಚಾಗುತ್ತದೆ. ಆದರೆ ಹತ್ತಿರದ

ಶಿರಹಟ್ಟಿ ಶಹರಕ್ಕೂ ಇಲ್ಲಿಂದಲೇ ನೀರು ಪೂರೈಕೆಯಾಗುತ್ತದೆ. ಪ್ರತಿತಿಂಗಳು ಈ ಘಟಕಕ್ಕೆ ಸುಮಾರು ೨೦೦೦೦ ರೂ. ಖರ್ಚಾಗುತ್ತದೆ. ಆದರೆ ಸಂಗ್ರಹವಾಗುವ ಹಣ ಕೇವಲ ೧೨೦೦೦ ರೂ. ಅಂದರೆ ಪ್ರತಿತಿಂಗಳು ಸುಮಾರು ೮-೧೦ ಸಾವಿರ ರೂಪಾಯಿ ಕೊರತೆಯಲ್ಲಿ ನೀರನ್ನು ಒದಗಿಸಲಾಗುತ್ತದೆ. ಆದರೂ ಸೊರಟೂರ ಗ್ರಾಮದಲ್ಲಿ ಶೇ. ೨೫ರಷ್ಟು ಜನರು ಸಹ ಈ ಶುದ್ಧ ನೀರನ್ನು ಬಳಕೆ ಮಾಡುತ್ತಿಲ್ಲ.

ಗ್ರಾಮದ ಜನರ ಆರ್ಥಿಕ ಸಂಘಟನೆಗಳು

ಗಳಿಕೆ ಎನ್ನುವುದು ಶ್ರೀಮಂತರ, ವ್ಯಾಪಾರಸ್ಥರ, ಸರಕಾರಿ ನೌಕರರಂತಹ ಕೆಲವೇ ಜನರ ಸ್ವತ್ತು ಎಂಬ ಭಾವವಿತ್ತು. ಬದಲಾದ ಕಾಲಮಾನದಲ್ಲಿ ಉಳಿತಾಯ ಅಥವಾ ಗಳಿಕೆ ಎಂಬುದೂ ಸಮಾಜದ ಸರ್ವ ಜನರಲ್ಲಿ ಮೂಡಿರುವುದು ಆಶಾದಾಯಕ ಬೆಳವಣಿಗೆ. ಇಂದು ಹಲವು ಬ್ಯಾಂಕುಗಳು, ಸೇವಾಸಂಸ್ಥೆಗಳು ಕೋಟಿ ಕೋಟಿಗಳ ವ್ಯವಹಾರ ಮಾಡುತ್ತಿರಬಹುದು. ಅದು ಕೇವಲ ಕೆಲವೇ ಜನರ ಉಳ್ಳವರ ಸ್ವತ್ತಾಗಿರುತ್ತದೆ. ಆದರೆ ಗ್ರಾಮದಲ್ಲಿ ಹುಲಕೋಟಿ ಕೆ.ಎಚ್.ಪಾಟೀಲ್ ಕೃಷಿ ವಿಜ್ಞಾನ ಕೇಂದ್ರದ ಪ್ರಾಯೋಜಕತ್ವದಲ್ಲಿ ರಚನೆಗೊಂಡ ಸ್ವಸಹಾಯ ಸಂಘಗಳು, ತದನಂತರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ರಚನೆಗೊಂಡ ಸ್ವಸಹಾಯ ಸಂಘಗಳು ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ರಚನೆಗೊಂಡ ಸ್ವಸಹಾಯ ಸಂಘಗಳು ಗ್ರಾಮದ ರೈತರ ಹಾಗೂ ರೈತ ಮಹಿಳೆಯರಲ್ಲಿ ಉಳಿತಾಯ ಭಾವನೆ ಮೂಡಿಸಿ ವ್ಯವಹಾರ ಜ್ಞಾನಬೆಳೆಸಿ, ರೈತರು ಹಾಗೂ ರೈತ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಭದ್ರ ಬುನಾದಿ ಹಾಕಿದ್ದಾರೆ. ಅದರ ಪರಿಣಾಮವಾಗಿ ಗ್ರಾಮದ ಸರ್ವರ ಮನೆ ಮನೆಗಳಲ್ಲಿ ಉಳಿತಾಯ ಹಾಗೂ ಆರ್ಥಿಕ ಸ್ವಾವಲಂಬನೆಯು ಮನೆಮಾಡಿದೆ. ಒಟ್ಟು ಗ್ರಾಮದಲ್ಲಿ ೧೫೦ಕ್ಕೂ ಅಧಿಕ ಸ್ವಸಹಾಯ ಸ್ತ್ರೀಶಕ್ತಿ ಸಂಘಗಳಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ.

ಗ್ರಾಮದ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳು (S-H-G)

ಸಹಕಾರಿ ರಂಗದ ಭೀಷ್ಮ ಎಂಬ ಹೆಸರಿನಿಂದ ಪ್ರಸಿದ್ಧವಾದ ಗದಗ ಜಿಲ್ಲೆಯ ರಾಜಕೀಯದಲ್ಲಿ ತಮ್ಮದೇಯಾದ ಛಾಪು ಮೂಡಿಸಿದ ಹುಲಕೋಟಿಯ ದಿ. ಶ್ರೀ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ ರೈತ ಪರವಾದ ಹಲವಾರು ಕಾರ್ಯ ಯೋಜನೆಗಳನ್ನು ಹಾಕಿಕೊಂಡಿದೆ. ಅದರಲ್ಲಿ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದ (ಕೆ.ವ್ಹಿ.ಕೆ.) ಪ್ರಾಯೋಜಕತ್ವದಲ್ಲಿ ಸೊರಟೂರ ಗ್ರಾಮದಲ್ಲಿ ಮೊದಲ ಬಾರಿಗೆ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸಲಾಯಿತು. ತದನಂತರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಗಳು ಸ್ವಸಹಾಯ ಸಂಘಗಳನ್ನು ಸಂಘಟಿಸಿದವು.

ಕೆ.ಎಚ್.ಪಿ.ಕೆವ್ಹಿಕೆ. ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ಸ್ಥಾಪಿತವಾದ ಸ್ವಸಹಾಯ ಸಂಘಗಳು

ಅ. ನಂ.	ಸ್ವ-ಸಹಾಯ ಸಂಘಗಳ ಹೆಸರು	ಸ್ಥಾಪನಾ ದಿನಾಂಕ	ಸದ ಸ್ಯರ ಸಂಖ್ಯೆ	ಸಭೆಯ ಸ್ಥಳ	ವಾರದ ಉಳಿ ತಾಯ	ಒಟ್ಟು ಸಂಘದ ಉಳಿ ತಾಯ	ಸಾಲದ ಒಟ್ಟು ವಹಿ ವಾಟು	ಪ್ರತಿನಿಧಿಗಳ ಹೆಸರು ಸಹಿ
೧.	ಶ್ರೀ ಬನಶಂಕರಿ ಸ್ತ್ರೀಶಕ್ತಿ ಸ್ವಸಹಾಯ ಸಂಘ	೮/೦೧/೦೧	೧೫	ಅಂಗನವಾಡಿ ಕೇಂದ್ರ ೧೫೩	೧೦	೮೦೦೦೦	೧೨೦೦೦೦	ಬಸವಣ್ಣೆವ್ವ ಗಿಡ ಕೆಂಚಣ್ಣವರ
೨.	ಶ್ರೀ ಆದಿಶಕ್ತಿ ಸ್ತ್ರೀಶಕ್ತಿ ಸ್ವಸಹಾಯ ಸಂಘ	೮/೦೧/೦೧	೧೫	ಬನಶಂಕರಿ ಗುಡಿ ಪ್ಲಾಟ್	೧೦	೬೦೦೦೦	೧೨೦೦೦೦	ಜಯಶ್ರೀ ಬಂಕಾಪುರ
೩.	ಶ್ರೀ ಯಶೋಧಾ ಸ್ತ್ರೀಶಕ್ತಿ ಸ್ವಸಹಾಯ ಸಂಘ	೦೧/೦೬/೦೩	೧೫	ಬನಶಂಕರಿ ಗುಡಿ ಪ್ಲಾಟ್	೧೦	೨೦೦೦೦	೬೦೦೦೦	ಯಲ್ಲವ್ವ ಗಿಡ ಕೆಂಚಣ್ಣವರ
೪.	ಶ್ರೀ ಪದ್ಮಾ ಸ್ವಯಂ ಸಿದ್ಧಿ ಗುಂಪು	೦೧/೦೬/೦೨	೧೫	ಬನಶಂಕರಿ ಗುಡಿ ಪ್ಲಾಟ	೧೦	೪೫೦೦೦	೮೦೦೦೦	ಪ್ರೇಮಾ ಮಾ. ಕಟಗಿ
೫.	ಗಾಯತ್ರಿ ಸ್ತ್ರೀಶಕ್ತಿ ಸ್ವಸಹಾಯ ಗುಂಪು	೧೧/೦೬/೦೧	೧೫	ಕುಸ್ಲಾಪೂ ರವರ ಮನೆ	೧೦	೩೫೦೦೦	೫೫೦೦೦	ನೀಲವ್ವ ಕುಸಲಾಪೂರ
೬	ಸುರಭಿ ಸ್ತ್ರೀಶಕ್ತಿ ಸ್ವಸಹಾಯ ಗುಂಪು	೧೧/೦೬/೦೧	೨೦	ಗದಗಿನವರ ಮನೆ	೧೦	೩೦೦೦೦	೫೦೦೦೦	ರತ್ನವ್ವ ಗದಗಿನ ಆರ್.ಜಿ. ಗದಗಿನ
೭	ಭವಾನಿ ಸ್ತ್ರೀಶಕ್ತಿ ಸ್ವಸಹಾಯ ಗುಂಪು	೦೧/೦೧/೦೩	೨೦	ಸ್ವಾರೆವ್ವದೇವಿ ಗುಡಿ	೧೦	೧೯೦೦೦	೩೨೦೦೦	ಸುಜಾತ ಹರಿಜನ
೮.	ಶ್ವೇತಾ ಸ್ತ್ರೀಶಕ್ತಿ ಸ್ವಸಹಾಯ ಗುಂಪು	೦೯/೦೧/೦೩	೧೫	ದ್ಯಾಮಮ್ಮನ ಚೌತ ಕಟ್ಟಿ	೧೦	೩೨೦೦೦	೫೦೦೦೦	ಮಲ್ಲವ್ವ ಮಲ್ಲಾರಿ
೯.	ಜಾನಕಿಬಾಯಿ ಸ್ತ್ರೀಶಕ್ತಿ ಸ್ವಸಹಾಯ ಗುಂಪು	೧೧/೧೦/೦೭	೧೫	ಡಂಬಳವರ ಮನೆ	೧೦	೫೦೦೦	೭೦೦೦	ರೇಶ್ಮಾ ಡಂಬಳ

೧೦.	ಭಾಗೀರಥಿ ಸ್ವಯಂ ಸಿದ್ಧಿ ಗುಂಪು	೦೧/೦೬/೦೬	೧೫	ನಿಂಗನಗೌಡ್ರ ಮನೆ	೧೦	೧೦೦೦೦	೭೦೦೦	ಶಂಕ್ರಮ್ಮ ಪಾಟೀಲ
೧೧.	ಗಜಲಕ್ಷ್ಮೀ ಸ್ತ್ರೀಶಕ್ತಿ ಸಂಘ	೦೮/೧೧/೧೧	೧೫	ರಾಮಚಂದ್ರಪ್ಪ ಬೆಂತೂರವರ ಮನೆ	೧೦	೮೫೦೦೦	೧೭೩೦೦೦	ಮೈತ್ರಾವತಿ.ಬ ಕುಸಲಾಪೂರ
೧೨.	ಆರತಿ ಸ್ತ್ರೀಶಕ್ತಿ ಸಂಘ	೦೧/೦೭/೦೪	೧೫	ದೇಸಾಯಿ ಯವರ ಕ್ಯಾಂಪ್	೧೦	೩೬೦೦೦	೪೮೦೦೦	ಗೌರಮ್ಮ. ಶೇ. ಬೋಳನವರ
೧೩.	ಚೇತನ ಸ್ತ್ರೀಶಕ್ತಿ ಸಂಘ	೧/೧೨/೦೩	೧೫	ಮೆಣಸಿನಕಾಯಿ ಯವರ ಓಣಿ	೧೦	೩೮೦೦೦	೧೫೦೦೦೦	ಬಸಮ್ಮ.ಶಂ. ಕುಸಲಾಪೂರ
೧೪.	ಜಾನಕಿ ಸ್ತ್ರೀಶಕ್ತಿ ಸಂಘ	೧/೧೨/೦೩	೧೬	ಹೂಗಾರವರ ಮನೆ	೧೦	೩೫೦೦೦	೪೬೦೦೦	ವಿಜಯ ಲಕ್ಷ್ಮೀ.ಮಾ. ಕುಸಲಾಪೂರ
೧೫.	ಭೀಮಾಂಬಿಕಾ ಸ್ತ್ರೀಶಕ್ತಿ ಸಂಘ	೨೫/೧/೦೧	೧೫	ಚೌತಕಟ್ಟಿ	೧೦	೮೦೦೦೦	೧೦೦೦೦೦	ಮಂಗಳಾ.ಸಿ. ಓಂಕಾರಿ
೧೬	ಅಕ್ಕಮಹಾದೇವಿ ಸ್ತ್ರೀಶಕ್ತಿ ಸಂಘ	೨೫/೧/೦೧	೧೫	ಮಳ್ಳಪ್ಪ. ತೋಪಿನವರ ಮನೆ	೧೦	೪೫೦೦೦	೮೦೦೦೦	ಸಾವಿತ್ರಿ.ಹ. ತೋಪಿನ
೧೭	ಶ್ರೀ ರೇಣುಕಾ ದೇವಿ ಸಂಘ	೨೦/೧/೦೨	೧೫	ಅನ್ನದಾನೇಶ್ವರ ನಗರ	೧೦	೫೦೦೦೦	೮೦೦೦೦	ಚಂಪಾವತಿ ಬ. ಒಂಟಿ
೧೮.	ತುಳಜಾಭವಾನಿ ಸಂಘ	೨೦/೧/೦೨	೨೦	ಬೀರೇಶ್ವರ ಗುಡಿ	೧೦	೩೫೦೦೦	೬೦೦೦೦	ಚನಬಸವ್ವ ಚ. ಗುಡಿ
೧೯.	ಹರ್ಷಾ ಸಂಘ	೦೬/೦೮/೦೩	೨೦	ಒಂಟಿಯವರ ಓಣಿ	೧೦	೬೦೦೦೦	೬೦೦೦೦	ಲೀಲಾವತಿ.ಶಿ. ಗುರಪ್ಪನವರ
೨೦.	ಗೃಹಲಕ್ಷ್ಮೀ ಸಂಘ	೦೬/೦೧/೦೪	೧೫	ಅನಂತ.ಪ. ಹೋಳಗಿ ಯವರ ಮನೆ	೧೦	೩೦೦೦೦	೬೦೦೦೦	ರೇಖಾ.ದು. ಕಂಬಳಿ
೨೧.	ಕಾವೇರಿ. ಸಂಘ	೦೬/೦೧/೦೪	೧೫	ಮಟ್ಟಿಯವರ ಮನೆ	೧೦	೩೫೦೦೦	೫೦೦೦೦	ಲಲಿತಾ. ನಾ. ಬಳ್ಳಾರಿ.
೨೨.	ಶ್ರೀ ವಾಲ್ಮೀಕಿ ಮಹಿಳಾ ಸ್ವಸಹಾಯ ಸಂಘ	೧೨/೦೧/೦೦	೧೪	ಹಳಕೆಮ್ಮ ದೇವಿ ಗುಡಿ	೧೦	೩೪೯೧೦	೨೯೧೩೧೬	ದೇವಕ್ಕ.ಬಿ. ಯಲಿಗಾರ
೨೩.	ಹುಲಿಗೆಮ್ಮದೇವಿ ಮಹಿಳಾ ಸ್ವಸಹಾಯ ಸಂಘ	೧೬/೦೧/೦೨	೧೦	ಶೇಷಪ್ಪ. ಹುಲಿಕಟ್ಟಿ ಯವರ ಮನೆ	೧೦	೨೯೫೧೦	೯೫೭೫೦	ಮಹಾದೇವಿ. ಬ.ತಳಕಲ್ಲ

೨೪.	ಲಕ್ಷ್ಮೀ ಮಹಿಳಾ ಸ್ವಸಹಾಯ ಸಂಘ	೦೫/೦೨/೦೨	೧೨	ಎಮ್.ಬಿ. ಹೂಗಾರ ಸರಮನೆ	೧೦	೪೭೭೫೦	೩೪೫೦೦೦	ಸಿಂಧೂ.ಅ. ಚನ್ನವೀರ ಶೆಟ್ಟಿ
೨೫.	ಮಹಾಲಕ್ಷ್ಮೀ ಮಹಿಳಾ ಸ್ವಸಹಾಯ ಸಂಘ	೦೫/೦೨/೦೨	೧೨	ಸರೋಜಾ ಹೊಸಮಠ	೧೦	೪೭೭೫೦	೩೦೦೦೦೦	ಸರೋಜಾ ಹೊಸಮಠ
೨೬.	ವೈಭವ ಲಕ್ಷ್ಮೀ ಮಹಿಳಾ ಸ್ವಸಹಾಯ ಸಂಘ	೦೫/೦೩/೦೨	೧೨	ನೀಲವ್ವ ಬೋಳ ನವರ ಮನೆ	೧೦	೨೫೮೫೦	೨೪೦೦೦೦	ನೀಲವ್ವ ಬೋಳನವರ
೨೭.	ಶ್ರೀ ದೇವತೆ ಮಹಿಳಾ ಸ್ವಸಹಾಯ ಸಂಘ	೨೭/೭/೦೨	೧೨	ಶಿವಣ್ಣ. ಹೂಲಿಮನಿ	೨೦	೭೫೦೦೦	೨೫೦೦೦೦	ಶಾಂತವ್ವಸಿ. ಹುಲಿ
೨೮.	ತುಳಜಾ ಭವಾನಿ ಮಹಿಳಾ ಸಂಘ	೧೦/೧೦/೦೨	೧೨	ಶಂಕ್ರಪ್ಪ. ಓಂಕಾರಿ ಯವರ ಮನೆ	೧೦	೭೦೦೦೦	೧೮೦೦೦೦	ಶಂಕ್ರಪ್ಪ. ಓಂಕಾರಿ
೨೯.	ಆದಿಶಕ್ತಿ ಮಹಿಳಾ ಸ್ವಸಹಾಯ ಸಂಘ	೨೨/೦೯/೦೨	೧೨	ಶಾರವ್ವ. ಹೋಳಗಿಯವರ ಮನೆ	೧೦	೭೪೪೦೦	೨೫೩೭೦೦	ಶಾರವ್ವ. ಹೋಳಗಿ
೩೦.	ಅಕ್ಕಮಹಾದೇವಿ ಮಹಿಳಾ ಸ್ವಸಹಾಯ ಸಂಘ	೨೦/೫/೦೨	೧೨	ನಾಗನಗೌಡ. ಪಾಟೀಲರವರ ಮನೆ	೧೦	೧೮೭೪೦	೩೧೭೩೦	ಶಾರದಾ.ನಾ. ಪಾಟೀಲ
೩೧.	ಗ್ರಾಮದೇವತೆ ಮಹಿಳಾ ಸಂಘ	೨೦/೫/೦೨	೧೨	ನಾಗನಗೌಡ. ಪಾಟೀಲರವರ ಮನೆ	೧೦	೧೯೭೦೦	೮೦೦೦೦	ನೀಲವ್ವ ಮೆಣಸಿನ ಕಾಯಿ
೩೨.	ಹಳಕೆಮ್ಮ ದೇವಿ ಮಹಿಳಾ ಸಂಘ	೩೦/೯/೦೨	೧೦	ನಾಗರಾಜ. ಮೆಣಸಿನಕಾಯಿ	೧೦	೨೭೫೦೦	೧೫೦೦೦೦	ಅಮೃತವ್ವ ತಳವಾರ
೩೩.	ಪಾರ್ವತಿ ಮಹಿಳೆಯರ ಸಂಘ	೧೫/೧೦/೦೨	೧೪	ಮಾದೇವಪ್ಪ. ಕುಸಲಾಪೂರ ರವರ ಮನೆ	೧೦	೧೯೫೦೦	೨೫೦೦೦	ಶಾಂತವ್ವಮಾ ಕುಸಲಾಪೂರ
೩೪.	ದುರ್ಗಾದೇವಿ. ಮಹಿಳೆಯರ ಸಂಘ	೨೩/೧೦/೦೨	೧೩	ಬೀರೇಶ್ವರ ಗುಡಿ	೧೦	೧೦೭೫೦	೧೨೦೦೦	ಚನ್ನಬಸವ್ವ ಚ. ಗುಡಿ
೩೫.	ಬನಶಂಕರಿ ಮಹಿಳೆಯರ ಸಂಘ	೩/೧೦/೦೨	೧೨	ಶಂಕ್ರಪ್ಪ. ಚಪಾಟಿ ಯವರ ಮನೆ	೧೦	೨೯೧೦೦	೮೦೦೦೦	ನಾಗಮ್ಮ ಶಂ.ಚಪಾಟಿ

೩೬.	ಸ್ವಾರೆಮ್ಮದೇವಿ ಮಹಿಳೆಯರ ಸಂಘ	೧/೦೯/೦೨	೧೨	ಫಕ್ಕಿರೇಶ ಹರಿಜನವರ ಮನೆ	೧೦	೧೯೦೦೦	೨೦೦೦೦	ನೀಲವ್ವಪ. ಹರಿಜನ
೩೭.	ಮಾದಮ್ಮದೇವಿ ಮಹಿಳೆಯರ ಸಂಘ	೪/೧೧/೦೨	೧೪	ನಾಗಪ್ಪ. ಕನ್ನೂರ	೧೦	೨೫೦೦೦	೩೦೦೦೦	ಚನಬಸಪ್ಪ. ನಾ.ತನ್ನೂರ
೩೮.	ಕಾಳಿಕಾಂಬಾದೇವಿ ಮಹಿಳೆಯರ ಸಂಘ	೨೫/೧೧/೦೨	೧೦	ಹಳಿಕೆಮ್ಮನ ಗುಡಿ	೧೦	೧೦೫೦೦	೧೫೦೦೦	ನೀಲವ್ವಪ. ಹಂಪಿಹೊಳಿ
೩೯.	ಅನ್ನಪೂರ್ಣೇಶ್ವರಿ. ಮಹಿಳೆಯರ ಸಂಘ	೨/೪/೦೨	೧೨	ಲಕ್ಷ್ಮವ್ವ ರಾ. ಉಪ್ಪಾರ	೧೦	೨೯೫೦೦	೮೦೦೦೦	ಲಕ್ಷ್ಮವ್ವ ರಾ. ಉಪ್ಪಾರ.
೪೦.	ಪದ್ಮಾವತಿ ಮಹಿಳೆಯರ ಸಂಘ	೪/೮/೦೩	೧೦	ಅಂಬಣ್ಣ. ಒಂಟಿಯವರ ಮನೆ	೧೦	೩೭೫೦೦	೯೦೦೦೦	ಫಾತಿಮಾ.ಮ. ಬೆಳದಡಿ
೪೧.	ಮೂಕಾಂಬಿಕಾದೇವಿ ಮಹಿಳೆಯರ ಸಂಘ	೨೪/೯/೦೩	೧೨	ಬೋಳನವರ ಮನೆ	೧೦	೪೫೮೦೦	೮೦೦೦೦	ಮಂಗಳಗೌರಿ. ಬೋಳನವರ
೪೨.	ಬಿಬಿಪಾತಿಮಾ. ಮಹಿಳೆಯರ ಸಂಘ	೨೫/೧೧/೦೩	೧೦	ಚೌತಾಯಿಯವರ ಮನೆ	೧೦	೧೯೭೦೦	೪೦೦೦೦	ನೀಲಮ್ಮ.ದೇ ರಣತೂರ
೪೩.	ನೇತ್ರಾವತಿ. ಮಹಿಳೆಯರ ಸಂಘ	೬/೧/೦೪	೧೨	ಹಳ್ಳಿಯವರ ಮನೆ	೧೦	೮೭೫೦೦	೨೪೦೦೦೦	ಚಂಪಾ.ಬ. ಮಿರಗಾಣ
೪೪.	ವೈಷ್ಣವ WSHG	೨೦೦೫	೧೦	ನಾಗರಾಜ ಬೋಳನವರ	೧೦	೧೫೬೦೦	೧೧೦೦೦೦	ಜಯಶ್ರೀ ಬೋಳನವರ
೪೫.	ರಾಜರಾಜೇಶ್ವರಿ WSHG	೨೦೦೩	೧೦	ಲಕ್ಷ್ಮವ್ವ ರಣತೂರ	೧೨	೧೦೫೦೦೦	೨೪೦೦೦೦	
೪೬	ರಂಜಾನ್ ಸ್ತ್ರೀಶಕ್ತಿ ಸಂಘ	೧೬/೯/೦೪	೧೫	ದುರ್ಗಾದೇವಿ ಗುಡಿ	೧೦	೫೩೦೭	೭೦೦೦	
೪೭	ಮದರಾ ಸ್ತ್ರೀಶಕ್ತಿ ಸಂಘ	೧೭/೯/೦೭	೧೫	ದುರ್ಗಾದೇವಿ ಗುಡಿ	೧೦	೫೧೦೮	೭೦೦೦	
೪೮.	ಶ್ರೀ ಮಾದಮ್ಮದೇವಿ ಸ್ತ್ರೀಶಕ್ತಿ ಸಂಘ	೧೧/೧/೦೧	೧೫	ವಿನಾಯಕ ನಗರ	೧೦	೫೦೦೦೦	೧೨೦೦೦	ಜನ್ನತಬಿ. ಅಬ್ಬಿಗೇರಿ
೪೯.	ಶ್ರೀದೇವಿ ಸ್ತ್ರೀಶಕ್ತಿ ಸಂಘ	೧೨/೧/೦೩	೧೫	ವಿನಾಯಕ ನಗರ	೧೦	೩೫೦೦೦	೮೦೦೦೦	ಪಾತಿಮಾ ಯಳವತ್ತಿ
೫೦.	ಶ್ರೀ ಯಲ್ಲಮ್ಮದೇವಿ. ಸ್ತ್ರೀಶಕ್ತಿ ಸಂಘ	೨೩/೧/೦೩	೧೫	ವಿನಾಯಕ ನಗರ	೧೦	೩೫೦೦೦	೮೦೦೦೦	ರೇಣುಕಾ. ತೋರಾತಿ

೫೧.	ಶ್ರೀ ಶಾರದಾದೇವಿ. ಸ್ತ್ರೀಶಕ್ತಿ ಸಂಘ	೨೩/೧/೦೩	೨೦	ವಿನಾಯಕ ನಗರ	೧೦	೬೦೦೦೦	೨೦೦೦೦	ಗೌರಮ್ಮ ಚಪಾಟಿ
೫೨.	ಶ್ರೀ ಭಾರತಿ ಸ್ತ್ರೀಶಕ್ತಿ ಸಂಘ	೦೧/೦೨/೦೩	೧೫	ವಿನಾಯಕ ನಗರ	೧೦	೩೦೦೦೦	೧೦೦೦೦೦	ಸುಧಾ ಕಲಾಲ
೫೩	ಶ್ರೀ ಶಾಂಭವಿ ಸ್ತ್ರೀಶಕ್ತಿ ಸಂಘ	೦೧/೦೪/೦೪	೨೦	ವಿನಾಯಕ ನಗರ	೧೦	೫೦೦೦೦	೧೪೦೦೦೦	ಮಹಾದೇವಿ ಅಗಡಿ
೫೪.	ಶ್ರೀ ಲಕ್ಷ್ಮೀ ಸ್ವಯಂ ಸಿದ್ಧಿ ಸಂಘ	೦೧/೦೪/೦೪	೧೫	ಅಂಗನವಾಡಿ ನಂ.೩೦೧	೧೦	೨೫೦೦೦	೧೦೦೦೦	ರುಕ್ಮವ್ವ ಪ್ರ.ಕೇದಾರಿ
೫೫.	ಶ್ರೀ ನಿಕಿತಾ ಸ್ತ್ರೀಶಕ್ತಿ ಸಂಘ	೦೩/೦೯/೦೭	೨೦	ಅಂಗನವಾಡಿ ನಂ.೩೦೧	೧೦	೮೦೦೦	೧೨೦೦೦	ಅಮೀನಾಬಿ ಚಿಕೇನಕೊಪ್ಪ
೫೬	ಶ್ರೀ ಅನ್ನದಾನೇಶ್ವರಿ ಸ್ತ್ರೀಶಕ್ತಿ ಸಂಘ	೦೨/೧೦/೦೭	೧೭	ಅಂಗನವಾಡಿ ನಂ.೩೦೧	೨೦	೧೧೦೦೦	೧೫೦೦೦	ಶ್ರೀದೇವಿ.ಮ. ಅಡ್ರಕಟ್ಟಿ
೫೭,	ಶ್ರೀ ಸಾನಿಯಾ ಸ್ತ್ರೀಶಕ್ತಿ ಸಂಘ	೨೮/೧೦/೦೭	೧೫	ಅಂಗನವಾಡಿ ನಂ.೩೦೧	೧೦	೬೦೦೦	೯೦೦೦	ವಿಜಯ ಲಕ್ಷ್ಮೀ.ಮಾ. ಉಪ್ಪಾರ
೫೮.	ಶ್ರೀ ಅಮ್ಮನಾಗಮ್ಮ ಸ್ತ್ರೀಶಕ್ತಿ ಸಂಘ	೦/೦೯/೦೭	೧೫	ಹಳಿಕೆಮ್ಮನ ಗುಡಿ	೧೦	೭೦೦೦	೧೦೦೦೦	ನಿರ್ಮಲಾ ಗೋಡಕೆ
೫೯.	ಶ್ರೀ ಮಾಧುರಿ ಸ್ತ್ರೀಶಕ್ತಿ ಸಂಘ	೦/೦೯/೦೭	೧೧	ಹನಮಪ್ಪನ ಗುಡಿ	೧೦	೬೦೦೦	೯೦೦೦	ಸೀತಾ.ಯ. ತಳಕಲ್ಲ
೬೦.	ಶ್ರೀ ಮದರ ತೆರೆಸಾ ಸ್ತ್ರೀಶಕ್ತಿ ಸಂಘ	೦೮/೧/೦೭	೧೫	ಅಕ್ಕಸಾಲಿಗರ ಓಣಿ	೨೦	೧೮೦೦೦	೨೦೦೦೦	ಕುಮ್ಮಕ್ಕ ಅರ್ಕಸಾಲಿ
೬೧.	ಶ್ರೀ ಸ್ವಾಮಿ ವಿವೇಕಾನಂದ ಪ್ರಗ ಭಂದು ಸ್ವಸ.ಸಂ. ಸೊರಟೂರ		೧೨	ಪಿ.ಬಿ. ಹೂಗಾರ ಅಂಗಡಿಯಲ್ಲಿ	೧೦	೨೪೭೨೦	೬೫೦೦೦	ಎಮ್.ಎಸ್. ಬಂಕಾಪೂರೆ ಪಿ.ಬಿ.ಹೂಗಾರ
೬೨.	ಕಾಳಭೈರವ ಸ್ವಸಂಘ ನಿ., ಸೊರಟೂರ		೧೩	ಪ್ರಬಂಧಕರ ಮನೆ	೧೦	೨೫೦೦೦	೧೪೦೦೦	ರೇಣುಕಾ.ಎಚ್. ರೇಣುಕಾ.ಬಿ.
೬೩.	ವಿನಾಯಕ ಸ್ವಸಂಘ ಸಹಾಯ ಸೊರಟೂರ	೧೦/೦೩/೦೯	೧೧	ಪ್ರಬಂಧಕರ ಮನೆ	೧೦	೨೭೫೨೦	೧೩೦೦೦೦	ರೇಣವ್ವ.ಎಮ್. ಸುಮಿತ್ರಾ.ಕೆ.
೬೪.	ಮಂಜುಶ್ರೀ ಸ್ವಸ.ಸಂ.	೧೦/೦೩/೦೯	೧೨	ಸಂಯೋಜಕರ	೧೦	೨೮೦೦೦	೭೫೦೦೦	ಶೋಭಾ ಪ್ರೇಮಾ.ಎಚ್.
೬೫.	ಶ್ರೀಲಕ್ಷ್ಮೀ ಸ್ವಸ.ಸಂ.	೧೮/೦೩/೦೯	೧೩	ಪ್ರಬಂಧಕರ ಮನೆ	೧೦	೩೪೦೫೦	೧೪೦೦೦	ನೀಲವ್ವ ಮಾಬುಬಿ

೬೬.	ಮಂಗಳಗೌರಿ ಸ್ವಸ.ಸಂ.ಹಳ್ಳಿ	೨೩/೦೩/೦೯		ಗಂಗವ್ವ ತಳಕಲ ಮನೆ	೧೦	೧೫೦೦೦	೮೫೦೦೦	ಶೋಭಾ, ಅಮಿನಾ
೬೭.	ದುರ್ಗಾದೇವಿ ಸ್ವಸ.ಸಂ.	೨೬/೦೩/೦೯	೧೪	ಸಂಯೋಜಕರ ಮನೆ	೧೦	೩೨೦೦೦	೧೪೦೦೦೦	ಸೋಮಕ್ಕ ಮಲ್ಲಾರಿ ಖಾತನಬಿ
೬೮,	ಭುವನೇಶ್ವರ ಸ್ವಸ.ಸಂ.	೧೫/೦೩/೦೯	೧೩	ಪ್ರಬಂಧಕರ ಮನೆ	೧೦	೩೨೦೦೦	೧೩೦೦೦೦	ಮಲವ್ವ ಚೌಕಲಟ್ಟಿ ರತ್ನವ್ವ
೬೯.	ಮಾರುತಿ ಸ್ವಸ.ಸಂ.	೧೫/೦೬/೦೯	೧೦	ಪ್ರಬಂಧಕರ ಮನೆ	೧೦	೧೫೦೦೦	೧೬೫೦೦೦	ರೇಣುಕಾ ವಿಜಯಲಕ್ಷ್ಮೀ
೭೦.	ಮಹಾಂತ ಶಿವಯೋಗಿ ಸ್ವಸ.ಸಂ.	೧೫/೦೬/೦೯	೧೨	ಪ್ರಬಂಧಕರ ಮನೆ	೧೦	೨೨೦೦೦	೧೭೫೦೦೦	ಜ್ಯೋತಿ ಶಾಲನಿಬಾಯಿ
೭೧	ಭಾಗೀರಥಿ ಸ್ವಸ.ಸಂ.	೧೫/೦೬/೦೯		ಪ್ರಬಂಧಕರ ಮನೆ	೧೦	೩೧೦೦೦	೮೫೦೦೦	ಪ್ರಾಮಾ ಸರೋಜಾ
೭೨.	ಬೀರೇಶ್ವರ ಸ್ವಸ.ಸಂ.	೧೫/೦೬/೦೯	೧೨	ಪ್ರಬಂಧಕರ ಮನೆ	೧೦	೨೮೦೦೦	೨೫೦೦೦೦	ಚನ್ನಬಸವ್ವ ಚಂದ್ರಬಾಯಿ
೭೩	ಇಟಗಿ ಭಿಮಾಂಬಿಕಾ ಸ್ವಸ.ಸಂ.	೧೫/೦೬/೦೯	೧೨	ಲಕ್ಕುಂಡಿಯವರ ಮನೆ	೧೦	೧೧೦೦೦	೧೦೦೦೦೦	ಯಲ್ಲವ್ವ ಎಲ್.ಪಾತಿಮಾ
೭೪.	ದಾವಲಮಲಿಕ್ ಸ್ವಸ.ಸಂ.	೧೫/೦೬/೦೯	೧೨	ಪ್ರಬಂಧಕರ ಮನೆ	೧೦	೧೫೦೦೦	೫೦೦೦೦	ಹಜರತಬಿ ರಾಜಮಾ
೭೫.	ಅಕ್ಕಾಮಹಾದೇವಿ ಸ್ವಸ.ಸಂ.	೧೫/೦೬/೦೯	೧೪	ಸಂಯೋಜಕರ ಮನೆ	೧೦	೨೪೦೦೦	೨೯೦೦೦೦	ನೀಲವ್ವ.ಎಚ್. ನಿರ್ಮಲಾ
೭೬	ಈಶ್ವರ ಸ್ವಸ.ಸಂ.	೦೩/೦೬/೦೯	೧೩	ಹೊಸಮಠ ಮನೆ	೧೦	೨೨೮೦೦	೧೧೦೦೦೦	ನೀಲವ್ವ.ಎಮ್. ಮಾಬವ್ವ
೭೭	ಗೌರಿಶಂಕರ ಸ್ವಸ.ಸಂ.	೦೬/೦೬/೦೯	೧೦	ಪ್ರಬಂಧಕರ ಮನೆ	೧೦	೨೧೦೦೦	೯೫೦೦೦	ಚಾಂದಬಿ ಸುನಿತಾ
೭೮.	ಬಿಬಿಪಾತಿಮಾ ಸ್ವಸ.ಸಂ.	೨೪/೦೨/೦೯	೧೪	ಪ್ರಬಂಧಕರ ಮನೆ	೧೦	೨೬೦೦೦	೧೫೦೦೦೦	ರಾಜಬಿ ಜನ್ನತಬಿ ಅಲ್ಲಗೇ
೭೯.	ಬಿಸ್ಮಿಲ್ಲಾ ಸ್ವಸ.ಸಂ.	೨೫/೦೫/೦೯	೧೪	ಪ್ರಬಂಧಕರ ಮನೆ	೧೦	೨೦೦೦೦	೫೦೦೦೦	ಮಾಬುಬಿ ದಾವಿಲಬಿ
೮೦.	ಅನ್ನದುನೇಶ್ವರಿ ಸ್ವಸ.ಸಂ.	೨೮/೦೬/೦೯	೧೨	ಸತಕಳಲ್ಲ ಮನೆ	೧೦	೧೮೦೦೦	೨೫೦೦೦೦	ಸಾವಿತ್ರಿ ಪ್ರೇಮಾ

ಹೀಗೆ ಸುಮಾರು ೧೫೦ಕ್ಕೂ ಹೆಚ್ಚು ಸ್ವಸಹಾಯ ಸಂಘಗಳು ಸ್ಥಾಪಿತವಾಗಿದ್ದು ಗ್ರಾಮದ ಬಡಜನರ ಪಾಲಿಗೆ ಬೆಳಕಾಗಿವೆ. ಕೆಲ ಬಡ ವಿದ್ಯಾರ್ಥಿಗಳು ಪ್ರತಿಭಾವಂತರಿದ್ದರು ಸಹ ಪಿ.ಯು.ಸಿ. ಮತ್ತು ಬಿ.ಎ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿದ್ದು ಡಿ.ಇಡಿ. ಮತ್ತು ಬಿ.ಈಡಿ. ವ್ಯಾಸಂಗ ಮಾಡಲು ಹಣಕಾಸಿನ ತೊಂದರೆ ಇದ್ದಾಗ ಈ ಸ್ವಸಹಾಯ ಸಂಘಗಳ ಮೂಲಕ ಸಾಲ ಪಡೆದು ಉನ್ನತ ವಾಸಂಗ ಮಾಡಿ ನೌಕರಿ ಪಡೆದಿರುವ ಹಲವಾರು ಉದಾಹರಣೆಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯುತ್ತದೆ.

೫.೭. ಶೈಕ್ಷಣಿಕ ಸ್ಥಿತಿಗತಿ

ಒಂದು ಕಾಲದಲ್ಲಿ ಶಿಕ್ಷಣವೆಂಬುದು ಕೇವಲ ಮೇಲ್ವರ್ಗದವರ ಸೊತ್ತಾಗಿತ್ತು. ಇದಕ್ಕೆ ಸೊರಟೂರ ಗ್ರಾಮವು ಹೊರತಾಗಿರಲಿಲ್ಲ. ಈಗ ಒಂದುನೂರು ವರ್ಷಗಳ ಹಿಂದೆ ಗ್ರಾಮದ ಗಾಂಧಿ ಬಯಲಿನಲ್ಲಿರುವ ಮೈಲಾರಲಿಂಗನ ಗುಡಿಯಲ್ಲಿ ಔಪಚಾರಿಕ ವ್ಯವಸ್ಥೆಯಲ್ಲಿ ಶಾಲೆ ಪ್ರಾರಂಭವಾಯಿತು ಎಂದು ಹಿರಿಯರಿಂದ ತಿಳಿಯುತ್ತದೆ. ಗ್ರಾಮದ ಸರಕಾರಿ ಮಾದರಿ ಕನ್ನಡ ಗಂಡುಮಕ್ಕಳ ಶಾಲೆಯು ೧೩೦ ವರ್ಷಗಳ ಹಿಂದೆಯೇ ಅಂದರೆ ೧೮೭೫ರಲ್ಲಿಯೇ ಪ್ರಾರಂಭವಾಗಿರುವುದು ಕ್ಷೇತ್ರಕಾರ್ಯದ ದಾಖಲೆಗಳಿಂದ ತಿಳಿದುಬರುತ್ತದೆ. ಆದರೆ ಆಗ ಇರುವ ವಿದ್ಯಾರ್ಥಿಗಳ ಸಂಖ್ಯೆ ಲಭ್ಯವಾಗಿಲ್ಲ. ಹೀಗೆ ಒಂದು ಕಾಲದಲ್ಲಿ ಶೈಕ್ಷಣಿಕವಾಗಿ ಅತೀ ಕಡಿಮೆ ವ್ಯಾಪ್ತಿಯನ್ನು ಹೊಂದಿದ್ದ ಸೊರಟೂರ ಗ್ರಾಮದಲ್ಲಿ ಕಾಲಾಂತರದಲ್ಲಿ ೧೯೧೮ರಲ್ಲಿ ಹೆಣ್ಣು ಮಕ್ಕಳ ಶಾಲೆ, ೧೯೮೪ರಲ್ಲಿ ಪ್ರೌಢಶಾಲೆ, ೧೯೯೭ರಲ್ಲಿ ಡಿ.ಪಿ.ಇ.ಪಿ. ಶಾಲೆ, ೧೯೯೬ರಲ್ಲಿ ಉರ್ದು ಶಾಲೆ, ೨೦೦೭ರಲ್ಲಿ ಪದವಿಪೂರ್ವ ಕಾಲೇಜುಗಳು ಪ್ರಾರಂಭವಾಗಿವೆ. ಈ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಈಗ ೧೨೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗ್ರಾಮದಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಸರ್ಕಾರದ ಸಾರ್ವತ್ರಿಕ ಶಿಕ್ಷಣ ನೀತಿ ಹಾಗೂ ಆಧುನಿಕತೆಯ ಪ್ರಭಾವದಿಂದಾಗಿ ಗ್ರಾಮದ ಶೈಕ್ಷಣಿಕ ಸ್ಥಿತಿಗತಿಯು ಸಾರ್ವತ್ರಿಕವಾಗಿ ಸುಧಾರಿಸುತ್ತಿದೆ. ಇದಕ್ಕೆ ಪೂರಕವಾಗಿ ಗ್ರಾಮದಲ್ಲಿ ಹಳಿಕೆಮ್ಮದೇವಿ ರಾತ್ರಿ ಶಾಲೆಯಲ್ಲಿ ವಾಯ್. ಪಿ. ಅಡ್ನೂರ ಹಾಗೂ ಶಿವಪುತ್ರಪ್ಪ. ಹಂಪಿಹೊಳಿಯವರು ಶ್ರೀ ವ್ಹಿ.ಜಿ. ಮಠಪತಿ ಗುರುಗಳ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಿಗೆ ಮನೆ ಪಾಠ ಹೇಳುತ್ತಾರೆ. ಇದಕ್ಕೆ ಗದಗಿನ ಜಗದ್ಗುರು ತೋಂಟದಾರ್ಯ ಶ್ರೀಗಳ ಆಶೀರ್ವಾದವೂ ಇದೆ. ಕಡೆ ಮಸೀದಿಯಲ್ಲಿ ನಾರಾಯಣರಾವ್ ಕುಲಕರ್ಣಿಯವರು ಅಲ್ಲಾ ರಾತ್ರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮನೆಪಾಠ ಹೇಳುತ್ತಾರೆ. ಹೀಗೆ ಗ್ರಾಮದಲ್ಲಿ ಎಲೆ ಮರೆಯ ಕಾಯಿಯಂತೆ ಶೈಕ್ಷಣಿಕ ಕಾರ್ಯಚಟುವಟಿಕೆಗಳು ನಿರಂತರ ಸಾಗಿದೆ.

ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಗ್ರಾಮದಲ್ಲಿ ೮ ಅಂಗನವಾಡಿ ಕೇಂದ್ರಗಳು ನಡೆಯುತ್ತಿದ್ದು, ಮಗುವಿಗೆ ಪ್ರಾರಂಭಿಕ ಶಿಕ್ಷಣ ಹಾಗೂ ತಾಯಿ ಮಗುವಿನ ಆರೋಗ್ಯದ ಕುರಿತು ಕಾರ್ಯನಿರ್ವಹಿಸುತ್ತಿವೆ. ಹೀಗೆ ಗ್ರಾಮದ ಶೈಕ್ಷಣಿಕ ಪ್ರಕ್ರಿಯೆಯು ಸರ್ಕಾರದ

ಹಾಗೂ ಸರ್ಕಾರೇತರ ಸಂಘಸಂಸ್ಥೆಗಳ ವಿವಿಧ ಕಾರ್ಯ ಯೋಜನೆಗಳಲ್ಲಿ ವ್ಯಾಪಕವಾಗಿ ಮುಂದುವರೆದಿದೆ. ಅದರ ಫಲವಾಗಿ ಗ್ರಾಮದಲ್ಲಿ ೪೦ಕ್ಕೂ ಹೆಚ್ಚು ಪದವಿಧರರು ೧೫ ಜನ ಶಿಕ್ಷಣ ಸ್ನಾತಕ ಪದವಿಧರರು ೨೦ ಜನ ಡಿಪ್ಲೊಮಾ ಶಿಕ್ಷಣ ಪದವಿಧರರು ೪ ಜನ ವೈದ್ಯಕೀಯ ಪದವಿ ಎರಡು ಜನ ಸ್ನಾತಕೋತರ ಪದವಿಧರರು ಸೇರಿದಂತೆ ಗ್ರಾಮದ ಡಾ. ಎಸ್.ಡಿ. ಕಟಗಿಯವರು ಪಿಎಚ್.ಡಿ. ಪದವಿ ಪಡೆದಿರುವುದು ಗ್ರಾಮದ ಶೈಕ್ಷಣಿಕ ಪ್ರಗತಿಯನ್ನು ಸೂಚಿಸುತ್ತದೆ. ಅದರಲ್ಲೂ ಹಿಂದುಳಿದ ವರ್ಗಗಳ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆದಿರುವುದು ವಿಶೇಷವಾಗಿದೆ. ಗ್ರಾಮದ ಶೈಕ್ಷಣಿಕ ಪ್ರಗತಿಯು ಇಷ್ಟೊಂದು ವೇಗವಾಗಿ ವ್ಯಾಪಕವಾಗಲು ಗ್ರಾಮದಲ್ಲಿ ಸೇವೆ ಸಲ್ಲಿಸಿದ ಹಾಗೂ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಶ್ರಮದ ಪಾತ್ರವು ಪ್ರಧಾನ ಅಂಶವಾಗಿದೆ. ಆದರೆ ಸರಕಾರವು ಸರ್ಕಾರಿ ಶಿಕ್ಷಣ ಸಂಸ್ಥೆಗಳ ಆಡಳಿತ ನಿರ್ವಹಣೆಗಾಗಿ ಶಾಲಾ ಸುಧಾರಣೆ ಆಡಳಿತ ಮಂಡಳಿ (ಎಸ್.ಡಿ.ಎಂ.ಸಿ.) ರಚನೆ ಮಾಡಲು ಅವಕಾಶ ಕೊಟ್ಟಿರುವುದರಿಂದ ಶಾಲಾ ಸುಧಾರಣೆಯ ಜೊತೆಗೆ ಅಧಿಕಾರ ವ್ಯಾಮೋಹವು ನಡೆದಿದೆ. ಇಂತಹ ಕೆಲವು ಆಡಳಿತಾತ್ಮಕ ಸಂದಿಗ್ಧತೆಯ ನಡುವೆಯೂ ಶಿಕ್ಷಕರ ಶ್ರಮ ಹಾಗೂ ಗ್ರಾಮದ ಶಿಕ್ಷಣ ಅಭಿಮಾನಿಗಳ ಸಹಾಯ ಸಹಕಾರದೊಂದಿಗೆ ಶೈಕ್ಷಣಿಕ ಪ್ರಗತಿಯು ಸಾರ್ವತ್ರಿಕವಾಗಿ ಮುನ್ನಡೆದಿದೆ.

ಸರ್ಕಾರಿ ಶಿಕ್ಷಣ ಸಂಸ್ಥೆಗಳು

ಅ. ನಂ.	ಸಂಸ್ಥೆಯ ಹೆಸರು	ಸ್ಥಾಪನೆ ದಿನಾಂಕ	ಪ್ರಾರಂಭದಲ್ಲಿ ಮಕ್ಕಳ ಸಂಖ್ಯೆ	ಪ್ರಸ್ತುತ ಮಕ್ಕಳ ಸಂಖ್ಯೆ ೨೦೦೮-೦೯
೧.	ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ	೧-೮-೧೮೭೫		೨೪೫
೨.	ಕನ್ನಡ ಹೆಣ್ಣು ಮಕ್ಕಳ ಶಾಲೆ	೧೮-೨-೧೯೧೮	೦೪೬	೨೨೬
೩.	ಶ್ರೀ.ಜ.ಅ ಸರಕಾರಿ ಪ್ರೌಢಶಾಲೆ	೧೯೮೪	೦೩೬	೩೫೭
೪.	ಡಿ.ಪಿ.ಇ.ಪಿ.ಶಾಲೆ,	೨೨-೯-೧೯೯೭	೦೧೫	೩೨೦
೫.	ಸರಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ	೪-೧೨-೧೯೯೬	೦೧೧	೦೨೦
೬.	ಶ್ರೀ.ಜ.ಅ.ಪ.ಪೂ. ಮಹಾವಿದ್ಯಾಲಯ	೨೦೦೭	೦೨೮	೦೬೩

ಶಾಲಾ ಮಕ್ಕಳಿಗಾಗಿ ರಾತ್ರಿ ಶಾಲೆಗಳು (ವಿಶೇಷ ತರಬೇತಿ ಬೋಧನೆ)

ಅ.	ಸಂಸ್ಥೆಯ ಹೆಸರು	ಸ್ಥಳ	ಸ್ಥಾಪನೆ ದಿನಾಂಕ	ಷರಾ.
೧.	ಅಲ್ಲಾರಾತ್ರಿ ಶಾಲೆ	ಕಡೆಮಸೂತಿ	೧೯೮೦	
೨.	ಶ್ರೀ ಹಳಿಕೆಮ್ಮದೇವಿ ರಾತ್ರಿ ಶಾಲೆ	ಶ್ರೀ ಹಳಿಕೆಮ್ಮ ದೇವಿ ಗುಡಿ	೦೭.೦೬.೧೯೯೬	

ಅಂಗನವಾಡಿ ಕೇಂದ್ರಗಳು

ಅ.ನಂ.	ಅಂಗನವಾಡಿ ನಂ.	ಪ್ರಾರಂಭಿಕ ವರ್ಷ	ಸ್ಥಳ
೧.	೧೫೦	೧೯೮೩	ವಿನಾಯಕ ನಗರ (ಹೊಸಪ್ಲಾಟ್)
೨.	೧೫೧	೧೯೮೩	ಬಸವಣ್ಣದೇವರಗುಡಿ ಓಣಿ
೩.	೧೫೩	೧೯೮೩	ಬನಶಂಕರಿ ಓಣಿ
೪.	೧೫೨	೧೯೯೪	ಅಂಬೇಡ್ಕರ್ ಓಣಿ
೫.	೨೭೧	೧೯೮೩	ಕಲ್ಮೇಶ್ವರ ಗುಡಿ ಓಣಿ
೬.	೩೦೦	೨೦೦೩	ಹಳಿಕೆಮ್ಮನಗುಡಿ ಓಣಿ
೭.	೩೦೧	೨೦೦೩	ಕಾಲಭೈರವನಗುಡಿ ಹತ್ತಿರ
೮.	೩೦೨	೨೦೦೩	ದುರ್ಗಾದೇವಿಗುಡಿ ಓಣಿ

ಗ್ರಾಮದ ಪ್ರಥಮ ಪಿಎಚ್.ಡಿ. ಪದವೀದರರು

ಸೊರಟೂರ ಗ್ರಾಮದಲ್ಲಿ ಶೈಕ್ಷಣಿಕ ಸ್ಥಿತಿಗತಿಯನ್ನು ಕ್ಷೇತ್ರಕಾರ್ಯದಿಂದ ಅವಲೋಕಿಸಿದಾಗ ಈಗ ೧೩೦ ವರ್ಷಗಳ ಹಿಂದೆಯೇ ೧೮೭೫ರಲ್ಲಿಯೆ ಶಾಲಾ ಶಿಕ್ಷಣ ಪ್ರಾರಂಭವಾಗಿರುವುದು ತಿಳಿಯುತ್ತದೆ. ಗ್ರಾಮದಲ್ಲಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳ ಕುರಿತು ಮಾಹಿತಿಯನ್ನು ದಾಖಲೆಗಳ ಮೂಲಕ ಕಂಡುಕೊಳ್ಳಲಾಗಿದೆ. ಉನ್ನತ ವ್ಯಾಸಂಗ ಮಾಡಿದ ಮಹನೀಯರ ಕುರಿತು ಗ್ರಾಮಸ್ಥರಲ್ಲಿ ಮಾಹಿತಿ ಸಂಗ್ರಹಿಸಿದಾಗ ಗ್ರಾಮದ ಡಾ. ಬಂಡು ಭೀಮಾಜಿ ರಾಜಪುರೋಹಿತ ಅವರು ೧೯೫೫ರಲ್ಲಿಯೇ ಪಿಎಚ್.ಡಿ. ಪದವಿ ಪಡೆದಿರುವುದು ತಿಳಿದುಬರುತ್ತದೆ. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶದಲ್ಲಿ 'ವಚನಗಳ ವ್ಯಾಕರಣ' ಎಂಬ ವಿಷಯದ ಕುರಿತು ಸಂಶೋಧನ ಪ್ರಬಂಧ ಮಂಡಿಸಿದ್ದಾರೆ. ಶಬ್ದಾದರ್ಶಕೃತಿ

ಸೇರಿದಂತೆ ಹಲವಾರು ಸಾಹಿತ್ಯಕ ಲೇಖನ ಕೃತಿಗಳನ್ನು ರಚಿಸಿದ್ದಾರೆ. ಇವರು ೧೯೬೩ರಲ್ಲಿ ಉಡುಪಿಯಲ್ಲಿ ಪ್ರೊಫೆಸರ್ ಆಗಿ ೧೯೭೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆಗಿ ಪ್ರಾಧ್ಯಾಪಕರು/ಉಪನಿರ್ದೇಶಕರಾಗಿ, ೧೯೯೧ರಲ್ಲಿ ಜಪಾನ್‌ನಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ ಆದರೆ ಇವರು ಸೊರಟೂರಿನಲ್ಲಿ ಕಲಿತಿದ್ದು ಒಂದನೇ ತರಗತಿ ಮಾತ್ರ. ಮೂಲತಃ ಇವರು ಸೊರಟೂರ ಗ್ರಾಮದವರಾಗಿದ್ದರಿಂದ ಹುಟ್ಟೂರಿನ ಅಭಿಮಾನದಿಂದ ಗ್ರಾಮದ ಚರಿತ್ರೆ ಕುರಿತು ಹಲವಾರು ಅಂಶಗಳನ್ನು ಗ್ರಹಿಸಿಕೊಂಡಿದ್ದಾರೆ. ೧೯೪೧ರಲ್ಲಿ ಸೊರಟೂರ ಶಾಲೆಯಲ್ಲಿದ್ದ ಸಮೀಪದ ಬೆಳಟ್ಟಿ ಗ್ರಾಮದ ಶ್ರೀ ಗಣೇಶ ಬಿ. ಜೋಶಿ ಗುರುಗಳು ಕನ್ನಡ ಪಂಡಿತರಾಗಿದ್ದರು. ಶ್ರೀ ಪಾಠಕ ಹೆಡ್‌ಮಾಸ್ತರರು ಬಿಗಿಯಾದ ಆಡಳಿತ ನಡೆಸುತ್ತಿದ್ದರು ಎಂಬುದನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಗ್ರಾಮದಲ್ಲಿರುವ ಕಾನ್ವೆಂಟ್ ಶಾಲೆಗಳು

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಈ ಗ್ರಾಮದಲ್ಲಿ ೮ ಅಂಗನವಾಡಿ ಕೇಂದ್ರಗಳಿವೆ. ಅವು ಚಿಕ್ಕಮಕ್ಕಳಿಗಾಗಿ ಉಚಿತ ಶಿಕ್ಷಣ ಹಾಗೂ ಉಪಹಾರ ಕೊಡುತ್ತಿವೆ. ಆದರೆ ಆಧುನಿಕತೆಯ ಅಬ್ಬರದಲ್ಲಿರುವ ಮನುಷ್ಯ ತಮ್ಮ ಮಕ್ಕಳು ಬಹುವೇಗವಾಗಿ ಶಿಕ್ಷಣ ಪಡೆಯಬೇಕೆಂಬ ಬಯಕೆ ಇರುವುದರಿಂದ ಗ್ರಾಮದಲ್ಲಿ ಕಾನ್ವೆಂಟ್ ಶಾಲೆಗಳು ಹುಟ್ಟಿಕೊಂಡಿವೆ. ಈಗಾಗಲೇ ಶ್ರೀ ವಿನಾಯಕ ಪೂರ್ವಪ್ರಾಥಮಿಕ ಶಾಲೆ, ಶ್ರೀ ಕುವೆಂಪು ಪೂರ್ವಪ್ರಾಥಮಿಕ ಶಾಲೆ, ಶ್ರೀ ಕಾಲಭೈರವ ಪೂರ್ವಪ್ರಾಥಮಿಕ ಶಾಲೆಗಳು ಸೇರಿದಂತೆ ವಿವಿಧ ಹೆಸರುಗಳಲ್ಲಿ ಹಲವಾರು ಕಾನ್ವೆಂಟ್ ಶಾಲೆಗಳು ಪ್ರಾರಂಭವಾಗಿವೆ. ಆದರೆ ಈ ಶಾಲೆಗಳು ಸರಕಾರದಿಂದ ಅನುಮತಿ ಪಡೆದುಕೊಂಡ ಅಧಿಕೃತ ಶಾಲೆಗಳಲ್ಲ ಹಾಗೂ ಸುವ್ಯವಸ್ಥಿತವಾದ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳನ್ನು ಹೊಂದಿರುವುದಿಲ್ಲ. ಆದರೂ ಇವು ಪಾಲಕರಿಂದ ಧನಸಹಾಯ-ಸಹಕಾರ ಪಡೆದು ಅದರಲ್ಲಿ ಶಾಲೆಯ ವೆಚ್ಚ ಭರಿಸಿ ಮುನ್ನಡೆದಿವೆ.

ಶಿಕ್ಷಣ ಯಾರೊಬ್ಬರ ಸ್ವತ್ತಲ್ಲ

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ ವೇದವನೋದಿ ಹಾರವನಾದ ಎಂಬ ಮಾತು ಪರಂಪರಾಗತವಾಗಿ ಬಂದ ಕುಲಕಸುಬನ್ನು ಸೂಚಿಸುತ್ತದೆ. ಶಿಕ್ಷಣವು ಕೇವಲ ಕೆಲವೇ ಜನರ ಸ್ವತ್ತು ಎಂಬಂತಾಗಿತ್ತು. ಸೊರಟೂರ ಗ್ರಾಮವು ಇದಕ್ಕೆ ಹೊರತಾಗಿರಲಿಲ್ಲ ಎಂಬುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಏಕೆಂದರೆ. ಈಗ ೩೦-೪೦ ವರ್ಷಗಳ ವಯೋಮಾನದ ಜನರನ್ನು ಸಂದರ್ಶಿಸಿದಾಗ ಹಿಂದುಳಿದ ವರ್ಗದಲ್ಲಿ ಶಿಕ್ಷಣ ಪಡೆದವರು ಕಾಣಸಿಗುವುದಿಲ್ಲ ಇದಕ್ಕೆ ಕಾರಣ ಪರಂಪರೆ 'ಶಿಕ್ಷಣ ಪಡೆಯಲು ಎಲ್ಲರೂ ಅರ್ಹರಲ್ಲ ಎಂಬ ಹಿಂದಿನ ಪರಂಪರೆಗೆ ಜೋತು ಬಿದ್ದಿರುವುದು' ಎಂಬುದು ಕೆಲವರ ಅಭಿಪ್ರಾಯವಾಗಿದೆ.

ಕುಲಕಸುಬುದಾರರು ಮತ್ತು ಕಾರ್ಮಿಕರ ಮಕ್ಕಳು ಅವರ ಹಿರಿಯರಿಂದ ಪರಂಪರಾಗತವಾಗಿ ಬಂದ ಕೆಲಸಗಳನ್ನೇ ಮಾಡಬೇಕು ಎಂಬುದು ಇಂದಿಗೂ ಕೆಲವರ ಮನೋಭಾವನೆಯಾಗಿದೆ. ಶಿಕ್ಷಣದ ಸಾರ್ವತ್ರೀಕರಣದ ಫಲವಾಗಿ ಯಾವುದೇ ಜಾತಿಬೇಧವಿಲ್ಲದೇ ಪ್ರತಿಭಾವಂತ ಮಕ್ಕಳೆಲ್ಲ

ಉನ್ನತ ಶಿಕ್ಷಣ ಪಡೆದಿದ್ದಾರೆ. ಇದರಲ್ಲಿ ಸಾಮಾಜಿಕವಾಗಿ ಹಿಂದುಳಿದವರು, ಮುಂದುವರೆದವರು ಹೀಗೆ ಎಲ್ಲರ ಮಕ್ಕಳು ಇದ್ದಾರೆ. ಆದರೆ ಜಾತಿಯತೆಯನ್ನೇ ತಮ್ಮ ಜೀವಾಳವಾಗಿಸಿಕೊಂಡವರು ಅಲ್ಲೊಬ್ಬರು ಇಲ್ಲೊಬ್ಬರು ಇನ್ನೂ ಇದ್ದಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ತನ್ನನ್ನು ತಾನು ದೊಡ್ಡ ಜಾತಿಯವನೆಂದು ತಿಳಿದುಕೊಂಡ ಒಬ್ಬ ವ್ಯಕ್ತಿ 'ನೀನು ಏನು ಮಾಡುತ್ತಿ?' ಎಂದು ನನ್ನನ್ನು ಪ್ರಶ್ನಿಸಿದ. ನಾನು ನನ್ನ ಶಿಕ್ಷಣ, ಅಧ್ಯಯನ ಕುರಿತು ಹೇಳಿದೆ. ಆ ವ್ಯಕ್ತಿ ತಕ್ಷಣವೇ ಹೀಗೆ ಹೇಳಿದ "ನಿಮ್ಮ ಜಾತಿಗೆ ಶಿಕ್ಷಣ ಇಲ್ಲ (ನನ್ನ ಜಾತಿ ವಾಲ್ಮೀಕಿ) ನೀನು ಕಲಿತದ್ದು, ನಿನಗೆ ವಿದ್ಯೆ ಒಲಿದದ್ದು ಆಕಸ್ಮಿಕ" ಎಂದು ಯಾವುದೇ ಅಳುಕು. ಅಂಜಿಕೆ ಇಲ್ಲದೆ ಸಹಜವಾಗಿ ಹೇಳಿಬಿಟ್ಟ. ನಾನು ಅವನಿಗೆ ಡಾ. ಅಂಬೇಡ್ಕರ್ ಹಾಗೂ ವಾಲ್ಮೀಕಿಯನ್ನು ನೆನಪಿಸಿಕೊಟ್ಟೆ. ತಕ್ಷಣ ಗರಬಡಿದವನಂತಾದ ಆ ವ್ಯಕ್ತಿ ತನ್ನ ಮಾತಿನ ಪರಿಯನ್ನು ಬದಲಿಸಿದ. ಆದರೆ ಅದಕ್ಕೆ ಉತ್ತರ ಎಂಬಂತೆ ಗ್ರಾಮದಲ್ಲಿ ಉನ್ನತ ಶಿಕ್ಷಣ ಪಡೆದವರನ್ನು, ಅವರ ಸಂಖ್ಯೆಯನ್ನು ಗಮನಿಸಿದರೆ ಒಂದು ಕಾಲದಲ್ಲಿ ಪರಂಪರೆಯ ಪುರುಷಾರ್ಥಕ್ಕೆ ಕಟ್ಟುಬಿದ್ದು ಶಿಕ್ಷಣದಿಂದ ವಂಚಿತರಾದವರೇ ಇಂದು ಉನ್ನತ ಶಿಕ್ಷಣ ಪಡೆದವರಲ್ಲಿ ಹೆಚ್ಚಾಗಿದ್ದಾರೆ. ಒಟ್ಟಾರೆ ಗ್ರಾಮದಲ್ಲಿ ಶಿಕ್ಷಣ ಯಾರೊಬ್ಬರ ಸ್ವತ್ತು ಅಲ್ಲ ಅದು ಸಾಧಕರ ಸ್ವತ್ತಾಗಿ ಮುಂದುವರೆದಿದೆ.

೫.೮. ರಾಜಕೀಯ ಸ್ಥಿತಿಗತಿ

ರಾಜಕೀಯವೆಂಬುದು ಕೇವಲ ಕೆಲವೇ ಜನರಿಗೆ ಸೀಮಿತವಾಗಿದ್ದ ಕಾಲವೊಂದಿತ್ತು. ಊರ ಗೌಡರು ಯಾವ ಪಕ್ಷದಲ್ಲಿ ಇರುತ್ತಾರೆ. ಆ ಗ್ರಾಮದ ಬಹುಪಾಲು ಜನರು ಅವರನ್ನು ಹಿಂಬಾಲಿಸುತ್ತಿದ್ದರು. ಇದು ಸ್ವಾತಂತ್ರ್ಯ ನಂತರದ ಕಾಲದ ಸ್ಥಿತಿಗತಿ. ಇದಕ್ಕೂ ಪೂರ್ವದಲ್ಲಿ ಅಂದರೆ ಸ್ವಾತಂತ್ರ್ಯಪೂರ್ವದಲ್ಲಿ ಗ್ರಾಮದ ಜನರಿಗೆ ರಾಜಕೀಯದ ಪರಿವೆ ಇರಲಿಲ್ಲ ಎಂದು ಹೇಳಬಹುದು. ಏಕೆಂದರೆ ವಿವಿಧ ರಾಜಮನೆತನಗಳ ಅರಸರು ಮಾಂಡಲೀಕರು ಗ್ರಾಮದ ಆಡಳಿತ ನಡೆಸುತ್ತಿದ್ದರು. ಅದನ್ನು ಪಾಲಿಸುವುದು ಜನಪದರ ಕರ್ತವ್ಯವಾಗಿತ್ತು. ಆದರೆ ಸ್ವಾತಂತ್ರ್ಯಾನಂತರದ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಾದ ನಂತರ ಗ್ರಾಮದಲ್ಲಿ ರಾಜಕೀಯವು ಹಲವು ಮುಖಗಳಲ್ಲಿ ಮಾರ್ಪಾಡಾಗಿರುವುದನ್ನು ಗಮನಿಸಬಹುದು. ಅದರಲ್ಲೂ ಸೊರಟೂರ ಗ್ರಾಮವು ರಾಜಕೀಯ ವ್ಯವಸ್ಥೆಯಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದೆ. ಈ ಮೊದಲು ಗ್ರಾಮವು ಕೊಪ್ಪಳ ಲೋಕಸಭಾ ಕ್ಷೇತ್ರ, ಮುಂಡರಗಿ ವಿಧಾನ ಸಭಾ ಕ್ಷೇತ್ರ, ಗದಗ ತಾಲೂಕು ಆಡಳಿತಕ್ಕೆ ಮತ್ತು ಧಾರವಾಡ ಜಿಲ್ಲಾ ಆಡಳಿತಕ್ಕೆ ಸೇರಿತ್ತು. ವಾರದ ಸಂತೆಗೆ ಶಿರಹಟ್ಟಿಗೆ ಹೋಗಬೇಕಾಗಿತ್ತು. ಆದರೆ ಈಗ ಸೊರಟೂರ ಗ್ರಾಮ ಗದಗ ವಿಧಾನಸಭಾ ಕ್ಷೇತ್ರ ಗದಗ ತಾಲೂಕ ಆಡಳಿತ, ಗದಗ ಜಿಲ್ಲಾ ಆಡಳಿತ ಹಾಗೂ ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಸೇರಿದೆ. ಸೊರಟೂರ ಗ್ರಾಮವು ಗ್ರಾಮ ಪಂಚಾಯ್ತಿಯ (ಹಿಂದಿನ ಮಂಡಳ ಪಂಚಾಯ್ತಿ) ಕೇಂದ್ರವಾಗಿದ್ದು ಸೊರಟೂರ ತಾಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಕ್ಷೇತ್ರವಾಗಿದೆ. ಸೊರಟೂರ ಗ್ರಾಮಮಟ್ಟದಲ್ಲಿ ಎರಡು ರಾಜಕೀಯ ಪಕ್ಷಗಳ ಗುಂಪು ಕಂಡುಬರುತ್ತವೆ. ಒಂದು ಕಾಂಗ್ರೆಸ್ ಪಕ್ಷದ ಗುಂಪು ಹಾಗೂ ಇನ್ನೊಂದು ಕಾಂಗ್ರೆಸ್ಸೇತರ ಪಕ್ಷಗಳ ಗುಂಪು ಈವರೆಗೆ ಕಂಡುಬರುತ್ತಿದೆ.

ಆದರೆ ಕಾಂಗ್ರೆಸ್ ವಿರೋಧಿ ಪಕ್ಷದ ಗುಂಪು ಗ್ರಾಮದಲ್ಲಿ ಹಲವಾರು ಪಕ್ಷಗಳಲ್ಲಿ ವಿಲೀನವಾಗುತ್ತಾ ಬಂದಿದೆ.

ಅಂದರೆ ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪ್ರಮುಖ ವಿರೋಧ ಪಕ್ಷವಾಗಿದ್ದ ರಂಟೆ ಹೊತ್ತ ರೈತನ ಚಿನ್ಹೆಯ ಜನತಾ ಪಕ್ಷವು ಇತ್ತು. ಅನಂತರ ಚಕ್ರದ ಚಿಹ್ನೆಯ ಜನತಾದಳ ಬಂದಿತು. ನಂತರದ ಕಾಲಘಟ್ಟದಲ್ಲಿ ಅದು ಬಾಣದ ಚಿಹ್ನೆಯ ಸಂಯುಕ್ತ ಜನತಾದಳವಾಯಿತು. ಅನಂತರ ಅದರ ಮತ್ತೊಂದು ಭಾಗವಾದ ತೆನೆಹೊತ್ತ ಮಹಿಳೆಯ ಜಾತ್ಯಾತೀತ ಜನತಾದಳ ಕಾಣಿಸಿಕೊಂಡಿತು. ಪ್ರಸಕ್ತ ಕಾಲಘಟ್ಟದಲ್ಲಿ ಕಮಲದ ಚಿಹ್ನೆಯ ಭಾರತೀಯ ಜನತಾ ಪಕ್ಷವು ಗ್ರಾಮದಲ್ಲಿ ಕಾಣಿಸಿಕೊಂಡಿದೆ. ಇದರ ಮಧ್ಯ ಕರ್ನಾಟಕ ರಾಜ್ಯ ರೈತ ಸಂಘದ ಗ್ರಾಮ ಶಾಖೆಯು ಮಿಂಚಿ ಮಾಯವಾಗಿದ್ದು, ಅದರ ಸಂಘಟನೆಯು ರಾಜಕೀಯವಾಗಿ ಇತರ ಪಕ್ಷಗಳಲ್ಲಿ ವಿಲೀನಗೊಂಡಿದೆ. ಹೀಗೆ ಕಾಂಗ್ರೆಸ್ ವಿರೋಧಿ ಪಕ್ಷಗಳು ಗ್ರಾಮದಲ್ಲಿ ಈ ಮೇಲಿನ ವಿವಿಧ ಪಕ್ಷಗಳಲ್ಲಿ ಹಾದು ಬಂದಿವೆ. ಗ್ರಾಮದಲ್ಲಿ ಕೆಲವು ಮನೆತನಗಳು ಪರಂಪರಾಗತವಾಗಿ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದು, ಯಾವುದೇ ಸ್ಥಾನಮಾನ ಹಾಗೂ ಆಶೆ ಆಕಾಂಕ್ಷೆಗಳನ್ನು ಅಪೇಕ್ಷಿಸದೇ ಎಂಥ ಸಂದರ್ಭದಲ್ಲೂ ಪಕ್ಷ ಬದಲಿಸದೇ ಬದ್ಧತೆಯನ್ನು ಕಾಯ್ದುಕೊಂಡಿವೆ. ಹಾಗೆಯೇ ಗ್ರಾಮದ ಕೆಲ ಮನೆತನಗಳು ಕಾಂಗ್ರೆಸ್ ವಿರೋಧಿ ಪಕ್ಷದಲ್ಲಿ ಗುರುತಿಸಿಕೊಂಡಿವೆ. ಅಂದರೆ ಅವರಿಗೆ ಬೇರೆ ಯಾವುದೇ ಪಕ್ಷವಾದರೂ ಸರಿ ಆದರೆ ಕಾಂಗ್ರೆಸ್ ಪಕ್ಷಕ್ಕೆ ಅವರು ಹೊಂದಿಕೊಳ್ಳುವುದಿಲ್ಲ. ಅಂಥಹ ಕೆಲವು ಮನೆತನಗಳು ಜನತಾಪಕ್ಷ, ರೈತ ಸಂಘ, ಜನತಾದಳ, ಬಿ.ಜೆ.ಪಿ. ಹೀಗೆ ವಿವಿಧ ಪಕ್ಷಗಳಲ್ಲಿ ಸಾಗಿ ಬಂದಿದ್ದಾರೆ. ಇದು ಗ್ರಾಮದ ರಾಜಕೀಯ ಬದ್ಧತೆಗೆ ಒಂದು ಉದಾಹರಣೆಯಾಗಿದೆ. ಆದರೆ ಇತ್ತೀಚಿನ ಕಾಲಘಟ್ಟದಲ್ಲಿ ಕೆಲವರು ಸಂದರ್ಭಕ್ಕೆ ತಕ್ಕಂತೆ ಪಕ್ಷ ಬದಲಾಯಿಸುತ್ತಾ ರಾಜಕೀಯ ಸ್ಥಾನಮಾನ ಹಾಗೂ ಅಧಿಕಾರ ಅನುಭವಿಸುತ್ತಿದ್ದಾರೆ. ಇತ್ತೀಚಿನ ಚುನಾವಣೆಗಳಲ್ಲಿ ಕೆಲವರು ಬೆಳಿಗ್ಗೆ ಒಂದು ಪಕ್ಷದಲ್ಲಿದ್ದರೆ ಸಾಯಂಕಾಲ ಮತ್ತೊಂದು ಪಕ್ಷದಲ್ಲಿ ಕಾಣಿಸಿಕೊಂಡ ಪ್ರಸಂಗಗಳು ಇವೆ. ಇಂಥವರು ರಾಜ್ಯಮಟ್ಟದ, ರಾಷ್ಟ್ರಮಟ್ಟದ ಕೆಲ ರಾಜಕಾರಣಿಗಳನ್ನು ಅನುಸರಿಸಿರಬಹುದು. ಇಷ್ಟೆಲ್ಲಾ ರಾಜಕೀಯ ಚದುರಂಗದಾಟ ಗ್ರಾಮ ಮಟ್ಟದಲ್ಲಿ ನಡೆದರೂ ಗ್ರಾಮದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದೇ ರಾಜಕೀಯ ಸಾಮರಸ್ಯವನ್ನು ಕಾಯ್ದುಕೊಂಡಿರುವದು ಗ್ರಾಮದ ವಿಶೇಷವಾಗಿದೆ. ಕೆಲವು ಸಣ್ಣಮಟ್ಟ ಚರ್ಚೆಗಳು, ಸಂಘರ್ಷಣೆಗೆ ಬರುತ್ತವೆಯಾದರೂ ಅದು ಚುನಾವಣೆಗೆ ಸೀಮಿತವಾಗಿರುತ್ತದೆ. ಮತ್ತೆ ಎಲ್ಲಾ ಪಕ್ಷಗಳ ಮುಖಂಡರು ಸೇರಿ ಉಪಹಾರ ಚಹಾ ಸೇವನೆಯಲ್ಲಿ ಒಂದಾಗಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಹೀಗೆ ಸೊರಟೂರ ಗ್ರಾಮದ ರಾಜಕೀಯ ಸ್ಥಿತಿಗತಿ ರಾಜಕೀಯ ಸ್ಪರ್ಧೆಯ ನಡುವೆಯೂ ಸಾಮರಸ್ಯವನ್ನು ಕಾಯ್ದುಕೊಂಡಿದೆ.

ಸೊರಟೂರ ಗ್ರಾಮ ಪಂಚಾಯತಿ ಆಡಳಿತದ ವಿವರ

ಅ. ನಂ.	ಹೆಸರು	ಹುದ್ದೆ	ದಿನಾಂಕ	
			ಯಿಂದ	ವರೆಗೆ
೧.	ಶ್ರೀ ತಿರಕಪ್ಪ ಪ. ಮಿರಗಾಣಿ	ಸರಪಂಚ್	೧೬-೦೧-೧೯೫೨	೨೬-೧೨೧೯೫೪
೨.	ಶ್ರೀ ರಾಮರಾವ ಯಶವಂತರಾವ ಕುಲಕರ್ಣಿ	ಸರಪಂಚ್	೨೭-೧೨-೧೯೫೪	೨೮-೧೨-೧೯೫೮
೩.	ಶ್ರೀ ಗುರುಪಾದಪ್ಪ ಮಹಾಲಿಂಗಪ್ಪ ಬೋಳನವರ	ಸರಪಂಚ್	೨೯-೧೨-೧೯೫೮	೧೧-೦೮-೧೯೬೦
೪.	ಶ್ರೀ ಆರ್.ಬಿ. ವೈದ್ಯ ಚೇರಮನ್	ಚೇರಮನ್	೧೨-೦೮-೧೯೬೦	೦೮-೦೯-೧೯೬೩
೫.	ಶ್ರೀ ಶಿವರಾಯಪ್ಪ. ಯ. ಸಾತ್ಪನವರ	ಚೇರಮನ್	೦೯-೦೯-೧೯೬೩	೨೯-೦೪-೧೯೬೪
೬.	ಶ್ರೀ ಆರ್. ಬಿ. ವೈದ್ಯ	ಚೇರಮನ್	೩೦-೦೪-೧೯೬೪	೨೧-೦೬-೧೯೬೮
೭.	ಶ್ರೀ ದೇವೇಂದ್ರಪ್ಪ ಎನ್. ಮಲ್ಲಾಡದ	ಚೇರಮನ್	೨೨-೦೬-೧೯೬೮	೧೦-೦೭-೧೯೭೭
೮.	ಶ್ರೀ ದೇವೇಂದ್ರಪ್ಪ. ಎನ್. ಮಲ್ಲಾಡದ	ಚೇರಮನ್	೩೦-೧೨-೧೯೭೮	೩೦-೦೭-೧೯೮೩
೯.	ಆಡಳಿತಾಧಿಕಾರಿ	ಆಡಳಿತಾಧಿಕಾರಿ	೨೬-೦೮-೧೯೮೩	೨೩-೧೦-೧೯೮೭
೧೦.	ಕೊಟ್ರಪ್ಪ. ಗೂಳಪ್ಪ. ಕೊಪ್ಪದ	ಪ್ರಧಾನರು	೨೨-೦೪-೧೯೮೭	೧೫-೧೨-೧೯೮೯
೧೧.	ಶ್ರೀ ದ್ಯಾಮಣ್ಣ. ನಾಗಪ್ಪ. ಅದ್ರಕಟ್ಟಿ	ಪ್ರಧಾನರು	೧೬-೧೨-೧೯೮೯	೦೮-೧೨-೧೯೯೧
೧೨.	ಶ್ರೀ ಕೊಟ್ರಪ್ಪ. ಗೂಳಪ್ಪ. ಕೊಪ್ಪದ	ಪ್ರಧಾನರು	೦೯-೧೨-೧೯೯೧	೩೦-೦೯-೧೯೯೨
೧೩.	ಡಾ. ಎಚ್.ಎ. ವೆಂಕಟೇಶ	ಆಡಳಿತಾಧಿಕಾರಿ	೦೧-೧೦-೧೯೯೨	೦೯-೦೩-೧೯೯೪
೧೪.	ಶ್ರೀ ಬಿ.ಆರ್. ವೈದ್ಯ	ಅಧ್ಯಕ್ಷರು	೦೮-೦೩-೧೯೯೪	೨೧-೧-೧೯೯೯
೧೫.	ಶ್ರೀ ದೇವೇಂದ್ರಪ್ಪ. ಭಜಂತ್ರಿ	ಅಧ್ಯಕ್ಷರು	೨೨-೦೧-೧೯೯೯	೨೯-೧೨-೨೦೦೨
೧೬.	ಶ್ರೀಮತಿ ಪುಷ್ಪಾವತಿ ಗು. ಹಿರೇಮಠ	ಅಧ್ಯಕ್ಷರು	೩೦-೧೨-೨೦೦೨	೧೨-೦೩-೨೦೦೩
೧೭.	ಶ್ರೀಮತಿ ರುದ್ರವ್ವ ವ್ಹಿ. ಸಂಶಿ	ಅಧ್ಯಕ್ಷರು	೨೬-೦೨-೨೦೦೪	೧೯-೦೩-೨೦೦೫
೧೮.	ಶ್ರೀ ಮಲ್ಲಪ್ಪ. ಪ. ಕಲಗುಡಿ	ಅಧ್ಯಕ್ಷರು	೩೦-೦೩-೨೦೦೫	೧೬-೦೧-೨೦೦೭
೧೯.	ಶ್ರೀ ಬಾಪುಗೌಡ. ಹ. ಪಾಟೀಲ	ಅಧ್ಯಕ್ಷರು	೨೦-೦೨-೨೦೦೭	೩೦-೦೮-೨೦೦೭
೨೦.	ಶ್ರೀ ರಾಮಣ್ಣ. ಯ. ಶೆಲಿಯಪ್ಪನವರ	ಅಧ್ಯಕ್ಷರು	೨೪-೦೯-೨೦೦೭	೨೦೧೦

೨೧.	ಶ್ರೀಮತಿ ಚನ್ನವ್ವಾ ಎಸ್.ಪಾಟೀಲ	ಅಧ್ಯಕ್ಷರು	೨೦೧೦	೨೦೧೨
೨೨.	ಶ್ರೀ. ಶಂಕರ ಬಿ. ಲಮಾಣಿ	ಅಧ್ಯಕ್ಷರು	೨೦೧೩	೨೦೧೪
೨೩.	ಶ್ರೀಮತಿರತ್ನವ್ವಾ ಸಣ್ಣತಂಗಿಯವರ	ಅಧ್ಯಕ್ಷರು	೨೦೧೪	

ಗ್ರಾಮದ ಈವರೆಗಿನ ತಾಲೂಕು ಪಂಚಾಯತಿ ಸದಸ್ಯರ ವಿವರ

ಅ. ನಂ.	ಹೆಸರು	ಹುದ್ದೆ	ದಿನಾಂಕ	
			ಯಿಂದ	ವರೆಗೆ
೧.	ಶ್ರೀ ಉಲ್ಲಾಸರಾವ ಆರ್. ಕುಲಕರ್ಣಿ	ಸದಸ್ಯರು	೧೯೮೫	
೨.	ಶ್ರೀ ಶಂಕ್ರಪ್ಪ. ಮ. ಕಲಗುಡಿ	ಸದಸ್ಯರು	೧೯೯೫	೨೦೦೦
೩.	ಶ್ರೀಮತಿ ರೇಖಾ ಬ. ಮೇಗೂರ	ಸದಸ್ಯರು	೨೦೦೦	೨೦೦೨
೪.	ಶ್ರೀಮತಿ ದ್ಯಾಮವ್ವ ರಾ. ಕಮ್ಮಾರ	ಸದಸ್ಯರು	೨೦೦೨	೨೦೦೫
೫.	ಶ್ರೀ ಮಲಕಾಜಪ್ಪ. ಜಿ. ಗಿಡಕೆಂಚಣ್ಣನವರ	ಸದಸ್ಯರು	೨೦೦೬	೨೦೧೦
೬.	ಶ್ರೀ ಭೀಮಪ್ಪಾ ಲಮಾಣಿ	ಸದಸ್ಯರು	೨೦೧೦	

ಗ್ರಾಮದ ಈವರೆಗಿನ ಜಿಲ್ಲಾ ಪಂಚಾಯತಿ ಸದಸ್ಯರ ವಿವರ

ಅ. ನಂ.	ಹೆಸರು	ಹುದ್ದೆ	ದಿನಾಂಕ	
			ಯಿಂದ	ವರೆಗೆ
೧.	ಶ್ರೀ ಡಿ. ಆರ್. ಪಾಟೀಲ	ಸದಸ್ಯರು	೧೯೮೫	
೨.	ಶ್ರೀಮತಿ ಪಿಕಣವ್ವ ಲಮಾಣಿ	ಸದಸ್ಯರು	೧೯೯೫	೨೦೦೦
೩.	ಶ್ರೀಮತಿ ನೀಲವ್ವ ಚ. ಬೋಳನವರ	ಸದಸ್ಯರು	೨೦೦೦	೨೦೦೫
೪.	ಶ್ರೀ ಶಶಿಧರ ಕೆ. ಕುರಡಗಿ	ಸದಸ್ಯರು	೨೦೦೫	೨೦೧೦
೫.	ಶ್ರೀಮತಿ ಶಾರದಾಬಾಯಿ ತೋಟದ	ಸದಸ್ಯರು	೨೦೧೦	

ಗ್ರಾಮದಲ್ಲಿ ರಾಜಕೀಯ ಅಧಿಕಾರ ಮತ್ತು ತಳಸಮುದಾಯ

ಸೊರಟೂರ ಗ್ರಾಮದ ರಾಜಕೀಯವನ್ನು ಗಮನಿಸಿದಾಗ ಎರಡು ಅಂಶಗಳು ಗಮನಕ್ಕೆ ಬರುತ್ತವೆ. ಒಂದು ರಾಜಕಾರಣ ಮತ್ತೊಂದು ರಾಜಕೀಯ ಅಧಿಕಾರ; ಇವೆರಡನ್ನು ಪ್ರತ್ಯಕವಾಗಿ ನೋಡಿದಾಗ ರಾಜಕಾರಣದಲ್ಲಿ ಹಲವು ಬದಲಾವಣೆಗಳಾಗಿರುವದು ಕಂಡುಬರುತ್ತದೆ. ಅಂದರೆ ಒಂದು ಕಾಲದಲ್ಲಿ ರಾಜಕಾರಣವೆಂಬುದು ಕೇವಲ ಕೆಲವೇ ಜನರ ಸ್ವತ್ತಾಗಿತ್ತು. ಈಗ ರಾಜಕಾರಣದಲ್ಲಿ ಬಹುಪಾಲು ಎಲ್ಲಾ ವರ್ಗದ ಜನರು ಸಕ್ರಿಯರಾಗಿದ್ದಾರೆ ಎಂಬುದು ಕಂಡು

ಬರುತ್ತದೆ. ಅಂದರೆ ರಾಜಕೀಯ ಪಕ್ಷದ ಕಾರ್ಯಕ್ರಮ ಚುನಾವಣೆ ಮುಂತಾದವುಗಳಲ್ಲಿ ಸ್ವತಂತ್ರತೆ ಹಾಗೂ ಸಕ್ರಿಯತೆ ಕಂಡು ಬರುತ್ತದೆ. ಆದರೆ ರಾಜಕೀಯ ಅಧಿಕಾರ ಎಂಬುದನ್ನು ಕೇಂದ್ರೀಕರಿಸಿ ನೋಡಿದಾಗ ಗ್ರಾಮದಲ್ಲಿ ಸಾಮಾಜಿಕವಾಗಿ ಹಿಂದುಳಿದ ಸಮುದಾಯದವರು ಶೋಷಣೆಯಿಂದ ಮುಕ್ತರಾಗಿಲ್ಲ ಎಂಬುದು ರಾಜಕೀಯ ಅಧಿಕಾರದ ದಾಖಲೆಗಳಿಂದ ತಿಳಿದು ಬರುತ್ತದೆ. ಏಕೆಂದರೆ ೧೯೫೨ರಲ್ಲಿ ಪ್ರಾರಂಭವಾದ ಸೊರಟೂರ ಗ್ರಾಮದ ಪಂಚಾಯತಿ ಆಡಳಿತದಲ್ಲಿ ೧೯೯೯ರವರೆಗೆ ೪೭ ವರ್ಷಗಳ ಆಡಳಿತ ಅವಧಿಯಲ್ಲಿ ಒಟ್ಟು ೧೨ ಜನ ಚೇರಮನ್ನರಾಗಿ ಆಡಳಿತ ನಡೆಸಿದ್ದಾರೆ. ಈ ೧೨ ಜನ ಚೇರಮನ್ನರು ಸಹ ಸಾಮಾಜಿಕವಾಗಿ ಮೇಲುಸ್ತರದಲ್ಲಿ ಇದ್ದವರೇ. ಅದರಲ್ಲೂ ಶ್ರೀ ದೇವೆಂದ್ರಪ್ಪ ಮಲ್ಲಾಡದ ಎಂಬವರು ೧೯೬೮ರಿಂದ ೮೩ರವರೆಗೆ ಒಟ್ಟು ೧೫ ವರ್ಷ ಚೇರಮನ್ನರಾಗಿದ್ದಾರೆ. ಸರ್ಕಾರ ಮೀಸಲಾತಿ ಕೊಡುವವರೆಗೆ ಕುರುಬ ಮುಸ್ಲಿಂ ವಾಲ್ಮೀಕಿ, ಪಂಚಾಳ ಮಾದಿಗ ಭಜಂತ್ರಿ ಕಲಾಲ ಸೇರಿದಂತೆ ಹಿಂದುಳಿದ ವರ್ಗದ ಒಬ್ಬರೂ ಅಧ್ಯಕ್ಷರಾಗಿಲ್ಲ ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ಅಂದರೆ ರಾಜಕೀಯ ಅಧಿಕಾರ ಕೇವಲ ಕೆಲವೇ ಜನರ ಸ್ವತ್ತಾಗಿದೆ ಎಂಬುದನ್ನು ಗಮನಿಸಬಹುದು.

ಮೀಸಲಾತಿಯ ಅಧಿಕಾರ ಹಾಗೂ ಅದರ ಪರಿಣಾಮ

ಸರ್ಕಾರ ಹಿಂದುಳಿದ ಹಾಗೂ ದಲಿತ ಸಮುದಾಯಕ್ಕೆ ರಾಜಕೀಯ ಅಧಿಕಾರ ನೀಡಬೇಕೆಂಬ ಉದ್ದೇಶದಿಂದ ಮೀಸಲಾತಿಯನ್ನು ಜಾರಿಗೊಳಿಸಿತ್ತು. ಅದರ ಪರಿಣಾಮ ಸೊರಟೂರ ಗ್ರಾಮ ಪಂಚಾಯ್ತಿಯಲ್ಲಿ ೨೨-೦೧-೧೯೯೯ರಂದು ಮೊಟ್ಟಮೊದಲ ಬಾರಿಗೆ ದಲಿತ ಜನಾಂಗದ ಶ್ರೀ ದೇವೇಂದ್ರಪ್ಪ ಭಜಂತ್ರಿಯವರು ಸೊರಟೂರ ಪಂಚಾಯ್ತಿಯ ಅಧ್ಯಕ್ಷರಾದರು. ತದನಂತರ ಹಿಂದುಳಿದ ಜನಾಂಗದ ರಾಮಣ್ಣ ಶೆಲಿಯಪ್ಪನವರ ದಲಿತ ಜನಾಂಗದ ಶಂಕರ ಲಮಾಣಿ, ಶ್ರೀಮತಿ ರತ್ನವ್ವ ಸಣ್ಣತಂಗಿಯವರ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ಇವರನ್ನು ಸೊರಟೂರ ಗ್ರಾಮದ ಜನ ಒಕ್ಕೊರಲಿನಿಂದ ಅಧ್ಯಕ್ಷರನ್ನಾಗಿ ಮಾಡಲಿಲ್ಲ. ಮೀಸಲಾತಿಯ ಅನಿವಾರ್ಯತೆಯಿಂದ ಅಧ್ಯಕ್ಷರಾಗಿದ್ದಾರೆ ಮೀಸಲಾತಿಯಿಂದ ಪಡೆದ ಈ ಅಧಿಕಾರದ ಪರಿಣಾಮ ಇನ್ನು ವಿಚಿತ್ರವಾಗಿರುವುದು ಕ್ಷೇತ್ರಕಾರ್ಯದಲ್ಲಿ ಕಂಡುಬರುತ್ತದೆ. ಅದೇನೆಂದರೆ ಗ್ರಾಮದಲ್ಲಿ ರಾಜಕೀಯವನ್ನು ತಮ್ಮ ಸ್ವಂತ ಬಂಡವಾಳವೆಂಬಂತೆ ತಿಳಿದುಕೊಂಡಿರುವ ಕೆಲವರು ಈ ಮೀಸಲಾತಿಯ ಅಧಿಕಾರವನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ಜಾಯಮಾನ ಹೊಂದಿದ್ದಾರೆ. ಮೀಸಲಾತಿಯ ಸಂದರ್ಭದಲ್ಲಿ ತಮ್ಮ ಅಡಿಯಾಳಾಗಿ ಕೆಲಸ ನಿರ್ವಹಿಸುವವರನ್ನು ಆಯ್ಕೆ ಮಾಡುವ ಮೂಲಕ ಪರೋಕ್ಷವಾಗಿ ತಾವೇ ಅಧಿಕಾರ ಚಲಾಯಿಸಲು ಪ್ರಯತ್ನಿಸುತ್ತಾರೆ. ಚುನಾವಣಾ ರಾಜಕೀಯದಲ್ಲಿ ಇದು ಕೆಲವೊಮ್ಮೆ ಸಾಧ್ಯವೂ ಆಗಿದೆ. ಹೀಗೆ ಮೀಸಲಾತಿಯ ಅಧಿಕಾರ ಶೋಷಿತರನ್ನು ಮತ್ತೊಂದು ಶೋಷಣೆಯಲ್ಲಿ ಮುಳುಗಿಸಿದಂತೆ ಆಗುತ್ತಿದೆ. ಇದರ ಮಧ್ಯ ತಳಸಮುದಾಯಗಳಲ್ಲಿ ರಾಜಕೀಯ ಪ್ರಜ್ಞೆ ಜಾಗೃತಗೊಳ್ಳುತ್ತಿರುವುದು ಕಂಡುಬರುತ್ತಿದೆ. ಅದರ ಪರಿಣಾಮ ಕಾದು ನೋಡಬೇಕು.

ರಾಜಕೀಯದಲ್ಲಿ ಜನರಲ್ ಅಭ್ಯರ್ಥಿ ಎಂದರೆ ಯಾರು?

ಚುನಾವಣೆಯಲ್ಲಿ ಮೀಸಲಾತಿ ಬಂದ ನಂತರ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಕೆಲವು ವಾರ್ಡ್‌ಗಳಲ್ಲಿ ಮಾತ್ರ ಹಿಂದುಳಿದ ವರ್ಗದವರಿಗೆ ಮೀಸಲು ಸ್ಥಾನಗಳಿರುತ್ತದೆ. ಇನ್ನುಳಿದ ಎಲ್ಲಾ ಸ್ಥಾನಗಳು ಸಾಮಾನ್ಯ ಅಭ್ಯರ್ಥಿ ಎಂದು ಇರುತ್ತದೆ. ಇಲ್ಲಿ ಸಾಮಾನ್ಯ ಅಥವಾ ಜನರಲ್ ಅಭ್ಯರ್ಥಿ ಎಂದರೆ ಯಾರು? ಎಂಬ ಪ್ರಶ್ನೆ ಬರುತ್ತದೆ. ಇದರ ನಿಜವಾದ ಅರ್ಥ ಸಾಮಾನ್ಯ ಎಂದರೆ ಇದಕ್ಕೆ ಯಾವುದೇ ಜಾತಿ ಪಂಗಡಗಳ ನಿರ್ಬಂಧವಿಲ್ಲ. ಯಾರು ಬೇಕಾದರೂ ಸ್ಪರ್ಧಿಸಬಹುದು; ಎಲ್ಲರಿಗೂ ಇಲ್ಲಿ ಮುಕ್ತ ಅವಕಾಶ ಎಂಬ ಅರ್ಥ ಕೊಡುತ್ತದೆ. ಆದರೆ ಮೇಲ್ವರ್ಗದವರು ಉಳ್ಳವರು ತಲೆತಲಾಂತರದಿಂದ ರಾಜಕೀಯ ಅಧಿಕಾರ ನಮಗೆ ಮಾತ್ರ ಸೇರಿದ್ದು ಎಂಬ ಭ್ರಮೆಯಲ್ಲಿದ್ದವರು, ಈ ಜನರಲ್ ಅಭ್ಯರ್ಥಿ ಎಂಬ ಅರ್ಥವನ್ನು ಅಪಾರ್ಥಗೊಳಿಸಿ ಜನಸಾಮಾನ್ಯರನ್ನು ಹಾಗೂ ಶೋಷಿತರನ್ನು ಮತ್ತೆ ಅಧಿಕಾರದಿಂದ ದೂರವಿಡುವ ಪ್ರಯತ್ನ ಮಾಡುತ್ತಿರುವುದು ಗ್ರಾಮ ಪಂಚಾಯ್ತಿ ಚುನಾವಣೆಯ ದಾಖಲೆಗಳಿಂದ ಹಾಗೂ ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ. ಉದಾ: ಸಾಮಾನ್ಯ ಅಭ್ಯರ್ಥಿ ಎಂಬ ಸ್ಥಾನದಿಂದ ಸೊರಟೂರ ಗ್ರಾಮದಲ್ಲಿ ಈವರೆಗೆ ಹಿಂದುಳಿದ ವರ್ಗದವರೂ ಯಾರು ಆಯ್ಕೆಯಾಗಿಲ್ಲ ಆಯ್ಕೆಯಾಗಿಲ್ಲವೆಂದರೆ ಸಾಮಾನ್ಯ ಸ್ಥಾನಗಳಿಗೆ ಅವರು ಸ್ಪರ್ಧಿಸುತ್ತಿಲ್ಲ. ಏಕೆಂದರೆ ಸಾಮಾನ್ಯ ಸ್ಥಾನವೆಂಬುದು ಮೇಲ್ವರ್ಗದವರಿಗೆ ಸೀಮಿತ ಎಂಬಂತೆ ವಾತಾವರಣವನ್ನು ತಾವೇ ಸೃಷ್ಟಿಸಿಕೊಂಡಿದ್ದಾರೆ. ಹಿಂದುಳಿದ ವರ್ಗದ ಕೆಲವರನ್ನು ಸಾಮಾನ್ಯ ಸ್ಥಾನದಲ್ಲಿ ನೀವು ಸ್ಪರ್ಧಿಸಬಹುದಲ್ಲ ಎಂದು ಕೇಳಿದಾಗ **"ಅದು ಜನರಲ್ ಐತರಿ"** ಎಂದು ಹೇಳುತ್ತಾರೆ. ಅಂದರೆ ಜನರಲ್ ಸ್ಥಾನ ನಮಗೆ ಸಂಬಂಧವಿಲ್ಲ ಎಂದು ತಾವೇ ತಿಳಿದುಕೊಂಡಿದ್ದಾರೆ. ಅರ್ಥಾತ್ ಹಾಗೆ ತಿಳಿದುಕೊಳ್ಳುವಂತೆ ಮಾಡಿದ್ದಾರೆ. ಇಲ್ಲಿ ಜನರಲ್ ಎಂಬುದು ಮೇಲ್ವರ್ಗದವರಿಗಾಗಿಯೇ ಇರುವ ವಿಶೇಷ ಮೀಸಲಾತಿಯೇನೋ ಎಂಬಂತೆ ಕಾಣಿಸುತ್ತಿದೆ. ಇದನ್ನು ಪ್ರಶ್ನಿಸುವ ಜನ ಈಗೀಗ ಗ್ರಾಮದಲ್ಲಿ ಕಾಣಸಿಗುತ್ತಾರೆ. ಕ್ರಮೇಣ ಅದು ಸಾಧ್ಯವಾಗುವ ಲಕ್ಷಣಗಳು ಗೋಚರಿಸುತ್ತಿವೆ.

ಟಿಪ್ಪಣಿಗಳು

೧. ಎಚ್.ಎಸ್. ಗುರುಪ್ರಸಾದ್, ೨೦೦೭, **ವಲಸಿಗರ ನೆಲೆ, ಮರಿಯಮ್ಮನಹಳ್ಳಿ ಸಂಕಥನ**, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೭.

೨. ಕುಲದಿಂದ ಹೊರಗೆ ಇಡುವುದು: ಸಮಾಜದ ಎಲ್ಲ ಕಾರ್ಯಚಟುವಟಿಕೆಗಳಿಂದ ಹೊರಗಿಡುವುದು.

೩. ಎಡಿ ಕುಂಟೆ: ಬೆಳೆಯ ನಡುವೆ ಇರುವ ಕಳೆ ತೆಗೆಯಲು ಉಪಯೋಗಿಸುವ ಕೃಷಿ ಸಲಕರಣೆ,

೪. ಮಿಣಿ: ನೇಗಿಲು ಹೂಡಲು ಕಟ್ಟುವ ಒಂದು ಹಗ್ಗ.

೫. ಐರಾಣಿ: ಮದುವೆಯ ಸಂದರ್ಭದಲ್ಲಿ ಪೂಜೆಗಾಗಿ ತರುವ ಮಣ್ಣಿನ ಮಡಿಕೆ.

೬. ಗ್ರಾಮದ ಎಲ್ಲಾ ಔಪಚಾರಿಕೆ ಶಿಕ್ಷಣ ಸಂಸ್ಥೆಗಳನ್ನು ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ.

□□

ಅಧ್ಯಾಯ : ಆರು

ಆಚರಣೆಗಳು

೬.೧. ವಾರ್ಷಿಕಾವರ್ತನ ಆಚರಣೆಗಳು

೬.೨. ಜೀವನಾವರ್ತನ ಆಚರಣೆಗಳು

೬.೩. ಜನಪದ ನಂಬಿಕೆಗಳು

೬.೪. ಜನಪದ ವಿಧಿ-ನಿಷೇಧಗಳು

ಅಧ್ಯಾಯ : ಆರು

ಆಚರಣೆಗಳು

ಮನುಷ್ಯ ಎಂದು ಈ ಪ್ರಕೃತಿಯ ವೈಚಿತ್ರ್ಯಗಳನ್ನು ಕಂಡು ಬೆದರಿ ಬೆರಗಾಗಿ ನಿಂತು ಯಾವುದೇ ಒಂದು ಅಗೋಚರವಾದ ಶಕ್ತಿಯನ್ನು ಗುರುತಿಸಿ ಈ ಪ್ರಕೃತಿಯಲ್ಲಿನ ಪ್ರತಿಯೊಂದು ಗಿಡ-ಮರ, ಪ್ರಾಣಿ-ಪಕ್ಷಿ, ಸೂರ್ಯ-ಚಂದ್ರ, ನದಿ, ಬೆಟ್ಟ-ಗುಡ್ಡ ಪರ್ವತ ಹೀಗೆ ಈ ಪ್ರಕೃತಿಯನ್ನು ಯಾವಾಗ ಆರಾಧಿಸಲು ಪ್ರಾರಂಭಿಸಿದನೋ ಅಂದೇ ಆಚರಣೆಗಳು ಹುಟ್ಟಿಕೊಂಡವು ಎಂದು ಹೇಳಬಹುದು.[೧] ಆ ಮೂಲಕ ಮನುಷ್ಯ ತನ್ನ ಕಲ್ಪನೆಯ ಮೂಲಕ ಪ್ರಕೃತಿಯಲ್ಲಿಯ ಪ್ರತಿಯೊಂದಕ್ಕೂ ಜೀವ ತುಂಬಿದ್ದಾನೆ. ಆ ಪ್ರಕೃತಿಯನ್ನು ಆರಾಧಿಸುತ್ತ ಅದರ ಸುತ್ತ ಪುರಾಣ, ಕಥೆ, ಅವತಾರ ರೂಪಗಳನ್ನೆಲ್ಲಾ ಕಟ್ಟಿಕೊಂಡು ದೇವರನ್ನು ಸೃಷ್ಟಿಸಿದ ನಂತರ ಆ ದೇವರನ್ನು ಹಲವು ಹೆಸರುಗಳಲ್ಲಿ ಪೂಜಿಸಲು ಪ್ರಾರಂಭಿಸಿದ ನಂತರ ದೇವರನ್ನು ಸಂತೃಪ್ತಗೊಳಿಸಲು ಹಲವು ಆಚರಣೆಗಳನ್ನು ಸೃಷ್ಟಿಸಿದ ಹೀಗೆ ಸೊರಟೂರ ಗ್ರಾಮದಲ್ಲಿ ಆಚರಿಸಲ್ಪಡುವ ಆಚರಣೆಗಳನ್ನು ವಾರ್ಷಿಕಾವರ್ತನದ ಆಚರಣೆಗಳು ಹಾಗೂ ಜೀವನಾವರ್ತನದ ಆಚರಣೆಗಳೆಂದು ವಿಂಗಡಿಸಿಕೊಳ್ಳಲಾಗಿದೆ.

೬.೧. ವಾರ್ಷಿಕಾವರ್ತನದ ಆಚರಣೆಗಳು

ಮನುಷ್ಯ ಜೀವನವು ನಿಂತ ನೀರಾಗದೇ ಚಲನವಲನ ಕ್ರಿಯೆಗೆ ಒಳಪಟ್ಟಿದೆ. ಹಳೆಯದು ಕೊಚ್ಚಿಕೊಂಡು ಹೋಗಿ ಹೊಸತು ಬರುವ ಹಾಗೆ ಋತುವಿನಿಂದಲೇ ಹೊಸದನ್ನು ಆರಂಭಿಸುವ ನಾವು ಕಾಲಕ್ಕೆ ಬದ್ಧರಾಗಿ ಮನಸ್ಸನ್ನು ಬದಲಾಯಿಸಿಕೊಂಡು ಹೊಸತನದಿಂದ ಜೀವನ ಸಾಗಿಸುವುದಕ್ಕೆ ಈ ವಾರ್ಷಿಕಾವರ್ತನದ ಆಚರಣೆಗಳು ಕಾರಣವಾಗಿದೆ. ಹುಣ್ಣಿಮೆ, ಅಮವಾಸ್ಯೆ, ಜಾತ್ರೆ, ಉತ್ಸವ, ಜಯಂತಿ ಮುಂತಾದವು ವಾರ್ಷಿಕಾವರ್ತನದ ಆಚರಣೆಗಳಾಗಿವೆ. ಅವುಗಳಲ್ಲಿ ಸೊರಟೂರ ಗ್ರಾಮದಲ್ಲಿ ಪ್ರಮುಖವಾದ ಆಚರಣೆಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಶ್ರೀ ಶರಣಬಸವೇಶ್ವರ ಪುರಾಣ ಮಂಗಲ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮ

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ

ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ

- ಎಂಬ ಕವಿತೆಯಂತೆ ಯುಗಾದಿ ಪಾಡ್ಯ ಹಿಂದೂ ಸಂಪ್ರದಾಯದಲ್ಲಿ ವರುಷದ ಹೊಸದಿನ. ಈ ದಿನ ಸೊರಟೂರ ಗ್ರಾಮದಲ್ಲಿ ಪ್ರತಿವರ್ಷ ಶ್ರೀ ಶರಣಬಸವೇಶ್ವರ ಪುರಾಣ ಮಂಗಲೋತ್ಸವದ ಹಾಗೂ ಸಾಮೂಹಿಕ ವಿವಾಹಗಳು ಪ್ರತಿವರ್ಷವು ವಾರ್ಷಿಕಾವರ್ತನದ ಆಚರಣೆಯಾಗಿ ನಡೆಯುತ್ತಿದೆ. ಮುಂಡರಗಿ ಶ್ರೀ ಜಗದ್ಗುರು ಅನ್ನದಾನ ಮಹಾಸ್ವಾಮಿಗಳ ಶಾಖಾಮಠದಲ್ಲಿ ನಡೆಯುವ ಈ ಕಾರ್ಯಕ್ರಮವು ಈಗ ೩೨ ವರ್ಷಗಳಿಂದ ನಡೆದುಕೊಂಡು ಬಂದಿದೆ. ಶಿವರಾತ್ರಿ ಅಮವಾಸ್ಯೆಯ ಪಾಡ್ಯದಿಂದ ಒಂದು ತಿಂಗಳ ಪರ್ಯಂತ ಬರಗಾಲ ಬಂಟ ಶ್ರೀ ಕಲ್ಬುರ್ಗಿ ಶರಣಬಸವೇಶ್ವರ ಪುರಾಣವನ್ನು ಮಠದಲ್ಲಿ ನಡೆಸುತ್ತಾರೆ. ಒಂದು ತಿಂಗಳ ಅವಧಿಯಲ್ಲಿ ಶರಣಬಸಪ್ಪನ ಹುಟ್ಟಿನಿಂದ ಸಾವಿನವರೆಗೆ ಎಲ್ಲಾ ಆಚರಣೆಗಳು ಪುರಾಣದಲ್ಲಿ ನಡೆಯುತ್ತವೇ ಪವಾಡ ಪುರುಷನಾದ ಶರಣಪ್ಪನ ಸಾಮಗ್ರಿಗಳನ್ನು ಪುರಾಣದ ಲೀಲಾವಿನಲ್ಲಿ ತೆಗೆದುಕೊಂಡವರಿಗೆ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆ ಇದೆ.

ಪುರಾಣ ಪರಂಪರೆಯಲ್ಲಿ ಮಕ್ಕಳಿಲ್ಲದವರು ಶರಣಪ್ಪನಿಗೆ ನಾಮಕರಣ ಮಾಡಿದರೆ ತೊಟ್ಟಿಲು ತೆಗೆದುಕೊಂಡರೆ ಮಕ್ಕಳಾಗುತ್ತವೆ. ಶರಣರ ಶಾಲೆಯ ಸಾಮಗ್ರಿಯನ್ನು ತೆಗೆದುಕೊಂಡರೆ ಮಕ್ಕಳು ಜಾಣರಾಗುತ್ತಾರೆ. ಶರಣರ ಕೃಷಿ ಸಾಮಗ್ರಿ ತೆಗೆದುಕೊಂಡರೆ ಮನೆಯಲ್ಲಿ ಕಮತ (ಕೃಷಿ) ಹುಲುಸಾಗುತ್ತದೆ. ಸೂರಿಗೆಕಾಯಿ, ಸೀರೆ ಕುಪ್ಪಸ ತೆಗೆದುಕೊಂಡರೆ ಮದುವೆಯಾಗುತ್ತದೆ ಎಂಬ ನಂಬಿಕೆ ಇದೆ. ಹಾಗೆ ಇಷ್ಟಾರ್ಥ ಈಡೇರಿದ ಹಲವಾರು ನಿದರ್ಶನಗಳು ಗ್ರಾಮದಲ್ಲಿವೆ ಎಂದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಆದ್ದರಿಂದ ಗ್ರಾಮದ ಸದ್ಭಕ್ತರು ತಿಂಗಳ ಪರ್ಯಂತಪುರಾಣವನ್ನು ಭಕ್ತಿನಿಷ್ಠೆಗಳಿಂದ ನೆರವೇರಿಸುತ್ತಾರೆ. ಪುರಾಣ ಮಂಗಲದ ಕೊನೆಯ ದಿನ ಅಂದರೆ ಯುಗಾದಿ ಪಾಡ್ಯದ ದಿನ ಸಾಮೂಹಿಕ ವಿವಾಹ ಕಾರ್ಯಕ್ರಮ ನೆರವೇರುತ್ತದೆ. ಅಂದು ಗ್ರಾಮದ ಹಾಗೂ ಸುತ್ತಮುತ್ತಲ ಗ್ರಾಮದ ವಧುವರರು ಸತಿಪತಿಗಳಾಗಿ ದಾಂಪತ್ಯ ಜೀವನಕ್ಕೆ ಕಾಲಿರಿಸುತ್ತಾರೆ. ಈ ಕಾರ್ಯಕ್ರಮ ಗ್ರಾಮದಲ್ಲಿ ಬಹು ವೈಭವದಿಂದ ನೆರವೇರುತ್ತದೆ. ಗ್ರಾಮದ ಸಮಸ್ತ ಜನರು ಯಾವುದೇ ಜಾತಿಮತ ಬೇಧವಿಲ್ಲದೆ ವಿವಾಹಕ್ಕೆ ಆಗಮಿಸಿದ ಸದ್ಭಕ್ತರಿಗೆ ನೀರು, ಊಟ ಸೇರಿದಂತೆ ಸಕಲ ವ್ಯವಸ್ಥೆಯನ್ನು ಬಹು ಆದರದಿಂದ ವ್ಯವಸ್ಥಿತವಾಗಿ ಮಾಡುತ್ತಾರೆ. ಈ ಕಾರ್ಯಕ್ರಮ ಗ್ರಾಮದಲ್ಲಿ ಸಾಮರಸ್ಯವನ್ನು ಗಟ್ಟಿಗೊಳಿಸುವ ಜೊತೆಗೆ ಇತರ ಗ್ರಾಮಗಳಿಗೆ ಮಾದರಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಹಲವಾರು ಗ್ರಾಮಗಳಲ್ಲಿ ಸಾಮೂಹಿಕ ವಿವಾಹಗಳು ನಡೆಯುತ್ತಿವೆ. ಹೀಗೆ ಸೊರಟೂರ ಗ್ರಾಮದಲ್ಲಿ ನಡೆಯುವ ಈ ಕಾರ್ಯಕ್ರಮ ಇತರ ಗ್ರಾಮಗಳಿಗೆ ಮಾದರಿಯಾಗಿದೆ. ಸೊರಟೂರ ಗ್ರಾಮದಲ್ಲಿ ಶರಣಪ್ಪನ ಪುರಾಣ ಪ್ರಾರಂಭವಾದ ಮೇಲೆ ಗ್ರಾಮಕ್ಕೆ ಯಾವ ಕೊರತೆಯೂ ಇಲ್ಲ ಇದು ಗ್ರಾಮಕ್ಕೆ ಶುಭೋದಯ ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ.

ಜಾತ್ರೆಗಳು

'ಹಬ್ಬದೂಟ ಜಾತ್ರೆಯ ನೋಟ' ಎಂಬ ಗಾದೆಯ ಮಾತೊಂದಿದೆ. ಇದು ಹಬ್ಬ ಮತ್ತು ಜಾತ್ರೆಯ ಭಿನ್ನ ಸ್ವರೂಪವನ್ನು ಹೊರಗೆಡವುತ್ತದೆ. ಸಂಸ್ಕೃತದ 'ಯಾತ್ರಾ' ಎಂಬ ಶಬ್ದದಿಂದ ಜಾತ್ರೆಯ ಭಿನ್ನ ಸ್ವರೂಪವನ್ನು ಹೊರಗೆಡವುತ್ತದೆ. ಸಂಸ್ಕೃತದ 'ಯಾತ್ರಾ' ಎಂಬ ಶಬ್ದದಿಂದ

ಅಪಭ್ರಂಶವಾಗಿ ಜಾತ್ರೆಯು ಕನ್ನಡಕ್ಕೆ ಬಂದರೂ ಯಾತ್ರೆ ಮತ್ತು ಜಾತ್ರೆಗಳು ತುಸು ಬಿನ್ನಾರ್ಥಗಳಲ್ಲಿ ಪ್ರಯೋಗವಾಗುತ್ತವೆ. ಊರಿಂದ ದೂರದ ಪುರಾಣ ಪುಣ್ಯಕ್ಷೇತ್ರಗಳಿಗೆ ಇಷ್ಟದೇವತೆಯ ದರ್ಶನಕ್ಕಾಗಿ ಭಕ್ತರು ತಮ್ಮೂರಿಗೆ ಅಥವಾ ಬೇರೆ ಊರಿಗೋ ಯಾತ್ರೆ (ಪ್ರಯಾಣ) ಮಾಡಿಯೇ ಜಾತ್ರೆ ಸೇರುತ್ತಾರಾದರೂ ದೇವರ ದರ್ಶನದ ಏಕಮೇವ ಉದ್ದೇಶ ಮಾತ್ರ ಜಾತ್ರೆಗೆ ಇರುವುದಿಲ್ಲ. ಅನ್ಯ ಉದ್ದೇಶಗಳು ಜಾತ್ರೆಗೆ ಇರುತ್ತವೆ.[೨] ಹಾಗೆಯೇ ಗ್ರಾಮದ ಜಾತ್ರೆ ಮತ್ತು ಉತ್ಸವಗಳ ಪರಿಚಯ ಮಾಡಿಕೊಳ್ಳಬಹುದು.

ಬಸವೇಶ್ವರ ಜಾತ್ರೆ ಮತ್ತು ನಂದಿವರಿ ಮಠ

ಗ್ರಾಮದ ಬಸವೇಶ್ವರ ಜಾತ್ರೆ ಕಪ್ಪತ್ತಗುಡ್ಡದ ನಂದಿವರಿ ಮಠದ ಶ್ರೀಗಳ ನೇತೃತ್ವದಲ್ಲಿ ನಡೆಯುತ್ತದೆ. ಜಾತ್ರೆಯ ಸಂದರ್ಭದಲ್ಲಿ ನಂದಿವರಿ ಮಠದ ಶ್ರೀಗಳು ಬಂದಾಗ ಹಲವು ಪವಾಡಗಳು ನಡೆದಿರುವುದನ್ನು ಪೂರ್ವದ ಶ್ರೀಗಳಾದ ಶ್ರೀ ಶಾಂತವೀರ ಮಹಾಸ್ವಾಮಿಗಳು, ಶ್ರೀ ಶಂಕರ ಮಹಾಸ್ವಾಮಿಗಳು, ಶ್ರೀ ನಿಜಗುಣ ಮಹಾಸ್ವಾಮಿಗಳು ಹಾಗೂ ಪ್ರಸ್ತುತ ಶ್ರೀ ಶಿವಕುಮಾರ ಮಹಾಸ್ವಾಮಿಗಳನ್ನು ನೆನೆಪಿಸಿಕೊಳ್ಳುತ್ತಾರೆ.

ಅದರಲ್ಲೂ ಈಗಿರುವ ನಂದಿವರಿ ಮಠದ ಶ್ರೀ ಶಿವಕುಮಾರ ಮಹಾಸ್ವಾಮಿಗಳು ತಮ್ಮದೇಯಾದ ವಿಶಿಷ್ಟ ಕಾರ್ಯಗಳ ಮೂಲಕ ಗುರುತಿಸಿಕೊಂಡಿದ್ದಾರೆ. ಪರಿಸರ ಜಾಗೃತಿಯೇ ಇವರ ಮೂಲಮಂತ್ರ ನಂದಿವರಿ ಮಠದ ಪರಿಸರದಲ್ಲಿ ನೆಲ(ಜಲ ಸಂರಕ್ಷಣೆಯ ಜೊತೆಗೆ ಸಸಿ ನೆಡುವ ಮೂಲಕ ಕಪ್ಪತ್ತಗುಡ್ಡದ ಪರಿಸರವನ್ನು ಹಸಿರಾಗಿಸಿದ್ದಾರೆ. ಎಲೆಮರೆಯ ಕಾಯಿಯಂತೆ ಕಪ್ಪತ್ತಗುಡ್ಡದಲ್ಲಿ ಪರಿಸರವನ್ನು ಸಂರಕ್ಷಿಸುವ ಕಾರ್ಯದಲ್ಲಿ ತೊಡಗಿದ ಶ್ರೀಗಳನ್ನು ಗುರುತಿಸಿ ಸರ್ಕಾರ ಅವರಿಗೆ ಕೃಷಿಪಂಡಿತ ಪ್ರಶಸ್ತಿ ನೀಡಿ ಗೌರವಿಸಿದೆ. ನೆಲ(ಜಲ ಸಂರಕ್ಷಣೆಯ ಕುರಿತು ಅವರ ಒಂದು ಮಾತನ್ನು ನಾವು ನೆನಪಿಸಿಕೊಳ್ಳಲೇಬೇಕು. **"ಓಡುವ ನೀರನ್ನು ನಡೆಯುವ ಹಾಗೆ, ನಡೆಯುವ ನೀರನ್ನು ನಿಲ್ಲುವ ಹಾಗೆ, ನಿಂತ ನೀರನ್ನು ಇಂಗುವ ಹಾಗೆ"** ಮಾಡುವ ಮೂಲಕ ನಮ್ಮ ಜಲ ಸಂರಕ್ಷಣೆ ಮಾಡಬೇಕೆಂಬ ಮಾತನ್ನು ಸಾಕಾರಗೊಳಿಸುವ ಅಗತ್ಯವಿದೆ. ಇಂಥ ಪರಿಸರಪ್ರಿಯ ಸ್ವಾಮೀಜಿಗಳ ನೇತೃತ್ವದಲ್ಲಿ ಗ್ರಾಮದ ಬಸವೇಶ್ವರ ಜಾತ್ರೆ ನಡೆಯುತ್ತಿರುವುದು ಜಾತ್ರೆಯ ಮೆರಗನ್ನು ಹೆಚ್ಚಿಸಿದೆ.

ಶಿವಾನುಭವ ಗೋಷ್ಠಿ

ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಪ್ರತಿ ಸೋಮವಾರ ಶಿವಾನುಭವ ಗೋಷ್ಠಿ ನಡೆಯುತ್ತದೆ. ಗ್ರಾಮದ ಸಂಗಮನಾಥ ಶಾಸ್ತ್ರಿಗಳೆಂದೇ ಹೆಸರಾದ ಸಂಗಯ್ಯನವರು, ಹಿರೇಮಠ, ಶ್ರೀ ವ್ಹಿ.ಜಿ. ಮಠಪತಿ, ಶಿದ್ರಾಮಪ್ಪ ಅಕ್ಕಿ, ಬುಡ್ಡಪ್ಪ ಪಾರಿಸ್ಪರು, ಶಿವರಾಯಪ್ಪ ಮುಂತಾದ ಗ್ರಾಮದ ಹಿರಿಯರು ಸೇರಿ ಶಿವಾನುಭವ ಪ್ರಾರಂಭಿಸಿದ್ದಾರೆ. ಈ ಶಿವಾನುಭವದಲ್ಲಿ ಶಿವಶರಣರ ವಚನ ಹಾಗೂ ಹಿರಿಯರ ಸಾಧಕರ ಜೀವನ ಅನುಭವಗಳನ್ನು ಕುರಿತು ಚಿಂತನ ಮಂಥನ ನಡೆಸುತ್ತಾರೆ. ಇದು ಸಂಸ್ಕೃತಿಯ ವಿಕಸನಕ್ಕೆ ಪೂರಕವಾಗಿದೆ. ಪ್ರತಿ ವಾರದ ಶಿವಾನುಭವದಲ್ಲಿ

ಆಯಾ ವಾರ ಗ್ರಾಮದಲ್ಲಿ ನಿಧನರಾದವರಿಗೆ ಶ್ರದ್ಧಾಂಜಲಿ ಸಲ್ಲಿಸುವುದು ಈ ಶಿವಾನುಭವದ ವಿಶೇಷ.

ಗದುಗಿನ ತೋಂಟದಾರ್ಯ ಶ್ರೀಗಳು ಆಗಮಿಸಿ ಈ ಶಿವಾನುಭವದ ಕಾರ್ಯವನ್ನು ಶ್ಲಾಘಿಸಿದ್ದಾರೆ. ೨೦೧೩ ಮೇ ತಿಂಗಳಿನಲ್ಲಿ ೧೯೮೨ನೇ ಶಿವಾನುಭವ ನಡೆಯುತ್ತಿದೆ. ಅಂದರೆ ಸುಮಾರು ೩೮ ವರ್ಷಗಳಿಂದ ಈ ಶಿವಾನುಭವ ನಡೆಯುತ್ತಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಹೀಗೆ ಶಿವಾನುಭವ ಗ್ರಾಮದಲ್ಲಿ ಸಾಂಸ್ಕೃತಿಕ ವೇದಿಕೆಯಾಗಿ ಬೆಳೆಯುತ್ತಿದೆ.

ಸಪ್ತಾಹ

ಗ್ರಾಮದಲ್ಲಿ ಮಳೆ ಬರದೇ ಇದ್ದಾಗ ಮಳೆಯ ಬರುವಿಕೆಗಾಗಿ ಸಪ್ತಾಹ ಆಚರಿಸುತ್ತಾರೆ. ಇದನ್ನು ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಆಚರಿಸುತ್ತಾರೆ. ಗ್ರಾಮದ ಜನಪದರು ಇದನ್ನು 'ಸಪ್ತಾ' ಎಂದೇ ಕರೆಯುತ್ತಾರೆ. ಇಲ್ಲಿ ಏಳು ದಿನಗಳ ಕಾಲ ನಿರಂತರವಾಗಿ ಶಿವಭಜನೆ ಮಾಡುತ್ತಾರೆ.

ಶಿವಾಯ ನಮಃ
ಓಂ ನಮಃ ಶಿವಾಯ
ಶಿವಶಿವ ಶಿವಶಿವ ಶಿವಾಯ ನಮಃ ಓಂ

- ಎಂಬುದು ಸಪ್ತಾಹ ಸಂದರ್ಭದ ಶಿವಸ್ತೋತ್ರವಾಗಿದೆ. ಸಪ್ತಾಹದಲ್ಲಿ ಪಾಲ್ಗೊಳ್ಳುವವರು ತಣ್ಣೀರಿನಲ್ಲಿ ಸ್ನಾನ ಮಾಡಿ ಒದ್ದೆಬಟ್ಟೆಯಲ್ಲಿಯೇ ಬರಬೇಕು. ಹಣೆಗೆ ಭಸ್ಮವನ್ನು ಧರಿಸಿಕೊಂಡಿರಬೇಕು. ಕನಿಷ್ಠ ಮೂರು ತಾಸು ನಿರಂತರವಾಗಿ ಶಿವಸ್ತೋತ್ರ ಮಾಡಬೇಕು. ಸಪ್ತಾಹದ ಸಂದರ್ಭದಲ್ಲಿ ಕುಳಿತುಕೊಳ್ಳುವಂತಿಲ್ಲ. ಹೀಗೆ ಹಲವು ಪಾರಂಪರಿಕ ನಿಯಮಗಳಿವೆ. ಏಳು ದಿನಗಳ ಕಾಲ ದಿನದ ೨೪ ಗಂಟೆಯೂ ಸಪ್ತಾಹ ನಿರಂತರವಾಗಿ ನಡೆಯುವುದರಿಂದ ಪ್ರತಿಮೂರು ತಾಸಿಗೆ ಒಂದೊಂದು ತಂಡದವರು ಶಿವಸ್ತೋತ್ರ ಮಾಡುತ್ತಾರೆ. ಒಂದು ತಂಡದಲ್ಲಿ ಕನಿಷ್ಠ ಸುಮಾರು ೧೦-೧೫ ಜನರು ಇರುತ್ತಾರೆ. ಹೀಗೆ ಏಳು ದಿನಗಳಲ್ಲಿ ೫೬ ತಂಡಗಳಲ್ಲಿ ಭಕ್ತರು ಶಿವಭಜನೆ ಮಾಡುತ್ತಾರೆ. ಗ್ರಾಮದ ಎಲ್ಲಾ ಓಣಿಯವರು ಹಂತಹಂತವಾಗಿ ಪಾಲ್ಗೊಳ್ಳುತ್ತಾರೆ. ಹೀಗೆ ಸಪ್ತಾಹ ಮಾಡಿದರೆ ಮಳೆ ಬಂದೆ ಬರುತ್ತದೆ ಎಂಬುದು ಗ್ರಾಮಸ್ಥರ ನಂಬಿಕೆ. ಹೀಗೆ ಸಪ್ತಾಹದಿಂದ ಮಳೆ ಬಂದಿರುವ ಹಲವಾರು ಉದಾಹರಣೆಗಳನ್ನು ಗ್ರಾಮಸ್ಥರು ನೆನಪಿಸಿಕೊಳ್ಳುತ್ತಾರೆ.

ಗೂಳಿ ಬಿಡುವುದು

ಕೃಷಿ ಗ್ರಾಮದ ಜನರ ಪ್ರಮುಖ ಉದ್ಯೋಗ. ಎತ್ತುಗಳು ಕೃಷಿಯ ಬೆನ್ನೆಲುಬು. ಆ ಹಿನ್ನೆಲೆಯಲ್ಲಿ ರೈತರ ಕೃಷಿಗೆ ಉತ್ತಮ ಎತ್ತುಗಳು ಹಾಗೂ ಹಸುಗಳ ನಿರ್ವಹಣೆಗಾಗಿ ಗೂಳಿ ಬಿಡುವ ಪದ್ಧತಿ ರೂಢಿಯಲ್ಲಿದೆ. 'ಗೂಳಿ ಬಿಡುವುದು' ಎಂದರೆ ಉತ್ತಮ ತಳಿಯ ೩ ರಿಂದ ೪ ವರ್ಷದ ಜವಾರಿ ಹೋರಿಯನ್ನು ಗುರುತಿಸಿ ಅದನ್ನು ಗ್ರಾಮಸ್ಥರು ಖರೀದಿ ಪಡೆದು ಬಸವೇಶ್ವರ ದೇವಸ್ಥಾನಕ್ಕೆ ತಂದು ಪೂಜೆ ಮಾಡಿ ೮-೧೦ ದಿನಗಳ ಕಾಲ ಅಲ್ಲಿಯೇ ಕಟ್ಟುತ್ತಾರೆ. ಆ ನಂತರ ಆ ಹೋರಿಯ ಹಗ್ಗಗಳೆಲ್ಲವನ್ನು ಬಿಚ್ಚಿ ಹಾಗೆ ಬಿಡುತ್ತಾರೆ. ಅದು

ತನ್ನ ಮನದಿಚ್ಚೆಯಂತೆ ಎಲ್ಲಿ ಬೇಕಾದರೂ, ಯಾರ ಹೊಲದಲ್ಲಿಯಾದರೂ ಮೇಯುತ್ತದೆ. ಅದಕ್ಕೆ ಯಾವುದೇ ನಿರ್ಬಂಧಗಳಿರುವುದಿಲ್ಲವಾದ್ದರಿಂದ ಇದು ಬಲಿಷ್ಠವಾಗಿ ಬೆಳೆಯುತ್ತದೆ. ಹಾಗೂ ಗ್ರಾಮದ ಎಲ್ಲಾ ಹಸುಗಳಿಗೆ ಬೀಜದ ಹೋರಿಯಾಗಿರುತ್ತದೆ. ಇದರಿಂದ ಗ್ರಾಮದಲ್ಲಿ ಉತ್ತಮ ತಳಿಯ ರಾಸುಗಳು ಹುಟ್ಟುತ್ತವೆ. ಈ ಗೂಳಿಗೆ ಹಗ್ಗ, ಮೂಗುದಾರ ಸೇರಿದಂತೆ ಯಾವುದೇ ನಿರ್ಬಂಧವಿಲ್ಲವಾದರೂ ಇದು ಬೇರೆ ಯಾವುದೇ ಊರಿಗೆ ಹೋಗುವುದಿಲ್ಲ. ಸ್ವತಃ ಸಾಕಿದ ಎಷ್ಟೊ ದನಗಳು ತಪ್ಪಿಸಿಕೊಂಡು ಅಥವಾ ಕಳೆದುಕೊಂಡು ಬೇರೆ, ಬೇರೆ ಊರಿನಲ್ಲಿ ಸಿಗುತ್ತವೆ. ಆದರೆ ಗ್ರಾಮದ ಗೂಳಿ ಮಾತ್ರ ಎಲ್ಲಿಗೂ ಹೋಗುವುದಿಲ್ಲ. ಇದು ಗ್ರಾಮದ ಬಸವಣ್ಣನ ಲೀಲೆ ಎಂದೇ ಹೇಳುತ್ತಾರೆ. ಒಂದು ಸಾರಿ ಗೂಳಿಗೆ ಅನಾರೋಗ್ಯವಾಗಿ ಸಾವು ಬಂದಾಗ ಅದು ಬಸವಣ್ಣನ ಗದ್ದುಗೆಗೆ ಬಂದು ಅದಕ್ಕೆ ನಮಸ್ಕರಿಸುವ ಬಂಗಿಯಲ್ಲಿ ಪ್ರಾಣಬಿಟ್ಟಿದ್ದನ್ನು ಗ್ರಾಮಸ್ಥರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಸೊರಟೂರ ಗ್ರಾಮದಲ್ಲಿರುವ ಬಸವೇಶ್ವರ ದೇವಸ್ಥಾನದಲ್ಲಿ ಬಸವೇಶ್ವರ ಭಜನಾ ಸಂಘ ಹಾಗೂ ಗ್ರಾಮದ ಹಿರಿಯರ ಸಹಾಯ ಸಹಕಾರದಿಂದ ಹಲವಾರು ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ.

ಶ್ರೀ ಮಾದಮ್ಮದೇವಿ ಜಾತ್ರೆ

ಗ್ರಾಮದಲ್ಲಿ ದುರ್ಗಾದೇವಿ ಜಾತ್ರೆ ಎಂದೇ ಪ್ರಚಲಿತದಲ್ಲಿರುವ ಈ ಜಾತ್ರೆಯು ಪ್ರತಿವರ್ಷ ಭಾರತ ಹುಣ್ಣಿಮೆಯಲ್ಲಿ ನಡೆಯುತ್ತದೆ. ಗ್ರಾಮದ ದುರ್ಗಾದೇವಿ ಹಾಗೂ ಮಾದಮ್ಮದೇವಿಯ ಚರಿತ್ರೆಯನ್ನು ಗ್ರಾಮದ ದೈವಗಳು ಮತ್ತು ದೇವಾಲಯಗಳ ಅಧ್ಯಾಯದಲ್ಲಿ ವಿವರಿಸಲಾಗಿದೆ. ದುರ್ಗಾದೇವಿಗೆ ಗ್ರಾಮದ ಪ್ರಾಚೀನತೆಯಷ್ಟೇ ಸಮನಾದ ಚರಿತ್ರೆ ಇದೆಯಾದರೂ ಮಾದಮ್ಮದೇವಿಯ ಈ ಜಾತ್ರೆ ಸುಮಾರು ೫೦-೬೦ ವರ್ಷಗಳಿಂದ ನಡೆಯುತ್ತಿದೆ. ಮಾದಮ್ಮನ ಪವಾಡ ಹಾಗೂ ಸಂಬಾಪೂರ ಮಲ್ಲಜ್ಜನವರ ವಾಣಿಯಿಂದ ಭಕ್ತರು ಈ ಜಾತ್ರೆ ಪ್ರಾರಂಭಿಸಿದ್ದಾರೆ. ಅದಕ್ಕೂ ಪೂರ್ವದಲ್ಲಿ ಅವರಾತ್ರಿ ಅಮವಾಸ್ಯೆ ಪಾಡ್ಯ ದಿನ ತೇರಿನ ಗಾಲಿ ಹೊರಗೆ ಹಾಕುತ್ತಾರೆ. ಜಾತ್ರೆಯ ೫ ದಿನಮೊದಲು ದೇವಿಯ ಘಟಸ್ಥಾಪನೆ ಮಾಡಿ ನಂದಾದೀಪ ಕಾಯುತ್ತಾರೆ. ಪೂಜಾರಿ ೫ ದಿನ ಉಪವಾಸ (ರಾತ್ರಿ ಉಪಹಾರ ಸೇವಿಸುತ್ತಾರೆ) ಮಾಡುತ್ತಾರೆ. ಭಾರತ ಹುಣ್ಣಿಮೆಯ ದಿನ ಬೆಳಿಗ್ಗೆ ೯ ಗಂಟೆಗೆ ದೇವಿ ಅಗ್ನಿ ಹಾಯುವ ಪವಾಡ ನಡೆಯುತ್ತದೆ. ಈ ಅಗ್ನಿಕುಂಡದಲ್ಲಿ ಮೊದಲು ಪೂಜಾರಿ ಹಾಯುತ್ತಾನೆ. ನಂತರ ದೇವಿಯ ಚಾಕರಿ ಮಾಡುವ ಸೇವಕರು ಹಾಯುತ್ತಾರೆ. ಅನಂತರ ದೇವಿ ಊರ ದ್ಯಾಮವ್ವನಿಗೆ ಹೋಗಿ ಭೇಟಿಕೊಟ್ಟು ಬರುವುದು ಮತ್ತು ದುರುಗಮ್ಮನ ಅತ್ತಿಕಟ್ಟಿಗೆ ಹೋಗುವುದು ಪರಂಪರೆಯಾಗಿ ಬಂದಿದೆ. ಅದೇ ದಿನ ಸಾಯಂಕಾಲ ೫ ಗಂಟೆಗೆ ಮಾದಮ್ಮದೇವಿ ರಥೋತ್ಸವ ಗ್ರಾಮದ ಹಾಗೂ ನೆರೆಯ ಗ್ರಾಮಗಳ ಸದ್ಭಕ್ತರ ಸಮ್ಮುಖದಲ್ಲಿ ನಡೆಯುತ್ತದೆ. ಜಾತ್ರೆಯಲ್ಲಿ ಡೊಳ್ಳಿನ ಮ್ಯಾಳ, ಭಜಂತ್ರಿ ಮೇಳ, ಡ್ರಮ್ ಸೆಟ್, ಕಲಾ ಮೇಳಗಳು ತಮ್ಮ ಸೇವೆ ಒದಗಿಸುತ್ತವೆ. ಆ ದಿನ ರಾತ್ರಿ ಗ್ರಾಮದ ವಿವಿಧ ಕಲಾವಿದರಿಂದ ಜಾಗರಣೆ ನಡೆಯುತ್ತದೆ. ಡೊಳ್ಳಿನ ಹಾಡು ಹಾಗೂ ರ್‍ವಾಣ ಕಲಾವಿದರ ಪ್ರದರ್ಶನಗಳೇ ಹೆಚ್ಚಾಗಿ ನಡೆಯುತ್ತವೆ. ಬ್ಯಾಟಿ ಮಾಡುವುದು (ಪ್ರಾಣಿಬಲಿ) ದುರ್ಗಾದೇವಿಯ ಪರಂಪರೆಯಲ್ಲಿದೆ. ಆದರೆ ಭಾರತ ಹುಣ್ಣಿಮೆ ಜಾತ್ರೆಯಲ್ಲಿ ಈ

ಪದ್ಧತಿಯನ್ನು ಸಾಂಪ್ರದಾಯಿಕವಾಗಿಯೇ ನಿಷೇಧಿಸಲಾಗಿದೆ. ಜಾತ್ರೆಯ ಎರಡನೇ ದಿನ ಕಡುಬಿನ ಕಾಳಗ ನಡೆಯುತ್ತದೆ. ಜಾತ್ರೆಯಲ್ಲಿ ಪಾಲಕಿ(ಪಲ್ಲಕಿ) ಹೊರುವವರಿಗೆ ಜೋಗಮ್ಮಗಳಿಗೆ ದೇವಿ ಮೈದುಂಬುವುದು, ಅವರು ದೇವತಾಶಕ್ತಿಯಾಗಿ ಕುಣಿಯುತ್ತಾ ಆರ್ಭಟಿಸುವುದು ಕಂಡುಬರುತ್ತದೆ. ದೇವಿಯು ರಾಜ್ಯದ ವಿವಿಧ ಭಾಗಗಳಲ್ಲಿ ಭಕ್ತರನ್ನು ಹೊಂದಿದ್ದಾಳೆ. ದೂರದ ಮುಂಬಯಿ ಯಿಂದಲೂ ಭಕ್ತರು ಬರುತ್ತಾರೆ. ಇದೊಂದು ಭಕ್ತಿಪ್ರಧಾನ ಜಾತ್ರೆಯಾಗಿದೆ. ಆದ್ದರಿಂದ ಜಾತ್ರೆಯನ್ನು ಭಕ್ತಿಯ ಜೊತೆಗೆ ಸಮಾಜಮುಖಿಯತ್ತ ಕೊಂಡೊಯ್ಯಲು ಗ್ರಾಮಸ್ಥರು ಕಾರ್ಯಶೀಲರಾಗಬೇಕು.

ಶ್ರೀಗುರುಮಲ್ಲಜ್ಜನ ಉತ್ಸವ

ಪ್ರತಿವರ್ಷ ಮಹಾಶಿವರಾತ್ರಿ ಹಬ್ಬದಲ್ಲಿ ಶ್ರೀಗುರುಮಲ್ಲಜ್ಜನ ಉತ್ಸವ ನಡೆಯುತ್ತದೆ. ಶ್ರೀಗುರು ಮಲ್ಲಜ್ಜನವರ ಚರಿತ್ರೆ ಹಾಗೂ ಪವಾಡಗಳ ಕುರಿತು ದೈವಗಳ ಹಾಗೂ ದೇವಾಲಯಗಳ ಅಧ್ಯಾಯದಲ್ಲಿ ಹೇಳಲಾಗಿದೆ. ಪ್ರತಿವರ್ಷ ಶಿವರಾತ್ರಿಯ ದಿನದಂದು ಗ್ರಾಮದ ಜನರೆಲ್ಲ ನಿರಾಹಾರ ಉಪವಾಸ ಮಾಡುವುದು ಪರಂಪರಾಗತವಾಗಿ ಬಂದಿದೆ. ಆ ದಿನ ಸಾಯಂಕಾಲ ಶ್ರೀಗುರುಮಲ್ಲಜ್ಜನ ಉತ್ಸವ ರಥದ ಕಳಸವನ್ನು ಊರಲ್ಲಿ ಡೊಳ್ಳು ಭಜಂತ್ರಿ ವಾದ್ಯಗಳೊಂದಿಗೆ ಹನುಮಂತಾಚಾರ್ಯನು ಸೊರಟೂರ ಹಾಗೂ ಡಾ. ಬಿ.ಆರ್. ಇನಾಮದಾರ ಅವರ ಮನೆಗೆ ಹೋಗಿ ಮೆರವಣಿಗೆಯಲ್ಲಿ ತರಲಾಗುತ್ತದೆ. ನಂತರ ಉತ್ಸವ ರಥವು ಪಾದಗಟ್ಟಿ ಇರುವ ಯಲಿಶಿರೂರ ಹಳ್ಳದವರೆಗೆ ಮೆರವಣಿಗೆ ಹೋಗುತ್ತಿತ್ತು. ಆದರೆ ಈಗ ಗ್ರಾಮದ ಹತ್ತಿರವೇ ಇರುವ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕಿನ ಹತ್ತಿರ ಪಾದಗಟ್ಟಿ ನಿರ್ಮಿಸಿದ್ದಾರೆ. ಅಲ್ಲಿಯವರೆಗೆ ಮಾತ್ರ ರಥದ ಮೆರವಣಿಗೆ ಹೋಗುತ್ತದೆ. ಆ ದಿನ ರಾತ್ರಿ ಜಾಗರಣೆ ನಡೆಯುತ್ತದೆ. ಡೊಳ್ಳಿನ ಹಾಡು ಭಜನಾ ಪದ, ಮಹಿಳೆಯರ ಹಾಡು ಇತ್ಯಾದಿ ಸಂಗೀತ ನಡೆಯುತ್ತದೆ. ಮರುದಿನ ಸಾಯಂಕಾಲ ಕಡುಬಿನ ಕಾಳಗ ನಡೆಯುತ್ತದೆ. ಜಾತ್ರೆಯಲ್ಲಿ ಭಕ್ತರಿಗೆ ಪ್ರಸಾದ ವ್ಯವಸ್ಥೆ ಇರುತ್ತದೆ. ಈ ಹಿಂದೆ ಜಾತ್ರೆಯ ಎರಡನೆಯ ದಿನ ಧರ್ಮಸಭೆ ನಡೆಯುತ್ತಿತ್ತು. ಅಲ್ಲಿ ಶ್ರೀಗುರುಮಲ್ಲಜ್ಜನ ಪವಾಡಗಳನ್ನು ಸ್ಮರಿಸಲಾಗುತ್ತಿತ್ತು. ಈಗ ಅದು ನಡೆಯುತ್ತಿಲ್ಲ. ಆದರೆ ಮಠದಲ್ಲಿ ಪ್ರತಿ ಮಂಗಳವಾರ ಆಧ್ಯಾತ್ಮಿಕ ಚಿಂತನಾಗೋಷ್ಠಿ ನಡೆಯುತ್ತದೆ. ಹೀಗೆ ಈ ಜಾತ್ರೆಯು ಸಹ ಯಾವುದೇ ಆಡಂಬರಗಳಿಲ್ಲದೆ ಸದ್ಭಕ್ತರ ಭಕ್ತಿನಿಷ್ಠೆಯಲ್ಲಿ ನಡೆಯುತ್ತದೆ.

ಕಾಲಭೈರವನ ಅಭಿಷೇಕ

ಶ್ರೀ ಕಾಲಬೈರವನ ಚರಿತ್ರೆ ಹಾಗೂ ಪವಾಡಗಳ ಕುರಿತು ಈ ಹಿಂದಿನ ದೇವಾಲಯಗಳು ಅಧ್ಯಾಯದಲ್ಲಿ ವಿವರಿಸಲಾಗಿದೆ. ಗ್ರಾಮದ ರಕ್ಷಣಾದೇವತೆಯಾದ ಕಾಲಭೈರವನಿಗೆ ಪ್ರತಿವರ್ಷ ಆಷಾಢ ಏಕಾದಶಿಯ ದಿನ ಅಭಿಷೇಕ ಮಾಡಲಾಗುತ್ತದೆ. ಅಂದು ಗ್ರಾಮದ ಸದ್ಭಕ್ತರು ಮಡಿಉಡಿಗಳಿಂದ ಬಂದು ೧೦೧ ಕೊಡ ನೀರನ್ನು ಕಾಲಭೈರವನಿಗೆ ಅಭಿಷೇಕ ಮಾಡುತ್ತಾರೆ. ಅಭಿಷೇಕ ಮಾಡುವಾಗ ಹಾವು, ಚೇಳುಗಳು ಹರದಾಡುತ್ತವೆ ಎಂಬ ನಂಬಿಕೆ ಇದೆ. ಅಭಿಷೇಕದ ದಿನ ಭಕ್ತರು ಕಾಯಿ, ಕರ್ಪೂರಗಳಿಂದ ಪೂಜಿಸಿ ಇಷ್ಟಾರ್ಥಗಳ ಸಿದ್ಧಿಗಾಗಿ ಬೇಡಿಕೊಳ್ಳುತ್ತಾರೆ. ಮರುದಿನ ಪ್ರಸಾದ ವ್ಯವಸ್ಥೆ ಇರುತ್ತದೆ. ಮನೆಯಲ್ಲಿ ಹಾವು ಕಾಣಿಸಿಕೊಂಡರೆ 'ಆಸ್ತಿಕ ಕಾಳಭೈರವ'

ಎಂದು ಬರೆಯುತ್ತಾರೆ. ಅದರಿಂದ ಮನೆಯಲ್ಲಿ ಕಾಣಿಸಿಕೊಂಡ ಹಾವು ಮಾಯವಾಗುತ್ತದೆ ಎಂಬ ನಂಬಿಕೆ ಇದೆ.

ಹಳಿಕೆಮ್ಮನ ಕರೆದುಕೊಂಡು ಬರುವುದು

ಶ್ರೀ ಕಾಲಭೈರವನ ಅಭಿಷೇಕದ ನಂತರ ಬರುವ ಮಂಗಳವಾರ ಅಥವಾ ಶುಕ್ರವಾರ ದಿನ ಹಳಿಕೆಮ್ಮನ ಕರೆದುಕೊಂಡು ಬರುವ ಆಚರಣೆ ಪ್ರತಿವರ್ಷ ನಡೆಯುತ್ತದೆ.

ಹಳಿಕೆಮ್ಮನನ್ನು ಕರೆದುಕೊಂಡು ಬರಲು ದುರ್ಗಾದೇವಿ, ಮಾದಮ್ಮದೇವಿಯನ್ನು ವಾದ್ಯಮೇಳದೊಂದಿಗೆ ಕರೆದುಕೊಂಡು ಹೋಗಲಾಗುತ್ತದೆ. ಬರುವಾಗ ತುಂಬಿದ ಕೊಡದಲ್ಲಿ ಹಳಿಕೆಮ್ಮ ಬರುತ್ತಾಳೆ ಎಂಬ ನಂಬಿಕೆ ಇದೆ. ಆ ತುಂಬಿದ ಕೊಡವನ್ನು ಹಳಿಕೆಮ್ಮನ ಪೂಜಾರಿ ಗ್ರಾಮದ ತಳವಾರ ಮನೆತನದ ವ್ಯಕ್ತಿ ಹೊರುತ್ತಾನೆ. ಅವನನ್ನು ಮೇಟಿಯವರ ಹಾಗೂ ಕುಡವಕ್ಕಲಿಗೇರ ಮನೆತನದವರು ಹಿಡಿದುಕೊಂಡಿರುತ್ತಾರೆ. ದಾರಿಯಲ್ಲಿ ಬರುವ ಎಲ್ಲಾ ಬನ್ನಿಗಿಡಗಳಿಗೆ ಒಂದೊಂದು ಕಾಯಿ ಒಡೆಯುತ್ತಾರೆ ಹಾಗೂ ಪೂಜಾರಿ ಎಲ್ಲಾ ಬನ್ನಿಗಿಡಗಳಿಗೂ ನೀರು ಹಾಕುತ್ತಾ ಬಂದರೂ ತುಂಬಿದ ಕೊಡ ತುಂಬಿದಂತೆ ಇರುತ್ತದೆ ಎಂಬ ನಂಬಿಕೆ ಇದೆ. ಹೀಗೆ ಹಳಿಕೆಮ್ಮ ದೇವಿಯು ಊರಿಗೆ ಬರುವ ಮೂಲಕ ಎಲ್ಲಾ ದೇವರ ಗುಡಿಗಳಿಗೆ ಮೆರವಣಿಗೆ ಹೋಗುತ್ತದೆ. ಇದು ಸಹ ಭಕ್ತಿಪ್ರಧಾನ ಆಚರಣೆಯಾಗಿದೆ.

ಹಬ್ಬಗಳು

ಹಬ್ಬ ಎಂಬ ಪದವು ಸಂಸ್ಕೃತದ 'ಪರ್ವನ್' ಶಬ್ದದ ರೂಪವಾಗಿದೆ. ಪರ್ವ ಎಂದರೆ ಒಂದು ಮತ್ತೊಂದರ ಜೊತೆಗೆ ಸಂಧಿಸುವುದು ಎಂದರ್ಥ. ಸೂರ್ಯ, ಚಂದ್ರ ದಿಕ್ಕು ಬದಲಾಗುವುದೇ ಪರ್ವ ಅದನ್ನೇ ನಮ್ಮ ಪೂರ್ವಜರು ಅಮವಾಸ್ಯೆ, ಹುಣ್ಣಿಮೆಗಳೆಂದು ಗುರುತಿಸಿದಂತೆ ಕಾಣುತ್ತದೆ.[೪] ಹೀಗೆ ಗ್ರಾಮದಲ್ಲಿ ಎಲ್ಲಾ ಹುಣ್ಣಿಮೆ ಹಾಗೂ ಅಮವಾಸ್ಯೆಗಳ ಆಚರಣೆ ನಡೆಯುತ್ತದೆ. ಇಲ್ಲಿ ಸಾಮೂಹಿಕವಾಗಿ ಆಚರಿಸುವ ಕೆಲವು ಹಬ್ಬಗಳನ್ನು ಮಾತ್ರ ಅಧ್ಯಯನ ಮಾಡಲಾಗಿದೆ.

ಕಾರಹುಣ್ಣಿಮೆ

ಕಾರ ಹುಣ್ಣಿಮೆ ರೈತರ ಅದರಲ್ಲೂ ಎತ್ತುಗಳ ಹಬ್ಬವಾಗಿ ಆಚರಿಸಲ್ಪಡುತ್ತದೆ. ಕಾರಣ ಹುಣ್ಣಿಮೆಯ ಮುನ್ನಾದಿನ ಹೊನ್ನುಗ್ಗಿ[೫] ಇರುತ್ತದೆ. ಆ ದಿನ ಮನೆಯಲ್ಲಿ ಕಿಚಡಿ (ಜೋಳದಿಂದ ತಯಾರಿಸಿದ ಆಹಾರ)ವನ್ನು ವಿಶೇಷ ಆಹಾರವಾಗಿ ಮಾಡುತ್ತಾರೆ. ಜೊತೆಗೆ ಹುಗ್ಗಿ ಅನ್ನ, ಸಾರು ಪಲ್ಯ ಇತರ ಎಲ್ಲ ಪದಾರ್ಥಗಳನ್ನು ಮಾಡುತ್ತಾರೆ. ಆ ಎಲ್ಲಾ ನೈವೇದ್ಯವನ್ನು ಎತ್ತುಗಳಿಗೆ ಅರ್ಪಿಸಲಾಗುತ್ತದೆ. ಕರಿ ಕಂಬಳಿಯ ಮೇಲೆ ಎತ್ತನ್ನು ನಿಲ್ಲಿಸಿ ಅದನ್ನು ಪೂಜಿಸಿ ಆರತಿ ಮಾಡಿ ಎತ್ತಿನ ಕೋಡುಗಳಿಗೆ ಬಂಗಾರ ಮುಟ್ಟಿಸುತ್ತಾರೆ. ನಂತರ ಕಿಚಡಿ ಹುಗ್ಗಿಯ ನೈವೇದ್ಯ ಅದಕ್ಕೆ ತಿನ್ನಿಸುತ್ತಾರೆ. ಅದರಿಂದ ಇದಕ್ಕೆ 'ಹೊನ್ನುಗ್ಗಿ' ಎಂದು ಕರೆದಿರಬಹುದು ಹಾಗೂ ಎರಡನೆಯದಿನ ಕರಿ ಹರಿಯುವುದು ಅಂದು; ಬೆಳಗಿನ ಜಾವ ಎತ್ತನ್ನು ಮೈತೊಳೆದು ಶುಭ್ರಗೊಳಿಸಿ ಅವುಗಳ ಬಾಯನ್ನು ಉಪ್ಪು ಅರಿಶಿಣ, ಕಂಬಳಿ ಸುಟ್ಟ ಕರಕಗಳಿಂದ ತಿಕ್ಕಿ

ಸ್ವಚ್ಛಗೊಳಿಸಲಾಗುತ್ತದೆ. ಒಳ್ಳೆಣ್ಣೆ, ಮೊಟ್ಟೆಗಳನ್ನು ಎತ್ತಿಗೆ ಗೊಟ್ಟ್ ಹಾಕಲಾಗುತ್ತದೆ. ಇದು ರೈತನು ಎತ್ತುಗಳ ಮೇಲಿಟ್ಟ ಕಾಳಜಿಯ ಸಂಕೇತ. ಆ ದಿನ ಎತ್ತಿಗೆ ಬಣ್ಣ ಹಚ್ಚಿ ಶೃಂಗರಿಸಲಾಗುತ್ತದೆ. ಸಾಯಂಕಾಲ ಕರಿ ಹರಿಯುವ ಸ್ಪರ್ಧೆ; ಅಂದರೆ ಎತ್ತನ್ನು ಓಡಿಸುವ ಸ್ಪರ್ಧೆ ನಡೆಯುತ್ತದೆ. ಇದು ಗ್ರಾಮದ ಪೇಟೆಗೌರಿಮನಿ ಹಾಗೂ ಗಾಂಧಿಬಯಲು ಎರಡು ಹತ್ತಿರ ನಡೆಯುತ್ತದೆ. ಇಲ್ಲಿ ಬೇವಿನ ತಪ್ಪಲಿನ ಒಂದು ಹೊದಿಕೆಯನ್ನು ಕರಿ[೬] ಎಂದು ಹಿಡಿದಿರುತ್ತಾರೆ. ಓಟದಲ್ಲಿ ಮೊದಲು ಬಂದ ಎತ್ತಿಗೆ ಅದನ್ನು ಊರ ವಾಲಿಕಾರ ಒಗೆಯುತ್ತಾನೆ. ಆ ಎತ್ತು ಕರಿ ಹರಿದಂತೆ. ಕರಿ ಹರಿದ ಎತ್ತಿಗೆ ಹಾಗೂ ಅದರ ರೈತನಿಗೆ ಇದು ಅಭಿಮಾನದ ಸಂಗತಿಯಾಗಿರುತ್ತದೆ. ಕರಿ ಹರಿದ ಎತ್ತಿನ ಮೆರವಣಿಗೆಗಾಗಿ ಮಜಲು ಮಾಡಲಾಗುತ್ತದೆ. ಇದರ ಎಲ್ಲಾ ಖರ್ಚನ್ನು ಕರಿ ಹರಿದ ಎತ್ತಿನ ಮಾಲೀಕರೇ ಭರಿಸಬೇಕಾಗುತ್ತದೆ. ಕುರುಬರು ಅಥವಾ ಕುಡುವಕ್ಕಲಿಗರ ಎತ್ತು ಕರಿ ಹರಿದರೆ ಅದರಲ್ಲೂ ಬಿಳಿಎತ್ತು ಕರಿ ಹರಿದರೆ ಮಳೆ ಬೆಳೆ ಸಂಪಾಗಿರುತ್ತದೆ ಎಂಬ ನಂಬಿಕೆ ಇದೆ. ಆದ್ದರಿಂದ ಕರಿ ಹರಿಯಲು ತುರುಸಿನ ಸ್ಪರ್ಧೆ ಏನೂ ಕಂಡು ಬರುವುದಿಲ್ಲ. ಹೀಗೆ ಕಾರಹುಣ್ಣಿಮೆ ವಿಶೇಷವಾಗಿ ಎತ್ತಿನ ಹಬ್ಬದ ಆಚರಣೆಯಾಗಿ ನಡೆಯುತ್ತದೆ.

ನಾಗರ ಪಂಚಮಿ

> ನಾಗರ ಪಂಚಮಿ ನಾಹೆಂಗ ಮರಿಲೆವ್ವ
> ನನ್ನ ತವರು ಮನೆಯ। ಇನ್ನೆಂಟು ದಿವಸಕ
> ನಮ್ಮಣ್ಣ ಬರುತಾನ ನನ್ನ ಕರಿಲಾಕ........
> ....

ಎಂಬ ಹಾಡು ನಾಗರ ಪಂಚಮಿ ಹೆಣ್ಣುಮಕ್ಕಳ ಅದರಲ್ಲೂ 'ತವರಿನ ಹಬ್ಬ' ಎಂದು ಸ್ಪಷ್ಟಪಡಿಸುತ್ತದೆ. ಸೊರಟೂರ ಗ್ರಾಮದಲ್ಲಿ ನಾಗರ ಪಂಚಮಿಯನ್ನು ಮೂರು ದಿನ ಆಚರಿಸಲಾಗುತ್ತದೆ. ಮೊದಲ ದಿನ ರೊಟ್ಟಿ ಪಂಚಮಿ ಆ ದಿನ ಎಳ್ಳು ಹಚ್ಚಿದ ಜೋಳದ ಹಾಗೂ ಸಜ್ಜೆಯ ರೊಟ್ಟಿ, ವಿವಿಧ ಬಗೆಯ ಪಲ್ಯಚಟ್ನಿ, ಚಪಾತಿ, ಬೆಲ್ಲದ ಬ್ಯಾಳಿ ಹೀಗೆ ವಿಶೇಷ ಆಹಾರವಿರುತ್ತವೆ. ಮರುದಿನ ನಾಗಚೌತಿ; ಇದನ್ನು 'ಹಾಲು ಹೊಯ್ಯುವುದು' ಎನ್ನುತ್ತಾರೆ. ಆ ದಿನ ಅರಳಿಟ್ಟು, ತಂಬಿಟ್ಟು, ಕಡಲೆ ಉಂಡಿ, ಶೇಂಗಾ ಉಂಡಿ ಜೊತೆಗೆ ಉಸುಳಿ ಮಾಡುತ್ತಾರೆ. ಈ ಎಲ್ಲಾ ಅಡುಗೆಯನ್ನು ನೈವೇದ್ಯ ಮಾಡಿ ದೇವರ ಗುಡಿಯ ಮುಂದಿರುವ ನಾಗಪ್ಪನಿಗೆ ಹಾಲು ಹೊಯ್ಯುತ್ತಾರೆ.

ಹಾಲು ಹೊಯ್ಯುವಾಗ– 'ನನ್ನ ಪಾಲು, ನಮ್ಮವ್ವನ ಪಾಲು, ನಮ್ಮಪ್ಪನ ಪಾಲು, ಅಣ್ಣನ ಪಾಲು, ತಮ್ಮನ ಪಾಲು, ಗಂಡನ ಪಾಲು, ಎಲ್ಲರ ಪಾಲು ನಾಗಪ್ಪಗ ಹಾಲು' ಎಂದು ಎಲ್ಲ ಬಂಧುಬಾಂಧವರ ಹೆಸರಿನಲ್ಲಿ ಮಹಿಳೆಯರು ಹಾಲನ್ನು ಎರೆಯುತ್ತಾರೆ. ಮೂರನೆಯ ದಿನವನ್ನು 'ಹುತ್ತ ಮುರಿಯುವುದು' ಎನ್ನುತ್ತಾರೆ. ಆದಿನ ಹುತ್ತದ ಅಥವಾ ಹೊಲದಲ್ಲಿಯ ಮಣ್ಣನ್ನು ತಂದು ನಾಗರ ಹಾವಿನ ಹೆಡೆಯ ಮೂರ್ತಿ ಮಾಡಿ ಮನೆಯ ಜಗುಲಿಯಲ್ಲಿಟ್ಟು ಅದಕ್ಕೆ ಹಾಲು ಹೊಯ್ಯುತ್ತಾರೆ. ಕುಚ್ಚಿದ ಕಡಬು ನೈವೇದ್ಯ ಮಾಡುತ್ತಾರೆ. ನಾಲ್ಕನೆಯ ದಿನ 'ಕೆರಕಟ್ಟಂಬಲಿ'

ಆ ದಿನ ನೈವೇದ್ಯಕ್ಕೆ ಅಂಬಲಿ ಮಾಡುತ್ತಾರೆ. ೫ನೇ ದಿನವನ್ನು 'ವರ್ಷತೊಡಕು'" ಎಂದು ಹೇಳುತ್ತಾರೆ. ಆ ದಿನವನ್ನು ಹೇಗೆ ಕಳೆಯುತ್ತೇವೆಯೋ ವರ್ಷವಿಡೀ ಹಾಗೆ ಇರುತ್ತೇವೆ ಎಂಬ ನಂಬಿಕೆ ಇದೆ. ಆದ್ದರಿಂದ ಆ ದಿನ ಮನೆಯಲ್ಲಿ ಯಾರೂ ಜಗಳವಾಡದಂತೆ ಶಾಂತತೆಯಿಂದ ಇರುವ ಪರಂಪರೆ ಇದೆ. ಪಂಚಮಿ ಹಬ್ಬಕ್ಕೆ ವಿವಾಹ ನಿಶ್ಚಯವಾದ ವಧುವಿಗೆ ಗಂಡಿನ ಮನೆಯವರು ಉಡಿ ತರುವ ಸಂಪ್ರದಾಯವಿದೆ. ವಧುವಿಗ ಉಂಡಿ ತುಂಬಿ ಆರತಿ ಮಾಡುವ ಸಂಪ್ರದಾಯವಿದೆ. ಹೀಗೆ ಪಂಚಮಿ ಹಬ್ಬವು ವಿವಿಧ ಸಂಪ್ರದಾಯಗಳಿಂದ ಆಚರಿಸಲ್ಪಡುತ್ತದೆ

ನೂಲಹುಣ್ಣಿಮೆ (ರಾಖಿ ಹಬ್ಬ)

ನೂಲ ಹುಣ್ಣಿಮೆಯನ್ನು ಜನಪದರು 'ಜನಿವಾರದ ಹುಣ್ಣಿಮೆ' ಎಂತಲೂ ಕರೆಯುತ್ತಾರೆ. ಮೊದಲು ಇದನ್ನು ಜನಿವಾರದಾರರು ಮಾತ್ರ ತಮ್ಮ ಸಾಂಪ್ರದಾಯಿಕ ಪರಂಪರೆಯಂತೆ ಆಚರಿಸುತ್ತಿದ್ದರು. ಆದರೆ ಈಗ ಅದನ್ನು ಸಮಾಜದ ಸರ್ವರೂ ರಾಖಿಹಬ್ಬವೆಂದು ಆಚರಿಸುತ್ತಾರೆ. ಮಹಿಳೆಯರು ಅಣ್ಣತಮ್ಮರ ಸಹೋದರತೆಯ ಬಾಂದವ್ಯಕ್ಕಾಗಿ ರಾಖಿ ಕಟ್ಟಿ ಆರತಿ ಮಾಡುತ್ತಾರೆ. ಗಂಡಸರು ರಾಖಿ ಕಟ್ಟಿದ ಸಹೋದರಿಯರೆ ಕಾಣಿಕೆ ಕೊಡುತ್ತಾರೆ. ಇದು ಆಚರಣೆ ಆದರೆ ರಾಖಿ ಕಟ್ಟಿಸಿಕೊಂಡ ಪುರುಷರು ಸಹೋದರಿಯರಿಗೆ ರಕ್ಷಕರಾಗಿ ಇರಬೇಕೆಂಬುದು ಈ ಹಬ್ಬದ ವಿಶೇಷವಾಗಿದೆ. ಆದ್ದರಿಂದ ಬದಲಾದ ಕಾಲಮಾನದಲ್ಲಿ ಶಾಲೆ ಕಾಲೇಜು ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಪುಡಾರಿ ಹಾಗೂ ಚುಡಾಯಿಸುವ ಯುವಕರಿಗೆ ಯುವತಿಯರು ರಾಖಿ ಕಟ್ಟಿ ಅವರನ್ನು ಸಹೋದರರನ್ನಾಗಿ ಮಾಡಿಕೊಂಡು ಅವರಿಂದಲೇ ರಕ್ಷಣೆ ಪಡೆಯುತ್ತಿರುವದು ಕಂಡುಬರುತ್ತಿದೆ. ಹೀಗೆ ನೂಲಹುಣ್ಣಿಮೆ ರಾಖಿ ಹಬ್ಬವಾಗಿ ಸೋದರ ಬಾಂಧವ್ಯಕ್ಕೆ ಸೇತುವೆಯಾಗಿದೆ.

ಗಣೇಶ ಹಬ್ಬ

ಗಣೇಶ ಹಬ್ಬ ರಾಷ್ಟ್ರಾದ್ಯಂತ ಆಚರಿಸುವ ಹಬ್ಬವಾಗಿದೆ. ಆದರೆ ಸೊರಟೂರ ಗ್ರಾಮದಲ್ಲಿ ಮನೆಗಳಲ್ಲಿ ಗಣೇಶ ಮೂರ್ತಿ ಇಡಲು ಕೆಲವು ನಿಯಮಗಳಿರುವುದು ವಿಶೇಷವಾಗಿದೆ. ಅಂದರೆ ಗಣೇಶ ಚತುರ್ಥಿಯ ದಿನ ಮನೆಯಲ್ಲಿ ಆಕಳು, ಎಮ್ಮೆ, ಮೇಕೆ, ಬೆಕ್ಕು ಯಾವುದಾದರೂ ಪ್ರಾಣಿಗಳ ಜನನವಾದರೆ ಅಥವಾ ಮನೆಯಲ್ಲಿ ಹೆರಿಗೆಯಾದರೆ ಗಣಪನನ್ನು ಇಡುವ (ಪ್ರತಿಷ್ಠಾಪಿಸುವ) ಸಂಪ್ರದಾಯವಿದೆ. ಆದ್ದರಿಂದ ಗಣಪತಿ ಪ್ರತಿಷ್ಠಾಪನೆ ಎಲ್ಲಾ ಮನೆಗಳಲ್ಲಿ ನಡೆಯುವುದಿಲ್ಲ. ಶಾಲೆ ಕಾಲೇಜುಗಳಲ್ಲಿ ಗಣೇಶ ಮೂರ್ತಿಯ ಸಾಮೂಹಿಕ ಪ್ರತಿಷ್ಠಾಪನೆ ಇರುತ್ತದೆ. ಶಾಲಾ ಮಕ್ಕಳು ಗಣೇಶನನ್ನು ಕುರಿತು.

ಗಣಪ ಗಣಪ್ಪ ಮೋರಯ
ಪುಂಡಿಪಲ್ಲೆ ಸೋರಯ
ಬಪ್ಪರೆ ಬಪ್ಪ ಗಣಪತಿ ಬಪ್ಪ ಎಂದು ಹಾಡುತ್ತಾರೆ.

'ಪುಂಡಿಪಲ್ಲೆ ಸೋರಯ' ಎಂಬುದು ವಿಶೇಷ. ಅಂದರೆ ಪುಂಡಿಪಲ್ಲೆ ಜನಪದರ ಆಹಾರ. ಆದ್ದರಿಂದ ಭಕ್ತರು ತಮಗೆ ಆಹಾರ. ಸಂಪತ್ತು ದೊರೆಯಲಿ ಎಂಬ ಭಾವ ಇರಬಹುದು. ಇಂತಹ ಘೋಷಣೆಗಳು ಪ್ರಾದೇಶಿಕವಾಗಿ ವಿಭಿನ್ನವಾಗಿರುತ್ತವೆ. ಮರಾಠಿ ಭಾಷೆಯ ಪ್ರಭಾವವಿರುವ

ಬೆಳಗಾವಿ ನಿಪ್ಪಾಣಿ ಪರಿಸರದಲ್ಲಿ ಗಣೇಶ ಗಣೇಶ ಮೋರಯ ಎಂದು ಹೇಳುವುದರ ಜೊತೆಗೆ ಏಕದೋ ತೀನಚಾರ್... ಗಣಪತಿಕಾ ಜೈಜೈಕಾರ. ಹೀಗೆ ಈ ಹಬ್ಬವು ಕೆಲವು ಸಣ್ಣಪುಟ್ಟ ಪ್ರಾದೇಶಿಕ ಆಚರಣೆಗಳ ಜೊತೆಗೆ ರಾಷ್ಟ್ರಾದ್ಯಂತ ಏಕರೂಪದಲ್ಲಿ ಆಚರಿಸಲ್ಪಡುತ್ತದೆ.

ರಂಜಾನ್ ಹಬ್ಬ

ರಂಜಾನ್ ಹಬ್ಬವನ್ನು ರಾಷ್ಟ್ರಾದ್ಯಂತ ಮುಸ್ಲಿಂ ಬಾಂಧವರು ಏಕರೀತಿಯಲ್ಲಿ ತಮ್ಮ ಪರಂಪರಾಗತ ಸಂಪ್ರದಾಯದಂತೆ ಆಚರಿಸುತ್ತಾರೆ. ಒಂದು ತಿಂಗಳು ರೋಜಾ ನಮಾಜ್ ಆಚರಣೆ, ಬಡವರಿಗೆ ದಾನ ಮಾಡುವುದು ಈ ಹಬ್ಬದ ಆಚರಣೆಗಳಾಗಿವೆ. ಆದರೆ ಸೊರಟೂರ ಗ್ರಾಮದಲ್ಲಿ ಕೆಲವರು ಹಿಂದುಗಳು ರೋಜಾ ಮಾಡುವುದು ಗ್ರಾಮದ ವಿಶೇಷತೆ. ಗ್ರಾಮದ ಪ್ರಮುಖ ಹಿಂದುಗಳು ರೋಜಾ ಹಿಡಿದ ಮುಸ್ಲಿಮರಿಗೆ ಊಟದ ವ್ಯವಸ್ಥೆ ಮಾಡುತ್ತಾರೆ. ರಂಜಾನ್ ಹಬ್ಬದ ಕೊನೆಯ ದಿನ ನಮಾಜ್ ಮುಗಿದ ಮೇಲೆ ಹಿಂದುಗಳಿಗೆ ಅಂದರೆ ಜೋಗಪ್ಪ, ಜೋಗಮ್ಮ, ಕುರುಡರು, ಕುಂಟರು, ಪೂಜಾರಿಗಳು ಮತ್ತು ಅಸಹಾಯಕರಿಗೆ ಮುಸ್ಲಿಂ ಬಾಂಧವರು ತಮ್ಮ ಕೈಲಾದಷ್ಟು ದಾನ ಮಾಡುತ್ತಾರೆ. ಹಾಗೂ ಮುಸ್ಲಿಂಮರು ಹಿಂದುಗಳನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸುತ್ತಾರೆ. ಈ ಹಬ್ಬದಲ್ಲಿ 'ಸುರ್‌ಕುರ್‌ಮಾ' ಎಂಬ ಸಿಹಿ ಹಾಗೂ ಮಾಂಸಾಹಾರ ಪ್ರಮುಖ ಆಹಾರವಾಗಿರುತ್ತದೆ. ಒಟ್ಟಾರೆ ಈ ಹಬ್ಬ ಮುಸ್ಲಿಮರ ಹಬ್ಬವಾಗಿದ್ದರೂ ಹಿಂದೂ-ಮುಸ್ಲಿಂ ಬಾಂಧವ್ಯಕ್ಕೆ ಇಂಬು ನೀಡಿದೆ.

ಮಹಾನವಮಿ ಹಬ್ಬ

ದೇವರ ನೆನೆದರೆ ಸಾವುಹುಟ್ಟು ನಮಗಿಲ್ಲ
ಹಾವು ಕಡಿದರೆ ವಿಷವಿಲ್ಲ। ಎಳ್ಳೆಡೆಯ
ಸರ್ಪ ದಾಟಿದರೆ ಭಯವಿಲ್ಲ.

ಎಂಬ ಜನಪದರ ಹಾಡು ದೇವರ ಸ್ಮರಣೆಯಲ್ಲಿ ಅವರು ಇಟ್ಟಿರುವ ಭಯಭಕ್ತಿಯನ್ನು ತಿಳಿಸುತ್ತದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದಲ್ಲಿ ಮಹಾನವಮಿ ಹಬ್ಬ ಬಹುವಿಶಿಷ್ಟವಾಗಿ ಆಚರಣೆಗೊಳ್ಳುತ್ತದೆ.

ಘಟಸ್ಥಾಪನೆ

ಮಹಾಲಯ ಅಮವಾಸ್ಯೆಯ ಮರುದಿನ ಪಾಡ್ಯದಂದು ಗ್ರಾಮದಲ್ಲಿರುವ ಎಲ್ಲಾ ದೇವತೆಗಳ ಗುಡಿಯಲ್ಲಿ ಘಟಸ್ಥಾಪನೆ ನಡೆಯುತ್ತದೆ. ಅಂದಿನಿಂದ ಖಂಡೆ ಪೂಜೆಯವರೆಗೆ ೮ ಅಥವಾ ೯ ದಿನಗಳು ಬರುತ್ತವೆ. ನಂದಾದೀಪ ಹಾಕಿ ದೀಪ ಕಾಯುತ್ತಾ ದೇವಿಯ ಪುರಾಣ ಪಠಣ ಆಯಾ ದೇವರ ಗುಡಿಯಲ್ಲಿ ನಡೆಯುತ್ತದೆ. ಸ್ವತಃ ಮನೆಗಳಲಿಯೂ ಈ ಆಚರಣೆ ನಡೆಯುತ್ತದೆ. ಆದರೆ ದುರ್ಗಾದೇವಿಯ ಘಟಸ್ಥಾಪನೆ ಖಂಡೆ ಪೂಜೆಯ ೫ ದಿನ ಮೊದಲು ನಡೆಯುತ್ತದೆ. ಅಲ್ಲಿಯು ನಂದಾದೀಪ ಹಾಗೂ ೫ ದಿನ ವಿವಿಧ ವಿಧಿವಿಧಾನಗಳ ಆಚರಣೆ ನಡೆಯುತ್ತದೆ.

ಖಂಡೆ ಪೂಜೆ

ಮಹಾನವಮಿ ಅಮವಾಸ್ಯೆಯ ನಂತರ ೮ ಅಥವಾ ೯ನೆಯ ದಿನಕ್ಕೆ ಖಂಡೆ ಪೂಜೆಯ ದಿನ ಇರುತ್ತದೆ. ಇದು ಕೆಲವೊಮ್ಮೆ ೧೦ನೇ ದಿನಕ್ಕೂ ಬರುತ್ತದೆ. ಈ ದಿನ ಗ್ರಾಮದ ಗ್ರಾಮದೇವತೆಯಾದ ದುರ್ಗಾದೇವಿಯು ಗ್ರಾಮದ ಎಲ್ಲಾ ಮನೆಗಳಿಗೂ ಹೋಗುತ್ತಾಳೆ. ಮೊದಲು ಗ್ರಾಮದ ದೇಸಾಯಿಯವರ ಮನೆ (ಈಗ ಗ್ರಾಮ ಪಂಚಾಯ್ತಿ ಆಡಳಿತ ಕೇಂದ್ರವಾಗಿದೆ)ಗೆ ಹೋಗುತ್ತಾಳೆ. ಆ ನಂತರ ಗ್ರಾಮದ ಪ್ರತಿಯೊಂದು ಮನೆಗೂ ಹೋಗುವ ಸಂಪ್ರದಾಯವಿದೆ. ದೇವಿಯ ಆಗಮನಕ್ಕಾಗಿ ಗ್ರಾಮದ ಭಕ್ತರು ಮನೆಯನ್ನು ಶೃಂಗರಿಸಿ ಆಹ್ವಾನಿಸುತ್ತಾರೆ. ದೇವಿಗೆ ಸೀರೆ, ಕುಪ್ಪಸ, ಕಾಯಿ, ಕರ್ಪೂರ, ನೈವೇದ್ಯಗಳನ್ನು ಅರ್ಪಿಸಿ ಪೂಜಿಸುತ್ತಾರೆ. ತಮ್ಮ ಇಷ್ಟಾರ್ಥಗಳ ಈಡೇರಿಕೆಗಾಗಿ ಹರಕೆ ಹೊರುತ್ತಾರೆ. ಪ್ರತಿಯೊಂದು ಮನೆಗೆ ಹೋಗುವಾಗ ಡೊಳ್ಳು, ಭಜಂತ್ರಿ ವಾದ್ಯಗಳ ನಾದ, ದೇವಿಗೆ ನೀರು ಹಾಕುವುದು ತಂಡೋಪತಂಡವಾಗಿ ಜನ ದೇವಿಯ ಸುತ್ತ ಉಧೋ... ಉಧೋ... ದುರಗಮ್ಮ ನಿನ್ನಾಲ್ಕ ಉಧೋ... ಎಂಬ ಘೋಷಣೆ, ಜೋಗಮ್ಮಗಳು ಜೋಗು ಹಾಕುವುದನ್ನು ಹೀಗೆ ಬಹು ಸಡಗರದಿಂದ ದೇವಿಯನ್ನು ತಂತಮ್ಮ ಮನೆಗೆ ಕರೆದುಕೊಂಡು ಹೋಗುವುದನ್ನು ನೋಡಿದರೆ ಗ್ರಾಮದ ಭಕ್ತಿಯ ವೈಭವ ತಿಳಿಯುತ್ತದೆ. ಆ ದಿನ ಗ್ರಾಮದ ಎಲ್ಲಾ ದೇವತೆಗಳ ಗುಡಿಗಳಲ್ಲಿ ಹಾಗೂ ಎಲ್ಲರ ಮನೆಯಲ್ಲಿ ಖಂಡೆ ಪೂಜೆಯ ವಿಶೇಷ ಪೂಜೆ ನಡೆಯುತ್ತದೆ ಇದಕ್ಕೆ 'ಆಯುಧ ಪೂಜೆ' ಎಂತಲೂ ಕರೆಯುತ್ತಾರೆ. ಬೆಳಿಗ್ಗೆ ೬ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೆ ಗ್ರಾಮದಲ್ಲಿ ದುರ್ಗಾದೇವಿಗೆ ಉಡಿ ತುಂಬುವ ಕಾರ್ಯ ನಿರಂತರವಾಗಿ ನಡೆಯುತ್ತದೆ.

ದುರ್ಗಾದೇವಿ ಗುಡಿಯಲ್ಲಿಯ ಆಚರಣೆಗಳು

ದುರ್ಗಾದೇವಿ ಗ್ರಾಮದ ಎಲ್ಲಾ ಭಕ್ತರ ಮನೆಗೆ ಹೋಗಿ ಬರುವಾಗ ರಾತ್ರಿ ೯ ಗಂಟೆಯಾಗುತ್ತದೆ. ಪಾಲಕಿ ಹೊತ್ತವರಿಗೆ ದೇವಿ ಮೈದುಂಬಿರುತ್ತಾಳೆ. ರೋಷಾವೇಷದಿಂದ ಗುಡಿಗೆ ಬರುತ್ತಿದ್ದಂತೆ ದೇವಿಗೆ **'ಹರಿಮರಿ'** (ಆಡು ಅಥವಾ ಕುರಿಯ ಮರಿಗಳನ್ನು ದೇವಿಯ ಮುಂದೆ ಕಡಿಯುತ್ತಾರೆ) ಕಡಿಯಲಾಗುತ್ತದೆ. ಎರಡು ಜನ ಹರಿಮರಿಯನ್ನು ಹಿಡಿದುಕೊಂಡಿರುತ್ತಾರೆ. ಪೂಜಾರಿ ಕುಡಗೋಲಿನಿಂದ ಒಂದೇ ಹೊಡೆತಕ್ಕೆ ಒಂದೊಂದು ಮರಿ ಕಡಿಯುತ್ತಾನೆ. ನಂತರ ದೇವಿಯನ್ನು ಸದರಿನಲ್ಲಿ ಗದ್ದುಗೆಗೊಳಿಸಲಾಗುತ್ತದೆ. ಅನಂತರ ಜೋಗಪ್ಪ (ಜೋಗಮ್ಮ, ಜೋಗಪ್ಪ, ಪೂಜಾರಿಗಳ ಊಟ) ನಡೆಯುತ್ತದೆ. ಮತ್ತೆ ದೇವರಿಗೆ 'ಉಟಿಗೆ' ಉಡುವ ಕಾರ್ಯ ನಡೆಯುತ್ತದೆ. (ಉಟಿಗೆ ಎಂದರೆ ಹೆಣ್ಣುಮಕ್ಕಳು ಬಟ್ಟೆಯನ್ನು ಉಟ್ಟುಕೊಳ್ಳದೆ ದೇಹದ ತುಂಬಾ ಬೇವಿನ ತಪ್ಪಲು ಹೊದಿಸಿಕೊಂಡು ಪ್ರದಕ್ಷಿಣೆ ಹಾಕುವುದು) ಉಟಿಗೆಯನ್ನು ಪೂಜಾರಿ ಹೆಣ್ಣುಮಗಳು ಹಾಗೂ ಹರಕೆ ಹೊತ್ತವರು ಮಾಡುತ್ತಾರೆ. ಉಟಿಗೆಯ ನಂತರ ಬ್ಯಾಟಿ (ಪ್ರಾಣಿಬಲಿ) ಮಾಡುವ ಕಾರ್ಯ ನಡೆಯುತ್ತದೆ. ಖಂಡೆ ಪೂಜೆಯ ದಿನ ಇಡೀ ರಾತ್ರಿ ಗುಡಿಯಲ್ಲಿ ವಿವಿಧ ಸಾಂಪ್ರದಾಯಿಕ ಆಚರಣೆಗಳು ನಡೆಯುತ್ತವೆ.

ಬನ್ನಿ ಹಬ್ಬ (ದೇವತೆಗಳು ಬನ್ನಿ ಮುಡಿಯುವುದು)

ಬನ್ನಿ ಮುಡಿಯೋದು ಬಂತು ಬಂಗಾರ ಕೊಡೋದು ಬಂತು.
ಬಂದ ನನಕಾಲ ಹಿಡದಾನ॥ ನನತಮ್ಮ
ಬಂಗಾರ ಮಾಲ ನನಗಿರಲಿ.

ಎಂದು ಜನಪದ ಗರತಿಯು ತನ್ನ ತಮ್ಮನ ಹಾಗೂ ಮಗಳ ಕುರಿತು ಹಾಡಿರುವುದು ಒಂದು ಸಂಬಂಧದ ಸಂಕೇತವಾದರೆ, ಮತ್ತೊಂದು ಹಿರಿಯರಿಗೆ ಕಿರಿಯರು ವಿನಯವಾಗಿರುವ ಅಂಶವು ಅಡಗಿದೆ. ಹೀಗೆ ಬನ್ನಿ ಹಬ್ಬ ಬಾಂಧವ್ಯ ವೃದ್ಧಿಯ ಸಂಕೇತವಾಗಿರುವುದು ಸರ್ವೇಸಾಮಾನ್ಯವಾಗಿದೆ. ಆದರೆ ಸೊರಟೂರ ಗ್ರಾಮದ ದೇವತೆಗಳೆಲ್ಲ ಸೇರಿ ಬನ್ನಿ ಮುಡಿಯುವುದರಲ್ಲಿ ಒಂದು ವಿಶೇಷ ಸಂಪ್ರದಾಯವಿದೆ. ಸೊರಟೂರ ಗ್ರಾಮದ ಈರಣ್ಣ, ದ್ಯಾಮಮ್ಮ, ಹನಮಪ್ಪ, ಮಲ್ಲಜ್ಜ, ಬೈರಪ್ಪಜ್ಜ, ಬೀರೇಶ್ವರ, ಮಾದಮ್ಮ, ದುರುಗಮ್ಮ ಹೀಗೆ ಎಲ್ಲಾ ದೇವತೆಗಳು ವಿಜಯದಶಮಿ ದಿನ ಸಾಯಂಕಾಲ ೫-ಗಂಟೆ ಗ್ರಾಮದ ಪೂರ್ವ ದಿಕ್ಕಿನಲ್ಲಿರುವ ಬನ್ನಿಕಟ್ಟೆಗೆ ಹೋಗುತ್ತವೆ. ಅಲ್ಲಿ ಎಲ್ಲಾ ದೇವತೆಗಳ ಪೂಜಾರಿಗಳು ಎಲ್ಲಾ ದೇವತೆಗಳಿಗೂ ಪೂಜೆ ಮಾಡುತ್ತಾರೆ. ಬನ್ನಿ (ಬನ್ನಿ ಪತ್ರಿ) ಏರಿಸುತ್ತಾರೆ. ಇದು ದೇವತೆಗಳು ಬನ್ನಿ ಮುಡಿಯುವ ಸಂಕೇತವಾಗಿದೆ. ನಂತರ ಗ್ರಾಮದ ಜನರೆಲ್ಲಾ ಮೊದಲು ದೇವರಿಗೆ ಬನ್ನಿ ಅರ್ಪಿಸಿ ತದನಂತರ ಬಂಧು ಬಾಂಧವರಿಗೆ ಬನ್ನಿ ಕೊಡುತ್ತಾರೆ. ಹೀಗೆ ಬನ್ನಿ ಮುಡಿದ ಎಲ್ಲಾ ದೇವತೆಗಳು ಡೊಳ್ಳಿನ ಮೇಳದ ಮಜಲಿನೊಂದಿಗೆ ಪೇಟೆಗೌರಿಮನಿ ಮುಂದೆ ಬಂದು ಅಲ್ಲಿ ಕೆಲ ಸಮಯ ಎಲ್ಲಾ ದೇವತೆಗಳನ್ನು ಕೂಡಿಸುತ್ತಾರೆ. ಅಲ್ಲಿ ಡೊಳ್ಳಿನ ಮೇಳದವರು ಡೊಳ್ಳಿನ ಹಾಡು ಹಾಗೂ ರ್‍ವಾಣ ಹೇಳುವ ಸಂಪ್ರದಾಯವಿದೆ. ಅನಂತರ ಎಲ್ಲಾ ದೇವತೆಗಳು ಗುಡಿಗಳಿಗೆ ಹೋಗುವ ಸಂಪ್ರದಾಯವಿದೆ. ಬನ್ನಿ ಎಂದರೆ ಬನ್ನಿಮರದ ತಪ್ಪಲು ಆರಿ ಗಿಡದ ತಪ್ಪಲು, ಜೋಳದ ಗರಿಗಳ ತಪ್ಪಲುಗಳನ್ನು ಒಳಗೊಂಡಿರುತ್ತದೆ. ಬನ್ನಿಯನ್ನು ಅವರ ಕೈಯಲ್ಲಿ ಕೊಟ್ಟು ಬನ್ನಿ ಕೊಟ್ಟು ಬಂಗಾರದಂಗ ಇರೋಣ। ಎಂದು ಒಬ್ಬರಿಗೊಬ್ಬರು ಹೇಳುತ್ತಾರೆ. ಬನ್ನಿಯನ್ನು ಕೊಡಲು ಮೊದಲು ಯಾರು ಮುಂದಾಗುತ್ತಾರೆ. ಎಂಬುದರಲ್ಲಿಯೂ ಒಂದು ವಿಶೇಷತೆ ಇದೆ. ಚಿಕ್ಕವರು ಮೊದಲು ಹಿರಿಯರು ಇರುವಲ್ಲಿ ತಾವಾಗಿಯೇ ಹೋಗಿ ಅವರಿಗೆ ಬನ್ನಿಕೊಟ್ಟು ಕಾಲಿಗೆ ನಮಸ್ಕರಿಸುತ್ತಾರೆ. ಅದಕ್ಕೆ ಹಿರಿಯರು ಆಶೀರ್ವಾದ ಮಾಡಿ ಸ್ಪಂದಿಸುತ್ತಾರೆ. ಆದರೆ ಚಿಕ್ಕವರಿಗೆ ಹಿರಿಯರು ತಾವಾಗಿಯೇ ಬನ್ನಿ ಕೊಡಲು ಮುಂದಾಗುವುದಿಲ್ಲ. ಬನ್ನಿ ಹಬ್ಬ ಹಿರಿಯರಿಗೆ ಗೌರವ ಕೊಡುವ ಸೂಚಕವಾಗಿಯೂ ಇದೆ. ಸಮವಯಸ್ಕರಲ್ಲಿ ಗೆಳೆಯರಲ್ಲಿ ಇದು ಸಹಜವಾಗಿರುತ್ತದೆ. ಇದಕ್ಕೂ ಮುಖ್ಯವಾಗಿ ಜಗಳವಾಡಿದವರು, ವೈರತ್ವ ಬೆಳೆಸಿಕೊಂಡವರನ್ನು ಅವರ ಗೆಳೆಯರು ಸಂಬಂಧಿಕರು ಬನ್ನಿ ಕೊಡಿಸುವ ಮೂಲಕ ಒಂದುಗೂಡಿಸುತ್ತಾರೆ. ಈ ಹಬ್ಬ ಯಾವುದೇ ಜಾತಿ ಜನಾಂಗಗಳಿಗೆ ಸೀಮಿತವಾಗದೆ ಗ್ರಾಮದ ಎಲ್ಲಾ ಜನರು ಆಚರಿಸುತ್ತಾರೆ. ಹೀಗೆ ಬನ್ನಿ ಹಬ್ಬವು ಜಗಳವಾಡಿದವರನ್ನು ಮಾತುಬಿಟ್ಟಿದವರನ್ನು ಒಂದು ಗೂಡಿಸುತ್ತದೆ. ವೈರತ್ವವಿದ್ದವರಲ್ಲಿ ಸ್ನೇಹತ್ವ ಬೆಳೆಸುವ ಮೂಲಕ ಬಾಂಧವ್ಯ ವೃದ್ಧಿಯ ಸಂಕೇತವಾಗಿ ಆಚರಿಸಲ್ಪಡುತ್ತದೆ.

ಶೀಗೆ ಹುಣ್ಣಿಮೆ

ಶೀಗೆ ಹುಣ್ಣಿಮೆಯು ಭೂಮಿಯಲ್ಲಿ ಸಂಪದ್ಭರಿತ ಬೆಳೆ ಬಂದಿರುವ ಸಮಯದಲ್ಲಿ ಬರುವುದರಿಂದ ಆಗ ಭೂಮಿ ತಾಯಿಗೆ ಪೂಜೆ ಸಲ್ಲಿಸುವ ನೈವೇದ್ಯ ಅರ್ಪಿಸುವ ಉದ್ದೇಶದಿಂದ ಹುಟ್ಟಿಕೊಂಡಿರುವ ಹಬ್ಬವಾಗಿದೆ. ಹೊಲದಲ್ಲಿ ಬನ್ನಿಗಿಡದ ಕೆಳಗೆ ಪಾಂಡವರನ್ನು ಮಾಡಿ ಪೂಜಿಸಲಾಗುತ್ತದೆ. ನೈವೇದ್ಯಕ್ಕಾಗಿ ಉಂಡಗಡಬು (ಜೋಳದ ಹಿಟ್ಟಿನಿಂದ ಮಾಡಿದ ಕಡಬು) ಪುಂಡಿಪಲ್ಲೆ ಎಳ್ಳುಹೋಳಿಗೆ, ಎಣ್ಣಿ ಹೋಳಿಗೆ ಕಡಬು ಅನ್ನಸಾರು ಮಾಡಿರುತ್ತಾರೆ. ನೈವೇದ್ಯದ ಎಲ್ಲಾ ಸಾಮಗ್ರಿಯನ್ನು ಎಣ್ಣಿ ಬುಟ್ಟಿಯಲ್ಲಿ ತುಂಬಿರುತ್ತಾರೆ. ಎಣ್ಣಿ ಬುಟ್ಟಿಗೆ ಸುಣ್ಣದಿಂದ ವಿವಿಧ ಬಗೆಯ ಚಿತ್ರಗಳನ್ನು ಬಿಡಿಸಿರುತ್ತಾರೆ. ಇದಕ್ಕೆ 'ಬುಟ್ಟಿ ತುಂಬುವುದು' ಎನ್ನುತ್ತಾರೆ. ಬುಟ್ಟಿಯಲ್ಲಿ ಪೂಜೆ ಹಾಗೂ ನೈವೇದ್ಯದ ಎಲ್ಲಾ ಸಾಮಗ್ರಿ ತುಂಬಿದಾಗ ಅದಕ್ಕೆ ಚರಗದ ಬುಟ್ಟಿ ಎನ್ನುತ್ತಾರೆ. ಹೆಣ್ಣುಮಕ್ಕಳು ಹಸಿರು ಸೀರೆ ಉಟ್ಟುಕೊಂಡು ಚರಗದ ಬುಟ್ಟಿ ಹೊತ್ತುಕೊಂಡರೆ ಗಂಡಸರು ಬಿಳಿದೋತರ ದೊಡ್ಡಂಗಿ ತಲೆಗೆ ವಸ್ತ್ರ ಹೆಗಲಿಗೆ ಕರೆಕಂಬಳಿ ಹಾಕಿಕೊಂಡು ಹೊಲಕ್ಕೆ ಹೋಗುವರು ಹುಡುಗರು ಪೂಜಾ ತಂಬಿಗೆ ಸಾರಿನ ಪಾತ್ರೆ (ಕ್ಯಾನ್) ಹಿಡಿದುಕೊಂಡು ಹಿಂಬಾಲಿಸುತ್ತಾರೆ. ಇದು ರೈತರಿಗೆ ಬಹುಸೊಗಸಿನ ಹಬ್ಬವಾಗಿರುತ್ತದೆ. ಚಕ್ಕಡಿ ಇದ್ದವರು ಎತ್ತಿಗೆ ಗೆಜ್ಜೆ ಕಟ್ಟಿ ಮನೆಯವರೆಲ್ಲ ಚಕ್ಕಡಿಯಲ್ಲಿ ಹೋಗುತ್ತಾರೆ. ಒಂದಕ್ಕಿಂತ ಹೆಚ್ಚು ಹೊಲಗಳಿದ್ದವರು ಎಲ್ಲಾ ಹೊಲಗಳಲ್ಲಿ ಚರಗ ಚೆಲ್ಲಿ ಕೊನೆಗೆ ಎಲ್ಲರೂ ಒಂದು ಹೊಲಕ್ಕೆ ಬಂದು ಸೇರುತ್ತಾರೆ. ಹೊಲದಲ್ಲಿ ಬನ್ನಿಗಿಡದ ಕೆಳಗಿನ ಪಾಂಡವ ದೇವರಿಗೆ ಪೂಜೆ ಮಾಡಿ ನೈವೇದ್ಯ ಮಾಡುತ್ತಾರೆ. ಪಾಂಡವ ದೇವರು ಪೂರ್ವಕ್ಕೆ ಮುಖಮಾಡಿದರೆ ಅದಕ್ಕೆ ವಿರುದ್ಧವಾಗಿ ಪಶ್ಚಿಮ ದಿಕ್ಕಿಗೆ ಬಂದು ದೇವರ ಪೂಜೆ ಮಾಡುತ್ತಾರೆ. ಆ ದೇವರಿಗೆ 'ಕಳ್ಳ' ಎಂದು ಹೆಸರು. ಅಂದರೆ ಹೊಲದ ಬೆಳೆಯ ರಕ್ಷಣೆಗಾಗಿ ಕಳ್ಳ ಎನ್ನುವ ದೇವರನ್ನು ಜನಪದರು ಸೃಷ್ಟಿಸಿಕೊಂಡಿರುತ್ತಾರೆ. ನೈವೇದ್ಯದ ಅಡುಗೆಯನ್ನು ಸೊರೆಗೊಳಿಸುತ್ತಾ ಹುಲುಲುಲುಗೋ...; ಎನ್ನುತ್ತಾನೆ. ಹಿಂದೆ ಮತ್ತೊಬ್ಬ ನೀರು ಚಿಮುಕಿಸುತ್ತಾ ಸುರುಂಬುಳುಗ್ಯೋ ಎನ್ನುತ್ತಾನೆ. ಇದು ರೈತ ನಾನು ಬೆಳೆದ ಬೆಳೆಯನ್ನು ಪರಿಸರದ ಎಲ್ಲ ಪ್ರಾಣಿಪಕ್ಷಿಗಳಿಗೆ ಅರ್ಪಿಸುವ ಬಗೆ, ಹಾಗೂ ಇನ್ನುಳಿದ ನೈವೇದ್ಯವ ಸೊರಟೂರ ನ್ನು ಕಳ್ಳದೇವರ ಮುಂದೆ ಭೂಮಿಯಲ್ಲಿ ಹುಗಿಯುತ್ತಾರೆ. ಹೀಗೆ ಶೀಗೆ ಹುಣ್ಣಿಮೆ ಗ್ರಾಮದಲ್ಲಿ ವಿಶಿಷ್ಟವಾಗಿ ಆಚರಿಸಲ್ಪಡುತ್ತದೆ. ಗ್ರಾಮದಲ್ಲಿ ಹೊಲ ಇಲ್ಲದವರನ್ನು ಹೊಲ ಇದ್ದವರು ಊಟಕ್ಕೆ ಕರೆದುಕೊಂಡು ಹೋಗುವುದು ಉಳ್ಳವರ ಬಡವರ ಮಧ್ಯೆ ಬಾಂಧವ್ಯ ವೃದ್ಧಿಸಿದೆ.

ದೀಪಾವಳಿ

ದೀಪಾವಳಿ ಹಬ್ಬವನ್ನು ಉತ್ತರ ಕರ್ನಾಟಕದ ಎಲ್ಲಾ ಗ್ರಾಮಗಳಲ್ಲಿ ಆಚರಿಸುವಂತೆ ಇಲ್ಲಿಯೂ ಆಚರಿಸಲಾಗುತ್ತದೆ. ಸೊರಟೂರ ಗ್ರಾಮದಲ್ಲಿ ರೈತಾಪಿ ವರ್ಗ ಇದನ್ನು 'ಹಟ್ಟಿ ಹಬ್ಬ' ಎಂದು ಕರೆಯುತ್ತಾರೆ. ಏಕೆಂದರೆ ಅಮವಾಸ್ಯೆಯ ಮರುದಿನ ಪಾಡ್ಯದಂದು ದನದ ಕೊಟ್ಟಿಗೆಯಲ್ಲಿ (ಹಟ್ಟಿಯಲ್ಲಿ) ಸೆಗಣಿಯಿಂದ ದುಂಡನೆಯಾಕಾರದ ಗುಂಡುಗಳನ್ನು ಮಾಡಿ ಅವುಗಳನ್ನು ಹೂವು, ಉತ್ರಾಣಿ ಕಡ್ಡಿ, ಜೋಳದ ದಂಟುಗಳಿಂದ ಶೃಂಗರಿಸುತ್ತಾರೆ. ಇದಕ್ಕೆ 'ಹಟ್ಟೆವ್ವನನ್ನು ಇಡುವುದು' ಎನ್ನುತ್ತಾರೆ. ಇಂತಹ ಹಟ್ಟೆವ್ವನನ್ನು ದೇವರ ಜಗುಲಿ, ಬಾಗಿಲ, ಬೀಸಿಕಲ್ಲು, ಒರಳು, ಹಗೇವು (ಧಾನ್ಯ ಸಂಗ್ರಹದ ಕಣಜ) ಚಕ್ಕಡಿ, ತಿಪ್ಪೆ ಹೀಗೆ ಎಲ್ಲ ಪ್ರಧಾನ

ಸ್ಥಳಗಳಲ್ಲಿ ಒಂದೊಂದು ಹಟ್ಟೆವ್ವನನ್ನು ಇಟ್ಟು ಅಲಂಕರಿಸುತ್ತಾರೆ. ಆದ್ದರಿಂದ ಜನಪದರಿಗೆ ಇದು ಹಟ್ಟಿ ಹಬ್ಬವಾಗಿ ಪ್ರಚಲಿತದಲ್ಲಿದೆ. ಒಟ್ಟು ಮೂರು ದಿನಗಳಲ್ಲಿ ಈ ಹಬ್ಬ ಆಚರಿಸುತ್ತಾರೆ. ಮೊದಲ ದಿನ 'ನೀರದುಂಬ' ಹಬ್ಬ ಅಂದರೆ ಮನೆಯನ್ನು ಶುಭ್ರಗೊಳಿಸಿ ಎಲ್ಲರೂ ಎಣ್ಣೆ ಹಚ್ಚಿಕೊಂಡು ತಲೆಸ್ನಾನ ಮಾಡುತ್ತಾರೆ. ಎರಡನೆಯ ದಿನ ಅಮವಾಸ್ಯೆ; ಲಕ್ಷ್ಮೀ ಪೂಜೆ, ಅಂದು ಮನೆಯಲ್ಲಿ ಹಾಗೂ ವ್ಯಾಪಾರಸ್ಥರು ಅಂಗಡಿಗಳಲ್ಲಿ ಲಕ್ಷ್ಮೀ ಪೂಜೆ ಮಾಡುತ್ತಾರೆ. ಇದು ವ್ಯಾಪಾರಸ್ಥರಿಗೆ ಪ್ರಧಾನ ಆಚರಣೆ. ಮೂರನೇ ದಿನವೇ ಮೇಲೆ ವಿವರಿಸಿದ ಹಟ್ಟಿಹಬ್ಬವಾಗಿದೆ. ಈ ಹಬ್ಬದಲ್ಲಿ ವಿವಾಹ ನಿಶ್ಚಯವಾದ ವರನನ್ನು ಹೆಣ್ಣಿನ ಮನೆಯವರು ಕರೆಸುವ ಸಂಪ್ರದಾಯವೂ ಇದೆ. ಇದಕ್ಕೆ ಹಬ್ಬಕ್ಕೆ ಅಳಿಯನನ್ನು ಕರೆಸುವುದು ಎನ್ನುತ್ತಾರೆ. ಆಗ ಅವನಿಗೆ ಉಡುಗೊರೆ ಕೊಟ್ಟು ಆರತಿ ಮಾಡುತ್ತಾರೆ. ಜನಪದರಲ್ಲಿ ರಕ್ತ ಸಂಬಂಧಿಗಳಲ್ಲೇ ಹೆಚ್ಚು ವಿವಾಹ ನಿಶ್ಚಯ ಸಹಜವಾಗಿ ನಡೆಯುವುದರಿಂದ ಅದನ್ನು ದೃಢಗೊಳಿಸಲು ಈ ಆಚರಣೆ ಮಾಡಿಕೊಂಡಿರಬಹುದು. ಆದರೆ ಇತ್ತೀಚಿನ ಕಾಲದಲ್ಲಿ ವಿವಾಹ ನಿಶ್ಚಯ ಮದುವೆಯ ಕೆಲವೇ ದಿನಗಳ ಮೊದಲು ನಡೆಯುವುದರಿಂದ ಇದು ಕಡಿಮೆಯಾಗುತ್ತದೆ. ಒಟ್ಟಾರೆ ದೀಪಾವಳಿ ಅಥವಾ ಹಟ್ಟಿ ಹಬ್ಬ ಬಹುದೊಡ್ಡ ಹಬ್ಬವಾಗಿ ಆಚರಿಸಲ್ಪಡುತ್ತದೆ.

ಗೌರಿ ಹುಣ್ಣಿಮೆ

ಇದು ಗ್ರಾಮದಲ್ಲಿ ಸಹಜವಾಗಿ ಆಚರಿಸಲ್ಪಡುವ ಹುಣ್ಣಿಮೆಯಾದರೂ ಮಹಿಳೆಯರಿಗೆ ವಿಶೇಷ ಹಬ್ಬವಾಗಿದೆ. ಏಕೆಂದರೆ ವಿವಾಹ ನಿಶ್ಚಯವಾದ ಸ್ತ್ರೀಗೆ ಗಂಡಿನ ಕಡೆಯವರು ಸೀರೆ, ಹೂವು ಹಾಗೂ ಸಕ್ಕರೆ ಆರತಿ ತರುವ ಪದ್ಧತಿ ಇದೆ. ಇದು ಸಹ ವಿವಾಹ ನಿಶ್ಚಯವನ್ನು ದೃಢಗೊಳಿಸಲು ಹಾಗೂ ಗಂಡು ಹೆಣ್ಣಿನವರ ನಡುವೆ ಬಾಂಧವ್ಯ ವೃದ್ಧಿಗಾಗಿ ಹುಟ್ಟಿಕೊಂಡ ಸಂಪ್ರದಾಯವಾಗಿದೆ. ಈಗ ಮದುವೆ ನಿಶ್ಚಯ ಮದುವೆಯ ಪೂರ್ವದ ಕೆಲವೇ ದಿನಗಳಲ್ಲಿ ನಡೆಯುವುದರಿಂದ ಈ ಸಂಪ್ರದಾಯ ಕಡಿಮೆಯಾಗುತ್ತಿದೆ. ಆದರೆ ಜನಪದರಲ್ಲಿ ಇನ್ನು ಆಚರಣೆಯಲ್ಲಿದೆ. ಈ ಹಬ್ಬದಲ್ಲಿ ಆಚರಣೆಯನ್ನು ಚಿಕ್ಕ ಹೆಣ್ಣುಮಕ್ಕಳು ೧೫ ದಿನ ಮೊದಲೇ ಪ್ರಾರಂಭಿಸುತ್ತಾರೆ. ಅಂದರೆ ದೀಪಾವಳಿ ನಂತರ ಸಾಯಂಕಾಲ ಚಿಕ್ಕಮಕ್ಕಳು (೧೨ ವರ್ಷದ ಒಳಗಿನವರು) ಪ್ರತಿದಿನ ಗೌರಿಕಟ್ಟೆಗೆ ಹಾಡುತ್ತಾ ಹೋಗಿ ಆರತಿ ಮಾಡಿ ಬರುತ್ತಾರೆ. ಗೌರಿ ಹುಣ್ಣಿಮೆ ದಿನ ಇದನ್ನು ವೈಭವದಿಂದ ಆಚರಿಸುತ್ತಾರೆ.

ಒಂದ ಸೇರ ಎಣ್ಣಿ ತಂದಾಳ ಗೌರಿ
ಬಂದು ಬಾಗಿಲಿಗೆ ಹಚ್ಯಾಳ ಗೌರಿ
ಏಕದಾರುತೆ ಗೌರಿ ಬೆಳಗದಾರುತೆ .....
....

ಮೊಹರಂ ಹಬ್ಬ

ಮೊಹರರ್ ಹಬ್ಬ ಮುಂದ ಮೂರ ತಿಂಗಳ ಇತ್ತು.
ಬದುಕು ಬಾಳೇವು ಎಲ್ಲಾ ಬಿಡಿಸಿತ್ತು.
ಹಿರಿಯರಿಗೆ ಅದು ಸಿಟ್ಟು ತರಿಸಿತ್ತು.

ಈ ಹಾಡು ಮೊಹರಂ ಹಬ್ಬಕ್ಕೆ ಮೂರು ತಿಂಗಳ ಇರುವಾಗಲೇ ಹೆಜ್ಜೆ ಮೇಳದ ತಯಾರಿಯನ್ನು ತಿಳಿಸುತ್ತದೆ. ಅದರಲ್ಲೂ ಮೊಹರಂ ಹಬ್ಬದ ತಯಾರಿಯಲ್ಲಿ ಹಿಂದುಗಳದದ್ದೇ ಪ್ರಮುಖ ಪಾತ್ರವಿರುವುದು ಸೊರಟೂರ ಗ್ರಾಮದ ವಿಶೇಷ.

ಮುಸ್ಲಿಂ ಸಂಪ್ರದಾಯದಂತೆ ಹಿಜರಿ ಸಂವತ್ಸರದ ಮೊದಲ ತಿಂಗಳೇ ಮೊಹರಂ ತಿಂಗಳು. ಈ ಪದಕ್ಕೆ 'ನಿಷಿದ್ಧವಾದದ್ದು', 'ವರ್ಜಿತವಾದದ್ದು', ಸೈಯದ್ ಅಶಹರ್' (ಎಲ್ಲಾ ತಿಂಗಳುಗಳ ರಾಜ) ಎಂದಿತ್ತು. ಮೊಹರಂ ಹಬ್ಬಕ್ಕೆ ಕಾರಣವಾದ ಈ ತಿಂಗಳಲ್ಲಿ ಹಜರತ್ ಇಮಾಮ್‌ಹುಸೇನ್ ಹುತಾತ್ಮರಾದರು ಈ ಕಾರಣಕ್ಕಾಗಿ ಮೊಹರಂ ತಿಂಗಳು ಅಶುಭ ಮತ್ತು ದುಃಖದಾಯಕವೆಂದು ಭಾವಿಸಲ್ಪಡುತ್ತದೆ.[೧೦] ಮೊಹರಂ ದೇವರುಗಳನ್ನು ಗ್ರಾಮದಲ್ಲಿ ಅಲೆದೇವರು ಎಂದು ಹೆಸರಿಸುತ್ತಾರೆ. ಅದರಲ್ಲಿಯೂ ಬೀಬಿಪಾತಿಮಾ, ಅಲ್ಲಾಸಾಬ, ಮಹ್ಮದಲಿ ಮುಂತಾದ ಹೆಸರುಗಳ ಅಲೆದೇವರುಗಳಿವೆ. ಗ್ರಾಮದಲ್ಲಿ ಗುದ್ದಲಿ ಹಾಕುವುದರೊಂದಿಗೆ ಪ್ರಾರಂಭವಾಗುವ ಅಲೆ ಹಬ್ಬವು ಅಲೆದೇವರುಗಳನ್ನು ಕೂಡಿಸುವದರೊಂದಿಗೆ ಪ್ರಾರಂಭವಾಗುತ್ತದೆ. ಗ್ರಾಮದಲ್ಲಿರುವ ಮೂರು ಮಸೀದಿಗಳಲ್ಲಿ ಮೊಹರಂ ಕೊನೆಯ ದಿನದ ೫ ದಿನ ಮೊದಲು ಅಲೆದೇವರುಗಳನ್ನು ಕೂಡಿಸುತ್ತಾರೆ. ಇದಕ್ಕೆ 'ದೇವರು ಕೂಡುವುದು' ಎಂದು ಹೇಳುತ್ತಾರೆ. ನಂತರ ಗ್ರಾಮದ ಎಲ್ಲ ಮನೆಯವರು ಪಕೀರನಾಗುವ ಸಂಪ್ರದಾಯವಿದೆ. ಮಸೀದಿಗೆ ಹೋಗಿ ಸಕ್ಕರೆ ಓದಿಸಿ (ನೈವೇದ್ಯ ಕೊಟ್ಟು) ಕೈಲಾಡಿ, ಕೊರಳಾಡಿ ಹಾಕಿಕೊಳ್ಳುವ ಪದ್ಧತಿ ಇದೆ. ಮೊಹರಂ ಕೊನೆಯ ದಿನ ೭ ದಿನ ಇರುವಾಗ 'ಸಂದಲ್ ರಾತ್ರಿ' ಇರುತ್ತದೆ. ಮೊಹರಂ ಮುನ್ನಾ ದಿನ 'ಕತ್ತಲರಾತ್ರಿ' ಇರುತ್ತದೆ. ಆ ದಿನವು ಸಕ್ಕರೆ ಓದಿಸುವ ನೈವೇದ್ಯ ಕೊಡುವುದು. ಕೆಲವರು ಬ್ಯಾಟಿ (ಪ್ರಾಣಿಬಲಿ) ಮಾಡುವುದು ಇರುತ್ತದೆ. ಮೊಹರಂ ಹಬ್ಬದ ದಿನ ಬೆಳಿಗ್ಗೆ ೫ ಗಂಟೆಗೆ ದೇವರು ಏಳುತ್ತವೆ. ಅಲೆದೇವರು ಅಲೆಕುಣಿ (ಅಗ್ನಿಕುಂಡ) ಹಾಯುವ ಮೂಲಕ ಅಲೆದೇವರ ಪವಾಡ ಮತ್ತು ಹೇಳಿಕೆಗಳು ಪ್ರಾರಂಭವಾಗುತ್ತವೆ. ಭಕ್ತರು ತಮ್ಮ ಇಷ್ಟಾರ್ಥಗಳ ಸಿದ್ಧಿಗಾಗಿ ಅಲೆದೇವರಲ್ಲಿ ಬೇಡಿಕೊಳ್ಳುತ್ತಾರೆ. ಅದಕ್ಕೆ ಕುದುರಿ (ಅಲೆದೇವರು ಹೊತ್ತ ವ್ಯಕ್ತಿ) ಅವರ ಹರಕೆ ಈಡೇರಲು ಮಸೀದಿಗೆ ನಡೆದುಕೊಳ್ಳುವುದು ಸೇರಿದಂತೆ ವಿವಿಧ ಆಚರಣೆ ಹೇಳುತ್ತಾರೆ. ಶರಣರಿಗೆ ಬಾಯಿ ಇರುವುದಿಲ್ಲ. ಕೇವಲ ಕೈಬಾಯಿ ಸೊನ್ನೆಗಳಿಂದ (ಹಾವಭಾವಗಳಿಂದ) ಹೇಳುತ್ತಾರೆ. ಅಲೆದೇವರ ಹೇಳಿಕೆಗಳಿಂದ ಭಕ್ತರ ಹರಕೆ ಈಡೇರಿದೆ. ಮಕ್ಕಳಿಲ್ಲದವರಿಗೆ ಮಕ್ಕಳಾಗಿವೆ. ಕಾಯಿಲೆ ಇದ್ದವರು ವಾಸಿಯಾಗಿದ್ದಾರೆ. ಹೀಗೆ ಅಲೆದೇವರಲ್ಲಿ ಗ್ರಾಮದ ಎಲ್ಲಾ ಭಕ್ತರು ಹರಕೆ ಹೊರುತ್ತಾರೆ. ಇತ್ತ ಅಲೆದೇವರ ಮುಂದೆ ಹೆಜ್ಜೆಮೇಳ ಪ್ರಾರಂಭವಾಗುತ್ತದೆ. ಮೊಹರಂ ದಿನ ರಾತ್ರಿ ೧೨-೧ ಗಂಟೆಗೆ ದೇವರು ಹೊಳೆಗೆ ಹೋಗುವ ಮೂಲಕ ಮೊಹರಂ ಕೊನೆಗೊಳ್ಳುತ್ತದೆ. ಚಂಗೇವು, ಸೂಸಲ ಎಡೆ ಕೊಡುತ್ತಾರೆ. ಈ ಹಬ್ಬದಲ್ಲಿ ಹಿಂದುಗಳ ಪಾತ್ರವು ಪ್ರಧಾನವಾಗಿದ್ದು ಇದು ಗ್ರಾಮದಲ್ಲಿ ಹಿಂದೂ ಮುಸ್ಲಿಂ ಸಾಮರಸ್ಯಕ್ಕೆ ಅನುವು ಮಾಡಿ ಕೊಟ್ಟಿದೆ ಎಂದು ಹೇಳಬಹುದು.

ಹೋಳಿಹಬ್ಬ

ಹೋಳಿ ಆಡದ ನಾಡು ಹಾಳಾತೋ ಹಳ್ಯಾತೋ
ಗೋಳಾತೋ ಜನರ ಜಿನಗಾಗಿ । ಮಳಿಹೋಗಿ
ಬೀಳಾತೋ ಭೂಮಿ ಬರಗಾಲ

ಎಂಬ ಹೋಳಿ ಹಾಡು ಹೋಳಿ ಆಚರಣೆಯ ಮಹತ್ವವನ್ನು ತಿಳಿಸುತ್ತದೆ. ಹೋಳಿಹಬ್ಬದ ಆಚರಣೆಯ ಹಿನ್ನೆಲೆಗೆ ಹಲವು ಪುರಾಣ ಕಥೆಗಳಿವೆ. ಶಿವಪಾರ್ವತಿ ಓಲಗದಲ್ಲಿ ಕುಳಿತಾಗ ಶಿವ ಪ್ರಪಂಚದಲ್ಲಿ ಯಾರು ಚೆಲುವರು ಎಂದು ಕೇಳಿದನಂತೆ. ಆಗ ಪಾರ್ವತಿ ಕಾಮನೇ ಅಧಿಕ ಚೆಲುವ ಎಂದಳಂತೆ. ಇದರಿಂದ ಕೋಪಗೊಂಡ ಶಿವ ಕಾಮನನ್ನು ಸುಟ್ಟು ಭಸ್ಮ ಮಾಡುತ್ತಾನೆ.[೧೧]

ಸಿಟ್ಟಿಗೇಳುತ ಶಿವನು ಬಿಟ್ಟಾನ ಉರಿಗಣ್ಣು
ಸುಟ್ಟು ಬೂದ್ಯಾದ ಕಾಮಣ್ಣ । ರತಿದೇವಿ
ಹೊಟ್ಟೆ ಬಡಕೊಂಡ ಅಳತಾಳ ॥

ಗ್ರಾಮದಲ್ಲಿ ಹೋಳಿಹಬ್ಬವು, ಶಿವರಾತ್ರಿ ಅಮವಾಸ್ಯೆ ಕಳೆದ ನಂತರ ಮಕ್ಕಳು ಹಲಿಗೆ ಬಡಿಯುವುದರೊಂದಿಗೆ ಪ್ರಾರಂಭವಾಗುತ್ತದೆ. ಕಾಮ ದಹನದ ಮೂರು ದಿನ ಮೊದಲು ಕಾಮನನ್ನು ಕೂಡಿಸುವುದರೊಂದಿಗೆ, ಹೋಳಿಹಬ್ಬ ಅಧಿಕೃತವಾಗಿ ಆರಂಭವಾಗುತ್ತದೆ. ಕಾಮನ ಮೂರ್ತಿಯನ್ನು ಕೂಡಿಸಿದರೆ ಗಂಡು ಮಗು ಹುಟ್ಟುತ್ತದೆ ಎಂಬ ನಂಬಿಕೆ ಇದೆ. ಕಾಮ ದಹನಕ್ಕಾಗಿ ಮಕ್ಕಳು ಕುಳ್ಳನ್ನು ಕಳುವು ಮಾಡಿದರೆ, ದೊಡ್ಡವರು ಹಣ ಸಂಗ್ರಹಿಸುತ್ತಾರೆ. ಕಾಮ ದಹನದ ಮುನ್ನಾ ದಿನ ಕಾಮನಿಗೆ ಶ್ಯಾವಿಗೆ ನೈವೇದ್ಯ ಮಾಡುತ್ತಾರೆ. ಇದು ಕಾಮ-ಹೋಳಿಯರ ಸಂಬಂಧದ ಸೂಚಕವಾಗಿರಬಹುದು. ಕಾಮ ಮೆರವಣಿಗೆ ಹಲಗೆ ವಾದನ ಮತ್ತು ಹಾಡುಗಳ ಮೂಲಕ ನಡೆಯುವುದು ಕಾಮ ದಹನದ ಮುನ್ನಾ ರಾತ್ರಿ ಹ್ಯಾಂವಕ್ಕೆ ಬಿದ್ದು (ಸ್ಪರ್ಧೆಗೆ ನಿಂತು) ಕಾಮರತಿಯರ ಸಂಬಂಧದ ಹಾಡುಗಳನ್ನು ಹೇಳುತ್ತಾರೆ. ಅದರಲ್ಲಿ ಅಶ್ಲೀಲ ಹಾಡುಗಳೇ ಹೆಚ್ಚು

ಊರ ಮುಂದಿನ ತ್ವಾಟಾ ನೀ ಮಾಡೋ ನನಗೆಣೆಯ
ನೀರ ತರಲಾಕ ಬರತೀನಿ। ನಿನಗೂಡ
ಯಾರಿಲ್ಲದಾಗ ಇರತೀನಿ
ಸೂಳೀಗಿ ಹ್ವಾದಾವ ಏನಾದ ಎಂತಾದ
ಕಾಳ ನಾಯಾದ ಕಪಿಯಾದ । ಆ ಮುಳಾ
ಸೂಳಿ ಕಾಲೀಗಿ ಕೆರವಾದೊ
....

ಹೀಗೆ ಹೋಳಿ ಹಾಡು ಅಶ್ಲೀಲವಾಗಿರುವುದರಿಂದ ಆಚರಣೆಯಲ್ಲಿಯೂ ಅಶ್ಲೀಲತೆ ಇರುವುದರಿಂದ ಇದನ್ನು 'ಹಲಕಟ್ಟರ ಹಬ್ಬ' ಎಂದು ಕರೆಯುತ್ತಾರೆ.[೧೨] ಆದರೆ ಸೊರಟೂರ

ಗ್ರಾಮದಲ್ಲಿ ಕೇವಲ ಲೈಂಗಿಕ ಆಸಕ್ತಿಯ ಪ್ರಚೋದನಕಾರಿ ಹಾಡುಗಳಿರದೇ ನೀತಿ ಬೋಧಕ ಹಾಗೂ ದೇವರ ಹಾಡುಗಳನ್ನು ಹೋಳಿ ಹಬ್ಬದಲ್ಲಿ ಹಾಡುವುದು ವಿಶೇಷವಾಗಿದೆ.

ಊರ ದ್ಯಾಮವ್ವನ ಕುರಿತು ಹೋಳಿ ಹಾಡು

ಸೊರಟೂರ ಊರಾಗ ಸೆಡಗರ ದ್ಯಾಮವ್ವ
ಹೊಡಿಯವ್ವ ರಥವ ಹೊರಿಯಾಕ
ಮೂಡಲ ದಿಕ್ಕಿಗೆ ಹೊಂಟಾಳ ದ್ಯಾಮವ್ವ
ನಾಲಿಗಿ ಚಾಚ್ಯಾಳ ಏಳು ಸಮುದ್ರ
ಗದಗುಟ್ಟಿ ನಡಗ್ಯಾವ ಗುಡಿಗೋಪುರ
ಕಾರಿಕೊಂಡು ಸಾಯತಾರ ಊರಾನ ಜನರ
ಗದಗುಟ್ಟಿ ನಡಗ್ಯಾರ ಪರಂಗಿಯರ
ನಿಲ್ಲು ನಿಲ್ಲಿಸು ನಿನ್ನ ರಥವ
ಹಟ ಮಾಡ ಬ್ಯಾಡ ಜಗವ
ಬಡವರು ಬಂದಾರ ಭಕುತಿಗೆ.

ಹೀಗೆ ಭಯಭಕ್ತಿ ಪ್ರಧಾನ ಹಾಗೂ ರಾಮಾಯಣ, ಮಹಾಭಾರತದ ಪೌರಾಣಿಕ ಹಾಡುಗಳನ್ನು ಹಾಡುತ್ತಾರೆ. ಆದರೆ ಪ್ರಚೋದನಕಾರಿ ಅಶ್ಲೀಲ ಹಾಡುಗಳೇ ಅಧಿಕವಾಗಿರುತ್ತವೆ. ಅಶ್ಲೀಲವೆಂಬುದನ್ನು ಪುನರ್‌ಪರಿಶೀಲಿಸಿದರೆ ಅದು ಶೀಲವಾಗುತ್ತದೆ. ಏಕೆಂದರೆ ಹೋಳಿ ಹಾಡಿನಲ್ಲಿ ಮೊದಲು ಲೈಂಗಿಕ ಪ್ರಚೋದನಕಾರಿ ಹಾಡನ್ನು ಹಾಡಿ, ಕೊನೆಗೆ ಅದು ತಪ್ಪು ಎಂಬ ನೀತಿ ಬೋಧಕ ಹಾಡುಗಳು ಅದರಲ್ಲಿರುತ್ತವೆ. ಅದನ್ನು ಮೊದಲಿನ ಎರಡು ತ್ರಿಪದಿಗಳಲ್ಲಿ ಗಮನಿಸಬಹುದು. ಹೀಗೆ ಇಡೀ ರಾತ್ರಿ ಹಾಡಿನದೇ ಕಾರುಬಾರು. ಬೆಳಿಗ್ಗೆ ೪ ಗಂಟೆಗೆ ಕಾಮ ದಹನವಾಗುತ್ತದೆ. ಅನಂತರ ಬಣ್ಣದ ಓಕುಳಿ ಆಟ ಪ್ರಾರಂಭವಾಗುತ್ತದೆ. ಹಾಗೆಯೇ ಕಾಮನು ಸತ್ತ ಪ್ರತೀಕವಾಗಿ ಹೆಣದ ವೇಷಧಾರಿಗಳು ಹಾಗೂ ರತಿ ಪ್ರಲಾಪಿಸುವ ಹೆಣ್ಣಿನ ವೇಷಧಾರಿಗಳ ಮೆರವಣಿಗೆಯು ಹಲಗೆ, ವಾದ್ಯ, ಹೋಳಿ ಹಾಡಿನಿಂದ ನಡೆಯುತ್ತದೆ. ಆದರೆ ಕಾಮನು ಸಮಾಜಬಾಹಿರವಾಗಿ ರತಿಯೊಂದಿಗೆ ಸಂಬಂಧ ಹೊಂದಿದ್ದರಿಂದ ಸಾಯಬೇಕಾಯಿತು. ಅದನ್ನು ಸಮಾಜ ವಿರೋಧಿಸಿತ್ತು ಎಂಬ ಕಥೆ ಇದೆ. ಆದರೆ ಕಾಮ ದಹನದ ಬೆಂಕಿಯಿಂದಲೇ ಅಂದು ಗ್ರಾಮದಲ್ಲಿ ಎಲ್ಲರ ಮನೆಯಲ್ಲಿ ಅಡುಗೆ ಪ್ರಾರಂಭವಾಗುತ್ತದೆ. ಹಾಗಾದರೆ ಸಮಾಜಕ್ಕೆ ಬೇಡವಾದ ಕಾಮದಹನದ ಬೆಂಕಿ ಏಕೆ ಪವಿತ್ರವಾಯಿತು ಎಂಬ ಪ್ರಶ್ನೆ ಮೂಡುತ್ತದೆ. ಕಾಮನು ಸತ್ತ ದುಃಖಕ್ಕಾಗಿ ಈ ಹಬ್ಬವನ್ನು ಯುವಕರು ಹೊಯಿಕೊಳ್ಳುತ್ತಾ ಆಚರಿಸುತ್ತಾರೆ. ಆದರೆ ಇದರಲ್ಲಿ ಬಣ್ಣದ ಓಕುಳಿಯ ಮೂಲಕ ಸಂಭ್ರಮಿಸುವುದೇಕೆ ಎಂಬ ಪ್ರಶ್ನೆಯು ಮೂಡುತ್ತದೆ. ಒಟ್ಟಾರೆ ಇಂತಹ ಪ್ರಶ್ನೆಗಳಿಗೆ ಕೆಲವು ಕಾರಣಗಳು ಇರುತ್ತವೆಯಾದರೂ ಆಚರಣೆಗಳ ನಾವೀನ್ಯತೆ ಪಡೆಯುತ್ತವೆ ಎಂತಲೂ ಹೇಳಬಹುದು. ಏಕೆಂದರೆ ಇತ್ತೀಚಿನ ಕಾಲಘಟ್ಟದಲ್ಲಿ ಯುವಕರು ಮದ್ಯಪಾನ ಸೇವನೆಯೇ ಪ್ರಧಾನವೆಂಬಂತೆ ಆಚರಣೆ ಮಾಡುತ್ತಿದ್ದು ತಂಟೆ-ತಕರಾರು, ಒತ್ತಾಯಪೂರ್ವಕವಾಗಿ ಸಾರ್ವಜನಿಕರಿಂದ ಹಣ ವಸೂಲಿ ಮುಂತಾದ ಅಹಿತಕರ ಚಟುವಟಿಕೆಗಳು ಹೋಳಿ ಹಬ್ಬದ

ಮೂಲ ಆಶಯಕ್ಕೆ ಧಕ್ಕೆ ತರುತ್ತಿವೆ. ಆದ್ದರಿಂದ ಜನಪದ ಕಥೆ ಪುರಾಣ ಪೌರಾಣಿಕ ಹಿನ್ನೆಲೆಯಿಂದ ಬಂದ ಈ ಹಬ್ಬವನ್ನು ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾಗಿ ಆಚರಿಸುವ ಮೂಲಕ ಭಾರತೀಯ ಸಾಂಸ್ಕೃತಿಕ ವೈವಿಧ್ಯತೆಯ ಭವ್ಯಪರಂಪರೆಯನ್ನು ಉಳಿಸುವ ಅಗತ್ಯವಿದೆ.

೬.೨. ಜೀವನಾವರ್ತನದ ಆಚರಣೆಗಳು

ಯಾವುದೋ ಒಂದು ಅಗೋಚರವಾದ ಶಕ್ತಿ ನಮ್ಮನ್ನು ಕಾಯುತ್ತಿರುತ್ತದೆ ಎಂದು ಪ್ರತಿಯೊಬ್ಬ ಮನುಷ್ಯನೂ ಆಚರಣೆಯನ್ನು ಕೈಗೊಳ್ಳುತ್ತಾರೆ. ಆ ಹಿನ್ನೆಲೆಯಲ್ಲಿ ನೋಡಿದಾಗ ಆಚರಣೆಗಳಿಲ್ಲದ ಮನುಷ್ಯನೇ ಇಲ್ಲ ಎಂದು ಹೇಳಬಹುದು. ಹುಟ್ಟಿದ ಮಗುವಿನಿಂದ ಹಿಡಿದು ಸಾಯುವ ತನಕ ಆಚರಣೆಗಳೇ ಜೀವನದ ಜೊತೆಯಾಗಿರುತ್ತವೆ. ನಾವು ಎಷ್ಟೇ ವಿಚಾರವಂತರಾಗಿರುತ್ತೇವೆಯಾದರೂ ಸಮಾಧಾನಕ್ಕೋಸ್ಕರವಾದರೂ ಆಚರಣೆಯನ್ನು ಅನುಸರಿಸುತ್ತೇವೆ. ಜೀವನವೇ ಒಂದು ಆಚರಣೆ ಎನ್ನಬಹುದು.[೧೩] ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದಲ್ಲಿನ ಜೀವನಾವರ್ತನ ಆಚರಣೆಗಳ ಪ್ರಮುಖ ಅಂಶಗಳನ್ನು ಗಮನಿಸಲಾಗಿದೆ. ಬೇರೆ ಬೇರೆ ಸಮುದಾಯಗಳಲ್ಲಿ ಆಚರಣೆಗಳು ವಿಭಿನ್ನವಾಗಿರುತ್ತವೆ. ಆದರೂ ಕೆಲವು ಆಚರಣೆಗಳು ಎಲ್ಲಾ ಸಮುದಾಯಗಳಲ್ಲಿ ಸಾಮಾನ್ಯವಾಗಿರುತ್ತವೆ.

ಸೀಮಂತ ಕಾರ್ಯ (ಸೀರೆ ಮಾಡುವುದು)

ಗ್ರಾಮದ ಜನಪದರು ಸೀಮಂತ ಕಾರ್ಯವನ್ನು 'ಸೀರಿ ಮಾಡುವುದು' ಎಂದು ಹೇಳುತ್ತಾರೆ. ಅಂದರೆ ಪ್ರಥಮಸಾರಿ ಗರ್ಭಿಣಿಯಾದ ಹೆಣ್ಣು ಮಗಳಿಗೆ ತವರು ಮನೆಯವರು ಈ ಆಚರಣೆಯನ್ನು ಮಾಡುತ್ತಾರೆ. ಮಗಳಿಗೆ ಸೀರೆ ಕುಪ್ಪಸ ಹಾಗೂ ಅಳಿಯನಿಗೆ ದೋತರ, ದೊಡ್ಡಂಗಿ ಅಥವಾ ಪ್ಯಾಂಟ್ ಶರ್ಟ್‌ಗಳನ್ನು ತೆಗೆದುಕೊಂಡು ತವರಿನ ಬಳಗದವರು ಹೆಣ್ಣಿನ ಗಂಡಿನ ಮನೆಗೆ ಬಂದು ಮಗಳು ಮತ್ತು ಅಳಿಯನನ್ನು ಕೂಡಿಸಿ ಗ್ರಾಮದ ಸಮುದಾಯದವರು ಆರತಿ ಮಾಡುವ ಕಾರ್ಯವೇ ಸೀಮಂತಕಾರ್ಯ. ಆಗ ಗ್ರಾಮದ ಜನರಿಗೆ ಊಟ ಹಾಕಿಸಲಾಗುತ್ತದೆ. ಈ ಎಲ್ಲಾ ಊಟದ ಖರ್ಚನ್ನು ಹೆಣ್ಣಿನ ಮನೆಯವರು ಭರಿಸುವ ಪದ್ಧತಿ ಇದೆ. ಗಂಡಿನ ಮನೆಯವರು ಊರಿಗೆ ಊಟ ಹಾಕುವಂತೆ ದೊಡ್ಡ ಪ್ರಮಾಣದಲ್ಲಿ ಊಟದ ವ್ಯವಸ್ಥೆ ಮಾಡಿದರೆ ಹೆಣ್ಣಿನ ಮನೆಯವರು ನಿರ್ದಿಷ್ಟ ಪ್ರಮಾಣದಲ್ಲಿ ಊಟದ ಖರ್ಚನ್ನು ಕೊಡುತ್ತಾರೆ. ಆ ಸಂದರ್ಭದಲ್ಲಿ ಸಮುದಾಯದವರೆಲ್ಲ ಸೇರಿ ಆರತಿ ಮಾಡಿ ಸೋಬಾನ ಪದ ಹಾಡುತ್ತಾರೆ.

ಬಯಕೆ ಬುತ್ತಿ ತರುವುದು (ಬಾಕಿಬುತ್ತಿ)

ಸೀಮಂತ ಕಾರ್ಯ ಪೂರ್ವದಲ್ಲಿ ಈ ಆಚರಣೆ ನಡೆಯುತ್ತದೆ. ಜನಪದರ ಬಾಯಲ್ಲಿ ಇದು 'ಬಾಕಿಬುತ್ತಿ' ಅಂದರೆ ಬಸುರಿಯಾದ (ಗರ್ಭಿಣಿ) ಸ್ತ್ರೀಗೆ ಹಲವಾರು ಬಯಕೆಗಳಿರುತ್ತವೆ. ಅದನ್ನು ತೀರಿಸುವುದಕ್ಕಾಗಿ ತವರುಮನೆಯವರು ಖರ್ಜಿಕಾಯಿ, ಸುಳ್ಳಹೋಳಿಗೆ, ಚಕ್ಕಲಿ, ಉಂಡಿ, ರೊಟ್ಟಿ, ಚಪಾತಿ, ವಿವಿಧ ಬಗೆಯ ಪಲ್ಯ, ಮೊಸರನ್ನ(ಬುತ್ತಿ) ಮುಂತಾದ ಪದಾರ್ಥಗಳನ್ನು ಕಟ್ಟಿಕೊಂಡು ಬಂದಿರುತ್ತಾರೆ. ಈ ಆಚರಣೆ ಸೀರೆ ಮಾಡುವ ಪೂರ್ವದಲ್ಲಿ ಮಾಡುವ ಆಚರಣೆಯಾಗಿದೆ. ಈ ಸಂದರ್ಭದಲ್ಲಿ ತೆಲಿಗೆರೆದು ಬಳಿ ಇಡಿಸುವ ಕಾರ್ಯವನ್ನು ಮಾಡುತ್ತಾರೆ.

ಆಗ ತಂದ ಬಯಕೆ ಬುತ್ತಿಯನ್ನು ಗ್ರಾಮದ ಜನರಿಗೆ ಹಂಚುತ್ತಾರೆ. ಇಲ್ಲಿ ಗರ್ಭಿಣಿ ಸ್ತ್ರೀಗೆ ಬಯಕೆ ತೀರಿಸುವ ಹಾಗೆ ಈ ಸಿಹಿಸುದ್ದಿ ತಿಳಿಸಲು ಎಲ್ಲರಿಗೂ ಸಿಹಿ ಹಂಚುವುದು ಈ ಕಾರ್ಯದ ಉದ್ದೇಶವಾಗಿದೆ. ಆದರೆ ಇತ್ತೀಚಿನ ಕಾಲಘಟ್ಟದಲ್ಲಿ ಈ ಆಚರಣೆಗಳು ನಾವೀನ್ಯತೆ ಪಡೆಯುತ್ತಿವೆ ಅಂದರೆ ತವರುಮನೆಯ ಹಾಗೂ ಗಂಡನಮನೆಯ ಎಲ್ಲ ಬಳಗ ಸೇರಿ ಬಹು ವೈಭವದಿಂದ ಆಚರಿಸುವ ಆಚರಣೆ ಇದಾಗಿತ್ತು. ಆದರೆ ಇಂದು ಕೆಲ ಮುಂದುವರೆದ ಔದ್ಯೋಗಿಕ ಕುಟುಂಬಗಳಲ್ಲಿ ಪುರುಷ ತನ್ನ ಗೆಳೆಯರಿಗಾಗಿ ಪಾರ್ಟಿ ಏರ್ಪಡಿಸುವುದು ಸೇರಿದಂತೆ ಹಲವು ಬದಲಾವಣೆ ಕಾಣುತ್ತಿವೆ. ಆದರೆ ಗ್ರಾಮದಲ್ಲಿ ಇದು ಇನ್ನೂ ಸಾಂಪ್ರದಾಯಿಕ ಆಚರಣೆಯಾಗಿ ರೂಢಿಯಲ್ಲಿದೆ.

ಚಟಿಗೆವ್ವನ ಪೂಜೆ

ಹೆರಿಗೆಯಾದ ೫ ದಿನಕ್ಕೆ ಈ ಆಚರಣೆಯನ್ನು ಮಾಡಲಾಗುತ್ತದೆ. ಸೊರಟೂರ ಗ್ರಾಮದಲ್ಲಿ ಹೆರಿಗೆಯನ್ನು ಸಾಂಪ್ರದಾಯಿಕವಾಗಿ ಸೂಲಗಿತ್ತಿಯರಿಂದ ಹೆರಿಗೆ ಮಾಡಿಸುತ್ತಾರೆ. ಇತ್ತೀಚೆಗೆ ಆಸ್ಪತ್ರೆಗಳಲ್ಲಿಯ ಹೆರಿಗೆ ಆಗುತ್ತದೆ. ಆದರೂ ಸೂಲಗಿತ್ತಿಯರು ಹೆರಿಗೆ ಸಮಯದಲ್ಲಿ ಸೂಸುತ್ರ ಹೆರಿಗೆಗೆ ತಮ್ಮ ಸಾಂಪ್ರದಾಯಿಕ ಕೆಲಸ ಕಾರ್ಯಗಳನ್ನು ಮಾಡುತ್ತಾರೆ(ಸೂಲಗಿತ್ತಿಯರು ಎಂದರೆ ಹೆರಿಗೆ ಪರಿಣಿತಿ ಹೊಂದಿದವರು ಎಂದರ್ಥ). ಹೆರಿಗೆಯಾದ ನಂತರ ೫ ದಿನಕ್ಕೆ ಈ ಆಚರಣೆ ಮಾಡುತ್ತಾರೆ. ಅಂದರೆ ಚಟ್ಟಿಗೆ ಅಂದರೆ 'ಹಣೆ ಬರಹ ಬರೆಯುವಳು' ಎಂದರ್ಥ. ಮಗುವಿನ ಜೀವನದ ಭವಿಷ್ಯದ ಎಲ್ಲಾ ಸಿದ್ಧಿ ಇದೇ ದಿನ ಆಗುತ್ತದೆ ಎಂಬ ನಂಬಿಕೆ ಜನಪದರಲ್ಲಿದೆ. ಆದ್ದರಿಂದ ಆ ದಿನ ಒಂದು ದೀಪ ಹಚ್ಚಿಟ್ಟು ಸಿಹಿ ಹುಗ್ಗಿ ನೈವೇದ್ಯ ಮಾಡುತ್ತಾರೆ. ಸೂಲಗಿತ್ತಿಗೆ ಉಡಿಯಕ್ಕಿ (ಹೆರಿಗೆ ಮಾಡಿಸಿದಕ್ಕೆ ಉಪಕಾರವಾಗಿ ಜೋಳ ಅಥವಾ ಅಕ್ಕಿ ಉಡಿಯಲ್ಲಿ ಕೊಡುವರು) ಹಾಕುತ್ತಾರೆ. ಹೀಗೆ ಈ ಆಚರಣೆ ಸರಳವಾಗಿ, ಸಂಕ್ಷಿಪ್ತವಾಗಿ ನಡೆಯುತ್ತದೆ.

ನಾಮಕರಣ

ಗ್ರಾಮದ ಜನಪದರು ಇದನ್ನು 'ಹೆಸರಿಡುವ ಕಾರ್ಯ' ಎಂದೇ ಹೇಳುತ್ತಾರೆ. ಗ್ರಾಮದ ಹಿಂದುಗಳು ೧೩ನೇ ದಿನಕ್ಕೆ ಹೆಸರಿಡುವ ಕಾರ್ಯ ಮಾಡುತ್ತಾರೆ. ಮುಸ್ಲಿಮರು ಒಂದು ತಿಂಗಳಿಗೆ ಇದನ್ನು 'ಚ್ಚಿಲ್ಲಾ' ಎಂಬ ಹೆಸರಿನಲ್ಲಿ ಮಾಡುತ್ತಾರೆ. ಹೆಸರಿಡುವ ದಿನ ಮನೆಯವರು ಓಣಿಯ ಎಲ್ಲಾ ಜನರಿಗೂ 'ಹೆಸರಿಡಾಕ ಬರ್ರಿ', 'ಹೆಸರಿಡಾಕ ಬರ್ರಿ' ಎಂದು ಕರೆಯುವ ರೂಢಿ ಇದೆ. ಮಗುವಿನ ಸೋದರತ್ತೆಯಾಗುವವಳು ಹೆಸರಿಡಬೇಕು ಎಂಬ ನಿಯಮವಿದೆ. ಮೊದಲು ದೇವರ ಹೆಸರನ್ನು ಅಥವಾ ಹಿರಿಯರ ಹೆಸರನ್ನು ಇಡಲಾಗುತ್ತದೆ. ಉದಾ:- 'ಶರಣಬಸಪ್ಪ. ಶರಣಬಸಪ್ಪ. ಕುಟೇಟೆಕುಡರ್' ಎಂದು ಹೆಸರಿಡುವವಳು ೨-೩ ಸಲ ಹೇಳುತ್ತಾಳೆ. ಆಗ ಹಿಂದಿದ್ದವರು ಅವಳ ಬೆನ್ನಿಗೆ ಹೊಡೆಯುವ ಪದ್ಧತಿ ಇದೆ. ಇಲ್ಲಿ 'ಕುಟೇಟೆಕುಡ್ರ್'[೧೮] ಎಂಬುದು ಆ ಮಗುವಿನ ಹೆಸರನ್ನು ಮಗುವಿನ ಕಿವಿಯಲ್ಲಿ ಅದಕ್ಕೆ ಕೇಳುವಂತೆ ಹೇಳುವುದೇ ಅದರ ಉದ್ದೇಶವಾಗಿದೆ. ಹೆಸರಿಡುವಾಗ ಜೋಗುಳ ಪದ ಹಾಡುತ್ತಾರೆ. ಹೆಸರಿಡುವ ಕಾರ್ಯಕ್ಕೆ

ಬಂದವರೆಲ್ಲ ಅವರು ತಮ್ಮ ಮನೆಯಿಂದ ಒಂದು ಸಣ್ಣ ತಟ್ಟೆಯಲ್ಲಿ ಜೋಳ ಅಥವಾ ಅಕ್ಕಿ ತಂದಿರುತ್ತಾರೆ. ಅದಕ್ಕೆ ಪ್ರತಿಯಾಗಿ ಆ ಪ್ಲೇಟ್‌ನಲ್ಲಿ ಚುರಮರಿ ಹಾಕಿ ಕೊಡುತ್ತಾರೆ. ಇದಕ್ಕೆ ಆ ಮಗುವಿನ ಗುಗ್ಗರಿ ಎಂದು ಹೇಳುವರು. ಆದ್ದರಿಂದ ಜನಪದರಲ್ಲಿ ಹೆಸರಿಟ್ಟು ಹೇಲ್ ಗುಗ್ಗರಿ ತಿನ್ನಾಕ ಬಂದಿದ್ದೇನು? ಎಂಬ ಮಾತಿದೆ. ಅಂದರೆ ಮಗುವಿಗೆ ಕರಿಯ ಗಿಡ್ಡ ಮುಂತಾದ ಅನ್ವರ್ಥಕನಾಮ ಬಳಸಿ ಹೇಳುವ, ಹೀಯಾಳಿಸುವವರಿಗೆ ಪ್ರತಿಯಾಗಿ ಈ ಮಾತು ಹೇಳುತ್ತಾರೆ. ಹೀಗೆ ಹೆಸರಿಡುವ ಕಾರಣವೂ ಬಹು ವಿಶಿಷ್ಟತೆಯಿಂದ ಕೂಡಿದೆ. ಆದರೆ ಈ ಹಿಂದೆ ಗ್ರಾಮದಲ್ಲಿ ಕಲ್ಲಪ್ಪ, ಮಲ್ಲಪ್ಪ, ಶರಣಬಸಪ್ಪ, ಈರಪ್ಪ, ದ್ಯಾಮವ್ವ, ದುರಗವ್ವ, ಗಂಗವ್ವ, ಪಾರ್ವತೆವ್ವ ಮುಂತಾದ ದೇವರ ಹೆಸರುಗಳನ್ನು ಇಡಲಾಗುತ್ತಿತ್ತು. ಆದರೆ ಇಂದು ಆಕಾಶ್, ಕುಮಾರ, ಕಿರಣ್, ಸುಧಾ, ರೇಷ್ಮಾ, ಕೀರ್ತಿ, ಆರತಿ ಮುಂತಾದ ನವನವೀನ ಹೆಸರುಗಳನ್ನು ಇಡಲಾಗುತ್ತದೆ. ಇಂದು ನಾಮಕರಣ ಶಾಸ್ತ್ರಕ್ಕಿಂತ ಮಗುವಿನ ಜನನ ನೋಂದಣಿ ಮಾಡಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆ ಬಂದಿದೆ. ಇದು ನಮ್ಮ ಸಂಸ್ಕೃತಿಯ ಸ್ಥಿತ್ಯಂತರ ಎಂದು ಹೇಳಬಹುದು.

ಉಪನಯನ

ಉಪನಯನ/ಮುಂಜಿ/ಜವಳ/ಅಯ್ಯಾಚಾರ/ಖತ್ನಾ ಹೀಗೆ ವಿವಿಧ ಹೆಸರುಗಳಿಂದ ನಡೆಯುವ ಈ ಆಚರಣೆ ಒಂದು ಧಾರ್ಮಿಕ ಸಂಸ್ಕಾರವಾಗಿದೆ. ವಿವಿಧ ಧರ್ಮಿಯರು ವಿಭಿನ್ನ ರೀತಿಯಲ್ಲಿ ಇದನ್ನು ಆಚರಿಸುತ್ತಾರೆ. ಉಪನಯನವನ್ನು ಬ್ರಾಹ್ಮಣರು ಹಾಗೂ ವಿಶ್ವಕರ್ಮರು ಮಾಡಿಸುತ್ತಾರೆ. ಉಪನಯನದ ದಿನ ಮಗುವಿಗೆ ಸಾಂಪ್ರದಾಯಿಕವಾಗಿ ವಿವಿಧ ಆಚರಣೆ ಮಾಡಿಸಿ ಗಾಯತ್ರಿ ಮಂತ್ರ ಉಪದೇಶ ಮಾಡಿಸುತ್ತಾರೆ. ವೀರಶೈವ ಸಮುದಾಯದಲ್ಲಿ 'ಅಯ್ಯಾಚಾರ' ಮಾಡಿಸುತ್ತಾರೆ. ಇಲ್ಲಿ ಸ್ವಾಮಿಯಿಂದ ಮಗುವಿಗೆ ಲಿಂಗಧಾರಣೆ ಮಾಡಿಸಿ ಪಂಚಾಕ್ಷರಿ ಮಂತ್ರ ಉಪದೇಶ ಮಾಡುತ್ತಾರೆ. ಇನ್ನುಳಿದ ಹಿಂದೂ ತಳಸಮುದಾಯಗಳಲ್ಲಿ 'ಜವಳ ತೆಗೆಸುವುದು' ಎಂಬ ಆಚರಣೆ ಇದೆ. ಅವರು ತಮ್ಮ ಮನೆದೇವರಿಗೆ ಹೋಗಿ ಅಲ್ಲಿ ಪೂಜಾರಿಯಿಂದ ಮಗುವಿನ ತಲೆಯಲ್ಲಿ ನಿಯಮ (ನೇಮ)ಕ್ಕಾಗಿ ಒಂದೆರಡು ಕೂದಲು ತೆಗೆಯುತ್ತಾರೆ. ನಂತರ ಅಂಗಾರ (ಹಣೆಗೆ ತಿಲಕ ಅಥವಾ ಕುಂಕುಮ) ಹಚ್ಚಿ ನವಿಲುಗರಿಯಿಂದ ಆಶೀರ್ವದಿಸುತ್ತಾರೆ. ಮುಸ್ಲಿಂ ಸಮುದಾಯದಲ್ಲಿ 'ಖತ್ನಾ' ಮಾಡುವ ಪದ್ಧತಿ ಆಚರಣೆಯಲ್ಲಿದೆ. ಅಂದರೆ ಗಂಡು ಮಗುವಿನ (ಏಳು ವರ್ಷದ ಒಳಗೆ) ಶಿಶ್ನದ ಮುಂದಿನ ಚರ್ಮವನ್ನು ಕತ್ತರಿಸಿ ಇಸ್ಲಾಂ ಧರ್ಮದ ದೀಕ್ಷೆ ನೀಡುತ್ತಾರೆ.

ಋತುಮತಿಯಾದ ಕಾರ್ಯ

ಗ್ರಾಮದ ಜನಪದರಲ್ಲಿ ಇದಕ್ಕೆ 'ದೊಡ್ಡವಳಾದವಳು' ಎಂದು ಹೇಳುತ್ತಾರೆ. ಹುಡುಗಿಗೆ ಪ್ರಥಮಬಾರಿ ಋತುಸ್ರಾವ ಪ್ರಾರಂಭವಾದಾಗ ಮಾತ್ರ ಋತುಮತಿ ಕಾರ್ಯ ಮಾಡುತ್ತಾರೆ. ಸಾಮಾನ್ಯವಾಗಿ ೧೨ ರಿಂದ ೧೪ ವರ್ಷದ ಅವಧಿಯಲ್ಲಿ ಈ ಆಚರಣೆ ಬರುತ್ತದೆ. ಋತುಮತಿಯಾದವಳನ್ನು ೫ ದಿನಗಳವರೆಗೆ ಒಂದು ಮೂಲೆಯಲ್ಲಿ ಕೂಡಿಸುತ್ತಾರೆ. ಅವಳ ಊಟಕ್ಕಾಗಿ ಪ್ರತ್ಯೇಕ ಪಾತ್ರೆ ಕೊಟ್ಟಿರುತ್ತಾರೆ. ೫ ದಿನಗಳವರೆಗೆ ಅವಳನ್ನು 'ಹೊರಗಿದ್ದವಳು'

ಎಂದು ಕರೆಯುತ್ತಾರೆ. ೫ ದಿನಗಳ ನಂತರ ಸೋದರತ್ತೆ ಅವಳಿಗೆ 'ಎರೆಯುವ' (ತಲೆಸ್ನಾನ) ಕಾರ್ಯ ಮಾಡುತ್ತಾಳೆ. ಅಂದಿನಿಂದ ಅವಳು ಶುದ್ಧವಾಗುತ್ತಾಳೆ. ಅಂದಿನಿಂದ ಪ್ರತಿದಿನ ಸಾಯಂಕಾಲ ಕೂಡಿಸಿ ಆರತಿ ಮಾಡುತ್ತಾರೆ. ಮುಸ್ಲಿಂ ಸಮುದಾಯದಲ್ಲಿ ಇದನ್ನು 'ಹೂ ಮುಡಿಸುವುದು' ಎನ್ನುತ್ತಾರೆ. ಈ ಆಚರಣೆಯು ಮಗು ದೊಡ್ಡವಳಾಗಿರುವುದು ಎಲ್ಲರಿಗೂ ಗೊತ್ತಾಗಲಿ ಹಾಗೂ ಅವಳ ಮದುವೆಯ ಕುರಿತು ಯೋಚನೆ ಮಾಡಲು ಪ್ರಾರಂಭಿಸುವ ಉದ್ದೇಶದಿಂದ ಹುಟ್ಟಿಕೊಂಡಿರಬಹುದು. ಸ್ತ್ರೀ ಋತುಮತಿಯಾದಾಗ ಅವಳ ವಿವಾಹ ನಿಶ್ಚಯವಾಗುವ ಸಾಧ್ಯತೆ ಇರುತ್ತದೆ. ಅಂದರೆ ಆ ಹುಡುಗಿಯ ಸೋದರಮಾವ ಅಥವಾ ಪರಸ್ಪರ ಹಿರಿಯರ ಒಪ್ಪಿಗೆಯಾದ ವರನಿದ್ದರೆ ಅವಳು ಋತುಮತಿಯಾದ ದಿನದಂದು ವರನಿಗೆ 'ಬಣ್ಣದ ನೀರ'ನ್ನು ಹಾಕುತ್ತಾರೆ. ಇದಕ್ಕೆ 'ರಂಗಪಂಚಮಿ' ಎಂತಲೂ ಕರೆಯುವರು. ನಂತರ ಋತುಮತಿಯಾದ ಹುಡುಗಿಯನ್ನು ೯ ದಿನ ೧೧ ದಿನ ಅಥವಾ ೧೬ ದಿನಕ್ಕೆ ಎಬ್ಬಿಸುವ ಕಾರ್ಯವಿರುತ್ತದೆ. ಎಬ್ಬಿಸುವ ಕಾರ್ಯ ಎಂದರೆ ಆರತಿ ಮಾಡುವ ದಿನಗಳನ್ನು ಮುಕ್ತಾಯಗೊಳಿಸುವುದು ಎಂದು ಅರ್ಥ. ಆ ದಿನ ಹೆಣ್ಣಿನ ಕಡೆಯವರು ಅಳಿಯನಿಗೆ ಉಡುಗೊರೆ(ಬಟ್ಟೆ)ಗಳನ್ನು ತಂದು ಋತುಮತಿ ಸ್ತ್ರೀಯೊಂದಿಗೆ ಕೂಡಿಸಿ ಆರತಿ ಮಾಡುವರು. ಹೀಗೆ ಋತುಮತಿ ಆಚರಣೆಯು ದಾಂಪತ್ಯದ ಜೀವನದ ಪ್ರಾರಂಭಿಕ ಹಂತವಾಗಿ ಆಚರಿಸಲ್ಪಡುತ್ತದೆ.

ಕನ್ಯಾ ನೋಡಾಕ ಹೋಗೋದು

ವಿವಾಹ ಪೂರ್ವದಲ್ಲಿ ಗಂಡು ಹೆಣ್ಣನ್ನು ನಿಶ್ಚಯ ಮಾಡಲು ಗಂಡಿನ ಕಡೆಯವರು ಕನ್ಯೆ ನೋಡಲು ಹೋಗುತ್ತಾರೆ. ಬ್ರಾಹ್ಮಣರಲ್ಲಿ ಕನ್ಯೆಯೇ ವರನನ್ನು ನೋಡಲು ಹೋಗುತ್ತಾರೆ. ಕನ್ಯ ನೋಡಲು ಮೊದಲು ಹಿರಿಯರು ಹೋಗುತ್ತಿದ್ದರು. ಹಿರಿಯರಿಗೆ ಕನ್ಯೆ ಒಪ್ಪಿಗೆಯಾದರೆ ಅನಂತರ ವರನನ್ನು ಕಳಿಸುವುದು ಸಂಪ್ರದಾಯ. ಕನ್ಯಾ ನೋಡಲು ಹೋದಾಗ ಬಾಳೆಹಣ್ಣು, ಸಕ್ಕರೆ, ಅರಿಶಿಣ, ಕುಂಕುಮ, ಹೂ ತೆಗೆದುಕೊಂಡು ಹೋಗವುದು ಸಂಪ್ರದಾಯ. ಕನ್ಯಾ ನೋಡಲು ೫, ೯, ೧೧ ಹೀಗೆ ಬೆಸಸಂಖ್ಯೆಯ ಜನರು ಹೋಗಬೇಕು. ಆದರೆ ೭ ಜನ ಹೋಗುವಂತಿಲ್ಲ ಏಕೆಂದರೆ ಏಳು ಬೀಳು ಎಂಬ ಅಭಿಪ್ರಾಯ ಜನಪದರಲ್ಲಿದೆ. ರಕ್ತಸಂಬಂಧಿಗಳಲ್ಲಿ ಕನ್ಯಾ ನೋಡುವುದಾದರೆ ಹೆಚ್ಚಿನ ಜನಗಳು ಹೋಗುವುದಿಲ್ಲ. ಕನ್ಯೆಯ ಪರಿಶೀಲನೆಗಾಗಿ ಮನೆಯ ಸ್ವಾಮಿಗಳನ್ನು ಕರೆದುಕೊಂಡು ಹೋಗುವ ಸಂಪ್ರದಾಯವಿದೆ. ಹೀಗೆ ಕನ್ಯಾ ನೋಡುವುದು ಮದುವೆಯ ಮೊದಲ ಹಂತವಾಗಿದೆ.

ಮಾತುಕತೆ ಮುಗಿಸುವುದು (ವಿವಾಹ ನಿಶ್ಚಯ)

ಗಂಡಿನ ಕಡೆಯ ಹಿರಿಯರಿಗೆ ಹಾಗೂ ಹೆಣ್ಣಿನ ಕಡೆಯ ಹಿರಿಯರಿಗೆ ಕನ್ಯಾವರಗಳು ಪರಸ್ಪರ ಮನಸಿಗೆ ಬಂದರೆ (ಒಪ್ಪಿಗೆಯಾದರೆ) ಮಾತುಕತೆ ಮುಗಿಸುವ ಕಾರ್ಯ ನಡೆಯುತ್ತದೆ. ಈ ಮೊದಲು ವರ ಮತ್ತು ಕನ್ಯೆಯರು ತಮ್ಮ ವಿವಾಹದ ನಿಶ್ಚಯದಲ್ಲಿ ತಾವು ಯಾವ ನಿರ್ಧಾರನ್ನು ತೆಗೆದುಕೊಳ್ಳುವಂತಿರಲಿಲ್ಲ. ಹಿರಿಯರ ನಿರ್ಧಾರಕ್ಕೆ ಅವರು ಅನಿವಾರ್ಯವಾಗಿ ತಲೆಬಾಗಬೇಕಿತ್ತು. ಏಕೆಂದರೆ ಕನ್ಯಾ ಮತ್ತು ವರಗಳು ಅನುಭವಿಗಳಲ್ಲಿ ಅವರು ನಿರ್ಧಾರ

ತೆಗೆದುಕೊಳ್ಳುವಷ್ಟು ಸಬರಲ್ಲ ಎಂಬ ಭಾವನೆ ಇದಕ್ಕೆ ಕಾರಣವಾಗಿರಬಹುದು. ಆಗ ಬಾಲ್ಯ ವಿವಾಹಗಳೇ ಹೆಚ್ಚು. ಹೆಣ್ಣಿಗೆ ೧೨ ರಿಂದ ೧೪ ಹಾಗೂ ಗಂಡಿಗೆ ೧೬ ರಿಂದ ೧೮ ವರ್ಷಕ್ಕೆ ಮದುವೆಯಾಗುತ್ತಿತ್ತು. ಆದ್ದರಿಂದ ಹಿರಿಯರು ಅವರಿಗೆ ಹುಡುಗ-ಹುಡುಗಿ ಎಂದು ಹೇಳುತ್ತಾ ಹುಲ್ಲು ಬೆಂಕಿ ಅಲ್ಲಂತ ಹುಡುಗ ನೆಂಟ ಅಲ್ಲಂತ, ಎಂಬ ಅನುಭವದ ಮಾತನ್ನು ಹೇಳುತ್ತಿದ್ದರು. ಹಾಗಾಗಿ ವಿವಾಹ ನಿಶ್ಚಯ ಸಂಪೂರ್ಣ ಹಿರಿಯರಿಂದ ಕೂಡಿತ್ತು. ಇದಕ್ಕೆ ಗುಣ ಅವಗುಣಗಳೆರಡೂ ಇವೆ. ಆದರೆ ಇತ್ತೀಚೆಗೆ ವಿವಾಹ ನಿಶ್ಚಯದಲ್ಲಿ ಗಂಡು-ಹೆಣ್ಣಿನ ನಿರ್ಧಾರವೇ ಅಂತಿಮವಾಗುತ್ತಿದೆ. ಅದಕ್ಕೆ ಹಿರಿಯರು ಅನಿವಾರ್ಯವಾಗಿ ಒಪ್ಪಲೇಬೇಕಾಗಿದೆ. ಏಕೆಂದರೆ ಇದು ಕಲಿಯುಗ ಎಂದು ಹೇಳುತ್ತಾರೆ. ಇದರ ಅರ್ಥ 'ಕಾಲ ಬದಲಾಗುತ್ತದೆ' ಎಂಬ ಮಾತು ನಿಜವಾಗುತ್ತದೆಂದು ಅನ್ನಿಸುತ್ತದೆ. ಹೀಗೆ ವಿವಾಹ ನಿಶ್ಚಯ ಬದಲಾವಣೆಗೊಂಡಿರುವುದನ್ನು ಗಮನಿಸಬಹುದು. ಆದರೆ ಗ್ರಾಮದಲ್ಲಿ ಆಚರಣೆಗಳು ಸಂಪೂರ್ಣ ಬದಲಾವಣೆಗೊಂಡಿಲ್ಲ. ವರ-ಕನ್ಯಾ ಹಾಗೂ ಹಿರಿಯರೆಲ್ಲ ಸೇರಿ ನಿಶ್ಚಯ ಮಾಡುವ ವಾತಾವರಣವಿದೆ. ಮಾತುಕತೆ ಮುಗಿಸುವ ದಿನ ಹೆಣ್ಣಿನ ಕಡೆಯ ೫, ೧೦ ಜನ ಅಥವಾ ಒಂದು ಟ್ರ್ಯಾಕ್ಟರ್ ಮಂದಿ ಬರುವ ಕುಟುಂಬಗಳು ಇವೆ. ಎರಡೂ ಗ್ರಾಮದ ಹಿರಿಯರು ಸೇರಿ ಮಾತುಕತೆ ಮುಗಿಸುತ್ತಾರೆ. ಪರಸ್ಪರ ಫಲ-ತಾಂಬೂಲ ಸ್ವೀಕರಿಸುತ್ತಾರೆ. ಅನಂತರ ಕರಗೆಡಬು ಊಟ ಇರುತ್ತದೆ. ಈಗಿನ ಜನ ಸಿರಾ, ಬುಂದೆ ಮಾಡುತ್ತಾರೆ. ಆದರೆ ಊಟದ ಪ್ರಾರಂಭದಲ್ಲಿ ಶ್ಯಾವಿಗೆ ನೀಡುವುದು ನಿಯಮ. ಇದು ಗಂಡು ಹೆಣ್ಣಿನ ಮಾತುಕತೆ ಮುಗಿದ ಸಂಬಂಧದ ಸಂಕೇತವಾಗಿದೆ.

ಇಳೆ ಮಾಡುವುದು

ಮಾತುಕತೆ (ವಿವಾಹ ನಿಶ್ಚಯ) ಮುಗಿದ ನಂತರ ಗಂಡಿನ ಕಡೆಯವರು ಹೆಣ್ಣಿಗೆ ಸೀರೆ, ಕುಪ್ಪಸಗಳನ್ನು ತರುವುದು, ಹೆಣ್ಣಿನ ಕಡೆಯವರು ಗಂಡಿಗೆ ಬಟ್ಟೆ ತರುವುದು, ಇಬ್ಬರನ್ನು ಕೂಡಿಸಿ ಆರತಿ ಮಾಡುವ ಕಾರ್ಯವೇ 'ಇಳೆ ಮಾಡು'ವುದು. ಇದು ಹೆಣ್ಣಿನ ಮನೆಯಲ್ಲಿ ನಡೆಯುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಇದನ್ನು ಮಾಡುತ್ತಿಲ್ಲ. ಆದರೆ ಮದುವೆ ಸಂದರ್ಭದಲ್ಲಿಯೇ ಮದುವೆಯ ಮುನ್ನಾ ದಿನ ಈ ಕಾರ್ಯ ಮಾಡುತ್ತಾರೆ. ಈ ಆಚರಣೆಯ ಉಳಿಕೆಗಾಗಿ ಮದುವೆಯಲ್ಲಿ ಗಂಡಿನ ಕಡೆಯವರು ಇಳೆ ಸೀರೆ ಹಾಕುವ ಪದ್ಧತಿ ಇದೆ.

ಮದುವೆ

ಮದುವೆಯನ್ನು ಗ್ರಾಮದ ಜನ 'ಮದವಿ', 'ಲಗ್ನ' ಎಂದು ಉಚ್ಚರಿಸುತ್ತಾರೆ. ಹಿಂದೂ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ಗಂಡಿನ ಮನೆಯಲ್ಲಿ ಮದುವೆ ನಡೆಯುತ್ತದೆ. ಮುಸ್ಲಿಂ ಸಮುದಾಯದಲ್ಲಿ ಮಾತ್ರ ಹೆಣ್ಣಿನ ಮನೆಯಲ್ಲಿ ಮದುವೆ ನಡೆಯುತ್ತದೆ. ಈ ಹಿಂದೆ ಮದುವೆಯ ಸಂಪ್ರದಾಯಗಳು ೫-೭ ದಿನಗಳವರೆಗೆ ನಡೆಯುತ್ತಿದ್ದವು, ಬಂದ ಬೀಗರಿಗೆ ಪ್ರತಿದಿನ ವಿವಿಧ ಬಗೆಯ ಗೋಧಿ ಹುಗ್ಗಿ ಕರಗೆಡಬು, ಸುಳ್ಳಿಹೋಳಗಿ ಹೀಗೆ ಒಂದೊಂದು ದಿನ ಒಂದೊಂದು ತರಹದ ಊಟವಿರುತ್ತದೆಂದು ಹಿರಿಯರಿಂದ ತಿಳಿಯುತ್ತದೆ. ತದನಂತರ ಮೂರು ದಿನ ಮದುವೆ ನಡೆದವು. ಈಗ ಗ್ರಾಮದಲ್ಲಿ ಸಾಮಾನ್ಯವಾಗಿ ೨ ದಿನಗಳ ಮದುವೆ ಕಾಣಸಿಗುತ್ತದೆ.

ಮದುವೆಯ ಮುನ್ನಾ ದಿನ ಮದುಮಗಳು ಬರುವುದು ಅವರನ್ನು ಗಂಡಿನ ಕಡೆಯವರು ಊರ ಅಗಸಿಯಿಂದ ಇದಿರುಗೊಳ್ಳುವುದು, ಕೆಲವರು ಅದನ್ನೇ ಒಂದು ದೊಡ್ಡ ಮೆರವಣಿಗೆ ಮಾಡಿ ಯುವಕರು ಕುಣಿದು ಆನಂದಪಡುತ್ತಾರೆ ಮತ್ತೆ ಮನೆಯ ಮುಂದೆ ಹಂದರ ಹಾಕುವುದು, ಹಂದರ ಹಾಲಗಂಭ ತರುವುದು, ಬೀಸುಕಲ್ಲಿನ ಪೂಜೆ, ಇಳೆ ಮಾಡುವುದು, ಊರ ದೇವರ ಉಡಿ ತುಂಬುವುದು. ಬಾಸಿಂಗ ತರುವುದು, ಐರಾಣಿ ತರುವುದು, ಮದುಮಕ್ಕಳ ಮಾಡುವುದು, ಸೂರಿಗೆ ಎರಿಯುವದು ಹೀಗೆ ಮದುವೆಯ ವಿವಿಧ ಆಚರಣೆಗಳೆಲ್ಲ ನಡೆಯುತ್ತವೆ. ಮದುವೆಯ ಮುನ್ನಾ ದಿನ ಕುಲಬಾಂಧವರಿಗೆ ಊಟ ಹಾಕಿಸುವುದು ಇರುತ್ತದೆ. ಇದಕ್ಕೆ 'ದೈದೂಟ' (ದೈವದ ಊಟ) ಎಂದು ಹೇಳುವರು. ಆದರೆ ಗ್ರಾಮದಲ್ಲಿ ೨೭ ವರ್ಷಗಳಿಂದ ಸಾಮೂಹಿಕ ವಿವಾಹ ನಡೆಯುತ್ತಿರುವುದರಿಂದ ಗ್ರಾಮದ ಬಹುಪಾಲು ಜನರ ಮದುವೆ ಸಾಮೂಹಿಕ ವಿವಾಹದಲ್ಲಿಯೇ ನಡೆಯುತ್ತದೆ. ಇದು ಬಡವರಿಗೆ, ಮಧ್ಯಮ ವರ್ಗದವರಿಗೆ ಒಂದು ವರವಾಗಿದೆ. ಆದರೂ ಗ್ರಾಮವಲ್ಲಿ ಮದುವೆಯ ಆಚರಣೆಗಳು ಸರಳೀಕರಣವಾಗುತ್ತಿವೆ. ಗ್ರಾಮದಲ್ಲಿ ಕೆಲವರು ಬೆರಳೆಣಿಕೆಯ ಜನರು ಅಂತರ್ಜಾತಿ ವಿವಾಹ ಮಾಡಿಕೊಂಡಿದ್ದಾರೆಯಾದರೂ, ಗ್ರಾಮ ಸಮಾಜ ಅದಕ್ಕೆ ಒಪ್ಪಿಗೆ ನೀಡಿಲ್ಲ. ಆದರೂ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಅಂತರ್ಜಾತಿ ವಿವಾಹವಾದ ದಂಪತಿಗಳು ಪುರುಷ ಸಮಾಜದೊಂದಿಗೆ ಗುರುತಿಸಿಕೊಂಡಿವೆ. ಒಟ್ಟಾರೆ ಗ್ರಾಮ ಸಮಾಜದ ಮದುವೆಯ ನಿಯಮಗಳು ಸಂಪ್ರದಾಯ, ಕಟ್ಟಳೆಗಳಿಂದ ಕೂಡಿದ್ದು ಹಾಗೆಯೇ ಮುಂದುವರೆದಿದೆ ಆದರೆ ಇನ್ನು ಮುಂದೆ ಮದುವೆಗಳು ಯಾವ ರೂಪಪಡೆದುಕೊಳ್ಳುತ್ತವೆ ಎನ್ನುವುದನ್ನು ಕಾದು ನೋಡಬೇಕಾಗಿದೆ.

ಸಾವಿನ ಸಂದರ್ಭದಲ್ಲಿನ ಆಚರಣೆ

ಹುಟ್ಟಿದ್ದು ಹೊಲಿಮನಿ ಬಿಟ್ಟು ಹೊಂಟ ಖಾಲಿಮನಿ
ಎಷ್ಟಿದ್ದರೇನಿದು ಖಾಲಿಮನಿ...............

ಎಂಬ ಹಾಡು ಜೀವನ ನಶ್ವರ ಎಂಬುದನ್ನು ಸೂಚಿಸುತ್ತದೆ. ಸದಾ ಅಸ್ತಿತ್ವಕ್ಕಾಗಿ ಸಂಪತ್ತಿಗಾಗಿ ಹೋರಾಡುವ ಮಾನವನಿಗೆ ಸಾವಿನ ನಂತರ ಅವನ ಜೊತೆ ಏನೂ ಬರುವುದಿಲ್ಲ. ಆದರೆ ಆಚರಣೆಗಳು ಮುಂದುವರೆಯುತ್ತವೆ. ಸಾವಿನ ನಂತರದ ಆಚರಣೆಗಳು ಬಹುಪಾಲು ಉತ್ತರ ಕರ್ನಾಟಕದಲ್ಲಿರುವ ಇತರ ಆಚರಣೆಗಳಂತೆ ಕಂಡುಬರುತ್ತವೆ. ಬೇರೆ ಬೇರೆ ಸಮುದಾಯದಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ.

ಸಾವು ಎಲ್ಲರಿಗೂ ಬರುತ್ತದೆ. ಆದರೆ ಯಾವಾಗ ಹೇಗೆ ಎಂಬುದು ಗೊತ್ತಾಗುವುದಿಲ್ಲ. ಕೆಲವು ವಯೋವೃದ್ಧರು, ಕಾಯಿಲೆಯಿಂದ ಬಳಲುವವರು, ಅಪಾಯಕ್ಕೀಡಾದವರಿಗೆ ಸಾವಿನ ಅಂಚಿನಲ್ಲಿರುವಾಗ ಅವರಿಗೆ ತಾವು ಸಾಯುವುದು ಖಾತ್ರಿಯಾಗುವುದರಿಂದ ತಮ್ಮ ಕೊನೆಯ ಆಶೆಗಳನ್ನು ಹೇಳುತ್ತಾರೆ. ಸಾಯುತ್ತಿರುವ ವ್ಯಕ್ತಿಗೆ ಅವನು ಇಚ್ಛೆಪಡುವ ವ್ಯಕ್ತಿಯಿಂದ ಹಣ್ಣು, ಚಹ, ಅಥವಾ ನೀರು ಕುಡಿಸುತ್ತಾರೆ. ಇದಕ್ಕೆ ಸಾವಿನ ವ್ಯಕ್ತಿಗೆ 'ಹಾದಿ ಬುತ್ತಿ' ಎನ್ನುತ್ತಾರೆ. ಮನುಷ್ಯ ಸತ್ತ ಸಮಯವನ್ನು ಗ್ರಾಮದ ಹಿರೇಮಠದ ಸ್ವಾಮಿಗಳಿಂದ ಕೇಳಿಸುತ್ತಾರೆ. ಸತ್ತ

ಮುಹೂರ್ತ ಸರಿ ಇಲ್ಲದಿದ್ದರೆ ಪರಿಹಾರಕ್ಕಾಗಿ ಸ್ವಾಮಿಗಳನ್ನು ಪೂಜಿಸಿ ಆಕಳು-ಕರು ಅಥವಾ ಬಂಗಾರ ಬೆಳ್ಳಿ ಏನಾದರೂ ದಾನ ಕೊಡುವ ಪದ್ಧತಿ ಇದೆ. ಸತ್ತ ದೇಹವನ್ನು ಮೊದಲು ಸ್ನಾನ ಮಾಡಿಸಿ ಬೇರೆ ಬಟ್ಟೆ ತೊಡಿಸಿ ಕೂಡಿಸುವ ಸಂಪ್ರದಾಯ ಹಿಂದೂ ಸಮಾಜದಲ್ಲಿದೆ. ಆದರೆ ಬ್ರಾಹ್ಮಣರು ಕೂಡಿಸುವುದಿಲ್ಲ, ಮುಸ್ಲಿಂ, ಜೈನ ಸಮುದಾಯದಲ್ಲಿ ಮಲಗಿಸುವ ಸಂಪ್ರದಾಯವಿದೆ. ಹಿಂದೂಗಳಲ್ಲಿಯು ಮದುವೆಯಾಗದ ವ್ಯಕ್ತಿ ಸತ್ತರೆ ಮಲಗಿಸುತ್ತಾರೆ.

ಹಿಂದೂಗಳಲ್ಲಿ ಸತ್ತ ದೇಹವನ್ನು ಬಟ್ಟೆ ತೊಡಿಸಿ ರುಮಾಲು, ವಿಭೂತಿ, ಕುಂಕುಮ ಹಚ್ಚಿ, ಹೂವಿನ ಹಾರ ಹಾಕಿ ಶೃಂಗರಿಸುತ್ತಾರೆ. ಗಂಡ ಜೀವಂತವಿರುವಾಗ ಹೆಂಡತಿ ಸತ್ತರೆ ತಲೆಯ ಮೇಲೆ ಕಳಸ ಇಟ್ಟು ಆರತಿ ಹಚ್ಚಿಡುತ್ತಾರೆ. ಗಂಡನಿರುವಾಗ ಹೆಂಡತಿ ಸತ್ತರೆ ಒಳ್ಳೆಯದು ಎಂಬ ನಂಬಿಕೆ ಇದೆ. ಅದಕ್ಕಾಗಿ ಸತ್ತವಳಿಗೆ 'ಮುತ್ತೈದಿ ಸಾವಂತ್ರಿ ಆಗಿಹೋದ್ಲು' ಎಂದು ಹೇಳುತ್ತಾರೆ. ಈ ಹಿಂದೆ ಸತ್ತವರ ಸುದ್ದಿ ಹೇಳಲು ಹರಿಜನರನ್ನು ಕಳುಹಿಸುತ್ತಿದ್ದರು. ಅವರಿಗೆ ಹೊಲಿಯಾಳು (ಸತ್ತವರ ಸುದ್ದಿ ಹೇಳಲು ಬಂದವ) ಎಂದು ಹೇಳುತ್ತಾರೆ. ಆದರೆ ಈಗ ದೂರವಾಣಿ ಸೌಲಭ್ಯವಿರುವುದರಿಂದ ಅದರ ಅಗತ್ಯವಿಲ್ಲ. ಸತ್ತ ವ್ಯಕ್ತಿಯ ಪೂಜೆ ಮಾಡಿಸಲು ಅವರ ಬಂಧು ಬಾಂಧವರು ಕಾಯಿ, ವಿಭೂತಿ, ಊದಬತ್ತಿ, ಹೂ–ಮಾಲೆ ತರುತ್ತಾರೆ. ಗಂಡ ಸತ್ತ ಹೆಂಡತಿ ಇದ್ದರೆ ಅವಳಿಗೆ ಸೀರೆ ತರುತ್ತಾರೆ. ಇದಕ್ಕೆ 'ತವರುಮನಿ ಸೀರಿ' ಎನ್ನುವರು. ಸ್ವಾಮಿಗಳು ಸಾಂಪ್ರದಾಯಿಕ ಮಂತ್ರಾದಿಗಳಿಂದ ಪೂಜಿಸುತ್ತಾರೆ. ಇದರಿಂದ ಸತ್ತ ವ್ಯಕ್ತಿಗೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆ ಇದೆ. ಪೂಜೆ ಮುಗಿದ ನಂತರ ಹೂ–ಪತ್ರಿ ಹಾಕುತ್ತಾರೆ. ಪೂಜೆ ಮಾಡಿಸಿದವರು ಸ್ವಾಮಿಗಳಿಗೆ ಕಾಣಿಕೆ ಕೊಡಬೇಕು. ಇದು ಪೂಜೆ ಮಾಡಿಸಲು ಬಂದ ಎಲ್ಲಾ ವ್ಯಕ್ತಿಗಳಿಂದ ನಡೆಯುತ್ತದೆ. ಸತ್ತ ವ್ಯಕ್ತಿಯ ದೇಹದ ಹತ್ತಿರ ಅವರ ಮಗಳು, ಸೊಸೆ, ಹೆಂಡತಿ, ಅಕ್ಕ, ತಂಗಿ, ಮೊಮ್ಮಕ್ಕಳಾದ ಹೆಣ್ಣುಮಕ್ಕಳು ಕೂತಿರುತ್ತಾರೆ. ಗಂಡು ಮಕ್ಕಳು ಹೊರಗೆ ಇರುತ್ತಾರೆ. ಸತ್ತ ವ್ಯಕ್ತಿಯ ಕುರಿತು ಗಂಡಸರು, ಹೆಂಗಸರು ಎಲ್ಲರೂ ದುಃಖದಲ್ಲಿರುತ್ತಾರೆ. ಆದರೆ ಗಂಡಸರು ಸತ್ತ ತಕ್ಷಣ ಹಾಗೂ ಕೊನೆಗೆ ಸ್ಮಶಾನಕ್ಕೆ ಹೋಗುವಾಗ ಅವರ ದುಃಖದ ಕಡಲು ಒಡೆದು ಭಾವಪರವಶರಾಗಿ ಅಳುತ್ತಾರೆ. ಅದು ಸತ್ತವ್ಯಕ್ತಿಯ ಕರುಳ ಸಂಬಂಧಿಗಳಲ್ಲಿ, ಆತ್ಮೀಯ ಸಂಬಂಧಿಗಳಲ್ಲಿ ಕಂಡುಬರುತ್ತದೆ. ಹೆಂಗಸರು ಹೆಣ (ಸತ್ತ ದೇಹ)ದ ಹತ್ತಿರವೇ ಇರುವುದರಿಂದ ಸದಾ ದುಃಖಿಸುತ್ತಾ ಅಳುತ್ತಲೇ ಇರುತ್ತಾರೆ. ಏಕೆಂದರೆ ಹೆಣ್ಣಿಗೆ ಇರುವಷ್ಟು ಕರುಳ ಸಂಬಂಧ ಗಂಡಿನಲ್ಲಿ ಇರುವುದಿಲ್ಲ ಎಂಬ ಮಾತಿದೆ. ಪೂಜೆ ಮಾಡಿಸಲು ಬಂಧು ಬಾಂಧವರು ಬಂದಾಗ ಊರಿನ ಗಂಡು, ಹೆಣ್ಣುಮಕ್ಕಳು ಬಂದಾಗ ಅವರು ಸತ್ತ ವ್ಯಕ್ತಿಯನ್ನು ಸ್ಮರಿಸಿಕೊಂಡು ಅಳುತ್ತಾರೆ. ಹಾಗೆಯೇ ಹತ್ತಿರದ ಗ್ರಾಮಗಳ ಬೀಗರು ಬಂದಾಗ ಬೀಗರು ಮತ್ತು ಮನೆಯವರು ಸೇರಿ ದುಃಖ ಹೆಚ್ಚಾಗಿ ತಬ್ಬಿಕೊಂಡು ಅಳುವ ಸನ್ನಿವೇಶ ಕರುಳು ಮಿಡಿಯುವಂತಿರುತ್ತದೆ. ಹೀಗೆ ಸತ್ತವರ ಮನೆ ದುಃಖದ ಕಡಲಾಗಿರುತ್ತದೆ. ಅದರಲ್ಲೂ ಮಧ್ಯಮ ವಯಸ್ಸಿನ ವ್ಯಕ್ತಿ ಗಂಡ, ಹೆಂಡತಿ, ಮಕ್ಕಳನ್ನು ಬಿಟ್ಟು ಸತ್ತ ಸಂದರ್ಭದಲ್ಲಿ ಕಂಡುಬರುವ ಶೋಕ, ದುಃಖ ಹೇಳಲ ಸಾಧ್ಯವಾಗಿರುತ್ತದೆ. ಇಲ್ಲಿ ಜಾತಿ, ಮತ, ಪಂಥಗಳ ಸುಳಿವೇ ಇರುವುದಿಲ್ಲ. ಗ್ರಾಮ ಸಮುದಾಯದ ವ್ಯಕ್ತಿಗತ ಸಂಬಂಧಗಳನ್ನು ಸಾವಿನ ಸಂದರ್ಭದಲ್ಲಿ ಸ್ವತಃ

ಕ್ಷೇತ್ರ ಕಾರ್ಯದಿಂದ ಅವಲೋಕಿಸಿದಾಗ ಗ್ರಾಮ ಪರಿಸರದ ಮಾನವೀಯ ಸಂಬಂಧಗಳ ಅರಿವಾಗುತ್ತದೆ. ಅದರಲ್ಲೂ 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ.' ಎನ್ನುವ ಶರಣರ ವಾಣಿಯಂತೆ ಉತ್ತಮ ಚಾರಿತ್ರ್ಯ ಹೊಂದಿರುವ ಪರೋಪಕಾರಿ ಹಾಗೂ ಜನಪ್ರಿಯ ವ್ಯಕ್ತಿಗಳ ಸಾವನ್ನು ಗ್ರಾಮದ ಜನತೆ ಸಹಿಸಲಸಾಧ್ಯವಾಗಿರುತ್ತದೆ. ಆದ್ದರಿಂದ ಅವರ ಸಂಬಂಧಗಳ ಭಾವನೆಗಳು ದುಃಖ ಕಣ್ಣೀರಿನ ರೂಪದಲ್ಲಿ ಹೊರಬರುತ್ತದೆ. ಉಳಿದಂತೆ ಮಕ್ಕಳು, ಸೊಸೆ, ಮೊಮ್ಮಕ್ಕಳನ್ನು ಕಂಡು ಸಮೃದ್ಧ ಜೀವನ ನಡೆಸಿದ ಅಜ್ಜ, ಅಜ್ಜಿಯರು ಸತ್ತಾಗ ದುಃಖದ ಛಾಯೆ ಇರುತ್ತದೆಯಾದರೂ ಅದು ಸಹಜವಾಗಿರುತ್ತದೆ. ಅಜ್ಜ, ಅಜ್ಜಿಯರ ಶವ ಸಂಸ್ಕಾರದಲ್ಲಿ ಬಂಧುಬಾಂಧವರು ಪಾಲ್ಗೊಂಡು ಭಜನೆ, ಭಜಂತ್ರಿ, ಹಲಗೆ, ಮುಂತಾದ ಮಜಲುಗಳಿಂದ ಅವರ ಸಾವನ್ನು ಸಹಜವಾಗಿ ಒಪ್ಪಿಕೊಂಡು ಜಾತ್ರೆ ವೈಭವದ ರೂಪದಲ್ಲಿ ಶವಸಂಸ್ಕಾರ ಮಾಡಲಾಗುತ್ತದೆ. ಶವಸಂಸ್ಕಾರಕ್ಕೆ ಬಂದವರಿಗೆ ಚಹಾ, ಚುರುಮರಿ, ಉಪ್ಪಿಟ್ಟು, ಎಲೆ ಅಡಿಕೆಯ ವ್ಯವಸ್ಥೆ ಇರುತ್ತದೆ. ಹೆಣವನ್ನು ಸ್ಮಶಾನಕ್ಕೆ ಒಯ್ಯುವ ಸಂದರ್ಭದಲ್ಲಿ ಮನೆಯಲ್ಲಿ ಜೋಳ ದಾನ ಕೊಡುವ ಪದ್ಧತಿ ಇದೆ. ದಾನ ಕೊಡುವಾಗ ಮೊದಲು ಸತ್ತ ವ್ಯಕ್ತಿಯ ಕೈಮುಟ್ಟಿಸಿ ಕೊಡುತ್ತಾರೆ. ಆ ದಾನವನ್ನು ಸ್ವಾಮಿಗಳು, ಪೂಜಾರಿಗಳು, ಜೋಗಮ್ಮ, ಜೋಗಪ್ಪಗಳು ಹಾಗೂ ಮನೆಯ ಮಾದಿಗರು ತೆಗೆದುಕೊಳ್ಳುತ್ತಾರೆ. ಹೆಣವನ್ನು ಒಯ್ಯಲು ತಂದ ಸದರಿಗೆ ಜನ 'ಡೋಲಿ' ಎಂದು ಕರೆಯುತ್ತಾರೆ. ಅದಕ್ಕೆ ಈಗ 'ಇಮಾನ' ಎಂದು ಹೇಳುತ್ತಾರೆ. ಅದನ್ನು ಕಬ್ಬು, ಬಾಳೆಕಂಬ, ಹೂಮಾಲೆಗಳಿಂದ ಅಲಂಕರಿಸಿ ಅದರಲ್ಲಿ ಶೃಂಗರಿಸಿದ ಹೆಣ ಕೂಡಿಸಿರುತ್ತಾರೆ. ಮುಂದೆ ಎಲ್ಲ ವಾದ್ಯ ಮೇಳಗಳು ಇರುತ್ತವೆ. ಹೀಗೆ ಒಂದು ಜಾತ್ರೆಯ ಸ್ವರೂಪದಲ್ಲಿ ಹೆಣವನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಸತ್ತ ವ್ಯಕ್ತಿಯು ದೆವ್ವ ಆಗಬಾರದೆಂದು ಮನೆಯಿಂದ ಸುಡಗಟ್ಟೆಯವರೆಗೆ ನೆವಣೆ ಹಾಕುತ್ತಾ ಹೋಗುತ್ತಾರೆ. ಏಕೆಂದರೆ ಅವನು ದೆವ್ವ ಆಗುವುದಾದರೆ ಮರುದಿನ ಬೆಳಗಾಗುವುದರೊಳಗೆ ಆ ಎಲ್ಲಾ ನವಣೆಯನ್ನು ಒಂದೊಂದೇ ಕಾಳುಗಳನ್ನು ಆರಿಸಿಕೊಂಡು ಮನೆ ಸೇರಬೇಕು. ಅದು ಅಸಾಧ್ಯವಾದ್ದರಿಂದ ಅವನು ದೆವ್ವವಾಗುವುದಿಲ್ಲ ಎಂಬ ನಂಬಿಕೆ ಇದೆ. ಸೊರಟೂರ ಗ್ರಾಮದಲ್ಲಿ ಹಿಂದೂಗಳನ್ನು ಹೂಳಲು ಸ್ಮಶಾನಭೂಮಿ ಇರಲಿಲ್ಲ. ಈಗ ಇದೆ. ಹಿಂದುಗಳಲ್ಲಿಯೇ ಇರುವ ಉಪಜಾತಿಗಳ ಹೆಣಗಳನ್ನು ನಿರ್ದಿಷ್ಟಪಡಿಸಿದ ಜಾಗದಲ್ಲಿ ಹೂಳುತ್ತಾರೆ. ಸಾವಿನ ಶವಸಂಸ್ಕಾರದ ಸಂದರ್ಭದಲ್ಲಿಯೂ ಜಾತಿಯತೆಯ ಪರಿಣಾಮವನ್ನು ಇಲ್ಲಿ ಗಮನಿಸಬಹುದು. ಇದನ್ನು ಜಾತಿಯತೆಯ ಅಂದಾಭಿಮಾನ ಎಂದು ಹೇಳಬಹುದು. ಗ್ರಾಮದಲ್ಲಿ ಇದು ಒಂದು ಸಂಪ್ರದಾಯವಾಗಿ ಬಿಟ್ಟಿದೆ. ಹಿಂದೂಗಳು ಹಾಗೂ ಮುಸ್ಲಿಮರು ಶವಗಳನ್ನು ಹೂಳುತ್ತಾರೆ. ಹಿಂದೂಗಳ ಸ್ಮಶಾನ ಗ್ರಾಮದ ದಕ್ಷಿಣಕ್ಕೆ ಹಂಗನಕಟ್ಟಿ ದಾರಿಯಲ್ಲಿದೆ. ಮುಸ್ಲಿಮರ ಕಬರಸ್ಥಾನ ಗ್ರಾಮದ ಪಶ್ಚಿಮಕ್ಕೆ ಬಸ್‌ನಿಲ್ದಾಣ ಹತ್ತಿರವೇ ಇದೆ. ಬಾಣಂತಿಯರು ಜೋಗಮ್ಮ, ಜೋಗಪ್ಪರ ಹಾಗೂ ಮದುವೆಯಾಗದವರ ಶವಗಳನ್ನು ಹಿಂದೂಗಳು ಸುಡುತ್ತಾರೆ. ಜೈನರು, ಬ್ರಾಹ್ಮಣರು ಶವಗಳನ್ನು ಸುಡುತ್ತಾರೆ. ಇದಕ್ಕೆ 'ಕಿಚ್ಚು ಮಾಡುವುದು' ಎನ್ನುತ್ತಾರೆ. ಹಿಂದೂಗಳ ಉಪಜಾತಿಗಳಲ್ಲಿ ಶವಸಂಸ್ಕಾರ ಆದ ನಂತರ ಸ್ಮಶಾನದಲ್ಲಿ ದಾನ ಕೊಡುತ್ತಾರೆ. ಇದು ತಂಬಿಗೆ ಹಾಗೂ ಹಣದ ರೂಪದಲ್ಲಿ ಇರುತ್ತದೆ. ಹಿಂದೂಗಳ ಶವ

ಸಂಸ್ಕಾರಕ್ಕೆ ಹೆಂಗಸರು, ಗಂಡಸರು ಇಬ್ಬರೂ ಹೋಗುತ್ತಾರೆ. ಸತ್ತ ವ್ಯಕ್ತಿಯ ಶವಸಂಸ್ಕಾರದ ಸ್ಥಳದಲ್ಲಿಯೇ ಹಿರಿಯ ಮಗನಿಗೆ ಸತ್ಯ ವ್ಯಕ್ತಿಯ ರುಮಾಲು ಅಥವಾ ಪೇಟಾ ಹಾಕಿ ಮನೆಯ ಜವಾಬ್ದಾರಿ ವಹಿಸುತ್ತಾರೆ.

ಮುಸ್ಲಿಮರಲ್ಲಿ ಗಂಡಸರು ಮಾತ್ರ ಕಬರಸ್ಥಾನಕ್ಕೆ ಹೋಗುತ್ತಾರೆ.[೧೫] ಹಿಂದೂಗಳು ಶವಸಂಸ್ಕಾರಕ್ಕೆ ಹೋಗಿ ಬಂದ ಮೇಲೆ ಸ್ನಾನ ಮಾಡುತ್ತಾರೆ. ಮುಸ್ಲಿಮರು ಸ್ನಾನ ಮಾಡಿಯೇ ಶವ ಸಂಸ್ಕಾರಕ್ಕೆ ಹೋಗುತ್ತಾರೆ. ಹಿಂದೂಗಳು ಶವ ಸಂಸ್ಕಾರದ ನಂತರ ೩ ದಿನಕ್ಕೆ ಸ್ಮಶಾನಕ್ಕೆ ಹೋಗಿ ಪೂಜೆ ಮಾಡಿ ಬರುತ್ತಾರೆ. ಸುಟ್ಟಿದ್ದರೆ ಅದಕ್ಕೆ 'ಅಸ್ತಿ ಆರಿಸುವುದು' ಎನ್ನುತ್ತಾರೆ. ಆಗ ಚುರಮರಿ, ಡಾಣಿ, ಮುಂತಾದ ವಸ್ತುಗಳನ್ನು ನೈವೇದ್ಯಕ್ಕಾಗಿ ಒಯ್ದು ಕುಣಿ(ಶವ ಹೂತಿರುವ ಜಾಗ)ಯ ಮೇಲೆ ಇಡುತ್ತಾರೆ. ಅದನ್ನು ಕಾಗಿ ಬಂದು ತಿಂದರೆ ಒಳ್ಳೆಯದು ಇಲ್ಲವಾದರೆ ಸತ್ತವ್ಯಕ್ತಿ ದೆವ್ವ ಆಗುತ್ತಾನೆ ಎಂಬ ನಂಬಿಕೆ ಇದೆ. ನಂತರ ೯ ದಿನಕ್ಕೆ ಅಥವಾ ವರುಷದ ಒಳಗೆ ತಿಥಿ ಮಾಡುತ್ತಾರೆ. ಇದಕ್ಕೆ 'ದಿವಸ ಮಾಡುವುದು' ಎನ್ನುತ್ತಾರೆ. ಇಂಥ ಶವಸಂಸ್ಕಾರದ ನಂತರದ ಆಚರಣೆಗಳು ವಿವಿಧ ಜಾತಿ ಉಪಜಾತಿಗಳಲ್ಲಿ ವಿಭಿನ್ನವಾಗಿದೆ. ಹೀಗೆ ಸಾವು ಹಾಗೂ ಸಾವಿನ ಅನಂತರದ ಆಚರಣೆಗಳು ಇತರೆ ಜೀವನಾವರ್ತನ ಆಚರಣೆಗಳಷ್ಟೇ ಸಾಂಪ್ರದಾಯಿಕವಾಗಿ ನಡೆಯುತ್ತವೆ.

೬.೩. ಜನಪದರ ನಂಬಿಕೆಗಳು

"ಮೂಢ ಭಕ್ತಿಗೆ ಕೇಡಿಲ್ಲ" "ದಿಕ್ಕಿಲ್ಲದವರಿಗೆ ದೇವರೇ ಗತಿ" ಎಂಬ ಜನಪದರ ಮಾತುಗಳು ಅವರ ನಂಬಿಕೆಗಳಿಗೆ ಹಿಡಿದ ಕೈಗನ್ನಡಿಯಂತಿವೆ. ಯಾವುದೇ ಕಾಲದಲ್ಲಿ ಹುಟ್ಟಿಕೊಂಡ ನಂಬಿಕೆಗಳನ್ನು ಜನ ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಏಕೆಂದರೆ ಜನಪದ ನಂಬಿಕೆ, ವಿಧಿ-ನಿಷೇಧಗಳು ಪರಂಪರಾನುಗತವಾಗಿ ಅಂಗೀಕೃತವಾದ ಪರಿಕಲ್ಪನೆಗಳು. ನಂಬಿಕೆಯು ಜನಪದರ ಜೀವನಾನುಭವದ ಉತ್ಪನ್ನ. ಹೀಗಾಗಿ ಮಾನವನ ಬದುಕಿಗೂ, ನಂಬಿಕೆಗೂ ಬೇರ್ಪಡಿಸಲಾಗದ ಸಂಬಂಧವಿದೆ. ಸಂಪ್ರದಾಯ, ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಕೂಡಿದ್ದು, ಆ ಮೂಲಕ ಕ್ರಿಯಾ ರೂಪವನ್ನು ತಾಳುತ್ತವೆ. ಈ ಮೂಲಕ ಹುಟ್ಟಿರಬಹುದಾದಂತಹ ನಂಬಿಕೆಗಳು ಸೊರಟೂರ ಜನಪದರಲ್ಲಿ ಹೇರಳವಾಗಿ ಸಿಗುತ್ತವೆ. ಸಾಮಾಜಿಕ ನೆಲೆಗಟ್ಟಿನ ಮೇಲೆ ರೂಪುಗೊಂಡ ನಂಬಿಕೆಗಳಿಗೆ ತಾತ್ವಿಕ, ಸಾಮಾಜಿಕ ಹಿನ್ನೆಲೆಯು, ಧಾರ್ಮಿಕ ತಳಹದಿಯೂ ಇರುತ್ತದೆ. ನಾವು ಜನಪದ ಸಂಸ್ಕೃತಿಯ ಅಂತರಾಳದ ಜೀವಂತ ಮಿಡಿತವನ್ನು ಈ ನಂಬಿಕೆಗಳಲ್ಲಿ ಗುರುತಿಸಬಹುದಾಗಿದೆ.

ಈ ನಂಬಿಕೆಗಳನ್ನು ಐತಿಹಾಸಿಕವಾಗಿ ಗಮನಿಸಿದರೆ ಬಹುತೇಕ ನಂಬಿಕೆಗಳು ಪ್ರಕೃತಿ ಮೂಲವಾಗಿ ಹುಟ್ಟಿಕೊಂಡವುಗಳು. ಇಂತಹ ನಂಬಿಕೆಗಳನ್ನು ಹಲವು ಭಾಗಗಳಾಗಿ ವರ್ಗೀಕರಿಸ ಬಹುದು. ಮಾನವ ಶರೀರ, ಜನಪದ ವೈದ್ಯ, ಜೀವನ ಚಕ್ರದ ಹುಟ್ಟು, ವಿವಾಹ ಸಾವು ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು ಸೇರಿದಂತೆ ಹಲವಾರು ಅಂಶಗಳನ್ನು ಒಳಗೊಂಡಿರುತ್ತವೆ.

ಇಂತಹ ಹಲವಾರು ನಂಬಿಕೆಗಳು ಸೊರಟೂರ ಪರಿಸರದಲ್ಲಿ ಹೇರಳವಾಗಿ ಸಿಗುತ್ತವೆ. ಅವುಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಪಟ್ಟಿ ಮಾಡಲಾಗಿದೆ.

೧. ಮಗಳನ್ನು ಮಂಗಳವಾರ ಗಂಡನ ಮನೆಗೆ, ಸೊಸೆಯನ್ನು ಶುಕ್ರವಾರ ತವರುಮನೆಗೆ ಕಳುಹಿಸಬಾರದು.

೨. ಶುಕ್ರವಾರ, ಮಂಗಳವಾರ ಮತ್ತು ಅಮವಾಸ್ಯೆಯ ದಿವಸ ಹೊರಗಿನವರಿಗೆ ಹಣ ಕೊಡಬಾರದು, ಲಕ್ಷ್ಮೀ ಹೊರಗೆ ಹೋಗುತ್ತಾಳೆ ಎಂಬ ನಂಬಿಕೆಯಿದೆ.

೩. ಬರೀ ತೊಟ್ಟಿಲನ್ನು ತೂಗಬಾರದು, ಮಕ್ಕಳಿಗೆ ಹೊಟ್ಟೆ ನೋವು ಬರುತ್ತದೆ.

೪. ಯಾರಾದರೂ ಮಲಗಿದಾಗ ದಾಟಬಾರದು, ಬಾಣಂತಿಯರು ಕಾಲು ಚಾಚಿಕೊಂಡು ಕುಳಿತಾಗ ದಾಟಬಾರದು. ದಾಟಿದರೆ ದಾಟಿದ ರೀತಿಯಲ್ಲಿ ವಾಪಸ್ ಬರಬೇಕು.

೫. ಮಗು ಮಲಗಿದಾಗ ಸುತ್ತಲೂ ಕುಳಿತುಕೊಳ್ಳಬಾರದು. ಶವದ ಮುಂದೆ ಕುಳಿತಂತಾಗುತ್ತದೆ.

೬. ದೀಪ ಆರಿಸು ಎನ್ನಬಾರದು, ನಂದಿಸು, ಶಾಂತ ಮಾಡು ಎನ್ನಬೇಕು.

೭. ಹೋಗುತ್ತೇನೆ ಎನ್ನಬಾರದು, ಹೋಗಿ ಬರುತ್ತೇನೆ ಎನ್ನಬೇಕು.

೮. ಹುಟ್ಟಿದ ದಿನ, ಮಂಗಳವಾರ, ಅಮವಾಸ್ಯೆ, ಹಬ್ಬದಂದು ಮುಖಕ್ಷೌರ ಮಾಡಿಸಿಕೊಳ್ಳಬಾರದು.

೯. ಹೊಸ್ತಿಲಿನ ಮೇಲೆ ಸೀನುವುದು, ಕಾಲಿನಿಂದ ತುಳಿಯುವುದು ಮಾಡಬಾರದು.

೧೦. ಗರ್ಭಿಣಿಯರು ಶವಯಾತ್ರೆಯನ್ನು ನೋಡಬಾರದು.

೧೧. ಗರ್ಭಿಣಿಯರು ಗ್ರಹಣ ಕಾಲದಲ್ಲಿ ತರಕಾರಿ, ಹಣ್ಣು ಕೊಯ್ಯಬಾರದು. ಹಾಗೆ ಮಾಡಿದರೆ ಅಂಗವಿಕಲ ಮಕ್ಕಳು ಹುಟ್ಟುತ್ತವೆ.

೧೨. ಬೆಕ್ಕು ಕೆಟ್ಟ ಧ್ವನಿಯಲ್ಲಿ ಕೂಗಬಾರದು, ಹಾಗೆ ಕೂಗಿದರೆ ಅವುಗಳನ್ನು ಓಡಿಸಬೇಕು.

೧೩. ಬೆಕ್ಕು ಮುಖ ತಿಕ್ಕಿಕೊಂಡರೆ, ಕಾಗೆ ಮನೆಯ ಮುಂದೆ ಕುಳಿತು ಕಾ ಕಾ ಎಂದು ಕೂಗಿದರೆ ಮನೆಗೆ ಬೀಗರು ಬರುತ್ತಾರೆ.

೧೪. ರಾತ್ರಿ ಹಾಲಿಲ್ಲದೆ ಹೆಪ್ಪಿಗೆ ಹೋಗಬಾರದು.

೧೫. ಯಾರಾದರೂ ಗಿಣ್ಣದ ಹಾಲು ಕೊಟ್ಟರೆ ಖಾಲಿ ಪಾತ್ರೆ ವಾಪಸ್ ಕೊಡದೆ, ಅಕ್ಕಿ, ಜೋಳ, ತೌಡು, ಬೆಲ್ಲ ಹಾಕಿ ಕೊಡಬೇಕು.

೧೬. ಹೊಸ್ತಿಲ ಮೇಲೆ ಕುಳಿತುಕೊಳ್ಳಬಾರದು, ಸಾಲ ಹೆಚ್ಚಾಗುತ್ತದೆ.

೧೭. ಶವಯಾತ್ರೆ ಎದುರು ಬಂದರೆ ಒಳ್ಳೆಯದು.

೧೮. ಶವಸಂಸ್ಕಾರ ಮುಗಿಸಿ ಬರುವವರ ಎದುರು ಬರಬಾರದು. ಹಾಗೆ ಬರುವುದನ್ನು ಕಂಡಲ್ಲಿ ಪಕ್ಕ ಸರಿದುಕೊಂಡು ನಿಂತುಕೊಳ್ಳಬೇಕು.

೧೯. ಮದುವೆಯಾದ ವರ್ಷ ಆಷಾಢ ಮಾಸದಲ್ಲಿ ಅತ್ತೆ ಸೊಸೆ ಒಂದೇ ಮನೆಯಲ್ಲಿ ಇರಬಾರದು.

೨೦. ಚಿಕ್ಕಮಕ್ಕಳು ಮಲಗಿರುವಾಗ ಮುತ್ತು ಕೊಡಬಾರದು.

೨೧. ಬಸುರಿ ಹೆಂಗಸಿನ ಗಂಡ ಶವ ಸಂಸ್ಕಾರಕ್ಕೆ ಹೋಗಬಾರದು.

೨೨. ಊಟ ಮಾಡುವಾಗ ಮೈ ಮುರಿಯಬಾರದು, ಊಟದ ತಟ್ಟೆಯನ್ನು ದಾಟಬಾರದು. ಊಟದ ಮೇಲೆ ಸಿಟ್ಟು ಮಾಡಿ ಎದ್ದು ಹೋಗಬಾರದು.

೨೩. ಗರ್ಭಿಣಿಯರು ಹಳ್ಳ ದಾಟಬಾರದು. ಅನಿವಾರ್ಯವಾದಲ್ಲಿ ನದಿಗೆ ಬಾಗಿನ ಕೊಟ್ಟು ದಾಟಬೇಕು.

೨೪. ಉಪ್ಪು ಕರಿಯಬಾರದು ಉಪ್ಪನ್ನು ಬಿಸಾಕಬಾರದು.

೨೫. ಬಿಕ್ಕಳಿಕೆ ಬಂದರೆ ಯಾರೋ ನೆನಪಿಸಿಕೊಳ್ಳುತ್ತಿದ್ದಾರೆ ಎಂದರ್ಥ.

೨೬. ಗರ್ಭಿಣಿ ನೆರಳು ನಾಗರಹಾವಿಗೆ ಬೀಳಬಾರದು. ನೆರಳು ಬಿದ್ದರೆ ಅವಳ ಹೆರಿಗೆ ಆಗುವ ತನಕ ಹಾವಿಗೆ ಕಣ್ಣು ಕಾಣಿಸುವುದಿಲ್ಲ.

೨೭. ದೊಡ್ಡ ಕಿವಿ ಇದ್ದರೆ, ಅಂಗಾಲು ಟೊಳ್ಳು ಇದ್ದರೆ, ಕೈ ಬೆರಳುಗಳನ್ನು ಜೋಡಿಸಿದಾಗ ಸಂದು ಕಾಣಿಸದಿದ್ದರೆ ಶ್ರೇಷ್ಠ; ಅವರು ಧನಿಕರಾಗುತ್ತಾರೆ.

೨೮. ಶುಭ ಕಾರ್ಯಕ್ಕೆ ಮೂವರು ಹೋಗಬಾರದು, ಹೋಗುವುದು ಅನಿವಾರ್ಯವಾದಲ್ಲಿ ಜೇಬಿನಲ್ಲಿ ಅಡಿಕೆ ಬೆಟ್ಟಿ ಇಟ್ಟುಕೊಳ್ಳಬೇಕು. ಜೊತೆಗೆ ಗಣಪತಿ ಬಂದಹಾಗೆ.

೨೯. ಶುಭ ಕಾರ್ಯಕ್ಕೆ ಹೋಗುವಾಗ ಬೆಕ್ಕು, ವಿಧವೆ, ಹಾರಿ, ಗುದ್ಲಿ, ಖಾಲಿಕೊಡ, ಕ್ಷೌರಿಕ, ಹಾವು, ಒಂಟಿ ಬ್ರಾಹ್ಮಣ ಎದುರು ಅಥವಾ ಅಡ್ಡಬರಬಾರದು.

೩೦. ಎಲ್ಲಿಗಾದರೂ ಹೋಗುವಾಗ ತುಂಬಿದ ಕೊಡ ಎದುರು ಬಂದರೆ ಒಳ್ಳೆಯ ಶಕುನ.

೩೧. ಎಲ್ಲಿಗಾದರೂ ಹೋಗುವಾಗ ಮುಂಗುಸಿ ಅಡ್ಡ ಬಂದರೆ, ರತ್ನಪಕ್ಷಿ ಕಂಡರೆ, ಆಕಳು ಎದುರು ಬಂದರೆ ಶುಭ ಶಕುನ.

೩೨. ದೇವರಿಗೆ ಬೆನ್ನು ತೋರಿಸುತ್ತಾ ಹೊರ ಬರಬಾರದು. ಹಿಂಬದಿಯಲ್ಲಿ ನಾಲ್ಕು ಹೆಜ್ಜೆ ಹಿಂದೆ ಹೋಗಬೇಕು.

೩೩. ಶವಸಂಸ್ಕಾರ ಮುಗಿಸಿ ಬರುವಾಗ ಹಿಂದೆ ತಿರುಗಿ ನೋಡಬಾರದು.

೩೪. ಬಾಣಂತಿ, ಮಧುಮಕ್ಕಳು ಬರಿಗಾಲಿನಿಂದ ಓಡಾಡಬಾರದು.

೩೫. ಹೊರಗೆ ಹೋಗುವಾಗ ಎಲ್ಲಿಗೆ ಎಂದು ಕೇಳಬಾರದು.

೩೬. ಕಟ್ಟಿಗೆ ಉರುವಲು ಒಲೆ ಒದರಿದರೆ ಯಾರಾದರೂ ಬರುತ್ತಾರೆ ಎಂಬ ಸೂಚನೆ.

೩೭. ತುಂಬಿದ ಕೊಡ ಕೈ ಜಾರಿ ಬಿದ್ದರೆ ಮಳೆ ಬರುವ ಸೂಚನೆ.

೩೮. ನಾಯಿ ಮುಗಿಲಿಗೆ ಮುಖ ಮಾಡಿ ಕೂಗಿದರೆ ಮಳೆ ಬರುವ ಸೂಚನೆ.

೩೯. ಮೈಮೇಲಿನ ಬಟ್ಟೆಯನ್ನು ಹೊಲಿಯಬಾರದು.

೪೦. ಉಪ್ಪು ಕೈಯಿಂದ ಕೈಗೆ ಕೊಟ್ಟರೆ ಜಗಳವಾಗುತ್ತದೆ.

೪೧. ಮುಸ್ಸಂಜೆ ಹೊತ್ತಲ್ಲಿ ಮಲಗಬಾರದು.

೪೨. ಗಂಡನ ತಟ್ಟೆಯಲ್ಲಿ ಹೆಂಡತಿ ಊಟ ಮಾಡಿದರೆ ಗಂಡನ ಪ್ರೀತಿ ಆಯಸ್ಸು ಹೆಚ್ಚಾಗುತ್ತದೆ.

೪೨. ಗಂಡನ ಊಟವಾದ ನಂತರ ಹೆಂಡತಿ ಊಟ ಮಾಡಬೇಕು.

೪೩. ಹೊಸ ಮನೆಗೆ ಹೋಗುವಾಗ ಹಾಲು ಉಕ್ಕಿಸಿ, ಶಾಂತಿ ಮಾಡಿಸಿ ಹೋಗಬೇಕು.

೪೪. ಮೊದಲ ಬಾರಿಗೆ ಮಗುವನ್ನು ನೋಡಿದರೆ, ಮಗುವಿಗೆ ಏನಾದರೂ ಕೊಡಬೇಕು.

೪೫. ಒಂಟಿ ಕಾಲಿನಲ್ಲಿ ನಿಲ್ಲುವುದು, ಕಾಲು ಅಲುಗಾಡಿಸುವುದು, ಕಾಲನ್ನು ಬೇರೆಯವರಿಗೆ ತಾಕಿಸುವುದು ಮಾಡಬಾರದು.

೪೬. ಮನುಷ್ಯರನ್ನು, ಆಕಳನ್ನು ಕಸಬರಿಗೆಯಿಂದ ಹೊಡೆಯಬಾರದು.

೪೭. ಮರದಿಂದ ಕೇರುವಾಗ ಅದರ ಗಾಳಿ ಗಂಡಸರಿಗೆ ತಾಗಬಾರದು.

೪೮. ಮದುವೆಯಾದ ವರ್ಷ ದಂಪತಿಗಳ ಸಮೇತ ಜಾತ್ರೆ ನೋಡಬೇಕು.

೪೯. ಬೆಳಗಿನ ಕನಸು ನನಸಾಗುತ್ತದೆ.

೫೦. ಊಟ ಮಾಡುವಾಗ ಮಾತನಾಡುವುದು, ಅಳುವುದು ಮಾಡಬಾರದು.

೫೧. ವೀಳ್ಯದೆಲೆ ಬೋರಲಾಗಿ ಬಿದ್ದರೆ ತಿನ್ನಬಾರದು.

೫೨. ಆರು ಬೆರಳು ಇದ್ದವರು ಅದೃಷ್ಟವಂತರು

೫೩. ಮುತ್ತೈದೆಯಾದವರು ಗಾಜಿನ ಬಳೆ, ಮಾಂಗಲ್ಯ ಇಲ್ಲದೆ ಬಹಳ ಹೊತ್ತು ಇರಬಾರದು.

೫೪. ರಾತ್ರಿ ಹೊತ್ತು ಸುಣ್ಣ, ಉಪ್ಪು ಹೊರಗಡೆ ಕೊಡಬಾರದು.

೫೫. ಬೆಕ್ಕನ್ನು ಹೊಡೆಯುವುದು, ಸಾಯಿಸುವುದು ಮಾಡಬಾರದು.

೫೬. ಹಲ್ಲಿ ಸಾಯಿಸಬಾರದು.

೫೭. ಹಲ್ಲಿ ಮೈಮೇಲೆ ಬಿದ್ದರೆ ಕೈ ಕಾಲು ಮುಖ ತೊಳೆದುಕೊಂಡು ದೇವರಿಗೆ ಊದಿನಕಡ್ಡಿ ಹಚ್ಚಿ ಬೆಳಗಿದರೆ ದೋಷವಿಲ್ಲ.

೫೮. ಮತ್ತೊಬ್ಬರೊಂದಿಗೆ ಮಾತನಾಡುವಾಗ ಹಲ್ಲಿ ಲೊಚಗುಟ್ಟಿದರೆ ಆಗ ಆಡಿದ ಮಾತು ನಿಜ ಎಂದರ್ಥ. ಕೆಲವರು ಶಿವಶಿವ ಎಂದು ಹೇಳುತ್ತಾರೆ.

೫೯. ಗೂಬೆ ಮನೆಯ ಮುಂದೆ ಕುಳಿತು ಕೂಗಿದರೆ ಸಾವಿನ ಸೂಚನೆ.

೬೦. ನಕ್ಷತ್ರ ಬಿದ್ದರೆ ಗಣ್ಯರು ಸಾಯುವ ಸೂಚನೆ; ಇದನ್ನು ನೋಡಿದವರು ನೆಲಕ್ಕೆ ಉಗುಳಬೇಕು.

೬೧. ಶಿವಗಣಾರಾಧನೆ ನಿಧನ ವಾರ್ತೆ ಇರುವ ಪತ್ರವನ್ನು ಓದಿದ ಮೇಲೆ ಹರಿದು ಹಾಕಬೇಕು.

೬೨. ನಿಧನದ ವಿಷಯ ತಿಳಿಸುವ ಪತ್ರ ಬರೆದರೆ ಪತ್ರದ ನಾಲ್ಕು ಮೂಲೆಗೆ ಮಸಿ ಹಚ್ಚಬೇಕು.

೬೩. ಗಂಡಿಗೆ ತಲೆಯಲ್ಲಿ ಎರಡು ಸುಳಿ ಇದ್ದರೆ ಅವನಿಗೆ ಎರಡು ಮದುವೆ ಯೋಗ ಇದೆ ಎಂಬ ನಂಬಿಕೆಯಿದೆ.

೬೪. ನಾಲಿಗೆಯ ಮೇಲೆ ಮಚ್ಚೆ ಇದ್ದರೆ ಅವರು ಆಡಿದ ಮಾತು ನಿಜವಾಗುತ್ತದೆ.

೬೫. ಮೇಲಿಂದ ಮೇಲೆ ಹೆಣ್ಣುಮಕ್ಕಳು ಹುಟ್ಟುತ್ತಿದ್ದರೆ ಸಾಕು ಸಾವಿತ್ರಿ ಬೇಕು ಬೆನಕಪ್ಪ ಎಂದು ಹೆಸರಿಟ್ಟರೆ ಮುಂದಿನ ಮಗು ಗಂಡಾಗುತ್ತದೆ.

೬೬. ಮನೆಯ ಮುಂದೆ ತುಳಸಿ ಗಿಡವಿದ್ದರೆ ಕಾಯಿಲೆಗಳು ಬರುವುದಿಲ್ಲ.

೬೭. ಹೆಣ್ಣಿಗೆ ಎಡಗಣ್ಣು, ಗಂಡಿಗೆ ಬಲಗಣ್ಣು ಹಾರಿದರೆ ಒಳ್ಳೆಯದು

೬೮. ರಾತ್ರಿ ಹೊತ್ತಲ್ಲಿ ಗುಡಿಸಿದ ಕಸ ಹೊರಗೆ ಚೆಲ್ಲಬಾರದು; ಲಕ್ಷ್ಮಿ ಹೊರಗೆ ಹೋಗುತ್ತಾಳೆ.

೬೯. ಯಾವುದೇ ಶುಭ-ಅಶುಭ ಕಾರ್ಯಗಳಿಗೆ ಪುರೋಹಿತರಿಂದ, ಸ್ವಾಮಿಗಳಿಂದ ಪಂಚಾಂಗ ಕೇಳಿಸಿ ಆ ಪ್ರಕಾರ ಮಾಡಬೇಕೆಂಬ ನಂಬಿಕೆ ಇದೆ.

೭೦. ದೇವರು ಬಲಭಾಗದಿಂದ ಹೂವು ಕೊಟ್ಟರೆ ಕೆಲಸ ಆಗುತ್ತದೆ. ಎಡಭಾಗದಿಂದ ಕೊಟ್ಟರೆ ಕೆಲಸ ಆಗುವುದಿಲ್ಲ ಎಂಬ ನಂಬಿಕೆ.

೭೧. ಮನೆಯಲ್ಲಿ ಯಾರಾದರೂ ಸತ್ತರೆ ಸತ್ತ ವರ್ಷವೇ ಮದುವೆ ನಡೆಯಬೇಕು. ಇಲ್ಲದಿದ್ದರೆ ಮೂರು ವರ್ಷದವರೆಗೆ ಮದುವೆ ಮಾಡಲು ಬರುವುದಿಲ್ಲ.

೭೨. ಕೈಯಲ್ಲಿ ಗರುಡರೇಖೆ ಇರುವವರನ್ನು ಕಂಡರೆ ಹಾವು ಹೆದರುತ್ತದೆ.

೭೩. ಮಗುವಿಗೆ ಮೇಲಿನ ಹಲ್ಲು ಮೊದಲು ಬಂದರೆ ಸೋದರಮಾವನಿಗೆ ಕೇಡು. ಪರಿಹಾರವಾಗಿ ಬೆಳ್ಳಿ ಬಟ್ಟಲಲ್ಲಿ ಎಣ್ಣೆ ಹಾಕಿ ಆ ಮಗುವಿನ ಮುಖ ನೋಡಬೇಕು.

೭೪. ನಾಗರಹಾವನ್ನು ಸಾಯಿಸಿದರೆ ಹಾಗೆ ಬಿಸಾಕಬಾರದು ಬಾಯಲ್ಲಿ ನಾಣ್ಯ ಇಟ್ಟು ಹಾಲು ಹಾಕಿ ಸುಡಬೇಕು.

೭೫. ಮನೆಯೊಳಗೆ ಕಾಗೆ ಬರಬಾರದು.

೭೬. ಬಸುರಿಯ ಬಯಕೆ ತೀರಿಸದಿದ್ದರೆ ಹುಟ್ಟುವ ಮಕ್ಕಳ ಕಿವಿ ಸೋರುತ್ತದೆ.

೭೭. ಯಾವುದೇ ಕೃಷಿ ಚಟುವಟಿಕೆಯು ಆರಂಭವಾಗುವ ಮೊದಲು ಹೊಲಕ್ಕೆ ಹೋಗಿ ಕಾಯಿ ಒಡೆದು ಪೂಜೆ ಮಾಡಬೇಕು.

೭೮. ಪ್ರತಿ ಅಮವಾಸ್ಯೆಗೆ ಎತ್ತು, ಗೊದಿಲಿಗೆ ಕಾಯಿ ಒಡೆದು ಪೂಜೆ ಮಾಡಬೇಕು.

೭೯. ನಾವು ಯಾರನ್ನಾದರೂ ಕುರಿತು ಮಾತನಾಡುವಾಗ ಅಲ್ಲಿಗೆ ಆ ವ್ಯಕ್ತಿ ಬಂದರೆ ಅವರಿಗೆ ನೂರು ವರ್ಷ ಆಯಸ್ಸು ಎಂದು ನಂಬುತ್ತಾರೆ.

೮೦. ಬಲಿ ನೀಡುವ ಮೊದಲು ಆ ಪ್ರಾಣಿಯ ಬಾಯಲ್ಲಿ ನೀರು ಹಾಕಬೇಕು.

೬.೪. ಜನಪದ ವಿಧಿ-ನಿಷೇಧಗಳು

ಭಯ ಮತ್ತು ಭಾವನಾಮೂಲವಾದ ಒಂದು ನಂಬಿಕೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತಹದ್ದು ಅಥವಾ ಬಲಗೊಳಿಸುವಂತಹದ್ದು ನಿಷೇಧ. ಇದನ್ನು ಮಾಡಬಾರದು. ಇದು ಕೆಡುಕು ಎನ್ನುವ ಸಾಮಾಜಿಕ ಧಾರ್ಮಿಕ ಪ್ರತಿಬಂಧಕವೇ ನಿಷಿದ್ಧ. ಪ್ರೇಸರ್ ಮತ್ತು ದೇ. ಜವರೇಗೌಡ ಅವರು "ನಿಷೇಧದ ಮೂಲ ಮಾತಿನಲ್ಲಿದೆ" ಎಂದು ಗುರುತಿಸಿದ್ದಾರೆ. ಮಾತಿನಲ್ಲಿ ಸಕಾರಾತ್ಮಕ ಆಚರಣೆಗಳಿರುವಂತೆ ನಕಾರಾತ್ಮಕವೂ ಉಂಟು. ಸಕಾರಾತ್ಮಕವಾದುದನ್ನು ವಿಧಿಗಳೆಂದೂ, ನಕಾರಾತ್ಮಕವಾದುದನ್ನು ನಿಷೇಧಗಳೆಂದೂ ಕರೆಯಬಹುದು. ಇಲ್ಲಿನ ಕೆಲವು ನಿಷೇಧಗಳನ್ನು ಸಮುದಾಯಗಳಲ್ಲಿ ಪಾಲಿಸದೇ ಹೋದ ವ್ಯಕ್ತಿಯನ್ನು 'ಅಪವಿತ್ರ' ಎಂದು ಕರೆಯುತ್ತಾರೆ. ಮತ್ತು ಆತನಿಗೆ ಶಿಕ್ಷೆ ವಿಧಿಸಲಾಗುತ್ತದೆ. ಹೀಗೆ ಶಿಕ್ಷೆಗೊಳಗಾದ ವ್ಯಕ್ತಿ ಮತ್ತೆ ಪರಿಶುದ್ಧ ಎನಿಸುತ್ತಾನೆ. ನಿಷೇಧವನ್ನು ಉಲ್ಲಂಘಿಸಿದವ ಸಮಾಜದಲ್ಲಿ ವಿರುದ್ಧ ವ್ಯಕ್ತಿ ಆಗಿ ಬಿಡುವ ಸಾಧ್ಯತೆಯೂ ಇದೆ. ನಿಷೇಧ ಹಲವು ಉದ್ದೇಶ ಗುರಿಗಳನ್ನು ಇಟ್ಟುಕೊಂಡು ಬಳಕೆಗೆ ಬಂದಿದೆ.

ಕೆಲವು ಸಕಾರಾತ್ಮಕ ನಿಷೇಧಗಳು

೧. ಊಟದ ತಟ್ಟೆಯನ್ನು ದಾಟಬಾರದು.

೨. ರಾತ್ರಿ ವೇಳೆ ಊಟ ಮಾಡದೆ ಮಲಗಬಾರದು.

೩. ಗರ್ಭಿಣಿ ರಾತ್ರಿ ಹೊತ್ತು ಹೊರಗೆ ಮಲಗಬಾರದು.

೪. ಊಟ ಮಾಡುವಾಗ ಅಳಬಾರದು.

೫. ಮುಸ್ಸಂಜೆ ಹೊತ್ತಲ್ಲಿ ಮಲಗುವುದಾಗಲಿ ಊಟ ಮಾಡುವುದಾಗಲಿ ಮಾಡಬಾರದು.

೬. ಮೈಮೇಲೆ ಬಟ್ಟೆ ಧರಿಸಿಕೊಂಡು ಅದೇ ಬಟ್ಟೆಯನ್ನು ಹೊಲಿಯಬಾರದು.

೭. ರಾತ್ರಿ ದೀಪ ಆರಿದಾಗ ಊಟ ಮಾಡಬಾರದು.

೮. ಮನೆಯ ಎದುರಿಗೆ ಕ್ಷೌರದಂಗಡಿ ಇರಬಾರದು.

೯. ತುದಿಗಾಲಲ್ಲಿ ಕೂತು ಊಟ ಮಾಡಬಾರದು.

ಕತ್ತಲಲ್ಲಿ ತೆಂಗಿನಮರ ಹತ್ತಬಾರದು. ಕತ್ತಲಲ್ಲಿ ಹುಳು ಹುಪ್ಪಟಗಳ ಕಾಟ ಇರುವುದರಿಂದ

ಇದನ್ನು ನಿಷೇಧಿಸಿರಬೇಕು. ಊಟದ ತಟ್ಟೆಯನ್ನು ದಾಟಬಾರದು. ಊಟದ ತಟ್ಟೆಯನ್ನು ದಾಟಿದರೆ ಕಾಲಿನಲ್ಲಿರುವ ಮಣ್ಣು, ಧೂಳು ತಟ್ಟೆಯಲ್ಲಿ ಬಿದ್ದು ಅದನ್ನು ತಿಂದಂತಾಗುತ್ತದೆ ಎಂಬುದು ಒಂದು ಕಾರಣವಾದರೆ ಅದನ್ನು ದಾಟಿದರೆ ದೇವರು ಶಾಪ ಕೊಡುತ್ತಾನೆ ಎಂಬ ನಂಬಿಕೆ ನಿಷೇಧಕ್ಕೆ ಕಾರಣವಾಗಿದೆ.

ಧಾರ್ಮಿಕ ನಿಷೇಧಗಳು

೧. ದೇವರು ಇರುವ ದಿಕ್ಕಿಗೆ ಕಾಲು ಮಾಡಿ ಮಲಗಬಾರದು.

೨. ಮುಟ್ಟಾದಾಗ, ಸೂತಕ ಇದ್ದಾಗ ದೇವರನ್ನು ಮುಟ್ಟಬಾರದು.

೩. ದೇವರಿಗೆ ಮುಡಿಸುವ ಹೂವನ್ನು, ದೇವರಿಗೆ ಬೆಳಗುವ ಊದುಬತ್ತಿಯನ್ನು ಮೂಸಿ ನೋಡಬಾರದು.

೪. ತೆಂಗಿನಕಾಯಿಯನ್ನು ಕಾಲಿನಿಂದ ಒದೆಯಬಾರದು.

೫. ಒಲೆ, ಒರಳು, ಬೀಸುವ ಕಲ್ಲು, ಹೊಸ್ತಿಲು, ಗುಂಡುಕಲ್ಲು ಇವುಗಳನ್ನು ಕಾಲಿನಿಂದ ಒದೆಯಬಾರದು.

೬. ದೇವರಿಗೆ ಏರಿಸಿದ ಹೂವನ್ನು, ದೇವರ ಅಭಿಷೇಕದ ನೀರನ್ನು ತುಳಿಯಬಾರದು.

೭. ದೇವರ ಗುಡಿಯ ಎದುರಿಗೆ ಮನೆ ಕಟ್ಟಬಾರದು.

೮. ಗುಡಿಯಿಂದ ಮನೆಗೆ ಬಂದಾಗ ಕಾಲು ತೊಳೆಯಬಾರದು.

೯. ಗುಡಿಯಿಂದ ಬರುವಾಗ ಯಾರ ಮನೆಗೂ ಹೋಗದೇ ನೇರವಾಗಿ ಮನೆಗೇ ಬರಬೇಕು.

೧೦. ನಾಗರ ಪಂಚಮಿಯಂದು ಕರಿಗಡಬು ಮಾಡಬಾರದು.

೧೧. ಗ್ರಾಮದೇವತೆ ಜಾತ್ರೆ ಉತ್ಸವಗಳಲ್ಲಿ ಊರಾಚೆ ಹೋಗುವಂತಿಲ್ಲ.

೧೨. ಅಮವಾಸ್ಯೆ ದಿನದಂದು ಶುಭಕಾರ್ಯ ಮಾಡುವಂತಿಲ್ಲ.

ಇಂತಹ ನಂಬಿಕೆ, ವಿಧಿ-ನಿಷೇಧಗಳು ಸೊರಟೂರ ಗ್ರಾಮದ ಪರಿಸರದಲ್ಲಿ ಕಂಡುಬರುತ್ತವೆ. ಇವುಗಳನ್ನು ಗಮನಿಸಿದಾಗ ಇವುಗಳು ಹಲವು ಉದ್ದೇಶ ಗುರಿಗಳನ್ನು ಇಟ್ಟುಕೊಂಡು ಹುಟ್ಟಿಕೊಂಡಿವೆ. ಇದರಲ್ಲಿ ಹಲವು ನಂಬಿಕೆ ನಿಷೇಧಗಳು ವೈಜ್ಞಾನಿಕ ಹಿನ್ನೆಲೆ ಹೊಂದಿದ್ದು ಅವುಗಳು ಜೀವನಕ್ಕೆ ಮಾರ್ಗದರ್ಶಿಗಳಂತಿವೆ.

ಉದಾ:- ಸಕಾರಾತ್ಮಕ ನಿಷೇಧಗಳ ಪಟ್ಟಿಯನ್ನು ನೋಡಿದಾಗ ಅವುಗಳು ಸಾರ್ವಕಾಲಿಕ ಸತ್ಯಗಳಾಗಿವೆ. ಆದರೆ ಕೆಲವು ನಂಬಿಕೆ ವಿಧಿ-ನಿಷೇಧಗಳು ಪ್ರಶ್ನಾರ್ಹವಾಗಿವೆ.

ಉದಾ:- ಗಂಡಸರಿಗೆ ಎರಡು ಸುಳಿ ಇದ್ದರೆ ಎರಡು ಹೆಂಡತಿಯರು ಎಂಬ ನಂಬಿಕೆ ಇದೆ. ಸುಳಿಯೇ ಇಲ್ಲದಿದ್ದರೆ ಮದುವೆ ಇಲ್ಲವೇ ಎಂಬ ಹಲವಾರು ಪ್ರಶ್ನೆ ಹುಟ್ಟುತ್ತವೆ. ಆರು

ಬೆರಳಿದ್ದರೆ ಅದೃಷ್ಟ ಎಂದು ಹೇಳುತ್ತಾರೆ. ಹಾಗಾದರೆ ಇರದಿದ್ದರೆ ದುರಾದೃಷ್ಟವೇ ಎಂಬ ಪ್ರಶ್ನೆ ಬರುತ್ತದೆ.

ಹೀಗೆ ಹಲವಾರು ನಂಬಿಕೆಗಳು ಜನರನ್ನು ಸಮಸ್ಯೆಗೆ ಸಿಲುಕಿಸುವ ಸಾಧ್ಯತೆ ಇದೆ. ಆದ್ದರಿಂದ ಈ ನಂಬಿಕೆ ವಿಧಿನಿಷೇಧಗಳನ್ನು ಯಥಾವತ್ತಾಗಿ ಒಪ್ಪಿಕೊಳ್ಳುವುದು ಮುರ್ಖತನವಾಗುತ್ತದೆ. ಇದು ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತಾಗುತ್ತವೆ. ಏಕೆಂದರೆ. ಈ ನಂಬಿಕೆ ವಿಧಿ-ನಿಷೇಧಗಳು ಇಂದು ನಿನ್ನೆಯದಲ್ಲ ಅವು ಪಾರಂಪರಿಕವಾಗಿ ಬಂದವುಗಳು ಆ ಕಾಲಘಟ್ಟದಲ್ಲಿ ಅಮಾಯಕ ಜನರಲ್ಲಿ ವಿವಿಧ ನಂಬಿಕೆಗಳನ್ನು ಹುಟ್ಟುಹಾಕಿ ನಂತರ ಅವುಗಳನ್ನು ಪರಿಹರಿಸಿಕೊಳ್ಳಬೇಕು ಇಲ್ಲದಿದ್ದರೆ ಅಪಾಯವಾಗುತ್ತದೆ ಎಂಬ ಮತ್ತೊಂದು ನಂಬಿಕೆ ಮೂಡಿಸಿ ಅದನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಪಾರಂಪರಿಕ ಬುದ್ಧಿಜೀವಿಗಳಿಗೇನು ಕೊರತೆ ಇಲ್ಲ. ಆದ್ದರಿಂದ ಅವುಗಳಲ್ಲಿರುವ ಅರ್ಥ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ಅದರ ಅಗತ್ಯತೆಯನ್ನು ಅರಿತುಕೊಳ್ಳುವ ಜಾಣತನ ಬೇಕು.

ಟಿಪ್ಪಣಿಗಳು

೧. ಎಚ್.ಎಸ್. ಗುರುಪ್ರಸಾದ್, ೨೦೦೭, **ವಲಸಿಗರ ನೆಲೆ ಮರಿಯಮ್ಮನಹಳ್ಳಿ ಸಂಕಥನ**, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೦೧.

೨. ಎಚ್.ಜೆ. ಲಕ್ಕಪ್ಪಗೌಡ (ಸಂ), ೧೯೮೮, **ಕರ್ನಾಟಕದ ಜಾತ್ರೆಗಳು**, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಬಿ.ಆರ್ ಪ್ರಾಜೆಕ್ಟ್ ಮೈಸೂರು ವಿಶ್ವವಿದ್ಯಾನಿಲಯ, ಪು. ೧೬೧.

೩. ಅಗಿನ ಹಾಯುವುದು, ದೇವಿ ಮೈದುಂಬಿದವರು ಅಗ್ನಿಕುಂಡದಲ್ಲಿ ಹಾಯುವುದನ್ನು ಅಗಿನ ಎನ್ನುವರು.

೪. ರಮೇಶ್ ಕೆ., **ಉಜ್ಜಿನಿ ಗ್ರಾಮಾಧ್ಯಯನ**, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ ಪು. ೭೬.

೫. ಹೊನ್ನುಗ್ಗಿ: ಕಾರಹುಣ್ಣಿಮೆ ಮುನ್ನಾ ನ ಎತ್ತುಗಳಿಗೆ ಕಿಚಡಿ, ಹುಗ್ಗಿ ತಿನ್ನಿಸಿ, ಕೋಡುಗಳಿಗೆ, ಪಾದಗಳಿಗೆ ಬಂಗಾರ ಮುಟ್ಟಿಸುವ ಆಚರಣೆ.

೬. ಗೊಟ್ಟ: ದನಗಳಿಗೆ ಬಾಯಲ್ಲಿ ಲಘು ಆಹಾರ ಹಾಕುವ ಬಿದಿರು ಕಟ್ಟಿಗೆಯ ಸಾಧನ.

೭. ಕರಿ: ಕಾರಹುಣ್ಣಿಮೆಯಲ್ಲಿ ಎತ್ತುಗಳ ಊಟದ ಸ್ಪರ್ಧೆಯಲ್ಲಿ ಜಯಗಳಿಸಿದ ಎತ್ತಿಗೆ ಜಯದ ಸಂಕೇತವಾಗಿ ಬಳಸುವ ಪದ.

೮. ನಾಗಪಂಚಮಿಯ ಐದನೇ ದಿನ ಮಾಡುವ ವಿಶಿಷ್ಟ ಆಚರಣೆ.

೯. ಸುರ್‌ಕುರ್‌ಮಾ: ಮುಸ್ಲಿಂ ಬಾಂಧವರು ರಂಜಾನ ಹಬ್ಬದಲ್ಲಿ ಶ್ಯಾವಿಗೆ, ಹಾಲು, ದ್ರಾಕ್ಷಿ, ಗೋಡಂಬಿ, ಯಾಲಕ್ಕಿ ಮುಂತಾದ ಪದಾರ್ಥಗಳಿಂದ ಮಾಡುವ ಸಿಹಿ ಪದಾರ್ಥ.

೧೦. ಹಿ.ಚಿ. ಬೋರಲಿಂಗಯ್ಯ, ೧೯೯೬, **ಕರ್ನಾಟಕ ಜನಪದ ಕಲೆಗಳ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು. ೧೧೩.

೧೧. ಡಾ. ಮ.ಗು. ಬಿರಾದಾರ (ಸಂ), ೨೦೦೦, **ಹೋಳಿ ಹಾಡುಗಳು,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. XVI.

೧೨. ಅದೇ ಪು. XXV.

೧೩. ಎಚ್.ಎಸ್. ಗುರುಪ್ರಸಾದ್, **ವಲಸಿಗರ ನೆಲೆ ಮರಿಯಮ್ಮನ ಹಳ್ಳಿ ಸಂಕಥನ,** ಪಿ.ಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬-೦೭ ಪು. ೧೦೨ ಮತ್ತು ೧೦೧.

೧೪. ಕುಟೆಟೆಕುಡ್ರ್: ನಾಮಕರಣ ಮಾಡಿರುವುದನ್ನು ಸಾರಿ ಸಾರಿ ಹೇಳಿ ದೃಢಪಡಿಸಲು ಈ ಪದ ಬಳಸುತ್ತಾರೆ.

೧೫. ಕಬರಸ್ಥಾನ: ಮುಸ್ಲಿಂ ಸಮುದಾಯದ ಸ್ಮಶಾನ.

□□

ಅಧ್ಯಾಯ : ಏಳು

ಕಲೆ ಮತ್ತು ಸಾಹಿತ್ಯ

ಅಧ್ಯಾಯ : ಏಳು

ಕಲೆ ಮತ್ತು ಸಾಹಿತ್ಯ

ಸಾಹಿತ್ಯವೆಂಬುದು ನಿಂತ ನೀರಲ್ಲ; ಅದು ಸದಾ ಹರಿಯುವ ಗಂಗೆಯಂತೆ ನಿತ್ಯ ಪರಿವರ್ತನಶೀಲವಾದದ್ದು, ಆದ್ದರಿಂದ ಸಾಹಿತ್ಯವನ್ನು ಆಯಾ ಪರಿಸರದ ಕಾಲದ ಕೂಸು ಎಂದು ಹೇಳಲಾಗುತ್ತದೆ. ಸಾಹಿತ್ಯವೆಂದಾಕ್ಷಣ ಜನಪದ ರಚನೆ ಹಾಗೂ ಶಿಷ್ಟ ರಚನೆಗಳು ನಮ್ಮ ಗಮನಕ್ಕೆ ಬರುತ್ತವೆ. ಅದರಲ್ಲೂ ಜನಪದ ಸಾಹಿತ್ಯ ಸಾಹಿತ್ಯದ ಮೂಲಬೇರ್ಲು; ಅದಕ್ಕಾಗಿ ವಿದ್ವಾಂಸರು ಜನಪದ ಸಾಹಿತ್ಯವನ್ನು ಸಾಹಿತ್ಯದ ಗಾಯತ್ರಿ ಎಂದು ಕರೆದಿದ್ದಾರೆ. ಯಾವ ಜನತೆಯ ಸಾಹಿತ್ಯ ಬರವಣಿಗೆ ಹಾಗೂ ಮುದ್ರಣದ ಮುಖಾಂತರ ಪ್ರಕಟಗೊಂಡು ಪ್ರಸಾರವಾಗದೇ ವಾಚಿಕ ಪರಂಪರೆಯ ಮೂಲಕ ಹುಟ್ಟಿ ಬೆಳೆಯುತ್ತದೆಯೋ ಅಂಥ ಜನಪದ ಸಮುದಾಯದ ಸಾಹಿತ್ಯ ಜನಪದ ಸಾಹಿತ್ಯವಾಗುತ್ತದೆ.[೧] ಇಂತಹ ಜನಪದ ಸಾಹಿತ್ಯವು ಹಾಡುಗಳ ರೂಪದಲ್ಲಿ ಭಜನಾ ಪದ, ಮೊಹರಂ ಹಾಡು, ಹೋಳಿಹಾಡು ಸವಾಲ್ ಪದ, ಸೋಬಾನ ಪದ, ಹಂತಿಪದ, ಒಡಪು, ಒಗಟು, ಕಥೆ ಮುಂತಾದ ಪ್ರಕಾರಗಳ ಜನಪದ ಸಾಹಿತ್ಯವು ಸೊರಟೂರ ಗ್ರಾಮದಲ್ಲಿದೆ. ಅದರಲ್ಲೂ ಜನಪದ 'ರ್ವಾಣ' ಎಂಬ ವಿಶಿಷ್ಟ ಜನಪದ ಪ್ರಕಾರವು ಗ್ರಾಮದಲ್ಲಿದೆ.

೭.೧. ಜನಪದ ರ್ವಾಣ

ರ್ವಾಣ ಎಂದು ಕರೆಯಲ್ಪಡುವ ಈ ಸಾಹಿತ್ಯವು ಸೊರಟೂರ ಗ್ರಾಮ ಸೇರಿದಂತೆ ಗದಗ (ಅವಿಭಜಿತ ಧಾರವಾಡ) ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ಕಂಡುಬರುತ್ತದೆ.

ರ್ವಾಣ ಎಂಬ ಶಬ್ದದ ಕುರಿತು ಕನ್ನಡ ನಿಘಂಟುಗಳಲ್ಲಿ ಈ ಪದದ ವಿವರಣೆ ಕಂಡುಬರುವುದಿಲ್ಲ. ಗ್ರಾಮದ ಜನಪದರಿಗೆ ರ್ವಾಣ ಎಂಬ ಪದದ ಅರ್ಥವನ್ನು ಕೇಳಿದಾಗ ಅವರು ಸಹ ಅದೊಂದು 'ಪ್ರಕರಣ' ಎಂಬ ಅರ್ಥದಲ್ಲಿ ಹೇಳುತ್ತಾರೆ. ಆದ್ದರಿಂದ ರ್ವಾಣ ಪದದ ನಿರ್ದಿಷ್ಟ ಅರ್ಥ ಸಿಗುತ್ತಿಲ್ಲ. ಕೆಲ ಶಿಷ್ಟರು ಇದನ್ನು ರೋಣ ಅಂದರೆ ರೋಣ ಪರಿಸರದಲ್ಲಿ ಕಂಡುಬರುವ ಒಂದು ಸಾಹಿತ್ಯ ಅಥವಾ ಕಲಾ ಪ್ರಕಾರ ಎಂದು ಊಹಿಸುತ್ತಾರೆ. ಅದು ಸತ್ಯಕ್ಕೆ ದೂರವಾದದ್ದು ಎಂದು ಹೇಳಬಹುದು. ಜನಪದ ರ್ವಾಣದ ಕೆಲವು ಲಕ್ಷಣ ಹಾಗೂ ಅದರ ಸಾಹಿತ್ಯದ ಮೂಲಕ ಪರಿಚಯ ಮಾಡಲಾಗುತ್ತಿದೆ.

ಜನಪದ ರ್‍ವಾಣದ ಲಕ್ಷಣ

- ಇದು ಹಾಡು ಅಂದರೆ ಗಾಯನದ ಮತ್ತು ಮಾತಿನ (ವಚನ) ರೂಪದಲ್ಲಿ ಇರುತ್ತದೆ.
- ಇಬ್ಬರು ಕಲಾವಿದರು ಇದನ್ನು ಹೇಳುತ್ತಾರೆ. ಒಬ್ಬನು ನಿರ್ದಿಷ್ಟ ರ್‍ವಾಣದ ವಿಷಯಾಂಶವನ್ನು ಹೇಳುತ್ತಾ ಹೋಗುತ್ತಾನೆ. ಮತ್ತೊಬ್ಬನು (ಹಿಮ್ಮೇಳ) ಅದಕ್ಕೆ ಹೌದು ಬೀಕಪಾ, ಹೌದಣ ಹೌದು ಹ್ಯಾಂಗ, ಯಾಕ ಯಾರ‍್ಯಾರು ಮುಂತಾದ ಸಂಬಂಧವಾಚಕಗಳಿಂದ ರ್‍ವಾಣಕ್ಕೆ ಕೋರಸ್ ಕೊಡುತ್ತಿರುತ್ತಾನೆ.
- ಪ್ರಾರಂಭದಲ್ಲಿ ಹುಲುಲಗ್ಯಾ_ಹುಲುಲಗ್ಯಾ ಅಂದ್ನೆಪಾ ಎಂದು ಮೊದಲು ಪ್ರಕರಣ ಹೇಳುವನು ಹೇಳುತ್ತಾನೆ. ಅದಕ್ಕೆ ಹಿಮ್ಮೇಳ (ಕೋರಸ್)ದವನು, ಸುರುಂಬುಳಗ್ಯಾ ಸುರುಂಬಳಗ್ಯಾ ಅಂದ್ನೆಪಾ ಎಂದು ಹೇಳುತ್ತಾನೆ.
- ಇದು ಸಂಪದ್ಭರಿತ ಸಾಹಿತ್ಯದ ಸಂಕೇತವೆಂದು ಹೇಳಬಹುದು.
- ರ್‍ವಾಣವನ್ನು ಹಾಲುಮತ ಬಾಂಧವರು ಡೊಳ್ಳಿನ ಹಾಡುಗಳನ್ನು ಹೇಳುವಾಗ, ಒಂದೋ, ಎರಡೋ ಹಾಡುಗಳು ಮುಗಿದ ನಂತರ ನಡುವೆ ಒಂದು ರ್‍ವಾಣ ಹೇಳುತ್ತಾರೆ. ಅಂದರೆ ಇದು ಊಟದಲ್ಲಿ ಉಪ್ಪಿನಕಾಯಿ ಇದ್ದ ಹಾಗೆ ಜನರಿಗೆ ಹಾಸ್ಯರಸವನ್ನು ಕೊಡುತ್ತದೆ.
- ಸಾಮಾನ್ಯವಾಗಿ ರ್‍ವಾಣದಲ್ಲಿ ಅಂತ್ಯ ಪ್ರಾಸವಿರುತ್ತದೆ.
- ಒಂದೊಂದು ರ್‍ವಾಣವು ಒಂದೊಂದು ವಿಷಯಾಂಶವನ್ನು ಒಳಗೊಂಡಿರುತ್ತದೆ.

ಉದಾ : ಪ್ರಾಣಿ, ಪಕ್ಷಿಗಳ ಕುರಿತು, ಮದುವೆಯ ಕುರಿತು, ಸ್ತ್ರೀಯನ್ನು ಕುರಿತು ಇತ್ಯಾದಿ.

- ಅಡವಿಯಲ್ಲಿ ಪ್ರಾಣಿ ಪಕ್ಷಿಗಳೆಲ್ಲಾ ಸೇರಿ ಮದುವೆ ಮಾಡಿದ ಒಂದು ಪ್ರಸಂಗದ ರ್‍ವಾಣ.

ಹುಲುಲುಗ್ಯಾ ಹುಲುಲುಗ್ಯಾ ಅಂದ್ನೆಪಾ

ಹಿಮ್ಮೇಳ = ಸುರುಂಬುಳುಗ್ಯಾ ಸುರುಂಬುಳುಗ್ಯಾ ಅಂದ್ನೆಪಾ

ನರಿ ಬಾಳ ಪರಿಲಿಂದಾ ಲಗ್ನಾ ಮಾಡಬೇಕ ಅಂತಿತು

ಹುಲಿ ಮನ್ಯಾಗ ಹೆಣ್ಣ ತೆಗೆದಿತು

ಈ ಕಾರ್ಯ ಖಡಕ ಮಾಡಬೇಕ ಅಂತಿತ್ತು ಕತ್ತಿ

= ಹೌದು

ಹೆಗ್ಣ ತಳಸವರಿ ಹೊಸಮನಿ ಕಟ್ಟಬೇಕ ಅಂತೀತು।

ಸಾರಂಗ ಸರ್ವರನ್ನೆಲ್ಲಾ ಕರೆಸಿ ಶ್ವಾನ ಹೇಳತಿತ್ತು

ಹಾಲಕ್ಕಿ ಪಂಚಾಂಗ ಹೇಳತಿತ್ತಪ್ಪಾ.

= ಏನಂತಾ ಹೇಳತಿತ್ತಪ್ಪಾ.

ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರ
ಪಂಚಾಂಗಂ ಬಿಡಿಸಪುಟಂ ತದುಪರಿ ಲಿಂಗಸ್ಥಾಪನಂ
ಗಿಡ್ಡಹೆಣ್ಣು ಅಡಭೂಷಣಂ ಈ ಪ್ರಕಾರವಾಗಿ
ಪಂಚಾಂಗ ಹೇಳತಿತ್ತಪ್ಪಾ ।
= ಹೌದಣಾ, ಹೌದು
ಗುಬ್ಬಿ ಗುಳಗಿ ಮಾಡತಿತ್ತು
ಸಾಹೇಬನ ಹಕ್ಕಿ ಸ್ಯಾವಿಗಿ ಹೊಸಿತಿತ್ತು
ಮಂಗ ಮಲ್ಲಾಡಕ ಹೋಗಿ ಮರಬುಟ್ಟಿ ತಂದಿತು
ಇರವಿ ಯಲ್ಲಾಪೂರಕ ಹೋಗಿ ಬೆಲ್ಲ ಖರೀದಿ ಮಾಡಿತ್ತು.
= ಬೀಕಪಾ
ಆಡು ಆಲೂರಿಗೆ ಹೋಗಿ ಅಡಕಿ ಕಂಬ ತಂದಿತ್ತು
ಗರುಡ ಗರ್ದಿಲಿಂದ ಹಂದ್ರಾ ಹಾಕಬೇಕು ಅಂತಿತ್ತು
= ಹೌದು
ಹಲ್ಲಿ ೧೦ ದಿವಸದೊಳಗ ಲಗ್ನದಕಿ ಗಂಟ ಕಟ್ಟಬೇಕ ಅಂತಿತ್ತು
ನೊಣ ಲಗ್ನದಕಿ ಗಂಟ ಹೊತಗೊಂಡು ಹೋಗಿತ್ತು.
ಕಾಗಿ ಮಂದಿ ಕರಿತಿತ್ತು ಯಾರ್‍ಯಾರ್‍ನ ಕರಿತಿತ್ತಪ್ಪಾ ಅಂದರ
ಪಾರಿಹುಳ, ಗಿನ್ನಿಹುಳ, ಹೊನ್ನಿಹುಳ, ಕೋರಿಹುಳ ಕೋಲಂಬ್ರ ಹುಳ।
= ಹೇ ಬಹಳ ಮಂದಿ ಕೂಡಿಸ್ಯೆತಪ್ಪಾ
ಕೆಂದಗ್ಯಾನಹುಳ ಜಿನ್ನಿಹುಳ ಜಂಬಾರಿಹುಳ
ಮಳಿಹುಳ ತಿಳಿಹುಳ। ಡೊಣ್ಣಿಕಟಾ ಸಹಿತ ತಯ್ಯಾರಾಗಿ
ಹೋಗೋಣ ನಡ್ರಿ ಅಂತಿತಪ್ಪಾ
= ಇದು ಗೋಣ ಹಾಕಾಕ
ಇನ್ನ ಮಜಲಿನವರು ಯ್ಯಾರ್‍ಯಾರಪ್ಪ ಅಂದರ
= ಯ್ಯಾರ್‍ಯಾರಪ್ಪ
ತೋಳ ತಾಳ ಹಾಕತ್ತಿತ್ತು ಸಾರಂಗ ಸನಾದಿ ಊದತಿತ್ತು

ಹಂದಿ ದಿಮ್ಮ ಹಾಕತಿತ್ತು ಕರಡಿ ಖಣಿ ಬಾರಿಸುತ್ತಿತ್ತು

= ಹೌದು

ಮಿಡಿಚಿ ಕುಡಿಕಿ ಹಚ್ಚತಿತ್ತು ಮುಂಗಲಿ ಮದ್ದ ಹಚ್ಚತಿತ್ತು

ಟಿಟಿಟೆಂವ್ ಟುಬಾಕಿ ಹಾರಿಸುತ್ತಿತ್ತು

= ಹೌದಣ್ಣಾ ಹೌದು

ದೂರಿನ ದಾರಿ ನಡೆದು ಬಂದೀರಿ ಉಣ್ಣ ಏಳ್ರಿ

ಅಂತ ಉಡಾ ಎಬಸುತ್ತಿತ್ತು

ನೀರಗೋಳಿ ಓಡ್ಯಾಡಿ ನೀರ ಕೊಡತಿತ್ತು

= ಹೌದಣ್ಣಾ ಹೌದು

ಕಂಚಿನ ಹಕ್ಕಿ ಕಂಚಿನಗಂಗಾಳ ಕೊಡತಿತ್ತು

ಕಬ್ಬಹಕ್ಕಿ ಹುಗ್ಗಿ ನೀಡುವಾಗ ಇಪ್ಪಿನೊಣ

ಓಡ್ಯಾಡಿ ತುಪ್ಪ ನೀಡುತ್ತಿತ್ತು

= ಬಹಳ ರುಚಿ ಇರಬೇಕು ಅದು

ಹಂಗು ಹಪ್ಪಳ ಇಡತಿತ್ತು ಜೊಂಡಿಗ್ಯಾ ಸಂಡಗಿ ಇಡತಿತ್ತು

ಕಪ್ಪಿ ಉಪ್ಪಿನಕಾಯಿ ಇಡತಿತ್ತು

ಬೆಳ್ಳಕ್ಕಿ ಅನ್ನನೀಡುವಾಗ ಹುಸರೊಳ್ಳಿ

ಓಡಾಡಿ ಸಾಂಬಾರ ಹಣಸತಿತ್ತು

= ಹೌದಣ್ಣಾ ಹೌದು

ಈ ಇಷ್ಟು ಜನ ಊಟಮಾಡಿ ಏಳೊದರೊಳಗಾಗಿ ಬೆಳಗಾತು

ಅಡವಿ ಪಾರಿವಾಳ ಅಡಕಿ ಎಲಿ ಕೊಡತಿತ್ತಪ್ಪಾ

= ಬೀಕಪಾ

ಇನ್ನ ಮ್ಯಾಲೆ ಐದಗಿತ್ಯಾರು ಯ್ಯಾರಾರು ಆಗಿದ್ರಪ್ಪ ಅಂದರ

= ಯ್ಯಾರಾರು ಆಗಿದ್ರಪ್ಪ

ಕಬ್ಬಕ್ಕಿ ಬಿಳಿ ಹಕ್ಕಿ ಬೆಳವನ ಹಕ್ಕಿ ಹಾಲಕ್ಕಿ

ಅಡವಿ ಹಕ್ಕಿ ಸಹಿತ ಐದಗಿತ್ಯಾರಾಗಿದ್ರಪ್ಪ.

= ಹೌದು

ನೊರ್ಜು ಸೋಪಾನ ಹೇಳತಿತ್ತು ಹಂಸ ಬಾಸಿಂಗ ಕಟ್ಟಿತಿತ್ತು

= ಹೌದು

ಚೋಳು ಪಾಡಾಗಿ ಪುರಾಣ ಪುರಾಂತಗಿರಿ ಹೇಳತಿತ್ತಪಾ

= ಘನ ಚೊಲೊ ಹೇಳತಿರಬೇಕ ಕೊಂಡಿ ನಿಗರಿಸಿ

ಹಾವು ಒಮ್ಮೆಲೆ ಗುಗ್ಗಳ ಹೊಂಡಿಸಿತಪ್ಪ.

ಹಲ್ಲಿ ಹರಿಹರಾ ಬ್ರಹ್ಮಾದಿಗಳೆಲ್ಲರೂ ಮತ್ತಿಗಟ್ಟಿ

ಸ್ಥಳದಾಗ ಮದುವೆ ಮಾಡಿದ್ರು॥

ಅಂತರ್ಲೆ ಆಡುವಾ ಗಿಡಗಾ ಗಿಡಗನ ಕೊಳ್ಳಾಗ

ಪಾವಸೇರ ಬೆಳ್ಳಿ ಕಡಗಾ

ಈ ರ್‍ವಾಣಾ ಹೇಳಿದ್ನಪಾ ಹೊನ್ನಸೊರಟೂರ ಈರಗಾರ ಹುಡಗಾ

ಹುಲುಲುಗ್ಯಾ ಹುಲುಲುಗ್ಯಾ ಅಂದ್ನೆಪಾ

= ಸುರುಂಬುಳುಗ್ಯಾ ಸುರುಂಬುಳುಗ್ಯಾ... ಅಂದ್ನೆಪಾ

ಸೊರಟೂರ ಗ್ರಾಮದಲ್ಲಿ ಹಾಲುಮತ ಬಾಂಧವರು ಮಾತ್ರ ರ್‍ವಾಣ ಹೇಳುತ್ತಾರೆ. ಇದು ಒಂದು ಜನಪದ ಸಾಹಿತ್ಯವೂ ಹೌದು; ಕಲೆಯು ಹೌದು. ರ್‍ವಾಣದ ಸಾಹಿತ್ಯಕ್ಕಿಂತ ಅದನ್ನು ಕಲಾವಿದರು ಹೇಳುವಾಗ ನೋಡಿದರೆ ಅದರ ರಸಾನುಭವವಾಗುತ್ತದೆ. ಇಂತಹ ವಿಶಿಷ್ಟ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಸಂಪಾದನೆ ಮಾಡುವುದು ಅತ್ಯಗತ್ಯ. ರ್‍ವಾಣ ಹೇಳುವ ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತ ಇಲಾಖೆ ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವರ ಪ್ರದರ್ಶನಕ್ಕೆ ಅವಕಾಶ ಕೊಟ್ಟು, ಆ ಕಲಾವಿದರಿಗೆ ಆರ್ಥಿಕ ನೆರವು ನೀಡುವ ಮೂಲಕ ಎಲೆ ಮರೆಯ ಕಾಯಿಯಂತಿರುವ ಜನಪದ ರ್‍ವಾಣಗಳನ್ನು ಉಳಿಸಿ ಬೆಳೆಸುವ ಅಗತ್ಯವಿದೆ.

೭.೨. ಸೊರಟೂರಿನ ವಿವಿಧ ಜನಪದ ಕಲೆಗಳು

ಭಜನೆ

ಜನಪದ ಭಜನೆಗಳೆಂದರೆ ಜಾತಿ, ಮತಗಳನ್ನು ಮೀರಿದ ದೇಶಿಯ ಆರಾಧನಾ ಗೀತೆಗಳ ಸಂಪ್ರದಾಯ. ಅದರಲ್ಲೂ ಭಜನೆಯಲ್ಲಿ ಸ್ಥಳೀಯ ಗ್ರಾಮದೇವತೆಗಳ ಸ್ತುತಿಯೇ ಅಧಿಕವಾಗಿರುತ್ತದೆ. ಇಲ್ಲಿಯ ಛಂದಸ್ಸು ಕೂಡಾ ಶುದ್ಧ ದೇಶಿಯವಾಗಿರುತ್ತದೆ.[೨] ಸಾಮಾನ್ಯವಾಗಿ ಕರ್ನಾಟಕದಾದ್ಯಂತ ಅದರಲ್ಲೂ ಉತ್ತರ ಕರ್ನಾಟಕದ ಭಜನೆಗಳ ಲಕ್ಷಣಗಳೇ ಸೊರಟೂರ ಗ್ರಾಮದಲ್ಲಿ ಇರುವುದರಿಂದ ಭಜನೆಯ ಲಕ್ಷಣಗಳ ಕುರಿತು ವಿವರಣೆ ಅಗತ್ಯವಿಲ್ಲವೆನಿಸುತ್ತದೆ. ಆದರೆ ಆಯಾ ಪ್ರದೇಶದ

ಸಾಂಪ್ರದಾಯಿಕ ಹಬ್ಬ-ಹರಿದಿನಗಳ ಸಾಂಸ್ಕೃತಿಕ ಆಚರಣೆಗಳಿಗೆ ತಕ್ಕಂತೆ ಭಜನೆ ಹಾಡುಗಳಿರುತ್ತವೆ.

ಉದಾ:- ಪೂಜೆ ಮತ್ತು ಶುಭ ಸಮಾರಂಭ ಕಾರ್ಯಕ್ರಮದಲ್ಲಿ

ಜ್ಯೋತಿ ಬೆಳಗಿತು ಧರ್ಮದ ಜೋತಿ ಬೆಳಗಿತು.

ಆರತಿ ಬೆಳಗಿರಿ ಅನ್ನದಾನಿಗೆ, ಕಾಲಭೈರವನಿಗೆ

ಶ್ರಾವಣ ಭಜನೆ

ಗ್ರಾಮದಲ್ಲಿ ಪ್ರತಿವರ್ಷ ಶ್ರಾವಣ ಮಾಸದ ಒಂದು ತಿಂಗಳು ಗ್ರಾಮದಲ್ಲಿರುವ ಎಲ್ಲಾ ಭಜನಾ ಮೇಳಗಳು ಗ್ರಾಮದ ಎಲ್ಲಾ ದೈವಗಳಿಗೆ ಭಜನೆ ಮಾಡುತ್ತಾ ಹೋಗುವ ಸಂಪ್ರದಾಯವಿದೆ. ಆ ಸಂದರ್ಭದಲ್ಲಿ ಭಜನೆಯೊಂದಿಗೆ ಅವರೆ ಆರಾಧ್ಯದೈವದ ಮೂರ್ತಿಯ ಛಾಯಾಚಿತ್ರವಿಟ್ಟು, ಅದನ್ನು ಮಹಿಳೆಯುರು ಪೂಜಿಸುತ್ತಾರೆ. ಶ್ರಾವಣ ಮಾಸದ ಮುಕ್ತಾಯದ ದಿನ ಧ್ವನಿವರ್ಧಕಗಳೊಂದಿಗೆ ಮೆರವಣಿಗೆಯ ಮೂಲಕ ಈ ಭಜನೆ ಮುಕ್ತಾಯಗೊಳ್ಳುತ್ತದೆ. ಹೀಗೆ ಗ್ರಾಮದ ಭಜನಾ ಮೇಳಗಳು ಭಕ್ತಿ ಪರಂಪರೆಯೊಂದಿಗೆ ಜನರಲ್ಲಿ ಅಧ್ಯಾತ್ಮಿಕ ನೀತಿಬೋಧಕ ಹಾಡುಗಳ ಮೂಲಕ ಜಾಗೃತಿ ಮೂಡಿಸುತ್ತಿವೆ.

ಗ್ರಾಮದಲ್ಲಿರುವ ಭಜನಾ ಮೇಳಗಳು

ಅ.ನಂ.	ಹೆಸರು	ಸ್ಥಳ
೧.	ಶ್ರೀ ಕಲ್ಮೇಶ್ವರ ಭಜನಾ ಸಂಘ	ಕಲ್ಮೇಶ್ವರ ಗುಡಿ
೨.	ಶ್ರೀ ವೀರಭದ್ರೇಶ್ವರ ಭಜನಾ ಸಂಘ	ವೀರಭದ್ರೇಶ್ವರ ಗೌರಿಮನಿ
೩.	ಶ್ರೀ ಮಾರುತಿ ಭಜನಾ ಸಂಘ	ಮಾರುತಿ ಗುಡಿ
೪.	ಶ್ರೀ ಬಸವೇಶ್ವರ ಭಜನಾ ಸಂಘ	ಬಸವೇಶ್ವರ ಗುಡಿ
೫.	ಶ್ರೀ ಕಾಲಭೈರವ ಭಜನಾ ಸಂಘ	ಪೇಟೆ ಗೌರಿಮನಿ
೬.	ಶ್ರೀ ಬೀರೇಶ್ವರ ಭಜನಾ ಸಂಘ	ಬೀರೇಶ್ವರ ಗುಡಿ
೭.	ಶ್ರೀ ಗ್ರಾಮದೇವತಾ ಭಜನಾ ಸಂಘ	ದ್ಯಾಮವ್ವದೇವಿ ಗುಡಿ

ಡೊಳ್ಳಿನ ಮೇಳ

ಡೊಳ್ಳಿಗೆ ಸಂಬಂಧಿಸಿದಂತೆ ಕುರುಬರಲ್ಲಿ ಕೆಲವು ಪುರಾಣಗಳಿವೆ. ಹಿಂದೆ ಡೊಳ್ಳಾಸುರನೆಂಬ ರಾಕ್ಷಸನಿದ್ದ. ಆತ ಪರಮಾತ್ಮನನ್ನು ಒಲಿಸಿಕೊಳ್ಳಲು ಸೂಜಿಯ ಮೇಲೆ ನಿಂತು ತಪಸ್ಸನ್ನಾಚರಿಸಿದ. ಒಂದು ದಿನ ದೇವರು ಅವನಿಗೆ ಪ್ರತ್ಯಕ್ಷವಾಗಿ ವರ ಕೇಳುವಂತೆ ಹೇಳಿದ. ಆಗ ಡೊಳ್ಳಾಸುರನು ನಿನ್ನನ್ನೇ ನುಂಗಬೇಕೆಂದು ವರ ಕೇಳಿದನು. ಶಿವ 'ತಥಾಸ್ತು' ಎಂದಾಗ ಡೊಳ್ಳಾಸುರನು ಶಿವನನ್ನೇ ನುಂಗಿಬಿಟ್ಟನು. ಆಗ ಮೂರು ಲೋಕದಲ್ಲೂ ಪ್ರಳಯವಾಯಿತು. ದೇವಾನುದೇವತೆಗಳ ಬೊಬ್ಬಿಟ್ಟರು, ಶಿವನು ಆ ರಾಕ್ಷಸನ ಹೊಟ್ಟೆಯಲ್ಲಿಯೇ ಬೆಳೆಯತೊಡಗಿದನು. ಭಾರ ತಡೆಯಲಾರದ

ಆತ 'ನೀನು ಹೊರಗೆ ಬಾ' ಎಂದು ಹೇಳಲಾಗಿ ಶಿವ ಆತನ ಹೊಟ್ಟೆಯನ್ನು ಸೀಳಿ ಹೊರಬಂದನು. ಆಮೇಲೆ ಆತನ ಡಿಂಬವನ್ನು ಡೊಳ್ಳು ಮಾಡಿದ ಚರ್ಮ ಸುಲಿದು ಅದರ ಇಬ್ಬದಿಗಳಿಗೆ ಬಿಗಿದ ಕರುಳಿನಿಂದ ಹಗ್ಗ ಬಿಗಿದ. ಕೈಗಳನ್ನು ಗುಣಿಮಾಡಿದ. ಆಮೇಲೆ ಅದನ್ನು ಹಾಲುಮತದ ಕುರುಬನಿಗೆ ದಾನ ಮಾಡಿದ. ಇದೇ ಡೊಳ್ಳು ಪರಂಪರೆ ಇಂದಿಗೂ ಮುಂದುವರೆದಿದೆ.[೩] ಹೀಗೆ ಡೊಳ್ಳು ಕುರಿತು ಹಲವು ಪುರಾಣ ಕಥೆಗಳು ಜನಪದರಲ್ಲಿವೆ.

ಸೊರಟೂರ ಗ್ರಾಮದ ಕುರುಬ ಜನಾಂಗದವರೇ ಡೊಳ್ಳುಮೇಳ ಹೊಂದಿದ್ದಾರೆ. ಡೊಳ್ಳು ಕೈಪೆಟ್ಟು, ಮತ್ತು ಡೊಳ್ಳಿನ ಹಾಡು ಇದರ ಪ್ರಮುಖ ಪ್ರಕಾರಗಳಾಗಿವೆ. ಈ ಹಿಂದೆ ಪರಿಚಯಿಸಿದ ಜನಪದ ರ್‍ವಾಣವನ್ನು ಡೊಳ್ಳಿನ ಮೇಳದವರೇ ಹೇಳುತ್ತಾರೆ. ಗ್ರಾಮದಲ್ಲಿ ಬೀರೇಶ್ವರ ಗುಡಿಯಲ್ಲಿ ಹಾಗೂ ದುರ್ಗಾದೇವಿ ಗುಡಿಯಲ್ಲಿ ಡೊಳ್ಳಿನ ಮೇಳಗಳಿವೆ. ಡೊಳ್ಳಿನ ಹಾಡಿನ ಪ್ರಾರಂಭದಲ್ಲಿ ದೇವರ ಸ್ಮರಣೆ ಇರುತ್ತದೆ.

> ದೇವಿ ನಮಃ ದೇವರಿಗೆ ಶರಣೆನ್ನುವೆನು.
> ಗುರುವಾ ರೇವಣಸಿದ್ದನಿಗೂ ಶರಣೆನ್ನುವೆನು.
>
> ಅಥವಾ
>
> ಗುರುವೆ ನಮ್ಮಯ ದೇವರು ಬಂದಾವು
> ಬನ್ನಿರೆ ಶಿವ ಶಿವ ನಮ್ಮಯ ದೇವರು ಬಂದಾವು ಬನ್ನಿರೆ.

ಹೀಗೆ ದೇವರ ಸ್ಮರಣೆಯಿಂದ ಪ್ರಾರಂಭವಾಗುವ ಈ ಹಾಡು ಯಾವುದಾದರೊಂದು ವಿಷಯ ವಸ್ತು ಅಥವಾ ವ್ಯಕ್ತಿಯ ಕುರಿತ ಕಥಾವಸ್ತುವಾಗಿರುತ್ತದೆ. ಡೊಳ್ಳಿನ ಹಾಡುಗಳನ್ನು ದೇವರ ಪೂಜೆ, ಜಾತ್ರೆ, ಉತ್ಸವ, ಮದುವೆ ಮುಂತಾದ ಶುಭ ಕಾರ್ಯಗಳಲ್ಲಿ ಮಾತ್ರ ಹಾಡುತ್ತಾರೆ.

ವೀರಭದ್ರ ಕುಣಿತ (ವೀರಗಾಸೆ)

ಕರ್ನಾಟಕದ ವೀರಶೈವ ಸಮುದಾಯದ ಮನೆದೇವರಾದ ವೀರಭದ್ರ ಹಲವಾರು ರೀತಿಯಲ್ಲಿ ಆರಾಧನೆಗೊಳ್ಳುತ್ತಿದ್ದಾನೆ. ವೀರಭದ್ರನ ಪ್ರೀತ್ಯಾರ್ಥವಾಗಿ ಗುಗ್ಗಳ ಸೇವೆಯನ್ನು ನಡೆಸುವ ಭಕ್ತರು ವೀರಗಾಸೆ, ಪುರವಂತರ ಕುಣಿತ ಮುಂತಾದ ಕಲಾಸೇವೆಯನ್ನು ಅರ್ಪಿಸುತ್ತಾರೆ. ವೀರಭದ್ರ ಹಾವಭಾವಗಳನ್ನು ಅಭಿನಯಿಸಿ ಅವನ ಪುರಾಣವನ್ನು ನಿರೂಪಿಸುವ 'ವೀರಭದ್ರನ ಕುಣಿತ'ವೂ ರೂಢಿಯಲ್ಲಿದೆ. ಉತ್ತರ ಕರ್ನಾಟಕದ ಪುರವಂತರು ವಿವಿಧ ಶಸ್ತ್ರಗಳನ್ನು ಮೈತುಂಬ ಚುಚ್ಚಿಕೊಳ್ಳುವ ಮೂಲಕ ತಮ್ಮನ್ನೇ ದಂಡಿಸಿಕೊಳ್ಳುತ್ತಾ ವೀರಭದ್ರನನ್ನು ಸ್ತುತಿಸುತ್ತಾರೆ.[೪] ಈ ಒಂದು ಕಲೆ ಗ್ರಾಮದ ವೀರಭದ್ರನ ಆರಾಧಕರಲ್ಲಿ ಕಂಡು ಬರುತ್ತದೆ. ಸೊರಟೂರ ಗ್ರಾಮದಲ್ಲಿ ಗುಗ್ಗಳ ಹೊರಡಿಸುವುದು ಎಂದು ಕರೆಯುತ್ತಾರೆ.

ಗುಗ್ಗಳ ಹೊರಡಿಸಿದಾಗ ವೀರಭದ್ರನ ಕುರಿತ ಪುರಾಣವನ್ನು ಹೇಳಲಾಗುತ್ತದೆ. ಆ ನಿರೂಪಣೆಗೆ ಒಡಪು ಎಂದು ಹೇಳಲಾಗುತ್ತದೆ. ಒಡಪು ಹೇಳುವ ಪ್ರಾರಂಭದಲ್ಲಿ ವೀರಭದ್ರನ ಸ್ಮರಣೆ ಇರುತ್ತದೆ.

ಹ ಹ ಹ .... ವೀರ

ಹಿಮ್ಮೇಳ .... ಕಡೆ.

ಹ ಹ ಹ .... ಬ್ರಹ್ಮ (ಸರ್ಪ)

ಹಿಮ್ಮೇಳ .... ಕಡೆ

ಹೀಗೆ ಒಡಪು ಹೇಳುವವರು ಪ್ರಾರಂಭದಲ್ಲಿ ವೀರಭದ್ರನನ್ನು ಸ್ಮರಿಸುತ್ತಾರೆ.

ಈ ವೀರಭದ್ರನ ಕುಣಿತದ ಕಲಾವಿದರು ವೀರಭದ್ರನೇ ಎಂದು ಹೇಳುತ್ತಾರೆ. ಅವರ ವೇಷಭೂಷಣ ವಿಶಿಷ್ಟವಾಗಿರುತ್ತದೆ. ಕಾಲಿಗೆ ಝಣ ಪಣಿಸುವ ಗೆಜ್ಜೆ, ಮೊಣಕಾಲಿಗೆ ಹಿತ್ತಾಳೆಯ ಗಗ್ಗರ, ನಡುವಿಗೆ ಬಿಗಿದ ವಸ್ತ್ರ, ಕಾಸೆ ಹಾಕಿದ ಕೆಂಪು ಪಂಚೆ, ಕೆಂಪು ಮತ್ತು ಹಸಿರು ಜುಬ್ಬ ಎದೆಗೆ ರುದ್ರನ ಪ್ರತಿಮೆ, ಕೈಯಲ್ಲಿ ಝಳಪಿಸುವ ಕತ್ತಿ, ಹಿಂದೆಲೆಗೆ ಶ್ವೇತವರ್ಣದ ಚಾಲಿ, ಹಣೆಗೆ ವಿಭೂತಿ, ಕಣ್ಣುಗಳಿಗೆ ರೌದ್ರತೆಯನ್ನು ತುಂಬುವಂತೆ ಹುಬ್ಬಿಗೆ ಹೆಚ್ಚಿದ ಕೆಂಪು ಬಣ್ಣ, ಪೊದೆ ಮೀಸೆ ಸಾಕ್ಷಾತ್ ವೀರಭದ್ರನ ಪುನರಾವತಾರ ಎಂಬಂತೆ ಆವೇಶದಿಂದ ಕತ್ತಿಯನ್ನು ಝಳಪಿಸುತ್ತಾ ಕುಣಿಯುವ ಕಲಾವಿದ ಮಧ್ಯೆ ಆಂಗಿಕ ಅಭಿನಯದ ಮೂಲಕ ಒಬ್ಬ ಕಥೆಗಾರ ಕಥೆಯನ್ನು ನಿರೂಪಿಸುತ್ತಾನೆ. ಇದರ ಮಧ್ಯ ಕಿವಿಗಡುಕ್ಕುವ ಕಂಡೆ ಮತ್ತು ಚಮಾಳದ ನಿಯತ ಸದ್ದಿಗೆ ತಕ್ಕಂತೆ ವೀರಾವೇಶದಿಂದ ಯುದ್ಧಕ್ಕೆ ನಿಂತ ಕಲಿಯಂತೆಯೇ ನರ್ತನೆ ಇರುತ್ತದೆ. ಇದ್ದಕ್ಕೆ 'ಪುರವಂತಿಕೆ' ಎಂತಲೂ ಕರೆಯುತ್ತಾರೆ. ಈ ಪುರವಂತರ ಸಂಪ್ರದಾಯದಲ್ಲಿ ಶಸ್ತ್ರ ಹಾಕಿಸಿಕೊಳ್ಳುವುದು ವಿಶೇಷವಾದುದು ದೇಹದ ವಿವಿಧ ಭಾಗಗಳಲ್ಲಿ ಶಸ್ತ್ರಗಳನ್ನು ಚುಚ್ಚಿಕೊಂಡು ಕುಣಿಯುವುದೇ ಶಸ್ತ್ರ ಪವಾಡವಾಗಿದೆ.

ಈ ಶಸ್ತ್ರ ಪವಾಡದಲ್ಲಿ ಕಂಠಶಾಸ್ತ್ರ, ನಾಭಿಶಸ್ತ್ರ, ಫಣಿಶಸ್ತ್ರ, ಕಪ್ಪೆಶಸ್ತ್ರ, ಗುಪ್ತಶಸ್ತ್ರ, ಜಿವ್ಹಾಶಸ್ತ್ರ ಮೊದಲಾದ ಪವಾಡಗಳಿವೆ. ಗ್ರಾಮದ ಪುರವಂತರು ಸುಮಾರು ೧೦೦ ಅಡಿ ಉದ್ದದ ದಾರವನ್ನು ಒಂದು ಶಸ್ತ್ರಕ್ಕೆ ಪೋಣಿಸಿ ಪುರವಂತಿಕೆಯಲ್ಲಿದ್ದ ಎಲ್ಲರ ಗಲ್ಲದಲ್ಲಿ ಪೋಣಿಸಲಾಗುತ್ತದೆ. ಕೆಲವರು ನಾಲಿಗೆಯಲ್ಲಿ ಹಾಕಿಕೊಳ್ಳುತ್ತಾರೆ. ಸುಮಾರು ೧೦೦ ಅಡಿ ಉದ್ದದ ಈ ದಾರವನ್ನು ಎಲ್ಲರೂ ಪೋಣಿಸಿಕೊಂಡು ತಾಳಕ್ಕೆ ತಕ್ಕಂತೆ ಕುಣಿಯುವುದನ್ನು ನೋಡಿದರೆ ಮೈ ರೋಮಾಂಚನಗೊಳ್ಳುತ್ತದೆ. ಸೊರಟೂರ ಗ್ರಾಮದ ಜನರಿಗೆ ಪುರವಂತಿಕೆ ಒಂದು ಕಲೆಯಲ್ಲ; ಅದು ವೀರಭದ್ರನ ಅವತಾರವೆಂದೇ ನಂಬಿಕೆ ಇದೆ. ಅದಕ್ಕಾಗಿ ಗುಗ್ಗಳ ಹೊರಡಿಸಿದಾಗ ಮಡಿ ಉಡಿ ಇರಬೇಕು. ಮೈಲಿಗೆ ಇರಬಾರದು ಎಂಬ ನಿಯಮವಿದೆ. ಮಡಿಗಾಗಿ ಗುಗ್ಗಳ ನಡೆದ ಸುತ್ತಮುತ್ತ ನೀರನ್ನು ಸಿಂಪಡಿಸುತ್ತಲೇ ಇರುತ್ತಾರೆ. ಈ ಆಚರಣೆಯನ್ನು ಗ್ರಾಮದ ವೀರಭದ್ರನ ಆರಾಧಕರು ಮಾಡುತ್ತಾರೆ. ಪುರವಂತರಾಗುವವರು ಸದಾಕಾಲ ಶಾಖಾಹಾರಿಗಳಾಗಿರಬೇಕೆಂಬ ನಿಯಮವಿದೆ. ಮದುವೆ, ದೇವರ ಕಾರ್ಯಗಳಂತಹ ಕೆಲವೇ ಸಂದರ್ಭಗಳಲ್ಲಿ ಪುರವಂತಿಕೆಯ ಗುಗ್ಗಳ ಆಚರಣೆ ನಡೆಯುತ್ತದೆ. ಕಾಲದ ದೃಷ್ಟಿಯಿಂದ ಗುರುತಿಸುವುದಾದರೆ ವೀರಭದ್ರ ಕುಣಿತ, ಪುರವಂತಿಕೆ, ವೀರಗಾಸೆ ಎಂದು ಕ್ರಮಾನುಗತಿಯಲ್ಲಿ ಗುರುತಿಸಬಹುದಾಗಿದೆ. ಆದರೆ

ವೀರಭದ್ರ ಕುಣಿತ ಅಥವಾ ಪುರವಂತಿಕೆಯು ಜನರ ಭಯಭಕ್ತಿಯ ಮಧ್ಯೆ ಒಂದು ಪವಾಡವಾಗಿ ನಡೆಯುತ್ತಿದೆ. ವೀರಗಾಸೆ ಒಂದು ಕಲೆಯಾಗಿ ಮಾರ್ಪಟ್ಟಿದ್ದು, ವಿವಿಧ ವೇದಿಕೆಗಳಲ್ಲಿ ಕಾಣಸಿಗುತ್ತದೆ.

ಮೊಹರಂ ಹೆಜ್ಜೆ ಹಾಡುಗಳು

ಮೊಹರಂ ಹಬ್ಬದಲ್ಲಿ ಮೂಲ ಕರ್ಬಲಾದ ವಿವರಗಳನ್ನೊಳಗೊಂಡು ಹಾಡಲಾಗುವ ಹಾಡುಗಳನ್ನು ಮೊಹರಂ ಹಾಡುಗಳೆಂದು ಕರೆಯುತ್ತಾರೆ. ಉಳಿದಂತೆ ಇವುಗಳಲ್ಲಿ ಸೂಫಿ ಸಂತರ ಮತ್ತು ಸೂಫಿ ಮಾದರಿಯ ಹಿಂದೂ ಸಂತರ ಹಾಡುಗಳು, ಸವಾಲ್ ಪದಗಳು ಮತ್ತು ಸಾಮಾಜಿಕ ಪದಗಳೆಂದು ವರ್ಗೀಕರಿಸಬಹುದಾಗಿದೆ.[೫] ವಿಶೇಷವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಮೊಹರಂ ಹಾಡುಗಳು ಪ್ರಚಲಿತದಲ್ಲಿವೆ.

ಮೊಹರಂ ಹಾಡುಗಳ ವೈಶಿಷ್ಟ್ಯವೆಂದರೆ ಮೂಲ ಕರ್ಬಲಾದ ಘಟನೆಗಳನ್ನು ಇಲ್ಲಿನ ಧಾರ್ಮಿಕ ನೆಲೆಯಿಂದ ಪರಿಭಾವಿಸುವುದಾಗಿದೆ. ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಮೊಹರಂ ಹಾಡು ಹೇಳುವ ತಂಡಗಳಿವೆ. ಏಕೆಂದರೆ ಈ ಭಾಗದಲ್ಲಿ ಮುಸ್ಲಿಂ ಆಳ್ವಿಕೆ ಸೂಫಿ ಸಂತರ ಗಾಢ ಪ್ರಭಾವದಿಂದಾಗಿ ಸಾಂಸ್ಕೃತಿಕವಾಗಿ ಕೊಡು-ಕೊಳ್ಳುವಿಕೆಯು ರೂಪುಗೊಂಡು ಹಿಂದೂ ಮುಸ್ಲಿಮರ ಸಾಮರಸ್ಯ ಅರ್ಥಪೂರ್ಣ ಬೆಸುಗೆಯಾಗಿ ಮಾರ್ಪಾಟಾದ ಕಾಲಘಟ್ಟದಲ್ಲಿ ಈ ಹಾಡುಗಳು ಜನ್ಮತಾಳಿವೆ. ಹೀಗಾಗಿ ಎರಡೂ ಧರ್ಮಗಳ ಆಶಯ ನಂಬಿಕೆಗಳಿಂದ ಸೃಷ್ಟಿಗೊಂಡ ಈ ಹಾಡುಗಳು ವೈವಿಧ್ಯತೆಗಳಿಂದ ಕೂಡಿದ್ದು ವಿಶಿಷ್ಟವಾಗಿದೆ.

ಮೊಹರಂ ಹಾಡು

ಕೈಯಲಿ ಕಂಕಣ ಮೈಯಲಿ ಅರಿಶಿಣ
ಗಂದ ಕಸ್ತೂರಿ ತಿಲಕ ॥ ಎಲೆ ಅಡಿಕಿ
ತುಂಬಿ ಇಟ್ಟಾರಿ ತವಕ ಲಗ್ನದ ಸಂಭ್ರಮಕ ॥ಪ॥
ಕಾಸೀಮ ಸಾಹೇಬ್ರು ಏರಿದ ಈ ಕುದುರೆ
ಹೊಂಟೈತ್ರಿ ಕಾರ್ಬುಲಕ । ಕಾಗಿ ಹಿಂಡು
ಬಂದಾವರಿ ಎಡಬಲಕ । ಇದು ನಮಗ
ಚೊಲೊದಲ್ಲರಿ ಕೆಡಕ । ತಿರಗರಿ ಹಿಂದಕ್ಕ ॥ಕೈಯಲಿ॥

ಈ ಹಾಡುಗಳು ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಇಂಬುಕೊಡುವ ಮೂಲಕ ಧಾರ್ಮಿಕ ಶ್ರದ್ಧೆ ಹಾಗೂ ಜನರಲ್ಲಿ ಭಕ್ತಿಭಾವಗಳನ್ನು ಹುಟ್ಟಿಸುತ್ತವೆ.

ಹಾಗೆಯೇ ಸವಾಲ್ ಪದಗಳು ಗ್ರಾಮದಲ್ಲಿ ಪ್ರಚಲಿತದಲ್ಲಿವೆ

ಉದಾ: ಸವಾಲೊಂದು ಶ್ಯಾಹಿರಗ ಸಬಾದೊಳಗ

ಸವಾಲಿಗೆ ಜವಾಬು ಹೇಳು ಹಾಡಿನೊಳಗ ॥ಪ॥

ಹೀಗೆ ಮೊಹರಂ ಹಾಡುಗಳು ವಿವಿಧ ಪ್ರಕಾರಗಳಲ್ಲಿ ಮೂಡಿ ಬರುತ್ತಿದ್ದು, ವಾಸ್ತವಿಕ ಅಂಶಗಳ ಸಾಹಿತ್ಯವೂ ಹಾಡಿನಲ್ಲಿದೆ. ಈ ಹಾಡುಗಳಿಗೆ ತಕ್ಕಂತೆ ಹೆಜ್ಜೆ ಹಾಕುವ ಹೆಜ್ಜೆ ಮೇಳ

ಇರುವುದು ಸೂರಟೂರ ಹೆಜ್ಜೆ, ಹಾಡಿನ ವಿಶೇಷ, ಬಿಳಿ ಬನಿಯಾನ್ ಬಿಳಿದೋತರ, ನಡಕ್ಕೆ ಗಜ್ಜೆಸರ, ತಲೆಗೆ ಕೆಂಪು ವಸ್ತ್ರ ಸೇರಿದಂತೆ ವಿವಿಧ ವಿನ್ಯಾಸದಿಂದ ಹೆಜ್ಜೆ ಹಾಕುವ ಯುವಕರಿಗೆ ದಪ್ಪು-ತಾಳಗಳಿಂದ ಸಂಗೀತವಿರುತ್ತದೆ. ಅವೆಲ್ಲವುಗಳ ಸಂಗಮವಾಗಿ ಮೊಹರಂ ಹಾಡು ಜನರ ಮೈಮನ ತಣಿಸುತ್ತವೆ. ಗ್ರಾಮದಲ್ಲಿ ಮ್ಯಾಗಲ ಓಣಿ ಹೆಜ್ಜೆ ಮೇಳ ಹಾಗೂ ಹನುಮನ ಓಣಿಯ ಹೆಜ್ಜೆ ಮೇಳಗಳಿದ್ದು, ಧಾರ್ಮಿಕ ಪರಂಪರೆಯನ್ನು ಉಳಿಸಿಕೊಂಡು ಬಂದಿವೆ.

ಬಯಲಾಟಗಳು (ನಾಟಕಗಳು)

ಕರ್ನಾಟಕ ಜನಪದ ರಂಗಭೂಮಿಯಲ್ಲಿ ಬಯಲಾಟಕ್ಕೆ ಪ್ರಮುಖ ಸ್ಥಾನವಿದೆ. ರಾಜ್ಯದಾದ್ಯಂತ ವಿವಿಧ ಸ್ವರೂಪಗಳಲ್ಲಿ ಪ್ರಚಲಿತವಿರುವ ಬಯಲಾಟವನ್ನು ಭೌಗೋಳಿಕ ದೃಷ್ಟಿಯಿಂದ ಪಡುವಲ ಪಾಯ ಮತ್ತು ಮೂಡಲಪಾಯಗಳೆಂಬ ಎರಡು ಪ್ರಭೇಧಗಳಲ್ಲಿ ಗುರುತಿಸಲಾಗುತ್ತದೆ. ಕರಾವಳಿ ಕರ್ನಾಟಕದಲ್ಲಿ ರೂಢಿಯಲ್ಲಿರುವ ಬಯಲಾಟ ಪ್ರಕಾರಗಳನ್ನು ಪಡುವಲಪಾಯವೆಂದೂ, ಮೈಸೂರಿನಿಂದ ತೊಡಗಿ, ಬಯಲುಸೀಮೆ ಹೈದ್ರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳ ಬಯಲಾಟ ಪ್ರಕಾರಗಳನ್ನು ಮೂಡಲಪಾಯವೆಂದೂ ಕರೆಯಲಾಗುತ್ತದೆ.

ಇಂತಹ ಬಯಲಾಟಗಳ ತಂಡಗಳು ಸೊರಟೂರು ಗ್ರಾಮದಲ್ಲಿವೆ. ದೊಡ್ಡಾಟ, ಸಣ್ಣಾಟ, ಸಾಮಾಜಿಕ ನಾಟಕಗಳು ಗ್ರಾಮದಲ್ಲಿ ಜಾತ್ರೆ ಉತ್ಸವ ಹಾಗೂ ನಾಟಕ ಅಭಿನಯದ ಉದ್ದೇಶದಿಂದಲೂ ಅಭಿನಯಗೊಂಡಿವೆ.

ಗ್ರಾಮದಲ್ಲಿರುವ ನಾಟ್ಯಸಂಘಗಳು

ಅ.ನಂ.	ನಾಟ್ಯ ಸಂಘಗಳ ಹೆಸರು	ಸ್ಥಳ
೧.	ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ	ವೀರಭದ್ರೇಶ್ವರ ಓಣಿ
೨.	ಶ್ರೀ ಕಲ್ಮೇಶ್ವರ ನಾಟ್ಯ ಸಂಘ	ಕಲ್ಮೇಶ್ವರ ಓಣಿ
೩.	ಶ್ರೀ ಮಾರುತಿ ನಾಟ್ಯ ಸಂಘ	ಮಾರುತಿ ಓಣಿ
೪.	ಶ್ರೀ ಕಾಲಭೈರವ ನಾಟ್ಯ ಸಂಘ	ಪೇಟೆ ಗೌರಿಮನಿ ಓಣಿ
೫.	ಶ್ರೀ ಬೀರೇಶ್ವರ ನಾಟ್ಯ ಸಂಘ	ಬೀರೇಶ್ವರ ಓಣಿ
೬.	ಶ್ರೀ ಬಸವೇಶ್ವರ ನಾಟ್ಯ ಸಂಘ	ಬಸವೇಶ್ವರ ಓಣಿ
೭.	ಶ್ರೀ ದುರ್ಗಾದೇವಿ ನಾಟ್ಯ ಸಂಘ	ದುರ್ಗಾದೇವಿ ಓಣಿ
೮.	ಶ್ರೀ ಹಳಿಕೆಮ್ಮ ದೇವಿ ನಾಟ್ಯ ಸಂಘ	ಹಳಿಕೆಮ್ಮದೇವಿ ಓಣಿ.

ಹೀಗೆ ಗ್ರಾಮದ ಆಯಾ ಓಣಿಯ ದೇವರ ಹೆಸರಿನಲ್ಲಿ ನಾಟ್ಯ ಸಂಘಗಳು ನಾಟಕಗಳು ಪ್ರದರ್ಶನ ಮಾಡುತ್ತವೆ. ಆದರೆ ಈ ಎಲ್ಲಾ ನಾಟ್ಯ ಸಂಘಗಳು ಹವ್ಯಾಸಿ ನಾಟ್ಯ ಸಂಘಗಳಾಗಿವೆ.

ಗ್ರಾಮದಲ್ಲಿ ಹವ್ಯಾಸಿ ಕಲಾವಿದರು ಮಾತ್ರ ಇದ್ದಾರೆ. ವೃತ್ತಿ ರಂಗಭೂಮಿ ಕಲಾವಿದರು ಕಂಡು ಬರುವುದಿಲ್ಲ.

ಸೊರಟೂರ ಗ್ರಾಮದಲ್ಲಿ ಅಭಿನಯಿಸುವ ನಾಟಕದ ಖರ್ಚನ್ನು ಭರಿಸಲು ಪಾತ್ರಧಾರಿಗಳೇ ಪಟ್ಟಿ ಹಾಕುತ್ತಾರೆ. ಕೆಲವರು ಸಾಲ ಮಾಡಿಯಾದರೂ ನಾಟಕ ಪಟ್ಟಿ (ಹಣ) ಕೊಟ್ಟು ಪಾತ್ರ ಮಾಡುತ್ತಾರೆ. ನಾಟಕ ಸಂಘದಲ್ಲಿ ಮ್ಯಾನೇಜರ್ ಮತ್ತು ಮಾಲಕರು ಎಂಬ ಹುದ್ದೆ ಹೊಂದಿದವರು ನಿರ್ದಿಷ್ಟ ಪ್ರಮಾಣದಲ್ಲಿ ಹಣ ಕೊಡುತ್ತಾರೆ. ಇತ್ತೀಚೆಗೆ ಒಂದು ಬಯಲಾಟ ನಾಟಕ ಅಭಿನಯಕ್ಕೆ ಸುಮಾರು ೫೦-೬೦ ಸಾವಿರ ರೂಪಾಯಿ ಖರ್ಚು ಬರುತ್ತದೆ. ಗ್ರಾಮದ ವೀರಭದ್ರೇಶ್ವರ, ಕಲ್ಮೇಶ್ವರ ಹಾಗೂ ಕಾಲಭೈರವ ನಾಟ್ಯ ಸಂಘದವರು ದೊಡ್ಡಾಟಗಳನ್ನು ಪ್ರದರ್ಶನ ಮಾಡಿದ್ದಾರೆ. ಮಾರುತಿ ನಾಟ್ಯ ಸಂಘದವರು ಪೌರಾಣಿಕ ನಾಟಕ ಪ್ರದರ್ಶನ ಮಾಡಿದ್ದಾರೆ. ದುರ್ಗಾದೇವಿ ಮತ್ತು ಕಲ್ಮೇಶ್ವರ ನಾಟ್ಯ ಸಂಘದವರು ಸಣ್ಣಾಟ ಪ್ರದರ್ಶನ ಮಾಡಿದ್ದಾರೆ. ಉಳಿದಂತೆ ಎಲ್ಲಾ ನಾಟ್ಯ ಸಂಘಗಳು ಸಾಮಾಜಿಕ ನಾಟಕಗಳನ್ನು ಪ್ರದರ್ಶನ ಮಾಡಿದ್ದಾರೆ. ಇತ್ತೀಚಿನ ಕಾಲದಲ್ಲಿ ಸಾಮಾಜಿಕ ನಾಟಕಗಳ ಅಭಿನಯ ಮಾತ್ರ ನಡೆಯುತ್ತಿದೆ. ಅದರಲ್ಲೂ ಸ್ತ್ರೀಪಾತ್ರಕ್ಕೆ ವೃತ್ತಿರಂಗಭೂಮಿ ಕಲಾವಿದರನ್ನು ಅಂದರೆ ಹೆಣ್ಣನ್ನೇ ಆಹ್ವಾನಿಸಿ ನಾಟಕ ಅಭಿನಯಿಸುವುದು ಪಾತ್ರಧಾರಿಗಳ ಹಾಗೂ ಇತ್ತೀಚಿನ ನಾಟಕ ಅಭಿಮಾನಿಗಳ ಒಂದು ಹುಚ್ಚು ಹವ್ಯಾಸವಾಗಿದೆ. ಗ್ರಾಮದಲ್ಲಿ ೧೫-೨೦ ವರ್ಷಗಳ ಹಿಂದೆ ಒಂದೆ ವರ್ಷಕ್ಕೆ ೧೬ ನಾಟಕಗಳನ್ನು ಆಡಿದ್ದಾರೆಂದು ತಿಳಿಯುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನಾಟಕ ಅಭಿನಯಗಳು ವಿರಳವಾಗುತ್ತಿವೆ. ಆದರೂ ಸಹ ಗ್ರಾಮದಲ್ಲಿ ಕಲೆಗಳು ಮತ್ತು ಕಲಾಕಾರರು ತಮ್ಮ ಪರಂಪರೆಯನ್ನು ಉಳಿಸಿಕೊಂಡಿದ್ದಾರೆ. ಆ ಹಿನ್ನೆಲೆಯಲ್ಲಿ ನೋಡಿದಾಗ ಗ್ರಾಮದ ವೀರಭದ್ರೇಶ್ವರ ಹಾಗೂ ಕಲ್ಮೇಶ್ವರ ಯುವಕ ಮಂಡಳಗಳು ದೊಡ್ಡಾಟ ಮತ್ತು ಸಣ್ಣಾಟ ಸ್ಪರ್ಧೆಗಳಲ್ಲಿ ರಾಜ್ಯಮಟ್ಟದವರೆಗೂ ಪ್ರದರ್ಶನ ನೀಡಿರುವದನ್ನು ಗಮನಿಸಬಹುದು.

೭.೩. ಸೊರಟೂರಿನ ಜನಪದ ಕ್ರೀಡೆಗಳು

ಆಧುನಿಕ ಜಗತ್ತಿನ ತಾಕಲಾಟದಲ್ಲಿ ಜನಪದ ಕ್ರೀಡೆಗಳು ಅವನತಿಯತ್ತ ಸಾಗುತ್ತಿವೆ. ಆದರೂ ಸಹ ಸೊರಟೂರ ಗ್ರಾಮದ ಹಿರಿಯರ ನೆನಪಿನಲ್ಲಿ ಗ್ರಾಮದ ಜನಪದ ಕ್ರೀಡೆಗಳು ಪಳೆಯುಳಿಕೆಗಳಾಗಿ ಉಳಿದಿವೆ. ಅವುಗಳ ವಿಷಯಾಂಶವನ್ನು ದಾಖಲಿಸಿಕೊಳ್ಳಲಾಗಿದೆ.

ಸರಗೋಲಾಟ

ಸಾಮಾನ್ಯವಾಗಿ ೧೫ ವರ್ಷದ ಒಳಗಿನ ಹುಡುಗರು ಆಡುವ ಆಟ ಇದಾಗಿದೆ. ಇದು ಜೋಳದ ದಂಟಿನಿಂದ ಆಡುವ ಆಟ. ಇಲ್ಲಿ 'ಹೆಣ್ಣಿ' ಮತ್ತು 'ಗಂಡಿ' ಎಂಬ ಪದಗಳು ಸೋಲು ಮತ್ತು ಗೆಲುವಿನ ಸಂಕೇತಗಳಾಗಿವೆ. ಸೋತವನ ಕೋಲನ್ನು ಬಹು ದೂರದವರೆಗೆ ಕೊಂಡೊಯ್ಯುತ್ತಾರೆ. ಸೋತವನು ಮೂಲಸ್ಥಳದಿಂದ ಕುಂಟುತ್ತಾ ಬರಬೇಕು. ಆಗ

ಗಂಡಿಯಾದವರು "ಹೇಲ ತಿನ್ನಾಕ ಹೋಗಿತ್ತು ಕಾಲಮುರಿಯಾಂಗ ಹೊಡದಿದ್ಯಾ" ಎಂದು ಹೇಳಿ ಸೋತವನನ್ನು ಹೀಯಾಳಿಸುವುದೇ ಈ ಆಟದ ವೈಶಿಷ್ಟ್ಯ.

ದುಂಡು ದುಂಡಕ್ಕಿ

ಇದು ಸಹ ೧೫-೧೮ ವರ್ಷದ ಒಳಗಿನ ಹುಡುಗರು ಆಡುವ ಆಟವಾಗಿದೆ. ಇಲ್ಲಿ ಬರುವ ಒಂದು ಮುಖ್ಯ ವಾಕ್ಯವೆಂದರೆ, ದುಂಡು ದುಂಡುಕ್ಕಿ ಯಾಮನಿಹಕ್ಕಿ ಹಬ್ಬಕೊಂದು 'ಕುರಿ ಯಾ ಕುರಿ ಬಸ್ಸ್ಯಾನ ಕುರಿ' ಎಂದು ಹೇಳುತ್ತಾ ಕುರಿ ಆದವನನ್ನು ಎಲ್ಲರೂ ಸೇರಿ ಬಡಿಯುವುದು ಈ ಆಟದ ವೈಶಿಷ್ಟ್ಯ. ಇದು ಶಕ್ತಿ ಪ್ರದರ್ಶನದ ಮಕ್ಕಳ ಆಟ.

ಏಕಡೊಣ್ಣೆ

ಗುಂಡಾದಾಬ (ಗಾಜಿನ ಗುಂಡುಗಳಿಂದ ಆಡುವುದು) ಎಂದು ಕರೆಯುವ ಈ ಆಟವನ್ನು ೧೦-೧೨ ವರ್ಷದ ಒಳಗಿನ ಹುಡುಗರು ಆಡುತ್ತಾರೆ. ಇಲ್ಲಿ ಬರುವ ಮುಖ್ಯ ಶಬ್ದಗಳೆಂದರೆ ಏಕಡೊಣ್ಣೆ ಎಡಪತರಂಗಿ ಮೂರಗಾಳಮುತ್ತು ನಾಕರಲಿಂಗಿ ಐಚಿಟೆಮೀಟೆ, ಅವರಪ್ಪಗಿಡ್ಡ, ಏಳಸೇರುಉಪ್ಪು ಎಂಟರಗಂಟಿ ಒಂಬೈಮಾಲು ತಿನ್ನನಹೇಲು ಎಂಬ ಶಬ್ದದ ಮುಕ್ತಾಯದೊಂದಿಗೆ ಈ ಆಟವು ಮುಕ್ತಾಯಗೊಳ್ಳುತ್ತದೆ. ಈ ಆಟದಲ್ಲೂ 'ಹೆಣ್ಣಿ' ಆದವನನ್ನು ಹೀಯಾಳಿಸುವ ಅಂಶವೂ ಇದೆ.

ಡೀಕಳಿ

ಗುಂಡಾಗಳಿಂದ ಆಡುವ ಈ ಆಟದಲ್ಲಿ 'ಹೆಣ್ಣಿ' ಆದವನು ಮುಂಗೈಯಿಂದ ಗುಂಡಾವನ್ನು ತಳ್ಳುವುದಾಗಿದೆ. ಇಲ್ಲಿ ಒಂದು ಕೈಯಿಂದ ಕಿವಿಯನ್ನು ಹಿಡಿದುಕೊಂಡು ಅದೇ ಕೈಯ ಮೊಳಕೈಯಿಂದ ಗುಂಡಾ ನೂಕುವುದಾಗಿದೆ.

ಚಿಣಿ ಪಣಿ

ಪಾವು, ದೀಪ್ಷಿ, ಮುಷ್ಟಿ, ಪುಕಾ, ಡೋಳಾ, ಜಿರ್ ಇತ್ಯಾದಿ ಈ ಆಟದಲ್ಲಿ ಬರುವ ಪ್ರಮುಖ ಶಬ್ದಗಳಾಗಿವೆ. ಚಿಣಿ ಮತ್ತು ಪಣಿ ಎಂಬುವು ಸಣ್ಣ ಮತ್ತು ದೊಡ್ಡ ಕೋಲಿನ ಹೆಸರುಗಳು. ಇಬ್ಬರ ನಡುವೆ ನಡೆಯುವ ಈ ಆಟವು ಕೇವಲ ಮಕ್ಕಳಿಗೆ ಮಾತ್ರ ಸೀಮಿತವಾಗಿದೆ.

ಗಿಡ ಮಂಗ್ಯಾನಾಟ

ದನ ಕಾಯುವ ಹಾಗೂ ಆಡು ಕಾಯುವ ಹುಡುಗರು ತಮ್ಮ ಬಿಡುವಿನ ವೇಳೆಯಲ್ಲಿ ಗಿಡದಲ್ಲಿ ಆಡುವ ಆಟವಾಗಿದೆ. ಮಂಗಗಳಂತೆ ಗಿಡದಿಂದ; ಗಿಡಕ್ಕೆ ಓಡಾಡುವುದೇ ಇಲ್ಲಿ ಪ್ರಮುಖ ಅಂಶ. ಒಬ್ಬರು ಎಲ್ಲರನ್ನು ಮುಟ್ಟಲು ಹೋಗುವುದು ಉಳಿದವರು ಅವನಿಂದ ತಪ್ಪಿಸಿಕೊಳ್ಳಲು ಹವಣಿಸುತ್ತಾರೆ.

ತುಣ್ಣೆ ತಮ್ಮಣ್ಣ

ಇದು ಗುಂಡಾಕಾರದ ಕಲ್ಲು ಹಾಗೂ ಇನ್ನೊಂದು ಚಪ್ಪಟೆಯಾಕಾರದ ಕಲ್ಲಿನಿಂದ ಆಡುವ ಆಟವಾಗಿದೆ. ಇದಕ್ಕೆ 'ಹೊಟ್ಟೆಪ್ಪ ಆಟ' ಎಂತಲೂ ಕರೆಯುತ್ತಾರೆ. ಇದು ಪ್ರಧಾನವಾಗಿ

ಗಂಡು ಹುಡುಗರು ಆಡುವ ಆಟವಾಗಿದೆ. ಇದು ಗಂಡಸುತನದ ಸಂಕೇತವಾಗಿರುವುದರಿಂದ ಈ ಹೆಸರು ಬಂದಿರಬಹುದೆಂದು ಊಹಿಸಬಹುದು.

ಗಿನ್ನಿ

ಇದೊಂದು ಬಗರಿ (ಬುಗರಿ) ಆಟವಾಗಿದೆ. ಇದರಲ್ಲಿ ಗಿನ್ನಿ ಎಂಬುದು ಒಂದು ಪ್ರಕಾರ ಹುಬ್ಬಳ್ಳಿ ಗಿನ್ನಿ ಸಾದಾ ಗಿನ್ನಿ ಎಂದು ಇದರಲ್ಲಿ ಮತ್ತೆ ಎರಡು ಪ್ರಕಾರಗಳಿವೆ.

ಜೂಜಾಟಗಳು

ಗ್ರಾಮದ ಜನಪದರು ಪಂಚಮಿ ಹಬ್ಬದಲ್ಲಿ ಜೂಜಾಟ ಆಡುವ ಸಂಪ್ರದಾಯವಿದೆ. ಇದನ್ನು ಮನರಂಜನೆಯಾಗಿ ಹಲವಾರು ಕೌಶಲ್ಯಗಳ ಪ್ರದರ್ಶನವಾಗಿ ಶಕ್ತಿ ಪ್ರದರ್ಶನವಾಗಿ ಇರುವುದನ್ನು ಕಾಣಬಹುದು.

ಕಣ್ಣಕಟ್ಟು

ಒಬ್ಬ ವ್ಯಕ್ತಿಗೆ ಕಣ್ಣು ಕಾಣದಂತೆ ಕಣ್ಣಿಗೆ ವಸ್ತ್ರ ಕಟ್ಟಿರುತ್ತಾರೆ. ಅವನು ಯಾವ ಸ್ಥಳಕ್ಕೆ ಹೋಗಬೇಕು ಎಂಬುದು ಮೊದಲೇ ನಿರ್ಧರಿತವಾಗಿರುತ್ತದೆ. ಅದಕ್ಕಾಗಿ ಇಂತಿಷ್ಟು ಪ್ರಮಾಣದಲ್ಲಿ ಹಣವನ್ನು ಜೂಜು ಕಟ್ಟಿರುತ್ತಾರೆ. ಸಮಯವನ್ನು ನಿಗದಿಮಾಡಿರುತ್ತಾರೆ. ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಜಾಗ ತಲುಪಿದರೆ ಅವನೇ ಗೆದ್ದಂತೆ. ಇದಕ್ಕೆ ಹಲವಾರು ನಿಯಮಗಳಿರುತ್ತವೆ.

ಲಿಂಬೆ ಹಣ್ಣಿನಾಟ

ಒಂದು ನಿರ್ದಿಷ್ಟ ಸ್ಥಳವನ್ನು ಗುರುತಿಸಿಕೊಂಡು ಎಷ್ಟು ಎಸೆತಗಳಲ್ಲಿ ಆ ಸ್ಥಳಕ್ಕೆ ಲಿಂಬೆಹಣ್ಣು ಎಸೆಯುವುದು ಎಂಬುದು ಈ ಜೂಜಾಟದ ಪ್ರಮುಖ ಅಂಶ. ಇದರಲ್ಲಿ ಶಕ್ತಿ ಮತ್ತು ಯುಕ್ತಿಗಳೆರಡೂ ಪ್ರದರ್ಶನವಾಗುತ್ತದೆ.

ಹೆಣ್ಣು ಮಕ್ಕಳ ಜನಪದ ಕ್ರೀಡೆಗಳು

ಜನಪದ ಕ್ರೀಡೆಗಳಲ್ಲಿ ಗಂಡುಮಕ್ಕಳ ಕ್ರೀಡೆಗಳೇ ಹೆಚ್ಚು. ಆದರೂ ಸಹ ಹೆಣ್ಣು ಮಕ್ಕಳಲ್ಲಿಯೂ ಕೆಲವು ಆಟಗಳು ಕಂಡುಬರುತ್ತವೆ.

ಕುಂಟಾಪಿಲ್ಲಿ

ಇದು ೮–೧೦ ವರ್ಷದ ಒಳಗಿನ ಹುಡುಗಿಯರು ಆಡುವ ಪ್ರಮುಖ ಆಟವಾಗಿದೆ. ಇದರಲ್ಲಿ 'ಹಂಚಿಪಿಲ್ಲೆ' ಅಂದರೆ ಒಡೆದ ಮಡಿಕೆಯ ತುಂಡನ್ನು ತೆಗೆದುಕೊಂಡು ಗೆರೆಯಿಂದ ಗೆರೆಗೆ ಕುಂಟುತ್ತಾ ಹೋಗುವುದು ಈ ಆಟದ ಪ್ರಮುಖ ಅಂಶವಾಗಿದೆ.

ಅಚ್ಚಚ್ಚ ಕುಂಬಳಕಾಯಿ

ನೀರಡಿಸಿ ಬಂದೆ, ನೀರಲಹಣ್ಣು ತಂದೆ, ಅಚ್ಚುಚ್ಚ ಕುಂಬಳಕಾಯಿ ಕೊಡವ್ವ ಎಂಬ ಮಾತಿನೊಂದಿಗೆ ಪ್ರಾರಂಭವಾಗುವ ಈ ಆಟ ಹೆಣ್ಣುಮಕ್ಕಳು ಪ್ರಾಯಕ್ಕೆ ಬಂದ ಪ್ರಸಂಗವನ್ನು ವಿವರಿಸುವಂತಿದೆ.

ಉಪ್ಪುಪ್ಪು

"ಉಪ್ಪಲೇ ಉಪ್ಪು ಆ ಮನಿಕಪ್ಪು" ಎಂಬ ಮಾತಿನೊಂದಿಗೆ ಆರಂಭವಾಗುವ ಈ ಆಟ ತಪ್ಪಿಸಿಕೊಳ್ಳುವ ಆಟದಂತೆ ಕಂಡು ಬರುತ್ತದೆ.

ಕ್ಯಾಸಿಮಿಸಿ ಕೆತ್ತಾರ

ಕಸಬರಿಗೆಯನ್ನು ಬಳಸಿಕೊಂಡು ಆಡುವ ಈ ಆಟವನ್ನು ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಕೂಡಿಯೇ ಆಡುತ್ತಾರೆ. ಇದು ಕಣ್ಣು ಮುಚ್ಚಾಲೆ ಆಟದಂತೆ ಕಂಡುಬರುತ್ತದೆ.

ಗುಜ ಗುಜ ಮಾಪುರಿ

ವಯಸ್ಕ ಹೆಣ್ಣುಮಕ್ಕಳು ಹೊಲದ ಕೆಲಸಕ್ಕೆ ಹೋದಾಗ ಈ ಆಟವನ್ನು ಆಡುತ್ತಾರೆ. ಗಂಡಿನವರು ಹಾಗೂ ಹೆಣ್ಣಿನವರು ಎಂದು ಎರಡು ಗುಂಪು ಇರುತ್ತದೆ. ಇವರು ಪರಸ್ಪರ ಸಂಭಾಷಣೆಯ ರೂಪದಲ್ಲಿ ಹಾಡು ಹೇಳುತ್ತಾರೆ.

ಗುಜ ಗುಜ ಮಾಪುರಿ ಹೆಣ್ಣ ಕೊಡ
ಗುಜಲ್ ಮಾಪರಿ ಹೆಣ್ಣ ಕೊಡ
ಸಾಮದಂಡಿಲ್ಲೆ ಹೆಣ್ಣ ಕೊಡ
ಸಿರಿಲೋಕಕ್ಕೆಲ್ಲ ಹೆಣ್ಣ ಕೊಡ

ಹೀಗೆ ಹಾಡನ್ನು ಹೇಳುತ್ತಾ ಆಟ ಆಡುತ್ತಾರೆ.

ಒಳಾಂಗಣದ ಆಟ

ಜನಪದರು ತಮ್ಮ ಬಿಡುವಿನ ಸಂದರ್ಭದಲ್ಲಿ ಒಳಾಂಗಣದ ಆಟ ಆಡುತ್ತಾರೆ.

ಹುಲಿಮನಿ

೧೬ ಮತ್ತು ೩ ಹಳ್ಳುಗಳನ್ನು ಬಳಸಿಕೊಂಡು ಹುಲಿಮನಿಯ ರೇಖಾಚಿತ್ರದಿಂದ ಈ ಆಟ ಆಡುತ್ತಾರೆ. ಇಬ್ಬರೂ ಸೇರಿ ಆಡುವ ಈ ಆಟದಲ್ಲಿ ಕಟ್ಟುವುದು ಹಾಗೂ ಖಡ್ಡಾ ಹೊಡೆಯುವುದು ಪ್ರಮುಖ ಅಂಶವಾಗಿರುತ್ತದೆ.

ಚಕ್ಕಾ

ಹುಣಸೆ ಬೀಜದ ಬ್ಯಾಳಿಯನ್ನು ತೆಗೆದುಕೊಂಡು ಈ ಆಟ ಆಡುತ್ತಾರೆ. ಈ ಆಟ ಆಡಲು ನಾಲ್ಕು ಜನ ಬೇಕು. ಈಚಿ, ಎರಡು, ಮೂರು, ಚಕ್ಕಾ, ಬಾರಾ ಇದರ ಪ್ರಮುಖ ಅಂಶಗಳು. ಹಣ್ಣು ಮಾಡುವುದು ಎಂಬ ಅಂಶದೊಂದಿಗೆ ಈ ಆಟ ಮುಕ್ತಾಯವಾಗುತ್ತದೆ.

ಈಟೀಟಮಾ ಜಂಗಮಾ

ಒಬ್ಬ ವಯಸ್ಕ ಹಾಗೂ ಹಲವಾರು ಮಕ್ಕಳೊಂದಿಗೆ ಈ ಆಟ ಆಡುತ್ತಾರೆ. ವೀಕ್ಷಣೆ, ಏಕಾಗ್ರತೆ ಪರೀಕ್ಷೆಯೇ ಇದರ ಮುಖ್ಯ ಅಂಶ.

೭.೪. ಗ್ರಾಮದ ಕಲಾಪ್ರತಿಭೆಗಳ ಸಾಧನೆಗಳು

ಸೊರಟೂರ ಗ್ರಾಮ ಜನಪದ ಕಲಾವಿದರ ತಾಣವಾಗಿದ್ದು, ಉತ್ತರ ಕರ್ನಾಟಕದಲ್ಲಿರುವ ಎಲ್ಲಾ ಬಗೆಯ ಕಲಾವಿದರು ಗ್ರಾಮದಲ್ಲಿದ್ದಾರೆ. ಆದರೆ ಅವರೆಲ್ಲರೂ ಹವ್ಯಾಸಿ ರಂಗದ ಕಲಾಕಾರರಾಗಿರುವುದರಿಂದ ಸರ್ಕಾರದ ಆಡಳಿತಾತ್ಮಕ ವ್ಯವಸ್ಥೆಯ ಸಾಧನೆಯಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಲು ಸಾಧ್ಯವಾಗಿಲ್ಲ. ಏಕೆಂದರೆ ಅವರು ತಮ್ಮ ಮೂಲ ಬದುಕಿನ ನಿರ್ವಹಣೆಗಾಗಿ ಹೋರಾಡುತ್ತಿದ್ದಾರೆ. ಅಂತಹ ಹೋರಾಟದ ಬರದಲ್ಲಿ ಗ್ರಾಮದ ಜನಪದ ರ್‍ವಾಣ ಡೊಳ್ಳಿನಹಾಡು ಮೊಹರಂ ಹಾಡು ಹೋಳಿ ಹಾಡು ಸೋಬಾನ ಪದ, ಭಜನೆ, ಗೀಗೀಪದ ಲಾವಣಿ ರಂಗಗೀತೆ ನಂದಿಕೋಲು ಕುಣಿತ ಮುಂತಾದ ಕಲಾ ಪ್ರತಿಭೆಗಳು ಇದ್ದರೂ ಎಲೆಮರೆಯ ಕಾಯಿಯಂತಿದ್ದಾರೆ. ಆದರೂ ಗ್ರಾಮದ ವೀರಭದ್ರೇಶ್ವರ ಹಾಗೂ ಕಲ್ಮೇಶ್ವರ ಯುವಕ ಮಂಡಳ ಸಾಧನೆಯ ಅಂಶಗಳನ್ನು ಗುರುತಿಸಬಹುದಾಗಿದೆ.

ಶ್ರೀ ವೀರಭದ್ರೇಶ್ವರ ಯುವಕ ಮಂಡಳ

ಗ್ರಾಮದ ಕ್ವಾಟಿ (ಹಳೆಯ ಊರು) ಭಾಗದಲ್ಲಿರುವ ಈ ಯುವಕ ಮಂಡಳವು ಪರಂಪರಾಗತವಾಗಿ ಕಲಾ ಪ್ರದರ್ಶನ ಹಾಗೂ ಸಂಘಟನೆಯಲ್ಲಿ ತೊಡಗಿದೆ. ಕರ್ನಾಟಕ ಸರ್ಕಾರದ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಲ್ಲಿ ೧೯೯೯ನೇ ವರ್ಷದಲ್ಲಿ ನೋಂದಣಿ ಮಾಡಿಕೊಂಡು ಯುವಮೇಳದಲ್ಲಿ ತನ್ನ ಕಲಾವಿದರನ್ನು ತೊಡಗಿಸುತ್ತಾ ಬಂದಿದೆ. ಮೂಲತಃ ದೊಡ್ಡಾಟ, ವೀರಗಾಸೆ, ಭಜನೆ, ಲಾವಣಿ, ಜನಪದಗೀತೆ, ರಂಗಗೀತೆ, ಸಾಮಾಜಿಕ ನಾಟಕ, ಹಂತಿಪದ, ನಂದಿಕೋಲು ಕುಣಿತ, ಮರಗಾಲು ಕುಣಿತ, ಹೋಳಿಹಾಡು ಮುಂತಾದ ಕಲಾವಿದರು ಈ ಯುವಕ ಮಂಡಳದಲ್ಲಿದ್ದು, ಅಗತ್ಯ ಸನ್ನಿವೇಶ, ಸಂದರ್ಭಕ್ಕೆ ತಕ್ಕಂತೆ ಪ್ರದರ್ಶನ ನೀಡುತ್ತಾರೆ. ಅವರ ಕಲಾ ಅಭಿನಯ ಹಾಗೂ ಪ್ರಯತ್ನದ ಫಲವಾಗಿ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಅಡಿಯಲ್ಲಿ ೨೦೦೧-೦೨ರಲ್ಲಿ ರಾಯಚೂರು ಜಿಲ್ಲೆ ಸಿಂಧನೂರಲ್ಲಿ ನಡೆದ ರಾಜ್ಯಮಟ್ಟದ ದೊಡ್ಡಾಟ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ. ಯುವಕ ಮಂಡಳದ ಬಸವರಾಜ ಹಡಪದ ಹಾಗೂ ಸಂಗಡಿಗರ ತಂಡ ವಿವಿಧ ಅಕಾಡೆಮಿ ಹಾಗೂ ಸಂಘಸಂಸ್ಥೆಗಳಲ್ಲಿ ಪ್ರದರ್ಶನ ನೀಡುತ್ತಾ ಕಲಾ ಪರಂಪರೆ ನಿರಂತರಗೊಳಿಸಿದ್ದಾರೆ. ನೆಹರು ಯುವಕೇಂದ್ರ ಕರ್ನಾಟಕ ದೊಡ್ಡಾಟ ಟ್ರಸ್ಟ್ ಸಮಗ್ರ ಜನಪದ ತರಬೇತಿ ಮುಂತಾದ ಶಿಬಿರಗಳಲ್ಲಿ ಇವರು ತರಬೇತಿ ಪಡೆದಿದ್ದಾರೆ. ಹಲವಾರು ಕಲಾ ತರಬೇತಿ ಶಿಬಿರಗಳಲ್ಲಿ ಮಂಡಳದ ಸದಸ್ಯರು ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ೨೦೦೨ರಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಗ್ರಾಮದಲ್ಲಿ ತಾಲೂಕು ಮಟ್ಟದ ಯುವಜನ ಮೇಳ ಸಂಘಟಿಸಿ ಯಶಸ್ವಿಗೊಳಿಸಿದ್ದಾರೆ. ಮೈಸೂರು ರಂಗಾಯಣದಲ್ಲಿ ನಾಟಕ ಪ್ರದರ್ಶನ, ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದಲ್ಲಿ ವೀರಗಾಸೆ ಪ್ರದರ್ಶನ ಸೇರಿದಂತೆ ಹಲವಾರು ವೇದಿಕೆಗಳಲ್ಲಿ

ಕಲಾ ಪ್ರದರ್ಶನ ನೀಡುತ್ತಿರುವುದು ಪರಂಪರಾಗತವಾಗಿ ಮುಂದುವರೆದಿದೆ. ಯುವಕ ಮಂಡಳ ಕಟ್ಟಡವನ್ನು ಸ್ವತಃ ಯುವಕರು ೧ ಲಕ್ಷ ೨೦ ಸಾವಿರ ರೂಪಾಯಿ ವಂತಿಗೆ ಸಂಗ್ರಹಿಸಿ ನಿರ್ಮಿಸಿಕೊಂಡಿದ್ದಾರೆ. ಇಂತಹ ಕಲಾ ಪ್ರತಿಭೆಗಳನ್ನು, ಕಲಾ ಮಂಡಳವನ್ನು ಗುರುತಿಸಿ ಅವರಿಗೆ ಸ್ಫೂರ್ತಿ ನೀಡುವ ಮೂಲಕ ಕಲಾವಿದರಿಗೆ ಇರುವ ಸೌಲಭ್ಯ ಒದಗಿಸಲು ಸರ್ಕಾರ ಹಾಗೂ ಗ್ರಾಮ ಸಮುದಾಯ ಗಮನ ಹರಿಸಬೇಕಾಗಿದೆ.

ಶ್ರೀ ಕಲ್ಮೇಶ್ವರ ಯುವಕ ಮಂಡಳ

ಗ್ರಾಮದ ಕಲ್ಮೇಶ್ವರ ಓಣಿಯಲ್ಲಿರುವ ಈ ಯುವಕ ಮಂಡಳವು ಕಲಾ ಪ್ರತಿಭೆಯನ್ನು ಪರಂಪರಾಗತವಾಗಿ ರೂಢಿಸಿಕೊಂಡು ಬಂದಿದೆ. ಭಜನೆ, ದೊಡ್ಡಾಟ ಸಣ್ಣಾಟ, ರಂಗಗೀತೆ, ಸಾಮಾಜಿಕ ನಾಟಕ, ಹಂತಿಪದ, ಜನಪದಗೀತೆ, ಹೋಳಿ ಹಾಡು ಮುಂತಾದ ಕಲಾವಿದರು ಯುವ ಮಂಡಳದಲ್ಲಿದ್ದಾರೆ. ೧೯೭೪ರಲ್ಲಿ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಲ್ಲಿ ನೋಂದಣಿಯಾದ ಮಂಡಳವು ತನ್ನ ಕಲಾ ಅಭಿನಯದ ಸತತ ಪ್ರಯತ್ನದಿಂದ ಯುವಜನ ಮೇಳದಲ್ಲಿ ೨೦೦೨ ರಿಂದ ೨೦೦೫ರವರೆಗೆ ವಿಜಾಪುರ, ಮಂಡ್ಯ ಜಿಲ್ಲೆಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಸತತ ೩ ವರ್ಷ ರಾಜ್ಯಮಟ್ಟದಲ್ಲಿ ಪಾಲ್ಗೊಂಡು ಸಣ್ಣಾಟ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ೨೦೦೬ರಲ್ಲಿ ಗದಗ ಜಿಲ್ಲಾಮಟ್ಟದ ಯುವಜನ ಮೇಳ ಸಂಘಟಿಸಿ ಯಶಸ್ವಿಗೊಳಿಸಿ ಜಿಲ್ಲೆಯ ಕಲಾವಿದರನ್ನು ಗ್ರಾಮಕ್ಕೆ ಆಹ್ವಾನಿಸಿ ಕಲಾ ಪರಂಪರೆಯನ್ನು ಸೊರಟೂರ ಗ್ರಾಮದಲ್ಲಿ ಗಟ್ಟಿಗೊಳಿಸಿದ್ದಾರೆ.

ಸರಕಾರದ ಹಾಗೂ ವಿವಿಧ ಸಂಘ-ಸಂಸ್ಥೆಗಳ ತರಬೇತಿ ಶಿಬಿರಗಳಲ್ಲಿ ಪಾಲ್ಗೊಂಡು ತರಬೇತಿ ಪಡೆದಿದ್ದಾರೆ. ಮಂಡಳದ ಕಲಾವಿದರು ಸಂಪನ್ಮೂಲ ವ್ಯಕ್ತಿಗಳಾಗಿಯು ಪಾಲ್ಗೊಂಡಿದ್ದಾರೆ. ಇತ್ತೀಚೆಗೆ ಗದಗ ಜಿಲ್ಲಾ ಸಾಕ್ಷರತಾ ಸಮಿತಿಯ ಸಹಯೋಗದಲ್ಲಿ ಗ್ರಾಮದ ಕಲ್ಮೇಶ್ವರ ಓಣಿಯಲ್ಲಿ ಅನಕ್ಷರಸ್ಥರಿಗಾಗಿ ಶೀಘ್ರ ಕಲಿಕಾ ಶಿಬಿರ ಸಂಘಟಿಸುವ ಮೂಲಕ ಗ್ರಾಮದ ಸಾಕ್ಷರತೆಗೂ ಕೈಜೋಡಿಸಿದ್ದಾರೆ. ನೆಹರು ಯುವ ಕೇಂದ್ರ ಮಕ್ಕಳ ನಾಟಕೋತ್ಸವ, ಶರಣ ಸಾಹಿತ್ಯ ಸಮ್ಮೇಳನ ಮತ್ತು ವಿವಿಧ ಜಾತ್ರಾ ಮಹೋತ್ಸವಗಳಲ್ಲಿ ತಮ್ಮ ಕಲಾಪ್ರದರ್ಶನ ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಸಂಘಟಿಸಿದ್ದಾರೆ. ಇವರ ಕಲಾ ಪ್ರತಿಭೆ ಹಾಗೂ ವ್ಯವಸ್ಥಿತ ಸಂಘಟನೆಗಾಗಿ ಕರ್ನಾಟಕ ಸರಕಾರದ ನೆಹರು ಯುವಕೇಂದ್ರ ೨೦೦೫ರ ಜಿಲ್ಲಾ ಯುವ ಪ್ರಶಸ್ತಿಯು ಪರಶುರಾಮ ಹೂಗಾರ ಅವರಿಗೆ ಲಭಿಸಿದೆ. ೨೦೦೬ರಲ್ಲಿ ಜಿಲ್ಲಾ ಯುವ ಮಂಡಳ ಪ್ರಶಸ್ತಿಯು ಈ ಯುವಕ ಮಂಡಳಕ್ಕೆ ಲಭಿಸಿದ್ದು ಇದು ಯುವಕರಿಂದ ಗ್ರಾಮಕ್ಕೆ ಬಂದ ಕೀರ್ತಿಯಾಗಿದೆ. ಇಂತಹ ಸಂಘಟನಾತ್ಮಕ ಕಲಾ ಸಂಪನ್ಮೂಲ ಹೊಂದಿರುವ ಯುವಕ ಮಂಡಳ ಕಲಾವಿದರಿಗೆ ಸರಕಾರದ ಸೌಲಭ್ಯವನ್ನು ಒದಗಿಸುವ ಮೂಲಕ ಎಲೆಮರೆಯ ಕಾಯಿಯಂತಿರುವ ಗ್ರಾಮದ ಎಲ್ಲಾ ಕಲಾವಿದರನ್ನು ಗುರುತಿಸಬೇಕಾಗಿದೆ.

೭.೫. ಮಹಿಳಾ ಜನಪದ ಸಾಹಿತ್ಯ

ಪುರುಷ ಪ್ರಧಾನವಾದ ಭಾರತೀಯ ಸಂಪ್ರದಾಯದಲ್ಲಿ ಜನಪದ ಸಾಹಿತ್ಯದ ಚಿಗುರು ಪುರುಷ ಮಹಿಳೆ ಎಂಬ ಬೇದಭಾವವಿಲ್ಲದೆ ಚಿಗುರಿರುವುದನ್ನು ಕಾಣುತ್ತೇವೆ. ಆದರೆ ಆ ಜನಪದ ಸಾಹಿತ್ಯ ಗುರುತಿಸುವಲ್ಲಿ ಭಿನ್ನತೆಯಾಗಿರಬಹುದು. ಆದರೆ ಮಹಿಳಾ ಸಮೂಹ ತನ್ನ ವಿವಿಧ ಆಚರಣೆಗಳಲ್ಲಿ ಅದನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಅವುಗಳ ವಿವಿಧ ಬಗೆಗಳನ್ನು ಈ ಕೆಳಗಿನಂತೆ ನೋಡಬಹುದು.

ಒಡಪು ಹೇಳುವುದು

ಒಡಪು ಎಂಬುದು ಜನಪದರ ಬಾಯಲ್ಲಿ ಬದುಕಿ ಉಳಿದ ಪದ. ಈ ಪದದ ನಿಷ್ಪತ್ತಿಯ ಬಗೆಗೆ ಅನೇಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಸಿ.ಪಿ.ಕೆ.ಯವರು ಒಡೆ ಮೂಲಧಾತುವಿನಿಂದ ಒಡಪು ಶಬ್ದ ರೂಪ ತಾಳಿದೆಯೆಂದು ಹೇಳಿ, ಹೃದಯದಲ್ಲಿ ಮೂಡಿದ ಭಾವನೆಗಳನ್ನು ಬಿಡಿಸಿ ಹೇಳುವ ಪದ ಎಂದು ಹೇಳಿದ್ದಾರೆ. ಜ್ಯೋತಿ ಹೊಸೂರ ಅವರು ಒಡ=ಒಡೆ = Union being together with ಎಂಬುದಕ್ಕೆ ಪು ಪ್ರತ್ಯಯ ಸೇರಿ ಸಿದ್ಧವಾದ ನಾಮಪದ. ಅಂದರೆ ಗಂಡನ ಅಥವಾ ಹೆಂಡತಿಯ ಹೆಸರಿಗೆ ವರ್ಣನೆಯಾಗಿ ಅದರೊಂದಿಗೆ ಒಡಗೂಡಿಯೇ ಬರುವುದರಿಂದ ಇದು ಒಡಪು ಎನಿಸಿಕೊಳ್ಳುತ್ತದೆ ಎಂದು ಹೇಳಿದ್ದಾರೆ.[೬]

ಒಡಪು ಒಗಟು

ಒಡಪು ಒಗಟಿನಂತೆ ಭಾಷಿಕ ಬಗೆಯಲ್ಲಿ ಸೃಷ್ಟಿಗೊಂಡ ಜನಪದರ ಕಲ್ಪನೆಯ ಕುಸುಮ. ಮನರಂಜಿಸುವ ಮಲ್ಲಿಗೆ ಒಗಟಿಗಿಂತ ಭಿನ್ನವಾದ ಒಡಪು ತನ್ನದೇಯಾದ ವೈವಿಧ್ಯ ವೈಶಿಷ್ಟ್ಯವನ್ನು ಪಡೆದುಕೊಂಡು ಗ್ರಾಮೀಣರಲ್ಲಿ ಬಳಕೆಯಲ್ಲಿರುವ ಜನಪದ ಸಾಹಿತ್ಯ ಪ್ರಕಾರವಾಗಿದೆ. ಆದರೆ ಕೆಲವು ಜನ ವಿದ್ವಾಂಸರು ಒಗಟು ಒಡಪು ಒಂದೇ ಎಂಬ ತಪ್ಪು ಕಲ್ಪನೆಯಿಂದ ವ್ಯಾಖ್ಯಾನಿಸಿ ವಿವರಿಸಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಒಡಪು ಒಗಟಿನಿಂದ ಭಿನ್ನವಾದುದು ಎಂದು ಸ್ಪಷ್ಟಪಡಿಸಿದ ಬೆಟಗೇರಿ ಕೃಷ್ಣಶರ್ಮರು, ಹೆಸರ ಹೇಳ್ತಿನಿ ಒಡಪಕಟ್ಟಿ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ ನಾಗರಿಕ ಸಮಾಜದ ದಂಪತಿಗಳು ತಮ್ಮ ಗಂಡ ಹೆಂಡತಿಯ ಹೆಸರುಗಳನ್ನು ಒಲವಿನ ಸವಿಬೆರೆತ ಭಾವ ಗದ್ಯದಲ್ಲಿ ಹೇಳುವುದುಂಟು ಈ ಭಾವ ಗದ್ಯಗಳನ್ನು ನಾಗರಿಕರು ಒಗಟು ಎಂದು ಹೇಳುತ್ತಿದ್ದರೆ. ಜನಪದರು ಒಡಪು ಎಂದು ಹೇಳುವರು ಎಂದಿದ್ದಾರೆ.[೭]

ಹೆಸರು ಹೇಳುವ ಕೇಳುವ ತವಕ

ಮದುವೆಯಾದ ಹೊಸದರಲ್ಲಿ ನವದಂಪತಿಗಳಿಗೆ ಮೋಹ-ವ್ಯಾಮೋಹ, ಮೈಮನ ಸೆಳೆಯುವುದು. ಅಮೂರ್ತ ಪ್ರೇಮಭಾವ ಮನದಾಳದಲ್ಲಿ ನೆಲೆಯೂರಿರುವುದರಿಂದ ಗಂಡನ ಹೆಸರನ್ನು ಕೇಳಿದರೆ ಹೆಂಡತಿ ಲಜ್ಜೆಯಿಂದ ಹೇಳುವುದಿಲ್ಲ. ಹಾಗಂತ ಹೇಳದೇ ಬಿಡುವದಿಲ್ಲ. ಹೊಸದಾಗಿ ಮದುವೆಯಾದವರಿಗಂತೂ ಓರಗೆಯವರು ಕೇಳದೆ ಬಿಡುವುದಿಲ್ಲ. ಹಾಗೆ ಹೆಸರು ಹೇಳಿದರೆ ಒಡಪಿಟ್ಟು ಹೇಳು ಕಿಮ್ಮತ್ತಿನ ಗಂಡನ ಹೆಸರನ್ನು ಎಂದು ಪೀಡಿಸುತ್ತಾರೆ. ಆಗ ಆ

ಮಹಿಳೆ ನೆರೆದ ಸಭೆಯನ್ನೇ ಕೂಡಿದ ಗೆಳತಿಯರನ್ನೇ ಒಡಪಿನ ವಸ್ತುವಾಗಿಸಿ ಹೆಸರು ಹೇಳುವುದು ಸೊರಟೂರ ಗ್ರಾಮದಲ್ಲಿ ಸಹಜವಾಗಿದೆ.

ಸೆರಗ ಹಿಡಿಬ್ಯಾಡ್ರಿ ಸೆರಿ ಮುತ್ತ ಉದರ್ಯಾವು
ನೀರಿಗಿ ಹಿಡಿಬ್ಯಾಡ್ರಿ ನೀರಲ್ಹಣ್ಣು ಉದುರ್ಯಾವು
ಆರತಿ ಹಿಡಿಬ್ಯಾಡ್ರಿ ಆರತ್ಯಾನ ಎಣ್ಣಿ ತುಳುಕೀತು
ದೂರ ನಿಂತು ಕೇಳ್ರಿ ದ್ರೌಪದಿ ಹೆಸರು
ಸರದ ನಿಂತ ಕೇಳ್ರಿ ಸರಸೋತಿ ಹೆಸರು
ಹತ್ತಮಂದ್ಯಾಗ ಕೇಳ್ರಿ ಅತ್ತಿಮಾವರ ಹೆಸರು
ನಾಕಮಂದ್ಯಾಗ ಕೇಳ್ರಿ ನಾದನ್ಯಾರ ಹೆಸರು
ಐದು ಮಂದ್ಯಾಗ ಕೇಳ್ರಿ ಮೈದುನರ ಹೆಸರು
ಬಾಳ ಮಂದ್ಯಾಗ ಕೇಳ್ರಿ ಬಾವಗುಳ ಹೆಸರು
ಕುಂತ ಸಭಾದಾಗ ಹೇಳ್ತಿನ್ರಿ ನಮ್ಮ ಯಜಮಾನ್ರ ಹೆಸರು_____
(ಕೃಷ್ಣನಾಯಕರು)

ಸೊರಟೂರ ದುರಗಮ್ಮನ ಬಾಗಿಲಿಗೆ ಕಟ್ಟ್ಯಾರ
ತರ ತರದ ತೋರಣ
ನಾನು (ಕಿಶೋರ ನಾಯಕರ) ಹೆಸರ ಹೇಳ್ತಿನ್ರಿ
ಗೌಡ್ರ ಮನೆಯ ಕಾರಣ.

ಹಿಂದೂಸ್ತಾನದಾಗ ಬೆಳೆಯೊಂದು ಗೋದಿ
ಈಗಲವರು ತೊಡುವದು ಖಾದಿ
(ಕೃಷ್ಣರಾಯರ) ಹೆಸರ ಹೇಳ್ತಿನಿ ಬಿಡ್ರಿ ಹಾದಿ

ಆಗುಡ್ಡ ಈಗುಡ್ಡ ಸೊರಟೂರ ಗುಡ್ಡ ಕಪ್ಪತ್ತಗುಡ್ಡ
ಜಾಜಮಲ್ಲಿಗೆ ಹೂ, ಜೂಜಮಲ್ಲಿಗೆ ಹೂ, ಮದ್ದನಮಲ್ಲಿಗೆ ಹೂ
ತಗೊಂಡು ಇದ್ದಲ್ಲಿಗೆ ಬರತಾರ _________ (ಕಿಶೋರ ನಾಯಕರು)

ಅತ್ತಿ ಹೆಸರು ಅತ್ತಿ ಹೂ, ಮಾವನ ಹೆಸರು ಮಲ್ಲಿಗೆ ಹೂ
ನನ್ನ ಹೆಸರು ಸುಗಂಧಿ ಹೂ, ಸುಗಂಧಿ ಮುಂದ ಸುಳದಾಡತಾರ
_________ (ಕಿಶೋರ ನಾಯಕರು)

ಮಂಗಳ ಕಾರ್ಯಗಳಿಗೆ ಸಂಬಂಧಿಸಿದ ಒಡಪುಗಳು

ಅತ್ತಿ ಬಾಗಿಲದಾಗ ಎತ್ತರ ಬೆಳೆದಿರುವದು ಉತ್ತತ್ತಿಮರ
ಅದರ ಕೆಳಗ ಕಟ್ಟಿರೋದು ತವರಿನವರು ಕೊಟ್ಟ ಗೋಪಿಕರ
ಅವರು ನನ್ನ ಕೊರಳಾಗ ಕಟ್ಟಿದ್ದು ಮಾಂಗಲ್ಯ ಸೂತ್ರದ ಸರ.

ಅರ್ಜುನನ ಹೆಂಡತಿ ಪ್ರಮಿಳಾ
ಲಕ್ಷ್ಮಣನ ಹೆಂಡತಿ ಉರ್ಮಿಳಾ
ನಾ ಹಚ್ಚುವೆ ನಮ್ಮವರಿಗೆ ಪರಿಮಳಾ____

ಅನ್ನಪೂರ್ಣೆ ಮಾಡಿದ್ದು ಅನ್ನದಾನ
ಕೃಷ್ಣ ಮಾಡಿದ್ದು ವಸ್ತ್ರದಾನ
ನನ್ನ ತಾಯಿ-ತಂದೆ ಮಾಡಿದ್ದು ಕನ್ಯಾದಾನ____

ಉಡುಪಿಯಲ್ಲಿರುವದು ಕನಕನಕಿಂಡಿ
ಮುತ್ತೈದೆಯರು ಮುಡಿಯುವದು ಮಲ್ಲಿಗೆ ದಂಡಿ
ನಮ್ಮ ರಾಯರಿಗೆ ಹಾಕುವೆ ಬೆಸನ್ ಉಂಡಿ____

ಎಲೆ ಅಡಿಕೆ ಜೊತೆ ಬೇಕು ಕಾಚು
ನಮ್ಮವರಿಗೆ ನಾ ಕೊಡುವೆನು ವಾಚು____

ಕರ್ನಾಟಕದಲ್ಲಿ ನೀಲಗಿರಿ ಇರುವದು ತೆಂಕಣ
ನಾನು ನಮ್ಮ ರಾಯರಿಗೆ ಕಟ್ಟತೀನಿ ಕಂಕಣ____

ಅಣ್ಣಿಗೇರಿಯಾಗ ಪ್ರಸಿದ್ಧವಾದದ್ದು ಮೆಣಸಿನಕಾಯಿ
ನಮ್ಮರ ಕೈಯಾಗ ನಾ ಕೊಡುವೆನು ಎಳ್ಳ ಕರ್ಚಿಕಾಯಿ____
ಗಂಗಾಸಾಗರ ಹೊಳಿ ಗಜನಿಂಬಿ ತೊಳಿ
ನಮ್ಮವರ ಕೈಯಾಗ ಬಂಗಾರದ ಸಳಿ
ನನ್ನ ಕೊರಳಾಗಿರೋದು ಮಂಗಲ ಸೂತ್ರದ ಎಳಿ____

ದೇವಲೋಕದಲ್ಲಿ ದೇವೆಂದ್ರ ಇರುವಾಗ
ಸಾಲಮುತ್ತೈದಾರು ಸಡಗರ ಕೇಳುವಾಗ
ಮಾಯದಿಂದ ಬಂದು ಮಂಗಳ ಸೂತ್ರ ಕಟ್ಟತಾರ____ (ಕೃಷ್ಣನಾಯಕರು)

ಕೃಷಿ ಕಾರ್ಯ ಸಂಬಂಧಿ ಒಡಪುಗಳು
ಹಕ್ಕ್ಯಾಗ ಎತ್ತು ಭರಣ್ಯಾಗ ಮುತ್ತು
ಮುತ್ತೈದರ ಕರಕೊಂಡು ಬಿತ್ತಾಕ ಹೋಗತಾರ____ (ಕೃಷ್ಣನಾಯಕರು)

ಬರ್ ಬರಾಟಿ ಬಣ್ಣದ ಕ್ವಾಟಿ
ನಮ್ಮವರು ಮಾಡದು ಹನ್ನೆರಡು ಎತ್ತಿನ ಮೇಟಿ ____

ಹರಿ ಪಲ್ಲೇಕ ಹದಾ ಹಾಕಿ
ಮಂಡಿಪಲ್ಲೇಕ ನುಚ್ಚ ಹಾಕಿ

ಹಿಟ್ಟಿನ ಪಲ್ಲೇಕ ಹುಳಿ ಹಿಂಡಿ
ಅಗಸಿ ಹಿಂಡಿ ಕುಟ್ಟಿ ಗುರೆಳ್ಳು ಹಿಂಡಿ ಕುಟ್ಟಿ
ಆರ ರೊಟ್ಟಿ ಕೈಯಾಗ ಕೊಟ್ಟು
ಒಂಬತ್ತು ರೊಟ್ಟಿ ಬುತ್ತಿಕಟ್ಟಿ
ಹರಗಿ ಬಾ ಅಂದ್ರ ತಿರಗಿ ಬರತಾರ ______ (ಕಿಶೋರನಾಯಕರು)

ಗಂಡು ಮಕ್ಕಳು ಹೇಳುವ ಕೆಲವು ಒಡಪುಗಳು :

ಹಾದ್ಯಾಗ ಇರೋದು ಹಾವರಾಣಿ
ಬೇಲ್ಯಾಗ ಇರೋದು ಉತ್ರಾಣಿ
ನನ್ನ ಹೆಸರು ಕೇಳಾಕಿ ಕೊಳ್ಳಾಗ ತತ್ರಾಣಿ____.

ಹಗ್ಗಲ್ಲೆ ಹೊಡದ್ರ ಮಗ್ಗಲಿಗೆ ಬರತಾಳ ____.

ಒಣಕಿಲ್ಲೆ ಹೊಡದರ ಕುಣಕೊಂತ ಬರತಾಳ___
ಆಕಾಶದಾಗ ಹಾರುವವು ಹಕ್ಕಿ
ನಮ್ಮೊಳೆ ಬಾಳ ಪುಕ್ಕಿ _____.

ಎಣೆಗ್ಯಾರ ಜೋಳದ ರೊಟ್ಟಿ
ಕೆನಿ ಮೊಸರ ಬುತ್ತಿ
ಕಣಕ ಬಂದು ಉಣಿಸಿ ಹೊಕ್ಕಾಳ______

ಹೊಲದಾಗ ಬಿತ್ತೋದು ಹತ್ತಿ
ದೇವರ ಮುಂದಿರೋದು ಬತ್ತಿ
ನನಕಿಂತ ನಮ್ಮಾಕಿ ಬಾಳ ಕತ್ತಿ ____

ಹಂಡೆ ಸಂದ್ಯಾಗ ಕುಂತ
ಉಂಡಿ ತಿಂತಾಳ _____

ಒಡಪುಗಳಲ್ಲಿ ಲಿಂಗತಾರತಮ್ಯ

ಗಂಡು ಹೆಣ್ಣು, ಹೆಚ್ಚು ಕಡಿಮೆ, ಮೇಲುಕೀಳು ಎಂಬ ಭಾವನೆಗಳು ಇಂದು ನಿನ್ನೆಯದಲ್ಲ; ಇದು ಪರಂಪರಾಗತವಾಗಿ ಮೂಡಿಬಂದಿದೆ. ಇದಕ್ಕೆ ಸೊರಟೂರ ಗ್ರಾಮವು ಹೊರತಾಗಿಲ್ಲ ಅದರಲ್ಲೂ ಲಿಂಗ ತಾರತಮ್ಯಕ್ಕೆ ಕಾರಣಗಳನ್ನು ನೋಡಿದಾಗ ಗಂಡಸರಿಗಿಂತ ಹೆಣ್ಣುಮಕ್ಕಳೆ ಅದನ್ನು ಹೆಚ್ಚಾಗಿ ಪೋಷಿಸಿದಂತೆ ಕಂಡುಬರುತ್ತದೆ. ಉದಾ: ಗ್ರಾಮದಲ್ಲಿರುವ ಒಡಪುಗಳನ್ನು ಗಮನಿಸಿದಾಗ ಹೆಣ್ಣುಮಕ್ಕಳು ತಮ್ಮ ಗಂಡಂದಿರ ಹೆಸರುಗಳನ್ನು ಹೇಳುವಾಗ ಹಲವಾರು ರೀತಿಯ ಒಡಪುಗಳಲ್ಲಿ ಗಂಡನ ಕುರಿತು ವರ್ಣನೆ, ಹೊಗಳಿಕೆ ಕಂಡುಬರುತ್ತದೆ.

ಆದರೆ ಗಂಡನಾದವನು ಹೆಂಡತಿಯ ಹೆಸರು ಹೇಳುವಾಗ ಹೆಣ್ಣನ್ನು ಉಢಾಪೆಯಾಗಿ, ಕೀಳಾಗಿ ಕಾಣುವ ಒಡಪುಗಳೇ ಅಧಿಕವಾಗಿರುತ್ತವೆ. ಇದನ್ನು ಕ್ಷೇತ್ರಕಾರ್ಯದಲ್ಲಿ ಪ್ರಶ್ನಿಸಿದಾಗ ಗಂಡು ಮೇಲು ಹೆಣ್ಣು ಕೀಳು ಎಂಬುದನ್ನು ಸ್ವತಃ ಹೆಂಗಸರೇ ಹೇಳಿಕೊಳ್ಳುತ್ತಾರೆ. ಗಂಡನಾದವನು ಹೆಣ್ಣನ್ನು ಕುರಿತು ನಕಾರಾತ್ಮಕ ಭಾವನೆಯ ಒಡಪು ಹೇಳುವುದರಲ್ಲಿಯೇ ಹೆಣ್ಣ-ಮಕ್ಕಳು ಸಂತೋಷಪಡುತ್ತಾರೆ.

ಹೀಗೆ ಗಂಡು, ಹೆಣ್ಣುಗಳ ಕುರಿತು ಮೇಲುಕೀಳು ಹೆಚ್ಚು ಕಡಿಮೆ ಎಂಬ ಪರಂಪರೆ ಹಾಗೆ ಮುನ್ನಡೆದಿದೆ. ಆದರೆ ಇತ್ತೀಚಿನ ಕಾಲಘಟ್ಟದಲ್ಲಿ ಗಂಡು-ಹೆಣ್ಣಿನ ಮಧ್ಯೆ ಜಗಳ ತಂಟೆ ತಕರಾರು ಬಂದರೆ ಹೆಣ್ಣುಮಕ್ಕಳನ್ನೇ ಪ್ರಧಾನವಾಗಿ ಕಾಣುವ ಮೂಲಕ ಹೆಣ್ಣನ್ನು ಮೇಲು ಎಂಬಂತೆ ಕಾಣಲಾಗುತ್ತದೆ. ಇದಕ್ಕೆ ಕಾನೂನಿನ ಭಯವು ಗಂಡಸರಲ್ಲಿ ಇರಬಹುದು. ಅಂದರೆ ಸಮಕಾಲೀನ ಸಂದರ್ಭದಲ್ಲಿ ಈ ಭಾವನೆ ವಿಷಯಾಧಾರಿತವಾಗಿ ಬದಲಾವಣೆ ಗೊಳ್ಳುತ್ತಿರುವುದು ಕಂಡುಬರುತ್ತಿದೆ.

ಒಗಟುಗಳು

ಒಡಪುಗಳು ಗಂಡ ಹೆಂಡತಿಯನ್ನು ಅಥವಾ ಹೆಂಡತಿ ಗಂಡನನ್ನು ವರ್ಣಿಸುವ ಮೂಲಕ ಶೃಂಗಾರ ಮತ್ತು ಹಾಸ್ಯರಸಗಳಿಂದ ಮನರಂಜಿಸಿದರೆ ಒಗಟುಗಳು ನಮ್ಮ ಬುದ್ಧಿಶಕ್ತಿಯನ್ನು ಪರೀಕ್ಷಿಸುವ ಮೂಲಕ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಯೋಚನಾಶಕ್ತಿಯನ್ನು ವೃದ್ಧಿಸುತ್ತವೆ. ಜನಪದರು ಹೇಳುವ ಒಗಟುಗಳು ಮನಸ್ಸಿನಲ್ಲಿ ಸೃಜನಶೀಲತೆಯನ್ನು ಹುಟ್ಟುಹಾಕುತ್ತವೆ. ಕೆಲವು ಒಗಟುಗಳು ಪ್ರಶ್ನೆಯ ರೂಪದಲ್ಲಿದ್ದರೆ, ಕೆಲವು ಲೆಕ್ಕಗಳ ರೂಪದಲ್ಲಿರುತ್ತವೆ. ಇನ್ನು ಕೆಲವು ಪ್ರಶ್ನೆಯಲ್ಲಿಯೇ ಉತ್ತರವನ್ನು ಅಡಗಿಸಿಕೊಂಡಿರುತ್ತವೆ.

ಉದಾ :

೧. ಅಂಗ್ಯೆ ಅಗಲ ಕಣ,

ಮುಂಗ್ಯೆ ಉದ್ದ ಮೇಟಿ

ತೊಡ್ಡ ಇಲ್ಲದ ಹೋರಿ

ಹಂತಿ ತಿರುವತಾವು.

ಅರ್ಥ :- ಬೀಸುವ ಕಲ್ಲು

ಇಲ್ಲಿ ಅಂಗ್ಯೆ ಅಗಲ ಕಣ ಎಂದರೆ ಬೀಸುವ ಕಲ್ಲು ಮುಂಗ್ಯೆ ಉದ್ದ ಮೇಟಿ ಎಂದರೆ ಬೀಸುವ ಕಲ್ಲಿನ ಗೂಟ ತೊಡ್ಡು (ವೃಷಣ) ಇಲ್ಲದ ಹೋರಿ ಎಂದರೆ ಹೆಂಗಸರು, ಹಂತಿ ತಿರುವ ತಾವು ಎಂದರೆ, ಬೀಸಿ ಕಲ್ಲು ತಿರುವುವವರು.

೨. ಮಾತು ಗೀತು ಯಾವಾಗ - ಎದುರು ಬದರು ಕುಂತಾಗ ಅಳೋದು ಗಿಳೋದ ಯಾವಾಗ - ಅರ್ಥ ಒಳಗ ಹೋದಾಗ ನಗೋದ ಗೀಗೋದು ಯಾವಾಗ -

ಮೂರ್ತಿ ಒಳಗ ಹೋದಾಗ.

= ಹೆಣ್ಣುಮಕ್ಕಳು ಬಳೆ ಇಡಿಸಿಕೊಳ್ಳುವ ಪ್ರಸಂಗ.

೩. ಹರಿ ನನ್ನ ಕೂದಲು ಪರಾಪರಾ ಒಡಿ ನನ್ನ ತಲೆಯ ಪಟಪಟಾ ಕುಡಿ ನನ್ನ ಉಚ್ಚಿ ಗಟಾಗಟಾ ತಿನ್ನ ನನ್ನ ಸೆಗಣಿ ಲಚಾಲಚಾ

= ತೆಂಗಿನಕಾಯಿ ಸುಲಿಯುವುದು ತೆಂಗಿನಕಾಯಿ ಒಡೆಯುವುದು.

ತೆಂಗಿನಕಾಯಿ ನೀರು ಕುಡಿಯುವುದು, ಕೊಬ್ಬರಿ ತಿನ್ನುವುದು

೪. ಒಬ್ಬನ್ನ ಕಟ್ಟಿದ್ದೆ, ಒಬ್ಬನ್ನ ಬಿಟ್ಟಿದೆ. ಒಬ್ಬನ್ನ ಕರಕೊಂಡು ಒಳಗ್ಹೋದೆ

= ಆಕಳು, ಕರು, ಹಾಲು

೫. ಒಬ್ಬನಿಗೆ ಕೈ ಕೊಟ್ಟೆ, ಒಬ್ಬನಿಗೆ ಕಾಲುಕೊಟ್ಟೆ, ಒಬ್ಬನಿಗೆ ಸೀರೆ ಬಿಚ್ಚಿ ಕೊಟ್ಟೆ

= ಬಳೆಗಾರ, ಕಂಚಗಾರ, ಅಗಸ

೬. ಒಬ್ಬನ್ನ ನೂಕಿದೆ, ಒಬ್ಬನ್ನ ಹಾಕಿದೆ, ಒಬ್ಬನ್ನು ಹಿಡಕೊಂಡು ಒಳಗ್ಹೋದೆ

= ಕದ, ಅಗಳಿ (ಒಳಚಿಲಕ) ದೀಪ

೭. ಒಬ್ಬನ್ನು ಹಾಸಕೊಂಡೆ, ಒಬ್ಬನ್ನ ಹೊತ್ಕೊಂಡೆ, ಒಬ್ಬನ್ನ ಇಟಗೊಂಡು ಮಲಕೊಂಡೆ =ಚಾಪೆ, ಕಂಬಳಿ, ತಲೆದಿಂಬು.

೮. ತಿಪ್ಪಿಮ್ಯಾಲೆ ಕಸ, ಒಳಗೆಲ್ಲಾ ರಸ = ಉಳ್ಳಾಗಡ್ಡಿ

೯. ಗಿಡ್ಡ ಹುಡುಗ ಅಡ್ಡ ಬಿದ್ದಾನ = ಹೊಸ್ತಿಲು

೧೦. ಅವ್ವನ ಸೀರಿ ಮಡಚಲಾರೆ, ಅಪ್ಪನ ರೊಕ್ಕ ಎಣಿಸಲಾರೆ. = ಆಕಾಶ, ನಕ್ಷತ್ರ

೧೧. ಗುಡ್ಡದ ಹಿಂದ ಗುಡಾರ ಒಣಾಕಿನಿ ಒಣಗವಲ್ಲದು = ನಾಲಿಗೆ.

೧೨. ಗುಡ್ಡದ ಹಿಂದ ಗೊಳಿ ಕುಂತೈತಿ = ತುರುಬ

೧೩. ಕರಿ ಎತ್ತು ತೇಲತೈತಿ ಬಿಳಿಎತ್ತು ಮುಳಗತೈತಿ = ಚಹಾಪುಡಿ, ಸಕ್ಕರೆ

೧೪. ರೊಕ್ಕ ಕೊಟ್ಟು ತರೋದು, ಮುಂದ ಕುಂತು ಅಳೋದು = ಉಳ್ಳಾಗಡ್ಡಿ

೧೫. ಎಂಟೆಮ್ಮಿಯೊಳಗ ನಾಕೆಮ್ಮಿ ಸತ್ತರ ಎಷ್ಟು ಉಳಿದವು = ಎಂಟು

೧೬. ಗುಡ್ಡದ ಹಿಂದ ಗೂಳಿ ಒದರತೈತಿ = ಹೂಸು

೧೭. ಅಂಕುಡೊಂಕಿನ ಬಾವಿಯೊಳಗ ಇಣಿಕಿ ನೋಡಿದರ ಸೆರಿ ನೀರಿಲ್ಲ = ಕಿವಿ

೧೮. ಗುಡ್ಡದ ಹಿಂದ ಗುಣಕಲ್ಲ ಇಟ್ಟನಿ = ತುರುಬ

೧೯. ನಾಲ್ಕು ಹಸೆಮರ, ಎರಡು ಒಣಮರ, ಎರಡು ಬಿಟಬಿಟ, ಒಂದು ಜೀಸಣಿಕೆ

= ಆಕಳಕಾಲು, ಕೋಡು, ಕಿವಿ, ಬಾಲ

೨೦. ಹಸಿರುಂಟ ರಸಬಾಳ ಮಗ್ಗಿ ಗುಂಟ ಕಾಯಿಲ್ಲ = ಕಳ್ಳಿಗಿಡ

೨೧. ಎಲೆಬಳ್ಳಿ ತೋಟದೊಳಗ ಎಲುಬು (ಮೂಳೆ) ಇಲ್ಲದ ಹಂದಿ ಮೇಯ್ತಾವು

= ತಲೆಯಲ್ಲಿರುವ ಹೇನು

೨೨. ಹೋಗೋವಾಗ ಒಂದ ಹೊಕ್ಕೈತಿ ಬರುವಾಗ ಎರಡು ಬರುತಾವು

= ಗರ್ಭಿಣಿ ಹೆಂಗಸು ಹೆರಿಗೆಗೆ ಹೋಗುವ ಪ್ರಸಂಗ

೨೩. ದೊಪ್ಪನೆ ಬಿತ್ತೊ ದುಮ್ಮಣ್ಣ ಅಂಗಿ ಹರಿಯಿತೊ ಕೆಮ್ಮಣ್ಣ

= ಹುಣಸೆ ಹಣ್ಣು ನೆಲಕ್ಕೆ ಬೀಳುವುದು

ಜನಪದರ ಜಾಣ ಲೆಕ್ಕ

ಒಂದು ಮನೆಯಲ್ಲಿ ೩ ಬಾಗಿಲ ಇವೆ.

೯ ಗ್ವಾದ್ಲಿಗಳಿವೆ

೭ ನೀರಿನ ಬಾನಿಗಳಿವೆ.

ಆ ಮನೆಯಲ್ಲಿ ಜಂಗಳಿ ಧನ (ಆಕಳಗುಂಪು) ಇದೆ.

೩ ಬಾಗಿಲ ದೊಳಗೆ ಬರುವ ಆಕಳುಗಳ ಸಂಖ್ಯೆ ಒಂದೇ ಇರಬೇಕು.

೯ ಗ್ವಾದ್ಲಿಗಳಲ್ಲು ಅಷ್ಟಷ್ಟೆ ಸಂಖ್ಯೆಯ ಆಕಳುಗಳು ನಿಲ್ಲುತ್ತವೆ.

೭ ನೀರಿನ ಬಾನಿಗಳಿಗೆ ನೀರು ಕುಡಿಯಲು ಆಕಳು ಸಮಪ್ರಮಾಣದಲ್ಲಿ ಹೋಗಬೇಕು. ಹಾಗಾದರೆ ಆ ಮನೆಯಲ್ಲಿ ಒಟ್ಟು ಎಷ್ಟು ಆಕಳುಗಳಿವೆ.

ಅಂದರೆ ೩ * ? =

೯ * ? = ಸಮವಾಗಿ ಒಂದೇ ಸಂಖ್ಯೆ ಬರಬೇಕು

೭ * ? =

ಹೀಗೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಪರಿಣಿತರೆನಿಸಿಕೊಂಡವರಿಗೂ ತಕ್ಷಣವೇ ಬಿಡಿಸಲಾಗದ ಲೆಕ್ಕಗಳನ್ನು ಗ್ರಾಮದ ಜನಪದರು ಬಿಡಿಸಿ ಹೇಳುತ್ತಾರೆ. ಇದು ಹಳ್ಳಿಮಬ್ಬು ಎಂದು ಮುಗು ಮುರಿಯುವ ನಯ ನಾಜೂಕಿನ ಜನರ ಮಾತಿನಲ್ಲಿ ಹುರುಳಿಲ್ಲ ಎಂದು ಅರ್ಥವಾಗುತ್ತದೆ. ಅಂದರೆ ಗ್ರಾಮಗಳಲ್ಲಿರುವ ಜನಪದರಲ್ಲಿ ಕೆಲವು ಕೊರತೆಗಳಿರಬಹುದು. ಆದರೆ ಅವರಲ್ಲಿಯ ಸೃಜನಶೀಲತೆ, ಜಾಣಾಕ್ಷತೆ ಹೇರಳವಾಗಿದೆ. ಅವುಗಳನ್ನು ಗುರುತಿಸಿ ಉಳಿಸಿ ಬೆಳೆಸುವ ಅಗತ್ಯವಿದೆ.

ಸ್ತ್ರೀ ಸಂಪ್ರದಾಯದ ಹಾಡುಗಳು

ಸ್ತ್ರೀಯರು ತಮ್ಮ ಆಚರಣೆಗಳಲ್ಲಿ ಬರುವ ಸಂಪ್ರದಾಯಗಳಿಗೆ ತಕ್ಕಂತೆ ಪರಂಪರಾಗತವಾಗಿ ಬಂದ ಹಾಡುಗಳನ್ನು ಹೇಳುತ್ತಾರೆ. ಇತ್ತೀಚೆಗೆ ತಾವು ಹೊಸ ಕಾಲಘಟ್ಟದ ವಾಸ್ತವಿಕ ಅಂಶಗಳನ್ನು ಸೇರಿಸಿ ಹಾಡುಗಳನ್ನು ಹೇಳುತ್ತಾರೆ.

ದೇವರ ಹಾಡುಗಳು

ಗ್ರಾಮದಲ್ಲಿ ಶ್ರೀ ದುರ್ಗಾದೇವಿ ಪಾಲಕಿ ಸೇವಾ (ಪಲ್ಲಕ್ಕಿ ಸೇವೆ) ಪೂಜೆ ಜಾತ್ರೆ ಉತ್ಸವಗಳಲ್ಲಿ ದೇವಿಯ ಕುರಿತು ಹಾಡುಗಳನ್ನು ಹೇಳುತ್ತಾರೆ. ಅವು ಆ ದೇವಿಯನ್ನು ಪರಿಚಯಿಸುವ ಸಾಹಿತ್ಯ ಅದರಲ್ಲಿರುತ್ತದೆ.

ಉದಾ:- ತಾಯವ್ವ ನಿನಗುಡಿಯ ಚಾಯವ್ವ ನಿನಗುಡಿಯ
ಯಾರ ಕಟಿಸ್ಯಾರ ಹೊಸಗುಡಿಯ॥ ದುರಗಮ್ಮ
ಮಾನೆ ಉಣ್ಣಂತ ರೈತರ ______
(ಹಾಗೆಯೇ)
ನಿಲ್ಲನೀ ಎಲ್ಲಿಗೆ ಗಮನ
ಪಾಲಕಿ ಹೊರುವಂತ ಬಾಲರೆಲ್ಲೊಗ್ಯಾರ
ಹಾಲು ಬಾನುಂಡ ಬರತಾರ.

ಗುರ್ಜಿ ಹಾಡು

ಮಳೆರಾಯ ಕೈಕೊಟ್ಟರೆ ವರುಣನ ಆಗಮನಕ್ಕಾಗಿ ಹಲವು ಆಚರಣೆಗಳು ರೂಢಿಯಲ್ಲಿವೆ. ಅದರಲ್ಲಿ ಗುರ್ಜಿ ಆಡುವುದು ಒಂದು. ಈ ಗುರ್ಜಿಯ ಆಚರಣೆಯನ್ನು ಈ ವರ್ಷ ಗ್ರಾಮದ ಮಹಿಳೆಯರೇ ಆಡಿದರು.

ಗುರ್ಜಿ ಗುರ್ಜಿ ಹಳ್ಳಕೊಳ್ಳ
ಎಲ್ಲಾಡಿ ಬಂದೆ ಸುತ್ತಾಡಿ ಬಂದೆ
ಚಂದುರಾಮ ಬಂದು ರಾಮ
ಬಂದರಕಿಲ್ಲೆ ಬಾ ಮಳೆಯೋ____.

ಸುಣ್ಣ ಕೊಡತಿನಿ ಸುರಿಯಲೆ ಮಳೆಯೋ
ಬಣ್ಣ ಕೊಡತಿನಿ ಬಾ ನನ್ನ ಮಳೆಯೋ
ಹಗ್ಗ ಕೊಡತಿನಿ ಜಗ್ಗಲೆ ಮಳೆಯೋ
ಬಾ ಮಳಿ ಬಂದರ ಒಕ್ಕಲಿಗೊ

ಹೀಗೆ ಮಳೆರಾಯನ ಕುರಿತು ಹಾಡುವ ಮಹಿಳೆಯರು ಅದನ್ನು ಪರಂಪರಾಗತವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ.

ಮಹಿಳೆಯರ ಕುರಿತ ಸೋಬಾನ ಪದ

ಮಹಿಳೆ ಸಮಾಜದ ಕಟ್ಟುಪಾಡುಗಳಿಗೆ ಕಟಿಬದ್ಧಳಾಗಿರಬೇಕು. ಅದು ಅವಳ ಜೀವಕ್ಕೆ ಅನಿವಾರ್ಯ ಎಂಬುದನ್ನು ಹಾಡಿನ ಮೂಲಕ ಹೇಳುತ್ತಾಳೆ.

ಸೋ ಎನ್ನಿರೇ ಸೋಬಾನ ಬನ್ನಿರೇ ॥ಪ॥
ಅತ್ತಿಯ ಮನಿಯಾಗ ಮುತ್ತಾಗಿ ಇರಬೇಕು
ಹೊತ್ತು ನೀಡಿದರೂ ಉಣಬೇಕು ಸೋ ॥ಪ॥
ಕರಿಸೀರಿ ಉಡಬ್ಯಾಡ ಕಡಿವಾಣ ತೊಡಬ್ಯಾಡ
ನಡ ಓಣ್ಯಾಗ ನಿಂತು ನಗಬ್ಯಾಡ ಸೋ

ಹೀಗೆ ಗ್ರಾಮದ ಮಹಿಳಾ ಸಂಪ್ರದಾಯದ ಹಾಡುಗಳು ಮದುವೆ, ಸೀಮಂತ ಕಾರಣ, ಋತುಮತಿಯಾದ ಕಾರಣ ಮುಂತಾದ ಕಾರ್ಯಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ಹಾಡುಗಳನ್ನು ಹಾಡುತ್ತಾರೆ. ಆದರೆ ಸೊರಟೂರ ಗ್ರಾಮದಲ್ಲಿರುವ ಮಹಿಳೆಯರ ಹಾಡುಗಳು ಕೇವಲ ಆಚರಣಾತ್ಮಕ ನೆಲೆಯಲ್ಲಿ ಪರಂಪರೆಯ ಪೂರೈಕೆಗಾಗಿ ಮಾತ್ರ ಸೀಮಿತವಾಗಿವೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಹಿಳೆಯರ ಕಲೆ ಮತ್ತು ಸಾಹಿತ್ಯವನ್ನು ಹೊರಹಾಕಲು ಸೂಕ್ತ ವೇದಿಕೆಯೇ ಇಲ್ಲ. ಅಂದರೆ ಸಂಘಟನೆಗಾಗಿ ಯುವತಿ ಮಂಡಳಗಳಿಲ್ಲ. ಸ್ತ್ರೀಶಕ್ತಿ ಸಂಘಗಳಿವೆ. ಆದರೆ ಅವು ಹಣಕಾಸಿನ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿವೆ. ಆದ್ದರಿಂದ ಮಹಿಳೆಯರ ಸಾಹಿತ್ಯ ಮತ್ತು ಕಲೆಯ ಜಾಗೃತಿಗೆ ಸಂಘಟನೆಯ ಅವಶ್ಯಕತೆ ಇದೆ ಎಂದು ಹೇಳಬಹುದು.

೭.೫. ಶಿಷ್ಟ ಸಾಹಿತ್ಯ

ನಮ್ಮ ಕನ್ನಡ ಸಾಹಿತ್ಯವಾಹಿನಿ ಹರಿದು ಬಂದಿದ್ದು ಎರಡು ರೀತಿಯಿಂದ. ಒಂದು ಕಂಠಸ್ಥ ಸಂಪ್ರದಾಯ ಇನ್ನೊಂದು ಗ್ರಂಥಸ್ಥ ಸಂಪ್ರದಾಯ. ಸಾಹಿತ್ಯವೆಂದರೆ ರಸಾನುಭವದ, ಅನುಭವದ ಅಭಿವ್ಯಕ್ತಿ ಎಂಬುದು ಸರ್ವೇಸಾಮಾನ್ಯ ಮಾತು. ಇದು ಸಾಹಿತ್ಯದ ಎಲ್ಲಾ ಪರಂಪರೆಗೂ ಅನ್ವಯಿಸುತ್ತದೆ. ಸಾಹಿತ್ಯದಲ್ಲಿ ರಸಾನುಭವದ ಅಭಿವ್ಯಕ್ತಿಯೇ ಇದೆಯಾದರೂ ಅದು ಸಹಜವಾಗಿ ಮೂಡಿಬಂದಿರುತ್ತದೆ. ಆದರೆ ಶಿಷ್ಟ ಸಾಹಿತ್ಯವು ಉದ್ದೇಶಪೂರ್ವಕ ರಚನೆಯಾಗಿದ್ದು ಕಲ್ಪನಾಲೋಕದ ಲಹರಿಗಳು ಅಲ್ಲಿ ಮೂಡಿ ಬಂದಿರುತ್ತವೆ. ಆದ್ದರಿಂದಲೇ ಶಿಷ್ಟಸಾಹಿತ್ಯದ ರಚನೆಗೆ ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಎಂಬ ಮಾತಿದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮದ ಶಿಷ್ಟಸಾಹಿತ್ಯದ ಪರಂಪರೆಯನ್ನು ಅವಲೋಕಿಸಿದರೆ ಜನಪದ ಸಾಹಿತ್ಯದಷ್ಟು ವ್ಯಾಪಕತೆ ಇಲ್ಲಿ ಕಂಡುಬರುವುದಿಲ್ಲ. ಆದರೆ ಇತ್ತೀಚಿನ ಕಾಲಘಟ್ಟದಲ್ಲಿ ಗ್ರಾಮದಲ್ಲಿ ಶಿಷ್ಟಸಾಹಿತ್ಯದ ಹಿರಿಯ, ಕಿರಿಯ ಕವಿಗಳು ಸಾಹಿತ್ಯ ಅಭಿಮಾನಿಗಳಿರುವುದು ಕ್ಷೇತ್ರಕಾರ್ಯದಿಂದ ತಿಳಿಯುತ್ತದೆ. ಗ್ರಾಮದಲ್ಲಿರುವ ಬಸವಕಂದ ಕಾವ್ಯನಾಮದ ಶ್ರೀ ವ್ಹಿ.ಜಿ. ಮಠಪತಿ ಗುರುಗಳು ಮೂಲತಃ

ಶಿಕ್ಷಕರಾಗಿದ್ದು, ಬಾಲ್ಯದಿಂದಲೇ ಸಾಹಿತ್ಯದ ಅಭಿರುಚಿಯನ್ನು ಬೆಳೆಸಿಕೊಂಡವರು. ಸಮಾಜದ ಪ್ರಸ್ತುತ ವಿದ್ಯಮಾನಗಳನ್ನು ನೈತಿಕ ನೆಲೆಗಟ್ಟಿನೊಂದಿಗೆ ತುಲನೆ ಮಾಡಿ ನೋಡುವುದು ಅವರ ಜಾಯಮಾನ. ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಅವರ ಕಾರ್ಯ ಗ್ರಾಮದ ಸಭೆ, ಸಮಾರಂಭಗಳಲ್ಲಿ ನಿರಂತರವಾಗಿ ನಡೆದಿದೆ. ಅವರ ಪ್ರಯತ್ನವು ಬರಹರೂಪ ಪಡೆಯುವ ಮೂಲಕ 'ಸಮಾಜಗನ್ನಡಿ' ಮತ್ತು 'ನಿನ್ನೊಲುಮೆ' ಎಂಬ ಎರಡು ಕವನ ಸಂಕಲನಗಳು ಪ್ರಕಟವಾಗಿವೆ. ಅವುಗಳಲ್ಲಿ ಅವರ ಸಮಾಜಮುಖಿ ಚಿಂತನೆಯ ಅಂಶಗಳನ್ನು ಅನಾವರಣಗೊಳಿಸಿದ್ದಾರೆ. ೨೦೦೩ನೇ ವರ್ಷದಲ್ಲಿ ಗ್ರಾಮದಲ್ಲಿ ಗ್ರಾಮಮಟ್ಟದ ಸಾಹಿತ್ಯ ಸಮ್ಮೇಳನ ನಡೆಸಿದ್ದು ಅವರ ಸಾಹಿತ್ಯ ಆಸಕ್ತಿಯ ಪ್ರಯತ್ನವಾಗಿದೆ. ಹೀಗೆ ಗ್ರಾಮದಲ್ಲಿ ಶಿಷ್ಟಸಾಹಿತ್ಯವು ಮೊಳಕೆಯೊಡೆಯುತ್ತಿರುವದು ಕಂಡುಬರುತ್ತಿದೆ.

ಗ್ರಾಮದ ದಿವಂಗತ ಕಲ್ಲಪ್ಪ ಮೇಟಿಯವರು ನಾಟಕ, ಕವನ, ಜನಪದ ಗೀತೆಗಳನ್ನು ರಚಿಸಿದ್ದು, ಅವು ಹಸ್ತಪ್ರತಿಯಲ್ಲಿವೆ. ಅವರ ಮಕ್ಕಳ ನಾಟಕಗಳು ಗ್ರಾಮದ ಹಳಿಕೆಮ್ಮದೇವಿ ರಾತ್ರಿ ಶಾಲೆಯಲ್ಲಿ ಮಕ್ಕಳಿಂದ ಪ್ರದರ್ಶನಗೊಂಡಿವೆ. ಅವರ ಕೆಲವು ಕವನಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಗ್ರಾಮದ ಸೃಜನಶೀಲ ಶಿಕ್ಷಕರಾದ ಶಿವಕುಮಾರ ದೊಡ್ಡಣ್ಣವರ ಅವರು ಶೈಕ್ಷಣಿಕ ಹಾಗೂ ಸಾಹಿತ್ಯಿಕ ಚಿಂತನೆಯ ಕವನ, ಕಥೆ, ಪತ್ರ ಸಾಹಿತ್ಯದಲ್ಲಿ ತೊಡಗಿದ್ದಾರೆ. ಅವೆಲ್ಲವೂ ಹಸ್ತಪ್ರತಿಯಲ್ಲಿವೆ. ಅವರು ಗ್ರಾಮದ ಸಭೆ-ಸಮಾರಂಭಗಳಲ್ಲಿ ಸಭೆಯ ನಿರ್ವಹಣಾಕಾರರಾಗಿ, ಉಪನ್ಯಾಸಕರಾಗಿ ಬಿತ್ತರಿಸುವ ವಿಷಯಾಂಶಗಳು ಗ್ರಾಮ ಸಮುದಾಯದಲ್ಲಿ ಸಾಹಿತ್ಯಕ ನೈತಿಕ ವಾತಾವರಣ ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ. ಹಾಗೆಯೇ ಶಿಕ್ಷಕರಾದ ಫಕ್ಕೀರೇಶ ಗಾಣಿಗೇರ, ಶರಣಪ್ಪ ಕಲಾಲ ತಮ್ಮ ಶಿಕ್ಷಕ ವೃತ್ತಿಯ ಜೊತೆಗೆ ಬಿಡಿಗವನಗಳ ರಚನೆಯಲ್ಲಿ ತೊಡಗಿದ್ದಾರೆ. ಗಂಗಾಸುತ ಕಾವ್ಯನಾಮದ ಸಿದ್ಧಲಿಂಗಪ್ಪ ಸುಣಗಾರ ಅವರ ಕವನಗಳು ವಿವಿಧ ಪ್ರಕಾಶಕರು ನಡೆಸುವ ಸ್ಪರ್ದೆಗಳಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಪಡೆದುಕೊಂಡಿವೆ. ಶಿವಾನಂದ ಸಂಶಿ ಶಿವಮೂರ್ತಿ ಕರಿಗೌಡ್ರ ಅವರು ಗ್ರಾಮದ ಬಸವ ಪ್ರಕಾಶನದ ಹೆಸರಿನಲ್ಲಿ ಕವನ ಸ್ಪರ್ಧೆ ಏರ್ಪಡಿಸಿ ಮಟಾಣಿ ಕವಿಗಳಿಗೆ ಸ್ಫೂರ್ತಿ ನೀಡುತ್ತಿದ್ದಾರೆ ಹಾಗೂ ತಾವು ಹಲವು ರಚನೆಯಲ್ಲಿ ತೊಡಗಿದ್ದಾರೆ.

ಶಿವಪುತ್ರಪ್ಪ, ಹಂಪಿಹೊಳಿ, ಪರಶುರಾಮ ಹೂಗಾರ ಮುಂತಾದವರು ಸಾಕ್ಷರತೆ ಸೇರಿದಂತೆ ಸಾಂದರ್ಭಿಕವಾಗಿ ಬಿಡಿಕವನಗಳನ್ನು ರಚಿಸುತ್ತಿದ್ದಾರೆ. ಶಿವಾನಂದ ಮಾಯಪ್ಪನವರ ಅವರು 'ಸೊಸೆಯ ಕಣ್ಣೀರು' ಎಂಬ ಮಕ್ಕಳ ನಾಟಕ ರಚಿಸಿದ್ದಾರೆ. ಶಿವಮೂರ್ತಿ, ಕರಿಗೌಡ್ರ, ಭರಮಪ್ಪ ಗುಡಿ ಮುಂತಾದ ಯುವಕರು ಗ್ರಾಮದ ವಿಶೇಷತೆ ಹಾಗೂ ವಾಸ್ತವಗಳ ಕುರಿತು ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದಾರೆ. ಆದರೆ ಗ್ರಾಮದ ಶ್ರೀ ವ್ಹಿ.ಜಿ. ಮಠಪತಿ ಗುರುಗಳ ಕವನ ಸಂಕಲನಗಳು ಮಾತ್ರ ಪ್ರಕಟವಾಗಿದ್ದು, ಉಳಿದ ಎಲ್ಲಾ ಕವಿ ಲೇಖಕರ ರಚನೆಗಳು ತಮ್ಮ ಹಸ್ತಪ್ರತಿಯಲ್ಲಿಯೇ ಇವೆ. ಆದ್ದರಿಂದ ಬರುವ ದಿನಮಾನಗಳಲ್ಲಿ ಗ್ರಾಮದಲ್ಲಿ ಅರಳುತ್ತಿರುವ ಈ ಸಾಹಿತ್ಯ ಕೃಷಿಯು ಅನುಭವಗಳು ಮಾಗಿದಂತೆ ಹೆಮ್ಮರವಾಗಿ ಬೆಳೆಯುವ ಲಕ್ಷಣಗಳಿವೆ. ಅದಕ್ಕೆ ಸ್ಫೂರ್ತಿ ಮತ್ತು ಪ್ರೇರಣೆಗಳ ಅಗತ್ಯವೂ ಇದೆ.

ಟಿಪ್ಪಣಿಗಳು

೧. ಡಾ. ನ. ತಪಶ್ವಿಕುಮಾರ್, ೧೯೮೨, **ಕನ್ನಡ ಜನಪದಗೀತೆಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಪು. ೬.

೨. ಹಿ.ಚಿ. ಬೋರಲಿಂಗಯ್ಯ, ೧೯೯೬, **ಕರ್ನಾಟಕ ಜನಪದ ಕಲೆಗಳ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೩೪.

೩. ಅದೇ ಪು. ೧೦೬.

೪. ಅದೇ ಪು. ೭೦.

೫. ಅದೇ ಪು. ೧೧೮.

೬. ಡಾ. ದಸ್ತಗೀರ ಅಲ್ಲಿಬಾಯಿ, ೧೯೯೨, **ಉತ್ತರ ಕರ್ನಾಟಕದ ಜನಪದ ಒಡಪುಗಳು**, ಸಮಾಜ ಪುಸ್ತಕಾಲಯ, ಧಾರವಾಡ, ಪು. ೪ ಮತ್ತು ೫.

೭. ಅದೇ ಪು. ೭, ೮, ೯.

□□

ಅಧ್ಯಾಯ : ಎಂಟು

ಸೊರಟೂರ ಗ್ರಾಮ ಸಮಕಾಲೀನತೆ

೮.೧. ಭೌತಿಕ ಬದಲಾವಣೆ

೮.೨. ಸಾಮಾಜಿಕ ಬದಲಾವಣೆ

೮.೩. ಸಾಂಸ್ಕೃತಿಕ ಬದಲಾವಣೆ

೮.೪. ಶೈಕ್ಷಣಿಕ ಬದಲಾವಣೆ

೮.೫. ಆರ್ಥಿಕ ಬದಲಾವಣೆ

೮.೬. ರಾಜಕೀಯ ಬದಲಾವಣೆ

೮.೭. ಕಲೆ ಮತ್ತು ಸಾಹಿತ್ಯದ ಬದಲಾವಣೆ

ಅಧ್ಯಾಯ : ಎಂಟು

ಸೊರಟೂರ ಗ್ರಾಮ ಸಮಕಾಲೀನತೆ

ಸಮಾಜ ನಿಂತ ನೀರಲ್ಲ ಸದಾ ಹರಿಯುವ ಗಂಗೆಯಂತೆ ನಿತ್ಯ ಪರಿವರ್ತನಶೀಲವಾದದ್ದು. ಒಂದು ಕಾಲದಲ್ಲಿರುವ ಗ್ರಾಮದ ಪರಿಕಲ್ಪನೆಯು ಮತ್ತೊಂದು ಕಾಲದಲ್ಲಿ ಇರುವುದಿಲ್ಲ. ಇದು ಬದಲಾವಣೆಗೊಂಡಿರುತ್ತದೆ. ಅಂದರೆ ಭೌಗೋಳಿಕ ಅಥವಾ ಭೌತಿಕ ಸಾಮಾಜಿಕ ಸಾಂಸ್ಕೃತಿಕ ಹೀಗೆ ವಿವಿಧ ಆಯಾಮಗಳಲ್ಲಿ ಗ್ರಾಮ ಸಮಾಜ ಹಲವಾರು ಸ್ಥಿತ್ಯಂತರಗಳಿಗೆ ಒಳಗಾಗುತ್ತಲೇ ಇರುತ್ತದೆ. ಅನಾದಿಕಾಲದಿಂದಲೂ ಪರಂಪರೆಯ ಸೊಗಡನ್ನು ಉಳಿಸಿಕೊಂಡು ಬಂದ ಪ್ರಾಚೀನ ಗ್ರಾಮಗಳು ಇಂದು ವಿವಿಧ ಆಧುನಿಕ ಪ್ರೇರಣೆಯಿಂದ ಬದಲಾವಣೆಯ ಹಂತವನ್ನು ತಲುಪುತ್ತಿವೆ. ಇದು ಅನಿವಾರ್ಯ ಕೂಡ ಆಗಿದೆ. ಆಧುನಿಕತೆಯನ್ನು ಅನುಸರಿಸುತ್ತಿರುವ ಇಂದಿನ ಹಳ್ಳಿಗಳು ಹಾಗೂ ಅಲ್ಲಿನ ಸಾಮಾಜಿಕ ಸ್ಥಿತಿಯು ಆಧುನಿಕ ಜೀವನ ವಿಧಾನವನ್ನು ಸ್ವೀಕರಿಸುವ ಮೂಲಕ ನವ್ಯತೆಯನ್ನು ಪಡೆಯುತ್ತಿವೆ. ಕೈಗಾರಿಕೆಗಳ ಪ್ರವೇಶದಿಂದಲೂ ಆರ್ಥಿಕ ಸಮಾಜ ಬದಲಾಗುತ್ತದೆ. ನಗರೀಕರಣ, ಕೈಗಾರಿಕೀಕರಣ ಒತ್ತಡದಿಂದ ಗ್ರಾಮಗಳು ಬದಲಾವಣೆಯಾಗುವದಷ್ಟೇ ಅಲ್ಲ; ತೀವ್ರವಾಗಿ ಜರ್ಜರಿತವಾಗುತ್ತಿರುವುದನ್ನು ಗುರುತಿಸಬಹುದಾಗಿದೆ.[೧] ಭಾರತ ಗ್ರಾಮಗಳ ದೇಶ; ಗ್ರಾಮುಗಳ ಅಭಿವೃದ್ಧಿಯಾಗದೇ ದೇಶದ ಅಭಿವೃದ್ಧಿ ಸಾಧ್ಯವಿಲ್ಲವೆಂಬ ಮಹಾತ್ಮಾಗಾಂಧೀಜಿಯವರ ಗ್ರಾಮಸ್ವರಾಜ್ಯದ ಕನಸು ಇಂದಿಗೂ ಅವಶ್ಯಕವೆನಿಸುತ್ತದೆ. ಅಂದರೆ ಗ್ರಾಮ ಗುಡಿಕೈಗಾರಿಕೆಗಳಿಂದ, ಕೃಷಿ ಹಾಗೂ ಕೃಷಿಪೂರಕ ಉದ್ಯೋಗಗಳಿಂದ ಅಭಿವೃದ್ಧಿ ಹಂತವನ್ನು ನಿಧಾನಗತಿಯಲ್ಲಾದರೂ ತಲುಪುತ್ತಿವೆ. ಆದರೆ ಮಹಾತ್ಮಾ ಗಾಂಧೀಜಿಯವರ ಈ ಪರಿಕಲ್ಪನೆ ನಾಶವಾಗಿ ಆಧುನಿಕ ಜಾಗತೀಕರಣದಂತಹ ಕರಾಳ ಸಂಘರ್ಷಗಳಿಗೆ ಒಳಗಾದ ಇಂದಿನ ಗ್ರಾಮಗಳು, ವೇಗವಾದ ಕೈಗಾರಿಕೆಗಳ, ಬಹುರಾಷ್ಟ್ರೀಯ ಕಂಪನಿಗಳ, ಬೃಹತ್ ಬಂಡವಾಳ ಹೂಡಿಕೆಯ ಕ್ರಮದಿಂದ ಆರ್ಥಿಕವಾಗಿ ದುರ್ಬಲವಾಗಿರುವ ಭಾರತದಂತಹ ಹಳ್ಳಿಗಳು ಅನೇಕ ಕುತ್ತುಗಳನ್ನು ಎದುರಿಸಬೇಕಾಗಿದೆ. ಈ ಜಾಗತೀಕರಣ ಪ್ರಭಾವದ ಪರಿಣಾಮ ಗ್ರಾಮೀಣರಿಗೆ ಸದ್ಯದ ಮಟ್ಟಿಗಂತೂ ಪ್ರಗತಿದಾಯಕವಾಗಿ ಕಾಣುತ್ತಿದೆ. ಇದು ತಾತ್ಕಾಲಿಕ ಎಂಬ ಅರಿವು ಗ್ರಾಮೀಣ ಜನರಿಗೆ ತಿಳಿಯದಾಗಿದೆ. ಒಟ್ಟಾರೆ ಇದರ ಪರಿಣಾಮ "ಮೂರು ನಿಮಿಷದ ಸುಖಕ್ಕೆ ನೂರು ವರ್ಷದ ಹಾನಿ ಎಂಬಂತಾಗಿದೆ."[೨] ಇಂಥ ಆಧುನಿಕತೆಯ ಪ್ರಭಾವಕ್ಕೆ ಸೊರಟೂರ ಗ್ರಾಮವೂ ಹೊರತಾಗಿಲ್ಲ. ಸೊರಟೂರ ಗ್ರಾಮವು ಸಂಪೂರ್ಣವಾಗಿ

ಅಂಥ ಪ್ರಭಾವಕ್ಕೆ ಒಳಗಾಗಿಲ್ಲವಾದರೂ ಅದರತ್ತ ಆಕರ್ಷಿತವಾಗಿರುವುದಂತೂ ಸತ್ಯ. ಸೊರಟೂರ ಗ್ರಾಮದ ಆಧುನಿಕ ಸ್ಥಿತ್ಯಂತರಗಳನ್ನು ಈ ಕೆಳಗಿನ ಅಂಶಗಳಲ್ಲಿ ಕಾಣಬಹುದಾಗಿದೆ.

೧. ಭೌತಿಕ ಬದಲಾವಣೆ, ೨. ಸಾಮಾಜಿಕ ಬದಲಾವಣೆ, ೩. ಸಾಂಸ್ಕೃತಿಕ ಬದಲಾವಣೆ, ೪. ಶೈಕ್ಷಣಿಕ ಬದಲಾವಣೆ, ೫. ಆರ್ಥಿಕ ಬದಲಾವಣೆ, ೬. ರಾಜಕೀಯ ಬದಲಾವಣೆ.

೮.೧. ಭೌತಿಕ ಬದಲಾವಣೆ

ಬದಲಾವಣೆ ನಿಸರ್ಗ ನಿಯಮ. ಪ್ರತಿಯೊಂದು ವಿಷಯ ವಸ್ತು, ವ್ಯಕ್ತಿಗಳಲ್ಲಿ ಇದು ಸಹಜವಾಗಿರುತ್ತದೆ. ಹಾಗೆಯೇ ಗ್ರಾಮವೂ ಒಂದೇ ಸ್ವರೂಪದಲ್ಲಿ ಇರಲಾರದು. ಅದು ತನ್ನ ಭೌತಿಕ ಸ್ವರೂಪದಲ್ಲಿ ಕಾಲಕ್ಕನುಗುಣವಾಗಿ ಬದಲಾಗುತ್ತಾ ಹೋಗುತ್ತದೆ. ಸೊರಟೂರ ಗ್ರಾಮವು ಕೂಡಾ ಹಿಂದೆ ಸಣ್ಣದಾಗಿತ್ತು. ಪ್ರಾಚೀನ ಗ್ರಾಮವೆಂದರೆ ಈಗ ಗ್ರಾಮದಲ್ಲಿರುವ ಕ್ವಾಟಿ (ಕೋಟೆ) ಎಂಬ ಗ್ರಾಮದ ಅರ್ಧ ಭಾಗ ಮಾತ್ರ ಇತ್ತು. ಆದರೆ ಇಂದು ಗ್ರಾಮದಲ್ಲಿ ಭೌತಿಕ ಬೆಳವಣಿಗೆ ಬಹು ವಿಸ್ತಾರವಾಗಿ ಬೆಳೆದಿರುವುದನ್ನು ಕಾಣುತ್ತೇವೆ. ೧೯೦೬ರಲ್ಲಿ ಸೊರಟೂರ ಗ್ರಾಮದ ಜನಸಂಖ್ಯೆ ಕೇವಲ ೨೩೦೦ ಮಾತ್ರ ಇತ್ತು ಎಂಬುದು ಗ್ರಾಮದ ಹಿರಿಯರು, ವಯೋವೃದ್ಧರಾದ ಶ್ರೀ ಶಂಕ್ರಪ್ಪಜ್ಜ ಮಲ್ಲಾರಿಯವರಿಂದ ತಿಳಿದು ಬರುತ್ತದೆ. ಆದರೆ ಪ್ರಸ್ತುತ ಅಂಕಿಅಂಶಗಳ ಪ್ರಕಾರ ೧೫೩೪ ಮನೆಗಳನ್ನು ಹೊಂದಿದೆ.[೩] ಸೊರಟೂರ ಗ್ರಾಮವು ೨೦೦೧ ಜನಗಣತಿಯಂತೆ ೬೦೦೦ ಜನಸಂಖ್ಯೆ ಹೊಂದಿದ್ದು ಗ್ರಾಮದ ಭೌತಿಕ ಬೆಳವಣಿಗೆಯ ವೇಗವನ್ನು ತಿಳಿಸುತ್ತದೆ. ಗ್ರಾಮವು ಕಪ್ಪತ್ತಗುಡ್ಡದ ಸರಹದ್ದಿನಲ್ಲಿರುವುದರಿಂದ ಇಲ್ಲಿ ಅರಣ್ಯ ಪ್ರದೇಶವು ಹೇರಳವಾಗಿತ್ತು. ಗುಡ್ಡಗಳಲ್ಲಿ, ಗಿಡಮರಗಳ ಪೊಟರೆಗಳಲ್ಲಿ ಕಾಡುಪ್ರಾಣಿಗಳಿದ್ದವು. ಆದರೆ ಇಂದು ಜನಸಂಖ್ಯೆಯ ಹೆಚ್ಚಳ ಮತ್ತು ಆಧುನಿಕತೆಯ ಪ್ರಭಾವದಿಂದಾಗಿ ಮತ್ತು ಜನರ ತತ್ಕಾಲ ಸುಖದ ಸ್ವಾರ್ಥಕ್ಕಾಗಿ ಅರಣ್ಯ ಪ್ರದೇಶ ಮಾಯವಾಗುತ್ತಿದೆ. ಸೊರಟೂರ ಗ್ರಾಮಕ್ಕೆ ಪ್ರಾಚೀನ ಕಾಲದಲ್ಲಿ ಹುಲಿಯ ಕಾಟವಿತ್ತು. ಅದನ್ನು ಗ್ರಾಮದ ದೇವತಾಶಕ್ತಿಯ ಮಹಿಳೆ ಮಾದಮ್ಮ ಸಂಹರಿಸಿದಳು ಎಂಬ ನಂಬಿಕೆ ಇದೆ. ಆದರೆ ಗ್ರಾಮದ ಸರಹದ್ದಿನ ಇಂದಿನ ಕಾಡಿನಲ್ಲಿ ಹುಲಿ ಏಕೆ ಚಿಗರೆ, ಮೊಲಗಳಂತಹ ಚಿಕ್ಕಮುಟ್ಟ ಪ್ರಾಣಿ, ಪಕ್ಷಿಗಳು ಕಾಣದಂತಹ ಸ್ಥಿತಿ ಇಂದಿನ ಸೊರಟೂರಿನದ್ದು.

ಗ್ರಾಮದಲ್ಲಿರುವ ಹಳೆಯ ಊರಾದ ಕ್ವಾಟಿ (ಕೋಟೆ) ಭಾಗದಲ್ಲಿಯ ಮನೆಗಳು ಇಂದಿಗೂ ಕಲ್ಲು ಮಣ್ಣು ಕಟ್ಟಿಗೆಗಳಿಂದ ಕಟ್ಟಿದ ಮನೆಗಳಾಗಿದ್ದು, ಅವುಗಳ ಬಾಳಿಕೆಯ ಕಾಲವು ಸುದೀರ್ಘ, ಕಬ್ಬಿಣಗಳಿಂದ ಕೂಡಿದ ನವನವೀನ ಮನೆಗಳನ್ನು ಉಳ್ಳವರು ಕಟ್ಟಿಸಿದರೆ ಗುಡಿಸಲುಗಳಲ್ಲಿರುವ ಬಡವರು ಹಂಚು ತಗಡುಗಳ ಮೇಲ್ಛಾವಣಿಗಳಿಂದ ಕೂಡಿದ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಗ್ರಾಮದ ಒಳ ಹೊರಗೆ ಇರುವ ರಸ್ತೆಗಳು ಕಚ್ಚಾ ರಸ್ತೆಗಳಾಗಿದ್ದವು. ಆದರೆ ಇಂದು ಬಹುತೇಕ ರಸ್ತೆಗಳು ಡಾಂಬರೀಕರಣವಾಗಿದ್ದು, ಗ್ರಾಮದಲ್ಲಿರುವ ಪ್ರತಿಯೊಂದು ಕಿರುದಾರಿಗಳಿಗೆ ಕಲ್ಲಿನ ಪರಸಿ ಹೊಂದಿಸಿದ್ದಾರೆ. ಗ್ರಾಮದ ಪಶ್ಚಿಮ ದಿಕ್ಕಿಗಿರುವ ಸೊರಟೂರ-ಅತ್ತಿಕಟ್ಟಿ ದಾರಿಯು ಮುಂಡರಗಿ ತಾಲೂಕನ್ನು ಸಂಪರ್ಕಿಸುವ ಮಾರ್ಗವಾಗಿದ್ದರೂ ಅದು ಈವರೆಗೆ ಡಾಂಬರೀಕರಣದ

ರಸ್ತೆಯಾಗಿರಲಿಲ್ಲ. ಇತೀಚೆಗೆ ರಸ್ತೆಯಾಗಿ ರೂಪುಗೊಂಡಿದೆ. ಹೀಗೆ ಗ್ರಾಮವು ಭೌತಿಕವಾಗಿ ಹಲವಾರು ಬದಲಾವಣೆಗಳನ್ನು ಕಂಡಿದ್ದು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿರುವದನ್ನು ಗುರುತಿಸಲಾಗುತ್ತಿದೆ.

೮.೨. ಸಾಮಾಜಿಕ ಬದಲಾವಣೆ

ವರ್ಣವ್ಯವಸ್ಥೆ ಪ್ರಾಚೀನ ಕಾಲದಿಂದಲೂ ನಡೆದು ಬಂದ ಪರಂಪರೆ. ಸೊರಟೂರ ಗ್ರಾಮದಲ್ಲಿ ಇದು ಕಟ್ಟುನಿಟ್ಟಾಗಿ ಆಚರಣೆಯಲ್ಲಿರುವುದು ಇಲ್ಲಿನ ಹಿರಿಯ ತಲೆಮಾರಿನ ಜೀವಗಳಿಂದ ತಿಳಿದುಬರುತ್ತದೆ. ಆದರೆ ಆ ವರ್ಣ ವ್ಯವಸ್ಥೆಯ ಆಚರಣೆ ಇಂದು ಗ್ರಾಮದಲ್ಲಿ ಕಟ್ಟುನಿಟ್ಟಾಗಿ ಕಂಡುಬರುವುದಿಲ್ಲ. ಕಟ್ಟುನಿಟ್ಟಾಗಿ ಆಚರಣೆ ಇಲ್ಲ ಎಂದಾಕ್ಷಣ ಸಂಪೂರ್ಣವಾಗಿ ಆಚರಣೆಯಲ್ಲಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ವರ್ಣ ವ್ಯವಸ್ಥೆಯ ಅಥವಾ ಜಾತಿಯತೆಯ ದುರಾಭಿಮಾನವು ಇದ್ದರೂ ಇಲ್ಲದಂತೆ ಇದೆ. ಗ್ರಾಮದಲ್ಲಿ ಹಿಂದೂ, ಮುಸ್ಲಿಂ, ಜೈನ ಧರ್ಮಗಳಿದ್ದರೂ ಹಿಂದೂಗಳಲ್ಲಿರುವ ಸಾಮಾಜಿಕ ವ್ಯವಸ್ಥೆಯು ಹಲವರು ಉಪಜಾತಿಗಳನ್ನು ಹೊಂದಿದ್ದು, ತಮ್ಮ ಪರಂಪರಾಗತವಾದ ಕೆಲವು ಆಚರಣೆಗಳ ಮೂಲಕ ಅವುಗಳನ್ನು ಜೀವಂತ ಉಳಿಸಿಕೊಂಡು ಬಂದಿದ್ದಾರೆ. ಆದರೆ ಆಧುನಿಕತೆಯ ಪ್ರಭಾವದಿಂದಾಗಿ ಇಂದು ಜಾತಿಯತೆಯ ವ್ಯವಸ್ಥೆ ಗಟ್ಟಿಯಾಗಿ ಉಳಿದಿಲ್ಲ. ಸಾಮೂಹಿಕ ಕಾರ್ಯಚಟುವಟಿಕೆಗಳು ಸಮುದಾಯದ ಸಾಮೂಹಿಕ ಸ್ಥಳಗಳು ಇಂದು ಮುಕ್ತವಾಗಿವೆ. ಆ ಮೂಲಕ ಗ್ರಾಮದಲ್ಲಿರುವ ಕೆಲವು ಅಂದಾಭಿಮಾನಗಳು ಆಧುನಿಕತೆಯ ಪ್ರಭಾವಕ್ಕೆ ಸಿಲುಕಿ ನಲುಗಿ ಹೋಗಿವೆ. ಗ್ರಾಮದ ಅಭಿಮಾನ ಮೂಡಿಸುವ ಧಾರ್ಮಿಕ ಕಾರ್ಯಗಳು ಇಂದು ಜನಪ್ರಿಯಗೊಳ್ಳುತ್ತಿವೆ. ಅದರಲ್ಲೂ ಸೊರಟೂರ ಗ್ರಾಮದಲ್ಲಿರುವ ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೇಶ್ವರ ಶಾಖಾಮಠದಲ್ಲಿ ಪ್ರತಿವರ್ಷ ಯುಗಾದಿ ಪಾಡ್ಯದಂದು ನಡೆಯುವ ಸಾಮೂಹಿಕ ವಿವಾಹ ಕಾರ್ಯಕ್ರಮವು ಸೊರಟೂರ ಗ್ರಾಮಸ್ಥರಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಹಾಗೆಯೇ ಮೊಹರಂ ಆಚರಣೆಯಲ್ಲಿಯ ವಿಧಿವಿಧಾನಗಳಲ್ಲಿ ಗ್ರಾಮದ ಎಲ್ಲಾ ಸಮುದಾಯಗಳು ಜಾತ್ಯಾತೀತವಾಗಿ ಪಾಲ್ಗೊಳ್ಳುತ್ತಿದ್ದಾರೆ. ಹಾಗೆಯೇ ಗ್ರಾಮದೇವತೆಗಳಾದ ಕಾಲಭೈರವ, ದುರ್ಗಾದೇವಿ, ಬಸವೇಶ್ವರ, ಮಾರುತಿ, ಜೈನತೀರ್ಥಂಕರ, ದ್ಯಾಮವ್ವದೇವಿ, ಹಳಿಕೆಮ್ಮದೇವಿ, ವೀರಭದ್ರೇಶ್ವರ ಖಾಲೆಫಕ್ರು ಮುಂತಾದ ದೈವಗಳ ಜಾತ್ರೆ, ಉತ್ಸವ, ಉರುಸುಗಳಲ್ಲಿ ಗ್ರಾಮದ ಜನತೆ ಸಾಮಾಜಿಕ ಸಾಮರಸ್ಯ ಕಾಯ್ದುಕೊಂಡು ಬರುತ್ತಿದ್ದಾರೆ. ಹಬ್ಬ-ಹರಿದಿನಗಳ ಆಚರಣೆಗಳಲ್ಲಿಯೂ ಜನರಲ್ಲಿ ಸಾಮಾಜಿಕ ಸಾಮರಸ್ಯ ಗಟ್ಟಿಗೊಳ್ಳುತ್ತಿದೆ. ಇತ್ತೀಚಿನ ದಿನಗಳಲ್ಲಿ ಸೊರಟೂರ ಗ್ರಾಮದಲ್ಲಿ ಎಲ್ಲ ಧರ್ಮಗಳ ಮಹಾಪುರುಷರ ಜಯಂತಿಗಳ ಆಚರಣೆ ಯಥೇಚ್ಛವಾಗಿ ನಡೆಯುತ್ತಿದೆ. ಮಹ್ಮದ್ ಪೈಗಂಬರ್ ಜಯಂತಿ, ಅಂಬೇಡ್ಕರ್ ಜಯಂತಿ, ಮಹಾವೀರ ಜಯಂತಿ, ವಾಲ್ಮೀಕಿ ಜಯಂತಿ, ಶಿವಾಜಿ ಮಹಾರಾಜರ ಜಯಂತಿ, ಕನಕದಾಸರ ಜಯಂತಿ ಮುಂತಾದ ಜಯಂತಿಗಳು ವ್ಯಾಪಕವಾಗಿ ನಡೆಯುತ್ತಿರುವುದನ್ನು ನೋಡಿದರೆ ಸಮಾಜ ವಿಘಟನೆಯಾಗುತ್ತಿದೆಯೇ ಎಂಬ ಭಾವ ಬರಬಹುದು. ಆದರೆ ಗ್ರಾಮದಲ್ಲಿ ಎಲ್ಲ ಜಯಂತಿ ಆಚರಣೆ ಜಾತ್ರೆ, ಉತ್ಸವಗಳಲ್ಲಿ ಎಲ್ಲ ಜನಾಂಗಗಳ

ಜನರು ಪಾಲ್ಗೊಂಡು ಆಚರಣೆ ಮಾಡುತ್ತಿರುವುದು ಗ್ರಾಮದ ಸಾಮರಸ್ಯ ಜೀವನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಆದರೆ ೧೯೯೦ರಲ್ಲಿ ಗ್ರಾಮದಲ್ಲಿ ನಡೆದ ಗೋಲಿಬಾರ್ ಘಟನೆ ಗ್ರಾಮದ ಸಾಮಾಜಿಕ ಸಾಂಸ್ಕೃತಿಕ ಸಾಮರಸ್ಯಕ್ಕೆ ಕಪ್ಪು ಚುಕ್ಕೆಯಾಗಿತ್ತು. ಆದರೆ ಈಗ ಅದು ಮುಗಿದ ಅಧ್ಯಾಯವಾದ್ದರಿಂದ ಅದರ ವಿವರಣೆ ಅಪ್ರಸ್ತುತ. ಒಟ್ಟಾರೆ ಸೊರಟೂರ ಗ್ರಾಮ ಸಾಮಾಜಿಕ ಸಾಮರಸ್ಯಕ್ಕೆ ಮಾದರಿ ಗ್ರಾಮ ಎಂದು ಹೇಳಬಹುದಾಗಿದೆ.

ಕುಲಕಸುಬುಗಳು

ತಲೆತಲಾಂತರದಿಂದ ಬಂದ ಸಮುದಾಯದ ಕುಲಕಸುಬುಗಳು ಆಧುನಿಕತೆಯ ಪ್ರಭಾವಕ್ಕೆ ಮಣಿದಿರುವುದು ಗ್ರಾಮದಲ್ಲಿ ಕಂಡುಬರುತ್ತದೆ. ಬಡಿಗತನ ಕಮ್ಮಾರಿಕೆಯ ಕೆಲಸಗಳು ಇಂದು ಯಂತ್ರೋಪಕರಣಗಳಿಂದ ನಡೆಯುತ್ತವೆ. ಕಟ್ಟಿಗೆ ಕೊರೆಯುವ ಮತ್ತು ಪಾಲಿಶ್ ಯಂತ್ರಗಳು ಬಂದು ರೈತ ಮತ್ತು ಬಡಿಗ ಕಮ್ಮಾರರ ಪರಸ್ಪರ ಅವಲಂಬನೆಯ ಸಂಬಂಧಕ್ಕೆ ಸಂಚಕಾರ ತಂದಿದೆ. ಆಯಾ ಪದ್ಧತಿ ಇಲ್ಲವಾಗುತ್ತಿದೆ. ಪ್ಲಾಸ್ಟಿಕ್ ಸಾಮಗ್ರಿಗಳ ಜನಪ್ರಿಯತೆಯನ್ನು ಪಡೆದು, ಕೊರವರು ಕಸಬರಿಗೆ ಮತ್ತು ಹೆಣಿಕೆ ಬುಟ್ಟಿಯ ಕೆಲಸಕ್ಕೆ ವಿದಾಯ ಹೇಳುತ್ತಿದ್ದಾರೆ. ಆರೋಗ್ಯಕ್ಕೆ ಪೂರಕವಾಗಿದ್ದ ಚರ್ಮದ ಚಪ್ಪಲಿ ತಯಾರಿಸುವ ಚಮ್ಮಾರಿಕೆ ಕೆಲಸ ಇಂದು ಕಾಣದಾಗಿದೆ. ಕಂಬಳಿ ನೇಯುವ ಕುರುಬನ ಮಗ್ಗಗಳ ಪಳೆಯುಳಿಕೆಗಳಾಗಿವೆ. ಗ್ರಾಮದಲ್ಲಿ ಎಣ್ಣೆ ಗಾಣಗಳು ಇದ್ದವು ಎಂಬ ಮಾತುಗಳು ಮಾತ್ರ ಈಗ ಕೇಳಿ ಬರುತ್ತಿವೆ. ಹೀಗೆ ತಲೆತಲಾಂತರಗಳಿಂದ ನಡೆದುಕೊಂಡು ಬಂದ ಕುಲಕಸುಬುಗಳು ಯಂತ್ರ ರಾಜನ ಮಾಯದ ಬಲೆಗೆ ಸಿಕ್ಕು ನುಚ್ಚುನೂರಾಗಿವೆ. ಕುಲಕಸುಬನ್ನೇ ಅವಲಂಬಿಸಿದ್ದ ಜನ ದಿಕ್ಕು ತೋಚದೆ ಕಂಗಾಲಾಗಿದ್ದಾರೆ. ಈ ಕುಲಕಸುಬುಗಳ ಮೂಲ ವ್ಯವಸ್ಥೆಯಾದ ಕೃಷಿಯಲ್ಲು ಇಂದು ನಿರೀಕ್ಷಿಸಲು ಸಾಧ್ಯವಿಲ್ಲದಷ್ಟು ಸ್ಥಿತ್ಯಂತರಗಳಾಗಿವೆ. ಗ್ರಾಮದ ಸಾರ್ವತ್ರಿಕ ಉದ್ಯೋಗವೇ ಕೃಷಿ ಮತ್ತು ಕೃಷಿ ಪೂರಕ ಕೆಲಸಗಳಾಗಿದ್ದವು. ಆದರೆ ಅನ್ನದಾತನಾದ ರೈತ ಇಂದು ಸಕಾಲಿಕ ಮಳೆ ಬೆಳೆ ಇಲ್ಲದೇ ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಸಿಗದೆ ತನಗೆ ಅನ್ನವಿಲ್ಲದಾದಾಗ, ಅನಿವಾರ್ಯವಾಗಿ, ಆಧುನಿಕತೆಯ ಸೋಗಿಗೆ ಮರುಳಾಗಿ ಪಟ್ಟಣದತ್ತ ಅಥವಾ ದೂರದ ಗೋವಾದಂತಹ ರಾಜ್ಯಗಳಿಗೆ ವಲಸೆ ಹೊರಟಿದ್ದಾನೆ. ಅದರ ಪರಿಣಾಮವಾಗಿ ಪ್ರಸಕ್ತ ಕಾಲಘಟ್ಟದಲ್ಲಿ ಕೃಷಿ ಮಾಡುವವರೇ ಇಲ್ಲವಾಗುತ್ತಿದ್ದಾರೆ. ಸೊರಟೂರ ಗ್ರಾಮದ ಸುತ್ತಮುತ್ತಲ ಗ್ರಾಮಗಳಾದ ಕುರ್ತಕೋಟಿ ಅಣ್ಣಿಗೇರಿ, ಅಂತೂರ-ಬೆಂತೂರ ಗ್ರಾಮಗಳ ಭೂಮಿ ಹೆಚ್ಚು ಇಳುವರಿ ಕೊಡುತ್ತವೆ. ಅಲ್ಲಿಯ ರೈತರು ಕೂಲಿಕಾರರಿಗೆ, ಸುಗ್ಗಿಯ ದಿನಗಳಲ್ಲಿ ೧೦೦ ರೂ. ಕೂಲಿ ಕೊಡುತ್ತಾರೆ. ಸೊರಟೂರ ಗ್ರಾಮದ ರೈತರು ತಮ್ಮ ಇಳುವರಿಗನುಗುಣವಾಗಿ ೫೦ ರಿಂದ ೬೦ ರೂ. ಕೊಡಲು ಸಾಧ್ಯವಾಗುವುದರಿಂದ ಕೂಲಿಕಾರರು ಪ್ರತಿದಿನ ಕೂಲಿಗಾಗಿ ಬೇರೆ ಗ್ರಾಮಗಳಿಗೆ ಹೋಗುತ್ತಾರೆ. ಸುಗ್ಗಿಯ ದಿನಗಳಲ್ಲಿ ಟ್ರಾಕ್ಟರ್, ಟ್ರಕ್, ಇತರೆ ಮಿನಿ ವಾಹನಗಳಲ್ಲಿ ಜನರನ್ನು ತುಂಬಿಕೊಂಡು ಹೋಗುತ್ತಾರೆ. ಇದು ಕೂಲಿಕಾರರಿಗೆ ಕೆಲವೇ ದಿನಗಳು ಮಾತ್ರ ಇರುತ್ತದೆ. ಇತ್ತಕಡೆ ಅದೇ ಸುಗ್ಗಿಯ ದಿನಗಳಲ್ಲಿ ಸೊರಟೂರ ರೈತರಿಗೆ ಕೃಷಿ ಕೆಲಸಕ್ಕೆ ಕೂಲಿಕಾರರು ಸಿಗುವುದಿಲ್ಲ. ಹೀಗೆ

ಪ್ರಸಕ್ತ ಕಾಲದಲ್ಲಿ ಗ್ರಾಮದ ರೈತರು ಮತ್ತು ರೈತ ಕಾರ್ಮಿಕರು ಅತಂತ್ರ ಸ್ಥಿತಿಯನ್ನು ಅನುಭವಿಸುತ್ತಿದ್ದಾರೆ.

ಆಹಾರ ಪದ್ಧತಿಯಲ್ಲಿಯ ಬದಲಾವಣೆ

ಗ್ರಾಮದ ರೈತರು ಜೋಳ, ನವಣಿ, ರಾಗಿ, ತೊಗರಿ, ಮಡಿಕೆ ಮುಂತಾದ ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದರು. ವಾಣಿಜ್ಯ ಬೆಳೆಯಾಗಿ ಬಳಿ ಶೇಂಗಾ ಬೆಳೆಯುತ್ತಿದ್ದರು. ಇದು ರೈತನ ಮಿತ್ರನಾದ ಎತ್ತು ಮತ್ತು ಪಶುಗಳಿಗೂ ಆಹಾರವಾಗುತ್ತಿತ್ತು. ಆದರೆ ಇವುಗಳಿಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಇರದೇ ಇರುವುದರಿಂದ ಹಾಗೂ ಸರ್ಕಾರ ಪಡಿತರ ವ್ಯವಸ್ಥೆಯ ಮೂಲಕ ಅಕ್ಕಿ, ಗೋದಿಗಳನ್ನು ಕೊಡಲು ಪ್ರಾರಂಭಿಸಿದ ಮೇಲೆ ಜೋಳದ ಬೆಳೆ ಇಲ್ಲವಾಗುತ್ತಿದೆ. ಬದಲಾಗಿ ವಾಣಿಜ್ಯ ಬೆಳೆಗಳಾಗಿ ಹೆಸರು, ಸೂರ್ಯಕಾಂತಿಗಳನ್ನು ಬೆಳೆಯುತ್ತಿದ್ದಾರೆ. ಇದರಿಂದ ಗ್ರಾಮದ ಪಾರಂಪರಿಕ ಪೌಷ್ಟಿಕ ಆಹಾರದ ಬೆಳೆಗಳಾದ ಜೋಳ, ನವಣಿ, ರಾಗಿ, ಹುರುಳಿಗಳಂತಹ ಬೆಳೆಗಳ ಬೀಜಗಳೂ ಸಹ ಇಲ್ಲವಾಗುತ್ತಿವೆ. ಪ್ರತಿ ಮನೆಯಲ್ಲಿ ಒಂದು ಎಮ್ಮೆ ಅಥವಾ ಆಕಳು ಇರುತ್ತಿತ್ತು. ಆದರೆ ಇಂದು ಅವುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದ್ದರೂ ಸಹ ಹಾಲನ್ನು ಮಾರಾಟ ಮಾಡುತ್ತಿದ್ದಾರೆ. ಇದರ ಪರಿಣಾಮ ಹಾಲು, ಮೊಸರು, ಬೆಣ್ಣೆ, ತುಪ್ಪದ ಆಹಾರ ಊಟ ಮಾಡುತ್ತಿದ್ದ ಹಾಗೂ ಪಚನಕ್ರಿಯೆಗೆ ಎಲೆ, ಅಡಿಕೆ ಜಗಿಯುವ ಅಜ್ಜ ಅಮ್ಮನ ಕಾಲ ಇಂದು ಕಾಣಲು ಸಿಗುತ್ತಿಲ್ಲ. ಅದಕ್ಕೆ ಬದಲಾಗಿ ಹಸಿವೆಯಾಗದಂತೆ ತಡೆಯುವ ಬೆಳಗಿನ ಬೆಡ್ ಕಾಫಿ, ಹೊಟ್ಟೆ ತುಂಬಿದಂತೆ ಕಂಡರೂ ಶಕ್ತಿ ಬಾರದ ರೇಶನ್ ಅಕ್ಕಿ, ಅನ್ನ ಅದಕ್ಕೂ ಮಿಗಿಲಾಗಿ ಗುಟಖಾ ಹಾಗೂ ಮದ್ಯಪಾನಗಳತ್ತ ಇಂದಿನ ಜನ ಹೆಚ್ಚು ಒಲವು ತೋರುತ್ತಿರುವುದು ಕಂಡುಬರುತ್ತಿದೆ. “ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ” ಎಂಬಂತೆ ವಾಸ್ತವ ಜಗತ್ತಿನ ಮೋಹಕತೆಗೆ ಜನ ಮರಳಾಗುತ್ತಿದ್ದಾರೆ. ಆದರೂ ಇದು ಗ್ರಾಮವನ್ನು ಇನ್ನೂ ಸಂಪೂರ್ಣವಾಗಿ ಆವರಿಸಿಲ್ಲ. ಇದಕ್ಕೆ ಕಾರಣಗಳು ಹಲವಾರು ಆದರೆ ಪರಿಹಾರ ವೈಯಕ್ತಿಕವಾಗಿದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮವು ಸಂಪೂರ್ಣವಾಗಿ ಬದಲಾವಣೆಯಾಗಿಲ್ಲ. ಕೆಲವು ಮೂಲ ರೈತಾಪಿ ವರ್ಗದ ಕುಟುಂಬಗಳಲ್ಲಿ ಪಾರಂಪರಿಕ ಆಹಾರ ಪದ್ಧತಿಯೇ ಮುಂದುವರೆದಿದೆ.

೮.೩. ಸಾಂಸ್ಕೃತಿಕ ಬದಲಾವಣೆ

ಸಂಸ್ಕೃತಿ ಮಾನವ ಜೀವನ ಪದ್ಧತಿ. ಪದ್ಧತಿ ಸಂಪ್ರದಾಯಗಳಲ್ಲಿಯೂ ಸೊರಟೂರ ಗ್ರಾಮ ಅನೇಕ ಸ್ಥಿತ್ಯಂತರಗಳನ್ನು ಕಂಡುಕೊಂಡಿದೆ.

ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಆಚರಣೆಯಲ್ಲಿದ್ದ ಹಲವಾರು ಆಚರಣೆಗಳು ಕಾಣದಾಗುತ್ತಿವೆ. ಹಿಂದೆ ಗ್ರಾಮದ ಸೂಲಗಿತ್ತಿಯರ ಮೂಲಕ ಹೆರಿಗೆ ಮನೆಯಲ್ಲಿಯೇ ಆಗಿ ಮಗುವಿಗೆ ಆಯಾ ಧರ್ಮಕ್ಕನುಸಾರವಾಗಿ ವಿವಿಧ ಆಚರಣೆ ಮಾಡಲಾಗುತ್ತಿತ್ತು. ಮಗುವಿನ ಜನನ ಸಮಯದಲ್ಲಿ ಮಾಸವನ್ನು ಮನೆಯ ಮುಂಬಾಗಿಲ ಬಲಭಾಗದಲ್ಲಿ ಹುಗಿಯುತ್ತಿದ್ದರು. ಆದರೆ ಈಗ ಬಹುತೇಕ ಹೆರಿಗೆಗಳು ಆಸ್ಪತ್ರೆಯಲ್ಲಿ ನಡೆಯುವುದರಿಂದ ಅಂಥ ಆಚರಣೆ ಇಂದು ನಶಿಸಿ ಹೋಗುತ್ತಿದೆ. ಅಷ್ಟೇ ಅಲ್ಲ ಋತುಮತಿಯಾದ ಸಮಯದಲ್ಲಿ ೨೧ ದಿನಗಳವರೆಗೆ

ಆರತಿ ಮಾಡುವ ಮೂಲಕ ಪ್ರತಿದಿನ ಸೋಬಾನ ಪದ ಹಾಡುವ ಆಚರಣೆಯು ರೂಢಿಯಲ್ಲಿತ್ತು. ಆದರೆ ಆಧುನಿಕತೆಯ ಪ್ರಭಾವದಿಂದಾಗಿ ಇಂದು ೫ ದಿನ ಕೂಡಿಸಿ ಆರತಿ ಮಾಡುವ ಪರಿಪಾಠವಿದೆ. ಅಷ್ಟೇ ಅಲ್ಲ ಮುಂದುವರೆದ ಸಮುದಾಯಗಳಲ್ಲಿ ಇದು ಸಂಪೂರ್ಣವಾಗಿ ನಶಿಸಿ ಹೋಗಿದೆ. ಹಾಗೆಯೇ ಬಾಳ ಸಂಗಾತಿಯ ಆಯ್ಕೆಯಲ್ಲಿ ವರ ಮತ್ತು ಕನ್ಯೆಯರನ್ನು ಗುರುತಿಸಿ ನಿಶ್ಚಯಿಸುವುದು ಹಿರಿಯರ ಕೆಲಸವಾಗಿತ್ತು. ಅದಕ್ಕೆ ವಧು-ವರರು ಒಪ್ಪಿಗೆ ಸೂಚಿಸಲೇ ಬೇಕಾಗಿತ್ತು. ಆದರೆ ಇಂದು ಹಿರಿಯರ ಸಲಹೆ ಸೂಚನೆಗೆ ಯಾವ ಬೆಲೆ ಮತ್ತು ಗೌರವಗಳಿಲ್ಲ. ವಧು-ವರರು ಒಬ್ಬರನ್ನೊಬ್ಬರು ಒಪ್ಪಿಕೊಂಡರೆ ಅದಕ್ಕೆ ಹಿರಿಯರು ಅನಿವಾರ್ಯವಾಗಿ ಒಪ್ಪಲೇಬೇಕು. ಇಲ್ಲವಾದರೆ ಅದು ಪ್ರೀತಿಯ ಮದುವೆ ಆಗಿ ಪರಿವರ್ತನೆಯಾಗುವ ಸಂಭವವೇ ಹೆಚ್ಚು. ಒಂದು ವಾರದವರೆಗೆ ನಡೆಯುವ ಮದುವೆಯ ಕಾರ್ಯಗಳು ಒಂದೇ ದಿನಕ್ಕೆ ಮುಗಿಯುವ ಹಂತಕ್ಕೆ ಬಂದಿದೆ.

ಆ ಹಿನ್ನೆಲೆಯಲ್ಲಿ ಅಲ್ಲಲ್ಲಿ ಅಂತರ್ಜಾತಿ ವಿವಾಹಗಳು ನಡೆಯುತ್ತಿವೆ. ಇದು ಆಧುನಿಕ ಜಗತ್ತಿಗೆ ಒಪ್ಪಿಗೆಯಾದರೂ ಅವರ ಭವಿಷ್ಯದ ಜೀವನ ಸಂಕಷ್ಟಕ್ಕೆ ಸಿಲುಕುವುದೇ ಹೆಚ್ಚು. ಆದರೂ ಗ್ರಾಮದಲ್ಲಿ ಈ ವಿಚಾರದಲ್ಲಿ ಇನ್ನು ಸಂದಿಗ್ಧತೆ ಕಂಡು ಬರುತ್ತದೆ. ಮದುವೆಯ ನಂತರದ ಸೀಮಂತ ಕಾರಣದಲ್ಲೂ ಬದಲಾವಣೆ ಬಂದಿದೆ. ಅದು ಗೆಳೆಯರ ಬಳಗದ ಸ್ನೇಹಕೂಟದಂತೆಯೇ ಆಗುತ್ತಿದೆ. ಈ ಹಿಂದೆ ಮಗುವಿಗೆ ನಾಮಕರಣ ಮಾಡುವಾಗ ಮನೆಯ ಹಿರಿಯರ ಅಥವಾ ದೇವರ ಹೆಸರು ಇಡುವುದು ಸಂಪ್ರದಾಯವಾಗಿತ್ತು. ಉದಾಹರಣೆಗೆ ಕಲ್ಲಪ್ಪ. ಬೀರಪ್ಪ. ಬಸಪ್ಪ. ಪಾರ್ವತೆವ್ವ, ದ್ಯಾಮವ್ವ, ಆದರೆ ಇಂದು ಮಾಲಾಶ್ರೀ, ಮಾಧುರಿ, ನವೀನಕುಮಾರ ಮುಂತಾದ ಹೊಸತನವಿರುವ ನಾಮಕರಣವಾಗುತ್ತಿದೆ.

ಶವಸಂಸ್ಕಾರದ ಸಂದರ್ಭದಲ್ಲಿ ನಡೆಯುವ ಪೂಜೆ, ಹಲಗೆ ವಾದ್ಯ, ಭಜನೆ ಸರ್ವೇ ಸಾಮಾನ್ಯವಾಗಿದ್ದವು. ಸ್ವತಃ ೨೦-೩೦ ಜನರ ತಂಡ ಭಜನೆ ಮಾಡುತ್ತಿತ್ತು. ಆದರೆ ಇಂದು ಕೆಲವು ಸಂದರ್ಭದಲ್ಲಿ ಧ್ವನಿಸುರುಳಿ ಮತ್ತು ಧ್ವನಿವರ್ದಕಗಳನ್ನು ಬಳಸಲಾಗುತ್ತಿದೆ. ಇದು ಒಂದು ಬಗೆಯ ಮಾನವ ಶ್ರಮದ ಉಳಿತಾಯದಂತೆ ಕಂಡರೂ ಸಹ ಆಚರಣೆ ಮತ್ತು ಕಲೆಗಳು ನಶಿಸುತ್ತಿವೆ. ಹಬ್ಬ ಹರಿದಿನಗಳ ಆಚರಣೆಗಳು ಗ್ರಾಮದಲ್ಲಿ ಮುಂದುವರೆದುಕೊಂಡು ಬಂದಿವೆ. ಆದರೆ ಅವುಗಳಲ್ಲಿ ಹಲವಾರು ಮಾರ್ಪಾಡು ಹಾಗೂ ಅಸ್ತಿತ್ವದಲ್ಲಿಲ್ಲದ್ದನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ ಗ್ರಾಮಸ್ಥರು ಹತ್ತಿರದ ಕಪ್ಪತ್ತಗುಡ್ಡಕ್ಕೆ ಪ್ರತಿವರ್ಷ ಶ್ರಾವಣ ಮಾಸದ ಕೊನೆಯ ಸೋಮವಾರದ ಪೂರ್ವದಲ್ಲಿ ಬರುವ ಗುರುವಾರ ಕಪ್ಪತ್ತ ಮಲ್ಲಣ್ಣದೇವರ ಮದುವೆ ಮತ್ತು ಜಾತ್ರೆಗೆ ಭಜನೆ, ಡೊಳ್ಳು ಮೇಳದೊಂದಿಗೆ ಹೋಗಿ ಎರಡು-ಮೂರು ದಿನಗಳವರೆಗೆ ಅಲ್ಲಿಯೇ ವಾಸ್ತವ್ಯ ಮಾಡುವ ಪದ್ಧತಿ ಇತ್ತು. ಬಿತ್ತನೆ ಮಾಡುವ ಪೂರ್ವದಲ್ಲಿ ಹೋಗಿ ದೇವರಿಗೆ ಪೂಜೆ ಮಾಡಿ ಬರುವುದು; ಬರುವಾಗ ಮಾರ್ಗ ಮಧ್ಯದ ಎಲ್ಲಾ ದೇವರುಗಳ ಪೂಜೆ ಮಾಡುತ್ತಾ ಬದಲಾಗುತ್ತಿತ್ತು. ಆದರೆ ಆಧುನಿಕ ಜಗತ್ತಿನ ಸಮಯದ ಅಭಾವ ಮತ್ತು ತಾಳ್ಮೆ ಇಲ್ಲದ್ದರಿಂದ ಅದು ಒಂದೇ ದಿನದ ಆಚರಣೆ ಮತ್ತು ಕೆಲವೇ ಜನರ

ಆಚರಣೆಯಾಗಿ ಉಳಿದಿದೆ. ಪ್ರತಿದಿನ ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ಹಬ್ಬದ ಅಡುಗೆಗಳು ನಡೆದುಕೊಂಡು ಬಂದಿವೆಯಾದರೂ ಅವುಗಳು ಸರಳೀಕರಣಗೊಂಡಿರುವುದನ್ನು ಕಾಣುತ್ತೇವೆ.

ಗ್ರಾಮದಲ್ಲಿ ನಡೆಯುವ ಉತ್ಸವಗಳಾದ ದುರ್ಗಾದೇವಿ ಜಾತ್ರೆ, ಬಸವೇಶ್ವರ ಜಾತ್ರೆ, ಗುರು ಮಲ್ಲಜ್ಜನ ಉತ್ಸವ, ಅನ್ನದಾನೇಶ್ವರ ಪುರಾಣ ಮಂಗಲೋತ್ಸವ ಕಾಲಭೈರವ, ಅಭಿಷೇಕ, ಹಳಿಕೆಮ್ಮದೇವಿ ಕರೆದುಕೊಂಡು ಬರುವುದು, ಭಜನೆ, ಮೊಹರಂ ಈ ಎಲ್ಲಾ ಆಚರಣೆಗಳಲ್ಲಿ ಗ್ರಾಮದ ಭಕ್ತರು ತನುಮನ ಧನದಿಂದ ಪಾಲ್ಗೊಂಡು ಎಲ್ಲ ಕೆಲಸಕಾರ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುತ್ತಿದ್ದರು. ಬದಲಾದ ಕಾಲಮಾನದಲ್ಲಿ ಈ ಎಲ್ಲ ಧಾರ್ಮಿಕ ಕಾರ್ಯಗಳಲ್ಲಿ ಜನ ಸಕ್ರಿಯವಾಗಿ ಪಾಲ್ಗೊಳ್ಳದೇ ತನು, ಮನ, ಧನಗಳಿಂದ ಸಹಕರಿಸದೇ ಕೇವಲ ಪರೋಕ್ಷ ಸಹಕಾರ ಕೊಡಲು ಪ್ರಾರಂಭವಾಗಿದೆ. ಅವುಗಳ ನಿರ್ವಹಣೆ ಕೇವಲ ಅರ್ಚಕರ ಮತ್ತು ಆಸಕ್ತಿ ವಹಿಸಿದ ಕೆಲವೇ ಜನರ ಹೆಗಲ ಮೇಲೆ ಬೀಳುತ್ತಿವೆ. ಗ್ರಾಮದಲ್ಲಿ ನಡೆಯುವ ಶ್ರೀ ಶರಣಬಸವೇಶ್ವರರ ಪುರಾಣ, ಬಸವೇಶ್ವರ ದೇವಸ್ಥಾನದಲ್ಲಿ ಶಿವಾನುಭವಗೋಷ್ಠಿ, ಶ್ರೀಗುರು ಮಲ್ಲಜ್ಜನ ದೇವಸ್ಥಾನದಲ್ಲಿ ಆಧ್ಯಾತ್ಮಿಕ ಚಿಂತನಾಗೋಷ್ಠಿ. ಹೀಗೆ ಹಲವಾರು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳು ಗ್ರಾಮದಲ್ಲಿವೆ. ದಿವಂಗತ ಕಲ್ಲಪ್ಪ ಮೇಟಿಯವರು ಪುರಾಣ ಪ್ರವಚನಕಾರರಾಗಿ, ಕವಿಗಳಾಗಿ, ನಾಟಕರಾಗಿ, ಜನಪದ ಕಲಾವಿದರಾಗಿ, ಸೇವೆಸಲ್ಲಿಸಿದ್ದು ಸ್ಮರಣೀಯವಾಗಿವೆ. ಗ್ರಾಮದಲ್ಲಿರುವ ಯುವಕ ಮಂಡಳಗಳು, ಸ್ವಸಹಾಯ ಸಂಘಗಳು ಇತ್ತೀಚೆಗೆ ರಚಿತವಾದ ಸ್ವಾಮಿ ವಿವೇಕಾನಂದ ಕಲಾತಂಡ, ಶ್ರೀ ಮಾರುತಿ ಕಲಾತಂಡ, ಶ್ರೀ ಹಳಿಕೆಮ್ಮದೇವಿ ರಾತ್ರಿ ಶಾಲೆ, ಎಲ್ಲಾ ಸರಕಾರಿ ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿ ಒಕ್ಕೂಟ ಮುಂತಾದ ಸಂಸ್ಥೆಗಳು ವಿವಿಧ ಹಂತಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಗ್ರಾಮದಲ್ಲಿ ಅನ್ಯೋನ್ಯತೆಯ ವಾತಾವರಣ ನಿರ್ಮಾಣಗೊಳ್ಳುತ್ತಿದೆ. ಇಂತಹ ಕಾರ್ಯಕ್ರಮಗಳಿಗೆ ಗ್ರಾಮದ ಹಿರಿಯರು, ರಾಜಕೀಯ ನಾಯಕರುಗಳು ಸಹಕರಿಸುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳ ಸುಸೂತ್ರ ಹಾಗೂ ಆಕರ್ಷಣೀಯ ನಿರ್ವಾಹಕರಾಗಿ ಗ್ರಾಮದ ಶಿಕ್ಷಕರಾದ ಶ್ರೀ ಶಿವಕುಮಾರ ದೊಡ್ಡೆಣ್ಣವರ ಹಾಗೂ ಶ್ರೀ ಶರಣಪ್ಪ ಕಲಾಲ ಅವರನ್ನೊಳಗೊಂಡ ಗೆಳೆಯರ ಗುಂಪು ಸದಾ ತಯಾರಿರುತ್ತದೆ. ಹೀಗೆ ಸೊರಟೂರ ಗ್ರಾಮವು ಪರಂಪರೆ ವಿವಿಧ ಹಬ್ಬ ಹರಿದಿನಗಳ ಆಚರಣೆ ಸಂಪ್ರದಾಯಗಳಲ್ಲಿ ಹಲವಾರು ಬದಲಾವಣೆಗಳನ್ನು ಕಂಡಿದ್ದರೂ ಸಹ ಸಂಸ್ಕೃತಿಯ ಮೂಲಬೇರುಗಳು ಇನ್ನೂ ಗಟ್ಟಿಯಾಗಿ ಉಳಿದುಕೊಂಡಿವೆ. ಆದರೆ ಅವುಗಳು ವಿವಿಧ ರೂಪಗಳನ್ನು ಪಡೆದುಕೊಂಡು ಕವಲುಗಳಾಗಿ ಬೆಳೆಯುತ್ತಿವೆ. ಇದು ನಮ್ಮ ಜನಪದದ ಪುನರ್‌ಸೃಷ್ಟಿಯ ನಿಯಮಕ್ಕೆ ಅನುಗುಣವಾಗಿಯೇ ನಡೆದಿದೆ ಎಂದು ಹೇಳಬಹುದು.

೮.೪. ಶೈಕ್ಷಣಿಕ ಬದಲಾವಣೆ

ಶಿಕ್ಷಣ ಕೇವಲ ಮೇಲ್ವರ್ಗದವರ ಸ್ವತ್ತು ಎಂಬ ಪರಂಪರೆಯು ನಮ್ಮ ಪ್ರಾಚೀನ ಸಮಾಜದಿಂದಲೂ ಬೆಳೆದು ಬಂದಿರುವ ಒಂದು ಮೂಢನಂಬಿಕೆ" ಅದನ್ನು ಯಾರು ತೇಲಿ ಬಿಟ್ಟರು ಎಂಬುದಕ್ಕಿಂತ ಅದನ್ನು ತಲೆತಲಾಂತರದಿಂದ ಹಾಗೆಯೇ ಉಳಿಸಿಕೊಂಡು ಬಂದಿರುವುದನ್ನು

ಗಮನಿಸಿದರೆ ನಮ್ಮ ಸಮಾಜದ ಪಾರಂಪರಿಕ ಬದ್ಧತೆಯ ಅರಿವು ನಮಗಾಗುತ್ತದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮವು ಅದನ್ನು ಪರಿಪಾಲಿಸಿಕೊಂಡೇ ಬಂದಿತ್ತು. ಆದರೆ ಆಧುನಿಕತೆಯ ಪ್ರಭಾವ ಹಾಗೂ ಸರ್ಕಾರದ ಸಾರ್ವತ್ರಿಕ ಶಿಕ್ಷಣ ಕ್ರಾಂತಿಯ ಫಲವಾಗಿ ಇಂದು ಗ್ರಾಮದ ಶಿಕ್ಷಣದ ಸ್ಥಿತಿಗತಿಯಲ್ಲಿ ಸಾರ್ವತ್ರಿಕವಾಗಿ ಸುಧಾರಣೆಯಾಗಿದೆ. ಈಗ ಒಂದು ನೂರು ವರ್ಷಗಳ ಹಿಂದೆ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಒಂದು ಪ್ರಾಥಮಿಕ ಶಾಲೆ ಮಾತ್ರ ಇದ್ದದು ನಮಗೆ ಹಿರಿಯರಿಂದ ತಿಳಿದು ಬರುತ್ತದೆ. ಆದರೆ ಶಾಲೆಗೆ ಹೋಗುವವರ ಸಂಖ್ಯೆ ಲಭ್ಯವಾಗಿಲ್ಲ. ಅಷ್ಟೊಂದು ಶೈಕ್ಷಣಿಕವಾಗಿ ಕೆಳಹಂತದಲ್ಲಿದ್ದ ಗ್ರಾಮದಲ್ಲಿ ಈಗ ೬ ಸರಕಾರಿ ಶಿಕ್ಷಣ ಸಂಸ್ಥೆಗಳು, ೨ ರಾತ್ರಿ ಶಾಲೆ (ಮನೆಪಾಠ) ಸೇರಿದಂತೆ ೧೨೩೧ ವಿದ್ಯಾರ್ಥಿಗಳು[೬] ಗ್ರಾಮದ ಶಿಕ್ಷಣ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವುದನ್ನು ಗಮನಿಸಿದರೆ ಗ್ರಾಮವು ಶೈಕ್ಷಣಿಕವಾಗಿ ಮುಂದುವರೆದಿರುವುದು ಸ್ಪಷ್ಟವಾಗುತ್ತದೆ. ಗ್ರಾಮದಲ್ಲಿ ೪೦ ಜನ ಪದವೀಧರರು, ೮ ಜನ ಶಿಕ್ಷಣ ಸ್ನಾತಕ ಹಾಗೂ ೧೫ ಜನ ಡಿಪ್ಲೊಮಾ ಶಿಕ್ಷಣ ಪದವೀಧರರಿದ್ದು ೪ ಜನ ವೈದ್ಯಕೀಯ ಪದವಿ ಎರಡು ಜನ ಸ್ನಾತಕೋತ್ತರ ಪದವೀಧರರೂ ಸೇರಿದಂತೆ ಗ್ರಾಮದ ಡಾ. ಎಸ್.ಡಿ. ಕಟಗಿಯವರು ಪಿಎಚ್.ಡಿ. ಪದವಿ ಪಡೆದಿರುವುದು ಗ್ರಾಮದ ಶೈಕ್ಷಣಿಕ ಪ್ರಗತಿ ಬಹು ವೇಗದಲ್ಲಿರುವುದನ್ನು ಸೂಚಿಸುತ್ತದೆ. ಅದರಲ್ಲೂ ಹಿಂದುಳಿದ ವರ್ಗಗಳ ಮಕ್ಕಳೇ ಉನ್ನತ ಶಿಕ್ಷಣ ಪಡೆದಿರುವುದು ಗಮನಾರ್ಹ.

ಗ್ರಾಮದಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಶಾಲಾ ಆಡಳಿತ ಮಂಡಳಿ ರಚಿಸಲು ಅವಕಾಶ ಕೊಟ್ಟಿದ್ದು, ಶೈಕ್ಷಣಿಕ ಪ್ರಗತಿಯ ಬದಲಾಗಿ ಗ್ರಾಮದಲ್ಲಿ ಶಾಲಾ ಆಡಳಿತದ ಅಧಿಕಾರದ ಕಚ್ಚಾಟಕ್ಕೆ ಎಡೆ ಮಾಡಿಕೊಟ್ಟಿದೆ. ಅಂಥಹ ಸಮಸ್ಯೆಗಳ ನಡುವೆಯು ಗ್ರಾಮದ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಗ್ರಾಮದ ಮಕ್ಕಳಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ಬೆಳೆಸುತ್ತಿದ್ದಾರೆ. ಅದರ ಪರಿಣಾಮವಾಗಿ ಇಂದು ಗ್ರಾಮದಲ್ಲಿ ಉನ್ನತ ಶಿಕ್ಷಣದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಅದಕ್ಕೆ ಪೂರಕವಾಗಿ ಗ್ರಾಮದಲ್ಲಿ ನಾರಾಯಣರಾವ್ ಕುಲಕರ್ಣಿಯವರು, ಅಲ್ಲಾ ರಾತ್ರಿಶಾಲೆ ಹಾಗೂ ವಾಯ್. ಪಿ. ಅಡ್ನೂರ ಮತ್ತು ಎಸ್. ಆರ್. ಹಂಪಿಹೊಳಿಯವರ ಹಳಿಕೆಮ್ಮದೇವಿ ರಾತ್ರಿ ಶಾಲೆ ಪೂರಕವಾಗಿ ಕೆಲಸ ನಿರ್ವಹಿಸುತ್ತಿವೆ. ಒಟ್ಟಾರೆ ಸರ್ಕಾರದ ಶಿಕ್ಷಣ ಪರ ಯೋಜನೆಗಳು ಹಾಗೂ ಶಿಕ್ಷಣದ ಸಾರ್ವತ್ರಿಕ ಕ್ರಾಂತಿಯ ಫಲವಾಗಿ ಗ್ರಾಮದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಸ್ಥಿತ್ಯಂತರ ಎಂದು ಹೇಳುವುದಕ್ಕಿಂತ ಶೈಕ್ಷಣಿಕ ಪ್ರಗತಿಯ ನೋಟ ಎಂದು ಹೇಳಬಹುದಾಗಿದೆ.

೮.೫. ಆರ್ಥಿಕ ಬದಲಾವಣೆ

'ಕಾಂಚಾಣ ಕಾರ್ಯಸಿದ್ಧಿ' ಎನ್ನುವಂತೆ ಪ್ರಸಕ್ತ ಕಾಲಘಟ್ಟದಲ್ಲಿ ಪ್ರಗತಿ ಎಂಬುದು ಪ್ರಧಾನವಾಗಿ ಆರ್ಥಿಕತೆಯ ಪ್ರಗತಿಯನ್ನು ಪ್ರತಿಬಿಂಬಿಸುತ್ತದೆ. ಆ ದಿಸೆಯಲ್ಲಿ ಗ್ರಾಮದ ಜನರ ಸಾರ್ವತ್ರಿಕ ಬದಲಾವಣೆಯ ಕೆಲ ಅಂಶಗಳನ್ನು ಗುರುತಿಸಬಹುದಾಗಿದೆ. ಗ್ರಾಮದಲ್ಲಿರುವ ಬಹುಪಾಲು ಜನರ ಪ್ರಧಾನ ಉದ್ಯೋಗ ಕೃಷಿ ಆಧಾರಿತವಾಗಿದ್ದು, ಅದು ಕೇವಲ ಜೀವನ ನಿರ್ವಹಣೆಗಾಗಿ

೮.೬. ರಾಜಕೀಯ ಬದಲಾವಣೆ

ಸೊರಟೂರ ಗ್ರಾಮವು ಶತಶತಮಾನಗಳ ರಾಜಕೀಯ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮ. ಹೊಯ್ಸಳರ ಆಡಳಿತ ಕೇಂದ್ರವಾಗಿದೆ. ಛತ್ರಪತಿ ಶಿವಾಜಿ ಮಹಾರಾಜರ ಮೂಲಪುರುಷರ ತಾಣವಾಗಿದೆ. ಸ್ವಾತಂತ್ರ್ಯ ಸೇನಾನಿ ರಾವ್‌ಬಹದ್ದೂರ ದೇಸಾಯಿಯವರಂತಹ ತ್ಯಾಗಮಯಿ ಮೇಧಾವಿಗಳ ಬೀಡು ಎಂಬುದು ಹೆಮ್ಮೆಯ ಸಂಗತಿ. ಆದರೆ ಸಮಕಾಲೀನ ಸಂದರ್ಭದಲ್ಲಿ ಅದು ಹಲವು ಸ್ಥಿತ್ಯಂತರಗಳನ್ನು ಕಂಡುಕೊಂಡಿದೆ. ಕ್ರಿ.ಶ. ೮ ರಿಂದ ೧೪ನೇ ಶತಮಾನಗಳವರೆಗೆ ಸೊರಟೂರ ಗ್ರಾಮದ ಆಡಳಿತದ ಕೆಲ ಅಂಶಗಳು ಶಾಸನಗಳಲ್ಲಿ ಉಲ್ಲೇಖಿತವಾಗಿರುವುದನ್ನು ಎರಡನೆಯ ಅಧ್ಯಾಯದಲ್ಲಿ ಗುರುತಿಸಲಾಗಿದೆ. ನಂತರ ೧೬ನೇ ಶತಮಾನದಿಂದ ಈಚೆಗೆ ಸೊರಟೂರ ದೇಸಾಯಿಯವರ ಆಡಳಿತಕ್ಕೆ ಒಳಪಟ್ಟಿದೆ. ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಸೊರಟೂರ ರಾಜಕೀಯವಾಗಿ ಮುಂಡರಗಿ ವಿಧಾನಸಭಾ ಕ್ಷೇತ್ರಕ್ಕೆ ಮತ್ತು ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಸೇರಿತ್ತು. ತಾಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಗದಗ (ಹಿಂದಿನ ಧಾರವಾಡ) ಜಿಲ್ಲೆಗೆ ಸಂಬಂಧಿಸಿದೆ. ಸೊರಟೂರ ಗ್ರಾಮವು ಗ್ರಾಮ ಪಂಚಾಯ್ತಿ (ಹಿಂದಿನ ಮಂಡಳ ಪಂಚಾಯ್ತಿ) ಕೇಂದ್ರ ಸ್ಥಳವಾಗಿದೆ. ಗ್ರಾಮದಲ್ಲಿ ರಾಜಕೀಯ ಸ್ಥಿತಿಗತಿಯನ್ನು ಗಮನಿಸಿದರೆ ಗ್ರಾಮ ಪಂಚಾಯ್ತಿಯ ಬಹುತೇಕ ಕಾಲಾವಧಿಯಲ್ಲಿ ಕಾಂಗ್ರೆಸ್ ಪಕ್ಷವೇ ಹೆಚ್ಚು ಕಾಲ ಆಡಳಿತ ನಡೆಸಿದ್ದು ಕಂಡು ಬರುತ್ತದೆ. ಹಾಗೂ ಜಿಲ್ಲಾ ಪಂಚಾಯ್ತಿಯಲ್ಲಿ ೫ ಅವಧಿಗಳಲ್ಲಿ ೪ ಅವಧಿ ಕಾಂಗ್ರೆಸ್ ಹಾಗೂ ಒಂದು ಅವಧಿ ಜನತಾದಳದ ಸದಸ್ಯರು ಅಧಿಕಾರ ನಡೆಸಿದ್ದಾರೆ. ತಾಲೂಕು ಪಂಚಾಯತಿಯ ೬ ಜನ ಸದಸ್ಯರಲ್ಲಿ ೩ ಜನ ಜನತಾ ಪರಿವಾರಕ್ಕೆ ಸಂಬಂಧಿಸಿದವರಿದ್ದು ೩ ಜನ ಕಾಂಗ್ರೆಸ್ ಸದಸ್ಯರು ಆಡಳಿತ ನಡೆಸಿದ್ದಾರೆ. ಸೊರಟೂರು ಗ್ರಾಮ ಪ್ರಸ್ತುತ ಗದಗ ವಿಧಾನಸಭೆ ಹಾಗೂ ಹಾವೇರಿ ಲೋಕಸೇವಾ ಕ್ಷೇತ್ರಕ್ಕೆ ಒಳಪಡುತ್ತದೆ.

೮.೭. ಕಲೆ ಮತ್ತು ಸಾಹಿತ್ಯದ ಬದಲಾವಣೆ

ಜನಪದ ಸಾಹಿತ್ಯ ಮತ್ತು ಜನಪದ ಕಲೆಯಲ್ಲಿ ಗ್ರಾಮವು ಸಂಪದ್ಭರಿತವಾಗಿದೆ. ಆದರೆ ಶಿಷ್ಟ ಸಾಹಿತ್ಯವನ್ನು ಅವಲೋಕಿಸಿದಾಗ ಗ್ರಾಮದಲ್ಲಿ ಗುರುತರವಾದ ಸಾಧನೆಗಳು ಕಂಡು ಬರುವುದಿಲ್ಲ. ಆದರೂ ಗ್ರಾಮದಲ್ಲಿ ಅರಳಿದ ಹಾಗೂ ಅರಳುತ್ತಿರುವ ಯುವ ಕವಿ ಲೇಖಕರನ್ನು ಗುರುತಿಸಬಹುದು. ಗ್ರಾಮದ ಬಸವಕಂದ ಕಾವ್ಯನಾಮದ ಹಿರಿಯ ಕವಿ ಶ್ರೀ ವ್ಹಿ.ಜಿ. ಮಠಪತಿಯವರ "ಸಮಾಜಗನ್ನಡಿ" ಮತ್ತು "ನಿನ್ನೊಲುಮೆ" ಎಂಬ ಎರಡು ಕವನ ಸಂಕಲನಗಳು ಪ್ರಕಟಣೆಯಾಗಿದ್ದು, ಅವು ಸಮಾಜಮುಖಿ ಚಿಂತನೆಯನ್ನು ಪ್ರತಿಬಿಂಬಿಸುತ್ತವೆ. ಗ್ರಾಮದ ದಿವಂಗತ ಕಲ್ಲಪ್ಪ ಮೇಟಿಯವರು ನಾಟಕ, ಕವನ, ಜನಪದ ಗೀತೆಗಳನ್ನು ರಚಿಸಿದ್ದಾರೆ. ಗ್ರಾಮದ ಸೃಜನಶೀಲ ಶಿಕ್ಷಕರಾದ ಶಿವಕುಮಾರ ದೊಡ್ಡಣ್ಣನವರ ಅವರು ಶೈಕ್ಷಣಿಕ ಹಾಗೂ ಸಾಹಿತ್ಯಿಕ ಚಿಂತನೆಯ ಕವನ, ಕಥೆ, ಪತ್ರ ಸಾಹಿತ್ಯದಲ್ಲಿ ತೊಡಗಿದ್ದಾರೆ. ಶಿಕ್ಷಕರಾದ ಪಕ್ಕೀರೇಶ ಗಾಣಿಗೇರ, ಶರಣಪ್ಪ ಕಲಾಲ ಹಾಗೂ ಗಂಗಾಸುತ ಕಾವ್ಯನಾಮದ ಸಿದ್ದಲಿಂಗಪ್ಪ ಸುಣಗಾರ, ಶಿವಾನಂದ ಸಂಶಿ, ಪರಶುರಾಮ ಹೂಗಾರ, ಶಿವಪುತ್ರಪ್ಪ ಹಂಪಿಹೊಳಿ ಮುಂತಾದವರು ಬಿಡಿ ಕವನಗಳನ್ನು ರಚಿಸುತ್ತಿದ್ದಾರೆ

ಹಾಗೂ ಶಿವಮೂರ್ತಿ ಕರಿಗೌಡರ ಅವರು 'ವರದಕ್ಷಿಣೆ ಗೋಳು' ಕುರಿತು ನಾಟಕ ಬರೆದಿದ್ದಾರೆ. ಶಿವಾನಂದ ಮಾಯಪ್ಪನವರು ಅವರು 'ಸೊಸೆಯ ಕಣ್ಣೀರು' ಎಂಬ ನಾಟಕ ಬರೆದಿದ್ದಾರೆ. ಫ್ಹಿ.ಜಿ. ಮಠಪತಿ ಎರಡು ಕವನ ಸಂಕಲನಗಳು ಮಾತ್ರ ಪ್ರಕಟವಾಗಿದ್ದು ಉಳಿದ ಕವಿ, ಲೇಖಕರ ಸಾಹಿತ್ಯಿಕ ಚಟುವಟಿಕೆಗಳು ಎಲೆಮರೆಯ ಕಾಯಿಯಂತೆ ಉಳಿದಿವೆ. ಅವುಗಳನ್ನು ಪ್ರಕಟಿಸುವ ಮೂಲಕ ಗ್ರಾಮಸ್ಥರು ಗ್ರಾಮದಲ್ಲಿ ಹುದುಗಿರುವ ಕವಿ ಪ್ರತಿಭೆಗಳನ್ನು ಗುರುತಿಸಬೇಕಾಗಿದೆ. ಜನಪದ ಸಾಹಿತ್ಯದ ವಿಶೇಷ ಪ್ರಕಾರವಾದ ಜನಪದ ರ್‍ವಾಣ ಹೇಳುವ ಕಲಾವಿದರಾದ ಕರಿಯಪ್ಪ ಕಳಂಗನವರ, ನಿಂಗಪ್ಪ ಲಕ್ಕುಂಡಿ ಮುಂತಾದ ಹಾಲುಮತ ಬಾಂಧವರು ಗ್ರಾಮದಲ್ಲಿದ್ದಾರೆ. ಮೊಹರಂ ಹಬ್ಬದ ಕುರಿತು, ನಾಗಪ್ಪ ಕಣವಿ ಬಸವರಾಜ. ಜಮಾಣಿ, ಮಾಬುಸಾಬ. ಹಳ್ಳಿಕೇರಿ ಮುಂತಾದವರು ಸಾಂದರ್ಭಿಕವಾಗಿ ಕವನ ರಚಿಸಿ ಹಾಡುತ್ತಾರೆ.

ಗ್ರಾಮದಲ್ಲಿ ದೊಡ್ಡಾಟ, ಸಣ್ಣಾಟ, ಭಜನೆ, ಡೊಳ್ಳು, ಕೈಪೆಟ್ಟು, ಡೊಳ್ಳಿನ ಹಾಡು, ವೀರಗಾಸೆ, ಮೊಹರಂ ಹಾಡು, ಹೋಳಿಹಾಡು, ನಂದಿಕೋಲು ಕುಣಿತ, ಸೋಬಾನೆ ಪದ ಮುಂತಾದ ಕಲಾವಿದರು, ಪುರಾಣ ಪ್ರವಚನಕಾರರು ಪಾರಂಪರಿಕವಾಗಿ ಅವುಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಗ್ರಾಮದಲ್ಲಿ ಅವರ ಪ್ರದರ್ಶನಗಳು ಸಾಂಪ್ರದಾಯಿಕ ಆಚರಣೆಗಳಂತೆ ಮುಂದುವರೆದಿವೆ. ಅದರಲ್ಲೂ ಗ್ರಾಮದ ವೀರಭದ್ರೇಶ್ವರ ಯುವಕ ಮಂಡಳ ಮತ್ತು ಕಲ್ಮೇಶ್ವರ ಯುವಕ ಮಂಡಳಗಳು ದೊಡ್ಡಾಟ ಮತ್ತು ಸಣ್ಣಾಟ ಪ್ರದರ್ಶನದಲ್ಲಿ ರಾಜ್ಯಮಟ್ಟದ ಯುವಜನಮೇಳದಲ್ಲಿ ಪ್ರದರ್ಶನ ನೀಡಿ ಪ್ರಶಸ್ತಿ ಪಡೆದುಕೊಂಡಿವೆ. ಆದರೆ ಜಾಗತೀಕರಣ ಮತ್ತು ಆಧುನಿಕರಣದ ಪ್ರಭಾವದ ನಡುವೆಯು ಸೊರಟೂರ ಗ್ರಾಮದಲ್ಲಿ ಜನಪದ ಸಾಹಿತ್ಯ ಮತ್ತು ಕಲೆಗಳು ಉಳಿದುಕೊಂಡು ಬಂದಿರುವ ಗ್ರಾಮದ ಹಿರಿಮೆಯನ್ನು ಎತ್ತಿಹಿಡಿಯುತ್ತಿವೆ. ಅವುಗಳನ್ನು ಉಳಿಸಿ ಬೆಳೆಸಲು ಸಾಹಿತಿಗಳನ್ನು, ಕಲಾವಿದರನ್ನು ಗುರುತಿಸಿ ಅವರಿಗೆ ಜೀವನದ ನಿರ್ವಹಣೆಗೆ ಅಗತ್ಯ ಗೌರವಧನ ನೀಡುವ ಮೂಲಕ ಅವರನ್ನು ಗೌರವಿಸುವುದು ಸರಕಾರ ಮತ್ತು ಸಂಘ ಸಂಸ್ಥೆಗಳ ಕರ್ತವ್ಯವಾಗಿದೆ.

ಒಟ್ಟಾರೆ ಗ್ರಾಮೀಣ ಪರಿಸರದ ಸಂಸ್ಕೃತಿಯು 'ಕೆಟ್ಟು ಪಟ್ಟಣ ಸೇರು' ಎಂಬ ನಾಣ್ಣುಡಿಯಂತೆ ಪಾಶ್ಚಾತ್ಯ ಸಂಸ್ಕೃತಿ ಹಾಗೂ ಪ್ರಭಾವಿ ಸಮೂಹ ಸಂವಹನ ಮಧ್ಯಮಗಳಿಂದ ಹಳ್ಳಿಗಳು ಮೊದಲಿನ ಭವ್ಯ ಪರಂಪರೆಯಿಂದ ದೂರ ಸರಿಯುತ್ತಲಿವೆ. ಆದರೆ ಜಾಗತೀಕರಣ ಆಧುನೀಕರಣವನ್ನು ಸಂಪೂರ್ಣವಾಗಿ ವಿರೋಧಿಸಲು ಬರುವುದಿಲ್ಲ.

ಎಣ್ಣೆ ಬೇರೆ ಬತ್ತಿ ಬೇರೆ
ಎರಡು ಕೂಡಿ ಸೊಡರಾಯಿತು.
ಪುಣ್ಯ ಬೇರೆ ಪಾಪ ಬೇರೆ
ಎರಡು ಕೂಡಿ ಒಡಲಾಯಿತು.

ಎಂಬ ಅಲ್ಲಮಪ್ರಭುಗಳ ವಾಣಿಯಂತೆ ಜಾಗತೀಕರಣದಿಂದ ಒಳ್ಳೆಯ ಪರಿಣಾಮ ಆಗುತ್ತದೆ ಮತ್ತು ಕೆಟ್ಟ ಪರಿಣಾಮ ಉಂಟಾಗುತ್ತದೆ. ಆದ್ದರಿಂದ ಇವೆರಡನ್ನೂ ಅಗತ್ಯಕ್ಕನುಗುಣವಾಗಿ ಸದ್ವಿನಿಯೋಗವಾಗುವ ರೀತಿಯಲ್ಲಿ ಬಳಕೆ ಮಾಡಿಕೊಂಡು ಸಮತೋಲನ ಕಾಪಾಡಿಕೊಂಡಲ್ಲಿ ಗ್ರಾಮಗಳು ಆರೋಗ್ಯಯುತ ಅಭಿವೃದ್ಧಿ ಹೊಂದಲು ಸಾಧ್ಯವಿದೆ.

ಟಿಪ್ಪಣಿಗಳು

೧. ರಮೇಶ್ ಕೆ., ೨೦೦೨, **ಉಜ್ಜನಿ ಗ್ರಾಮಾಧ್ಯಯನ,** ಅಪ್ರಕಟಿತ ಎಂ.ಫಿಲ್. ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೬.

೨. ಜಾಗತೀಕರಣ ಹಾಗೂ ರಾಸಾಯನಿಕ ಕೃಷಿ ಕುರಿತು ಗ್ರಾಮಸ್ಥರು ಹೇಳುವ ಅನುಭವದ ಮಾತು.

೩. ಗ್ರಾಮ ಪಂಚಾಯತಿಯ ದಾಖಲೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

೪. ಹೆರಿಗೆಯ ಬಗ್ಗೆ ಪರಿಣಿತಿ ಹೊಂದಿರುವ ಮಹಿಳೆ ಸುಸೂತ್ರವಾಗಿ ಹೆರಿಗೆ ಮಾಡಿಸುವ ಮಹಿಳೆ.

೫. ರಮೇಶ್ ಕೆ., ೨೦೦೨, **ಉಜ್ಜನಿ ಗ್ರಾಮಾಧ್ಯಯನ,** ಅಪ್ರಕಟಿತ ಎಂ.ಫಿಲ್. ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೮.

೬. ರಮೇಶ್ ಕೆ., ೨೦೦೨, **ಉಜ್ಜನಿ ಗ್ರಾಮಾಧ್ಯಯನ,** ಅಪ್ರಕಟಿತ ಎಂ.ಫಿಲ್. ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೯೧.

□□

ಅಧ್ಯಾಯ : ಒಂಬತ್ತು

ಉಪಸಂಹಾರ

ಅಧ್ಯಯನದ ಫಲಿತಗಳು

ಅಧ್ಯಾಯ : ಒಂಬತ್ತು

ಉಪಸಂಹಾರ

"ಯಾಕ ಬೇಕ ಹುಬ್ಬಳ್ಳಿ ಧಾರವಾಡ
ನಮ್ಮ ಹಳ್ಳಿಯ ಊರ ನಮಗ ಪಾಡ"

- ಎಂದು ಹೇಳಿದ ಜನಪದ ಕವಿ ಹುಕ್ಕೇರಿ ಬಾಳಪ್ಪನವರ ಮಾತಿನಂತೆ ಗ್ರಾಮಗಳು ನಮ್ಮ ಪ್ರಾಚೀನ ಸಂಸ್ಕೃತಿಯ ಅಸಲಿ ತಾಣಗಳು ಇಂತಹ ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿರುವ ಹಳ್ಳಿಗಳ ರಕ್ಷಣೆ ಮಾಡುವುದೆಂದರೆ ಆಧುನಿಕತೆಯ ಜೊತೆಗೆ ಜನಪದರನ್ನು ಜೋಡಿಸಿಕೊಂಡು ಬೆಳೆಸುವುದಾಗಿದೆ. ಆಧುನಿಕತೆ ಮತ್ತು ಜಾನಪದೀಯತೆ ಎರಡೂ ಮನುಷ್ಯನ ಎರಡು ಕಣ್ಣು, ಕಾಲು, ಕಿವಿಯಾಗಿ ಬೆಳೆಯಬೇಕಾಗಿದೆ, ಬಾಳಬೇಕಾಗಿದೆ. ಅವೆರಡೂ ವೈರಿಗಳಂತೆ ವರ್ತಿಸಿದರೆ ಹಳ್ಳಿಗಳ ಏಳ್ಗೆ ಅಸಾಧ್ಯ. ಹಳ್ಳಿಗಳ ಬದುಕಿನ ಮೂಲಸೆಲೆಗಳಾದ ಅವರ ಸಾಹಿತ್ಯ ಕಲೆ ಸಂಸ್ಕೃತಿಯನ್ನು ವೃದ್ಧಿಸುವಂತೆ ಆಧುನಿಕತೆಯ ಶಬ್ದ, ರಕ್ತ, ಮಾಂಸ ತುಂಬಬೇಕಾಗಿದೆ; ಗೊಬ್ಬರ ಹಾಕಿ ನೀರುಣಿಸಬೇಕಾಗಿದೆ. ನಮ್ಮ ಸಾಹಿತ್ಯ ಕಲೆ, ಸಂಸ್ಕೃತಿಯನ್ನು ಬಿಟ್ಟು ಜನಪದರು ಆಧುನಿಕತೆಯ ತಳಕು ಬಳಕಿಗೆ ಮರುಳಾದರೆ ಈ ದೇಶದ ನಾಶ ಖಂಡಿತ ಎಂದು ಹೇಳಬಹುದು.[೧] ಆದ್ದರಿಂದ ನಮ್ಮ ಪ್ರಾಚೀನ ಹಳ್ಳಿಗಳು ಹೊಂದಿದ್ದ ಮಾನವೀಯ ಸಂಬಂಧಗಳು ಮೌಲ್ಯಗಳನ್ನು ಉಳಿಸುತ್ತಾ, ಆಧುನಿಕತೆಯ ಜೊತೆಗೆ ಅವರ ಸಾಹಿತ್ಯ, ಕಲೆ, ಸಂಸ್ಕೃತಿ ಬೆರೆಸುತ್ತ-ಬೆಳೆಸುತ್ತ ಹೊಸ ಜೀವನದ ಹುಟ್ಟು ಹಾಕುವುದು ಇಂದಿನ ಅಗತ್ಯವಾಗಿದೆ. ಆ ಮೂಲಕ ಜಾನಪದೀಯತೆಗೆ ಆಧುನಿಕತೆಯ ವಿದ್ಯುತ್ ನೀಡಿ ಹೊಸ ರಕ್ತ ಸಂಚಾರ ಮಾಡಬೇಕಾಗಿರುವುದು ಇಂದಿನ ಆದ್ಯತೆಯಾಗಿದೆ ಎಂಬುದು ಗ್ರಾಮ ಅಧ್ಯಯನದಿಂದ ತಿಳಿಯುತ್ತದೆ.

ಪಾಶ್ಚಾತ್ಯ ಸಂಸ್ಕೃತಿ ಹಾಗೂ ಪ್ರಭಾವಿ ಸಮೂಹ ಸಂವಹನ ಮಾಧ್ಯಮಗಳಾದ ಚಲನಚಿತ್ರ ಮತ್ತು ದೂರದರ್ಶನಗಳ ಪ್ರಭಾವದಿಂದ ಗ್ರಾಮಗಳು ಮೂಲ ಪರಂಪರೆಯಲ್ಲಿ ಬದಲಾವಣೆಗೊಳ್ಳುತ್ತಿವೆ. ಜಾಗತಿಕ ಮಟ್ಟದಲ್ಲಿ ಭಾರತೀಯ ಗ್ರಾಮಗಳು ವೈಶಿಷ್ಟ್ಯ ಪೂರ್ಣವಾದ ಸಾಂಸ್ಕೃತಿಕ ಸಿರಿಯನ್ನು ಹೊಂದಿವೆ. ಆದ್ದರಿಂದಲೇ ಹಿರಿಯರು 'ಹಳ್ಳಿಯಿಂದಲೇ ದಿಲ್ಲಿ' ಎಂದು ಹೇಳಿದ್ದಾರೆ. ಅದನ್ನೇ ನಮ್ಮ ಜನಪದರು 'ಹಳ್ಳಿಯಿಂದಲೇ ಪ್ಯಾಟಿ ಬಸಿರಾಗುತ್ತದೆ'. ಎಂದು ಹೇಳುತ್ತಾರೆ. ಇದು ಗ್ರಾಮಗಳ ಮಹತ್ವ ತಿಳಿಸುತ್ತದೆ. ಆ ಹಿನ್ನೆಲೆಯಲ್ಲಿ ಸೊರಟೂರ ಗ್ರಾಮವನ್ನು ಅಧ್ಯಯನ ಮಾಡಲಾಗಿದ್ದು, ಅದೊಂದು ಪರಿಚಯಾತ್ಮಕ ಹಾಗೂ ಮಾಹಿತಿ

ಪ್ರಧಾನ ಅಧ್ಯಯನವಾಗಿದೆ. ವಿಶೇಷ ಅಂಶಗಳನ್ನು ಹಾಗೂ ಅಗತ್ಯ ವಿಶ್ಲೇಷಣೆಗಳನ್ನು ಮಾಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಗ್ರಾಮದಲ್ಲಿರುವ ಶಾಸನಗಳು ಕ್ರಿ.ಶ. ೯ನೇ ಶತಮಾನದಿಂದ ೧೪ನೇ ಶತಮಾನಗಳ ಕಾಲಾವಧಿಯಲ್ಲಿ ರಚಿತವಾದ ಶಾಸನಗಳು, ಕೇವಲ ಕೆಲ ರಾಜರ, ಸಾಮಂತರರ ಕುರಿತು ಮಾಹಿತಿ ಒದಗಿಸುತ್ತವೆ. ಅದನ್ನು ಹೊರತುಪಡಿಸಿದರೆ ಗ್ರಾಮದಲ್ಲಿ ಲಿಖಿತವಾಗಿ ಐತಿಹಾಸಿಕ ಪುರಾವೆಗಳು ಏನೂ ಸಿಗುವುದಿಲ್ಲ. ಆದ್ದರಿಂದ ಸೊರಟೂರ ಗ್ರಾಮದ ಕುರಿತ ಬಹುತೇಕ ವಿಷಯಾಂಶವನ್ನು ಕ್ಷೇತ್ರಕಾರ್ಯದಿಂದಲೇ ಸಂಗ್ರಹಿಸಲಾಗಿದೆ. ಆದ್ದರಿಂದ ಇದೊಂದು ಕ್ಷೇತ್ರಕಾರ್ಯ ಆಧರಿಸಿದ ಅಧ್ಯಯನ ಎಂದು ಹೇಳಬಹುದಾಗಿದೆ.

ಅಧ್ಯಯನದ ಬಹುಪಾಲು ಅಂಶಗಳನ್ನು ಸ್ವತಃ ಅವಲೋಕನ ಸಂದರ್ಶನ ಹಾಗೂ ಧ್ವನಿ ಸುರುಳಿ, ಛಾಯಾಚಿತ್ರಗಳ ಮೂಲಕ ಸೆರೆಹಿಡಿಯಲಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗ್ರಾಮಸ್ಥರು ಹೆಚ್ಚು ಶ್ರದ್ಧೆಯಿಂದ ಸ್ಪಂದಿಸಿದ್ದು ವಿಶೇಷವಾಗಿದೆ. ಅದರಲ್ಲೂ ಗ್ರಾಮದ ಶತಾಯುಷಿಗಳಾದ ಶಂಕ್ರಪ್ಪ ಮಲ್ಲಾರಿಯವರ ಅನುಭವಗಳು ಗ್ರಾಮದ ಮೌಖಿಕ ಚರಿತ್ರೆಗೆ ಆಕರವಾಗಿದ್ದವು. ಆದರೆ ಇಳಿವಯಸ್ಸಿನಲ್ಲಿರುವ ಅವರ ಮಾತುಗಳು ಸ್ಪಷ್ಟವಾಗಿ ಅರ್ಥವಾಗದೇ ಇದ್ದದ್ದು ಒಂದು ಕೊರತೆ ಎನಿಸಿತ್ತು. ಆದರೆ ಇನ್ನೊಬ್ಬ ಹಿರಿಯರಾದ ಹನಮಂತಪ್ಪ ಜಮಾಣಿಯವರು ಗ್ರಾಮದ ಹಲವಾರು ಮಾಹಿತಿಗಳನ್ನು ಹಾಗೂ ವಿಶೇಷತೆಗಳನ್ನು ತಿಳಿಸುವ ಮೂಲಕ ಆ ಕೊರತೆಯನ್ನು ನೀಗಿಸಿದ್ದಾರೆ. ಇವರ ಪರಂಪರೆಯಲ್ಲಿ ಬೆಳೆದ ಗ್ರಾಮದ ಹಿರಿಯರು ಸಾಂದರ್ಭಿಕವಾಗಿ ಅಧ್ಯಯನಕ್ಕೆ ಸ್ಪಂದಿಸಿದ್ದಾರೆ; ಅವರ ಮಾಹಿತಿ ವಕ್ತೃಗಳ ಪಟ್ಟಿಯಲ್ಲಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಶಾಸನಗಳ, ದೇವಾಲಯಗಳ ಛಾಯಾಚಿತ್ರ ತೆಗೆಯುವಾಗ ಅವುಗಳ ಕುರಿತು ಏಕೆ ಏನು? ಎಂಬ ಪ್ರಶ್ನೆಗಳ ಅವರ ಮುಗ್ಧತೆಗೆ ಹಿಡಿದ ಕನ್ನಡಿಯಂತಿತ್ತು ಹಾಗೂ ಗ್ರಾಮದ ಸಾಂಸ್ಕೃತಿಕ ಶ್ರೀಮಂತಿಕೆಯ ಅರಿವು ಅವರಿಗಿಲ್ಲ. ಏಕೆಂದರೆ ಹೋಳಿ ಹಬ್ಬದ ಹಾಡನ್ನು ಧ್ವನಿ ಸುರುಳಿ ಮಾಡುವಾಗ ಧ್ವನಿಸುರುಳಿಯ ಬಗ್ಗೆ ಏನೋ ತಪ್ಪು ಕಲ್ಪನೆ ಮಾಡಿಕೊಂಡು ಮೂಲ ಹೋಳಿಹಬ್ಬದ ಹಾಡುಗಳನ್ನು ಹಾಡದೇ ಮಡಿವಂತಿಕೆಯ ಭಾವದಿಂದ ಕೃತಕತೆ ಮೂಡಿಬಂತು. ಆದ್ದರಿಂದ ಕೆಲವು ಜಾನಪದೀಯ ಕ್ಷೇತ್ರಕಾರ್ಯಗಳು ಸಹಜತೆ ಹೊಂದಿರಬೇಕು. ವಕ್ತೃಗಳಿಗೆ ಗೊತ್ತಾಗದಂತೆ ಅವಲೋಕನ ಹಾಗೂ ದಾಖಲೆ ಮಾಡಿಕೊಳ್ಳಬೇಕೆಂದು ತಿಳಿಯಲಾಗಿದೆ. ಆದ್ದರಿಂದ ಅಧ್ಯಯನ ಮಾಡುವಾಗ ಕ್ಷೇತ್ರಕಾರ್ಯದ ವಿಧಾನಗಳಿಗೆ ಹೀಗೆಯೇ ಈ ವಿಧಾನಗಳಲ್ಲಿಯೇ ಮಾಡಬೇಕೆಂಬ ಹಟಕ್ಕೆ ಕಟ್ಟುಬೀಳದೆ ಸಮಯ ಸನ್ನಿವೇಶಗಳಿಗೆ ತಕ್ಕಂತೆ ವಕ್ತೃಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಏಕೆಂದರೆ ಜನಪದರನ್ನು ನಿರ್ದಿಷ್ಟ ಸಮಯದಲ್ಲಿ ಹಿಡಿದಿಡುವುದು ಕಷ್ಟಸಾಧ್ಯ. ಆದ್ದರಿಂದ ಗುಡಿಗಳಲ್ಲಿ ಕಟ್ಟೆಯ ಮೇಲೆ ಬಸ್ಸಿನಲ್ಲಿ ಸಿಕ್ಕಾಗ ಹೊಲಕ್ಕೆ ಹೋದಾಗ ಆಕಸ್ಮಿಕವಾಗಿ ಸಿಕ್ಕ ವ್ಯಕ್ತಿಗಳನ್ನು ಸಮಯವನ್ನು ಇದಕ್ಕೆ ಬಳಸಿಕೊಳ್ಳಲಾಗಿದೆ. ಇಂತಹ ಘಟನೆಗಳ ಕ್ಷೇತ್ರಕಾರ್ಯ, ಆಕಸ್ಮಿಕ ಭೇಟಿಯಾದಾಗ ಮಾತ್ರ ನಡೆದಿವೆ.

ಗ್ರಾಮದ ಜನಪದರ ಬದುಕು ಸಹ ಇತಿಹಾಸದ ಒಂದು ಭಾಗವೇ ಆಗಿದೆ. ಆದರೆ ಇತಿಹಾಸವು ಕೇವಲ ಕೆಲವೇ ವಿಷಯ, ವಸ್ತು, ವ್ಯಕ್ತಿಗಳಿಗೆ ಸೀಮಿತವಾಗಿರುವುದರಿಂದ ಗ್ರಾಮದ ಇತಿಹಾಸದಲ್ಲಿ ದಾಖಲೆಯಾಗದೇ ಇರುವ ಹಾಗೂ ದಾಖಲೆಯಲ್ಲಿ ಇರುವ ವಿಷಯಗಳ

ಸಂಗ್ರಹಣೆಗೆ ಪ್ರಯತ್ನಿಸಲಾಗಿದೆ. ಇದು ಅಧ್ಯಯನದ ಉದ್ದೇಶವೂ ಆಗಿದೆ. ಅಂದರೆ ಇತಿಹಾಸದಲ್ಲಿ ದಾಖಲಾದ ವಿಷಯಗಳನ್ನು ಕೈಬಿಡಲಾಗಿಲ್ಲ. ಅವುಗಳನ್ನು ಇನ್ನಷ್ಟು ಸರಳೀಕರಿಸಲು ಪ್ರಯತ್ನಿಸಲಾಗಿದೆ. ಉದಾ: ಗ್ರಾಮದಲ್ಲಿರುವ ೧೪ ಶಾಸನಗಳು ಗ್ರಾಮಸ್ಥರಿಗೆ ಕೇವಲ ಶಾಸನದ ಕಲ್ಲುಗಳಾಗಿ ಕಾಣುತ್ತಿದ್ದವು. ಪ್ರಸ್ತುತ ಅಧ್ಯಯನದಲ್ಲಿ ಅವುಗಳ ಕನ್ನಡ ಸಾರವನ್ನು ಸಂಗ್ರಹಿಸಲು ಪ್ರಯತ್ನ ಮಾಡಲಾಗಿದೆ. ಆ ಮೂಲಕ ಗ್ರಾಮದ ಚರಿತ್ರೆಯ ಅಂಶಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದಾಗ ಹೊಯ್ಸಳ ಹಾಗೂ ಬಲ್ಲಾಳರ ಕುರಿತಾದ ವಿವರಗಳು ಹಾಗೂ ಗ್ರಾಮದ ನಕ್ಷೆಯನ್ನು ರಾಷ್ಟ್ರಮಟ್ಟದ ಸ್ಥಾನಕ್ಕೆ ಕೊಂಡೊಯ್ದು ಶಿವಾಜಿಮೂಲ ಕುರಿತ ಸರಜು ಕಾಟ್ಕರ್ ಅವರ ಕೃತಿಯನ್ನಾಧರಿಸಿ ಕೆಲವು ಅಂಶಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಏಕೆಂದರೆ ಈಗಾಗಲೇ ದಾಖಲೆಯಾದ ಅಂಶಗಳಿಗಿಂತ ಜನಪದೀಯ ಅಂಶಗಳಿಗೆ ಹೆಚ್ಚು ಗಮನ ಹರಿಸಲು ಪ್ರಯತ್ನಿಸಲಾಗಿದೆ. ಗ್ರಾಮದ ಭೌಗೋಳಿಕ ಪರಿಸರ ಹಾಗೂ ಭೌತಿಕ ಮಾಹಿತಿಗಳು ಇತರೇ ಗ್ರಾಮಗಳಂತೆ ಇವೆಯಾದರೂ ಗ್ರಾಮದ ನಿರ್ದಿಷ್ಟ ಅಂಶಗಳನ್ನು ಪರಿಚಯಿಸಲಾಗಿದೆ. ಗ್ರಾಮದ ಕೆಲವು ದೇವಾಲಯಗಳು ಚಾರಿತ್ರಿಕ ಹಿನ್ನೆಲೆಯಿಂದ ಬಂದಿರುವುದನ್ನು ಹಾಗೂ ಕೆಲವು ದೇವಾಲಯ ಮತ್ತು ದೈವಗಳು ಜಾನಪದೀಯ ಹಿನ್ನೆಲೆ ಹೊಂದಿರುವುದರಿಂದ ಅವುಗಳನ್ನು ಗ್ರಾಮಸ್ಥರಲ್ಲಿರುವ ಮೌಖಿಕ ಪರಂಪರೆಯ ಮೂಲಕ ದಂತಕತೆ, ಪವಾಡ, ನಂಬಿಕೆಗಳನ್ನು ಆಧರಿಸಿಯೇ ನೋಡಲಾಗಿದೆ. ಆದರೆ ಇದೇ ಅಧಿಕೃತವಲ್ಲ ಎಂಬುದನ್ನು ತಿಳಿಯಲಾಗಿದೆ. ಗ್ರಾಮದ ಜನಪದರ ಬದುಕು ಇತರೇ ಗ್ರಾಮಗಳಂತೆಯೇ ಹಲವಾರು ಅಂಶಗಳಲ್ಲಿ ಸಾಮ್ಯತೆಯನ್ನು ಹೊಂದಿವೆ. ಅಧ್ಯಯನದಲ್ಲಿ ಮೂಡಿಬಂದ ಬಹುತೇಕ ವಿಷಯ ಅಂಶಗಳನ್ನು ನೋಡಿದಾಗ 'ಹೇಳಿದ್ದೇಳೋ ಕಿಸಬಾಯಿದಾಸ' (ಈವರೆಗೆ ಗೊತ್ತಿರುವುದನ್ನೇ ಮತ್ತೆ ಗುರುತಿಸುವವರೆಗೆ ಹೀಗೆ ಹೇಳುತ್ತಾರೆ) ಎಂಬ ಜನಪದರ ಮಾತು ಅನ್ವಯವಾಗಬಹುದು. ಆದರೆ ಸೊರಟೂರ ಗ್ರಾಮದಲ್ಲಿರುವ ಜನ ಸಾಮಾಜಿಕ ವ್ಯವಸ್ಥೆಯಲ್ಲಿ ಹಲವಾರು ವಿಭಿನ್ನತೆ ಹಾಗೂ ವಿಶೇಷತೆಗಳನ್ನು ಕಾಣಬಹುದು. ಏಕೆಂದರೆ ಅವರ ಸಾಮಾಜಿಕ ವ್ಯವಸ್ಥೆಯಲ್ಲಿರುವ ಸಾಮರಸ್ಯದ ಬದುಕು ಆಧುನಿಕ ಸಮಾಜಕ್ಕೆ ಮಾದರಿಯಾಗಿದೆ. ಹಾಗಂತ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಕೊರತೆಗಳು ಇಲ್ಲವೇ ಇಲ್ಲ ಎಂದು ಹೇಳಲು ಬರುವುದಿಲ್ಲ. ಗ್ರಾಮದಲ್ಲಿ ಕೆಲವೊಮ್ಮೆ ಅಹಿತಕರ ಘಟನೆಗಳು ನಡೆದಿವೆ. ಅದಕ್ಕೆ ಕೆಲವೇ ಜನರ ಸ್ವ-ಹಿತಾಸಕ್ತಿ, ಸ್ವಾರ್ಥತೆ ಹೀಗೆ ಹಲವಾರು ಕಾರಣಗಳಿರುತ್ತವೆ. ಅಂತಹ ಕಾರಣಗಳ ವಿವರಣೆ ಹಾಗೂ ವಿಶ್ಲೇಷಣೆ ಮಾಡುವುದಕ್ಕೆ ಪ್ರಯತ್ನಿಸಿಲ್ಲ. ಏಕೆಂದರೆ 'ಗೋಡೆ ತೊಳೆದಂತೆಲ್ಲ ರಾಡಿ ಬರುತ್ತಾ ಹೋಗುತ್ತದೆ'. ವಿನಃ ಅದನ್ನು ಪೂರ್ಣ ಸ್ವಚ್ಛಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಅಧ್ಯಯನ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾಗಿರಬೇಕೆಂಬುದು ನನ್ನ ಗ್ರಹಿಕೆಯಾಗಿದೆ. ಗ್ರಾಮದ ಆರ್ಥಿಕತೆಯು ನಾಡಿನ ಇತರ ಗ್ರಾಮಗಳಿಂದ ಹೊರತಾಗಿಲ್ಲ. ಅದರಲ್ಲೂ ಬಡತನರೇಖೆಗಿಂತ ಕೆಳಗಿನ ಜನರೇ ಅಧಿಕವಾಗಿದ್ದಾರೆ. ಆದರೆ ಅವರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಗ್ರಾಮದಲ್ಲಿರುವ ಎಲ್ಲ ಧರ್ಮ, ಜಾತಿ, ಉಪಜಾತಿಗಳ ಸಂಪೂರ್ಣ ವಿವರಣೆ ಕೊಡಲು ಸಾಧ್ಯವಾಗಿಲ್ಲ. ಗ್ರಾಮದ ಶೈಕ್ಷಣಿಕ ಸ್ಥಿತಿಗತಿಯ ಕುರಿತು ಔಪಚಾರಿಕ ವ್ಯವಸ್ಥೆಯ ಶಿಕ್ಷಣದ ಸಾಧನೆಯ ಅಂಕಿ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಇದು 'ಅತ್ತೆಗೊಂದು ಕಾಲ ಸೊಸೆಗೊಂದು

ಕಾಲ' ಎನ್ನುವ ಮಾತಿನಂತೆ ಒಂದು ಕಾಲದಲ್ಲಿ ಕೇವಲ ಉಚ್ಚವರ್ಗದ ಹಾಗೂ ಉಳ್ಳವರ ಸ್ವತ್ತಾಗಿದ್ದ ಶಿಕ್ಷಣ ಇಂದು ಹಿಂದುಳಿದವರ ಕಡೆ ವಾಲಿರುವುದು ಕಾಣುತ್ತದೆ. ಇದಕ್ಕೆ ಸರಕಾರದ ಸಾರ್ವತ್ರಿಕ ಶಿಕ್ಷಣ ಕ್ರಮವೇ ಕಾರಣವಾಗಿದೆ. ಅದು ಸಹ ಮೂಲ ಶಿಕ್ಷಣಕ್ಕೆ ಮಾತ್ರ ಸೀಮಿತವಾದಂತಿದೆ. ಅದನ್ನು ಅಧ್ಯಯನದಲ್ಲಿ ವಿವಿಧ ಅಂಶಗಳಿಂದ ಗುರುತಿಸಲಾಗಿದೆ. ಗ್ರಾಮದ ರಾಜಕೀಯ ವ್ಯವಸ್ಥೆಯ ಕುರಿತು, ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಾದ ಆಡಳಿತ ಹಾಗೂ ರಾಜಕೀಯ ಸ್ಥಿತ್ಯಂತರಗಳನ್ನು ಗುರುತಿಸಲಾಗಿದೆ. ಆದರೆ ಸ್ವಾತಂತ್ರ್ಯಪೂರ್ವದ ಗ್ರಾಮದ ರಾಜಕೀಯ ಚಿತ್ರಣವನ್ನು ಖಚಿತವಾಗಿ ಹಾಗೂ ಸವಿಸ್ತಾರವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಅದಕ್ಕೆ ಅಧ್ಯಯನದ ಮಿತಿಯೂ ಒಂದು ಕಾರಣ. ಗ್ರಾಮದಲ್ಲಿರುವ ಜನರ ಆಚರಣೆಗಳು ಬಹುತೇಕ ಉತ್ತರ ಕರ್ನಾಟಕದ ಎಲ್ಲ ಗ್ರಾಮಗಳಂತೆ ಸಾಮಾನ್ಯವಾಗಿವೆ. ಇದನ್ನು ಗ್ರಾಮದಲ್ಲಿ ಕಂಡಂತೆ ವಿವರಿಸಲಾಗಿದೆ. ಒಂದೊಮ್ಮೆ ಇದು ಅಗತ್ಯವಿಲ್ಲವೆನಿಸಿತು. ಆದರೆ ಸಾಂಪ್ರದಾಯಕ ಆಚರಣೆಗಳು ಕಾಲದಿಂದ ಕಾಲಕ್ಕೆ ಸ್ಥಿತ್ಯಂತರ ಹೊಂದುವುದರಿಂದ ಅದನ್ನು ಗುರುತಿಸಬೇಕೆನಿಸಿತು. ಆದರೆ ವಾರ್ಷಿಕಾವರ್ತನದ ಆಚರಣೆಗಳು ಗ್ರಾಮದ ದೈವಗಳ ಹಾಗೂ ವಿಶೇಷ ಹಬ್ಬಗಳನ್ನು ಪರಿಚಯಿಸುವುದರಿಂದ ವಾರ್ಷಿಕಾವರ್ತನದ ಆಚರಣೆಗಳನ್ನು ಗುರುತಿಸಲಾಯಿತು. ಆದರೆ ಗ್ರಾಮದಲ್ಲಿ ಬಹುಪಾಲು ಜನರು ಸೇರಿ ಆಚರಿಸುವ ಸಾಮೂಹಿಕ ಜಾತ್ರೆ, ಹಬ್ಬ-ಹರಿದಿನಗಳನ್ನು ಮಾತ್ರ ಗುರುತಿಸಲಾಗಿದೆ. ಆದರೆ ಕೆಲವು ಜಾನಪದೀಯ ಆಚರಣೆಗಳನ್ನು ಹಾಗೂ ಕೃಷಿ ಸಂಬಂಧಿ ಆಚರಣೆಗಳನ್ನು ಅಧ್ಯಯನಕ್ಕೊಳಪಡಿಸಲು ಸಾಧ್ಯವಾಗಿಲ್ಲ; ಇದೊಂದು ಕೊರತೆಯೂ ಆಗಿದೆ. ಗ್ರಾಮದಲ್ಲಿ ಜನಪದ ಸಾಹಿತ್ಯ ಬಹು ಹೆಮ್ಮರವಾಗಿ ಬೆಳೆದಿದೆ. ಅದರಲ್ಲೂ ವಿಶೇಷವಾಗಿ ಜನಪದ ರ್‍ವಾಣ ಎಂಬ ಜನಪದ ಕಲೆ ಗ್ರಾಮದಲ್ಲಿರುವುದನ್ನು ಗುರುತಿಸಲಾಗಿದೆ. ಜನಪದ ರ್‍ವಾಣಗಳನ್ನು ಈವರೆಗಿನ ಜನಪದ ಸಾಹಿತ್ಯ ಹಾಗೂ ಕಲೆಗಳಲ್ಲಿ ಗುರುತಿಸಿಲ್ಲ. ಆದ್ದರಿಂದ ಜನಪದ ರ್‍ವಾಣದ ಲಕ್ಷಣಗಳು ಸೇರಿದಂತೆ ಗ್ರಾಮದ ಜನಪದ ರ್‍ವಾಣಗಳ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಶಿಷ್ಟಸಾಹಿತ್ಯ ಗ್ರಾಮದಲ್ಲಿ ಇನ್ನು ಬೆಳೆಯುವ ಸಿರಿಯಂತೆ ಇದೆ. ಅಂಥ ಕವಿ ಪ್ರತಿಭೆಗಳತ್ತ ಗಮನಹರಿಸಲಾಗಿದೆ. ಗ್ರಾಮದ ಜನಪದ ಕಲೆಗಳನ್ನು ಅವರ ಕಲಾ ಕುಶಲತೆಯನ್ನು ಕೆಲವು ಹಾಡುಗಳ ಮೂಲಕ ನೋಡಲಾಗಿದ್ದು, ಗ್ರಾಮದ ಕಲಾವಿದರು ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕಾರ ಪಡೆದಿದ್ದು ಅದಕ್ಕೆ ಅವರ ಶ್ರಮ ಸಾಧನೆಗಳನ್ನು, ಸಮಾಜದ, ಸರ್ಕಾರದ ಸ್ಪಂದನೆಯನ್ನು ಸಮೀಕರಿಸಿ ನೋಡಲಾಗಿದೆ. ಸೊರಟೂರ ಗ್ರಾಮದ ಪ್ರಾಚೀನತೆಯ ಪರಂಪರೆ ಹಾಗೂ ಸಮಕಾಲೀನ ಸಂದರ್ಭದಲ್ಲಿ ಗ್ರಾಮದಲ್ಲಾದ ಸ್ಥಿತ್ಯಂತರಗಳನ್ನು ಹಾಗೂ ಅವುಗಳಿಗೆ ಕಾರಣವಾದ ಜಾಗತೀಕರಣದ ಪ್ರಭಾವವನ್ನು, ಅವುಗಳ ನಡುವೆಯೂ ಗ್ರಾಮದಲ್ಲಿ ಇನ್ನು ಜೀವಂತವಾಗಿರುವ ಗ್ರಾಮ ಪರಂಪರೆಯನ್ನು ಅಗತ್ಯ ವಿಶ್ಲೇಷಣೆಯೊಂದಿಗೆ ನೋಡಲಾಗಿದೆ. ಪ್ರಸ್ತುತ ಸೊರಟೂರ ಗ್ರಾಮ ಅಧ್ಯಯನವು. ನೀರಿನ ಮೂಲಕ್ಕೆ ಹೋಲಿಸಿದರೆ ಅದು ಒಂದು ಹಳ್ಳದ ಕೆಲಸವಿದ್ದಂತೆ. ಏಕೆಂದರೆ ಹಲವಾರು ಹಳ್ಳಗಳು ಕೂಡಿ ನದಿಯಾಗುವಂತೆ, ಹಲವಾರು ನದಿಗಳು ಕೂಡಿ ಒಂದು ಸಮುದ್ರವಾಗುವಂತೆ ಗ್ರಾಮ ಅಧ್ಯಯನಕ್ಕೆ ವಿಷಯಾಂಶಗಳ ಮಹಾ ಪೂರವೇ ಇರುತ್ತದೆ. ಅದನ್ನು ನಾವು ನೋಡುವ ರೀತಿ ಅಧ್ಯಯನದ ವಿಷಯವಸ್ತುವಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಸೊರಟೂರ ಗ್ರಾಮವನ್ನು ಅಧ್ಯಯನ ಮಾಡುತ್ತಾ ಹೋದಂತೆ

ನಾನು ಸಮುದ್ರದ ನೀರನ್ನು ಬಟ್ಟಲಿನಿಂದ ಅಳೆಯುತ್ತಿದ್ದೇನೆ ಎಂಬ ಭಾವ ಬಂತು. ಹೀಗೆ ಗ್ರಾಮದ ಅಧ್ಯಯನದ ಹರವು ನನಗೆ ಅಧ್ಯಯನ ಮಾಡುತ್ತಾ ಹೋದಂತೆ ಅರಿವಾಯಿತು. ಆ ಹಿನ್ನೆಲೆಯಲ್ಲಿ ನೋಡಿದಾಗ ಈ ಅಧ್ಯಯನವು ಸೊರಟೂರ ಬಗೆಗಿನ ಶೋಧದಲ್ಲಿ ಪರಿಪೂರ್ಣ ಅಧ್ಯಯನವಲ್ಲ ಎಂಬುದು ನನ್ನ ಪ್ರಾಮಾಣಿಕ ತಿಳುವಳಿಕೆ. ಈ ಗ್ರಾಮದ ಅಧ್ಯಯನದಲ್ಲಿ ಕಂಡುಬಂದ ವಿಷಯಾಂಶಗಳನ್ನು ಕ್ಷೇತ್ರಕಾರ್ಯದಲ್ಲಿ ನೋಡುತ್ತಾ ಹೋದಂತೆ ಪ್ರಸ್ತುತ ಅಧ್ಯಯನದ ಪ್ರತಿಯೊಂದು ಅಧ್ಯಾಯಗಳು ಒಂದೊಂದು ಮಹಾಪ್ರಬಂಧಕ್ಕೆ ಆಹಾರ ವಸ್ತುಗಳಾಗುತ್ತವೆ ಎಂದು ಹೇಳಬಹುದು. ಆದ್ದರಿಂದ ಸೊರಟೂರ ಗ್ರಾಮ ಜಾನಪದ ಅಧ್ಯಯನವು ಗ್ರಾಮದ ಬಹುಪಾಲು ವಿಷಯಾಂಶಗಳನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿದ ಮಾಹಿತಿ ಪ್ರಧಾನ ಅಧ್ಯಯನವಾಗಿದ್ದು ಅಲ್ಲಲ್ಲಿ ಅಗತ್ಯ ವಿಶ್ಲೇಷಣೆಯು ಇದೆ. ಒಟ್ಟಾರೆ ಸೊರಟೂರ ಪುರಾತನ ಗ್ರಾಮವಾಗಿದ್ದು ಪ್ರಸಕ್ತ ಕಾಲಘಟ್ಟದಲ್ಲಿ ಸರ್ವಧರ್ಮ ಸಮನ್ವಯದ, ಭಾವೈಕ್ಯತೆಗೆ ಮಾದರಿ ಗ್ರಾಮ ಎಂದು ಹೇಳಬಹುದು.

ಅಧ್ಯಯನದ ಫಲಿತಗಳು

೧. ಸೊರಟೂರ ಗ್ರಾಮ ಸಾಂಸ್ಕೃತಿಕ ಶ್ರೀಮಂತಿಕೆಯಿಂದ ಕೂಡಿದ ಗ್ರಾಮ. ಎಂಬುದು ಒಂದು ಭಾಗವಾದರೆ ಗ್ರಾಮದ ಜನಪದರ ಜೀವನವನ್ನು ಅದರಲ್ಲಿ ಅಂತರ್ಗತವಾದ ವಿಷಯಗಳನ್ನು ಒಳಹೊಕ್ಕು ನೋಡಿದಾಗ ಆ ಸಂಸ್ಕೃತಿ ಪರಂಪರೆಯ ಹೆಸರಿನಲ್ಲಿಯೇ ಗ್ರಾಮ ಹಲವಾರು ಸಮಸ್ಯೆಗಳಿಂದ ನಲುಗುತ್ತಿರುವುದು ಅಧ್ಯಯನದ ಒಳನೋಟದಲ್ಲಿ ಕಂಡು ಬರುತ್ತದೆ.

೨. ಗ್ರಾಮದ ವ್ಯಾಪ್ತಿಯಲ್ಲಿರುವ ಗುಡ್ಡಗಳು ಮೊದಲು ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿದ್ದವು. ಅವು ಹುಲ್ಲುಗಾವಲು ಪ್ರದೇಶವಾದ್ದರಿಂದ ಪಶುಸಂಗೋಪನೆ ಜನರ ಬದುಕಿಗೆ ಜೀವನಾಡಿಯಾಗಿತ್ತು. ಆದರೆ ಗ್ರಾಮ ಪಂಚಾಯ್ತಿಯವರು ಅರಣ್ಯ ಅಭಿವೃದ್ಧಿ ಉದ್ದೇಶದಿಂದ ಆ ಗುಡ್ಡಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿದರು. ಇದರಿಂದ ಪ್ರಸ್ತುತ ಗ್ರಾಮದ ಗುಡ್ಡಗಳಲ್ಲಿ ಅರಣ್ಯ ಅಭಿವೃದ್ಧಿಯು ಆಗಿಲ್ಲ. ಗ್ರಾಮದ ದನಕರು, ಆಡು-ಕುರಿಗಳಿಗೆ ಮೇಯಿಸಲು ಅರಣ್ಯ ಇಲಾಖೆ ಅವಕಾಶವನ್ನು ನೀಡುತ್ತಿಲ್ಲ. ಇದು ಗ್ರಾಮದ ಜನಪದರ ಪಶುಸಂಗೋಪನೆಗೆ ಕೊಡಲಿಪೆಟ್ಟು ನೀಡಿದೆ. ಗ್ರಾಮ ಪಂಚಾಯ್ತಿಯ ನಿರ್ಧಾರ ಗ್ರಾಮದ ಅಭಿವೃದ್ಧಿಗೆ ಮಾರಕವಾಗಿರುವುದು ಪ್ರಸ್ತುತ ಕಾಲದ ಸಮಸ್ಯೆಯಾಗಿದೆ.

೩. ಸೊರಟೂರ ಗ್ರಾಮದಲ್ಲಿ ೬೧೨೪ ಎಕರೆ ಭೂ ಪ್ರದೇಶದ ಪೈಕಿ ೨೮೯೦ ಎಕರೆ ಗುಡ್ಡಗಾಡು (ಅರಣ್ಯ) ಪ್ರದೇಶವಿದೆ. ಮಳೆಗಾಲದಲ್ಲಿ ನೀರು ಈ ಗುಡ್ಡಗಳಿಂದ ಹರಿದು ವ್ಯರ್ಥವಾಗಿ ಹೋಗುತ್ತದೆ. ಅದರಲ್ಲೂ ಗ್ರಾಮದ ಪೂರ್ವದಿಕ್ಕಿನಲ್ಲಿ ಮುಂಡಿರಾಮನ ಸರವು ಎಂಬಲ್ಲಿ ಭಾರಿ ಪ್ರಮಾಣದ ನೀರು ವ್ಯರ್ಥವಾಗಿ ಹರಿದುಹೋಗುತ್ತಿದೆ. ಅಂಥ ಪ್ರದೇಶಗಳಲ್ಲಿ ನೀರನ್ನು ನಿಲ್ಲಿಸಲು ಕೆರೆ/ಡ್ಯಾಂಗಳನ್ನು ನಿರ್ಮಿಸಿದರೆ ದನಕರುಗಳಿಗೆ ನೀರು ಹಾಗೂ ಅಂತರ್ಜಲ ವೃದ್ಧಿಯಾಗಿ ಗ್ರಾಮದಲ್ಲಿ ಕೃಷಿ ಅಭಿವೃದ್ಧಿ ಸಾಧ್ಯವಾಗುತ್ತದೆ.

೪. ಇತ್ತೀಚಿನ ಕಾಲದಲ್ಲಿ ಜಾತಿಯತೆ ಗ್ರಾಮದಲ್ಲಿ ಬಹು ಸೂಕ್ಷ್ಮ ವಿಷಯವಾಗಿದೆ. ಹಿಂದಿನ ಕಾಲದಲ್ಲಿ ಮೇಲ್ವರ್ಗದವರ ಮಧ್ಯೆ ಕೆಳಜಾತಿಯವರು ಭಯ ಅಂಜಿಕೆಯಿಂದಲೇ ಬದುಕುತ್ತಿದ್ದರು ಎಂದು ಹೇಳುತ್ತಾರೆ. ಆದರೆ ಇದಕ್ಕೆ ತದ್ವಿರುದ್ಧವಾದ ಘಟನೆಗಳು ಗ್ರಾಮದಲ್ಲಿ ಕೆಲವು ಸಮಯ ಸನ್ನಿವೇಶಗಳಲ್ಲಿ ನಡೆದಿರುವುದು ಕಂಡು ಬರುತ್ತದೆ. ಇದು **'ಅತ್ತೆಗೊಂದು ಕಾಲ ಸೊಸೆಗೊಂದು ಕಾಲ'** ಎಂಬಂತೆ ಕಂಡುಬರುತ್ತದೆ. ಆದರೆ ಈ ಎರಡು ಕಾಲಗಳು ಅಪಾಯಕಾರಿಗಳೇ, ಒಟ್ಟಾರೆ ಜಾತಿಯತೆ ಸಾರ್ವತ್ರಿಕವಾಗಿಲ್ಲ. ಅದು ಆರ್ಥಿಕತೆ, ಅಧಿಕಾರ, ಜ್ಞಾನ ಮುಂತಾದ ಸ್ವರೂಪ ಪಡೆದುಕೊಳ್ಳುತ್ತಿರುವುದು ಕಂಡು ಬರುತ್ತದೆ.

೫. ಗ್ರಾಮದ ಡಾ. ಬಿ.ಆರ್. ಇನಾಮದಾರರು ಪಾರ್ಶ್ವವಾಯು ಕಾಯಿಲೆಗೆ ಆಯುರ್ವೇದದಲ್ಲಿ ಪರಿಣಾಮಕಾರಿ ಚಿಕಿತ್ಸೆ ನೀಡುವ ಮೂಲಕ ಸೊರಟೂರ ಗ್ರಾಮ ಕರ್ನಾಟಕ ರಾಜ್ಯದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಇದಕ್ಕೆ ಕಾರಣ ವೈದ್ಯ ಇನಾಮದಾರರು ಆಯುರ್ವೇದ ಔಷಧಿಗಳ ಕುರಿತು ಆಸಕ್ತರಾಗಿದ್ದು ಅದರಲ್ಲಿ ನಿಪುಣತೆಯನ್ನು ಪಡೆದಿದ್ದಾರೆ. ಸೊರಟೂರ ಗ್ರಾಮ ಗಿಡಮೂಲಿಕೆಗಳ ಆಗರವಾದ ಕಪ್ಪತ್ತಗುಡ್ಡದ ಸರಹದ್ದಿನಲ್ಲಿರುವುದು ಅದಕ್ಕೆ ಪೂರಕವಾಗಿದೆ. ಇನ್ನು ಕೆಲವರು ಅವರಿಗೆ ದೈವಿಶಕ್ತಿಯ ಆಶೀರ್ವಾದ ಇದೆ ಎಂದು ಹೇಳುತ್ತಾರೆ. ಸೊರಟೂರ ಗ್ರಾಮ ವಿವಿಧ ಪ್ರದೇಶಗಳಿಂದ ಸಂಬಂಧ ವೃದ್ಧಿಸಿಕೊಳ್ಳಲು, ಶಿಕ್ಷಣ, ರಸ್ತೆ ಸೇರಿದಂತೆ ಗ್ರಾಮದಲ್ಲಿ ವಿವಿಧ ಅಭಿವೃದ್ಧಿಯಾಗಲು ಡಾ. ಇನಾಮದಾರರ ಸೇವೆ ಗುರುತರವಾಗಿದೆ.

೬. ಸೊರಟೂರ ಗ್ರಾಮ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿದ ಗ್ರಾಮವಾಗಿದೆ. ಅದಕ್ಕೆ ಪೂರಕವಾಗಿ ಶಾಸನಗಳು, ಪ್ರಾಚೀನ ದೇವಾಲಯಗಳಿವೆ. ಆದರೆ ಅವುಗಳ ರಕ್ಷಣೆಗೆ ಯಾವುದೇ ವ್ಯವಸ್ಥೆ ಗ್ರಾಮದಲ್ಲಿ ಕಂಡು ಬರುವುದಿಲ್ಲ. ಶಿಲಾಶಾಸನಗಳು ಪೂಜಾ ಮೂರ್ತಿಗಳಾಗಿ ಕಟ್ಟೆಕಲ್ಲುಗಳಾಗಿ ಉಪಯೋಗವಾಗುತ್ತಿವೆ.

೭. ಗ್ರಾಮದ ಅನ್ನದಾನೇಶ್ವರ ಮಠದಲ್ಲಿ ಶ್ರೀ. ಶಿವಯೋಗಿಶ್ವರ ಸ್ವಾಮೀಜಿಗಳು ಪ್ರತಿ ಹುಣ್ಣಿಮೆ ದಿನ ನಡೆಸುವ ವಚನ ಚಿಂತನಗೋಷ್ಠಿ ಹಾಗೂ **'ದುಶ್ಚಟಗಳ ಭಿಕ್ಷೆ ಹಾಗೂ ಸದ್ಗುಣಗಳ ದೀಕ್ಷೆ'** ಎಂಬ ಘೋಷವಾಕ್ಯಗಳ ಕಾರ್ಯಕ್ರಮಗಳು ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವಾಗಿವೆ.

೮. ಗ್ರಾಮದಲ್ಲಿರುವ ವಿವಿಧ ದೇವಾಲಯಗಳು ಹಾಗೂ ಅವುಗಳ ಆಚರಣೆಗಳನ್ನು ನೋಡಿದಾಗ ಆಯಾ ಸಮುದಾಯಗಳಲ್ಲಿ ಜಾತಿಯತೆಯು ಜೀವಂತವಾಗಿರುವುದು ಕಂಡು ಬರುತ್ತದೆ. ತಳಸಮುದಾಯಗಳಲ್ಲಿಯೇ ಜಾತಿಯತೆ ಇದ್ದು ಮೇಲುಕೀಳು ಎಂಬ ಭಾವನೆಗಳಿವೆ. ಕೆಳಜಾತಿಯವರಲ್ಲಿಯೇ ಪರಸ್ಪರ ಶೋಷಣೆಯಿದೆ.

೯. ಗ್ರಾಮದಲ್ಲಿ ಜಾತ್ಯಾತೀತತೆಯಲ್ಲಿ ಜಾತಿಯತೆ ಬೇರೂರಿರುವುದು ಕಂಡುಬರುತ್ತದೆ. ವಿವಿಧ ಸಮುದಾಯಗಳಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಕೆಳವರ್ಗದವರು ಮೇಲ್ವರ್ಗದವರನ್ನು

ಆಹ್ವಾನಿಸಿ ಆದರಾತಿಥ್ಯ ಮಾಡಿ ಸತ್ಕರಿಸಿದರೆ ಮೇಲ್ವರ್ಗದವರು ಕೆಳವರ್ಗದವರನ್ನು ಆಹ್ವಾನಿಸುವುದೇ ಇಲ್ಲ.

೧೦. ನ್ಯಾಯ ಪಂಚಾಯತಿಯಲ್ಲಿ ಜಾತಿಯತೆ ಅಂತರ್ಗತವಾಗಿದೆ. ಮೇಲ್ವರ್ಗದವರು ತಮ್ಮ ಸಮುದಾಯದ ನ್ಯಾಯಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ. ಆದರೆ ಕೆಳವರ್ಗದವರು ತಮ್ಮ ತಮ್ಮಲ್ಲಿಯ ನ್ಯಾಯ ನಿರ್ಣಯಕ್ಕೆ ಮೇಲ್ವರ್ಗದವರನ್ನು ಆಹ್ವಾನಿಸುವ ಪರಿಪಾಠವಿದೆ. ಇದರಲ್ಲಿ ರಾಜಕೀಯ ಪ್ರಭಾವ ಹೆಚ್ಚಾಗಿ ನ್ಯಾಯಾಲಯಗಳಲ್ಲಿ ಉತ್ತರ ಕಂಡುಕೊಳ್ಳಲು ಮೊರೆಹೋಗುತ್ತಿದ್ದಾರೆ.

೧೧. ಗ್ರಾಮದಲ್ಲಿ ಸುಮಾರು ೨೦ ಯುವಕ ಮಂಡಳಗಳಿವೆ ಅದರಲ್ಲಿ ಕಲ್ಮೇಶ್ವರ ಮತ್ತು ವೀರಭದ್ರೇಶ್ವರ ಯುವಕ ಮಂಡಳಗಳು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವುದು ಕಂಡುಬರುತ್ತದೆ.

೧೨. ಯುವಕ ಮಂಡಳಗಳು ಕೆಲವು ಸಮುದಾಯಗಳ ವ್ಯಾಪ್ತಿಯೊಳಗೆ ರಚನೆಯಾಗಿದ್ದರೆ, ಇನ್ನು ಕೆಲವು ಆಯಾ ಓಣಿಯ ಸಂಘಟನೆಯಲ್ಲಿ ಜಾತ್ಯಾತೀತವಾಗಿ ರಚನೆಯಾಗಿವೆ. ಇದು ಜಾತಿಯತೆ ಹಾಗೂ ಜಾತ್ಯಾತೀತತೆಗಳು ಸಾಂದರ್ಭಿಕವಾಗಿರುವುದಕ್ಕೆ ನಿದರ್ಶನವಾಗಿದೆ.

೧೩. ಕೃಷಿಯೇ ಗ್ರಾಮದ ಪ್ರಧಾನ ಉದ್ಯೋಗವಾಗಿದೆ. ಕುಲಕಸುಬುಗಳು ಪಳೆಯುಳಿಕೆಗಳಾಗಿದ್ದು ದಿನದ ಕೆಲಸಕ್ಕೆ ಜನ ನಗರದತ್ತ ಆಕರ್ಷಿತರಾಗಿದ್ದಾರೆ. ಗ್ರಾಮದಲ್ಲಿ ಚಿಕ್ಕ ಹಿಡುವಳಿದಾರರೇ ಅಧಿಕವಾಗಿರುವುದರಿಂದ ಗೋವಾ ಮಂಗಳೂರು ಕಡೆ ಉದ್ಯೋಗ ಅರಸಿ ಹೋಗುತ್ತಾರೆ. ಇತ್ತೀಚಿನ ಕಾಲದಲ್ಲಿ ಹೈನುಗಾರಿಕೆ ವ್ಯಾಪಾರ ಸ್ವ-ಉದ್ಯೋಗ ಮಾಡುತ್ತಿದ್ದಾರೆ. ಗ್ರಾಮದಲ್ಲಿ ೮೦ ಜನ ಮಾತ್ರ ಸರಕಾರಿ ನೌಕರರಿದ್ದಾರೆ. ಜೀವನೋಪಾಯಕ್ಕಾಗಿ ಜನರು ವಿವಿಧ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ.

೧೪. ಗ್ರಾಮದ ಜನರ ಆರ್ಥಿಕ ಸಂಘಟನೆಗಳಾದ ಸ್ವಸಹಾಯ ಸಂಘಗಳಿಂದ ಸಾಲ ಸೌಲಭ್ಯ ಪಡೆದು ಗ್ರಾಮದ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ಸರ್ಕಾರಿ ನೌಕರಿ ಪಡೆದಿದ್ದಾರೆ. ಸರ್ಕಾರ ಶಿಕ್ಷಣವನ್ನು ಸಾರ್ವತ್ರಿಕಣಗೊಳಿಸಿದ್ದರಿಂದ ಗ್ರಾಮದಲ್ಲಿ ಜನಸಾಮಾನ್ಯರ ಮಕ್ಕಳು ಶಿಕ್ಷಣ ಪಡೆದಿದ್ದಾರೆ. ಗ್ರಾಮದಲ್ಲಿ ೧೨೦ಕ್ಕೂ ಅಧಿಕ ಜನ ವಿವಿಧ ಪದವಿಧರರಿದ್ದು ಅದರಲ್ಲಿ ಹಿಂದುಳಿದ ವರ್ಗದವರೇ ಹೆಚ್ಚಾಗಿದ್ದಾರೆ.

೧೫. ಗ್ರಾಮದಲ್ಲಿ ರಾಜಕೀಯ ಅಧಿಕಾರ ಕೇವಲ ಮೇಲ್ವರ್ಗದವರ ಸ್ವತ್ತಾಗಿರುವುದು ಗ್ರಾಮದ ಪಂಚಾಯತಿ ಅಧ್ಯಕ್ಷರ ಅಧಿಕಾರ ಅವಧಿಯ ದಾಖಲೆಗಳಿಂದ ತಿಳಿದು ಬರುತ್ತದೆ. ೧೯೫೨ರಿಂದ ೧೯೯೯ರವರೆಗಿನ ೪೮ ವರ್ಷಗಳಲ್ಲಿ ೧೨ ಜನ ಚೇರಮನ್ನರಾಗಿ ಆಡಳಿತ ನಡೆಸಿದ್ದಾರೆ. ಇವರೆಲ್ಲರೂ ಸಾಮಾಜಿಕವಾಗಿ ಮೇಲುಸ್ತರದಲ್ಲಿದ್ದವರೇ. ಅದರಲ್ಲೂ ಶ್ರೀ ದೇವೇಂದ್ರಪ್ಪ ಮಲ್ಲಾಡದ ಎಂಬುವರು ೧೯೬೮ರಿಂದ ೧೯೮೩ರವರೆಗೆ ಒಟ್ಟು ೧೫ ವರ್ಷ ಒಬ್ಬರೆ ಚೇರ್‌ಮನ್‌ರಾಗಿದ್ದಾರೆ. ಸರ್ಕಾರ ಮೀಸಲಾತಿ ಕೊಡುವವರೆಗೆ ಕುರುಬ,

ಮುಸ್ಲಿಂ, ವಾಲ್ಮೀಕಿ, ಹರಿಜನ, ಭಜಂತ್ರಿ, ಕಲಾಲ, ಪಂಚಾಳ, ಸುಣಗಾರ ಸೇರಿದಂತೆ ಹಿಂದುಳಿದ ವರ್ಗದ ಒಬ್ಬರೂ ಅಧ್ಯಕ್ಷರಾಗಿಲ್ಲ ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ.

೧೬. ಸರ್ಕಾರದ ಮೀಸಲಾತಿ ಪರಿಣಾಮವಾಗಿ ೧೯೯೯ರಿಂದ ಈಚೆಗೆ ಹಿಂದುಳಿದ ದಲಿತ ಜನಾಂಗದ ಕೆಲವರು ಅಧ್ಯಕ್ಷರಾಗಿದ್ದಾರೆ. ಆದರೆ ಕೆಲವು ಪ್ರಭಾವಿಗಳು ಅಧ್ಯಕ್ಷರ ಪರೋಕ್ಷವಾಗಿ ಹೆಸರಲ್ಲಿ ತಾವೇ ಅಧಿಕಾರ ನಡೆಸುತ್ತಾ ಬಂದಿದ್ದಾರೆ.

೧೭. ಗ್ರಾಮಮಟ್ಟದ ರಾಜಕೀಯದಲ್ಲಿ 'ಜನರಲ್ ಅಭ್ಯರ್ಥಿ' ಎಂದರೆ ಅದು ಮೇಲ್ವರ್ಗದ ಜನರಿಗೆ ಮೀಸಲಾದ ಸ್ಥಾನ ಎಂಬ ವಾತಾವರಣವಿದೆ. ಸೊರಟೂರ ಪಂಚಾಯ್ತಿಯಲ್ಲಿ ಶೇ. ೭೦ರಷ್ಟಿರುವ ಹಿಂದುಳಿದ ವರ್ಗದವರಾರು ಜನರಲ್ ಅಭ್ಯರ್ಥಿಗಳಾಗಿ ಸ್ಪರ್ಧಿಸಿಲ್ಲ ಹಾಗೂ ಆಯ್ಕೆಯಾಗಿಲ್ಲ ಎಂಬುದು ಗ್ರಾಮ ಮಟ್ಟದಲ್ಲಿ ಹಿಂದುಳಿದ ಜನಾಂಗದ ಇನ್ನೊಂದು ಶೋಷಣೆಯಾಗಿದೆ. ಮೇಲ್ವರ್ಗದವರೆಂದರೆ ಸಂಪೂರ್ಣ ಒಂದು ಸಮುದಾಯವಲ್ಲ. ಕೇವಲ ಕೆಲವೇ ಜನರ ಕೈಯಲ್ಲಿ ಅಧಿಕಾರವಿರುವುದು ಕಂಡುಬರುತ್ತದೆ.

೧೮. ರ್ವಾಣ ಎಂದು ಕರೆಯಲ್ಪಡುವ ವಿಶೇಷ ಜನಪದ ಸಾಹಿತ್ಯದ ಕಲಾವಿದರು ಗ್ರಾಮದಲ್ಲಿದ್ದಾರೆ. ಗ್ರಾಮದ ವೀರಭದ್ರೇಶ್ವರ ಮತ್ತು ಕಲ್ಮೇಶ್ವರ ಯುವಕ ಮಂಡಳದ ಕಲಾವಿದರು ವಿವಿಧ ಕಲಾ ಪ್ರತಿಭೆಗಳನ್ನು ಹೊಂದಿದ್ದು, ರಾಜ್ಯ ಮಟ್ಟದವರೆಗೂ ಸ್ಪರ್ಧಿಸಿ ಪ್ರಶಸ್ತಿ ಪಡೆದಿದ್ದಾರೆ.

೧೯. ಮಹಿಳಾ ಜನಪದ ಸಾಹಿತ್ಯದ ಒಡಪುಗಳಲ್ಲಿ ಲಿಂಗ ತಾರತಮ್ಯವಿದೆ. ಅದು ಗಂಡು ಶ್ರೇಷ್ಠ ಹೆಣ್ಣು ಕನಿಷ್ಠ ಎಂಬ ಧೋರಣೆಯನ್ನು ಹೊಂದಿದೆ.

೨೦. ಗ್ರಾಮದಲ್ಲಿ ಶಿಷ್ಟಸಾಹಿತ್ಯ ಅಷ್ಟೇನು ಹುಲುಸಾಗಿ ಬೆಳೆದಿಲ್ಲ. ಶ್ರೀ. ಫ್ಹಿ.ಜಿ. ಮಠದ ಅವರ 'ನಿನ್ನೊಲುಮೆ' ಹಾಗೂ 'ಸಮಾಜಗನ್ನಡಿ' ಕವನಸಂಕಲನ ಬಿಡುಗಡೆಯಾಗಿವೆ. ಹಲವಾರು ಉದಯೋನ್ಮುಖ ಪುಟಾಣಿ ಕವಿ ಲೇಖಕರು ಬೆಳೆಯುತ್ತಿರುವುದು ಸಂತಸದ ವಿಷಯ.

೨೧. ಸಮಕಾಲೀನ ಸಂದರ್ಭದಲ್ಲಿ ಸೊರಟೂರ ಗ್ರಾಮದಲ್ಲಿ ಹಳೆಯ ಸಂಪ್ರದಾಯ, ಪರಂಪರೆ ಸಂಪೂರ್ಣ ಮಾಸಿಹೋಗಿಲ್ಲ; ಹೊಸದನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡಿಲ್ಲ. ಗ್ರಾಮದ ಜನ ನಿಧಾನವಾಗಿ ಆಧುನಿಕತೆಯೊಂದಿಗೆ ಬೆಸೆದುಕೊಳ್ಳುತ್ತಿದ್ದಾರೆ.

□□

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ವಕ್ತೃಗಳ ವಿವರ

೩. ಸಾಂಸ್ಕೃತಿಕ ಪದಕೋಶ

೪. ಗ್ರಾಮದ ವಿವಿಧ ಬಗೆಯ ಜನಪದ ಹಾಡುಗಳು

೫. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, ೧೯೯೯, **ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨. ಅರವಿಂದ ಮಾಲಗತ್ತಿ (ಪ್ರ.ಸಂ.), ೨೦೦೬, **ಕನ್ನಡ ವಿಷಯ ವಿಶ್ವಕೋಶ (ಜಾನಪದ),** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ಅರವಿಂದ ಮಾಲಗತ್ತಿ (ಪ್ರ.ಸಂ.), ೧೯೯೯, **ಜಾನಪದ ತತ್ತ್ವಗಳು,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಅರ್ಚಕ ಬಿ. ರಂಗಸ್ವಾಮಿ, ೨೦೦೧, **ಹುಟ್ಟಿದ ಹಳ್ಳಿ,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬.

೫. ಅರ್ಜುನ ಗೊಳಸಂಗಿ, **ಗೊಳಸಂಗಿ : ಗ್ರಾಮ ಸಾಂಸ್ಕೃತಿಕ ಅಧ್ಯಯನ,** ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ.

೬. ಇಮ್ರಾಪುರ ಎಸ್.ಜಿ. (ಸಂ.), ೧೯೯೩, **ಜಾನಪದ ಸಾಹಿತ್ಯ ದರ್ಶನ (ಭಾಗ-೧೮),** ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಕಲಬುರ್ಗಿ ಎಂ.ಎಂ. (ಸಂ.), ೧೯೯೪, **ಆಕಾಶ ಜಾನಪದ (ಜಾನಪದ ಸಾಹಿತ್ಯ ದರ್ಶನ),** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮. ಕಲಬುರ್ಗಿ ಎಂ.ಎಂ. (ಸಂ.), ೧೯೮೭, **ಜಾನಪದ ಸಾಹಿತ್ಯ ದರ್ಶನ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯. ಕುಂಡಂತಾಯ ಕೆ.ಎಲ್., ೨೦೦೩, **ನಂಬಿಕೆ ನಡವಳಿಕೆ,** ಸರಸ್ವತಿ ಪ್ರಕಾಶನ, ಕುಂಜೂರು.

೧೦. ಖಂಡೋಬ ಪಿ.ಕೆ., ೧೯೯೩, **ಜಾನಪದ ಮುನ್ನೋಟ,** ಸಂಗೀತ ಪಬ್ಲಿಕೇಶನ್ಸ್, ಗುಲ್ಬರ್ಗಾ.

೧೧. ಗದ್ದಗಿಮಠ ಬಿ.ಎಸ್., ೧೯೮೮, **ಗದ್ದಗಿಮಠರ ಬರಹಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೨. ಗುರುಪ್ರಸಾದ್ ಸಿ.ಟಿ., ೨೦೦೫, **ಏಳು ಊರಿನ ದೇವತೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೩. ಗುರುಮೂರ್ತಿ ಕೆ.ಜಿ., ೧೯೭೯, **ಜನಪದ ಸಮಾಜ ಮತ್ತು ಸಂಸ್ಕೃತಿ,** ಪ್ರಸಾರಾಂಗ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಗೋವಿಂದರಾಜು ಟಿ., **ಚನ್ನಾದೇವಿ ಅಗ್ರಹಾರ ಜಾನಪದೀಯ ಅಧ್ಯಯನ,** ಪುಸ್ತಕ ಜೇನು ಚೆನ್ನಾದೇವಿ ಅಗ್ರಹಾರ, ಕಾಡನೂರ ಅಂಚೆ, ದೊಡ್ಡಬಳ್ಳಾಪುರ.

೧೫. ಚಕ್ಕೆರೆ ಶಿವಶಂಕರ್, ೨೦೦೩, **ಜನಪದ ತಂತ್ರಜ್ಞಾನ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೬. ಚಿದಂಬರಯ್ಯ ಅಳಿಲಘಟ್ಟ, ೨೦೦೯, **ದೇವರು ಹಾಗೂ ಪ್ರಕೃತಿಯಲ್ಲಿ ದೇವತಾರಾಧನೆ,** ಹೇಮಂತ ಸಾಹಿತ್ಯ ಪ್ರಕಾಶನ, ರಾಜಾಜಿನಗರ, ಬೆಂಗಳೂರು.

೧೭. ಚಿದಾನಂದಮೂರ್ತಿ ಎಂ., ೧೯೭೭, **ಗ್ರಾಮೀಣ,** ಮಲ್ಲಿಗೆ ಗ್ರಂಥಮಾಲೆ-೩೧, ಬೆಂಗಳೂರು.

೧೮. ಚಿದಾನಂದಮೂರ್ತಿ ಎಂ., ೨೦೦೨, **ಜನ-ಜನಪದ-ಜಾನಪದ (ಸಂಪುಟ-೨),** ಸಪ್ನ ಬುಕ್‌ಹೌಸ್, ಬೆಂಗಳೂರು.

೧೯. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, **ನಮ್ಮ ಗ್ರಾಮಗಳು ಅಂದು–ಇಂದು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಚೆನ್ನಣ್ಣ ವಾಲಿಕಾರ, ೧೯೯೧, **ಒಂದು ಗ್ರಾಮದ ಜಾನಪದೀಯ,** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

೨೧. ಜಗನ್ನಾಥ ಹೆಬ್ಬಾಳೆ, ೧೯೯೫, **ವೀರಭದ್ರ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೨. ದಾಸೇಗೌಡ ಜಿ.ವಿ., ೧೯೭೩, **ನಮ್ಮ ಜನಪದ ನಂಬಿಕೆಗಳು,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೩. ನಾಗಲೋಟಿಮಠ ಸ.ಜ., ೨೦೦೧, **ಉತ್ತರ ಕರ್ನಾಟಕದಲ್ಲಿ ಪ್ರಾಣಿ ಬಲಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨೪. ನಾಯಕ ಹಾ.ಮಾ., ೧೯೯೭, **ಕರ್ನಾಟಕ ವಿಷಯ ವಿಶ್ವಕೋಶ,** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೫. ಪುರುಷೋತ್ತಮ ಬಿಳಿಮಲೆ, ೧೯೯೦, **ಕರಾವಳಿ ಜಾನಪದ,** ಮಂಗಳಗಂಗೋತ್ರಿ, ದಕ್ಷಿಣ ಕನ್ನಡ ಜಿಲ್ಲೆ.

೨೬. ಪುರುಷೋತ್ತಮ ಬಿಳಿಮಲೆ, ೧೯೯೭, **ಕೂಡುಕಟ್ಟು,** ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ.

೨೭. ಬಸವರಾಜ ಸಬರದ (ಪ್ರ.ಸಂ.), ಹೆಚ್.ಟಿ. ಪೋತೆ (ಸಂ.), ೨೦೦೮, **ಜಾನಪದ ಆಯಾಮಗಳು,** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೪೩. ಲಕ್ಕಪ್ಪಗೌಡ ಎಚ್.ಜೆ. (ಸಂ.), ೧೯೯೮, **ಸುವರ್ಣ ಜಾನಪದ,** ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೪೪. ಎಚ್.ಜೆ. ಲಕ್ಕಪ್ಪಗೌಡ, **ಕರ್ನಾಟಕದ ಜಾತ್ರೆಗಳು,** ಸ್ನಾತಕೋತ್ತರ ಕೇಂದ್ರ, ಬಿ.ಆರ್. ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾನಿಲಯ, ಹಂಪಿ.

೪೫. ಶಾಲಿನಿ ರಘುನಾಥ (ಪ್ರ.ಸಂ.), ೨೦೦೯, **ಜಾನಪದ ಸಾಹಿತ್ಯ ದರ್ಶನ-೨೯ (ಜಾನಪದ ಸಂಶೋಧನೆ),** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೬. ಶ್ರೀಮನ್ನಿರಂಜನ ಪ್ರಣವಸ್ವರೂಪ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಶಿವಯೋಗಿಗಳು, **ಮೃಡಗಿರಿಯ ಮಹಾದಾನಿ,** ಶ್ರೀ ಜಗದ್ಗುರು ಅನ್ನದಾನೀಶ್ವರ ಧರ್ಮ ಸಂಸ್ಕೃತಿ ಪ್ರಚಾರ ಮಂಡಳ, ಮುಂಡರಗಿ.

೪೭. ಶ್ರೀರಾಮ. ಇಟ್ಟಣ್ಣನವರ, ೧೯೯೫, **ಹಲಗಲಿ ಗ್ರಾಮ ಜಾನಪದ,** ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ.

೪೮. ಸರಜೂ ಕಾಟ್ಕರ್(ಅನುವಾದ), (ಮೂಲ) ಡಾ. ರಾ.ಚಿಂ. ಢೇರೆಯವರ ಶಿಖರಸಿಂಗಣಾ ಪುರಚಾ ಶಂಭು ಮಹಾದೇವ, ೨೦೦೬, **ಶಿವಾಜಿಯ ಮೂಲ ಕನ್ನಡನೆಲ,** ಲೋಹಿಯಾ ಪ್ರಕಾಶನ, ಬಳ್ಳಾರಿ.

೪೯. ಸಿದ್ಧಲಿಂಗಯ್ಯ, ೧೯೯೭, **ಗ್ರಾಮದೇವತೆ,** ಮಾಲತಿ ಪ್ರಕಾಶನ, ಬೆಂಗಳೂರು.

೫೦. ಸುಂಕಾಪುರ ಎಂ.ಎಸ್. (ಸಂ.), ೧೯೭೪, **ಜೀವನ ಜೋಕಾಲಿ - ಹೋಳಿ ಹಾಡುಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೧. ಸುಬ್ಬಣ್ಣ ರೈ, ೧೯೯೮, **ಗಾಳೆಮ್ಮ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫೨. ಸೋಮಶೇಖರ ಇಮ್ರಾಪುರ (ಪ್ರ.ಸಂ.), ೨೦೦೧, **ಜಾನಪದ ಸಾಹಿತ್ಯ ದರ್ಶನ (ಪರಿಸರ ಮತ್ತು ಜನಪದ ಸಂಸ್ಕೃತಿ),** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೩. ಹಿರೇಮಠ ಎಸ್.ಎಸ್., ೧೯೯೩, **ಜಾತ್ರೆಗಳು,** ಸಮತಾ ಪ್ರಕಾಶನ, ಹೊಸಪೇಟೆ.

೫೪. ಹಿರೇಮಠ ಎಸ್.ಎಸ್., ೧೯೯೨, **ಹಬ್ಬಗಳು,** ಸಮತಾ ಪ್ರಕಾಶನ, ಹರಪನಹಳ್ಳಿ.

ಎಂ.ಫಿಲ್. ಮತ್ತು ಪಿಎಚ್.ಡಿ. ಮಹಾಪ್ರಬಂಧಗಳು

೧. **ಕಂದಿಕೆರೆ ಗ್ರಾಮ ಜಾನಪದ ಅಧ್ಯಯನ,** ಪಿಎಚ್.ಡಿ. ಪ್ರಬಂಧ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಗುರುಪ್ರಸಾದ್ ಎಚ್.ಎಸ್., ೨೦೦೭, **ವಲಸಿಗರ ನೆಲೆ ಮರಿಯಮ್ಮನ ಹಳ್ಳಿ ಸಂಕಥನ,** ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩. ರಮೇಶ ಕೆ., **ಉಜ್ಜಿನಿ ಗ್ರಾಮ ಅಧ್ಯಯನ,** ೨೦೦೨, ಎಂ.ಫಿಲ್ ಪ್ರಬಂಧ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಶಾಂತವ್ವ ನಾಗಪ್ಪ ಲಕ್ಷ್ಮೇಶ್ವರ, ೨೦೧೩, **ಯಮನೂರು ಗ್ರಾಮ: ಸಾಂಸ್ಕೃತಿಕ ಸಂಕಥನ,** ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ನಿಯತಕಾಲಿಕೆಗಳು

೧. ರಮೇಶ್ ಸ.ಚಿ. (ಸಂ.), ೨೦೦೪, **ಜಾನಪದ ಕರ್ನಾಟಕ (ಸಂಪುಟ ೪, ಸಂಚಿಕೆ ೧),** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨. ಡಾ. ಸ.ಚಿ. ರಮೇಶ್ (ಸಂ), ೨೦೦೫, **ಕರ್ನಾಟಕ ಜಾನಪದ ಸಂಪುಟ–೪, ಸಂಚಿಕೆ–೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ರಮೇಶ್ ಸ.ಚಿ. (ಸಂ.), ೨೦೧೦, **ಜಾನಪದ ಕರ್ನಾಟಕ, ಸಂಪುಟ ೯, ಸಂಚಿಕೆ ೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೪. ಹೆಬ್ಬಾಲೆ ಕೆ. ನಾಗೇಶ್ (ಸಂ.), ೨೦೦೬, **ಜಾನಪದ ಕರ್ನಾಟಕ, ಸಂಪುಟ-೫, ಸಂಚಿಕೆ-೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫. ಹೆಬ್ಬಾಲೆ ಕೆ. ನಾಗೇಶ್ (ಸಂ.), ೨೦೦೬, **ಜಾನಪದ ಕರ್ನಾಟಕ, ಸಂಪುಟ-೫, ಸಂಚಿಕೆ-೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ದಿನಪತ್ರಿಕೆಗಳು

೧. ಪ್ರಜಾವಾಣಿ ದಿನಪತ್ರಿಕೆ

೨. ವಿಜಯ ಕರ್ನಾಟಕ ದಿನಪತ್ರಿಕೆ

೩. ಕನ್ನಡ ಪ್ರಭ ದಿನಪತ್ರಿಕೆ

೪. ಕರ್ಮವೀರ ವಾರಪತ್ರಿಕೆ

೫. ಸುಧಾ ವಾರಪತ್ರಿಕೆ

೬. ತರಂಗ ವಾರಪತ್ರಿಕೆ

□□

೨. ವಕ್ತೃಗಳ ವಿವರ

ಹೆಸರು	ವಯಸ್ಸು	ಸಮುದಾಯ	ವೃತ್ತಿ	ಷರಾ
ಶ್ರೀ ಶಂಕ್ರಪ್ಪ ಮಲ್ಲಾರಿ	೧೦೨	ಕ್ಷತ್ರಿಯ	-----	ಶತಾಯುಷಿ
ಶ್ರೀ ಡಾ. ಬಿ.ಆರ್. ಇನಾಮದಾರ	೮೦	ಬ್ರಾಹ್ಮಣ	ವೈದ್ಯರು	ರಾಜ್ಯಪ್ರಶಸ್ತಿ ವಿಜೇತರು
ಶ್ರೀ ಹನಮಂತಪ್ಪ. ಶಿ. ಜಮಾಣಿ	೭೮	ಕುರುಬ	ವಯೋವೃದ್ಧರು	ಗ್ರಾಮದ ಅನುಭವಿ ಹಿರಿಯರು
ಶ್ರೀ ಅಂದಾನಯ್ಯ. ಈ. ಇಚ್ಚಂಗಿಮಠ	೮೬	ಲಿಂಗಾಯತ	ವಯೋವೃದ್ಧರು	ಗ್ರಾಮದ ಹಿರಿಯರು
ಶ್ರೀ ವೀರಯ್ಯ. ಜಿ. ಮಠಪತಿ	೭೫	ಲಿಂಗಾಯತ	ನಿವೃತ್ತ ಶಿಕ್ಷಕರು	ಕವಿಗಳು (ಬಸವಕಂದ)
ಶ್ರೀ ರಾಮಣ್ಣ. ಎಸ್. ಹೋಳಗಿ	೭೫	ಜೈನ	ಮಾಜಿ ಪಂಚಾಯತಿ ಚೇರಮನ್	ಹಿರಿಯರು ರಾಜಕಾರಣಿಗಳು
ಶ್ರೀ ನಿಂಗಪ್ಪ. ಬಡಿಗೇರ	೮೬	ಪಂಚಾಳ	ಪೂಜಾರಿಗಳು	ಆಧ್ಯಾತ್ಮಿಕ ಚಿಂತಕರು
ಶ್ರೀ ಉಡಚಮ್ಮ. ದು. ಮಾದಣ್ಣವರ	೮೫	ವಾಲ್ಮೀಕಿ	ಪೂಜಾರಿ	ಅನುಭವಿ ಮಹಿಳೆ
ಶ್ರೀ ಫಕ್ರುಸಾಬ. ಹು. ಕುಸಣ್ಣವರ	೬೦	ಮುಸ್ಲಿಂ	ಕೃಷಿಕರು	ಹಿರಿಯರು,
ಶ್ರೀ ಕರಿಯಪ್ಪ. ಕಳಂಗನವರ	೬೦	ಕುರುಬ	ಕೃಷಿಕರು	ಡ್ವಾಣ ಮತ್ತು ಡೊಳ್ಳು ಕಲಾವಿದರು
ಶ್ರೀ ನಿಂಗಪ್ಪ. ಬಿ. ಲಕ್ಕುಂಡಿ	೪೦	ಕುರುಬ	ಕೃಷಿ ಕಾರ್ಮಿಕ	ಡ್ವಾಣ ಮತ್ತು ಡೊಳ್ಳು ಕಲಾವಿದರು
ಶ್ರೀ ಶಿವಪ್ಪ. ಗುಡಿ	೬೦	ಕುರುಬ	ಕೃಷಿ ಕಾರ್ಮಿಕ	ಡ್ವಾಣ ಮತ್ತು ಡೊಳ್ಳು ಕಲಾವಿದರು
ಶ್ರೀ ಸಿದ್ದಪ್ಪ. ಹು. ಜಂಗವಾಡ	೫೦	ಕುರುಬ	ಕೃಷಿ ಕಾರ್ಮಿಕ	ಡ್ವಾಣ ಮತ್ತು ಡೊಳ್ಳು ಕಲಾವಿದರು
ಶ್ರೀ ರೇವಣೆಪ್ಪ. ಗುಡಿ	೪೦	ಕುರುಬ	ಕೃಷಿ ಕಾರ್ಮಿಕ	ಡ್ವಾಣ ಮತ್ತು ಡೊಳ್ಳು ಕಲಾವಿದರು
ಶ್ರೀ ಪರಶುರಾಮ. ಬೈ. ಹೂಗಾರ	೩೫	ಲಿಂಗಾಯತ	ಕೃಷಿ	ಜಿಲ್ಲಾ ಯುವ ಪ್ರಶಸ್ತಿ ವಿಜೇತರು

ಶ್ರೀ ಬಸವರಾಜ. ಹಡಪದ	೩೫	ಲಿಂಗಾಯತ	ಕೃಷಿಕ	ಕಲಾವಿದರು
ಶ್ರೀ ನಾಗಪ್ಪ. ಹೊ. ಕಣವಿ	೩೫	ಕುರುಬ	ಕೃಷಿಕ	ಕಲಾವಿದರು
ಶ್ರೀ ಉಲ್ಲಾಸರಾವ. ಆರ್. ಕುಲಕರ್ಣಿ	೬೦	ಬ್ರಾಹ್ಮಣ	ಕೃಷಿಕ	ಮಾಜಿ.ಟಿ.ಡಿ.ಬಿ. ಸದಸ್ಯರು
ಶ್ರೀ ರಾಮಣ್ಣ ಶಂ. ಕಮ್ಮಾರ	೫೦	ಪಂಚಾಳ	ಕೃಷಿಕ	ಮಾಜಿ ಗ್ರಾ.ಪಂ. ಸದಸ್ಯರು
ಶ್ರೀ. ರಾಮಣ್ಣಯ ಶಲಿಯಪ್ಪನವರ	೫೦	ಕುರುಬ	ಕೃಷಿಕ	ಹಾಲಿ ಪಂ. ಸದಸ್ಯರು
ಶ್ರೀ ಮಲಕಾಜಪ್ಪ ಗಿಡಕೆಂಚಣ್ಣನವರ	೫೦	ಲಿಂಗಾಯತ	ಕೃಷಿಕ	ಹಾಲಿ ತಾ. ಪಂ. ಸದಸ್ಯರು
ಶ್ರೀ ಮಲ್ಲಪ್ಪ ಪ. ಕಲಗುಡಿ	೪೫	ಲಿಂಗಾಯತ	ಕೃಷಿಕ	ಮಾಜಿ ಪಂ. ಅಧ್ಯಕ್ಷರು
ಶ್ರೀ ನರಸಪ್ಪ ಮಲ್ಲಾರಿ	೬೦	ಕ್ಷತ್ರೀಯ	ಕೃಷಿಕ	ಆಧ್ಯಾತ್ಮಿಕ ಚಿಂತಕರು
ಶ್ರೀ ಫಕ್ಕೀರಪ್ಪ. ಬಂಕಾಪೂರ	೭೦	ಲಿಂಗವಂತ	ವಯೋವೃದ್ಧರು	ಹಿರಿಯರು
ಶ್ರೀ ಯಲ್ಲಪ್ಪ. ಓಂಕಾರಿ	೭೦	ಕ್ಷತ್ರೀಯ	ವಯೋವೃದ್ಧರು	ಹಿರಿಯರು
ಶ್ರೀ ಈರಣ್ಣ. ಚನ್ನವೀರಶೆಟ್ಟರ	೫೫	ಲಿಂಗಾಯತ	ಕೃಷಿಕ	ಹಿರಿಯರು
ಶ್ರೀ ಶೇಷಪ್ಪ. ಹುಲಿಕಟ್ಟಿ	೫೮	ವಾಲ್ಮೀಕಿ	ಕೃಷಿಕರು	ಹಿರಿಯರು
ಶ್ರೀಮತಿ ದೇವಕ್ಕ ಯಲಿಗಾರ	೫೦	ವಾಲ್ಮೀಕಿ	ಮನೆ ಕೆಲಸ	ಗ್ರಾ.ಪಂ. ಉಪಾಧ್ಯಕ್ಷರು
ಶ್ರೀಮತಿ ನೀಲವ್ವ ಸಿ. ಚಪಾಟಿ	೩೦	ಕುರುಬ	ಮನೆ ಕೆಲಸ	ಗ್ರಾ.ಪಂ. ಸದಸ್ಯರು
ಶ್ರೀಮತಿ ಪಾರವ್ವ ಗುಡಿ	೪೦	ಕುರುಬ	ಮನೆ ಕೆಲಸ	
ಶ್ರೀ ಪರಸಪ್ಪ. ಹ. ತೋಪೀನ	೩೫	ಕುರುಬ	ಕಾರ್ಮಿಕ	ಗ್ರಾ. ಪಂ. ಸಿಪಾಯಿ
ಶ್ರೀ ಪರಶುರಾಮ. ಸಣ್ಣತಂಗಿಯವರ	೩೦	ಮಾದರ	ಗುಮಾಸ್ತ	ಗ್ರಾ. ಪಂ. ಗುಮಾಸ್ತ
ಶ್ರೀ ವಿಜಯಕುಮಾರ. ವ್ಹಿ. ಹುಲಿಕಟ್ಟಿ	೩೦	ವಾಲ್ಮೀಕಿ	ಎಸ್.ಎಚ್.ಜಿ ಸಂಘಟಿಕರು	ಎಸ್.ಎಚ್.ಜಿ.ಗಳ ರಚನೆ ಮತ್ತು ಅಭಿವೃದ್ಧಿಕಾರರು
ಶ್ರೀ ತಿರಕಪ್ಪ. ಹಳ್ಳಿ	೩೦	ಲಿಂಗಾಯತ	ಕೃಷಿಕ	ಕಲಾವಿದರು
ಶ್ರೀ ಮಲಕಾಜಪ್ಪ. ಗಿಡಕೆಂಚಣ್ಣವರ	೫೦	ಕ್ಷತ್ರಿಯ	ಕೃಷಿಕ	ಕಲಾವಿದರು
ಶ್ರೀ ಜಯಪಾಲಸಿಂಗ್ ಜಯರಾಮನವರ	೨೮	----	ಗ್ರಾಮ ಲೆಕ್ಕಾಧಿಕಾರಿಗಳು	----
ಶ್ರೀ ವ್ಹಿ.ಬಿ. ಪೋಲಿಸ್ ಪಾಟೀಲ	೪೫	----	ತಾ.ಸಾ.ಪಂ. ಜಂಟಿ ಕಾರ್ಯದರ್ಶಿಗಳು	----
ಶ್ರೀ. ಸಿ.ಎಸ್. ವಸ್ತ್ರದ	೪೮	----	ಪ್ರಾಚಾರ್ಯರು	----
ಶ್ರೀಮತಿ. ಎ.ಕೆ. ಪಾಟೀಲ್	೫೦	----	ಸಹಾಯಕ ಶಿಕ್ಷಣಾಧಿಕಾರಿಗಳು	----

ಶ್ರೀ ಎಸ್.ಡಿ. ಕಡ್ಲಿಕೊಪ್ಪ	೫೭	----	ಶಿಕ್ಷಕರು	----
ಶ್ರೀ ಜಿ.ಪಿ. ಡೊಂಬರ	೩೫	----	ಪ್ರಧಾನಗುರುಗಳು	----
ಶ್ರೀ ಸಿ.ಕೆ. ಭರಮಗೌಡ್ರ	೫೬	----	ಪ್ರಧಾನಗುರುಗಳು	----
ಶ್ರೀ ಬಿ.ಎಂ. ಹಿರೇಮಠ	೪೯	----	ಪ್ರಧಾನಗುರುಗಳು	----
ಶ್ರೀ ಎಮ್.ವಾಯ್. ನವಲೆ	၂೯	----	ಪ್ರಧಾನಗುರುಗಳು	----
ಶ್ರೀ ಅಶೋಕ. ಸಿ. ಚನ್ನವೀರಶೆಟ್ಟರ	೩೨	----	ಗ್ರಂಥಪಾಲಕರು	----
ಶ್ರೀ ಶಿವಮೂರ್ತಿ ಕರಿಗೌಡ್ರ	೩೦	----	ಪತ್ರಕರ್ತರು	----
ಶ್ರೀ ನಾರಾಯಣರಾವ್ ಕುಲಕರ್ಣಿ	೩೮	----	ರಾತ್ರಿಶಾಲೆ ಬೋಧಕರು	----
ಶ್ರೀ ವಾಯ.ಪಿ. ಅಡ್ನೂರ	೩೨	----	ರಾತ್ರಿಶಾಲೆ ಬೋಧಕರು	----
ಶ್ರೀ ಎಸ್. ಆರ್. ಹಂಪಿಹೊಳಿ	೩೨	----	ರಾತ್ರಿಶಾಲೆ ಬೋಧಕರು	----
ಶ್ರೀ ರಹೆಮಾನಸಾಬ. ಆರ್. ಬಡಿಗೇರ	೩೦	ಮುಸ್ಲಿಂ	ಕೃಷಿಕ	----
ಶ್ರೀ ಪ್ರಕಾಶ. ಲ. ಮುಳಗುಂದ	೨೫	ಕ್ಷತ್ರಿಯ	ಕೃಷಿಕ	----
ಶ್ರೀ ಚಂದ್ರಶೇಖರಪ್ಪ. ಬೋಳನವರ	೩೮	ಲಿಂಗವಂತ	ವಕೀಲರು	----
ಶ್ರೀ ಫಕ್ಕೀರಪ್ಪ. ಹರಿಜನ	೨೪	ಮಾದರ	ವಿದ್ಯಾರ್ಥಿ	----
ಶ್ರೀ ಮೌಲಾಸಾಬ. ದಾ. ಬಾಬುಖಾನವರ	೩೦	ಮುಸ್ಲಿಂ	ವ್ಯಾಪಾರ	----
ಶ್ರೀ ಬರಮಪ್ಪ. ಸಿ. ಗುಡಿ	೨೪	ಕುರುಬ	ವಿದ್ಯಾರ್ಥಿ	----
ಶ್ರೀ ಸಿದ್ದಲಿಂಗಪ್ಪ. ಸುಣಗಾರ	೨೪	ಅಂಬಿಗ	ವಿದ್ಯಾರ್ಥಿ	----
ಶ್ರೀ ಶರಣಪ್ಪ. ಕಲಾಲ	೨೪	ಕಲಾಲ	ಶಿಕ್ಷಕರು	----
ಶ್ರೀ ಮಹೇಶ ಸಣ್ಣತಂಗಿಯವರ	೩೦	ಹರಿಜನ	ಸಮಾಜಸೇವೆ	----
ಶ್ರೀ ಮರಿಯಪ್ಪ ಕೊಂಡಿ	೩೫	ಹರಿಜನ	ಕೃಷಿ	----
ಶ್ರೀ ದೇವೇಂದ್ರಪ್ಪ ಭಜಂತ್ರಿ	೫೦	ಕೊರವರ	ಮಾಜಿ ಗ್ರಾ.ಪಂ.ಅಧ್ಯಕ್ಷರು	----

□□

೩. ಸಾಂಸ್ಕೃತಿಕ ಪದಕೋಶ

ಅಡವಿ	–	ಗುಡ್ಡ (ಕೃಷಿಗೆ ಯೋಗ್ಯವಲ್ಲದ ಭೂಮಿ)
ಬೆಂಚಿ	–	ಬೆಣಚು ಕಲ್ಲುಗಳಿಂದ ಕೂಡಿದ ಭೂಮಿ
ಮಡ್ಡಿ	–	ಚಿಕ್ಕ ಗುಡ್ಡ (ಗುಡ್ಡದ ಒಂದು ಭಾಗ)
ಸರವು	–	ಹಳ್ಳ, ನೀರು ಹಾದುಹೋಗುವ ದಾರಿ
ಮಸಾರಿ	–	ಕೆಂಪು ಮಣ್ಣಿನ ಭೂಮಿ
ಎರಿ	–	ಕಪ್ಪು ಮಣ್ಣಿನ ಭೂಮಿ
ಉಸುಗು	–	ಮರಳು, ಮರಳುರೂಪದ ಮಣ್ಣು
ಕ್ವಾಟಿ	–	ಕೋಟೆ
ಪ್ಯಾಟಿ	–	ಪೇಟೆ
ಪರಸಿ	–	ಕಲ್ಲಿನ ಹೊದಿಕೆ
ದಂದಕ್ಕಿ	–	ದನ ಕಟ್ಟುವ ಸ್ಥಳ
ಚುಲೋ	–	ಒಳ್ಳೆಯ
ಅಕ್ಕೈತಿ	–	ಆಗುತ್ತದೆ
ಇಕ	–	ಯಾಕೆ
ಹೊಕ್ಕತಿ	–	ಹೋಗುತ್ತದೆ
ತೆವರು	–	ದಿಬ್ಬ, ದಿಣ್ಣೆ
ಕೋರು	–	ಸಮಪಾಲು
ದೈವ	–	ದೇವರು, ಒಂದೇ ಸಮುದಾಯದ ಜನರ ಗುಂಪು
ಗರ್ ಗುಡಿ	–	ಗರ್ಭಗುಡಿ
ಕವಣೆ	–	ಗುರಿಯಿಟ್ಟು ಕಲ್ಲನ್ನು ಹೊಡೆಯಲು ಬಳಸುವ ಸಾಧನ

ಹಚ್ಚಡ	–	ಸೀರೆ, ಉಡುಗೊರೆ
ನಸಲು	–	ದೃಷ್ಟಿ
ಕಡುಬಿನ ಕಾಳಗ	–	ಬೆಲ್ಲವನ್ನು ಸೂರಿ ಮಾಡುವುದು
ದಫನ ಮಾಡುವುದು	–	ಮಣ್ಣಿನಲ್ಲಿ ಹೂಳುವುದು
ಕಡೆಮಸೂತಿ	–	ಕೊನೆಯ ಮಸೀದಿ
ಹುಸಿ	–	ಸುಳ್ಳು
ಜಾಗರಣೆ	–	ದೇವರ ಸ್ಮರಣೆ
ಬೆರಕೊಂತೈತಿ	–	ಕೂಡಿಕೊಳ್ಳುತ್ತದೆ
ಸರಕೊಂತೈತಿ	–	ದೂರವಾಗುತ್ತದೆ
ಮಕೊಂತೈತಿ	–	ಮಲಗಿಕೊಳ್ಳುತ್ತದೆ
ನಸೀಬ	–	ಅದೃಷ್ಟ
ಹರಿಮರಿ	–	ಆಡು ಅಥವಾ ಕುರಿಮರಿಗಳನ್ನು ಕಡಿಯುವುದು
ಚರಗ	–	ಭೂತಾಯಿಗೆ ನೈವೇದ್ಯ ಸೂರಿ ಮಾಡುವುದು
ಹುಲುಸು	–	ಹೆಚ್ಚಾಗುವುದು, ಒಳಿತಾಗುವುದು
ಕೆಲಿಸ್ಯಾರು	–	ಕ್ಷೌರಿಕರು
ಕಂಕಣ	–	ಶುಭ ಸಮಾರಂಭದಲ್ಲಿ ವೀಳ್ಯದ ಎಲೆಯನ್ನು ಸುತ್ತಿ ದಾರದಿಂದ ಕೈಗೆ ಕಟ್ಟಿಕೊಳ್ಳುವುದು
ಉಣ್ಣೆ ಕಂಕಣ	–	ಕುರಿಕೂದಲಿನಿಂದ ಮಾಡಿದ ಕಂಕಣ
ದೇವದಾಸಿ	–	ದೇವರ ಸೇವಕಿ
ಕೋಲಕಾರ	–	ಒಂದು ಸಮುದಾಯದ ಜನರನ್ನು ಆಹ್ವಾನಿಸಲು ನೇಮಿಸಿದ ವ್ಯಕ್ತಿ
ಎಡಿಕುಂಟೆ	–	ಬೆಳೆಯ ನಡುವೆ ಇರುವ ಕಳೆ ತೆಗೆಯಲು ಬಳಸುವ ಕೃಷಿ ಸಲಕರಣೆ
ರಂಟೆ ಕುಂಟೆ	–	ಭೂಮಿ ಉಳುಮೆ ಮಾಡಲು ಬಳಸುವ ಕೃಷಿ ಸಲಕರಣೆ
ಕುಡಾ, ತಾಳು	–	ಭೂಮಿ ಉಳುವ ಕುಂಟೆಗೆ ಇರುವ ಕಬ್ಬಿಣದ ಸಲಕರಣೆ

ಕುರ್ಜಿಗೆ	–	ಬೆಳೆಯಲ್ಲಿ ಇರುವ ಹುಲ್ಲು ತೆಗೆಯಲು ರೈತರು ಬಳಸುವ ಕೃಷಿ ಸಲಕರಣೆ
ಆಯಾ ಪದ್ಧತಿ	–	ರೈತರು ಕೃಷಿ ಸಲಕರಣೆ ಮಾಡಿಕೊಟ್ಟವರಿಗೆ ಪ್ರತಿಯಾಗಿ ಧಾನ್ಯಗಳನ್ನು ಕೊಡುವ ಪದ್ಧತಿ.
ಜತ್ತಿಗೆ	–	ಎತ್ತುಗಳು ಚಕ್ಕಡಿ ಓಡಿಸುವಾಗ ಅವುಗಳ ಕೊರಳಿಗೆ ಹಾಗೂ ಚಕ್ಕಡಿಗೆ ಸೇರಿಸಲು ಕಟ್ಟುವ ಸಲಕರಣೆ.
ಕಳೆಬಾರ	–	ಉಳುಮೆ ಮಾಡುವಾಗ ಕೃಷಿ ಸಲಕರಣೆಗೆ ಹಾಗೂ ಎತ್ತಿನ ಕೊರಳಿಗೆ ಕಟ್ಟುವ ಸಾಧನ
ಮಿಣಿ	–	ನೇಗಿಲು ಹೂಡಲು ಕಟ್ಟುವ ಹಗ್ಗ
ಹರಿವೆ	–	ಮನೆಯಲ್ಲಿ ನೀರನ್ನು ಸಂಗ್ರಹಿಸಲು ಬಳಸುವ ಮಣ್ಣಿನ ಸಾಧನ
ಬಿಂದಿಗೆ	–	ನೀರು ತರಲು ಬಳಸಲು ಮಣ್ಣಿನ ಸಾಧನ
ತತ್ರಾಣಿ	–	ಹೊಲಕ್ಕೆ ನೀರು ತೆಗೆದುಕೊಂಡು ಹೋಗಲು ಬಳಸುವ ಮಣ್ಣಿನ ಸಾಧನ
ಐರಾಣಿ	–	ಮದುವೆಯಲ್ಲಿ ಪೂಜೆಗಾಗಿ ತರುವ ಮಣ್ಣಿನ ಮಡಿಕೆ.
ದಂಡಿ	–	ಶುಭಕಾರ್ಯದಲ್ಲಿ ಹೆಣ್ಣು ಮಕ್ಕಳಿಗೆ ಕಟ್ಟುವ ಹೂವಿನಿಂದ ಮಾಡಿದ ಸಾಧನ.
ಗೂಳಿ ಬಿಡುವುದು	–	ಗ್ರಾಮದ ಹಸುಗಳ ವಂಶಾಭಿವೃದ್ಧಿಗಾಗಿ ಬೀಜದ ಹೋರಿ ಬಿಡುವ ಪದ್ಧತಿ
ಬ್ಯಾಟಿ	–	ದೇವರ ಹೆಸರಿನಲ್ಲಿ ಪ್ರಾಣಿ ಬಲಿ ಕೊಡುವದು
ಹೊನ್ನುಗ್ಗಿ	–	ಕಾರಹುಣ್ಣಿಮೆ ಮುನ್ನಾ ದಿನ ಎತ್ತುಗಳ ಪೂಜೆಯ ವಿಶೇಷ ಆಚರಣೆ.
ಕಿಚಡಿ	–	ಜೋಳದಿಂದ ತಯಾರಿಸಿದ ಆಹಾರ
ಹುಗ್ಗಿ	–	ಗೋಧಿ ಪದಾರ್ಥ ಹಾಗೂ ಬೆಲ್ಲ ಉಪಯೋಗಿಸಿ ಮಾಡಿದ ಆಹಾರ.
ಕರಿಕಂಬಳಿ	–	ಕಪ್ಪನೆಯ ಕುರಿಗಳ ಕೂದಲಿನಿಂದ ಮಾಡಿದ ಹೊದಿಕೆ.
ಕರಿ ಹರಿಯುವುದು	–	ಕಾರಹುಣ್ಣಿಮೆಯಲ್ಲಿ ಎತ್ತುಗಳ ಓಟದ ಸ್ಪರ್ಧೆ ನಡೆಸುವುದು.

ಗೊಟ್ಟ	–	ದನಗಳಿಗೆ ಬಾಯಲ್ಲಿ ಲಘು ಆಹಾರ ಹಾಕುವ ಬಿದಿರಿನ ಸಾಧನ
ಕರಿ	–	ಎತ್ತುಗಳ ಓಟದ ಸ್ಪರ್ಧೆಯಲ್ಲಿ ವಿಜೇತ ಎತ್ತಿಗೆ ಕೊಡುವ ಬೇವಿನ ತಪ್ಪಲ ಗುಚ್ಛ
ರೊಟ್ಟಿ ಪಂಚಮಿ	–	ನಾಗರಪಂಚಮಿಯ ಮೊದಲ ದಿನ ವಿವಿಧ ಬಗೆಯ ರೊಟ್ಟಿ ಮಾಡುವ ಆಚರಣೆ.
ಉಸುಳಿ	–	ದ್ವಿದಳ ಧಾನ್ಯದ ಪಲ್ಯ
ಕೆರೆಕಟ್ಟಂಬಲಿ	–	ನಾಗರ ಪಂಚಮಿಯ ನಾಲ್ಕನೇ ದಿನದ ಆಚರಣೆ ಅಂಬಲಿ ಊಟ ಮಾಡುವುದು.
ವರ್ಷ ತೊಡಕು ಪರಿಪಾಲನೆ	–	ನಾಗರ ಪಂಚಮಿಯ ಐದನೆಯ ದಿನದ ಆಚರಣೆ. ಆ ದಿನ ಜಗಳವಾಡಬಾರದು ಎಂಬ ನಿಯಮದ ಇರುತ್ತದೆ.
ಉಟಿಗೆ	–	ಬೇವಿನ ತಪ್ಪಲಲ್ಲಿ ಮೈ ಮುಚ್ಚಿಕೊಂಡು ದೇವಿಗೆ ಪ್ರದಕ್ಷಿಣೆ ಹಾಕುವುದು.
ಬುಟ್ಟಿ ತುಂಬುವುದು	–	ವಿವಿಧ ಆಹಾರ ಪದಾರ್ಥಗಳನ್ನು ಬುಟ್ಟಿಯಲ್ಲಿ ಹೊಂದಿಸುವುದು
ಅಲೆಕುಣಿ	–	ಅಗ್ನಿಕುಂಡ
ಸಕ್ಕರೆ ಓದಿಸುವುದು	–	ಸಕ್ಕರೆ ನೈವೇದ್ಯ ಕೊಡುವುದು
ಚೆಂಗೇವು	–	ಮೊಹರಂ ಹಬ್ಬದಲ್ಲಿ ಮಾಡುವ ವಿಶೇಷ ಆಹಾರ ಪದಾರ್ಥ
ಅಂಗಾರ	–	ಹಣೆಗೆ ಹಚ್ಚಿಕೊಳ್ಳಲು ದೇವರ ಗುಡಿಯಲ್ಲಿ ಇಟ್ಟಿರುವ ಕಟ್ಟಿಗೆ ಮತ್ತು ಕುಳ್ಳಿನ ಬೂದಿ
ಎಬ್ಬಿಸುವ ಕಾರ್ಯ	–	ಋತುಮತಿಯಾದಾಗ ಮಾಡುವ ಕಾರ್ಯಕ್ರಮ
ದೈದೂಟ	–	ಮದುವೆಯಲ್ಲಿ ಕುಲಬಾಂಧವರಿಗೆ ಊಟಕ್ಕೆ ಕೊಡುವುದು
ಹಾದಿಬುತ್ತಿ	–	ಸಾಯುತ್ತಿರುವ ವ್ಯಕ್ತಿಗೆ ಸಾವಿನಪೂರ್ವದಲ್ಲಿ ಕೊಟ್ಟ ಕೊನೆಯ ಆಹಾರ

□□

೪. ಗ್ರಾಮದ ವಿವಿಧ ಬಗೆಯ ಜನಪದ ಹಾಡುಗಳು

ಜನಪದ ರ್‍ವಾಣ

೧

ಹುಲುಲುಗ್ಯಾ ಹುಲುಲುಗ್ಯಾ ಅಂದ್ನೆಪಾ
ಹಿಮ್ಮೇಳ: = ಸುರುಂಬುಳುಗ್ಯಾ ಸುರುಂಬುಳುಗ್ಯಾ ಅಂದ್ನೆಪಾ
ಹೆಣತಿ ಮಾಡಿಕೊಳ್ಳಬೇಕಂತೇಳಿ ಹೆಚ್ಚಿನ ಬಾಳೇವು
ಹೆಚ್ಚಾಗಿ ಊರ ಒಳಗಿನ ಹಿರಿಯರನ್ನೆಲ್ಲಾ ಕರೆದುಕೊಂಡು
= ಹೌದು
ನಾಗನೂರು ನಾಣಾಪೂರ ಹಳ್ಯಾಳ ಸಾಬರಾಣಿ
ಅನಸಿ ಸಿರಕೋಳ ಎಮ್ಮಿಗನೂರು ಎರೆಬೂದ್ಯಾಳಕ ಬಂದೆಪಾ।
= ದೂರ ಬಂದು ಬಿಟ್ಟಬಿಡು
ಅಲ್ಲಿಂದ ಅಗಡಿ ಹಾವೇರಿ ಮೇಲೆ ಹಾದು ತಿಗಡಿ
ತಿಮ್ಮಾಪೂರಕ ಬಂದ್ನೆಪ್ಪಾ
= ಹೌದು
ಬ್ಯಾಸತ್ತು ಬೆಟದೂರ ಬಯಲಾಗ
= ಹೌದು
ಬರೋದರೊಳಗ ಏನಾತಪಾ ಅಂದರ
ಕನ್ಯಾ ಇರುವ ಊರನ್ನು ಗೊತ್ತು ಮಾಡಬೇಕಂತೇಳಿ
ಕಾಲವಾಡ ಕಲ್ಲಪ್ಪನಗುಡಿಗೆ ಹೋಗಿ
ಇಲ್ಲದ್ದ ಒಂದು ಬಲ್ಲಂಗ ಬೇಡಿಕೊಂಡು
ನಿಲ್ಲದೆ ಲಿಂಗದಾಳಕೆ ಹೋಗಿ ಇಲ್ಲದೊಂದು
ಹಂಚಿಕೆಯನ್ನು ಹಾಕಿಕೊಂಡು
= ಹೌದು
ಹುಬ್ಬಳ್ಳಿ ಹೆಬ್ಬಳ್ಳಿ ಕಟ್ನೂರು ಗಿರಿಯಾಳ ದುಮ್ಮಾಡ
ಡೊಳ್ಳಿನ ಕೊಪ್ಪದ ಮೇಲ್‌ಮಾರ್ಗದಲ್ಲಿ ಹಾಯ್ದು।
= ಹೌದು

ಇಂಗಳಗಿ ಸಂಶಿ ಕುಂದಗೋಳಕ ಬಂದ್ನೆಪಾ ।

= ಹೌದು

ಆ ಮೇಲೆ ಪಡೆಸೂರಾಗ ಪತ್ತೆ ಹಚ್ಚಿ

ಗೊಜನೂರಾಗ ಗೊತ್ತು ಮಾಡಿದೇವಪ್ಪಾ ।

ಗೊಜನೂರಾಗ ಗೊತ್ತು ಮಾಡಿದ್ದು ತೇರಾಳದಾಗ

ತೆರವು ಕೊಟ್ರು ಬಳ್ಳಾರಿಯಾಗ ಬಳಿ ಇಟ್ರಪಾ।

= ಹೌದಣ್ಣಾ ಹೌದು

ಬಳ್ಳಾರಿಯಾಗ ಬಳಿ ಇಟ್ಟು ಸವಣೂರಾಗ

ಸರಪಳಿ ಹಾಕಿದ್ರಪಾ।

ವರೂರಾಗ ವಡ್ಡಿನ ಟೀಕಿ ಇಟ್ಟು ಗುಡದೂರಾಗ

ಗುಂಡಿನ ಟೀಕಿ ಕಟ್ಟಿದರು

= ಟೀಕಪಾ

ಗಡಿಬಿಡಿಯಿಂದ ಕರುಕುಂಡಲ ಇಟ್ಟು

ಲಕ್ಕುಂಡ್ಯಾಗ ಲಗ್ನದಾಕಿಗಂಟ ಕಟ್ಟಿದರು

= ಮುತ್ತ ಕಟ್ಟದ ಬಿಟ್ಟಾರ

ಹಂದ್ರಾಳದಾಗ ಹಂದ್ರಾ ಹಾಕಿದ್ರೂ

ಐನಾಪೂರದಾಗ ಅರಿಷಿಣ ಹಚ್ಚಿದ್ರು।

ಐವಳ್ಯಾಗ ಐರಾಣಿ ತಂದ್ರು ದ್ಯಾವನೂರಾಗ

ಮಸೀ ಊಟ ತಂದ್ರು ಬಾಗೇವಾಡ್ಯಾಗ ಬಾಸಿಂಗ ತಂದ್ರೂ।

= ಹೌದಣ್ಣಾ ಹೌದು

ಧಾರವಾಡಕ ಬಂದು ದಾರಿ ಎರುದುಕೊಟ್ರು।

= ಹೌದು

ಅಕ್ಕಿಗುಂದಾಗ ಅಕ್ಕಿಕಾಳು ಬಿದ್ದವು

ಸಾತೂರಾಗ ಸಣ್ಣಾಕಿ ಅದಾಳ ಅಂತೇಳಿ ಆಲೂರಿಗೆ

ಹೋಗಿ ನ್ಯಾಯ ಮಾಡಿದ್ರು।

= ಮುರುಕ ನ್ಯಾಯ ಅಲ್ಲಂಪಾ ಇದು

ಮುಂದ ಬಿದಿರಳ್ಳಿಗೆ ಹೋಗಿ ಬೀಸೋ

ಕಾರ್ಯ ತೀರಿಸೋದರೊಳಗ ಏನಾತಪ್ಪ ಅಂದ್ರ

= ಏನಾತಪಾ

ಮೈಸೂರಾಗ ಮೈನೆರೆತಲಪಾ

= ಚೇ

ಮೈಸೂರಾಗ ಮೈನೆರೆತಲು ಮಂಟೂರಾಗ
ಮಂಟಪಾ ಕಟ್ಟಿದರಪಾ ।
ಮಂಟೂರಾಗ ಮಂಟಪ ಕಟ್ಟಿದರು
ಕುಮಟಾದಾಗ ಕುಂಡ್ರಿಸಿದ್ರು ಕುಕನೂರಾಗ
ಕುಂಕುಮ ಹಚ್ಚಿದ್ರು
= ಬಾಳ ದೂರ ಬಂದ್ರಬಿಡು
ಯಲ್ಲಾಪುರದಾಗ ಆರತಿ ಮಾಡಿದ್ರು ಕಾಕೋಳಕ
ಬಂದು ಕಳಿಸ್ತಿವಿ ಅಂದ್ರು ।
= ಹೌದು
ಶಿರಹಟ್ಟಿಗೆ ಬಂದು ಸೀರಿ ತಗೊಂಡು
ಕುರಟ್ಟಿಗೆ ಬಂದು ಕುಬಸಾ ತಗೊಂಡ್ರು
= ಬೇಕಬೇಕಲ್ರಿ
ಹಾನಗಲ್‌ಗೆ ಬಂದು ಹಂಗನೂಲಾಕಿ
ಉಪ್ಪಿನ ಬೆಟಗೇರಿಗೆ ಬಂದು ಹಾಸಿಗೆ ತಗೊಂಡು
ಕಡಕೋಳಕ ಬಂದು ಕಳಿಸಿಹೋದ್ರ
= ಹೌದಣ್ಣಾ ಹೌದು
ಮುಂದೆ ಬಾಳೆ ಮಾಡುವಷ್ಟರೋಳಗ ಏನಾತಪಾ ಅಂದರ
= ಅಂತಾದು ಏನಾತಪಾ ಅಂದ್ರ
ಬಟ್ಟೂರಾಗ ಬಸುರಾದ್ಲಪಾ ।
= ಹೌದಣ್ಣಾ ಹೌದು
= ಎಲ್ಲ ದಾರಿಮ್ಯಾಗ ಆಗೈತೆ
ಬಟ್ಟೂರಾಗ ಬಸುರಾದ್ಲು ಹುಯಿಲಗೋಳದಾಗ
ಹೂವು ಮುಡಿಸಿದ್ರು
ಹಡಗಲ್ಯಾಗ ಹಡದ್ಲು ಕುಡ್ತಿ ಊರಾಗ ಕೂಸ ಬಿತ್ತು
= ಉಡ್ಡಿ -----
ಸುಗ್ನಳ್ಳಿ ಸೂಲಗಿತ್ತಿ ಮುಳ್ಳೂರು ಕುಡಗೋಲು
ಹುರನಾಳದಾಗ ಮಗನ ಹೊಕ್ಕಳ ಹುರಿ ಕೋದ್ರಪಾ
= ಎಂಥಾದು ಇದ್ದೀತೂ ಅಂತೀನಿ
ಅಥಣಿ ಊರಾಗ ಐದೇಶಿ ಮಾಡಿದ್ರು
ಹಂಪಿಹೊಸಪೇಟ್ಯಾಗ ೧೩ ದೇಶಿ ಮಾಡಿದ್ರಪಾ।
= ಹೌದು
ಮುಂದ ಮದನಬಾವಿ ಊರಾಗ ಮಗನ ಎತ್ತಿಕೊಂಡು
ಬಾಳೆ ಮಾಡುವಷ್ಟರೋಳಗ ಏನಾತಪಾ ಅಂದರ
= ಏನಾತಪಾ

ಮಗನಿಗೆ ಹಾಲು ಸಾಲುವುದಿಲ್ಲವಂತೇಳಿ
ಗಂಡ ಹೆಂಡತಿಗೆ ಜಗಳ ಬಂದು
ಕುಂಟ ಚೇಷ್ಟೆಯ ಮಾಡಿ ಅಂತೇಕ ೧೦ ರೂಪಾಯಿ
ಗಂಟಕಟ್ಟಿಕೊಂಡು ದಡಾಸಿ ಧಾರವಾಡ ಪೇಟಿ
ಹುಬ್ಬಳ್ಳಿ ಪೇಟಿ, ಬೈಲಹೊಂಗಲ, ಬೆಳಗಾಂವಕ
ಹೋಗಬೇಕೆನ್ನುವಷ್ಟರೊಳಗಾಗಿ ನಡುವೆ ಕಳ್ಳರು
ಗಂಟಬಿದ್ದು ಅವನ್ನ ತಿರ್ಲಾಪೂರದ ಕಡೆಗೆ ತಿರಿವಿದ್ರಪಾ
= ಬೀಕಪಾ
ಅವನು ಒತ್ತಾರ ಮಾಡಿ ಕರ್ಜಗಿ ಕಚೇರಿಗೆ
ಹೋಗಬೇಕೆನ್ನುವಷ್ಟರಲ್ಲಿ ಎಂಟು ಮಂದಿ
ಸಿಪಾಯರು ಗಂಟುಬಿದ್ದು ಉಪಾಯದಿಂದ
ನನ್ನ ರೂಪಾಯಿಗಳನ್ನು ಕಸಕೊಂಡ್ರೆಪಾ
= ಅವರ ಕೆಲಸನ ಅದು ಮತ್ತ
ಅಂದಿನಿಂದ ಗಂಡನಬೇಟಿ ಹೆಣ್ತಿಗಿಲ್ಲ
ಹೆಣ್ತಿಭೇಟಿಗಂಡಗಿಲ್ಲ.
ಹೇಣ್ತಿ ಮಾಡಿಕೊಳ್ಳುವ ಲೆಕ್ಕ ಹಿಂಗೈತಿ
ತಿಳಿದು ನೋಡಿ ಬಾಳೆ ಮಾಡ್ರಿ ತಿಳಿದವರಿಗೆ
ಹೆಚ್ಚಿಗೆ ಹೇಳದೇನೈತಿ.

೨

ಬೆಕ್ಕು ರೊಕ್ಕಾಗಳಿಸಿತ್ತು ಚಿಕ್ಕಾಡ
ಬಹಳ ಸಿಟ್ಟು ಇಟ್ಟಿತಪಾ ।
= ಸಿಟ್ಟ ಇದೇನ ಮಾಡತ್ರಿ
ಉಣ್ಣಿ ಬಂದು ಇನ್ಯಾಕ ಅನುಮಾನ ಅಂತಿತ್ತು।
ಮಳಿಹುಳ ಕಳಿವಿಗೆ ಹೋಗೋಣ ನಡ್ರಿ ಅಂತಿತ್ತು।
= ಹೌದಣ್ಣಾ ಹೌದು
ಆಡು ಬೇಡಿಬಿದ್ರು ಚಿಂತಿಲ್ಲಾ ಮಾಡೋದು ಕರೆ ಅಂತು
= ಹೌದು
ಹಂದಿಬಂದುದಕೆಲ್ಲಾ ಅದಿನಿ ಅಂತು ಹೊಸರೊಳ್ಳಿ
ಹೋಗೋನ ಏಳ್ರಿ ಅಂತಿತ್ತು
ಗೊರವಂಖ ಗ್ವಾಡಿ ಒಡಿತು ಮೊಸಳಿ

ನೋಡಿಕೆಲ್ಸ ಮಾಡ್ರಿ ಅಂತು
= ಹೌದಣ್ಣಾ ಹೌದು
ಹೊನಿಗ್ಯಾ ಬಂದು ಹೊನ್ನು ನೆಗಿವಿತ್ತು
ಹುಲಿ ಬಂದು ತೆಲಿಮ್ಯಾಗ ಇಟಗೊಂತು
= ಹೌದು
ಗುಬ್ಬಿ ಬಂದು ಬುದ್ದಿ ಹೇಳ್ತು
ಕಂಜರಗಿ ಹುಳ ಬಂದು ಕಣ್ಣು ಕಿಸಿತು।
ಆನೆ ಬಂದು ಅಲ್ಲಾ ಸೂಳೆಮಕ್ಕಳ್ರಾ
ಹರಮದ್ದ ತಿನಬಾಡ್ದು ಅಂತು.
= ಹೌದಣ್ಣಾ ಹೌದು
ಕತ್ತೆ ಬಂದು ಪಿತೂರಿ ಮಾಡಿತ್ತು
ಚೋಳು ಕಳ್ಳನ ಹಿಡಿತು
= ಬಲು ಚುರುಕು ಅದು
ಕುದರಿ ಕುಂದಿರಿಸಿ ಕೇಳತಿತ್ತು ಹೆಗ್ಣ ಹಗ್ಗ ಕಟ್ಟಿತ್ತು
ಕುಂಬಾರ ಹುಳ ಗುಮ್ಮನ
ಮಗನ ಖರೇ ಹೇಳ ಅಂತಿತ್ತು।
= ಟೀಕಪಾ
ಹದ್ದು ಬಂದು ಒದ್ದೇನ ಸೂಳೇಮಗನ
ಸುಮ್ಮನ ಹೇಳ ಅಂತು
ಬಿಲ್ಲಿ ಹುಳ ಬಂದು ಎಲ್ಲ ಹೇಳಿತ್ತು
= ಬೀಕಪಾ
ಮಂಗ ಬಂದು ಇದಿಷ್ಟು ಹಣ ಆದರ
ನನ್ನ ಮಗನ ಮದಿವಿ ಒಳೆ ನಿವ್ವಳ
ಆಗತೈತಿ ಅಂತು ।
= ಹೌದು
ಹಂಚಿನ ಹುಳ ಪಂಚನಾಮಿ ಮಾಡೋಣಂತು
= ಹೌದಣ್ಣಾ ಹೌದು
ಬಾಲದ ಹುಳ ಬರ್‍ಯಾಕ ನಿಂತು
ಕೋರಿಹುಳ ದರೋಡಿ ಮಾಡಿತ್ತು।
ಗಿಡಗ ಗಡಿಬಿಡಿ ಮಾಡಿತ್ತು ಪಾರಿವಾಲ
ಬಂದು ಪಾರಮಾಡಿತು ಹುಲು ಹುಲುಗ್ಯಾ

೩

ಒಬ್ಬ ನಾರಿ ಇದ್ದಳು ನಾಜೂಕ
ಬಂದಿದ್ದಳು ಯೌವ್ವನ ಪ್ರಾಯಕ್ಕ
೭ ಮಲ್ಲಿಗೆ ಹೂವಿನ ತೂಕ
= ಹೌದು
ಅಕ್ಕಿ ಪಾದದಲ್ಲಿತ್ತು ಪದ್ಮರೇಖ
ಬಿದ್ದಿತು ಬೆಳಕ ಕಸ್ತೂರಿ ತಿಲಕ ಇಟ್ಟು
ಹೊಡಿತಿದ್ಲು ಚಿಮಕ
= ಬಹಳ ಚಲುವಿ ಇದ್ಲಬಿಡು ಹಂಗಾರ
ಅಕಿ ಕಾಲುಂಗರಾ ಸಪ್ಪಳಕ ನಿನ್ನಂತಾ ಕಬರಾರಿ
ಪುರುಷ ಏನಂತಪಾ ಅಂದ್ರ
= ಏನಂತಾನಪಾ
ಯೇ ಬಾಳಿದಿಂಡಿನಂತ ತೋಳ ತೊಡಿಯಾಕೆ
ಕಮಲನೋಟದ ಕಣ್ಣುಳ್ಳಾಕೆ
= ಹೌದು
ಕನ್ನಡಿಯಂತ ಗಲ್ಲದಾಕೆ
ತೊಂಡಿಹಣ್ಣಿನಂತಾ ತುಟಿಯಾಕೆ।
ದಾಳಿಂಬರ ಬೀಜದಂತ ಹಲ್ಲಿನಾಕೆ
ನಾಗರ ಹೆಡಿಯಂತ ಜಡಿಯಾಕೆ।
= ಹೌದು
ಸಿಂಹದಂತ ನಡದಾಕೆ ನಡದಾಗ
ಡಾಬು ಒಡ್ಯಾಣ ಇಟ್ಟಿರುವಾಕೆ
= ಹೌದಣ್ಣಾ ಹೌದು
ನನ್ನ ಕರಕೊಬಾರದೇನ ಮಾರಾಳ ಅಂತಿದ್ನಪಾ।
= ಉಡ್ಡು
ಅವಾಗ ಅಕಿ ಏನಂತಾಳಪಾ ಅಂದ್ರ
= ಏನಂತಾಳಪಾ
ಚೀ ಹೋಗೋ ಹುಚ್ಚ ನಮ್ಮಂತ ಬಾಲ್ಯಾರನ
ನೆದರ ಎತ್ತಿ ನೋಡಬಾರ್ದು
ಆದಿಯೋ ಪಜೀತಿ ಜೋಕುಮಾರನಗತಿ
ಅದರಂತೆ ನಿನ್ನ ಅವಸ್ಥಿತಿ ಅಂತಾ ಹುಲಗೂರ
ಜಾತ್ರ್ಯಾಗ ಹೊಕ್ಕಳಪಾ ।
= ಹೌದಣ್ಣಾ ಹೌದು

ಹುಲಗೂರ ಜಾತ್ರ್ಯಾಗ ಜಗ್ಗ್ಯಾಡಕೋತ
ಬರೋದರೊಳಗ ಏನಾತಪಾ ಅಂದ್ರ
= ಏನಾತಪಾ
ಜವಳಿ ಮಾರಾವ ಜರದಕಣ ಹಿಡಿ ಅಂತಿದ್ದ
ಚಿನಿವಾರವ ಚೊಕ್ಕ ಬಂಗಾರದ ಚಂದ್ರ
ಸರ ಹಿಡಿ ಅಂತಿದ್ದ
= ಮತ್ತ ಕೊಡದೇನ ಮಾಡ್ಯಾನ
ಮಾರ್ವಾಡ್ಯಾರವ ನಾಮಾಡಯಾಪಾರ ಎಲ್ಲ
ನೀನ ನೋಡಿಕೊವಂತಿ ಬಾ ಅಂತಿದ್ದ
= ನೋಡ್ಯಾನ
ಹಂಡೆ ಟಪಾಲಿ ಮಾರಾವ ದಾರಿಗುಳಿಸಿ
ಹಣಿಹಣಿ ಬಡಕೊತಿದ್ದ
= ಬೀಕಪಾ
ಬೆಂಡು ಬೆತ್ತಾಸ ಮಾರಾವ ಸೂರ ಮಾಡಿ
ಸುಂದ ಮಾಡಿ ಕುಂತಿದ್ದ ।
= ಹೌದು
ಬುಕೀಟಗಾರನ ಬುಕೀಟ ಉಗ್ಗಿ ಬಿಕ್ಕಿ ಬಿಕ್ಕಿ ಅಳತಿದ್ದ
= ಅಯ್ಯೋಪಾಪ
ಅಗಸ್ಯಾಡರಾವ ನಾ ಅಗ್ಗದಾಗ
ಮಾಡಿಕೊಡತಿನಿ ಬಾ ಅಂತಿದ್ದ
= ಪುಗಸೆಟ್ಟಿ ಬಂಗಾರ
ಬಡಿಗೇರಾವ ನಾ ಬಾಯಿ ತೆಗೆದು
ಕೇಳೋದು ವ್ಯರ್ಥ ಅಯಿತಂತೇಳಿ
ಬೆರಗಾಗಿ ನಿಂತ।
ಕಮ್ಮಾರಾವ ಕೈಯಾನ ಚಮಟಗಿ
ಒಕ್ಕೊಟ್ಟ ಕಬರಾರಿ ನಿಂತ
= ಬೀಕಪಾ
ಕುರುಬರಾವ ಕಂಬಳಿ ನೇಯದಬಿಟ್ಟು
ಹೊಳ್ಳಿ ಕುಂತ
= ಇದಕ್ಯಾಕ ಬೇಕಾಗಿತ್ತು
ಹಡಪದಾವ ಹಡಪ ಇಟ್ಟು

ಹಲ್ಲು ಕಿಸುಗೊಂತ ನಿಂತಿದ್ದ
= ಹೌದು
ಮಸೀದಿ ಮುಂದಿನ ಮುಲ್ಲಾ ಅಕ್ಬರ ಅಲ್ಲಾ
ಅಂತಾ ಗಲ್ಲ ಗಲ್ಲ ಬಡಕೋತಿದ್ದ
= ಬೀಕಪಾ
ಇದನ್ನೆಲ್ಲಾ ನೋಡಿ ಪೋಲಿಸ್ ಕಂಡಕ್ಟರ
ಇನ್ಸಪೆಕ್ಟರ ದೊಡ್ಡ ದೊಡ್ಡವರೆಲ್ಲ
ಕೂಡಿ ನಮಗ ಬಂದಂತ ಪಾಪವೆಲ್ಲ
ಪರಿಹಾರ ಆತಂತ ಹೇಳಿ ಎಷ್ಟೋ
ಮಂದಿಗೆ ಬಡ್ಡಿ ಹಂಚಿದ್ರು
ಅಂತರ್ಲೆ ಆಡುವಾ ಗಿಡಗಾ ಗಿಡಗನ ಕೊಳ್ಳಾಗ
ಪಾವಸೇರ ಬೆಳ್ಳಿ ಕಡಗಾ
ಈ ರ್ವಾಣಾ ಹೇಳಿದ್ನಪಾ ಹೊನ್ನಸೊರಟೂರ ಈರಗಾರ ಹುಡಗಾ
ಹುಲುಲುಗ್ಯಾ ಹುಲುಲುಗ್ಯಾ ಅಂದ್ನೆಪಾ
= ಸುರುಂಬುಳುಗ್ಯಾ ಸುರುಂಬುಳುಗ್ಯಾ ಅಂದ್ನೆಪಾ

ಕಲಾವಿದರು: ಕರಿಯಪ್ಪ. ಕಳಂಗನವರ, ನಿಂಗಪ್ಪ. ಲಕ್ಕುಂಡಿ, ಹನಮಂತಪ್ಪ. ಅಗಡಿ ಮುಂತಾದವರು.

ಭಜನೆ ಹಾಡು

ಮುತ್ತು ಕಂಡೆನವ್ವ ನಾನೊಂದ ಗೆಳತಿ
ಮೂಗಿನಾಗ ಇರುವದ ನತ್ತೊಂದ ॥ಪ॥
ಒಂದು ವರ್ಣದ ಮುತ್ತು ಓಂನಾದದೊಳಗಿತ್ತು
ಎರಡು ವರ್ಣದ ಮುತ್ತು ಎಡಬಲದೊಳಗಿತ್ತು ॥ಪ॥
ಮೂರು ವರ್ಣದ ಮುತ್ತು ಮೂಲಸ್ಥಾನದಲ್ಲಿತ್ತು
ನಾಕ ವರ್ಣ ಮುತ್ತು ನಾಗೇಶನಲ್ಲಿತ್ತು ॥ಪ॥
ಐದು ವರ್ಣದ ಮುತ್ತು ಐಕ್ಯ ಸ್ಥಾನದಲ್ಲಿತ್ತು
ಆರು ವರ್ಣದ ಮುತ್ತು ಅರೋಡ ಸ್ವಾಮಿಗೆಗೊತ್ತ ॥ಪ॥
ಏಳ ವರ್ಣದ ಮುತ್ತ ಯೋಗೇಶನಲ್ಲಿ ಇತ್ತು
ಎಂಟು ವರ್ಣದ ಮುತ್ತು ಮಂಟಪದೊಳಗಿತ್ತು ॥ಪ॥
ಒಂಬತ್ತು ವರ್ಣದ ಮುತ್ತು ತುಂಬಿ ತುಳಕಾಡತಿತ್ತ
ಹತ್ತು ವರ್ಣದ ಮುತ್ತು ತತ್ವಬಲ್ಲವಗಗೊತ್ತು ॥ಪ॥
ಹನ್ನೊಂದು ವರ್ಣದ ಮುತ್ತು ಆನಂದದೊಳಗಿತ್ತು
ಹನ್ನೆರಡು ವರ್ಣದ ಮುತ್ತು ಶಿಶುನಾಳದೀಶಗಗೊತ್ತು ॥ಪ॥

ಭಜನೆ ಹಾಡು:

ಮರಿಬಾರದವ್ವ ತಂಗಿ ಮಾಡಿಕೊಂಡ
ಗಂಡನ ಸೇವಾ ॥ ಪ ॥

ಅತ್ತಿ ಮಾವರಿಗೆ ಅಂಜಿ । ಮತ್ತೆ ಪತಿದೇವರಿಗೆ ಅಂಜಿ
ಸುತ್ತೆಲ್ಲಾ ಬಳಗಕೆ ಅಂಜಿ ಉತ್ತಮರ ಮಗಳೆಂದೆನಿಸು ॥
ಭಾಗ್ಯವಂತಳಾಗಬೇಕು.

ನಿನ್ನ ಮೂಗಿಗೆ ನನ್ನ ನತ್ತು
ಬಾಳಿಗೆಲ್ಲಾ ಬೆಳಕೆ ಬಿತ್ತು
ನಿನ್ನ ಹಣೆಯ ಕುಂಕುಮ ತಿಲಕ
ಹುಣ್ಣಿಮೆಯ ಚಂದ್ರನ ಬೆಳಕು
ಕೀರ್ತಿವಂತಳಾಗಬೇಕು. ॥

ವ್ಯರ್ಥ ಹೊತ್ತು ಕಳೆಯಬೇಡ
ಸುತ್ತಿ ಸುಳಿದು ನೋಡಬೇಡ
ಅನ್ಯರ ಗೊಡವಿಗೆ ಹೋಗಬೇಡ
ಕೆಟ್ಟ ಮಾತಾಡಬೇಡ ॥

ಇದೆ ಜನ್ಮ ಕಡೆಯದಮ್ಮಾ
ದಾನ ಧರ್ಮ ಮಾಡಬೇಕು
ನಿತ್ಯಧ್ಯಾನದೊಳಿರಬೇಕು
ನಿನ್ನ ಬಾಳು ಬೆಳಗಬೇಕು
ಬಾಳ ಚಿಂತಿ ನಿನಗಬೇಕ ॥
ಸತ್ಯವಂತಳಾಗಬೇಕು.

ರಚನೆ: ಕಲ್ಲಪ್ಪ ಮೇಟಿ

ಭಜನೆ ಹಾಡು

ತಂಗಿ ಸಣ್ಣಾಕಿ ನೀ ಬಲು ಜೋಕಿ
ಹೋಗಿ ಬಾರವ್ವ ಮಗಳೇ ಸಾಗಿ ಬಾರಮ್ಮ ॥ಪ॥

ನಾಲ್ಕು ಮಂದ್ಯಾಗ ನೀ ಸಣ್ಣಾಕಿ
ಹಾಲು ಸಕ್ಕರೆಯೊಳು ಕೈತೊಳೆದಾಕಿ
ತವರು ಮನಿಯಾಗ ಉಂಡಾಡಿದಾಕಿ
ಎಲ್ಲರಿಗಿ ಪ್ರೀತಿಯ ಮಗಳಾದಾಕಿ ॥ಪ॥

ತವರು ಮನಿ ಸೀರ್ಯಾಗ
ಹಾಕ್ಯಾರ ಉಡಿ ಅಕ್ಕಿ
ಆ ಉಡಿಯಕ್ಕಿ ನೀ ಬಲು ಜ್ವಾಕಿ
ಮಂದಿಬಳಗನೆಲ್ಲ ಮುಂದಕ್ಕೆ ನೂಕಿ
ಉಡಿಯ ತುಂಬಿದರವ್ವ ಉಡಿ ಅಕ್ಕಿ

ಅತ್ತಿ ಮಾವ ನೆಗೆಣ್ಯಾರು ಐದಾರೊ ಬೆರಕಿ
ಗಂಡ ಅದಾನವ್ವ ಬಹಳ ಹಟ ಬೆರಕಿ
ತಿಳಿದು ಮೋಹದ ಬಲೆಯಲ್ಲಿ ಸಿಕ್ಕಿ
ಸಿಕ್ಕ ಮ್ಯಾಲೆ ಆದಿ ಕಕ್ಕಾ ಬಿಕ್ಕಿ

ಸೊರಟೂರ ಗ್ರಾಮ ಗದಗ ತಾಲೂಕ ಪೈಕಿ
ಗುರು ಬೀರೇಶಗ ಹೊರು ನಿನ್ನ ಹರಕಿ
ಅವನ ಹತ್ರ ಹೋಗಾಕ ನೀ ಬಲು ಜ್ವಾಕಿ
ಎಲ್ಲರಿಗೂ ಹಾಕತಾನ ಧರ್ಮದ ಗುರಕಿ

ರಚನೆ: ಕಲ್ಲಪ್ಪ. ಮ. ಮೇಟಿ

ಹಾಡಿದವರು: ನಾಗಪ್ಪ ಕಣವಿ, ಪರಶುರಾಮ ತೋಪಿನ, ತಿರಕಪ್ಪ ಹಳ್ಳಿ, ಈರಣ್ಣ ಚನ್ನವೀರಶೆಟ್ರ, ಬಸವರಾಜ ಜಮಾಣಿ, ಬಸಲಿಂಗಪ್ಪ ಕೊಸ್ಲಾಪೂರ, ಶೇಖಪ್ಪ ಹಡಪದ, ಚನ್ನಪ್ಪ ಗಿಡಕೆಂಚಣ್ಣವರ ಮುಂತಾದವರು.

ಡೊಳ್ಳಿನ ಹಾಡು

೧

ಗುರುವೆ ನಮ್ಮಯ ದೇವರು ಬಂದಾವು ಬನ್ನಿರಿ
ಶಿವ ಶಿವ ನಮ್ಮಯ ದೇವರು ಬಂದಾನ ಬನ್ನಿರೊ ॥ ಸ್ತುತಿ ॥

ಶುಂಬಾ ನೀ ಶುಂಭರ
ದಿಂಬಾನ ನಳಿದಂತ
ಅಂಬಿಕಾ ದೇವಿಗೆ ನಮೋ ನಮೋ
ಅಂಬಿಕಾ ದೇವಿಗೆ ನಮೋ ನಮೋ
ಕುಂಬಿನ ತಾಯಿಗೆ ನಮೋ

ಗುರುವಿಗೆ ಎರಗಿ ಶಿರಬಾಗಿ ಬೇಡುವೆ
ಹರಿಹರ ಹಜರಿಗೆ ನಮೋ ನಮೋ
ರೇವಣಸಿದ್ಧನಿಗೆ ನಮೋ ನಮೋ
ರೇವಣಸಿದ್ಧನಿಗೆ ನಮೋ ನಮೋ
ನಮ್ಮ ಕರಿಯ ಸಿದ್ದನಿಗೆ ನಮೋ

ಹಾಲುಮತವನ್ನು ಧರಿಸಿದ ಸಿದ್ಧನಿಗೆ
ರೇವಣಸಿದ್ಧನಿಗೆ ನಮೋ ನಮೋ
ಸೊರಟೂರ ಗ್ರಾಮದ ಡೊಳ್ಳಿನ ಮ್ಯಾಳದ
ತರುಣರು ಮಾಡುವೆವು ನಮೋ ನಮೋ
ತರುಣರು ಮಾಡುವೆವು ನಮೋ ನಮೋ
ನಮ್ಮ ಬೀರೇಶ್ವರನಿಗೆ ನಮೋ

೨

ದೇವಿ ನಮ್ಮಯ ದೇವರಿಗೆ ಶರಣೆನ್ನುವೆನು.
ಗುರುವಾ ರೇವಣಸಿದ್ಧಗೂ ಶರಣೆನ್ನುವೆನು.
ಹೊತ್ತು ಮುಳಗೋದು ಕಂಡೆ ರತ್ನ ಸುರಿಯೋದು ಕಂಡೆ
ಉತ್ತಮರ ಕಂಡೆ ಈ ಗುಡಿಯೊಳಗ

ಏ ಹೊನ್ನ ಹೊಳಿಯೋದು ಕಂಡೆ ಮುಂದ ಬಂಗಾರ ಕಂಡೆ
ಮಾನ್ಯನ ಕಂಡೆ ಈ ಗುಡಿಯೊಳಗ

ಸಿದ್ದ ನಿನ್ನ ಗುಡಿಯೊಳಗ ಸಿಂಗಾರ ತೊಟ್ಟಿಲ ಕಟ್ಟಿ
ಬಂಗಾರ ಬಾಸಿಂಗ ಐತಿ ಗುಡಿಯೊಳಗ

ಏ, ರಾಮಚಂದ್ರ ಸ್ವಾಮಿ ಲಕ್ಷ್ಮಣದೇವರು
ಸೀತವ್ವ ಐದಾಳ ಈ ಗುಡಿಯೊಳಗ

ಸೀತವ್ವ ತಾಯಿ ಕಾಯ್ದು ಮಲಗುವಂತ
ಗರುಡ ಪಕ್ಷಿ ಐತಿ ಈ ಗುಡಿಯೊಳಗ

ಏ, ದೇವಿ ದುರಗಮ್ಮಗ ಉಣ್ಣುವ ಊಟ
ಸಕ್ಕರೆ ಕಜ್ಜಾಯ ಐತಿ ಈ ಗುಡಿಯೊಳಗ

ಹಸಿರು ಕೆಂಪು ಬಣ್ಣ ಹಳದಿ ಸಿಂಹಾಸನ
ಕಳವುಳ್ಳ ದೇವರ ಈ ಗುಡಿಹೊಳಗ

ಏ, ಡೊಳ್ಳು ಜಗ್ಗುತಾಳ ಕಾಲೋಳು ಗೆಜ್ಜೆಗಳು
ನಡಿಯಜಿಗುಟ್ಟೈತಿ ಈ ಗುಡಿಯೊಳಗ

ಎಲ್ಲರೂ ಬೆಳಗೋದು ಪಲ್ಲನೆ ಹರಿರಾಜ.
ಅನ್ನ ಅಮೃತೈತಿ ಈ ಗುಡಿಯೊಳಗ.

ಹಾಡುವವರು: ಕರಿಯಪ್ಪ ಗುಡಿ, ಶಿವಪ್ಪ ಗುಡಿ, ಶಿದ್ದಪ್ಪ ಜಂಗವಾಡ, ಪರಸಪ್ಪ ಕರಿಗಾರ, ನಿಂಗಪ್ಪ ಲಕ್ಕುಂಡಿ, ಕರಿಯಪ್ಪ ಕಳಗಣ್ಣವರ, ರೇವಣೆಪ್ಪ ಗುಡಿ ಮುಂತಾದವರು.

ನಾಗರ ಪಂಚಮಿ ಹಾಡುಗಳು :

ನಾಡ ಮೇಲೆ ನಾಗರ ಪಂಚಮಿ
ನಾರಿಯರ ಹಬ್ಬ ಏನು ಹುಬ್ಬ
ಹಂಚಿಕೇನು ಮಾಡಲೆವ್ವ ಎಚ್ಚತರುವುದಕ
ಕಂಚ್ಯಾಣ ಇದ್ದರ ಕಾರ್ಯ ಶುದ್ಧ ಸಂತೆ ಮಾಡಲಾಕ
ಹಿಂದಿನಂಗ ದಿನಮಾನ ಇಲ್ಲ ನಂಬಿಗೆ ಇಡಲಾಕ
ಉಂಡುಟ್ಟು ಹೆಣ್ಣು ಮಕ್ಕಳು ಕಂಡಿದ್ದೆಲ್ಲಾ ಬೇಡತಾರ
ಸದ್ಯಕ್ಕೆ ಜೋಳ ಇಲ್ಲ ಅಳ್ಳ ಹುರಿಯಲಾಕ
ವೈಯಾರಿ ನಾಡ ಮೇಲೆ ಜೋಕಾಲಿ ಆಡಲಾಕ ॥ಪ॥

ಗಂಗವ್ವ ಗೌರವ್ವ ಬಾರೆ ಶಾಂತವ್ವ ಸಂಗವ್ವ ಬಾರೆ
ನಿಂಗವ್ವ ನೀಲವ್ವ ಬಾರೆ ________
ಆರು ಮಂದಿ ಮೀರಿದವರು ಜೋಕಾಲಿ ಆಡುದಕ
ಪಂಚತತ್ವದ ಮಿಂಚಿನ ಸೀರಿ ಬಿಚ್ಚಿ ಉಡಲಾಕ ॥ಪ॥

ಜೋಕಾಲಿ ಎಂಬ ಜೀಕವನೇರಿ, ನಾಲ್ಕು ಕಡಿಕ ದಿಕ್ಕವ ನೋಡಿ
ಪೂರ್ವದಿಕ್ಕಿಗೆ ಪೂಜೆಯ ಮಾಡಿ ________
ಮಣ್ಣಿ ಗುಂಪಿ ಮಾಡೋಣ ಬರ್‍ರೆವ್ವ ಗುಳ್ಳವ್ವ ಆಡುದಕ
ಅಂತರಂಗದ ಆದಿಶೇಷಗ ಹಾಲನ್ನು ಎರಿಯುವದಕ ॥ಪ॥

ಆಜೋಲಿ ಈ ಜೋಲಿ ಕಾಮನ ಜೋಲಿ ನಿದ್ರೆಯ ಜೋಲಿ
ಜೋಲಿ ಹೋಗಿ ಬಿದ್ದೆವ್ವ ತಂಗಿ ಎಚ್ಚರಿರಬೇಕ.
ಪಂಚತತ್ವದ ಮಿಂಚಿನ ಸೀರಿ ತಿದ್ದಿ ಉಡಲಾಕ ॥ಪ॥

ಗೌರಿ ಹಬ್ಬದ ಹಾಡುಗಳು :

ಒಂದ ಸೇರ ಎಣ್ಣಿ ತಂದಾಳ ಗೌರಿ
ಬಂದು ಬಾಗಿಲಿಗೆ ಹಚ್ಚ್ಯಾಳ ಗೌರಿ
ಏಕದಾರುತೆ ಗೌರಿ ಬೆಳಗದಾರುತೆ

ಒಂದ ಮೂಲಿಗೆ ಒಂದ ಪತ್ರಿ,
ಪತ್ರಿಲ್ಲ ಪಣಿವ್ಯಾರ ಅದ ನಮ್ಮ
ಗೌರವ್ವನ ಶನಿವಾರ.

ಜಾಲಿ ಗಿಡ ಜೋಲಿ ಹೊಡಿತ
ಮುತ್ತಿನ ಕುದರಿ ಮುಂದಕ ನಡೀತ
ಸ್ವಾದರತ್ತಿ ತಂದಾಳವ್ವ ದಂಡಿ ಕುಬುಸಾ

ಗೌರಿ ಗೌರಿ ಅಂತ ಗಣಪತಿ ಅಂತ
ಮುತ್ತಿನ ಚಂಡ ಅಂತ
ಸರಕ್ಕ ಸರಿಗಿ ಬಾ ಬೆರಗಿ ಬಾ
ಅಕ್ಕವ್ವ ಗೌರವ್ವಗ ಆರತಿ ಮಾಡಿರೆ
ದಾಳಿಂಬ್ರಗೋ ದಾಳಿಂಬ್ರಗೋ

ಮೊಹರಂ ಹಾಡು :

ಕೈಯಲಿ ಕಂಕಣ ಮೈಯಲಿ ಅರಿಸಿಣ
ಗಂಧ ಕಸ್ತೂರಿ ತಿಲಕ ॥ ಎಲೆ ಅಡಿಕಿ
ತುಂಬಿ ಇಟ್ಟಾರಿ ತವಕ ಲಗ್ನದ ಸಂಭ್ರಮಕ ॥ಪ॥

ಕಾಸೀಮ ಸಾಹೇಬ್ರು ಏರಿದ ಈ ಕುದುರೆ
ಹೊಂಟ್ಯೆತ್ರಿ ಕಾರ್ಬುಲಕ । ಕಾಗಿ ಹಿಂಡು
ಬಂದಾವರಿ ಎಡಬಲಕ । ಇದು ನಮಗ
ಚೊಲೊದಲ್ಲರಿ ಕೆಡಕ । ತಿರಗರಿ ಹಿಂದಕ್ಕ ||ಕೈಯಲಿ||

ಸೆಲ್ಲೆವು ಹಿಡದಾಳ ಎಲ್ಲೆಲ್ಲಿ ಬಿಡವಳ್ಳು
ಮಲ್ಲಿಗೆ ಹೂವಿನ ತೂಕ।
ನನ್ನ ಬಿಟ್ಟು ಹೊಗತೀರಿ ಕಾರ್ಬುಲಕ।
ಹೇಳಿ ನೀವು ಬರುವದು ಎಷ್ಟು ದಿನಕ
ಹೇಳರಿ ಈ ಕ್ಷಣಿಕ । ||ಕೈಯಲಿ||

ಕಟ್ಟಿದ ಕರಿಮಣಿ ಚಟ್ಟನೆ ಹರಿದೀತು
ಮುಟ್ಟಿಲ್ಲೊ ಈ ರಿಣಕ । ಬಿದ್ದು ಅಳತಾಳರಿ
ನೆಲಕ । ಸುಡು ನನ್ನ ದೇಹಕ್ಕ
ಸೊರಟೂರ ಊರ ಮೋಜಿನ ಸ್ಯಾರ।
ಮೆಗಲ ಓಣಿ ಬಹಳ ಕಡಕ। ಕಾಲೇಪೀರನ
ದಯಾ ಒಂದು ಇರಬೇಕ. ||ಕೈಯಲಿ||

ಮೊಹರಂ ಹಾಡು (ಸವಾಲ್ ಪದ) :

ಸವಾಲೊಂದು ಶ್ಯಾಹಿರಗ ಸಬಾದೊಳಗ
ಸವಾಲಿಗೆ ಜವಾಬು ಹೇಳು ಹಾಡಿನೊಳಗ ||ಪ||

ನಾ ಮೇಲ್ ಅನ್ನತೀದಿ ಮಜಿಲೊಳಗ
ನಾನು ಅನ್ನೋದ ಅಳಿಯೋ ಶಾಹಿರ ನಿನ್ನ ಒಳಗ
ಎಲ್ಲಾ ಶರಣರು ಒಂದೆ ಜಗದೊಳಗ
ಅಣ್ಣ ತಮ್ಮರಾಗಿ ಹಾಡೋನು ಮಜಲೊಳಗ

ಹುಲ್ಲು ಶಾಹಿರ ಗುರು ಯಾರೋ ನಿನಗ
ಗುಲ್ಲ ಮಾಡಾತಿದಿ ಕುಲ್ಲಾ ಹೇಳೋ ನನಗ
ಜೋಲ್ಲ ಯಾಕ ಸೋರಸ್ತಿದಿ ಮಜಲೊಳಗ
ಕುಲ್ಲ ಆಗೋ ತನಕ ಬಿಡೋದಿಲ್ಲೊ ನಿನಗ

ಮಲ್ಲಿಗೆ ಹೂವಿನ ಮಾಲೆ ತಂದಿನಿ ಕಾಲೆಪೀರಗ
ಅವನದಯಾ ಇರಲಿ ನನ್ನ ಮ್ಯಾಗ
ನಾಗಪ್ಪಾ ಮಾಸ್ತಾರ ಪದ ಮಾಡಿ ಹೇಳ್ಯಾನೋ
ಹಿಂಗ ಹಾಡು ಕೇಳಿದ ಶಾಹಿರಗಾರು ಗೂಟಾ ಬಡಿದಂಗ.

ಮೊಹರಂ ಹಾಡು.

ಯಲ್ಲಪ್ಪ ಕೇಳ ಮಲ್ಲಪ್ಪ, ನಿಂಗಪ್ಪ ಕೇಳ
ನೀಲಪ್ಪ, ಸಂಗಪ್ಪ ಕೇಳ ಗಂಗಪ್ಪ
ಎನಗೊಂದು ಕನ್ನೆ ನೋಡ್ರೆ ನಿಮ್ಮೂರಿನಾಗ
ನನಗೊಂದು ಕನ್ಯೆ ನೋಡ್ರೆ ॥ಪ॥

ಹಾವೇರ್‍ಯಾಗ ಹಣ್ಣು ತಗೊಂಡು
ಸಂಗೂರಾಗ ಸಕ್ಕರೆ ತಗೊಂಡು
ಅಗಡ್ಯಾಗ ಅಡಕಿ ತಗೊಂಡು
ಎಲಿವಾಳದಾಗ ಎಲಿ ತಗೊಂಡು
ಹೆಬ್ಬಾಳ್ಯಾಗ ಹೂವ ತಗೊಂಡು
ಅಣ್ಣಿಗೇರಿ ಐನಾರ ಕರಕೊಂಡು
ಹಿರೇವಡ್ಡಟ್ಟಿ ಹಿರಿಯರನ್ನ ಕರಕೊಂಡು
ಕನ್ಯಾಳಕ ಹೋಗಿ ಕನ್ನೆಯನ ನೋಡಿದಂತ
ಕಥೆಯೊಂದು ಕೇಳಿರಣ್ಣ ॥ಪ॥

ಬನ್ನೂರ ಬಸಪ್ಪನ ಕಲ್ಲೂರ ಕಲ್ಲಪ್ಪನ ನಾಗಾವಿ
ನಾಗಪ್ಪ ಯಲಿಶಿರೂರ ಯಲ್ಲಪ್ಪನ
ಹಂಗನಕಟ್ಟಿ ಹನಮಪ್ಪನ ದೇವಿಹಾಳದ
ದೇವಪ್ಪನ ಯಲ್ಲಾಪುರದಾಗ ಎಲ್ಲರೂ ಕೂಡಿ
ಮಂಟೂರಾಗ ಮಾತುಕತಿ ಮುಗಿಸಿದಂತಾ
ಕಥೆಯೊಂದು ಕೇಳಿರಣ್ಣ ॥ಪ॥

ಮದಗಾನೂರಾಗ ಮೂರ್ತಿ ನೋಡಿ
ಹರಪೂರದಾಗ ಹಂದ್ರ ಹಾಕಿ
ಹಾಲಗ್ಯಾಗ ವಾಲಗಾ ಬಾರಿಸಿ
ಸೊರಟೂರಾಗ ಸೋಬಾನ ಹೇಳಿ
ನೀಲಗುಂದಾಗ ನೀರ ಹಾಕೊಂಡು
ನಿಡಗುಂದ್ಯಾಗ ನಿಬ್ಬಣಕ ಹೋಗಿ
ಮುಂಡರಗ್ಯಾಗ ಮಾತುಕತಿ ಮುಗಿಸಿದಂತಾ
ಕಥೆಯೊಂದು ಕೇಳಿರಣ್ಣ ॥ಪ॥

ಬಟ್ಟೂರಾಗ ಬಟ್ಟರನ ಕರೆಸಿ
ಅಸುಂಡ್ಯಾಗ ಅಡಿಗಿ ಮಾಡಿಸಿ
ಎಲ್ಲಿವಾಳದಾಗ ಎಲಿ ಹಾಕಿಸಿ
ಹುನಗುಂದಾಗ ಹೋಳಗಿ ಹಾಕಿಸಿ

ತಿಪಟೂರಾಗ ತುಪ್ಪ ಹಾಕಿಸಿ
ಕುಂದಗೋಳದಾಗ ಕೂತಗೊಂಡು
ಕುಶಾಕನೂರಾಗ ಕಮ್ಮಗ ಉಂಡ್ರು ಕೇಳಿರಣ್ಣ ॥ಪ॥

ಮಾಗಡ್ಯಾಗ ಹಾಸಿಗಿ ಕಾರಣ
ಮುಳಗುಂದಾಗ ಮೂರ ತಿಂಗಳು
ನಾಗಾವ್ಯಾಗ ನಾಲ್ಕು ತಿಂಗಳು
ಅತ್ತಿಕಟ್ಯಾಗ ಐದು ತಿಂಗಳು
ಆಲೂರಾಗ ಆರು ತಿಂಗಳು
ಶಿರೋಳದಾಗ ಶ್ರೀಮಂತಕಾರಣ
ಹಾರೂಗೇರ್‍ಯಾಗ ಹೇರಿಗೆ ಆಗಿ
ಬಸಾಪೂರದಾಗ ಬಾಣೆತನ
ಮಹಾಲಿಂಗಪುರದಾಗ ಮಗನೆತಿಗೊಂಡು
ಚನ್ನಪಟ್ಟಣದಾಗ ಚನ್ನಾಗಿ ಇದ್ದರು. ॥ಪ॥

ರಚನೆ: ನಾಗಪ್ಪ. ಎಚ್. ಕಣವಿ.
ಹಾಡುವವರು: ನಾಗಪ್ಪ ಕಣವಿ, ಬಸವರಾಜ. ಜಮಾಣಿ, ಫಕ್ಕೀರೇಶ ಮೇಗೂರ ಇಮಾಮಸಾಬ ಅತ್ತಿಕಟ್ಟಿ, ಮಾಬೂಸಾಬ ಹಳ್ಳಿಕೇರಿ, ರೇವಣೆಪ್ಪ ಗುಡಿ ಮುಂ.
ದಪ್ಪು: ಕರಿಯಪ್ಪ ಕಣವಿ, ಈರಪ್ಪ ಚುಳಜಾಜಿ, ಯಲ್ಲಪ್ಪ ತಳಕಲ್ಲ. ಪರಶುರಾಮ ತೋಪಿನ.

ಹೋಳಿ ಹಾಡುಗಳು :

ಹೋಳಿ ಹುಣ್ಣಿವಿ ಬಂತು ಹೋಳಿಗೆ ಮಾಡುದು ಬಂತು
ಬೊಳೆಮ್ಮ ತುಪ್ಪ ಕಾಸೋದು ಬಂತು । ಎಲ್ಲಾರಿಗಿ
ಹೋಳಬಾಯಿ ಹಿಡಿದು ತುರಕೋದು ಬಂತು

ತಳವಾರ ಹುಡಗಗ ತಾಕೀತ ಮಾಡೀನ
ತವರೀಗಿ ಹ್ವಾದರ ಬರಬೇಕು। ಅದುಬಿಟ್ಟು
ಹಿಂಬಾಲ ಹತ್ಯಾನ ಹಗಲಿರುಳ.
ಮಸರ ಮಾರುವ ಹುಡುಗಿ ಹೆಸರ ಕೇಳಿದರಾತ
ಬಸರಾದರ್ಥಂಗಂತ ಅಳತಾಳೊ। ಅವರವ್ವ
ಹಸರ ಬಳಿ ಇಡಿಸಿ ನಗತಾಳೊ

ಹೋಳಿ ಹಬ್ಬದ ಮಜಲಿನ ಹಾಡುಗಳು :

ಎಲಿರೊಂದ್ ಎಲಿರೊ ಎಲಿ ಬಳ್ಳಿ ನೋಡಿರೋ
ಎಲ್ಲಿಬಳ್ಳಾಗ ಇರುವಂತ ಯಲಿಗಾರ ಸಿದ್ದನ_____ ನೋಡಿರೋ

ಎಲಿಬಳ್ಯಾಗ ಇರುವಂತ_____ ಅವನ್ನ ನೋಡಿರೋ
(ಹೀಗೆ ಬೇರೆ ಬೇರೆ ಹೆಸರು ಹೇಳುತ್ತಾ ಮುಂದುವರೆಯುತ್ತದೆ)

ಅಲ್ಲ್ಯಾಕಲೇ ಇಲ್ಲ್ಯಾಕಲೇ
ಬೆಲ್ಲದ ಗಡಗ್ಯಾಗ ಕೈ ಹಾಕಲೇ

ಬಂದರ ಬಾನಮ್ಮ ಓಣಿಗೆ ಸವುಳ ಬಾವಿ ನೀರಿಗೆ
ನೀರಿಗಿಂತ ಕರೆದೇನವ್ವ ನೀಲಿ ಜಂಪರ ಹರದೇನ
ನಾ ಹೆಂಗ ಹೋಗಲಿ ಮನಿಗೆ ನಮ್ಮತ್ತೆವ್ವ ಬೈತಾಳನನಗ
ಕಟ್ಟಿಗೆಂತ ಕರೆದೇನ, ನಾ_____ ಕಟ್ಟಾಣಿ ಸರ ಹರದೇನ.
ನಾಹೆಂಗ ಹೋಗಲಿ ಮನಿಗೆ_____..
ನಮ್ಮತ್ತೆವ್ವ ಬೈತಾಳ ನನಗ.
(ಹೀಗೆ ಮುಂದುವರೆಯುತ್ತದೆ)

ಕೇಳವ್ವನ ಸವತೆವ್ವ ನಿನ್ನ ಮ್ಯಾಲೆ ಮನಸ.
ಅಗಸಿಯ ಹೂವ್ವ ಸಣ್ಣ ಅಗಸಿಯ ಕಾಯಿಸಣ್ಣ॥
_____ಹುಡುಗಿ ನಡ ಸಣ್ಣ ಗೆಳತಿ
_____(ಇವರಲ್ಲಿ ಯಾವುದಾದರೂ ಒಂದು ಸಮುದಾಯದ ಹೆಸರು ಇರುತ್ತದೆ.)
ಆರಿಯ ಹೂವು ಸಣ್ಣ ಆರಿಯ ಕಾಯಿಸಣ್ಣ॥
_____ಹುಡುಗಿ ನಡಸಣ್ಣ ಗೆಳತಿ.
_____ಲಿಂಬಿಯ ಹೂವು ಸಣ್ಣ ಲಿಂಬಿಯ ಕಾಯಿ ಸಣ್ಣ
_____ ಹುಡಗಿ ನಡಸಣ್ಣ ಗೆಳತಿ

ಹನುಮಪ್ಪನ ಕುರಿತು ಹೋಳಿ ಹಾಡು :
ಸೊರಟೂರ ಗ್ರಾಮಕ್ಕೆ ರಾಕ್ಷಸರ ಕಾವಲಿಯೋ
ಹಾರಿದನು ಹನಮಂತ ಸೀಳಿದನು ದೈತ್ಯರನ
ಮ್ಯಾಲೆ ಚಕ್ಕರದ ಗೊನಿ ಬಾಳ್ಯೊ
ಹೆಂಗ ಪಾರಾದ್ಯೊ ಕರಿ ಹನಮ.

ದುರಗಮ್ಮನ ಕುರಿತು ಹೋಳಿ ಹಾಡು :
ಮಲ್ಲಿಗಿ ಹೂವಿನ ದಂಡಿ ಅಲ್ಲಿಟ್ಟೆ ಇಲ್ಲಿಟ್ಟೆ
ಕಲ್ಲ ಮ್ಯಾಲಿಟ್ಟೆ ಕೈಬಿಟ್ಟೆ ಸೊರಟೂರ
ದುರಗಮ್ಮನ ಪಲ್ಲಕ್ಯಾಗಿಟ್ಟೆ ಹಿಡಿಹೊನ್ನ


□□

೫. ಛಾಯಾಚಿತ್ರಗಳು

ಗದಗ ಜಿಲ್ಲೆಯಲ್ಲಿ ಸೊರಟೂರ ಗ್ರಾಮ




ಸೊರಟೂರ ಗ್ರಾಮದ ಜನವಸತಿ ಪ್ರದೇಶದ ನಕ್ಷೆ




1. ಗದಗ ರಸ್ತೆ, 2. ವೆಂಕಟಾಪುರ ರಸ್ತೆ, 3. ಮುಂಡರಗಿ ರಸ್ತೆ,
4. ಕಪ್ಪತ್ತದಾರಿ 5. ಮಹಾಲಿಂಗಪುರ ರಸ್ತೆ, 6. ಸ್ಮಶಾನ
7. ಹಂಗನಕಟ್ಟಿ ರಸ್ತೆ, 8. ಬಡಿಗೇರ ಹಳ್ಳ 9. ಶಿರಹಟ್ಟಿ ರಸ್ತೆ


ಸೊರಟೂರ ಗ್ರಾಮದ ದೈವಗಳು



ಶ್ರೀ ಕಾಲಭೈರವ



ಶ್ರೀ ಸೂರ್ಯನಾರಾಯಣ



ಶ್ರೀ ನಾಟ್ಯ ಗಣಪ



ಶ್ರೀ ದುರ್ಗಾದೇವಿ



ಶ್ರೀ ಬೀರೇಶ್ವರ



ಶ್ರೀ ಖಾಲೆ ಫಕ್ರುದ್ದೀನ್



ಶ್ರೀ ಅನ್ನದಾನೇಶ್ವರ



ಶ್ರೀ ಗುರುಮಲ್ಲಜ್ಜ



ಶ್ರೀ ನಾರಾಯಣ

ಸೊರಟೂರ ಗ್ರಾಮದ ದೈವಗಳು



ಶ್ರೀ ಹಳಕೆಮ್ಮದೇವಿ



ಶ್ರೀ ಈಶ್ವರ



ಶ್ರೀ ಸ್ವಾರೆಮ್ಮ



ಶ್ರೀ ಮಲ್ಲೇಶ್ವರ



ಶ್ರೀ ಕಲ್ಲೇಶ್ವರ




ಶ್ರೀ ರಾಮೇಶ್ವರ



ಶ್ರೀ ವೀರಭದ್ರೇಶ್ವರ



ಶ್ರೀ ಮೈಲಾರಲಿಂಗ




ಶ್ರೀ ಮಾರುತಿ


ಸೊರಟೂರ ಗ್ರಾಮದ ದೈವಗಳು




ಶ್ರೀ ಜೈನಬಸದಿ




ಶ್ರೀ ದ್ಯಾಮವ್ವದೇವಿ



ಶ್ರೀ ಬಸವಣ್ಣದೇವರು



ಶ್ರೀ ಬನಶಂಕರಿದೇವಿ



ಶ್ರೀ ಬಯಲು ದುರ್ಗಮ್ಮ




ಶ್ರೀ ವೀರವಾಲಿಕಾರ



ಶ್ರೀ ಕೊತ್ತಲಮ್ಮದೇವಿ



ಶ್ರೀ ವೀರಭದ್ರೇಶ್ವರ ಯುವಕ ಮಂಡಳದ ಕಲಾ ಪ್ರದರ್ಶನ



ಶ್ರೀ ಕಲ್ಮೇಶ್ವರ ಯುವಕ ಮಂಡಳದ ಕಲಾ ಪ್ರದರ್ಶನ



ಶ್ರೀ ಮಾರುತಿ ಡ್ರಮ್‌ಸೆಟ್ ಸಂಘದ ಕಲಾ ಪ್ರದರ್ಶನ



ಸಾಮೂಹಿಕ ವಿವಾಹದಲ್ಲಿ ಮುಂಡರಗಿ ಶ್ರೀಗಳು ಹಾಗೂ ಮಹಾಲಿಂಗಪುರದ ಶ್ರೀಗಳು



ಗ್ರಾಮದ ನಾಟಕ ಕಲಾವಿದರು



ಹೋಳಿ ಹಬ್ಬದಲ್ಲಿನ ಮೆರವಣಿಗೆ



ರಾಜ್ಯ ಪ್ರಶಸ್ತಿ ಪಡೆಯುತ್ತಿರುವ ಡಾ.ಬಿ.ಆರ್. ಇನಾಮದಾರ



ಮಾದಮ್ಮದೇವಿ ಜಾತ್ರೆಯಲ್ಲಿ ಅಗ್ನಿ ಹಾಯುವ ಸನ್ನಿವೇಶ



ಅನ್ನದಾನೇಶ್ವರ ಮಠದಲ್ಲಿ ಪ್ರಸಾದ ವ್ಯವಸ್ಥೆ



ಶ್ರೀ ವೀರಭದ್ರೇಶ್ವರ ಯುವಕ ಮಂಡಳದ ಕಲಾವಿದರು ಗದುಗಿನ ತೋಂಟದ ಶ್ರೀಗಳೊಂದಿಗೆ



ಸೊರಟೂರ ಗ್ರಾಮದ ನಾಟಕ ಕಲಾವಿದರು



ಸೊರಟೂರ ಗ್ರಾಮದಲ್ಲಿರುವ ಶಾಸನ



ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಡಾ.ಬಿ.ಆರ್. ಇನಾಮದಾರರ ಸತ್ಕಾರ ಸಮಾರಂಭ



ಡೊಳ್ಳಿನ ಮೇಳದ ಕೈಪೆಟ್ಟು



ಮೊಹರಂ ಹೆಜ್ಜೆಯ ಮೇಳ



ಗ್ರಾಮದೇವತೆ ಶ್ರೀದ್ಯಾಮವ್ವದೇವಿ ಜಾತ್ರೆ



ಶ್ರೀ ಬಸವೇಶ್ವರ ಜಾತ್ರೆ



ಗ್ರಾಮದ ಶತಾಯುಷಿ ಶ್ರೀ ಶಂಕ್ರಪ್ಪ ಮಲ್ಲಾರಿಯವರೊಂದಿಗೆ ಸಂದರ್ಶನ